|| ಶ್ರೀಃ ||

ಶ್ರೀ ಆನಂದತೀರ್ಥಭಗವತ್ಪಾದಾಚಾರ್ಯ ವಿರಚಿತ

ಶ್ರೀ ಸರ್ವಮೂಲ ಗ್ರಂಥಗಳು

(ಕನ್ನಡ ಅನುವಾದ ವಿವರಣೆ ಸಹಿತ)

ಸಂಪುಟ -೧೭

ಶ್ರೀ ಮದ್ಭಾಗವತ ತಾತ್ಪರ್ಯನಿರ್ಣಯ

(ಸಪ್ತಮ, ಅಷ್ಟಮ ಹಾಗೂ ನವಮ ಸ್ಕಂಧ)

ಭಾಗ - ೫

ಅನುವಾದಕರು

ವಿದ್ವಾನ್ ಕೆ.ಹಯವದನ ಪುರಾಣಿಕ ಎಮ್.ಎ.,

ಪ್ರಕಾಶಕರು

ಅ.ಭಾ.ಮಾ.ಮ.ಮಂ. ಪಬ್ಲಿಕೇಷನ್ ಟ್ರಸ್ಟ್

ಅಖಿಲ ಭಾರತ ಮಾಧ್ವ ಮಹಾ ಮಂಡಲ (ರಿ), ಉಡುಪಿ

ಪೂರ್ಣಪ್ರಜ್ಞ ವಿದ್ಯಾಪೀಠ , ಕತ್ತರಿಗುಪ್ಪ ಮುಖ್ಯ ರಸ್ತೆ , ಬೆಂಗಳೂರು -28

Kannada Sarvamoola Vol 17
SRI MADBHAGAVATHA TATPARYA NIRNAYA (Part V) of Sri Anandatirtha with kannada translation and notes (for 7th, 8th & 9th skandas). Published by Akhila Bharata Madhwa Maha Mandala, Bangalore-560028.

ಪುಟಗಳು : 853 + 8
ಮೊದಲನೆ ಮುದ್ರಣ 2009
ಪ್ರತಿಗಳು : 2000

ಪ್ರತಿ ಬೆಲೆ : **ರೂ. 210.00**
ಹಕ್ಕುಗಳು ಕಾದಿರಿಸಲ್ಪಟ್ಟಿವೆ

ಸಂಪಾದಕ ಮಂಡಳಿ

ಅಧ್ಯಕ್ಷರು

ಶ್ರೀ 108 ಶ್ರೀ ಪೇಜಾವರ ಮಠಾಧೀಶ ಶ್ರೀ ವಿಶ್ವೇಶ ತೀರ್ಥ ಶ್ರೀಪಾದಂಗಳವರು

ಕಾರ್ಯಾಧ್ಯಕ್ಷರು

ಪ್ರೊ|| ಕೆ.ಟಿ.ಪಾಂಡುರಂಗಿ ಎಮ್.ಎ., ವೇದಾಂತ ವಿದ್ವಾನ್,
ಮೀಮಾಂಸಾಶಿರೋಮಣಿ

ಕಾರ್ಯದರ್ಶಿಗಳು

ಪ್ರೊ || ಡಿ.ಪ್ರಹ್ಲಾದಾಚಾರ್ಯ ಎಮ್.ಎ., ವಿದ್ವಾನ್

ಸದಸ್ಯರು

ವಿದ್ವಾನ್ ಕೆ.ಹಯವದನ ಪುರಾಣಿಕ ಎಮ್.ಎ.,
ವಿದ್ವಾನ್ ಪಿ.ಕೇಶವ ಬಾಯರಿ
ವಿದ್ವಾನ್ ರಾಮಾಚಾರ್ಯ ಜಿ.ಮಾಳಗಿ ಎಮ್.ಎ.,
ವಿದ್ವಾನ್ ಎ. ಹರಿದಾಸ ಭಟ್ಟ ಎಮ್.ಎ.,

ಗ್ರಂಥಗಳು ದೊರೆಯುವ ಸ್ಥಳ :

ಅ.ಭಾ.ಮಾ.ಮ.ಮಂ. ಪಬ್ಲಿಕೇಷನ್ ಟ್ರಸ್ಟ್

ಅಖಿಲ ಭಾರತ ಮಾಧ್ವ ಮಹಾ ಮಂಡಲ (ರಿ), ಉಡುಪಿ

ಪೂರ್ಣಪ್ರಜ್ಞ ವಿದ್ಯಾಪೀಠ , ಕತ್ತರಿಗುಪ್ಪ ಮುಖ್ಯ ರಸ್ತೆ , ಬೆಂಗಳೂರು -28

ಅಕ್ಷರ ಜೋಡಣೆ : ಆರ್.ಎಸ್. ಪ್ರೇಮ್‌ಕುಮಾರ್

ಮುದ್ರಣ : ಓಂಕಾರ್ ಆಫ್‌ಸೆಟ್ ಪ್ರಿಂಟರ್ಸ್, ನ್ಯೂ ತರಗುಪೇಟೆ, ಬೆಂಗಳೂರು.

ಪ್ರಕಾಶಕರ ನುಡಿ

ಅಖಿಲ ಭಾರತ ಮಾಧ್ವ ಮಹಾ ಮಂಡಲವು ಕ್ರಿ.ಶ. 1986 ನೇ ವರ್ಷದಲ್ಲಿ ಸರ್ವಮೂಲದ ಕನ್ನಡ ಅನುವಾದದ ಆವೃತ್ತಿಗಳನ್ನು ಹೊರತರುವ ನಿರ್ಧಾರವನ್ನು ಕೈಗೊಂಡಿತು. ಸುಮಾರು 23 ವರ್ಷಗಳಲ್ಲಿ ಹದಿನಾರು ಸಂಪುಟಗಳನ್ನು ತರಲಾಗಿದೆ. ಗೀತಾಪ್ರಸ್ಥಾನ (ಗೀತಾಭಾಷ್ಯ ಹಾಗೂ ಗೀತಾ ತಾತ್ಪರ್ಯ ನಿರ್ಣಯ), ಉಪನಿಷತ್ ಪ್ರಸ್ಥಾನ ಹತ್ತು ಉಪನಿಷತ್ (3 ಸಂಪುಟಗಳಲ್ಲಿ), ಸಂಕೀರ್ಣ ಗ್ರಂಥ ತಂತ್ರಸಾರ ಮತ್ತು ಸ್ತೋತ್ರಗಳು (ಒಂದು ಸಂಪುಟದಲ್ಲಿ), ಪುರಾಣದಲ್ಲಿ ಒಂದಾದ 32 ಅಧ್ಯಾಯಗಳನ್ನು ಒಳಗೊಂಡ ಶ್ರೀಮನ್ ಮಹಾಭಾರತ ತಾತ್ಪರ್ಯ ನಿರ್ಣಯ (4 ಸಂಪುಟಗಳಲ್ಲಿ) ಹಾಗೂ ಸೂತ್ರ ಪ್ರಸ್ಥಾನದಲ್ಲಿ ಸೇರಿದ ಬ್ರಹ್ಮಸೂತ್ರಭಾಷ್ಯ 1ನೇ ಅಧ್ಯಾಯ ಹಾಗೂ ಶ್ರೀಮದನುವ್ಯಾಖ್ಯಾನ ಭಾಗ 1.(ಮೊದಲಿನ ಐದು ಸೂತ್ರಗಳು) ಈ ಎರಡು (ಪ್ರತ್ಯೇಕ ಸಂಪುಟಗಳಲ್ಲಿ) ಪ್ರಕಟಗೊಂಡು ಜಿಜ್ಞಾಸುಗಳ ಕೈ ಸೇರಿತು. ಇದಲ್ಲದೆ ಹಿಂದೆ ಪ್ರಕಟಗೊಂಡಿದ್ದ ಸರ್ವಮೂಲ ಗ್ರಂಥಗಳ ಪುನರ್ಮುದ್ರಣ ಅತ್ಯಗತ್ಯವಾಗಿದ್ದು , ಅದರಲ್ಲಿ ಗೀತಾಪ್ರಸ್ಥಾನ (3ನೇ ಆವೃತ್ತಿ), ಉಪನಿಷತ್ ಪ್ರಸ್ಥಾನ 8 ಉಪನಿಷತ್‌ಗಳು (3ನೇ ಆವೃತ್ತಿ), ಛಾಂದೋಗ್ಯ (ಎರಡನೇ ಆವೃತ್ತಿ), ಬೃಹದಾರಣ್ಯಕ (ಎರಡನೇ ಆವೃತ್ತಿ),ಶ್ರೀಮನ್ ಮಹಾಭಾರತ ತಾತ್ಪರ್ಯ ನಿರ್ಣಯ ಭಾಗ 1 (2ನೇ ಆವೃತ್ತಿ), ಸಂಕೀರ್ಣ ಗ್ರಂಥ ತಂತ್ರಸಾರ ಮತ್ತು ಸ್ತೋತ್ರಗಳು (2ನೇ ಆವೃತ್ತಿ), ಶ್ರೀಮನ್ ಮಹಾಭಾರತ ತಾತ್ಪರ್ಯ ನಿರ್ಣಯ ಭಾಗ 2 (2ನೇ ಆವೃತ್ತಿ), ಹಾಗೂ ದಶಪ್ರಕರಣ (4ನೇ ಆವೃತ್ತಿ), ಪ್ರಕಟಗೊಂಡು ಜಿಜ್ಞಾಸುಗಳಿಗೆ ಲಭ್ಯವಾಗಿರುತ್ತದೆ.

ಶ್ರೀ ಭಾಗವತ ತಾತ್ಪರ್ಯ ನಿರ್ಣಯದ ಪ್ರಥಮ, ದ್ವಿತೀಯ ಸ್ಕಂಧ (ಸರ್ವಮೂಲ ಕ್ರಮಸಂಖ್ಯೆ 13), 2004 ಧಾರವಾಡದಲ್ಲಿ ಹಾಗೂ ತೃತೀಯ ಸ್ಕಂಧ (ಸರ್ವಮೂಲ ಕ್ರಮಸಂಖ್ಯೆ 14) 2006 ಚನ್ನೈ ನಗರದಲ್ಲಿ ಹಾಗೂ ಚತುರ್ಥ ಸ್ಕಂಧದ (ಸರ್ವಮೂಲ ಕ್ರಮ ಸಂಖ್ಯೆ 15) ಏಪ್ರಿಲ್ ತಿಂಗಳ 2007ರಲ್ಲಿ ಬೆಂಗಳೂರಿನಲ್ಲಿ ಬಿಡುಗಡೆಗೊಂಡಿತು. ಇದೇ ಗ್ರಂಥದ ಪಂಚಮ ಹಾಗೂ ಷಷ್ಠ ಸ್ಕಂಧಗಳ (ಕನ್ನಡ ಸರ್ವಮೂಲ ಕ್ರಮಸಂಖ್ಯೆ 16) ನಾಡಿನ ಸಾಂಸ್ಕೃತಿಕ ರಾಜಧಾನಿಯಾದ ಮೈಸೂರಿನಲ್ಲಿ ಫೆಬ್ರುವರಿ 2008ರಲ್ಲಿ ನಡೆದ 26ನೇ ಅಖಿಲ ಭಾರತ ಮಾಧ್ವ ತತ್ವಜ್ಞಾನ ಸಮ್ಮೇಳನ, ಶ್ರೀ ಮಧ್ವ ನವಮಿ

ಹಾಗೂ ಪರಮಪೂಜ್ಯ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದರ ಸುಧಾ ಮಂಗಳ ಮಹೋತ್ಸವದ ಶುಭ ಮುಹೂರ್ತದಲ್ಲಿ ಪರಮಪೂಜ್ಯ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದರ ಅಮೃತ ಹಸ್ತದಿಂದ ಬಿಡುಗಡೆಗೊಂಡಿತು.

ಪ್ರಸ್ತುತ ಇದೇ ಗ್ರಂಥದ 7, 8 ಮತ್ತು 9ನೇ ಸ್ಕಂಧ (ಸರ್ವಮೂಲ ಕ್ರಮಸಂಖ್ಯೆ 17) ಇದರ ಅನುವಾದ ವಿದ್ವಾನ್ ಶ್ರೀ ಹಯವದನ ಪುರಾಣಿಕ್ ಅನುವಾದಿಸಿ ಬಿಡುಗಡೆಗೆ ಸಿದ್ಧವಾಗಿದೆ.

ಈ ಸಂಪುಟದ ಅಕ್ಷರ ಜೋಡಣೆಯ ಕಾರ್ಯವನ್ನು ಆರ್.ಎಸ್. ಪ್ರೇಮಕುಮಾರ್ ಅವರು ಅಂದವಾಗಿ ಮಾಡಿಕೊಟ್ಟಿದ್ದಾರೆ. ಇವರಿಗೆ ಮಂಡಲದ ಅಭಿನಂದನೆಗಳು. ಈ ಸಂಪುಟವನ್ನು ಸಕಾಲಕ್ಕೆ ಮುದ್ರಿಸಿಕೊಟ್ಟ ಓಂಕಾರ್ ಆಫ್‌ಸೆಟ್ ಪ್ರಿಂಟರ್ಸ್ ಅವರಿಗೂ, ಮುಖಪುಟ, ವಿನ್ಯಾಸ ಹಾಗೂ ಈ ಸಂಪುಟ ಬಿಡುಗಡೆಗೆ ಹಾಗೂ ಇತರೇ ಕಾರ್ಯಗಳಿಗೆ ವಿವಿಧ ಹಂತದಲ್ಲಿ ಶ್ರಮಿಸಿದ ಮಂಡಲದ ಪ್ರಧಾನ ಕಾರ್ಯದರ್ಶಿ ಹೆಚ್.ಎನ್. ನಾರಾಯಣ ರಾವ್, ಇತರೇ ಕಾರ್ಯದರ್ಶಿಗಳಿಗೂ ಹಾಗೂ ಮಂಡಲದ ಇತರ ಸಿಬ್ಬಂದಿವರ್ಗದವರಿಗೂ ಅಭಿನಂದನೆಗಳು.

ಇನ್ನು ಉಳಿದ ಮೂರು ಗ್ರಂಥಗಳಾದ ಋಗ್ಭಾಷ್ಯ, ನ್ಯಾಯ ವಿವರಣ, ಅಣುಭಾಷ್ಯ ಹಾಗೂ ಬ್ರಹ್ಮಸೂತ್ರಭಾಷ್ಯ, ಅನುವ್ಯಾಖ್ಯಾನ, ಭಾಗವತ ತಾತ್ಪರ್ಯ ನಿರ್ಣಯಗಳ ಉಳಿದ ಅಧ್ಯಾಯಗಳನ್ನು ಒಳಗೊಂಡ ಸಂಪುಟಗಳ ಪ್ರಕಟಣೆಗೆ ಒಂದು ನೀಲಿ ನಕ್ಷೆ ತಯಾರಿಸಿ, ಸರ್ವ ಪ್ರಯತ್ನವನ್ನು ಮಾಡುತ್ತಿದ್ದೇವೆ.

ಸಹೃದಯ ವಾಚಕರು ವಿಳಂಬಕ್ಕೆ ಬೇಸರಿಸದೆ ಆತ್ಮೀಯತೆಯಿಂದ ಈ ಸಂಪುಟವನ್ನು ಬರಮಾಡಿಕೊಳ್ಳುವರೆಂದು ನಂಬಿದ್ದೇವೆ.

ಕೆ.ವಿಷ್ಣುಮೂರ್ತಿ ಎರ್ಕಾಡಿತ್ತಾಯ
ಅಧ್ಯಕ್ಷರು
ಅ.ಭಾ.ಮಾ.ಮ.ಮಂ. ಪಬ್ಲಿಕೇಶನ್ ಟ್ರಸ್ಟ್,
ಅಖಿಲ ಭಾರತ ಮಾಧ್ವ ಮಹಾ ಮಂಡಲ (ರಿ), ಉಡುಪಿ
ಬೆಂಗಳೂರು.

ಸಂಪಾದಕ ಮಂಡಳಿಯ ನಿವೇದನೆ

ಕ್ರಿ.ಶ. 1986ರಲ್ಲಿ ಶ್ರೀ ಮಧ್ವಾಚಾರ್ಯರ 750ನೇ ಜಯಂತಿಯ ಅಂಗವಾಗಿ ಆಚಾರ್ಯರು ಅನುಗ್ರಹಿಸಿದ ಸರ್ವಮೂಲ ಗ್ರಂಥಗಳ ಭಾಷಾಂತರ ಕಾರ್ಯವನ್ನು ಶ್ರೀ ಶ್ರೀ ವಿಶ್ವೇಶತೀರ್ಥರು ಸಂಕಲ್ಪಿಸಿದ್ದು ಅಂದಿನಿಂದ ಇಂದಿನವರೆಗೆ 16 ಸಂಪುಟಗಳು ಹೊರ ಬಂದಿದೆ.

ಕ್ರಿ.ಶ. 1987ರಲ್ಲಿ ಗೀತಾ ಪ್ರಸ್ಥಾನ ಪ್ರಕಟವಾಯಿತು. ಆಮೇಲಿನ ಎರಡು ವರ್ಷಗಳಲ್ಲಿ ಎಂಟು ಉಪನಿಷತ್ ಉಳ್ಳ ಒಂದು ಸಂಪುಟ ಹಾಗೂ ಬೃಹದಾರಣ್ಯಕ ಮತ್ತು ಛಾಂದೋಗ್ಯೋಪನಿಷತ್ ಪ್ರತ್ಯೇಕ ಸಂಪುಟದಲ್ಲಿ ಹೀಗೆ ಮೂರು ಸಂಪುಟಗಳಲ್ಲಿ ಹೊರಬಂದವು. 1993 ರಲ್ಲಿ ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ರಾಮಾಯಣ ಮತ್ತು ಮಹಾಭಾರತದ ಕಥೆಗಳು ಅಡಕವಾಗಿ ಮೊದಲ ಒಂಬತ್ತು ಅಧ್ಯಾಯದವರೆಗಿನ ಕಥಾ ಭಾಗವು ಮುಕ್ತಾಯವಾಗಿ ಒಂದು ಸಂಪುಟದಲ್ಲಿ ಪ್ರಕಟಗೊಂಡಿತು. 1999ರ ನಂತರ ಹತ್ತನೇ ಅಧ್ಯಾಯದಿಂದ ಮಹಾಭಾರತ ಕಥೆಯು ಆರಂಭವಾಗಿ, 18 ನೇ ಅಧ್ಯಾಯದ -ವರೆಗೆನ ಕಥಾಭಾಗವು ಮತ್ತೊಂದು ಸಂಪುಟದಲ್ಲಿ ಪ್ರಕಟಗೊಂಡಿತು. ಹತ್ತೊಂಭತ್ತನೇ ಅಧ್ಯಾಯದಿಂದ ಇಪ್ಪತ್ತೆರಡನೇ ಅಧ್ಯಾಯಗಳವರೆಗಿನ ಭಾಗವನ್ನು ಮತ್ತೊಂದು ಸಂಪುಟ ಹಾಗೂ ಇದರ ಜೊತೆಯಲ್ಲಿ ಸಂಕೀರ್ಣ ಗ್ರಂಥ (ಹತ್ತು ಗ್ರಂಥಗಳನ್ನು ಒಳಗೊಂಡ ಗ್ರಂಥ - ಇದರಲ್ಲಿ ಸದಾಚಾರ ಸ್ಮೃತಿ, ತಂತ್ರಸಾರ ಸಂಗ್ರಹ , ಯಮಕ ಭಾರತ ಹತ್ತು ಸ್ತೋತ್ರಾದಿಗಳ ದ್ವಾದಶ ಸ್ತೋತ್ರ, ನರಸಿಂಹ ಸ್ತುತಿ, ಜಯಂತಿ ನಿರ್ಣಯ, ಯತಿಪ್ರಣವಕಲ್ಪ, ಕಂದುಕ ಸ್ತುತಿ, ಬಿಲ್ವಮಂಗಲಃ ಸಾಧುಃ 10 ಸರ್ವಮೂಲ ಗ್ರಂಥಗಳು ಸೇರಿದ್ದು) 1999 ರಲ್ಲಿ ಪರಮ ಪೂಜ್ಯ ಶ್ರೀ ಶ್ರೀ ವಿಶ್ವೇಶತೀರ್ಥರ 60ನೇ ವರ್ಷ ಪೀಠಾರೋಹಣ ಸಂದರ್ಭದಲ್ಲಿ ಹಂಪೆಯ ಯಂತ್ರೋದ್ಧಾರಕ ಶ್ರೀ ಪ್ರಾಣದೇವರ ಸನ್ನಿಧಿಯಲ್ಲಿ ಬಿಡುಗಡೆಯಾಯ್ತು. ಇದೇ ವರ್ಷದ ಕೊನೆಯಲ್ಲಿ ಮಹಾಭಾರತ ತಾತ್ಪರ್ಯ ನಿರ್ಣಯ 19ನೇ ಅಧ್ಯಾಯದಿಂದ 22ನೇ ಅಧ್ಯಾಯಗಳನ್ನು ಒಳಗೊಂಡ ಸಂಪುಟ ಪ್ರಕಟಗೊಂಡಿತು. ಈ ಗ್ರಂಥದ 4ನೇ ಭಾಗ ಅಂದರೆ ಅಧ್ಯಾಯ 23 ರಿಂದ 32ರ ಅಧ್ಯಾಯಗಳು ಹಾಗೂ ಸೂತ್ರ ಪ್ರಸ್ಥಾನದ ಮೊದಲ ಗ್ರಂಥವಾಗಿ ಬ್ರಹ್ಮ ಸೂತ್ರ ಭಾಷ್ಯ ಪ್ರಥಮಾಧ್ಯಾಯ ಪ್ರತ್ಯೇಕ ಸಂಪುಟಗಳಲ್ಲಿ 2001ರಲ್ಲಿ ಶ್ರೀ ವಿಶ್ವೇಶತೀರ್ಥ ಶ್ರೀಪಾದರ ಚತುರ್ಥ ಪರ್ಯಾಯದ ಶ್ರೀ ಮಧ್ವನವಮಿಯ ಶುಭ ಅವಸರದಲ್ಲಿ ಉಡುಪಿಯಲ್ಲಿ ಪ್ರಕಟಗೊಂಡಿತು. ನಂತರ 2003ರಲ್ಲಿ ಶ್ರೀಮದನುವ್ಯಾಖ್ಯಾನ (ಭಾಗ 1, ಮೊದಲಿನ ಐದು ಸೂತ್ರಗಳನ್ನು ಒಳಗೊಂಡ ಸರ್ವಮೂಲ ಸಂಪುಟ ಕ್ರಮಸಂಖ್ಯೆ 12) ಅಖಿಲ ಭಾರತ ಮಾಧ್ವ ತತ್ವಜ್ಞಾನ ಸಮ್ಮೇಳನ ಹಾಗೂ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದರು ತಮ್ಮ 25ನೇ ಅನುವ್ಯಾಖ್ಯಾನ ನ್ಯಾಯ ಸುಧಾ ಮಂಗಳ ಮಹೋತ್ಸವದ ಸಂದರ್ಭದಲ್ಲಿ ಬಿಡುಗಡೆ ಗೊಂಡಿತು.

ಪ್ರಕೃತ, ಪುರಾಣಗಳಲ್ಲಿ ಒಂದಾದ ಶ್ರೀ ಭಾಗವತ ತಾತ್ಪರ್ಯ ನಿರ್ಣಯದ ಮೊದಲನೇ ಭಾಗ (ಸರ್ವಮೂಲ ಕ್ರಮಸಂಖ್ಯೆ 13, ಪ್ರಥಮ ಹಾಗೂ ದ್ವಿತೀಯ ಸ್ಕಂಧ) ಕನ್ನಡ ಅನುವಾದ, ನಾಡಿನ ಹಿರಿಯ ವಿದ್ವಾಂಸರಾದ ವಿದ್ವಾನ್ ಶ್ರೀ ಕೆ. ಹಯವದನ ಪುರಾಣಿಕರು ಅನುವಾದ ಮಾಡಿದ ಗ್ರಂಥವು 23ನೇಅಖಿಲ ಭಾರತ ಮಾಧ್ವ ತತ್ವಜ್ಞಾನ ಸಮ್ಮೇಳನ ಹಾಗೂ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದರು ನಡೆಸಿದ ತಮ್ಮ 25ನೇ ಶ್ರೀ ಅನುವ್ಯಾಖ್ಯಾನ ನ್ಯಾಯ ಸುಧಾ ಮಂಗಳ ಮಹೋತ್ಸವದ ಸಂದರ್ಭದಲ್ಲಿ, 2004ನೇ ಜನವರಿ 20 ರಂದು ಧಾರವಾಡದಲ್ಲಿ ಪ್ರಕಟಗೊಂಡಿತು. ನಂತರ ಇವರಿಂದಲೇ ಈ ಗ್ರಂಥದ 3ನೇ ಸ್ಕಂಧದ ಅನುವಾದ (ಸರ್ವಮೂಲ ಕ್ರಮಸಂಖ್ಯೆ 14) 2006 ರಲ್ಲಿ, ಚೆನ್ನೈ ನಗರದ 25ನೇಅಖಿಲ ಭಾರತ ಮಾಧ್ವ ತತ್ವಜ್ಞಾನ ಸಮ್ಮೇಳನದಲ್ಲಿ ಬಿಡುಗಡೆಗೊಂಡಿತು. ಇದೇ ಗ್ರಂಥದ ಚತುರ್ಥಸ್ಕಂಧದ ಕನ್ನಡ ಅನುವಾದವು (ಸರ್ವಮೂಲ ಕ್ರಮ ಸಂಖ್ಯೆ 15) 2007ನೇ ಏಪ್ರಿಲ್ ತಿಂಗಳಲ್ಲಿ ಬೆಂಗಳೂರಿನಲ್ಲಿ ಬಿಡುಗಡೆಗೊಂಡಿತು. ನಂತರ ಸರ್ವಮೂಲ ಕ್ರಮಸಂಖ್ಯೆ 16 (ಪಂಚಮ ಹಾಗೂ ಷಷ್ಠ ಸ್ಕಂಧದ) ಕನ್ನಡ ಅನುವಾದವು ಮೈಸೂರಿನಲ್ಲಿ ನಡೆದ ಅಖಿಲ ಭಾರತ ಮಾಧ್ವ ಮಹಾ ಮಂಡಲದ 26ನೇ ತತ್ವಜ್ಞಾನ ಸಮ್ಮೇಳನದಲ್ಲಿ ಮಾರ್ಚ್ 16, 2008ರಂದು ಬಿಡುಗಡೆಗೊಂಡಿತು.

ಪ್ರಸ್ತುತ, ಸಪ್ತಮ, ಅಷ್ಟಮ ಹಾಗೂ ನವಮ ಸ್ಕಂಧದ ಕನ್ನಡ ಅನುವಾದವನ್ನು (ಸರ್ವಮೂಲ ಕ್ರಮಸಂಖ್ಯೆ 17) ಶ್ರೀ ಕೆ.ಹಯವದನ ಪುರಾಣಿಕರು ತಮ್ಮ ಬಿಡುವಿಲ್ಲದ ಕಾರ್ಯಕ್ರಮದಲ್ಲಿಯೂ ಮಾಡಿದ್ದು ಹಾಗೂ ಈ ಗ್ರಂಥದ ಕರಡುಪ್ರತಿಯನ್ನು ಸ್ವತಃ ತಿದ್ದುಪಡಿ ಮಾಡಿದ ವಿದ್ವಾನ್ ಶ್ರೀ ಕೆ. ಹಯವದನ ಪುರಾಣಿಕರಿಗೆ ಅಭಿನಂದನೆಗಳು.

ಈ ಸಂಪುಟದ ಅಕ್ಷರ ಜೋಡಣೆಯ ಕಾರ್ಯವನ್ನು ಶ್ರೀ ಆರ್.ಎಸ್. ಪ್ರೇಮ್ ಕುಮಾರ್ ಅವರು ವಹಿಸಿಕೊಂಡು ಅಂದವಾಗಿ ಮಾಡಿಕೊಟ್ಟಿದ್ದಾರೆ. ಮುಖಪುಟ, ವಿನ್ಯಾಸ, ಇತರೇ ಕಾರ್ಯಗಳಿಗೆ ಹಾಗೂ ಈ ಸಂಪುಟದ ಪ್ರಕಟಣೆಗೆ – ಎಲ್ಲಾ ಹಂತದಲ್ಲಿ ಶ್ರಮಿಸಿದ ಮಂಡಲದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಹೆಚ್.ಎನ್. ನಾರಾಯಣ ರಾವ್ ಇವರಿಗೂ ಹಾಗೂ ಇತರೇ ಮಂಡಲದ ಸಿಬ್ಬಂದಿಗಳಿಗೂ ಅಭಿನಂದನೆಗಳು. ಈ ಸಂಪುಟದ ಮುದ್ರಣದ ಕಾರ್ಯವನ್ನು ನಿರ್ವಹಿಸಿದ ಓಂಕಾರ್ ಆಫ್‌ಸೆಟ್ ಪ್ರಿಂಟರ್ಸ್ ಅವರಿಗೂ ಅಭಿನಂದನೆಗಳು.

ಬೆಂಗಳೂರು

ಮಹಾ ಮಹೋಪಾಧ್ಯಾಯ,
ಪ್ರೊ|| ಕೆ.ಟಿ. ಪಾಂಡುರಂಗಿ
ಕಾರ್ಯಾಧ್ಯಕ್ಷರು
ಸಂಪಾದಕ ಮಂಡಳಿ.

ಅನುಗ್ರಹ ಸಂದೇಶ

ಶ್ರೀಮದ್ಭಾಗವತವು ಯದ್ ವೈಷ್ಣವಾನಾಂ ಧನಮ್ - ವೈಷ್ಣವರ ದೊಡ್ಡ ಆಸ್ತಿ. ಮಹಾಭಾರತ ಹಾಗೂ ಇತರ ಪುರಾಣಗಳನ್ನು ರಚಿಸಿದ ವೇದವ್ಯಾಸರು ಅತೃಪ್ತರಂತೆ ನಟಿಸಿ ಈ ಪುರಾಣವನ್ನು ರಚಿಸಿದ್ದಾರೆ. ಅಲ್ಲದೆ, ಇತರ ಪುರಾಣಗಳನ್ನು ರೋಮಹರ್ಷಣ ಸೂತರಿಗೆ ಪ್ರಚಾರಕ್ಕಾಗಿ ನೀಡಿದರೆ, ಭಾಗವತವನ್ನು ತಮ್ಮ ಮಗನಾದ ಶುಕಾಚಾರ್ಯರಿಗೇ ನೀಡಿದ್ದಾರೆ. ಹೀಗೆ ಶ್ರೀ ವೇದವ್ಯಾಸರು ಕಲಿಕಾಲದ ಸಜ್ಜನರ ಶ್ರೇಯಸ್ಸಿಗಾಗಿಯೇ ರಚಿಸಿರುವ ಪುರಾಣ ಭಾಗವತ.

ಶ್ರೀ ಮಧ್ವಾಚಾರ್ಯರು ಭಾಗವತ ಪುರಾಣದ ಅರ್ಥನಿರ್ಣಯಕ್ಕಾಗಿಯೇ ಗ್ರಂಥವೊಂದನ್ನು ರಚಿಸಿದ್ದಾರೆ. ಬಾಲ್ಯದಿಂದಲೇ ಭಾಗವತ ಗ್ರಂಥವನ್ನು ಮುಖೋದ್ಗತವಾಗಿ ಹೇಳಿ ಗುರುಗಳಿಗೆ ಅಚ್ಚರಿಪಡಿಸಿದ್ದಲ್ಲದೆ ತಮ್ಮ ಶಿಷ್ಯರಾದ ಶ್ರೀ ಹೃಷೀಕೇಶತೀರ್ಥರಿಂದ ರಾಗಬದ್ಧವಾಗಿ ಭಾಗವತದ ಶ್ಲೋಕಗಳನ್ನು ಹಾಡಿಸಿ ತಾವು ಅದರ ವಿವರಣೆಯನ್ನು ಸಾರ್ವಜನಿಕ ಸಭೆಗಳಲ್ಲಿ ನಿರೂಪಿಸುತ್ತಿದ್ದರು. ಹೀಗೆ ಆಚಾರ್ಯರಿಗೂ ಅತ್ಯಂತ ಪ್ರಿಯವಾದ ಪುರಾಣ ಶ್ರೀಮದ್ಭಾಗವತ.

ಶ್ರೀಮದಾಚಾರ್ಯರು ಭಾಗವತದ ಅರ್ಥನಿರ್ಣಯಕ್ಕಾಗಿ ಬರೆದಿರುವ ಈ ಗ್ರಂಥ ಭಾಗವತದ ಅಧ್ಯಯನಕ್ಕೆ ಅತ್ಯಂತ ಆವಶ್ಯಕವಾದ ಒಂದು ಕೈಪಿಡಿ. ಮಹಾಭಾರತ ಮತ್ತು ಭಾಗವತಗಳಿಗೆ ವಿರೋಧ ಬಂದಾಗ ಶ್ರೀ ವೇದವ್ಯಾಸರೇ ರಚಿಸಿದ ಇತರ ಪುರಾಣಗಳ ಆಧಾರವನ್ನು ಕೊಟ್ಟು ವಿರೋಧವನ್ನು ಪರಿಹರಿಸಿರುವುದು ಆಚಾರ್ಯರಿಗೆ ಪುರಾಣ ಸಾಹಿತ್ಯದಲ್ಲಿದ್ದ ಸಂಶೋಧಕ ದೃಷ್ಟಿಯನ್ನು ಈ ಗ್ರಂಥ ಸ್ಪಷ್ಟಪಡಿಸುತ್ತದೆ. ಭಾಗವತದಲ್ಲಿ ಬರುವ ಅನೇಕ ಕ್ಲಿಷ್ಟವಾದ, ಅಪಾರ್ಥವಾಗುವ ಶ್ಲೋಕಗಳಿಗೆ ಪ್ರಮಾಣಬದ್ಧವಾದ ವಿವರಣೆಯೂ ಈ ಗ್ರಂಥದಲ್ಲಿದೆ. ಇತರ ವ್ಯಾಖ್ಯಾನಕಾರರು ಹಿಡಿದಿರುವ ಪಾಠಗಳಿಗಿಂತ ಉತ್ತಮವಾದ,

ವೇದವ್ಯಾಸರಿಗೆ, ಶ್ರುತಿಗಳಿಗೆ ಸಮ್ಮತವಾದ ಅಪೂರ್ವ ಪಾಠಗಳನ್ನು ಆಚಾರ್ಯರು ತೋರಿಸಿಕೊಟ್ಟಿದ್ದಾರೆ. ಹೀಗೆ ಭಾಗವತದ ವಸ್ತುನಿಷ್ಠ ಅಧ್ಯಯನಕ್ಕೆ ಅನಿವಾರ್ಯವಾದ ಗ್ರಂಥ ಇದು.

ನಮ್ಮ ಪ್ರಿಯಶಿಷ್ಯರಾದ ಶ್ರೀ ಹಯವದನ ಪುರಾಣಿಕರು ಭಾಗವತದ ತಾತ್ಪರ್ಯದ ಪ್ರಥಮ, ದ್ವಿತೀಯ, ತೃತಿಯ, ಚತುರ್ಥ, ಪಂಚಮ, ಷಷ್ಠಮ ಸ್ಕಂಧದ ಕನ್ನಡಾನುವಾದವನ್ನು ಮಾಡಿದ್ದು, ನಾಲ್ಕು ಸಂಪುಟಗಳಲ್ಲಿ ಬಿಡುಗಡೆ ಹೊಂದಿದೆ. ಕನ್ನಡ ಸರ್ವಮೂಲ ಗ್ರಂಥಗಳಲ್ಲಿ ಈಗಾಗಲೇ ಮಹಾಭಾರತ ತಾತ್ಪರ್ಯ ನಿರ್ಣಯದ ಸಮಗ್ರ ಕನ್ನಡ ಅನುವಾದವನ್ನು ಮಾಡಿರುವ ಪುರಾಣಿಕರು ಈಗಾಗಲೇ ಜನರ ಅಭಿಮಾನ ಗಳಿಸಿರುತ್ತಾರೆ. ನ್ಯಾಯ, ವೇದಾಂತಗಳಲ್ಲಿ ಉತ್ತಮ ಪಾಂಡಿತ್ಯವಿದ್ದರೆ ಮಾತ್ರ ಭಾಗವತ ತಾತ್ಪರ್ಯದ ಸರಿಯಾದ ಅನುವಾದ ಮಾಡಲು ಸಾಧ್ಯ. ಅಂತಹ ಅರ್ಹತೆ ಹಯವದನ ಪುರಾಣಿಕರಿಗೆ ಇದೆ. ಪ್ರಕೃತ ಶ್ರೀಯುತರು ಇದರ ಸಪ್ತಮ, ಅಷ್ಟಮ ಹಾಗೂ ನವಮ ಸ್ಕಂಧದ ಕನ್ನಡಾನುವಾದವನ್ನು (ಸರ್ವ ಮೂಲ 17ನೇ ಸಂಪುಟ) ಮಾಡಿದ್ದು ಬಿಡುಗಡೆಗೆ ಸಿದ್ಧವಾಗಿದೆ. ಆದ್ದರಿಂದ ನಿರ್ದಿಷ್ಟವಾದ ಈ ಅನುವಾದದ ಉಪಯೋಗವನ್ನು ಜಿಜ್ಞಾಸುಗಳು ಪಡೆದು, ಶ್ರೀಹರಿಗುರುಗಳ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ನಾವು ಅಪೇಕ್ಷಿಸುತ್ತೇವೆ.

ಶ್ರೀ ವಿಶ್ವೇಶ ತೀರ್ಥಶ್ರೀಪಾದರು
ಶ್ರೀ ಪೇಜಾವರ ಅಧೋಕ್ಷಜ ಮಠ
ಉಡುಪಿ

भागवततात्पर्यनिर्णयः

Introduction

In the course of the introduction to the first volume of Bhāgavata Tātparya Nirṇaya, it is already stated that this work of Śrī Ānanda tīrtha (Śrī Madhvāchārya) is a critical exposition of Śrīmad Bhāgavata. It is also stated that Bhāgavata is quite distinct from Mahābhārata, Rāmāyaṇa and Purāṇas in respect of its style, subject matter and the purpose. Its theme is to describe the different incarnations of the Supreme God Nārāyaṇa, particularly, the incarnation of Śrī Krishna.

In the course of this description discourses on philosophy, theology and ethics are introduced. Inculcation of devotion to the Supreme God and detachment from worldly things are stressed. A noble conduct designated as Bhāgavata Dharma is advocated all along. In the course of the narration of the main theme the episodoes of the Sages, Kings and distinguished devotees are introduced.

The style of Bhāgavata is not simple like that of Mahābhārata and Purāṇas. It is scholastic style like later Mahākāvyas. The Bhāgavata tradition is a continuation of Pancharātra tradition. Hence, a number of terms of pancharātra theology are introduced in Bhāgavata. It is difficult for an average reader to comprehend the deeper philosophical and theological implication of these terms and the discourses on

philosophy and theology. Bhāgavata tātparya nirṇaya explains these quoting appropriate authorities of Pancharātra tradition.

Out of eighteen thousand verses of Bhāgavata sixteen hundred verses only are selected for comments in this work. Such verses only that are significant from philosophical and theological point of view are selected for comment. These comments are of four types :

i) The special meaning of certain important words are given.

ii) The special point made by a word or phrase or the verse is explained.

iii) The theological and philosophical doctrines are explained.

iv) The expressions and phrases that are likely to be given advaita interpretation are examined and their correct import is explained.

In majority of cases all these points are supported quoting appropriate authorities. The remarks made are brief but the authorities quoted are long. Śrī Madhvāchārya quotes from three hundred and eight works, in his thirty seven works. Among these, quotations from two hundred and twenty four works are given in Bhāgavata tātparya nirṇaya which has a rich reference to philosophical and theological doctrines.

II

This volume contains three skandhas viz. 7th, 8th and 9th. The theme of 7th Skandha is the description of the incarnation of

Narasimha. Śrī Narasimha took his incarnation to protect Prahlāda from the harassment of his father Hiraṇyakaśipu. His elder brother, Hiraṇyākṣa was killed by Śrī Viṣṇu by incarnation of Varāha. This enraged Hiraṇyakaśipu. To retaliate against the deities and their lord Viṣṇu, Hiraṇyakaśipu undertakes severe penance for a long time. His body was covered by the anthill and creepers. Caturmukha Brahma appeared before him and suggested to Hiraṇya Kaśipu that he may ask for any boon. Hiraṇya Kaśipu asked a boon to grant him the protection. He should not be killed neither during day nor during night, neither outside nor inside, neither on the earth nor over the sky; neither by men nor by animals. He should not be killed by weapons.

नान्तर्बहिर्दिवा नक्तमन्यस्मादपि चायुधैः ।
न भूमौ नांबरे मृत्युर्न नरैर्न मृगैरपि ॥

Brahmā granted this boon. Obtaining this boon Hiraṇyakaśipu became arrogant and aggressive. He conquered the three worlds, occupied the throne of Indra. He asked sacrificers to offer homa for his sake. The earth was forced to yield the crops without cultivation. The ocean offered the gems voluntarily. The trees yielded the flowers out of season. Everyone was afraid of him. In this way for a long time he ruled aggressively. He had four sons Prahlāda, Anuhlāda, Suhlāda and Hlāda. Among these Prahlāda had great qualities. He had spontanious devotion to the supreme god. Hiraṇyakaśipu appointed Caṇḍāmalaka, the son of Śukracārya to educate Prahlāda and the other demon boys. When Hiraṇyakaśipu asked

his son Prahlāda about the progress of education he said, he learnt devotion to the Supreme God and rejected the teachings of his teacher about Rājadharma etc. Hiraṇyakaśipu was very angry with it. He harassed Prahlāda in many ways. In spite of this Prahlāda continued to teach devotion to the Supreme God to his classmates. He said, the Supreme God is eternal, imperishable, pure. He is the support for all. He does not undergo any change. He knows himself fully. He is everywhere.

आत्मा नित्योऽव्ययः शुद्धः एकः क्षेत्रज्ञः आश्रयः ।
अविक्रियः स्वदृक् वश्यो व्यापकोऽसङ्ग्यनावृतः ॥

Just as a goldsmith discovers the gold from the rock the devotees should discover god within their body by yogic practice. Hiraṇyakaśipu retorted that if the Lord of the World as described by you, is a person other than me and is everywhere as you contend. Show him to me in this pole. I will cut his head. On his challenge of Hiraṇyakaśipu the supreme god appeared from the pole in the form that was neither that of a man nor that of an animal. He appeared to prove the words of his devotee Prahlāda and also to establish that he is everywhere.

सत्यं विधातुं निजभृत्यभाषितं व्याप्तिं च भूतेष्वखिलेषु चात्मनः ।
अदृश्यतात्यद्भुतरूपमुद्वहन् स्तम्भे सभायां न मृगं न मानुषम् ॥
(भा. VII.8.14)

He tore Hiraṇyakaśipu into pieces. By the force employed by Narasimha the ocean moved, the mountains severed and the sky was full of his lustre.

शैलाः समुत्पेतुरमुष्य रंहसा तत्तेजसा खं ककुभो विरेजिरे ।
ततस्सभायामुपविष्टमुत्तमे नृपासने सम्भृततेजसं विभुम् ॥ (VII.8.34)

Śrī Narasimha was so furious that the deities and the sages were not able to calm him. They requested goddess Lakṣmī to calm him. However, she asked Prahlāda himself who appealed to Śrī Narasimha to be calm.

The destruction of three cities built by the divine architect Maya for the Demons

After narrasing the episode of Prahlāda Nārada narrates the event of the destruction of the three cities built by the divine architect Maya. When the diaties defeated the demons they approached Maya to help them. He built three cities of gold, silver and iron. These were invisible very strong and could move wherever the demons wanted to move. The demons started attacking the deities sitting in the cities. The deities approached Rudra to help them. He destroyed the demons with the Pāśupata bow. Maya took pity on them; put their bones together in the lake of nectar constructed by him and servived their life. Rudra was unhappy as his purpose of destroying demons was defeated. Then the supreme god Viṣṇu took the form of a cow and made Caturmukha Brahma the calf. He sucked the nectar from the lake and made it dry. This took away all the strength of the demons. Then he provided the weapons made from Dharma, Jñāna, Virakti, tapas, vidyā and kriyā to Rudra. Armed with these Rudra destroyed the three cities and restored peace.

In cantos eleven to fifteen Varnāśrama dharma is described in detail. Srīdharmas are separately described.

The themes of this Skandha VIII are Gajendramokṣa, Samudramathana and Vāmana avatāra.

Gajendra Mokṣa

As a priliminary to the discription of Gajendra Mokṣa Bhāgavata graplically describes Trikūta Mountain. In this mountains there existed many areas of forest, many kinds of animals, many valleys, many lakes surrounded by trees, the birds providing sweet songs. A garden called ṛtumāna was provided for the sports of divine women.

Once a large elephant accompanied by a group of young elephants arrived at the lake. As it was very thirsty it rushed into the lake and rolled in the water. At that lake there was a strong shark. This shark caught hold of te leg of the elephant. They fought for a thousand years, but still the elephant was not able to be free from the shark. The elephant recollected the knowledge of its previous birth and prayed the supreme god to release it from the shark. The supreme god arrived at the lake and cut the shark with his sharp Sudarśana. Bhāgavata gives the background of the previous birth of the shark and the elephent. The shark was a Gandharva by name Hu Hu. He was sporting in a lake assuming the form of a shark. The sage Devala arived at the lake for a bath. He dragged him. The sage was upset and cursed him to be parmanently a shark. The Hu Hu Gandharva appealed to the

sage to pardon him. Then the sage said, you will be free from the shark's form when a Gajendra arrives at the lake. Accordingly his original form was now restored.

The Gajendra was king Indradyumna of Pāṇḍya country. He was intensly worshipping God Viṣṇu. When he was engaged in worshipping God the sage Agastya arrived. Indradyumna did not take notice of him. The sage cursed him to be born as an elephant as he is arrogant like an elephant. Now he is freed because of devotion to God Viṣṇu in the previous birth.

Samudra Mathana

As a priliminary to narrate Samudra Mathana Bhāgavata states that there was a fierce battle between the deities and demons. The deities were defeated. There was a reason for it. Indra who ruled at Svarga became arrogant as he enjoyed all luxuries. Once he was riding on his elephant. Sage Durvāsa who was returning from Kailāsa after offering oblation to Śiva gave a garland of flowers to Indra. Which was given to him by Śiva. Indra careless threw it on the ground with disrespect. It was crushed by the foot of the elephent. Durvāsa was upset by it. He cursed Indra to lose his kingdom and luxuries along with his associates. This was responsible for the defeat of Indra and all other deities at the hands of demons. The deities suffered for a long time. Then the approached Brahmā to help them. Brahmā and other duties offered prayers to the Supreme God. The Supreme God asked them to make peace with the demons and undertake Samudramathana to become strong. When some

great thing has to achieved one has to make peace even with the enemies.

He instructed them to put all kinds of herbs creepers, plant into Kṣīrasāgara make the Mandāraparvata the churning rod, Vāsuki, the churning rope and churn the Kṣīrasāgara. He assured his support. He also instructed then whatever demands the demons make conceed it to them. The demons work hard but you will get the result. The deities lead by Indra appealed to Balichakravarti to be the leader of the demons. The Demons agreed to participate in Samudramanthana. They started churning the ocean with all the force. The poison hālāhala arose. It was imposible to bear with it. Therefore the deities and demons appealed to Mahādeva to save them from the poison. Lord Śiva took pity on them, and took poison on his hand with the consent of Pārvati. He sipped it. A dark mark remained on his neck to demon strate to the people the need of helping people in difficulties even if it amounts to taking poison.

The deities and demons continued to churn the ocean. Kāmadhenu cow arose. She was taken by the sages. Then Uccaiśravas horse came out. It was taken by Balicakravarti. Next Airāvata elephant arose. Indra took it. Then Kaustubha came out. It was taken by Viṣṇu himself. Next Kalpavṛkṣa arose. This was kept by the deities for themselves.

After all these smaller items were churned out Goddess Mahālakṣmī emerged. The deities, sages and all others were

wonder struck. Goddess Lakṣmi took a garland in her hand and looked around for a suitable groom for her, though she knew very well Viṣṇu alone was suitable for her. She pretended to make a search for a spouse. She went round and found that everyone has some or other draw back. Viṣṇu has no such draw backs. Hence goddess Lakṣmi chose him as her spouse. The churning of the ocean continued. Dhanvantari arose with a vessel filled with nectar. The demons forcibly snatched it. Howver they started fighting among himselves to drink it. The deities became depressed and appealed to God to help them. to help the deities Viṣṇu took the form of Mohini, beautiful women. The demons were captivated by her. They offered her to distribute the nectar. Among the deities and demons. Mohini asked the deities and demons to observe fast for a day and made then sit in two different lines. She started serving the nectar to the deities. A demon Srabhānu some how managed to join the line of deities. The sun and moon pointed it out. The god cut his head. The head survived as there was nector in it. The rest of the body fell.

As the demons did not get nectar they started a fierce battle with the deities. This battle was led by Balicakravarti on behalf of the demons, Indra on behalf of deities. Namuci was killed by Vajrāyudha Bali and other demons were also killed. However on the advice of Brahma their life was revived. After Balicakravarti's life was revived the Brahmaṇas of Bhṛgu clam asked him to perform Viśvajit sacrifice. After performing it he proceeded to Indra's capital city accompanied by a large army of demons. Indra was worried. He asked his preceptor.

He told him that Bali has become very strong. He can not be countered without the help of the Supreme god. the time is not ripe for it now. You better leave svarga for some time and wait for appropriate time. Accordingly Indra went out of Svarga along with other deities.

Incarnation of Vāmana

When Indra and other deities left svarga their mother Diti was very unhappy. She asked her husband for a solution for her children's difficulties. Kaśyapa advised her to perform Payovṛta. Diti performed it with great devotion and offered prayer to Vasudeva. The supreme god appeared before her and promised that he would take the form of her son and free the deities from their miserable position. In due course Diti became pregnant. The supreme God appeared taking the form of a child son. He grew into a boy of five years. The sages performed his Upanayanam. He proceeded to the place wherein Balicakravarti was performing sacrifice. He was received with war well came by the Bali Cakravarti and Bhṛgus were inpressed with his personality. Balicakravarti asked him to ask for any gifts. Vāmana appreciated the offer of Balicakravarti. Vāmana asked the gift of three steps of places.

Bali said it was not proper for ask for such a small place. Vanara said one should have faith : He who has no restraint will not be satisfied. Hence I asked for three steps only. While Balichakravarti proceed for giving the gift, Vānara started growing. He grew to such an extent that the entire world was

absorbed in it. It was his Viśvarūpa. Vāmana occupied the entire earth with one step and streched the other to antarikṣa. As Bali Cakravarti was not able to provide place for the 3rd step he was tied by Varuṇa pāśa. He offered his head for the third step – Balicakravarthi's wife Vindhyāvali, his grand father Prahlāda and Caturmukha Brahma to relieve his pāśa. The Supreme God asked Balicakravarti to go to Sutala. He asked Prahlāda also to remain with him. He said he himself also will be at the gate of Bali Cakravarti holding the gadā.

वत्स प्रह्लाद भद्रं ते प्रयाहि सुतलातलम् ।
नित्यं द्रष्टासि मां तत्र गदापाणिमवस्थितम् ॥

After this Matsyāvatāra is described.

Skandha IX

The birth of Iḷā and Sudyumna

The Vaivasvata Manu had no children for a long time. His family preceptor Vasiṣṭha advised him to perform Maitrāvaruṇa sacrifice. While he was performing it his wife Śraddhādevi appealed to the sacrificial fire to give a female child for her. Accordingly a female child was born. Vaivasvata was very unhappy. He appealed to God. The God converted the female child Iḷā into a male child. He was named Sudyumna. This Sudyumna grew into a young man and proceeded for hunting. He entered into the private forest of Śiva and Pārvati. He became a woman, those who accompanied him also became

women. There is a background for it. Once Śiva and Pārvati were sporting in this area of their private forest. Some sages unexpectedly came Pārvati felt embarassed. The sages moved on to Nārāyaṇāśrama. However Śiva introduced a safeguard. He made it a condition that men who enter into this will be converted into women. Young Sudyumna was a victim of it. He appealed to his family preceptor Vasiṣṭha who appealed to Supreme God himself. He said : Sudyumna will be a male for a month and female for the next month. He will be male and female by rotation.

The Episode of Cyavana and Sukanyā

Śaryāti had a daughter Sukanyā. Once Saryāti went to the forest around the āśrama of sage Cyavana. His daughter Sukanyā accompanied him. She saw a huge ant hill. In the two holes of it light was flashing. She became curious and put a thorn into the hole. Blood started coming. She was frightened and quietly left the place. This anthill had grown around the body of sage Cyavana who was performing penance for long. The shining flashes of two holes were the flashes of his eye. When Śaryāti came to know this event he appealed to cyavana to pardon her. Cyavana said, 'in his old age he needs someone to take care of him and Sukanya may be given to him in marriage. Saryātai agreed and arranged the marriage and left Sukanyā with cyavana. Sukanya served him devotedly. Cyavana felt guilty for making a young woman suffer with an old man.

Incidentally Aświni deities arrived at Cyavana's āśrama. Cyavana told his problem. Aświni deities took pity on him. They put all kinds of medicinal herbs in the nearly pond and took a dip along with him. The three become young and handsome. It was difficult for Sukanyā to identify her husband Aśvini deities helped her in identifying Cyavana.

Śaryāti came to Cyavana's āśrama to see his daughter. He was very happy to see his son-in-law as young. Śaryāti had three sons. Utthāna, Āvarta and Bhūrisena. Ānartha got a son Revata. He built a city Kuśasthalī under the sea. This became Dvāraka later. He got a daughter Revati. He gave her in marriage to Balarāma of Yadu family.

The episode of Ambariṣa

Nābhāga's son was Ambarīṣa. He ruled over the vast kingdom consisting of seven islands. He was a great devotee of God. He used to perform large number of sacrifices. The deities and sages used to be personally present at his sacrifices. He undertook dvādaśi vrata for one full year. This involved the fast on ekādaśi and only one meal on dvādaśī morning. He observed this for one full year. On Kārtika bright half dvādaśī he planned to complete dvādaśīvrata. He had invited a large number of Brāhmaṇas. Sage Durvāsa arrived at that time and went to take his bath. He did not return in time. The dvādaśi tithi was to be over within few seconds. Ambarīṣa sipped water by way of Pāraṇa in order to observe the Pāraṇa before dvādaśī is over.

Durvāsa arrived after a few seconds. Finding that Ambarīṣa had already completed Pāraṇā without waiting for him. He lost his temper and took an evil power from the matter hair. The evil spirit created by Durvāsa tried to attack Ambarīṣa. He remained unmoved, the Sudarśana provided by Viṣṇu to guard him cut the evil spirit and rushed towards Durvāsa. He started running to save himself. He wondered all over the world. He went to Brahma and Śaṅkara. They advised him to seek the help of Viṣṇu. He went to Vaikunṭha. Viṣṇu told him to seek the help of Ambarīṣa himself. Durvāsa fell at the feet of Ambarīṣa. He prayed Viṣṇu to withdraw the Sudarśana Cakra.

After this Bhāgavata describes the episode of Saubhari, the episodes of Triśanku and Hariścandra. The episode of Sāgara and Bhagīratha and gives the brief summary of the Rāmāyaṇa and the episode of Rantideva.

We will illustrate the special points made in Bhāgavata tātparyanirṇaya from the above skandhas.

Bhāgavata tātparyanirṇaya VII, VIII and IXth Skandhas

1. **The meaning of the techinical and rare words**
   परः कविः – बृहस्पतिः ।

2. In the phrase परे कवौ the word कविः means Bṛhaspati. Ordinarily the word कवि is used in the sense of Śukrācārya. However, here the adjective परः makes it clear that Bṛhaspati is referred to here. The word कवि also

refers to Chaturmukha Brahma, but he is also not to be taken. (VII.11.28)

3. बुद्धि is interpreted as jīva in some instances बुद्धेः जीवस्य – सत्त्वबुद्ध्यादिशब्दैस्तु जीवोऽपि क्वचिदीर्यते ॥ (7.7)

4. स्वराट् means Indra, Indra who is a deity on the path of arcirādi is called svarāt. (7.7.16)

5. लिङ्गं – Manas etc. sixteen kalas that form liṅga śarīra of jīva. For such jīva Brahman himself an abode.
धत्तेऽसावात्मनो लिङ्गम् । जीवमनआदीनां आधारं ब्रह्म । (VII.2)

6. सप्ततन्तून् – सप्तक्रतून् The word तन्तून् means क्रतून् i.e. sacrifice. VII.3.31
सप्ततन्तुर्मखोऽध्वरः । (हलायुधकोशः)

7. त्रिवृत् – त्रिगुणात्मिकप्रकृतिः । (VII.3)

8. अनीहा – Undertaking something without any strain is aniha.
अप्रयत्नेन करणं अनीहा प्रोच्यते बुधैः इति च । (VII.7.49

9. अच्युतम् च्युतिवर्जनम् । (VII.7.56)
The word acyuta means 'without cyuti i.e. fall' such state in liberation which does not involve any return to Samsāra.

10. The लिङ्ग conveys the Svarūpa of the jīva. It also conveys the meaning jñāpaka i.e. indicator.

लिङ्गं स्वरूपमुद्दिष्टं लिङ्गं ज्ञापकमेव च । इति शब्दनिर्णये ।

2. Explanation of special points made by a word, phrase or verse

(i) सर्वभूतात्मभूतं (७.१.४४) devoted to the supreme god who is present in all.

3. Explanation of the theological and philosophy doctrines.

(i) दधिस्थघृतवत् काष्ठे वह्निवच्च जनार्दनः ।
देहेन्द्रियेसुजीवेभ्यो विविच्य ज्ञायते न तु ॥ इति च ।
(Bhaviṣyapurāṇa quoted under 1.9)

Like the butter in the curds, and the fire in fire wood, the god cannot be comprehended as distinct from the body the senses and the jīvas.

(ii) जन्माद्याः षडिमे भावा दृष्टा देहस्य नात्मनः ।
फलानामिव वृक्षस्य कालेनेश्वरमूर्तिना ॥

Birth etc. the six states belong to the body but not to Ātman, like fruits of a tree. These are provided by the god. (Tātparyanirṇaya VII.1.18)

(iii) मागधाद्या यथा नित्यं द्वेषादाग्रहिणो हरौ ।
न तथाऽऽग्रहिणो भक्ता ऋते ब्रह्माणमव्ययम् ॥ इति हरिवंशो (VII.1)

Śiśupāla etc. hate the Supreme God persistently while the devotees are not devoted persisting.

(iv) यथाऽनलो दारुषु भिन्न ईयते ।
यथानिलो देहगतः पृथक् स्थितः ।

यथा नभः सर्वगतं न सज्जते
तथा गुणैः सर्वगुणाश्रयः परः ॥ (VII.2.43)

Just as the fire present in the firewood is distinct, the air present in the body is distinct, the sky present everywhere is not connected with anything, in the same way the Supreme God who is the support of all qualities is distinct from the drawbacks of Jīva and body.

(v) अन्येषां हरिसाम्यं तु किञ्चित् साम्यमुदीरितम् ।
सम्यक् साम्यं तु मत्स्यादेरिति शास्त्रस्य निर्णयः ॥ VII.4.35

When similarity with the Supreme God is stated for others it has to be taken in the sense of limited similarity, while the similarity of Matsya etc., incarnations of gods is full similarity. (Skandapurāṇa)

(vi) भक्तिर्ज्ञानं विरक्तिश्च नवकः श्रवणादिकः ।
धर्मो भागवतः प्रोक्तस्तद्भक्तेषु तथा नव ॥ इति तन्त्रसारे । (VII.10)

Bhakti, Jñāna, Virakti, Śravaṇa etc. nine constitute Bhāgavata dharma. The devotees of Supreme God will have all there nine.

(vii) श्रवणं कीर्तनं चास्य स्मरणं महतां गतेः ।
सेवेज्यावनतिः सख्यं दास्यमात्मसमर्पणम् ॥ (VII.12.11)

Listening to the glory of the god, singing it, remembering the way in which great devotees remember, service, worship, humility, friendship, dedication and surrendering oneself completely at the feet of god, these constitute Bhāgavata dharma.

(viii) यस्मिन्निदं यतश्चेदं येनेदं य इदं स्वयम् ।
योऽस्मात् परस्माच्च परस्तं प्रपद्ये स्वयंभुवम् ॥ (VIII.3.3)

He in whom the whole world gets dissolved, from whom it arises and by whose direction it undertakes all activities, who provides the very existence of the universe, who is independent and who is superior to liberated and unliberated jīvas, I prostrate at the feet of such a Supreme God.

(ix) अमृतस्य पूर्णकलशं बिभ्रद् वलयभूषितः ।
स वै भगवतः साक्षाद् विष्णोरंशांशसम्भवः ॥ ८.८.३३

धन्वन्तरिरिति ख्यात आयुर्वेददृगिज्यभाक् ।
तमालोक्यासुराः सर्वे कलशं चामृताहृतम् ॥ ८.८.३४

Dhanvantari who initiated Āyurveda Science and who is an aniśa of the Supreme God Viṣṇu arose from the ocean at the time of Samudramathana, i.e. Churning of the ocean, holding a pot filled with amṛta i.e. nectar. On seeing it the demons snatched away the pot filled with nectar.

(x) यदा देवेषु वेदेषु गोषु विप्रेषु साधुषु ।
धर्मे मयि च विद्वेषः स वा आशु विनश्यति ॥ (७.४.२८)

When a person hates the deities, vedas, the cows, the Brāhmaṇas, the noble persons, the Dharma, then he will perish immediately.

(xi) निर्वैराय प्रशान्ताय स्वसुताय महात्मने ।
प्रह्लादाय यदा द्रुह्येद्धनिष्येऽपि वरोर्जितम् ॥ (७.४.२९)

As Hiraṇyakaśipu hates Prahlāda who does not hate him, who is of very peaceful nature and who is his own son I will kill him though he is supported by Brahma's boon.

(xii) ऋते तु तात्त्विकान् देवान् नारदादींस्तथैव च ।
प्रह्लादादुत्तमः कोनु विष्णुभक्तौ जगत्त्रये ॥ (स्कन्ध ७.१०)

Excepting the tāttvika deities and Nārada etc. sages there is no other person superior to Prahlāda in the whole world in respect of Viṣṇubhakti.

(xiii) अग्नौ गुरावात्मनि च सर्वभूतेष्वधोक्षजम् ।
भूतैः स्वधामभिः पश्येदप्रविष्टं प्रविष्टवत् ॥ ७.१३.१५

The Supreme God Adhokṣaja is present is fire, in teacher in all beings, as His abode. In a way he has entered into these and also not entered. In each of these the god is present in certain forms. Keeping this in mind it is stated that he enters. The supreme god is everywhere. From this point of view he has not entered in any particular being.

(xiv) अन्तर्हिरण्यकादीनां भक्तिरस्त्येव केशवे ।
असुरावेशतस्त्वन्यान् हरिस्तोतॄन् द्विषन्ति च ॥ (पाद्मे.७.२)

Hiraṇyakaśipu etc. have bhakti within their heart. However because of asurāveśa they hate those who praise the god.

(xv) कर्तृकर्मक्रियादीनां सत्तावृत्तिस्तथैव च ।
विष्ण्वधीनं यतः सर्वं सर्वरूपस्तदुच्यते ॥ इति ब्रह्मतर्के (VII.9.20)

The agency, the action, the activity, the very existence are under the control of Viṣṇu. In view of this Viṣṇu is called Sarvarūpa.

(xvi) केवलानुभवानन्दस्वरूपः परमेश्वरः ।
माययाऽन्तर्हितैश्वर्य ईड्यते गुणसर्गया ।। (VII.6.29)

The true nature of Supreme God is jñāna and Ānanda. However, Prakṛti consisting of three guṇas conceals its true nature.

(xvii) अकामो धर्मकामो वा मोक्षकामोऽपि यो भवेत् ।
अथवा सर्वकामो यः स विष्णुं पुरुषं यजेत् ।। (VII.7)

One should worship Viṣṇu preferably without any expectation of result or to serve the purpose of dharma or mokṣa or even for all this.

(xviii) ब्रह्मादिस्थावरान्तेषु न विशेषो हरेः क्वचित् ।
व्यक्तिमात्रविशेषेण तारतम्यं वदन्ति च ।। (VII.15.40)

There is no difference of the presence of Viṣṇu from Brahma to jaḍa objects. However, there is gradation in respect of only manifestation.

(xix) नाप्रयोजनपक्षी स्यान्न वृथा शिष्यबन्धकृत् ।
न चोदासीनशास्त्राणि न विरुद्धानि चाभ्यसेत् ।

(xx) न व्याख्ययोपजीवेत न निषिद्धान् समाचरेत् ।
एवं भूतो यतिर्याति तदेकशरणो हरिम् ।। इति समाचारे ।
(VII.14.42-43)

One should not indulge in purposeless reading or teaching, should not harrase the disciples, should not neglect study of Śāstra, should not study wrong works, should not depend upon commentaries and should not indulge in

prohibited acts. A yati of this nature will approach the god completely surrendering at his feet.

(xxi) अभिमान्यपेक्षया विष्णुः पञ्चविंश इति स्मृतः ।
जडव्यपेक्षया जीवः सम्यज्ज्ञेयो हरिः स्मृतः ॥ (VII.7)

The term Prakṛti conveys 24 tattvas and when their abhimāni deities are taken into account Viṣṇu is 25th tattva. When Jaḍatatva only are referred to without referring to abhmāni deities then jīva is 25th tattva. In all these 25th tattvas god is present as niyāmaka.

(xxii) यथा वैरानुबन्धेन मर्त्यस्तन्मयतामियात् ।
न तथा भक्तियोगेन इति मे निश्चिता मतिः ॥ (VII.1.28)

By the feeling of enmity a persons is completely absorbed in the person when he has enmity. But such absorption is not possible by Bhakti.

(xxiii) गोप्यः कामात् भयात् कंसो द्वेषाच्चैद्यादयो नृपाः ।
सम्बन्धाद् वृष्णयः स्नेहात् यूयं भक्त्या वयं विभो ॥ (VII.1.32)

The Gopikā women by Kāma accompanied by Bhakti, Kaṁsa by bhaya accompanied by Bhakti, Śiśpāla by dveṣa accompanied by Bhakti, Yādavas etc. by the family relation accompanied by Bhakti, Pāṇḍavas by affection accompanied by jñāna, you the sages by jñāna mere than Prīti, in this way everyone seeks the favour of god by Bhakti only.

(xxiv) कर्तृकर्मक्रियादीनां सत्तावृत्तिस्तथैव च ।
विष्ण्वधीनं यतः सर्वं सर्वरूपस्तदुच्यते ॥ इति ब्रह्मतर्के । (VII.9.25)

The Kartṛtva, karmatva, sattā and vṛtti, all these are under the control of the Supreme God Viṣṇu. In view of this he is described as sarvarūpa.

(xxv) विप्राद् द्विषड्गुणयुतादरविन्दनाभ
पादारविन्दविमुखात् श्वपचं वरिष्ठम् ।
मन्ये तदर्पितमनोवचनात्मगेह
प्राणः पुनाति सकलं न तु भूरिमानः ॥ (VII.9.10)

Comparing with a Brāhmaṇa who has 12 qualities but away from the god a Śvapaca, i.e. a low level caste person who eats the flesh of a dog but who completely surrenders himself at the feet of the god is better.

(xxvi) स्थावरणां तु सर्वेषां देवता याऽभिमानिनी ।
विरोषाद् वटबीजे च साऽश्वत्थे च व्यवस्थिता ॥
अदृश्या कणिका नाम सा वृक्षान् व्यञ्जयत्यपि ।
अतो बीजमिति प्रोक्ता सा जातेऽप्यङ्कुरे स्थिता ॥

(xxvii) एवं हरिः कारणेषु स्थितः कार्यजनेरनु ।
कार्येष्वनुप्रविष्टः सन् प्रथमं तत्र दृश्यते ॥ (VII.8)

In all sthavara objects Karṇikā is present as abhimāni deity. She is particularly present in the need of vaṭa tree and aśvattha tree. From these seeds she makes the tree manifest. In view of this she is also called bija i.e. seed. She is also present in the sprout. In the same way god

present in the causes makes the effects manifest. He enters into the effect and is found in the effects.

(xxviii) श्रवणं कीर्तनं विष्णोः स्मरणं पादसेवनम् ।
अर्चनं वन्दनं दास्यं सख्यमात्मनिवेदनम् ॥ (VII.5.23)

Listening to the glory of Supreme God Viṣṇu reciting his name, remembering him, service at his feet, worshipping him, offering obeisance, considering himself as Haridāsa, considering himself as a friend of god, realising that the Supreme God is present in him. With these nine fold bhakti one has to worship him.

आत्मनिवेदनम् – आत्मस्थत्वेन निवेदनम्

मुक्तास्थापि ममान्तःस्थो नियन्तैव हरिः सदा ।
इति ज्ञानं समुद्दिष्टं सम्यगात्मनिवेदनम् ।
अनाद्यनन्तकालेषु मुक्तौ संसार एव च ।
मयिस्थश्चोदयत्येको विष्णुर्मां सर्वदैव तु ॥ (VII.12.28)

Mukta, the liberated soul considering the god is always present in him is ātmaniveda.

(xxix) जन्माद्याः षडिमे भावा दृष्टा देहस्य नात्मनः ।
फलानामिव वृक्षस्य कालेनेश्वरमूर्तिना ॥ (VII.7.18)

Birth etc. six states are for the body, but not for the ātman. These are like fruits arising from the tree in due course.

(xxx) नटनं तु कथाबन्धो नाट्यकं भावदर्शनम् । इति गान्धर्वः (VII.8)

The acting with dialogue is naṭana. Acting in musical true expressing the emotion is nāṭya.

(xxx) यथाऽनलो दारुषु भिन्न ईयते
यथानिलो देहगतः पृथक्स्थितः ।
यथा नभः सर्वगतं न सजते
तथा गुणैः सर्वगुणाश्रयः परः ॥ (VII.2.4)

Just as the fire in the firewood is distinct from the wood, the air in the body is distinct from the body, the sky though is all pervasive but does not get contacted with any in the same way the Supreme God though he is the abode of all qualities is not affected by them.

Persons of lessor capacity may curse the Superior. However, its effect will be very little and for very short time. The curse given to Superior will reduce the पुण्य of the giver. The curse given to Lord Viṣṇu and his wife and Chaturmukha brahma and his wife will not be effecive.

Mahāmahopadhyāya
Prof. K.T. Pandurangi
Upakulapati
Poornaprajna Vidyapeetha
Bangalore-28.

ವಿಷಯಾನುಕ್ರಮಣಿಕೆ

ಸಪ್ತಮಸ್ಕಂಧ

ಉಂಟುಮಾಡಿ ಫಲನೀಡಿದರೆ ಅದು ಪಕ್ಷಪಾತದೋಷವೆನಿಸುತ್ತದೆ. ಅದನ್ನು ಬ್ರಹ್ಮಸೂತ್ರ ನಿರಾಕರಿಸಿದೆ ಹೊರತು ಯೋಗ್ಯತಾನುಗುಣಾಗಿ ಗುಣದೋಷ ಗಳನ್ನು ವ್ಯಕ್ತಮಾಡಿದರೆ ಅದು ಪಕ್ಷಪಾತ ದೋಷವಲ್ಲ. ಬ್ರಹ್ಮಸೂತ್ರಕಾರರಿಗೆ ಅದು ಸಮ್ಮತವೆ ಎಂದು ತಂತ್ರನಿರ್ಣಯದಲ್ಲಿ ಹೇಳಿದೆ. ೩.೧೨

೭.೧.೨೦ ಕೆಲವು ಮಹತ್ತಾದ ಪಾಪಫಲವನ್ನು ಈ ಜನ್ಮದಲ್ಲಿಯೇ ಉಣಬೇಕಾಗು ತ್ತದೆ. ಉಳಿದವುಗಳನ್ನು ಮರಣಾನಂತರದಲ್ಲಾದರೂ ಉಣಲೇಬೇಕು ಎಂದು ಭಾರತದಲ್ಲಿ ಹೇಳಿದ್ದರಿಂದ ಶಿಶುಪಾಲ ದಂತವಕ್ರರು ಮಹಾಪಾಪ ಮಾಡಿಯೂ ಏಕೆ ಈ ಜನ್ಮದಲ್ಲಿ ರೋಗಾದಿ ಫಲ ಉಣಲಿಲ್ಲ ಎಂದು ಧರ್ಮರಾಜನ ಪ್ರಶ್ನೆ. ೩.೧೮

೭.೧.೨೬ ಕೈವಲ್ಯವೆಂದರೆ ಭಗವಂತನಿಗೆ ತನಗಿಂತ ಭಿನ್ನವಾದ ಶರೀರಾದಿಗಳಿಲ್ಲ ಎಂದರ್ಥ. 'ಅಕರ್ತೃ' ಎಂದರೆ ಅವನಿಗೆ ಜನ್ಮ ನೀಡಬಲ್ಲ ಇನ್ನೊಬ್ಬಕರ್ತೃ ಇಲ್ಲ ಎಂದರ್ಥ. 'ಇದಂ ಹಿಂಸಾ' ಎಂದು ಲಿಂಗ ವ್ಯತ್ಯಾಸ ಮಾಡಿದ್ದು ನಿಂದಾದ್ಯೋತಕವಾಗಿದೆ. ಇದು ಮಹಾವ್ಯಾಕರಣಕ್ಕೆ ಸಮ್ಮತವಾಗಿದೆ. ೩.೧೮

೭.೧.೨೭ 'ಕಥಂಚಿನ್ನೇಕ್ಷತೇ ಪೃಥಕ್' ಎಂದರೆ ಭಗವಂತನನ್ನು ವೈರಭಾವನೆಯಿಂದ ಚಿಂತಿಸುವವರಿಗೆ ಮನಸ್ಸು ಬೇರೆಡೆ ಹೋಗುವುದಿಲ್ಲ ಎಂದರ್ಥವೆ ಹೊರತು ವೈರಭಾವನೆಯಿಂದ ಭಗವಂತನನ್ನು ಚಿಂತಿಸಬೇಕೆಂದು ವಿಧಿಯಲ್ಲ. ಹಾಗೆ ಚಿಂತಿಸುವುದು ಮಹಾಅನರ್ಥಕರ. ಆದರೆ ಹಾಗೆ ಚಿಂತಿಸುವುದರಿಂದ ಭಗವಂತನಿಗೆ ಏನೂ ದುಃಖವಾಗುವುದಿಲ್ಲ. ಆದರಿಂದ ಶಿಶುಪಾಲ ನಂಥವರು ಸಜ್ಜೀವರು ದ್ವೇಷದಿಂದಲಾದರೂ ತನ್ನಲ್ಲಿ ಮನಸ್ಸಿಡಲಿ, ಕೊನೆಯಲ್ಲಿ ಅವರ ಮನಸ್ಸನ್ನು ಭಕ್ತಿಭರಿತವನ್ನಾಗಿ ಮಾಡುವೆನೆಂದು ಅವನು ಸಂಕಲ್ಪಿಸುತ್ತಾನೆ. ಅವರು ಮಾಡುವ ದ್ವೇಷದಿಂದ ತನಗೆ ದುಃಖವಾಗು ತ್ತಿದ್ದರೆ, ಸರ್ವನಿಯಾಮಕನಾದ ತಾನೆ ಏಕೆ ಅಂಥ ದ್ವೇಷವನ್ನು ಉಂಟು ಮಾಡುತ್ತಾನೆ? ೩.೨೩

೭.೧.೨೮,೨೯,೩೦ ವೈರಭಾವನೆಯಿಂದ ತನ್ಮಯರಾಗುವವರೇ ಅಧಿಕ. ಭಕ್ತರು ಕಡಿಮೆ. ಏಕೆಂದರೆ ಭಕ್ತಿಯಿಂದ ತನ್ಮಯರಾಗುವುದು ಸುಲಭವಲ್ಲ. ಹಾಗಿಲ್ಲದಿದ್ದರೆ ಭಕ್ತರೇ ಅಧಿಕ ಸಂಖ್ಯೆಯಲ್ಲಿರಬೇಕಾಗಿತ್ತು. ಕೀಟದೃಷ್ಟಾಂತವೂ ದ್ವೇಷದಿಂದ ಸಾರೂಪ್ಯ ಲಭ್ಯವೆನ್ನುವುದಕ್ಕೆ ಅಲ್ಲ. ಕೀಟ

ಮೊದಲಿಗೆ ಭಯದಿಂದ ದ್ವೇಷಮಾಡಿದರೂ ಕಣಜ ಆಹಾರ ನೀಡುತ್ತದೆ ಎಂದು ಪ್ರೀತಿಯಿಂದ ತನ್ಮಯವಾಗಿಯೇ ಸಾರೂಪ್ಯ ಪಡೆಯುತ್ತದೆ. ಆದರಿಂದ ಭಕ್ತಿಯನ್ನೇ ಮಾಡಬೇಕು. ಬಂಧುಸ್ನೇಹ ಕಾಮಗಳಿಂದಲೂ ಭಜಿಸಬಹುದೆಂದು ಹೇಳಿದ್ದು ಬಂಧುಮಿತ್ರರ ಅಗಲಿಗೆಯಿಂದ ಭಗವಂತನಿಗೆ ದುಃಖವಾಗುವುದಿಲ್ಲ, ಆದರಿಂದ ಅವರು ಸ್ನೇಹಾದಿಗಳಿಂದಲೂ ಭಜಿಸಬಹುದೆಂಬ ಅಭಿಪ್ರಾಯದಿಂದ ಹೊರತು ಇತರರು ಹಾಗೆ ಮಾಡಬಹುದೆಂದಲ್ಲ. 'ಸಂರಂಭ ಭಯಯೋಗೇನ' ಎಂಬಲ್ಲಿ 'ಯೋಗ' ಎಂದರೆ ಸ್ನೇಹ. ಶಬ್ದನಿರ್ಣಯ ಗ್ರಂಥದಲ್ಲಿ ಹಾಗೆ ಹೇಳಿದೆ. ಕೋಪ ಭಯಗಳಿಂದ ಯುಕ್ತವಾದ ಸ್ನೇಹದಿಂದ ಎಂದರ್ಥ. 'ವೈರೇಣ ಅನುಚಿಂತಯಾ' ಎಂಬಲ್ಲಿ 'ಅನುಚಿಂತಾ' ಎಂದರೆ ಭಕ್ತಿಪೂರ್ವಕಧ್ಯಾನ. ಮೊದಲಿಗೆ ವೈರದಿಂದ ಕೂಡಿದ್ದರೂ ಕೊನೆಯಲ್ಲಿ ಭಕ್ತಿಯುಕ್ತವಾದ ಧ್ಯಾನದಿಂದ ಎಂದರ್ಥ. ಶಿಶುಪಾಲಾದಿಗಳು ಮೊದಲಿಗೆ ದ್ವೇಷವನ್ನೇ ಮಾಡಿದರೂ ಕೊನೆಯಲ್ಲಿ ಭಕ್ತಿಪೂರ್ವಕ ಧ್ಯಾನವನ್ನೇ ಮಾಡಿದರು. ಅವರು ಅನಾದಿ ಭಕ್ತರಾದ್ದರಿಂದ ಅಸುರಾವೇಶದಿಂದ ಅವರು ಮಾಡಿದ್ದ ದ್ವೇಷವನ್ನು ಹರಿ ಕ್ಷಮಿಸಿದ. ಕೊನೆಯಲ್ಲಿ ಭಕ್ತಿಯನ್ನೇ ನೀಡಿ ಮುಕ್ತಿ ನೀಡಿದನೆಂದು ಬ್ರಹ್ಮಾಂಡಪುರಾಣದಲ್ಲಿ ಉಕ್ತವಾಗಿದೆ. ೩೨೯

೭.೧.೩೧ ಭಯದ್ವೇಷಗಳಂತೆ ಕಾಮ ಬಂಧುಸ್ನೇಹಗಳೂ ಪಾಪಕರವೆ. ಆದರೂ ಭಕ್ತಿ ಒಂದಿದ್ದರೆ ಅದರಿಂದಲೇ ಭಯ ದ್ವೇಷ ಕಾಮ ಸ್ನೇಹಗಳಿಂದ ಮಾಡಿದ ಪಾಪ ಪರಿಹಾರವಾಗುತ್ತದೆ. ೩೩೪

೭.೧.೩೨ ಕಾಮಾದ್ ಭಯಾತ್ ದ್ವೇಷಾತ್ ಸಂಬಂಧಾತ್ ಎಂಬಲ್ಲಿ ಎಲ್ಲ ಕಡೆ 'ಭಕ್ತಿಯುಕ್ತವಾದ' ಎಂದು ಸೇರಿಸಿಕೊಳ್ಳಬೇಕು. 'ಪಾಂಡವರು ಸ್ನೇಹದಿಂದ ನಾರದಾದಿ ಮುನಿಗಳು ಭಕ್ತಿಯಿಂದ ಭಗವದನುಗ್ರಹಕ್ಕೆ ಪಾತ್ರರಾದರು' ಎಂದರೆ ಪಾಂಡವರು ಭಕ್ತರಲ್ಲ ಎಂದರ್ಥವಲ್ಲ. ಅವರು ಮುನಿಗಳಿಗಿಂತ ಮಿಗಿಲಾಗಿಯೇ ಭಕ್ತರು. ಅವರ ಭಕ್ತಿಯಲ್ಲಿ ಸ್ನೇಹಾಂಶವು ಮಹಾತ್ಮ್ಯಜ್ಞಾನಾಂಶಕ್ಕೆ ಸಮಪ್ರಮಾಣದಲ್ಲಿರುವುದರಿಂದ ಆ ಭಕ್ತಿಯನ್ನು 'ಸ್ನೇಹ' ಎಂದು ಕರೆಯಲಾಗಿದೆ. ಮುನಿಗಳ ಭಕ್ತಿಯಲ್ಲಿ ಸ್ನೇಹಾಂಶ ಜ್ಞಾನಾಂಶಕ್ಕಿಂತ ಕಡಿಮೆಯಾದ್ದರಿಂದ ಅದನ್ನು 'ಭಕ್ತಿ' ಎಂದು ಕರೆಯಲಾಗಿದೆ ಇದು ಬ್ರಹ್ಮತರ್ಕ ವಚನದಿಂದ ಸಿದ್ಧವಾಗುತ್ತದೆ. ೩೩೬

೭.೧.೩೩ 'ಕೇನಾಪಿ ಉಪಾಯೇನ' ಎಂಬಲ್ಲಿ 'ಉಪಾಯ' ಎಂದರೆ ಭಕ್ತಿ.

ಶಬ್ದನಿರ್ಣಯ ಗ್ರಂಥದಲ್ಲಿ ಹಾಗೆ ಅರ್ಥ ಹೇಳಿದೆ. ಅದರಿಂದ ಯಾವುದಾದರೊಂದು ಬಗೆಯ ಭಕ್ತಿಯೋಗ ಬೇಕು. ವೇನನಲ್ಲಿ ಅದು ಇರಲಿಲ್ಲ, ಶಿಶುಪಾಲನಲ್ಲಿ ಇತ್ತು. ೩೩೯

೭.೧.೩೪ ಸ್ವತಃ ಅನಾದಿ ಭಕ್ತರೇ ಆಗಿದ್ದು ಶಿಶುಪಾಲಾದಿಗಳು ಅಸುರಾವೇಶದಿಂದ ದ್ವೇಷಿಗಳಾದರು ಎಂದು ತಿಳಿಸುವುದಕ್ಕಾಗಿಯೇ ಶಾಪವೃತ್ತಾಂತ ಉಕ್ತವಾಗಿದೆ. ೩೪೧

೭.೧.೩೮ ವಿಷ್ಣುಲೋಕದಲ್ಲಿರುವವರೆಲ್ಲರೂ ಮುಕ್ತರೇ ಎಂಬ ನಿಯಮವಿಲ್ಲ. ಅಲ್ಲಿಯ ಜನರು ಕೆಲವರು ದ್ವಾರಪಾಲಕತ್ವ ಮುಂತಾದ ಅಧಿಕಾರದಲ್ಲಿ ನಿಯುಕ್ತರಾದ ಜೀವನ್ಮುಕ್ತರಿರುತ್ತಾರೆ. ಅವರು ವರಶಾಪಾದಿ ಭಾಗಿಗಳಾಗುತ್ತಾರೆ. ಮುಂದೆ ಅವರು ಮುಕ್ತರಾದಾಗ ವರಶಾಪಾದಿಗಳಿಲ್ಲ. ಪ್ರಾಕೃತ ದೇಹೇಂದ್ರಿಯಾದಿಗಳೂ ಮೊದಲಿಗೆ ಇರುತ್ತವೆ. ಮುಕ್ತಿಯಲ್ಲಿ ಇರುವುದಿಲ್ಲ. ಇದು ತಂತ್ರಸಾರ ಗ್ರಂಥದಲ್ಲಿ ಉಕ್ತವಾಗಿದೆ. ಜಯವಿಜಯರು ಹೀಗೆ ಅಧಿಕಾರನಿಯುಕ್ತರಾದ ಜೀವನ್ಮುಕ್ತರು ಎನ್ನುವುದು ಭಾಗವತದಲ್ಲಿ 'ದ್ವಾಃಸ್ಥೌ' ಎಂಬ ಶಬ್ದದಿಂದ ಸೂಚಿತವಾಗಿದೆ. ೩೪೩

೭.೧.೪೪ 'ಸರ್ವಭೂತಾತ್ಮಭೂತಂ' ಎಂದರೆ ಸರ್ವಭೂತಾತ್ಮನಿ ಭೂತಂ, ಎಲ್ಲರ ಸ್ವಾಮಿಯಾದ ಭಗವಂತನನ್ನೇ ದೃಢವಾದ ಮನಸ್ಸಿನಿಂದ ಆಶ್ರಯಿಸಿದವನು, ಅವನ ದಾಸ ತಾನೆಂದು ನಂಬಿದವನು ಪ್ರಹ್ಲಾದ ಎಂದರ್ಥ. ೩೪೫

೭.೧.೪೫ ಹಿರಣ್ಯಾಕ್ಷ ಹಿರಣ್ಯಕಶಿಪು ಜನ್ಮದಲ್ಲಿ ಸಾಯುವಾಗ ತಮ್ಮನ್ನು ಕೊಂದ ಹರಿಯನ್ನು ಭಯಾನಕ ಭೂತವೆಂದುಕೊಂಡರು ರಾವಣಕುಂಭಕರ್ಣರಾಗಿ ಭಯಾನಕ ರಾಕ್ಷಸರಾಗಿ ಜನಿಸಿದರು. ಆ ಜನ್ಮದಲ್ಲಿ ಹರಿಯನ್ನು ರಾಜನೆಂದು ತಿಳಿದು ಶಿಶುಪಾಲ ದಂತವಕ್ರರೆಂಬ ರಾಜರಾಗಿ ಜನಿಸಿದರು. ಆಗ ಹರಿಯನ್ನು ಚಕ್ರ ಮುಂತಾದ ಲಕ್ಷಣಗಳಿಂದ ಹರಿಯೆಂದೇ ತಿಳಿದು ಹರಿಯ ಉದರವನ್ನೇ ಹೊಕ್ಕರು ಎಂದು ಗರುಡಪುರಾಣ ಹೇಳಿದೆ. ಭಾಗವತದಲ್ಲಿ ದ್ವೇಷದಿಂದ ಮೋಕ್ಷವೆಂದು ಏಕೆ ಹೇಳಿದ್ದಾರೆ? ದ್ವೇಷವೂ ಭಕ್ತಿಯುಕ್ತವಾಗಿದ್ದರೆ ಮೋಕ್ಷಕ್ಕೆ ವಿರೋಧಿಯಾಗುವುದಿಲ್ಲ ಎನ್ನಬೇಕಿತ್ತು. ನಿಜ. ಮೇಲುನೋಟಕ್ಕೆ ಕಾಣುವ ಅಂಶ ಅಯೋಗ್ಯರಿಗೆ ಮೋಹನಕ್ಕಾಗಿ ಹೇಳಿದ್ದು. ವಿಚಾರ ಮಾಡಿದರೆ ಕಾಣುವ ಅಂಶ ವಾಸ್ತವ ಎಂದು ಪ್ರಕಾಶ ಸಂಹಿತೆಯಲ್ಲಿ ಉಕ್ತವಾಗಿದೆ. ೩೪೬

೭.೧.೪೮ ವೈರಾನುಬಂಧವೆಂದರೆ ಇಲ್ಲಿ ವೈರಸಹಿತವಾದ ಅನುಬಂಧ. ಅನುಬಂಧವೆಂದರೆ ಭಕ್ತಿ. ಈ ಅರ್ಥ ಪ್ರಕಾಶಸಂಹಿತೆಯಲ್ಲಿ ಉಕ್ತವಾಗಿದೆ. ೩೪೯

೭.೨.೧೦,೧೧ ಯಜ್ಞಾದಿ ಸತ್ಕರ್ಮಗಳು ಹರಿಗೆ ಮೂಲಾಶ್ರಯ ಎನ್ನುವುದು ಅಸುರರ ಮತ. ವಸ್ತುತಃ ಸತ್ಕರ್ಮಗಳಿಗೆ ಹರಿ ಮೂಲಾಶ್ರಯ ಎಂದು ಬ್ರಹ್ಮಪುರಾಣದಲ್ಲಿ ಉಕ್ತವಾಗಿದೆ. ೩೫೩

೭.೨.೨೨ 'ಧತ್ತೇಽಸೌ ಆತ್ಮನೋ ಲಿಂಗಂ' ಎಂದರೆ ಜೀವನ ಮನಸ್ಸು ಮೊದಲಾದ ಷೋಡಶ ಕಲಾತ್ಮಕ ಲಿಂಗ ಶರೀರಕ್ಕೆ ಆಧಾರ ಸರ್ವಶಕ್ತನಾದ ಪರಮಾತ್ಮನೇ ಅವನೆ ಅದನ್ನು ಅನಾದಿಕಾಲದಿಂದ ಜೀವನಿಗಾಗಿ ಕಾಪಾಡುತ್ತಿದ್ದಾನೆ ಎಂದರ್ಥ. ೩೫೪

೭.೨.೨೩, ೨೪ 'ಲಿಂಗವಾನಿವ' ಎಂದರೆ ಜೀವನಂತೆ. ಬದ್ಧನಾದ ಜೀವನಲ್ಲಿ ಅಂತರ್ಯಾಮಿಯಾಗಿ ನೆಲೆಸಿರುವ ಭಗವಂತ ಜೀವನಂತೆ ಬದ್ಧನಲ್ಲ. ಕೇವಲ ಭ್ರಾಂತಿಯಲ್ಲಿ ಹಾಗೆ ತೋರುತ್ತಾನೆ ಎಂದು ಷಾಡ್ಗುಣ್ಯಗ್ರಂಥದಲ್ಲಿ ಹೇಳಿದೆ. ನೀರಿನ ಚಲನೆಯಿಂದ ನೀರಿನಲ್ಲಿ ಮರಗಳ ಪ್ರತಿಬಿಂಬ ಚಲಿಸಿದರೆ ದಡದಲ್ಲಿರುವ ಮರಗಳೇ ಚಲಿಸಿದಂತೆ ಭ್ರಾಂತಿಯುಂಟಾಗಬಹುದು. ಹಾಗೆ ಭಗವಂತನ ಪ್ರತಿಬಿಂಬನಾದ ಜೀವ ಬದ್ಧನಾದ್ದರಿಂದ ಭಗವಂತ ಬದ್ಧನೆಂದು ಭ್ರಾಂತಿ ಉಂಟಾಗುವುದು. ಕಣ್ಣಾಲಿ ಸುತ್ತಿದಾಗ ನೆಲವೇ ಸುತ್ತುವಂತೆ ಕಾಣುವುದು. ಹಾಗೇ ಜೀವ ತನ್ನ ದೋಷದಿಂದ ಭಗವಂತನನ್ನು ದೋಷಿ ಎಂದು ಭ್ರಮಿಸುತ್ತಾನೆ ಎಂದು ಬ್ರಹ್ಮತರ್ಕದಲ್ಲಿ ಹೇಳಿದೆ. ೩೫೭

೭.೨.೨೬ 'ವಿವೇಕ ಸ್ಮೃತಿ' ಎಂದರೆ ತಾನು ಅವಿವೇಕಿಯಾಗಿದ್ದು ಆ ಅವಿವೇಕವನ್ನೇ ವಿವೇಕವೆಂದು ಭ್ರಮಿಸುವುದು. ೩೫೯

'ಹಿರಣ್ಯಕಶಿಪು ಮುಂತಾದವರಿಗೆ ಅಂತರಂಗದಲ್ಲಿ ಹರಿಭಕ್ತಿ ಇದೆ. ಅಸುರಾವೇಶದಿಂದ ಹೊರಗೆ ಹರಿಸ್ತುತಿ ಮಾಡುವವರನ್ನು ದ್ವೇಷಿಸುತ್ತಾರೆ' ಎಂದು ಪದ್ಮಪುರಾಣದಲ್ಲಿ ಉಕ್ತವಾಗಿದೆ.

೭.೨.೩೭ 'ಯತ್ರೋದ್ಭವಸ್ತತ್ರಗತಂ' ಎಂದರೆ ಆತ್ಮ ಪರಲೋಕಕ್ಕೆ ಹೋಗಿದ್ದಾನೆ. ಶರೀರ ಪ್ರಕೃತಿಯಲ್ಲಿ ಲೀನವಾಗಲಿದೆ ಎಂದರ್ಥ. ಮಹಾಭಾರತದಲ್ಲಿ ಹೇಳಿದೆ- ಕಾಣದ ಪರಲೋಕದಿಂದ ಇಲ್ಲಿಗೆ ಬಂದವನು ಕಾಣದ ಪರಲೋಕಕ್ಕೆ ತಿರುಗಿ ಹೋಗಿದ್ದಾನೆ. ಅವ್ಯಕ್ತ ಪ್ರಕೃತಿಯಿಂದ ಹುಟ್ಟಿದ ಶರೀರ ತಿರುಗಿ ಅದರಲ್ಲಿಯೇ ಲೀನವಾಗುತ್ತಿದೆ' ಎಂದು. ೩೬೧

೭.೨.೪೧ 'ಅನ್ಯತಮ ಆತ್ಮಾ' ಎಂದರೆ ಪರಮಾತ್ಮನೆಂದೇ ಶಾಸ್ತ್ರ ವ್ಯವಹಾರ. ವಾಮನಪುರಾಣದಲ್ಲಿ ಇದು ಸ್ಪಷ್ಟವಿದೆ- 'ಜೀವನಿಗಿಂತ ಅತ್ಯಂತ ವಿಲಕ್ಷಣನಾದ್ದರಿಂದ ಅನ್ಯತಮ ಆತ್ಮನೆಂದರೆ ಹರಿ' ಎಂದು. ೩೬೩

೭.೨.೪೩ ದೇಹದಲ್ಲಿ ಪ್ರಾಣ, ಕಟ್ಟಿಗೆಯಲ್ಲಿ ಬೆಂಕಿ, ಎಲ್ಲೆಡೆ ಆಕಾಶ ಇದ್ದರೂ ದೇಹ ಮುಂತಾದವುಗಳಿಗಿಂತ ಅವು ವಿಲಕ್ಷಣವೆ. ಅವುಗಳ ಗುಣಧರ್ಮಗಳಿಂದ ಲೇಪಹೊಂದುವುದಿಲ್ಲ. ಹಾಗೇ ಜೀವನಲ್ಲಿರುವ ವಿಷ್ಣುವೂ ವಿಲಕ್ಷಣ, ನಿರ್ಲೇಪನಾಗಿರುತ್ತಾನೆ ಎಂದು ವಾಮನಪುರಾಣದಲ್ಲಿದೆ. ೩೬೬

೭.೨.೪೪-೪೮ ಇಂದ್ರಿಯವಾನ್ ಆತ್ಮಾ ಎಂದರೆ ಇಂದ್ರಿಯಾಭಿಮಾನಉಳ್ಳ ಜೀವ. 'ಭಜತ್ಯುತ್ಸೃಜತಿ ಹ್ಯನ್ಯಃ' ಎಂದರೆ ಜೀವಾನ್ಯನಾದ ಪರಮಾತ್ಮ ಜೀವ ಶರೀರವನ್ನು ಸ್ವತಂತ್ರವಾಗಿ ಪ್ರವೇಶಿಸುತ್ತಾನೆ, ಬಿಡುತ್ತಾನೆ ಎಂದರ್ಥ. ಮುಖ್ಯಪ್ರಾಣ ಸ್ವತಂತ್ರವಾಗಿ ಶ್ರೋತೃವೂ ಅಲ್ಲ, ವಕ್ತೃವೂ ಅಲ್ಲ ಎಂದು ಹೇಳಿ ಜೀವಶರೀರವನ್ನು ಸ್ವತಂತ್ರವಾಗಿ ಪ್ರವೇಶಿಸಿ ಇರುವವನು ಪರಮಾತ್ಮ ಎಂದು ಹೇಳಿದುದು ಪರಮಾತ್ಮನೆ ಸ್ವತಂತ್ರ ಶ್ರೋತೃವಕ್ತೃ ಎಂಬ ಅಭಿಪ್ರಾಯದಿಂದ. ಇದು ನಾನ್ಯೋಽತೋಽಸ್ತಿ ದ್ರಷ್ಟಾ ಇತ್ಯಾದಿ ಶ್ರುತಿಸಿದ್ಧವಾಗಿದೆ. ಮುಖ್ಯಪ್ರಾಣನೂ ಕೂಡ ಸ್ವತಂತ್ರನಲ್ಲವೆಂದಮೇಲೆ ಬೇರೆ ಜೀವರ ಪಾಡೇನು ಎಂದು ಅಭಿಪ್ರಾಯ. ಅಯಂ ನನು ಸುಯಜ್ಞಃ ಎಂದರೆ 'ಈ ಶರೀರ ಸುಯಜ್ಞನೆ?' ಎಂದು ಆಕ್ಷೇಪ. ಈ ಶರೀರ ಸುಯಜ್ಞನಲ್ಲ, ಸುಯಜ್ಞನ ಆತ್ಮನೂ ಸ್ವತಃ ಕೇಳಲು ನುಡಿಯಲು ಶಕ್ತನಲ್ಲ. ಅವನ ಬಗ್ಗೆ ಏಕೆ ಶೋಕ? ಎಂದರ್ಥ. ಇದೆಲ್ಲವೂ ಸ್ಪಷ್ಟವಾಗಿ ಗರುಡಪುರಾಣದಲ್ಲಿ ಉಕ್ತವಾಗಿದೆ. ೩೬೮

ಇಂದ್ರಿಯಾಭಿಮಾನ ಉಳ್ಳ ಜೀವ ಇಂದ್ರಿಯವಾನ್ ಎನಿಸುತ್ತಾನೆ. ಇಂದ್ರಿಯಾಭಿಮಾನ ಶರೀರಾಭಿಮಾನವಿಲ್ಲದವನಾದ್ದರಿಂದ ಹರಿ ಅಶರೀರ ಅನಿಂದ್ರಿಯನೆನಿಸುತ್ತಾನೆ. ಒಬ್ಬ ಜೀವ ಅಭಿಮಾನಿಯಾಗಿ ಇಲ್ಲದ ಜಡಶರೀರ ಪರಮಾತ್ಮನಿಗೆ ಎಂದೂ ಇಲ್ಲ ಎಂದು ಪ್ರಕಾಶಸಂಹಿತೆ ಹೇಳಿದೆ.

'ಭೂತೇಂದ್ರಿಯಮನೋಲಿಂಗಾನ್ ದೇಹಾನ್' ಎಂಬಲ್ಲಿ ಲಿಂಗವೆಂದರೆ ಜ್ಞಾಪ್ಯವಲ್ಲ, ಸ್ವರೂಪ ಎಂದರ್ಥ. ಭೂತ ಇಂದ್ರಿಯ ಮನಸ್ಸುಗಳೆಂದು ಷೋಡಶಕಲೆಗಳು ಸೇರಿ ಶರೀರವಾಗುತ್ತದೆ ಹೊರತು ಅವುಗಳಿಂದ ಜ್ಞಾಪ್ಯವಾಗುವುದಿಲ್ಲ.

'ಲಿಂಗಾನ್ವಿತೋ ಹ್ಯಾತ್ಮಾ' ಎಂಬಲ್ಲಿ ಆತ್ಮನೆಂದರೆ ಪರಮಾತ್ಮ. ಕರ್ಮ ನಿಬಂಧನಃ ಎಂದರೆ ಕರ್ಮಬದ್ಧನಾದ ಜೀವ. 'ತತಃ ವಿಪರ್ಯಯಃ' ಎಂದರೆ ಪರಮಾತ್ಮನಿಗಿತ ವಿಲಕ್ಷಣ ಜೀವ. ಸರ್ವಮ್ಯೆಂದ್ರಿಯಕಂ ಮೃಷಾ ಎಂಬಲ್ಲಿ ಮೃಷಾ ಎಂದರೆ ವ್ಯರ್ಥ. ಸ್ವಪ್ನದಲ್ಲಿ ಕಂಡ ಹಣದಂತೆ ವ್ಯರ್ಥ. ಜೀವನ ಶರೀರದಲ್ಲಿ ಪರಮಾತ್ಮನಿಗೆ ತನ್ನದೆಂಬ ಅಭಿಮಾನವಿದ್ದರೂ ಅದು ಇನ್ನೊಬ್ಬರದನ್ನು ತನ್ನದೆಂದು ತಿಳಿಯುವ ಅಭಿಮಾನವಲ್ಲ. ಆದರಿಂದ ಅವನು ಅಶರೀರಿ ಎಂದು ಬ್ರಹ್ಮತರ್ಕ ಹೇಳಿದೆ.

೭.೨.೫೮ ನಾನೇ ನನ್ನದೇ ಎಂಬ ಅಭಿಮಾನದಲ್ಲಿ ಕಾಣುವ ಸ್ವಾತಂತ್ರ್ಯಾದಿಗಳು ಅಸತ್ಯ. ಮಹದಾದಿಗಳು ಸತ್ಯವಾದರೂ ಅನಿತ್ಯ. ಪ್ರಕೃತಿ ಸತ್ಯವೂ ನಿತ್ಯವೂ ಆಗಿದ್ದರೂ ಅಸ್ವತಂತ್ರ. ಪರಮಾತ್ಮನೊಬ್ಬನೆ ಸತ್ಯ ನಿತ್ಯ ಸ್ವತಂತ್ರ ಎಂದು ಬ್ರಹ್ಮತರ್ಕದಲ್ಲಿ ಹೇಳಿದೆ. ೩೭೮

೭..೨.೬೦ ತನ್ನ ದೇಹವು ತಾನೂ ಆಗುವುದಿಲ್ಲ ಪರರ ದೇಹವು ಶತ್ರುವೂ ಆಗುವುದಿಲ್ಲ. ಅದಕ್ಕೆ ಜಯವಾದರೇನು? ನಾಶವಾದರೇನು? ಜೀವನಂತೂ ನಾಶ ಹೊಂದುವುದಿಲ್ಲ. ಜೀವೇಶರು ದೇಹವ್ಯತಿರಿಕ್ತರೆಂದು ಬಲ್ಲವರಿಗೆ ಶತ್ರುವಿಗೆ ಜಯವಾದರೂ ತಮಗೆ ನಾಶವಾದರೂ ಶೋಕವಿಲ್ಲ. ವಸ್ತುತಃ ತಮಗೆ ಜಯವೆಂದರೆ ಭಕ್ತಿಲಾಭ. ಶತ್ರುನಾಶವೆಂದರೆ ಅಜ್ಞಾನನಾಶ ಹೊರತು ಬೇರೆಯಲ್ಲ ಎಂದು ಬ್ರಹ್ಮವೈವರ್ತ ಪುರಾಣದಲ್ಲಿ ಹೇಳಿದೆ. ೩೭೯

೭.೩.೯,೧೦ ಜ್ಞಾನಿಗಳು ಅಯೋಗ್ಯ ಪದವಿಯನ್ನು ಬಯಸಬಾರದು. ಆದರೂ ಕೆಲವೊಮ್ಮೆ ಬಯಸುತ್ತಾರೆ. ಚತುರ್ಮುಖನೊಬ್ಬನೆ ಅಯೋಗ್ಯ ಪದವಿಗೆ ಆಶಿಸುವುದಿಲ್ಲ ಎಂದು ನಾರದೀಯ ಪುರಾಣದಲ್ಲಿದೆ. ಅಯೋಗ್ಯ ಪದವಿಯನ್ನು ತಪಸ್ಸಿನಿಂದ ಗಳಿಸಲು ಯಾರಿಂದಲೂ ಶಕ್ಯವಿಲ್ಲ. ಆದರೂ ಅದಕ್ಕಾಗಿ ದೈತ್ಯರು ತಪಸ್ಸು ಮಾಡುವಾಗ ದೇವತೆಗಳು ವಿಘ್ನ ಮಾಡುತ್ತಾರೆ. ಇಲ್ಲದಿದ್ದರೆ ಬ್ರಹ್ಮನನ್ನು ಕುರಿತು ತಪಸ್ಸು ಮಾಡುವುದು ವ್ಯರ್ಥವೆಂದು ಅವರು ತಿಳಿಯಬಹುದು. ಹಾಗಾಗಬಾರದು ಎಂದು. ಹೀಗೆ ಪ್ರಕಾಶಸಂಹಿತೆಯಲ್ಲಿದೆ. ೩೮೩

೭.೩.೧೨ 'ಕಿಮನ್ಯೈರ್ವೈಷ್ಣವಾದಿಭಿಃ' ಎಂಬಲ್ಲಿ ವೈಷ್ಣವಾದಿ ಲೋಕಗಳೆಂದರೆ ಬ್ರಹ್ಮ ನಿರ್ಮಿತವಾದ ಧ್ರುವಾದಿ ಲೋಕಗಳು. ಅವು ನಶ್ವರ ಎಂದರ್ಥ. ವೈಷ್ಣವ ಎಂದರೆ ಚತುರ್ಮುಖ ಎಂದು ಶಬ್ದನಿರ್ಣಯದಲ್ಲಿ ಹೇಳಿದೆ. ವೈಷ್ಣವನು ಆದಿಯಾಗಿ, ಕಾರಣವಾಗಿ ಉಳ್ಳ ಲೋಕ ವೈಷ್ಣವಾದಿ ಲೋಕ. ೩೮೫

೭.೩.೧೪ ಭವ ಎಂದರೆ ಜ್ಞಾನಾದಿಗುಣಗಳ ವೃದ್ಧಿ. ಶ್ರೇಯಸ್ಸೆಂದರೆ ಮೋಕ್ಷ. ಭೂತಿ ಎಂದರೆ ಗುಣಗಳು ಹ್ರಾಸ ಹೊಂದದಿರುವುದು ಎಂದು ಶಬ್ದನಿರ್ಣಯದಲ್ಲಿದೆ. ಆದರಿಂದ ಬ್ರಹ್ಮಪದವಿ ಜ್ಞಾನ ಭಕ್ತಿ ಮೋಕ್ಷಾದಿಗಳಿಗೆ ಕಾರಣವಾಗುವ ಜಗದ್ಗುರುಪದವಿ. ಲೌಕಿಕ ಸಂಪತ್ತಿಗಾಗಿ ಯಾವ ವಿವೇಕಿಯೂ ಆ ಪದವಿಯನ್ನು ಬಯಸುವುದಿಲ್ಲ. ಅಯೋಗ್ಯರಾದ ಮಧುಕೈಟಭರು ಹಿರಣ್ಯಕಶಿಪು ಮುಂತಾದವರು ಬಯಸುತ್ತಾರೆ. ಯೋಗ್ಯರಾದ ಋಜುಯೋಗಿಗಳು ಬಯಸುತ್ತಾರೆ ಎಂದು ಬ್ರಹ್ಮಾಂಡಪುರಾಣದಲ್ಲಿದೆ. ೩೮೭

೭.೩.೧೭ ಫಲಕಾಮನೆಯಿಂದ ಮಾಡುವ ಕ್ರೂರವಾದ ತಪಸ್ಸು ಲೋಕಗಳಿಗೆ ತಾಪಕರವಾಗುತ್ತದೆ. ಭಗವತ್ಪ್ರೀತಿಗಾಗಿ ಮಾಡುವ ಸೌಮ್ಯವಾದ ತಪಸ್ಸು ಲೋಕಕ್ಕೆ ಶಾಂತಿ ಉಂಟುಮಾಡುತ್ತದೆ ಎಂದು ಪ್ರಕಾಶಿಕಾ ಗ್ರಂಥದಲ್ಲಿದೆ. ಹಿರಣ್ಯಕಶಿಪು ಬ್ರಹ್ಮಪದವಿಗಾಗಿ ತಪಸ್ಸು ಮಾಡಿದನೆಂದು ಸ್ಕಾಂದಪುರಾಣ ಹೇಳಿದೆ. ೩೮೯

೭.೩.೨೧ 'ಜಿತೋಽಹಂ' ಎಂದರೆ ನನ್ನನ್ನು ನೀನು ಪರಾಭವಗೊಳಿಸಿರುವೆ ಎಂದರ್ಥವಲ್ಲ, ವಶಮಾಡಿಕೊಂಡೆ ಎಂದರ್ಥ. ಇದು ಶಬ್ದನಿರ್ಣಯದಲ್ಲಿ ಉಕ್ತವಾಗಿದೆ. ೩೯೦

ತದೇವಂ ವೈಷಮ್ಯಂ ಗುಣಸ್ಯೈವ ನಾನ್ಯಸ್ಯ। ತತ್ರ ಕಾಲ ಏವ ನಿಮಿತ್ತಂ। ಯಥಾ ಪುರುಷಸೃಜ್ಯತ್ವಾಧೀನತ್ವಾಧಿಷ್ಠೇಯತ್ವೇऽಪಿ ಗೃಹಾಣಾಮುಚ್ಚತ್ವಶೈತ್ಯಾದಿಕಂ ಗೃಹಾಣಾಮೇವ, ನ ಪುನಃ ಪುರುಷಸ್ಯ ತಥಾ । -ವಿಶ್ವನಾಥಃ

ಕಾಲ ಸತ್ವಗುಣವನ್ನು ಬೆಳೆಸಿದರೆ ಭಗವಂತನೂ ಸುರಪ್ರಿಯನಾಗುತ್ತಾನೆ. ದೇವತೆಗಳ ಪಕ್ಷವಹಿಸುತ್ತಾನೆ. ವೈಷಮ್ಯವಿರುವುದು ಗುಣದಲ್ಲಿ, ಅದಕ್ಕೆ ನಿಮಿತ್ತ ಕಾಲ. ಭಗವಂತ ಗುಣಕಾಲಗಳನ್ನು ಸೃಜಿಸಿ ತನ್ನ ಅಧೀನದಲ್ಲಿರಿಸಿಕೊಂಡು ಅವುಗಳಲ್ಲಿ ಪ್ರವೇಶಿಸಿರುವುದರಿಂದ ಭಗವಂತನಲ್ಲಿ ವೈಷಮ್ಯವಿದೆ ಎಂದು ವ್ಯವಹಾರ ಮಾತ್ರ. 'ಸುರಾನೀಕಂ ಏಧಯತೀವ' ಸುರರಿಗೆ ಜಯ ತಂದುಕೊಟ್ಟಿದ್ದು ಭಗವಂತನಲ್ಲ. ಸತ್ವಗುಣ ಮತ್ತು ಕಾಲಗಳು ಜಯ ತಂದಿತ್ತುವು. ಮನೆಕಟ್ಟಿ ಅದಕ್ಕೆ ಒಡೆಯನಾಗಿ ಅದರೊಳಗೆ ವಾಸಮಾಡುವ ವ್ಯಕ್ತಿಯಲ್ಲಿ ಮನೆಯ ಸೌಂದರ್ಯ ಔನ್ನತ್ಯ ಶೀತಲತ್ವಗಳು ಬರಲಾರವಷ್ಟೆ! ಎಂದು ಶ್ರೀಧರ ವಿಶ್ವನಾಥ ವ್ಯಾಖ್ಯಾನಗಳಲ್ಲಿ ಹೇಳಿದೆ.

ಆದರೆ ಮನೆಯ ಅಂದವನ್ನು ನೋಡಿ ಅದರೊಡೆಯನನ್ನೇ ಮುಖ್ಯವಾಗಿ ಹೊಗಳುತ್ತಾರೆ. ಸೈನಿಕರು ಯುದ್ಧದಲ್ಲಿ ಜಯಗಳಿಸಿದರೆ ರಾಜನನ್ನು ಹೊಗಳುತ್ತಾರೆ. ಆದರಿಂದ ಸುರರಿಗೆ ಕಾಲವು ಜಯ ತಂದಿತ್ತರೆ ಕಾಲವನ್ನೂ ಆಳುವ ಭಗವಂತನೇ ಮುಖ್ಯವಾಗಿ ಜಯವಿತ್ತವನೆನಿಸುತ್ತಾನೆ. ಅವನಲ್ಲಿಯೇ ವೈಷಮ್ಯದೋಷ. ಸ್ವತಂತ್ರನಾಗಿ ಕಾರ್ಯ ಮಾಡುವವನೇ ಅದರ ಗುಣ ದೋಷಗಳಿಗೆ ಬಾಧ್ಯನೆನಿಸುತ್ತಾನೆ, ಅವನ ಅಧೀನರಾಗಿರುವವರಲ್ಲ. ಹೀಗಾಗಿ ಬೇರೆ ವ್ಯಾಖ್ಯಾನಕಾರರು ಹೇಳುವುದು ತಿರುವುಮುರುವು.

ಭಗವಂತ ದೇವತೆಗಳ ಪಕ್ಷಪಾತಿ. ಆದರೆ ಇದು ದೋಷವಲ್ಲ, ಗುಣವೇ. ಏಕೆಂದರೆ ದೇವತೆಗಳ ಗುಣಯೋಗ್ಯತೆಗಳು ಹಾಗಿವೆ. ಅಸುರರ ಪಕ್ಷ ವಹಿಸಿದ್ದರೆ ಅದು ದೋಷವಾಗುತ್ತಿತ್ತು.

ಕಾಲೇ ಕಾಲವಿಷಯೇಽಪೀಶಿತಾ ।

ದೇಹಾದಿಕಾರಣತ್ವಾತ್ ಸುರಾನೀಕಮಿವ ಸ್ಥಿತಂ ಸತ್ವಂ ।

'ಕಾಲೇ' ಎಂದು ವಿಷಯಸಪ್ತಮೀ. ಕಾಲವಿಷಯದಲ್ಲಿಯೂ ಹರಿ ಸ್ವತಂತ್ರ. ಸರ್ವಪ್ರೇರಕವಾದ ಕಾಲಕ್ಕೂ ಪ್ರೇರಕನೆಂದರೆ ಸರ್ವಪ್ರೇರಕ, ಪರಮಸ್ವತಂತ್ರನೆಂದಂತಾಯಿತು.

ಸುರಾನೀಕ ಎಂದರೆ ದೇವಸೈನ್ಯ. ದೇವತೆಗಳಿಗೆ ದೇಹೇಂದ್ರಿಯಾದಿಗಳ ರೂಪದಲ್ಲಿ ಪರಿಣಮಿಸುವುದು ಸತ್ವಗುಣ. ಸತ್ವಗುಣ ಪರಿಣಾಮ ದೇವಸೈನ್ಯವಾದುದರಿಂದ ಸತ್ವಗುಣ ದೇವಸೈನ್ಯದಂತಿದೆ, ಎಂದು ಇವ ಶಬ್ದದ ಅರ್ಥ.

ಸ್ವಭಾವತಃ ಪ್ರಿಯತ್ವಾತ್ತು ಸದಾ ದೇವಪ್ರಿಯೋ ಹರಿಃ ।
ಅಪ್ರಿಯಶ್ಚಾಸುರಾಣಾಂ ಸ ಸ್ವಭಾವಾತ್ತೂಭಯಂ ನೃಣಾಂ ।
ದೇಶಕಾಲೌ ಗುಣಾಂಶ್ಚೈವ ಭಕ್ತ್ಯಾದೀನಪ್ಯಪೇಕ್ಷ್ಯತು
ಯೋಗ್ಯತಾಂ ಚ ತಥಾ ಕರ್ಮ ಸಮ ಇತ್ಯಭಿಧೀಯತೇ
ಸ್ವತಃ ಪ್ರಿಯೋಽಪಿ ದೇವಾನಾಮುತ್ಪಾದ್ಯೈವ ಗುಣಾನಿಮಾನ್
ಇತರೇಷಾಂ ತಥಾ ದೋಷಾನ್ ಸುಖದುಃಖೇ ದದಾತ್ಯಜಃ ।
ಉಭಯಂ ತು ಮನುಷ್ಯಾಣಾಮತಃ ಸಮ ಇತೀರಿತಃ ।
ಅನಾದಿ ನಿಯತಾಶ್ಚೈವ ಗುಣದೋಷಾಃ ಸುರಾದಿಷು।
ಯಥಾಕ್ರಮಂ ಪುನಶ್ಚೈವ ನಿಯಮಾದ್ ವರ್ಧಿತಾಸ್ತಥಾ ।
ವಿಷ್ಣುನೈವ ತತೋ ನಿತ್ಯಂ ವಿಷಮಶ್ಚ ಜನಾರ್ದನಃ ।

-ಇತಿ ಬ್ರಹ್ಮತರ್ಕೇ

ಶ್ರೀಹರಿ ದೇವತೆಗಳಿಗೆ ಸದಾ ಸ್ವಾಭಾವಿಕವಾಗಿ ಪ್ರಿಯಕರನಾದ್ದರಿಂದ ದೇವಪ್ರಿಯನೆನಿಸುತ್ತಾನೆ. ಸ್ವಾಭಾವಿಕವಾಗಿ ಅಸುರರಿಗೆ ಅಪ್ರಿಯನೂ ಆಗಿರುತ್ತಾನೆ. ಮಾನವರಿಗೆ ಸ್ವಾಭಾವಿಕವಾಗಿ ಪ್ರಿಯ ಅಪ್ರಿಯ ಎರಡೂ ಆಗಿರುತ್ತಾನೆ. ಆದರೂ ದೇವತೆಗಳಿಗೆ ಅವರ ಭಾರತಾದಿ ದೇಶ ಕೃತಯುಗಾದಿ ಕಾಲ ಸದಾಚಾರಾದಿಗುಣ ಭಕ್ತಿಶ್ರದ್ಧಾದಿಗಳು, ಅನಾದಿಯೋಗ್ಯತೆ ಪೂರ್ವಪುಣ್ಯಕರ್ಮಗಳು ಇವೆಲ್ಲವನ್ನೂ ನೋಡಿ ಅವುಗಳಿಗನುಸಾರವಾಗಿ ಸುಖ ನೀಡುತ್ತಾನೆ. ಅಸುರರಿಗೆ ಅವರ ದೇಶಕಾಲಗಳು ದ್ವೇಷ ಮುಂತಾದ ದೋಷಗಳು ಅನಾದಿದುಷ್ಟಯೋಗ್ಯತೆ ಪೂರ್ವಪಾಪ ಇವೆಲ್ಲಕ್ಕೂ ಅನುಸಾರವಾಗಿ ದುಃಖವನ್ನೇ ನೀಡುತ್ತಾನೆ. ಮಾನವರಿಗೆ ಅವರ ದೇಶಕಾಲಗುಣಯೋಗ್ಯತೆ ಪುಣ್ಯಪಾಪಗಳನ್ನು ಅನುಸರಿಸಿ ಸುಖದುಃಖಗಳನ್ನು ನೀಡುತ್ತಾನೆ. ಅದರಿಂದ 'ವೈಷಮ್ಯ ನೈರ್ಘೃಣ್ಯೇ ನ ಸಾಪೇಕ್ಷತ್ವಾತ್' ಎಂದು ಬ್ರಹ್ಮಸೂತ್ರ ಹೇಳುವಂತೆ ಹರಿಗೆ ವೈಷಮ್ಯದೋಷವಿಲ್ಲ. ಸಮನೆಂದೇ ಹೊಗಳಲ್ಪಡುತ್ತಾನೆ.

ಇನ್ನೊಂದು ರೀತಿಯಿಂದಲೂ ಅವನು ಸಮನೆನಿಸುತ್ತಾನೆ. ಹೇಗೆಂದರೆ, ಸ್ವಾಭಾವಿಕವಾಗಿ ಹರಿ ದೇವತೆಗಳಿಗೆ ಪ್ರಿಯಕರನಾಗಿದ್ದರೂ ಅವರಲ್ಲಿ ಈ ಗುಣಗಳನ್ನು ಅಭಿವೃದ್ಧಿಪಡಿಸಿಯೇ ಸುಖ ನೀಡುತ್ತಾನೆ. ಅಸುರರಲ್ಲಿಯೂ ದೋಷಗಳನ್ನು ಅಭಿವೃದ್ಧಿಪಡಿಸಿಯೇ ದುಃಖ ನೀಡುತ್ತಾನೆ. ಮಾನವರಲ್ಲಿ

ಗುಣದೋಷಗಳನ್ನು ಅಭಿವೃದ್ಧಿಪಡಿಸಿಯೆ ಸುಖದುಃಖಗಳನ್ನು ನೀಡುತ್ತಾನೆ. ಅದರಿಂದ ಆತ ಸಮನೆನಿಸುತ್ತಾನೆ.

ಮೋಕ್ಷಸಾಧನವಾದ ಭಕ್ತ್ಯಾದಿ ಗುಣಗಳನ್ನಾಗಲಿ ತಮಃ ಸಾಧನವಾದ ದ್ವೇಷಾದಿ ದೋಷಗಳನ್ನಾಗಲಿ ನಿತ್ಯಸಂಸಾರ ಸಾಧನವಾದ ಗುಣದೋಷ ಮಿಶ್ರಣವನ್ನಾಗಲಿ ಹಿಂದೆ ಇಲ್ಲದ್ದನ್ನು ಹೊಸದಾಗಿ ಹರಿ ಹುಟ್ಟಿಸುವುದಿಲ್ಲ. ಅವು ಅನಾದಿಕಾಲದಿಂದ ನಿಯತವಾಗಿಯೇ ಅವ್ಯಕ್ತವಾಗಿರುತ್ತವೆ. ತಾರತಮ್ಯಾನುಗುಣವಾಗಿಯೇ ಇರುತ್ತವೆ. ಅವುಗಳನ್ನು ಹರಿ ಪುನಃ ನಿಯತವಾಗಿಯೇ ಅಭಿವೃದ್ಧಿಪಡಿಸುತ್ತಾನೆ. ಹೀಗೆ ದೇವತೆಗಳಲ್ಲಿ ಗುಣಗಳನ್ನೇ ಅಸುರರಲ್ಲಿ ದೋಷಗಳನ್ನೇ ಮಾನವರಲ್ಲಿ ಅವುಗಳ ಮಿಶ್ರಣವನ್ನೇ ಅನಾದಿ ಕಾಲದಿಂದ ನಿಯತವಾಗಿ ಇರಿಸಿ ಬೆಳೆಸುವುದರಿಂದ ಈ ವೈಷಮ್ಯಪ್ರಯುಕ್ತವಾಗಿ ಹರಿ ಸದಾ ವಿಷಮನೆಂದೂ ಹೇಳಲ್ಪಡುತ್ತಾನೆ. ಆದರೆ ಈ ವೈಷಮ್ಯ ದೋಷವಲ್ಲ, ಎಂದು ಬ್ರಹ್ಮತರ್ಕ ಹೇಳಿದೆ.

ನ ವಿಷ್ಣೋರ್ವಿಷಮತ್ವಂ ತು ಯೋಗ್ಯತಾಪೇಕ್ಷಯಾ ಕ್ವಚಿತ್ ।
ಯೋಗ್ಯತಾಯಾಸ್ತನ್ನಿಯತ್ಯಾ ವಿಷಮತ್ವಂ ಭವೇತ ವಾ ।

ಇತಿ ಸ್ಕಾಂದೇ ।

ಯೋಗ್ಯತಾನುಸಾರವೇ ಫಲ ನೀಡುವುದರಿಂದ ವಿಷ್ಣುವಿಗೆ ವೈಷಮ್ಯ ದೋಷವಿಲ್ಲ. ಯೋಗ್ಯತೆಯನ್ನೂ, ದೇವತೆಗಳಲ್ಲಿಯೇ ಮುಕ್ತಿಯೋಗ್ಯತೆ, ಅಸುರರಲ್ಲಿಯೇ ತಮೋಯೋಗ್ಯತೆ ಎಂದು ನಿಯಂತ್ರಿಸುವವನೂ ಅವನೇ ಆದ್ದರಿಂದ ವೈಷಮ್ಯ ಬಂದರೆ, ಬರಲಿ, ಅದು ಭೂಷಣವೇ ಎಂದು ಸ್ಕಾಂದಪುರಾಣ ಹೇಳಿದೆ.

ವಿಷಮತ್ವಂ ತು ದೋಷಾಯ ಶುಭಾಶುಭವಿಪರ್ಯಯೇ ।
ಅತಸ್ತಾದೃಶವೈಷಮ್ಯಂ ಬ್ರಹ್ಮಸೂತ್ರೇ ನಿರಾಕೃತಂ ।
ಶುಭಾಶುಭನಿಯಂತೃತ್ವಂ ನ ದೋಷೋ ಗುಣ ಏವ ಸಃ ।
ಅತಸ್ತದಿಷ್ಟಂ ಕೃಷ್ಣಸ್ಯ ಬ್ರಹ್ಮಸೂತ್ರಕೃತೋ ವಿಭೋಃ ।

ಇತಿ ತಂತ್ರನಿರ್ಣಯೇ ।

ಪೂರ್ವಪುಣ್ಯ ಪಾಪಗಳನ್ನೂ ಯೋಗ್ಯತೆಯನ್ನೂ ನೋಡದೆ ಅವುಗಳಿಗೆ ವಿಪರೀತವಾಗಿ ಫಲವನ್ನಿತ್ತರೆ ಅಂಥ ವೈಷಮ್ಯ ದೋಷಕ್ಕೆ ಅಪಕೀರ್ತಿಗೆ

ಕಾರಣವಾಗುತ್ತದೆ. ಅದರಿಂದ ಅಂಥ ವೈಷಮ್ಯವನ್ನು ಬ್ರಹ್ಮಸೂತ್ರದಲ್ಲಿ ನಿರಾಕರಿಸಲಾಗಿದೆ. ಪುಣ್ಯಪಾಪಗಳನ್ನೂ ಯೋಗ್ಯತೆಯನ್ನೂ ಅವನೇ ನಿಯಂತ್ರಿಸುವುದರಿಂದ ಪುನಃ ವೈಷಮ್ಯವೇ ಎಂದೆನ್ನುವುದಾದರೆ ಅಂಥ ವೈಷಮ್ಯ ದೋಷವಲ್ಲ. ಏಕೆಂದರೆ ಅದು ಅಪಕೀರ್ತಿಗೆ ಕಾರಣವಾಗುವುದಿಲ್ಲ. ಕೀರ್ತಿಗೇ ಕಾರಣವಾಗುತ್ತದೆ. (ಭಾಗವತದಲ್ಲಿ 'ಉರುಶ್ರವಾಃ' ಮಹಾಕೀರ್ತಿಶಾಲಿ ಎಂದಿರುವುದು ಇದೇ ಅಭಿಪ್ರಾಯ ದಿಂದ) ಅದರಿಂದ ಬ್ರಹ್ಮಸೂತ್ರಕಾರರಾದ ಕೃಷ್ಣದ್ವೈಪಾಯನರಿಗೆ ಅಂಥ ವೈಷಮ್ಯ ಸಂಮತವೇ ಆಗಿದೆ ಎಂದು ತಂತ್ರನಿರ್ಣಯದಲ್ಲಿ ಹೇಳಿದೆ.

ಪುಣ್ಯದಿಂದ ಸುಖ, ಪಾಪದಿಂದ ದುಃಖವೆಂದು ವೇದದಲ್ಲಿ ಹೇಳಿದೆ. ಅದಕ್ಕೆ ವ್ಯತಿರಿಕ್ತವಾಗಿ, 'ಈತ ನನಗೆ ಪ್ರಿಯ. ಅಯೋಗ್ಯನಾಗಿದ್ದು ಪಾಪ ಮಾಡಿದರೂ ಸುಖವನ್ನೇ ನೀಡುತ್ತೇನೆ' ಎಂದರೆ ಇದು ವೇದವಿರುದ್ಧವಾದ ವರ್ತನೆ ಯಾಗುವುದು. ವೇದ ಅವನಾಜ್ಞೆ. ವೇದದಲ್ಲಿರುವುದು ಅವನು ಮಾಡಿದ ನಿಯಮವೇ. ಅದಕ್ಕೆ ವಿರೋಧವಾಗಿ ಅವನೇ ನಡೆದರೆ ತಾನು ಮಾಡಿದ ನಿಯಮವನ್ನು ತಾನೇ ಅತಿಕ್ರಮಿಸಿದರೆ ಅವನು ಉನ್ಮತ್ತನೆಂದು ಅಪಕೀರ್ತಿಗೇ ಭಾಜನನಾದಾನು. ಅದರಿಂದ ಅಂಥ ವೈಷಮ್ಯ ದೋಷವೇ. ವೇದೋಕ್ತವಾದ, ತಾನು ಮಾಡಿರುವ ನಿಯಮಕ್ಕೆ ಅನುಸಾರವಾಗಿಯೇ ನಡೆದರೆ ಕೀರ್ತಿಯೇ ಬರುತ್ತದೆ. ಅಂಥ ವೈಷಮ್ಯ ಗುಣವೇ. ಬ್ರಹ್ಮಸೂತ್ರದಲ್ಲಿ ನಿರಾಕರಿಸಿದುದು ದೋಷರೂಪವಾದ ವೈಷಮ್ಯವನ್ನು ಹೊರತು ಗುಣರೂಪವಾದ ವೈಷಮ್ಯವನ್ನಲ್ಲ. ಅದು ಬಾದರಾಯಣರಿಗೆ ಸಮ್ಮತವೇ. ಬೇರೆ ವ್ಯಾಖ್ಯಾನಕಾರರು ಹೇಳುವಂತೆ 'ಕಾಲಾನುಸಾರವಾಗಿ ಯಾರಿಗೆ ಹೆಚ್ಚು ಬಲ ಬರುತ್ತದೋ ಅವರ ಕಡೆ ಭಗವಂತ ನಿಲ್ಲುತ್ತಾನೆ ಹೊರತು ಅವನಿಗೆ ಯಾರಲ್ಲಿಯೂ ವಿಶೇಷವಾಗಿ ಪ್ರೀತಿಯಿಲ್ಲ' ಎನ್ನುವುದು ಭಗವಂತನಿಗೆ ಭೂಷಣವಲ್ಲ. ಭಗವಂತ ಭಕ್ತವತ್ಸಲ ಸುರಪ್ರಿಯನಾಗಬೇಕು.

❖ ❖ ❖

ಧರ್ಮರಾಜನ ರಾಜಸೂಯ ಯಾಗದಲ್ಲಿ ಶ್ರೀಕೃಷ್ಣನಿಗೆ ಅಗ್ರಪೂಜೆ ನೀಡಿದ್ದನ್ನು ಶಿಶುಪಾಲ ವಿರೋಧಿಸಿ ನಿಂದಿಸಿ ಶ್ರೀಕೃಷ್ಣನಿಂದ ಹತನಾದ. ಆದರೆ ಶ್ರೀಕೃಷ್ಣನಲ್ಲಿ ಆತ ಸಾಯುಜ್ಯವನ್ನೇ ಹೊಂದಿದ. ಭಗವಂತನನ್ನು ಸದಾ ನಿಂದಿಸುತ್ತಿದ್ದ ಆತನ ನಾಲಿಗೆಯಲ್ಲಿ ಕುಷ್ಠರೋಗ ಏಕೆ ಬರಲಿಲ್ಲ ಎಂದು ಆಶ್ಚರ್ಯದಿಂದ ಧರ್ಮರಾಜ ಯಾಗಶಾಲೆಯಲ್ಲಿದ್ದ ನಾರದರನ್ನು ಕೇಳುತ್ತಾನೆ.

ಶಪತೋರಸಕೃದ್ವಿಷ್ಣುಂ ಯದ್ ಬ್ರಹ್ಮ ಪರಮವ್ಯಯಮ್ ।
ಶ್ವಿತ್ರೋ ನ ಜಾತೋ ಜಿಹ್ವಾಯಾಂ ನಾಂಧಂ ವಿವಿಶತುಸ್ತಮಃ ॥ ೨೦ ॥

ಅವಿನಾಶಿ ಪರಬ್ರಹ್ಮ ಮಹಾವಿಷ್ಣುವೇ ಆಗಿರುವ ಶ್ರೀಕೃಷ್ಣನನ್ನು ಶಿಶುಪಾಲ ದಂತವಕ್ರರು ಬಾರಿಬಾರಿಗೂ ನಿಂದಿಸುತ್ತಿದ್ದರೂ ಅವರ ನಾಲಿಗೆಯಲ್ಲಿ ಕುಷ್ಠರೋಗವೇಕೆ ಬರಲಿಲ್ಲ, ಅವರು ಏಕೆ ತಮಸ್ಸಿನಲ್ಲಿ ಬೀಳಲಿಲ್ಲ?

ಇಲ್ಲಿ ಒಂದು ಪ್ರಶ್ನೆ ಬರುತ್ತದೆ, ಪಾಪದ ಫಲ ಈ ಜನ್ಮದಲ್ಲಿಯೇ ಸಿಗುತ್ತದೆ ಎಂದೇನೂ ನಿಯಮವಿಲ್ಲ. ಶಿಶುಪಾಲ ದಂತವಕ್ರರಿಗೆ ಕೃಷ್ಣನಿಂದೆಯ ಪಾಪದ ಫಲ ಆ ಜನ್ಮದಲ್ಲಿಯೇ ಸಿಗಬೇಕಾಗಿತ್ತೆಂದು ಧರ್ಮರಾಜನೇಕೆ ಭಾವಿಸಿದ? ಎಂದು. ಈ ಪ್ರಶ್ನೆಯನ್ನು ಬೇರೆ ವ್ಯಾಖ್ಯಾನಕಾರರು ಎತ್ತಿಕೊಂಡಿಲ್ಲ. ಸಮಾಧಾನವನ್ನು ಹೀಗೆ ಹೇಳಬೇಕು-

ನಿಯಮಾದ್ ಭುಜ್ಯತೇ ಪುಂಭಿರ್ಧರ್ಮಾಧರ್ಮಫಲಂ ಮೃತೌ।
ಕೈಶ್ಚಿದತ್ರಾಪಿ ಭುಜ್ಯೇತ ತಸ್ಮಾನ್ನಾಧರ್ಮಮಾಚರೇತ್ ।

ಇತಿ ಭಾರತೇ ।

ಪುಣ್ಯಪಾಪ ಫಲವನ್ನು ಜನರು ಮರಣಾನಂತರದಲ್ಲಾದರೂ ತಪ್ಪದೆ ಉಣ್ಣುತ್ತಾರೆ. ಕೆಲವು ಮಹತ್ತಾದ ಪುಣ್ಯಪಾಪಗಳಿಂದ ಈ ಜನ್ಮದಲ್ಲಿಯೂ ಫಲ ಉಣ್ಣುತ್ತಾರೆ. ಆದರಿಂದ ಪಾಪ ಮಾಡಕೂಡದೆಂದು ಭಾರತದಲ್ಲಿ ಉಕ್ತವಾಗಿದೆ.

ಎಲ್ಲ ಪಾಪದ ಫಲ ಈ ಜನ್ಮದಲ್ಲಿಯೆ ಉಣಬೇಕೆಂದು ನಿಯಮವಿಲ್ಲದಿದ್ದರೂ ಮಹತ್ತಾದ ಪಾಪಕ್ಕೆ ಈ ಜನ್ಮದಲ್ಲಿಯೇ ಫಲ ಉಣಬೇಕಾಗುತ್ತದೆ. ಶಿಶುಪಾಲ ದಂತವಕ್ರರು ಕೃಷ್ಣನನ್ನು ನಿಂದಿಸಿ ಮಹತ್ತಾದ ಪಾಪ ಮಾಡಿದವರು. ಅವರಿಗೆ ಈ ಜನ್ಮದಲ್ಲಿಯೇ ಕುಷ್ಠರೋಗದಂಥ ಫಲ ಏಕೆ ಸಿಗಲಿಲ್ಲ ಎಂದು ಧರ್ಮರಾಜನ ಪ್ರಶ್ನೆ ಸರಿಯೆ.

❖ ❖ ❖

ಶಿಶುಪಾಲ ದಂತವಕ್ರರು ಶ್ರೀಕೃಷ್ಣನನ್ನು ಸದಾ ನಿಂದಿಸಿದರೂ ಅವರಿಗೆ ಏಕೆ ದುರ್ಗತಿಯಾಗಲಿಲ್ಲ ಎಂದು ಧರ್ಮರಾಜ ಕೇಳಿದಾಗ ನಾರದರು ಉತ್ತರ ಕೊಡುತ್ತಿದ್ದಾರೆ.

ಯನ್ನಿಬಂಧೋಽಭಿಮಾನೋಽಯಂ ತದ್ವಧಾತ್ಪ್ರಾಣಿನಾಂ ವಧಃ ।
ತಥಾ ನ ಯಸ್ಯ ಕೈವಲ್ಯಾದಭಿಮಾನೋಽಖಿಲಾತ್ಮನಃ ।
ಪರಸ್ಯೇದಮಕರ್ತುರ್ಹಿ ಹಿಂಸಾ ಕೇನಾಸ್ಯ ಕಲ್ಪ್ಯತೇ ॥ ೨೬ ॥

ಶರೀರಾಭಿಮಾನವಿದ್ದರೆ ಶರೀರದ ವಧೆಯಿಂದ ತನಗೇ ವಧೆಯಾಯಿತೆಂದೆನಿಸುತ್ತದೆ. ಶ್ರೀಹರಿ ಸರ್ವಕ್ಕೂ ಅಧಿಪತಿಯಾಗಿರುವುದರಿಂದ ಅವನಿಗೆ ಪ್ರಾಕೃತಶರೀರ ಬಂಧಕವಾಗುವುದಿಲ್ಲ. ಅದರಲ್ಲಿ ಅವನಿಗೆ ಅಭಿಮಾನವಿಲ್ಲ. ಅವನನ್ನು ಸೃಜಿಸಬಲ್ಲ ಇನ್ನೊಬ್ಬ ಸೃಷ್ಟಿಕರ್ತನೂ ಇಲ್ಲ. ಇಂಥ ಪರಮಾತ್ಮನಿಗೆ ಶಿಶುಪಾಲನ ನಿಂದೆಯಿಂದ ಮನಸಿಗೆ ನೋವಾಗುವುದು ಹೇಗೆ ಸಾಧ್ಯ?

[೧]ಇಲ್ಲಿ 'ಕೈವಲ್ಯಾತ್' ಎಂದರೆ ಶ್ರೀಧರವ್ಯಾಖ್ಯಾನದ ಪ್ರಕಾರ ಅದ್ವಿತೀಯನಾದ್ದರಿಂದ ಎಂದರ್ಥ. ಪರಬ್ರಹ್ಮನಿಗೆ ಅಭಿಮಾನವಿಲ್ಲ. ಏಕೆಂದರೆ ಅಭಿಮಾನ ಪಡಬಹುದಾದ ಇನ್ನೊಂದು ವಸ್ತುವೆ ಇಲ್ಲ. ಆತ ಅದ್ವಿತೀಯ. ಬೇರೆಲ್ಲವೂ ಮಿಥ್ಯಾ. ಹೀಗೆ ಅಭಿಮಾನವಿಲ್ಲದವನಿಗೆ ಈತ ನನ್ನವನು, ಈತ ಪರಕೀಯ ಎಂದು ವೈಷಮ್ಯವೂ ಇಲ್ಲ. ಎಲ್ಲ ತಾನೆ ಆಗಿರುವಾಗ ಭೇದ ಮಾಡುವುದು ಶಕ್ಯವಿಲ್ಲ. ದೈತ್ಯರನ್ನು ಏಕೆ ಕೊಲ್ಲುತ್ತಾನೆ ಎಂದರೆ, ಅದು ವೈಷಮ್ಯದಿಂದಲ್ಲ. ಅಪರಾಧಿಗಳಿಗೆ ಅವರ ಹಿತಕ್ಕಾಗಿಯೆ ದಂಡವಿಧಿಸುತ್ತಾನಷ್ಟೆ.

ಆದರೆ ಅದ್ವೈತದಲ್ಲಿ ಬ್ರಹ್ಮ ಅದ್ವಿತೀಯವೆಂದರೆ ಇನ್ನೊಂದು ವಸ್ತು ಇಲ್ಲವೇ ಇಲ್ಲ ಎಂದರ್ಥವಲ್ಲ. ಇದೆ, ಪಾರಮಾರ್ಥಿಕವಲ್ಲ. ಅಪಾರಮಾರ್ಥಿಕ. ಹಾಗಿದ್ದರೂ

---

೧. ಅಭಿಮಾನಾಭಾವೇ ಹೇತುಃ ಕೈವಲ್ಯಾತ್। ಅದ್ವಿತೀಯತ್ವೇನಾಭಿಮಂತವ್ಯಾಭಾವಾತ್। ವೈಷಮ್ಯಾಭಾವೇ ಹೇತುಃ ಅಖಿಲಾತ್ಮನಃ ಸರ್ವಾತ್ಮನ ಇತಿ । ತರ್ಹಿ ಕಿಮಿತಿ ಹಂತಿ ದೈತ್ಯಾಂಸ್ತತ್ರಾಹ ಪರಸ್ಯ ದಮಕರ್ತುಃ। ಹಿತಾರ್ಥಂ ದಂಡಂ ಕರೋತೀತ್ಯರ್ಥಃ ।
-ಶ್ರೀಧರಃ

ಅಭಿಮಾನಾಭಾವೇ ಹೇತುಃ ಕೈವಲ್ಯಾತ್। ಕೇವಲ ಪರಮಾತ್ಮತ್ವಾತ್। ಅಯಂ ಭಾವಃ। ಯಥಾ ಸರ್ವಜೀವಾನಾಮನಾತ್ಮಾ ದೇಹಃ ಆತ್ಮಾ ಜೀವಶ್ಚೇತ್ಯುಭಯಂ ವರ್ತತೇ ತಥಾ ಯದಿ ಕೃಷ್ಣಸ್ಯಾಪಿ ಸ್ಯಾತ್ ತದಾ ಕೃಷ್ಣಸ್ಯಾಪಿ ಜೀವಾನಾಮಿವ ಆವಿದ್ಯಕೋಽಭಿಮಾನೋಽಭವಿಷ್ಯದೇವ। ಕೃಷ್ಣಸ್ಯ ತು ದೇಹಸ್ತದಭಿನ್ನಃ ಪರಮಾತ್ಮೈವ। ಅಭಿಮಾನಾಭಾವಾತ್ ಕಸ್ತಸ್ಯ ದ್ವೇಷ್ಯಃ ಕೋ ವಾ ದ್ವೇಷ್ಟಾ? -ವಿಶ್ವನಾಥಃ

ಅಭಿಮಾನಾಭಾವೇ ಹೇತುಃ ಅಖಿಲಾತ್ಮನ ಇತಿ। ಸಕಲ ಜಗದಾತ್ಮತ್ವಾದಭಿಮಾನೋ ನಾಸ್ತೀತ್ಯರ್ಥಃ। ನನ್ವಾತ್ಮತ್ವೇಽಪಿ ಜೀವವದಭಿಮಾನಃ ಸ್ಯಾದೇವ। ತತ್ರಾಹ ಕೈವಲ್ಯಾದಿತಿ। ನಿರಸ್ತ ನಿಖಿಲದೋಷತ್ವಾದಿತ್ಯರ್ಥಃ। ಅನೃತೇನ ಹಿ ಪ್ರತ್ಯೂಢಾ ಇತಿ ಶ್ರುತ್ಯುಕ್ತರೀತ್ಯಾ ಜೀವಾನಾಮನಾದಿಪುಣ್ಯಪಾಪಾತ್ಮಕ ಕರ್ಮಮೂಲಕೋ ಹಿ ದೇಹಾತ್ಮಾಭಿಮಾನಃ। ತಸ್ಯ ತು ಪರಮಪುರುಷಸ್ಯ ಸರ್ವಾಂತರಾತ್ಮನೋ ನಿರಸ್ತ ನಿಖಿಲ ಕರ್ಮವಶತ್ವಾದಿ ದೋಷತ್ವಾದಭಿಮಾನಾಭಾವ ಇತಿ ಭಾವಃ। ನಿಂದಿತೋಽಹಮಿತ್ಯಾದ್ಯಭಿಮಾನ ಏವ ನಾಸ್ತಿ ಕಿಂ ಪುನಸ್ತತ್ಪ್ರಯುಕ್ತಂ ಪರೇಷು ನಿಂದಕೇಷು ಹಿಂಸಾದಿಕರಣಂ ? -ವೀರರಾಘವಃ ।

ಆದರಲ್ಲಿ ಅಭಿಮಾನ ಪಡಬಹುದು. ಪಾರಮಾರ್ಥಿಕವಾಗಿ ಇಲ್ಲದ ಪ್ರಯುಕ್ತ ಅಭಿಮಾನ ಅಯುಕ್ತವೆನ್ನುವುದಾದರೆ ತನಗಿಂತ ಬೇರೆ ಇನ್ನೊಬ್ಬ ಪಾರಮಾರ್ಥಿಕವಾಗಿ ಇಲ್ಲ ಎಂದುಕೊಂಡು ದಂಡವನ್ನೂ ವಿಧಿಸದೆ ಸುಮ್ಮನಿರಬೇಕಾದೀತು. 'ಸ್ವಪ್ನದಂತೆ ಅಪರಾಧವೂ ಮಿಥ್ಯಾ ದಂಡನೆಯೂ ಮಿಥ್ಯಾ' ಎನ್ನಲಾಗದು. ಸ್ವಪ್ನದಲ್ಲಿ ಅಪರಾಧ ಮಿಥ್ಯಾ ಎಂಬ ಪರಿಜ್ಞಾನವಿರುವುದಿಲ್ಲ. ಅದರಿಂದ ದಂಡನೆ ಮಾಡಬಹುದು. ಬ್ರಹ್ಮನಿಗೆ ಅಪರಾಧ ಮಿಥ್ಯಾ ಎಂಬ ಪರಿಜ್ಞಾನವಿದೆ. ಅದರಿಂದ ದಂಡನೆ ಮಾಡುವುದು ಅಸಂಭವ. ಹಗ್ಗದಲ್ಲಿ ಕಂಡ ಹಾವು ಸುಳ್ಳೆಂದು ತಿಳಿದ ಬಳಿಕ ಅದನ್ನು ಓಡಿಸಲು ಯಾರೂ ಯತ್ನಿಸುವುದಿಲ್ಲ. ಅದರಿಂದ 'ಕೈವಲ್ಯ'ವೆಂದರೆ ಅದ್ವಿತೀಯತ್ವವಲ್ಲ.

ವಿಶ್ವನಾಥ ವ್ಯಾಖ್ಯಾನ ಪ್ರಕಾರ ಕೈವಲ್ಯವೆಂದರೆ ಕೃಷ್ಣನಿಗೆ ಜೀವರಿಗಿರುವಂತೆ ತನಗಿಂತ ಬೇರೆಯಾದ ದೇಹವಿಲ್ಲ. ಅದರಿಂದ ಅವರಿಗಿರುವಂತೆ ದೇಹಾತ್ಮಾಭಿಮಾನವಿಲ್ಲ. ತಾನೇ ದೇಹವೆಂಬ ಭ್ರಮವಿಲ್ಲ. ಅದರಿಂದ ಅವನನ್ನು ಯಾರೂ ದ್ವೇಷಿಸುವುದಿಲ್ಲ. ಅವನೂ ಯಾರನ್ನೂ ದ್ವೇಷಿಸುವುದಿಲ್ಲ. ತನಗಿಂತ ಬೇರೆ ದೇಹವಿದ್ದು ಅದನ್ನೇ ತಾನೆಂದು ಅಭಿಮಾನಪಟ್ಟಿದ್ದರೆ ಆ ದೇಹಕ್ಕೆ ಹಿತರಾದವರನ್ನು ಪ್ರೀತಿಸುವುದು ಅಹಿತರಾದವರನ್ನು ದ್ವೇಷಿಸುವುದು ಸಹಜ. ಅದಿಲ್ಲದಿದ್ದಾಗ ಯಾರನ್ನು ಪ್ರೀತಿಸಬೇಕು ಯಾರನ್ನು ದ್ವೇಷಿಸಬೇಕು? ಹೀಗೆ ಹೇಳುತ್ತಾರೆ.

ಆದರೆ ಪರಮಾತ್ಮ ಯಾರನ್ನೂ ಪ್ರೀತಿಸುವುದಿಲ್ಲವಾದರೆ ಅವನ ಭಜನೆ ಏಕೆ? ಭಜನೆಯಿಂದ ಪುಣ್ಯ ಬಾರದು, ನಿಂದೆಯಿಂದ ಪಾಪ ಬಾರದೆಂದಾದೀತು.

ವೀರರಾಘವ ವ್ಯಾಖ್ಯಾನ ಪ್ರಕಾರ ಕೈವಲ್ಯ ಎಂದರೆ ಸಕಲ ದೋಷರಹಿತತ್ವ. ಜೀವರಿಗೆ ಪೂರ್ವಕರ್ಮರೂಪ ದೋಷದಿಂದ ತಮ್ಮ ಶರೀರದಲ್ಲಿ ನಾನೇ ಶರೀರ ಎಂದು ಮಿಥ್ಯಾಭಿಮಾನವಿರುತ್ತದೆ. ಪರಮಾತ್ಮನಿಗೆ ಅದಿಲ್ಲ. ನಿಂದೆ ಮಾಡಿದರೆ ನಾನು ಈತನಿಂದ ನಿಂದಿತನಾದೆನೆಂಬ ಅಭಿಮಾನ ಬರುವುದಿಲ್ಲ. ಹೀಗಾಗಿ ನಿಂದಕರನ್ನು ಆತ ಹಿಂಸಿಸುವುದಿಲ್ಲ ಎನ್ನುತ್ತಾರೆ.

ಆದರೆ ಹೀಗೆ ಹೇಳಿದರೆ ಸ್ತೋತ್ರಮಾಡಿದಾಗ ಈತ ನನ್ನನ್ನು ಸ್ತುತಿಸುತ್ತಿದ್ದಾನೆ ಎಂಬ ಅಭಿಮಾನವೂ ಇಲ್ಲವೆನ್ನಬೇಕಾಗುತ್ತದೆ. ಆಗ ಸ್ತುತಿ ನಿಂದೆಗಳಿಂದ ಪುಣ್ಯಪಾಪಗಳಿಲ್ಲವೆಂದಾದೀತು. ಭಗವಂತನ ಭಜನೆಗೇ ಅರ್ಥವಿಲ್ಲವೆಂದಾದೀತು. 'ಮಾಮಾತ್ಮಪರದೇಹೇಷು' ಎಂದು ಮುಂತಾಗಿ ಭಗವಂತ ದ್ವೇಷಿಗಳಿಗೆ ಅಧಮಗತಿ ನೀಡುವೆನೆಂದು ಗೀತೆಯಲ್ಲಿ ಹೇಳಿದ್ದು ಅಸಂಗತವಾದೀತು. ವಸ್ತುತಃ ನಾನೇ

ಶರೀರವೆಂದು ಮಿಥ್ಯಾಭಿಮಾನ ಭಗವಂತನಿಗೆ ಇರದಿದ್ದರೂ ನನ್ನನ್ನು ಈತ ನಿಂದಿಸುತ್ತಿದ್ದಾನೆ, ಈತ ಸ್ತುತಿಸುತ್ತಿದ್ದಾನೆ ಎಂಬ ಸದಭಿಮಾನ ಏಕೆ ಬರಬಾರದು? ಅದು ದೋಷವಲ್ಲ ತಾನೆ? ಅದರಿಂದ ಶಿಶುಪಾಲನಿಗೆ ಭಗವಂತನ ನಿಂದೆಯಿಂದ ಪಾಪವಿದೆ ಎಂದೊಪ್ಪಬೇಕು. ಆಗ ಅವನಿಗೆ ಭಗವಂತ ಹೇಗೆ ಸಾಯುಜ್ಯ ನೀಡಿದನೆಂಬ ಪ್ರಶ್ನೆಗೆ ಉತ್ತರವಿಲ್ಲ.

ಶ್ರೀಮದಾಚಾರ್ಯರು 'ಕೈವಲ್ಯಾದ್ ದೇಹಾದ್ಯಭಾವಾದೇವ' ಎಂದು ವ್ಯಾಖ್ಯಾನಿಸಿದ್ದಾರೆ. ಭಗವಂತನಿಗೆ ತನಗಿಂತ ಬೇರೆಯಾದ ಜಡಶರೀರವಿಲ್ಲ. ಜೀವರಂತೆ ಜಡಶರೀರದಲ್ಲಿ ಅಭಿಮಾನವಿಲ್ಲ ಅದರಿಂದ ನಿಂದೆಯನ್ನು ಕೇಳಿದಾಗ ಅವನಿಗೆ ಮನಸಿಗೆ ನೋವಾಗುವುದಿಲ್ಲ ಎಂದೇ ಹೇಳಿದ್ದಾರೆ. ವಿಶ್ವನಾಥ ವ್ಯಾಖ್ಯಾನವೂ ಇದನ್ನೇ ಹೇಳಿದೆ. ವೀರರಾಘವ ವ್ಯಾಖ್ಯಾನವೂ ಇದನ್ನೇ ಹೇಳಿದೆ. ಆದರೆ ಅವರಿಗೆ ಹೇಳಿದ ದೋಷ ಶ್ರೀಮದಾಚಾರ್ಯರಿಗೆ ಅನ್ವಯಿಸುವುದಿಲ್ಲ. ಭಗವಂತನಿಗೆ ತನಗಿಂತ ಬೇರೆ ಶರೀರ ಇಂದ್ರಿಯ ಅಂತಃಕರಣಗಳಿರುತ್ತಿದ್ದರೆ ನಿಂದೆಯನ್ನಾಲಿಸಿದಾಗ ಅಂತಃಕರಣದಲ್ಲಿ ನೋವು ಉಂಟಾಗುತ್ತಿತ್ತು. ಬೇರೆ ಶರೀರ ಇಂದ್ರಿಯ ಅಂತಃಕರಣಗಳಿಲ್ಲದಿದ್ದರೆ ಈ ಪ್ರಸಂಗವಿಲ್ಲ. ಸ್ವರೂಪ ಶರೀರ ಇಂದ್ರಿಯ ಅಂತಃಕರಣಗಳಿದ್ದರೂ ಸ್ವರೂಪಾಂತಕರಣದಲ್ಲಿ ದುಃಖ ಉಂಟಾಗುವುದಿಲ್ಲ. ಏಕೆಂದರೆ ಅದು ಆನಂದಮಯ, ಚಿನ್ಮಯ. ಅದರಲ್ಲಿ ದುಃಖಲೇಶವೂ ಇಲ್ಲ. ಇದ್ದಿದ್ದರೆ ಅದಕ್ಕೆ ಅಭಿವ್ಯಕ್ತಿಯನ್ನು ಹೇಳಬಹುದಾಗಿತ್ತು. ವಿಶ್ವನಾಥ ಪರಮಾತ್ಮನಿಗೆ ಚಿನ್ಮಯವಾದ ದುಃಖವನ್ನು ಅಂಗೀಕಾರ ಮಾಡಿದ್ದಾನೆ. ಅದರಿಂದ ಅವನು ಈ ಸಮಾಧಾನವನ್ನು ಹೇಳುವಂತಿಲ್ಲ.

ಹಾಗಾದರೆ, ಕೃಷ್ಣನಿಗೆ ನಿಂದೆಯಿಂದ ಮನಸಿಗೆ ನೋವು ಉಂಟಾಗುವುದಿಲ್ಲ ವೆಂದರೆ ಕೋಪವೇಕೆ ಬರುತ್ತದೆ, ಕೋಪದಿಂದ ಅಸುರ ಸಂಹಾರ ಏಕೆ ಮಾಡುತ್ತಾನೆ ಎಂಬ ಪ್ರಶ್ನೆ ಸಹಜ. ಆದರೆ ಅವನ ಕೋಪ ನಿಂದಾಶ್ರವಣದ ದುಃಖದಿಂದ ಉಂಟಾದುದಲ್ಲ. ಅನಾದಿಕಾಲದಿಂದ ಅಸುರರಲ್ಲಿ ಕೋಪ, ಸುರರಲ್ಲಿ ಪ್ರೀತಿವಾತ್ಸಲ್ಯಗಳು ಅಂತಃಕರಣದಲ್ಲಿ ಸ್ವರೂಪಭೂತವಾಗಿ ಇವೆ. ಆಯಾಕಾಲದಲ್ಲಿ ವ್ಯಕ್ತವಾಗುತ್ತವೆ ಅಷ್ಟೆ.

ಭಗವಂತನಿಗೆ ಕೋಪ ಬರುವುದಿಲ್ಲವೆಂದರೆ ವೇನನನ್ನು ತಮಸ್ಸಿಗೆ ಏಕೆ ಕಳಿಸಿದ ? ಕೋಪ ಬರುತ್ತದೆ ಎಂದರೆ ಶಿಶುಪಾಲನಿಗೆ ಸಾಯುಜ್ಯವನ್ನು ಏಕೆ ನೀಡಿದ? ಈ ಪ್ರಶ್ನೆಗೆ ಬೇರೆ ವ್ಯಾಖ್ಯಾನಕಾರರಲ್ಲಿ ಉತ್ತರವಿಲ್ಲ. ನಾವು ಹೇಳುತ್ತೇವೆ- ವೇನನ ವಿಷಯದಲ್ಲಿ ಅನಾದಿಕಾಲದಿಂದ ಇದ್ದ ಕೋಪವೇ ನಿಂದೆಯಿಂದ

ವ್ಯಕ್ತವಾಯಿತು. ಶಿಶುಪಾಲನಿಗೆ ವೇನನಂತೆ ಹರಿಯಲ್ಲಿ ಸ್ವಾಭಾವಿಕ ದ್ವೇಷವಿಲ್ಲದ್ದರಿಂದ ಹರಿಗೂ ಅವನ ಮೇಲೆ ಅನಾದಿಕೋಪವಿರಲಿಲ್ಲ. ಅದರಿಂದ ಅವನು ನಿಂದಿಸಿದರೂ ಅದನ್ನು ಕ್ಷಮಿಸಿ ಅವನ ಮೇಲಿದ್ದ ಅನಾದಿಪ್ರೀತಿಯಿಂದಲೇ ಅನುಗ್ರಹಿಸಿದ.

ಕೈವಲ್ಯಾದ್ ದೇಹಾದ್ಯಭಾವಾದೇವ ।
ಅಕರ್ತುಸ್ತಸ್ಯಾನ್ಯಃ ಕರ್ತಾ ನ ವಿದ್ಯತೇ ।
ಇದಂ ಹಿಂಸಾ । ವ್ಯತ್ಯಯೋಽತಿಶಯ ಕುತ್ಸನ ಭೇದೇಷ್ವಿತಿ
ಸೂತ್ರಾತ್ ।

'ಕೈವಲ್ಯ'ವೆಂದರೆ, ಭಗವಂತನಿಗೆ ತನಗಿಂತ ಭಿನ್ನವಾದ ಶರೀರ ಇಂದ್ರಿಯ ಅಂತಃಕರಣಗಳಿಲ್ಲ ಎಂದರ್ಥ.

'ಅಕರ್ತೃ' ಎಂದರೆ ಅವನಿಗೆ ಜನ್ಮನೀಡುವ ಇನ್ನೊಬ್ಬ ಕರ್ತನಿಲ್ಲ ಎಂದರ್ಥ.

'ಇದಂ ಹಿಂಸಾ' ಎಂದು ಅನ್ವಯ ಹೇಳಬೇಕು. 'ಇಯಂ ಹಿಂಸಾ' ಎನ್ನದೆ ಇದಂ ಎಂದು ಲಿಂಗವ್ಯತ್ಯಾಸ ಮಾಡಿದುದು ಮಹಾವಾಕ್ಯರಣ ಸೂತ್ರಕ್ಕೆ ಸಮ್ಮತವಾಗಿದೆ. ಅತಿಶಯ ನಿಂದೆ ಭೇದ ಇವುಗಳನ್ನು ಹೇಳುವ ಅಭಿಪ್ರಾಯವಿರುವಾಗ ವ್ಯತ್ಯಾಸ ಮಾಡಬಹುದು ಎಂದು ಸೂತ್ರದಲ್ಲಿ ಹೇಳಿದೆ.

ಬೇರೆ ವ್ಯಾಖ್ಯಾನಕಾರರು 'ಪರಸ್ಯ ದಮಕರ್ತುರ್ಹಿ' ಎಂದು ಅಪಪಾಠವಿಟ್ಟುಕೊಂಡಿದ್ದರಿಂದ 'ಇದಂ ಹಿಂಸಾ' ಎಂಬ ಲಿಂಗವ್ಯತ್ಯಾಸದ ಸಮಸ್ಯೆ ಅವರಿಗೆ ಇಲ್ಲ. 'ದಮಕರ್ತುಃ' ಎನ್ನುವುದು ತತ್ಪುರುಷವೋ ಬಹುವ್ರೀಹಿಯೊ ಎಂಬ ಸಂದೇಹವೂ ಅವರಿಗೆ ಬರುವುದಿಲ್ಲ. 'ಪರಸ್ಯೇದಮಕರ್ತುರ್ಹಿ' ಎಂಬ ಪಾಠದಲ್ಲಿ ಅಕರ್ತೃಶಬ್ದ ಬಹುವ್ರೀಹಿ ಸಮಾಸವೆಂದು ವಿವಕ್ಷಿತವಾಗಿದೆ. ಇದಂ ಎಂದು ನಪುಂಸಕಲಿಂಗ ಪ್ರಯೋಗ ಮಾಡಿದ್ದು ಭಗವಂತನಿಗೆ ಹಿಂಸೆ ನೋವು ಆದೀತೆಂದು ಆಲೋಚಿಸುವುದೂ ಸರಿಯಲ್ಲ ಎಂದು ನಿಂದೆ ಮಾಡುವ ವಿವಕ್ಷೆಯನ್ನು ತೋರಿಸುವುದಕ್ಕಾಗಿ. ಅತಿಶಯ ಮತ್ತು ಭೇದವನ್ನು ಅಂದರೆ ಸರ್ವೋತ್ತಮತ್ವ ಸರ್ವವಿಲಕ್ಷಣತ್ವಗಳನ್ನು ಹೇಳುವ ಅಭಿಪ್ರಾಯವನ್ನೂ ಗ್ರಹಿಸಬಹುದು.

❖ ❖ ❖

ಶಿಶುಪಾಲನಂಥ ಸಜ್ಜೀವರು ಭಗವಂತನನ್ನು ನಿಂದಿಸಿದಾಗ ಆತ ಕೋಪ ಮಾಡಲಿಲ್ಲ. ಅವನ ಸ್ವಾಭಾವಿಕ ಭಕ್ತಿಯನ್ನೇ ವ್ಯಕ್ತಮಾಡಿ ಅದಕ್ಕೇ ಒಲಿದ.

ಆದರಿಂದ ಎಲ್ಲರೂ ಭಕ್ತಿಯಿಂದಲೆ ಭಗವಂತನನ್ನು ಆರಾಧಿಸಬೇಕೆಂದು ನಾರದರು ಧರ್ಮರಾಜನಿಗೆ ಉಪದೇಶಿಸುತ್ತಾರೆ.

ತಸ್ಮಾದ್‌ವೈರಾನುಬಂಧೇನ ನಿರ್ವೈರೇಣ ಭಯೇನ ವಾ ॥
ಸ್ನೇಹಾತ್‌ಕಾಮೇನ ವಾ ಯುಂಜ್ಯಾತ್‌ಕಥಂಚಿನ್ನೇಕ್ಷತೇ ಪೃಥಕ್ ॥ ೨೭ ॥

ಶಿಶುಪಾಲನಂಥವರು ಭಗವಂತನ ನಿಂದೆ ಮಾಡಿದರೆ ಅವನ ಮನಸ್ಸಿಗೆ ನೋವಾಗದಿರುವುದರಿಂದ ಅವರು ವೈರಭಾವದಿಂದಾಗಲಿ ಭಕ್ತಿಯಿಂದಾಗಲಿ ಭಯ, ಬಂಧುಸ್ನೇಹ, ಕಾಮಭಾವನೆಗಳಿಂದಲಾಗಲಿ ಯಾವುದೇ ರೀತಿಯಿಂದ ಭಗವಂತನಲ್ಲಿ ಮನಸ್ಸಿಟ್ಟು ಅದನ್ನು ಭಕ್ತಿಭರಿತವನ್ನಾಗಿಸಿಕೊಳ್ಳಬಹುದು. ಹಾಗೇ ಭಗವಂತ ಅವರಿಗೆ ಪ್ರೇರಿಸುತ್ತಾನೆ. ಅದಕ್ಕೆ ಕಾಲವನ್ನು ಇದಿರು ನೋಡುತ್ತಾನೆ.

ಅಥವಾ ಹೀಗೆ ಅರ್ಥ-

ಭಗವಂತನಿಗೆ ನಿಂದೆಯಿಂದ ನೋವಾಗದಿರುವುದರಿಂದ ದೃಢವಾದ ವೈರಭಾವದಿಂದಾಗಲಿ ವೈರವಿಲ್ಲದ ಭಕ್ತಿಯಿಂದಾಗಲಿ ಭಯ ಬಂಧುಸ್ನೇಹ ಕಾಮಭಾವನೆಗಳಿಂದಾಗಲಿ ಭಗವಂತನಲ್ಲಿ ಮನಸ್ಸನ್ನಿಟ್ಟಾಗ ಅದು ಭಗವಂತನನ್ನು ಹೊರತು ಬೇರೇನನ್ನೂ ಆಲೋಚಿಸುವುದಿಲ್ಲ. ಅದು ಅದರ ಸ್ವಭಾವ.

ಇಲ್ಲಿ ಭಾಗವತದಲ್ಲಿ ದ್ವೇಷಕ್ಕೆ ಮುಕ್ತಿಸಾಧನತ್ವವನ್ನು ಹೇಳಿದಂತೆ ಕಾಣುತ್ತದೆ. ಬೇರೆ ವ್ಯಾಖ್ಯಾನಕಾರರು ಅದನ್ನು ಒಪ್ಪಿಕೊಂಡಿದ್ದಾರೆ. [೧]ಶ್ರೀಧರ ವ್ಯಾಖ್ಯಾನ ಹೇಳುತ್ತದೆ- ನಿಂದೆ ಮಾಡಿದರೆ ಭಗವಂತನಿಗೆ ಕೋಪಬರುವುದಿಲ್ಲ. ನಿಂದಕನಿಗೆ ಪಾಪ ಮಾತ್ರ ಬರುತ್ತದೆ. ಅದಕ್ಕೆ ಭಕ್ತಿಯಿಂದಾಗಲಿ ದ್ವೇಷದಿಂದಾಗಲಿ ಭಯ ಕಾಮ ಮುಂತಾದ ಬೇರೆ ಭಾವಗಳಿಂದಾಗಲಿ ಧ್ಯಾನ ಮಾಡಬೇಕು. ಆ ಧ್ಯಾನವೆ ನಿಂದೆಯಿಂದ ಬಂದ ಪಾಪವನ್ನು ಪರಿಹಾರ ಮಾಡುತ್ತದೆ. ಮತ್ತು ಸಾಯುಜ್ಯವನ್ನೂ ತಂದುಕೊಡುತ್ತದೆ' ಎಂದು.

---

೧. ಯಸ್ಮಾದ್ ಭಗವತೋ ನಿಂದಾದಿಕೃತಂ ವೈಷಮ್ಯಂ ನಾಸ್ತಿ ತಸ್ಮಾದ್ ಯೇನಕೇನಾಪ್ಯುಪಾಯೇನ ಧ್ಯಾಯತಸ್ತೇನೈವ ಧ್ಯಾನೇನ ನಿಂದಾದಿಕೃತ ಪಾಪಸ್ಯಾಪಿ ನಾಶಾತ್ ಸಾಯುಜ್ಯಂ ಯುಕ್ತಮಿತ್ಯಾಶಯೇನಾಹ ತಸ್ಮಾದಿತಿ ಸಪ್ತಭಿಃ। ಯುಂಜ್ಯಾನ್ಮನ ಇತಿ ಶೇಷಃ। ಯಸ್ಮಾದೇತೈರುಪಾಯೈಃ ಪೃಥಜ್ ನೇಕ್ಷತೇ। ವೈರೇಣ ಯಾಽನುಚಿಂತಾ ಚಿಂತನಂ ತಯೈವ ಪೂತಃ ಪಾಪ್ಮಾ ಯೇಷಾಂ ತೇ ತಂ ಪ್ರಾಪುಃ। -ಶ್ರೀಧರಃ

ಆದರೆ ದ್ವೇಷದಿಂದ ನಿಂದೆ ಮಾಡಿದರೆ ಪಾಪ, ದ್ವೇಷದಿಂದ ಧ್ಯಾನ ಮಾಡಿದರೆ ಪಾಪಪರಿಹಾರ ಎನ್ನುವುದು ವ್ಯಾಹತ. ಆ ಧ್ಯಾನದಿಂದ ಇನ್ನೂ ಹೆಚ್ಚಿನ ಪಾಪ ಎನ್ನಬೇಕು. ನಿಂದೆಯಿಂದ ಕೋಪ ಬಾರದಿದ್ದರೂ, ಧ್ಯಾನದಿಂದ ಪ್ರೀತಿಯೂ ಉಂಟಾಗುವುದಿಲ್ಲ. ಪ್ರೀತಿ ಉಂಟಾಗದೆ ಮೋಕ್ಷ ನೀಡುವುದಿಲ್ಲ. ಧ್ಯಾನ ವ್ಯರ್ಥವಾಗುತ್ತದೆ.

'ಯಮೇವೈಷ ವೃಣುತೇ' 'ನಾನ್ಯಃ ಪಂಥಾ' ಇತ್ಯಾದಿ ಶ್ರುತಿಗಳಲ್ಲಿ 'ಭಕ್ತ್ಯಾ ತ್ವನನ್ಯಯಾ ಲಭ್ಯಃ' ಇತ್ಯಾದಿ ಸ್ಮೃತಿಗಳಲ್ಲಿ ಎಲ್ಲೆಡೆ ಭಗವಂತನ ಪ್ರೀತಿಗಾಗಿ ಭಕ್ತಿಯನ್ನು ವಿಧಾನ ಮಾಡಿದ್ದಾರೆ ಹೊರತು ದ್ವೇಷವನ್ನು ಎಲ್ಲಿಯೂ ವಿಧಾನ ಮಾಡಿಲ್ಲ. ಮಾಡಲು ಅದು ಯೋಗ್ಯವೂ ಅಲ್ಲ. ವಿಹಿತವೆಂಬ ಭಾವನೆಯಿಂದ ಶಿಷ್ಟರು ದ್ವೇಷವನ್ನು ಅನುಷ್ಠಾನ ಮಾಡಿದ್ದೂ ಕಂಡುಬರುವುದಿಲ್ಲ. ದ್ವೇಷ ರಾಗತಃ ಪ್ರಾಪ್ತವಾದ್ದರಿಂದ ಅದನ್ನು ವಿಧಾನ ಮಾಡಲೂ ಸಾಧ್ಯವಿಲ್ಲ. 'ಮಾಮಾತ್ಮ

ನಿಂದಾ ಹಿ ದ್ವಿವಿಧಾ। ಆನುಕೂಲ್ಯಮಯೀ ಪ್ರಾತಿಕೂಲ್ಯಮಯೀ ಚ। ತತ್ರ ಪ್ರಥಮಾ ಪ್ರೇಮವಿಲಾಸರೂಪೈವ। ದ್ವಿತೀಯಾ ದ್ವಿವಿಧಾ। ಭಗವದಭಿನಿವೇಶೋತ್ಥಾ ಭಗವದನಭಿನಿವೇಶೋತ್ಥಾ ಚ। ತತ್ರ ಪ್ರಥಮಯಾ ಶಿಶುಪಾಲಾದಿಕೃತನಿಂದಯಾ ಜನ್ಯಮಾನಮೇವ ದುರದೃಷ್ಟಂ ತತ್ಕಾರಣೇನೈವ ಭಗವತ್ಯಭಿನಿವೇಶೇನ ಸದ್ಯ ಏವ ವಿನಷ್ಟೀಕೃತ್ಯ ಭಕ್ತಿಯೋಗೇನಾಪಿ ಸಮಕಕ್ಷತಾಂ ಪ್ರಾಪ್ಯ ವಿಧಿಯೋಗ್ಯತ್ವಮಪಿ ಪ್ರಾಪ್ಯತೇ ಇತ್ಯಾಹ ತಸ್ಮಾದಿತಿ ಸಪ್ತಭಿಃ। -ವಿಶ್ವನಾಥಃ

ಅತ್ರ ಯುಂಜ್ಯಾದಿತಿ ಲಿಙಾ ವೈರಾನುಬಂಧಾದಿನಾ ಭಗವತಿ ಮನೋಽಭಿನಿವೇಶಂ ಕುರ್ಯಾದಿತಿ ವಿಧಿರವಗಮ್ಯತೇ । ಸ ಚ ಶಿಶುಪಾಲಾದಿಷು ನ ಸಂಭವತಿ। ತೇಷಾಂ ರಾಗಪ್ರಾಪ್ತತ್ವಾತ್। ಭಗವತ್ಪ್ರಾತಿಕೂಲ್ಯಸ್ಯ ವಿಧಾನಾನರ್ಹತ್ವಾತ್। ವಿಧಿ ದೃಷ್ಟ್ಯಾ ವೈರಾನುಬಂಧಸ್ಯ ಶಿಷ್ಟಾನುಷ್ಠಾನಾದರ್ಶನಾತ್। ತಸ್ಮಾದೇತತ್ ಪದ್ಯಂ ಕೇಚಿದೇವಂ ವ್ಯಾಚಕ್ಷತೇ ಯಸ್ಮಾತ್ ಸ ವೈರಭಾವವತಾಮಪಿ ಹಿತಂ ಕರೋತಿ ತಸ್ಮಾತ್ ತತ್ರ ವೈರಸ್ಯಾನೌಚಿತ್ಯಾತ್ ವೈರಭಾವ ವ್ಯತಿರಿಕ್ತೇನೈವ ಭಾವೇನ ಮನೋಽಭಿನಿವೇಶಯೇದಿತ್ಯಾಹ ತಸ್ಮಾದಿತಿ। ವೈರೇ ಇವ ಅನುಬಂಧಶ್ಚಿತ್ತಾಭಿನಿವೇಶೋ ಯತ್ರ ತೇನ। ತಥಾ ಸ್ನೇಹಾತ್ ಕಾಮೇನ ಸ್ನೇಹೈಕ ಹೇತುಕೋ ಯಃ ಕಾಮಸ್ತೇನ। ಕೀದೃಶೇನ ಭಯೇನ ಸ್ವಜನಾರ್ಯ ಪಥತ್ಯಾಗೋತ್ಥ ಭಯವತಾ ವ್ರಜಯುವತಿಕಾನುಗಾಮಿನಾ ಕಾಮೇನೇತ್ಯರ್ಥಃ। ಭಯೇನ ವೇತಿ ವಾಶಬ್ದಾತ್ ನಿರ್ಭಯೇನ ಕಾಮೇನ ಚ ರುಕ್ಮಿಣ್ಯಾದಿಕಾಮಾನುಗಾಮಿನಾ ಕಾಮೇನೇತ್ಯರ್ಥಃ।

-ವಿಶ್ವನಾಥಃ

ಅತ್ಯಂತಸಂರಂಭಕೃತಭಾವನಾಪ್ರಕರ್ಷೇಣ ಸ್ವಹೇತುಭೂತ ಸಂರಂಭಭಯಯೋರಪಿ ವಿಸ್ಮರಣಾತ್ ಭಾವನಾಯಾಶ್ಚ ನಿರತಿಶಯಾನಂದಾವಹ ಶುಭಾಶ್ರಯವಿಷಯತ್ವೇನ ಪ್ರೀತಿರೂಪಾಪನ್ನತ್ವಾತ್ ತಸ್ಯಾ ಅಪಿ ಭಗವತ್ಪ್ರಾಪ್ತಿ ಸಾಧನತ್ವಮಿತಿ। ಯೇಷಾಂ ಭಾವನಾಪ್ರಕರ್ಷೇಣ ಸ್ವಹೇತುಭೂತ ವೈರಾದಿ ವಿಸ್ಮರಣಾಭಾವೋ ವೇನಾದೀನಾಂ ತೇಷಾಂ ಭಗವತ್ಪ್ರಾಪ್ತ್ಯಭಾವಃ। -ವೀರರಾಘವಃ

ಪರದೇಹೇಷು ಪ್ರದ್ವಿಷಂತಃ' ಎಂದು ಭಗವದ್ಗೀತೆಯಲ್ಲಿ ದ್ವೇಷಿಗಳಿಗೆ ಅಧಮಗತಿ ಎಂದು ಸಾರಿ ಹೇಳಿದ್ದಾನೆ, ಶ್ರೀಕೃಷ್ಣ.

ವಿಶ್ವನಾಥ ವ್ಯಾಖ್ಯಾನ ಹೇಳುತ್ತದೆ- ವೇನನಂತೆ ಬರಿ ನಿಂದೆ ಮಾಡಿದರೆ ತಮಸ್ಸು. ಶಿಶುಪಾಲನಂತೆ ಧ್ಯಾನಪೂರ್ವಕವಾಗಿ ನಿಂದೆ ಮಾಡಬೇಕು. ಆಗ ಉಂಟಾಗುವ ಪಾಪವನ್ನು ಆ ಧ್ಯಾನವೇ ಕಳೆಯುತ್ತದೆ. ಇದರಿಂದ ನಿಂದೆ ಭಕ್ತಿಯಂತೆಯೇ ಮೋಕ್ಷಸಾಧನವಾಗುತ್ತದೆ' ಎಂದು. ಆದರೆ ಇದೂ ಹಿಂದಿನಂತೆಯೇ ವ್ಯಾಹತ. ಬರಿ ನಿಂದೆಗಿಂತ ಧ್ಯಾನಪೂರ್ವಕನಿಂದೆ ಹೆಚ್ಚು ಪಾಪಕ್ಕೇ ಕಾರಣವೆನ್ನಬೇಕು. ಮತ್ತು 'ಧ್ಯಾನಪೂರ್ವಕವಾಗಿ ನಿಂದೆ ಮಾಡಬೇಕೆಂದು ಎಲ್ಲಿಯೂ ವಿಧಿ ಇಲ್ಲ, ಹಾಗೆ ಶಿಷ್ಟರು ಅನುಷ್ಠಾನ ಮಾಡುವುದೂ ಇಲ್ಲ. ಶಿಶುಪಾಲಾದಿಗಳು ಅನುಷ್ಠಾನ ಮಾಡಿದ್ದು ಅದು ವಿಹಿತ ಎಂಬ ಭಾವನೆಯಿಂದಲ್ಲ. ಅವರಿಗೆ ಅದು ರಾಗತಃ ಪ್ರಾಪ್ತ' ಎಂದು ವಿಶ್ವನಾಥ ವ್ಯಾಖ್ಯಾನವೇ ಹೇಳಿದೆ. ಮತ್ತು ದ್ವೇಷಭಯಗಳಿಗೆ ಮೋಕ್ಷಸಾಧನತ್ವವನ್ನು ನಿರಾಕರಿಸಿ ಭಾಗವತಶ್ಲೋಕ ಕಾಮಕ್ಕೆ ಮೋಕ್ಷಸಾಧನತ್ವವನ್ನು ಹೇಳುತ್ತದೆ ಎಂದೂ ಅದೇ ವ್ಯಾಖ್ಯಾನ ಹೇಳಿದೆ. ಕಾಮ ಎರಡು ವಿಧ, ವಿವಾಹಿತ ಸ್ತ್ರೀಯು ಪರಪುರುಷರಲ್ಲಿ ನಡೆಸುವ ಗುಪ್ತ ಪ್ರಣಯ ಮತ್ತು ಪತ್ನಿ ಪತಿಯೊಡನೆ ನಡೆಸುವ ನಿರ್ಭಯವಾದ ಪ್ರಣಯ ಎಂದು. ಮೊದಲಿನದು ಗೋಪಿಯರಿಗೆ ಮೋಕ್ಷಸಾಧನ. ಎರಡನೆಯದು ಕೃಷ್ಣಮಹಿಷಿಯರಿಗೆ ಮೋಕ್ಷ ಸಾಧನ ಎಂದು. ವಸ್ತುತಃ ಕಾಮಭಾವನೆಯಿಂದ ಗೋಪಿಯರು ಕೃಷ್ಣನನ್ನು ಕಾಮುಕನೆಂದು ಅನ್ಯಥಾ ತಿಳಿದುದುಂಟು. ಅದರಿಂದ ಕಾಮ ಮೋಕ್ಷ ಸಾಧನವಲ್ಲ. ಅವರ ಸ್ವಾಭಾವಿಕ ಭಕ್ತಿ ಹೀಗೆ ಕೆಲವೊಮ್ಮೆ ಕಾಮದಿಂದ ಕಲುಷಿತವಾದರೂ ಹಂಸಕ್ಷೀರನ್ಯಾಯದಿಂದ ಕೃಷ್ಣ ಅವರ ಭಕ್ತಿಗೇ ಒಲಿದನೆನ್ನಬೇಕು.

ವೀರರಾಘವ ವ್ಯಾಖ್ಯಾನದಲ್ಲಿ ಹೀಗೆ ಹೇಳಿದೆ- 'ಅತ್ಯಂತ ಗಾಢವಾದ ದ್ವೇಷದಿಂದ ಭಗವಂತನನ್ನು ಧ್ಯಾನ ಮಾಡಿದಾಗ ದ್ವೇಷ ಮರೆತುಹೋಗುತ್ತದೆ. ಆಗ ಧ್ಯಾನ ಪರಮಾನಂದಕರನಾದ ಭಗವಂತನಲ್ಲಿ ನೆಲೆನಿಂತು ಪ್ರೀತಿರೂಪವಾಗಿ ಪರಿಣಮಿಸುತ್ತದೆ. ಆಗ ಅದು ಮೋಕ್ಷಸಾಧನ. ದ್ವೇಷ ಮರೆಯಾಗದಿದ್ದರೆ ವೇನನಂತೆ ತಮಸ್ಸಿಗೆ ಸಾಧನವಾಗುತ್ತದೆ ಎಂದು. ಆದರೆ ದ್ವೇಷಚಿಂತನೆಯಲ್ಲಿ ಮುಳುಗಿ ತನ್ಮಯವಾಗುವ ಅವಸ್ಥೆಯಲ್ಲಿ ದ್ವೇಷವನ್ನು ಮರೆಯುವುದು ನನ್ನ ತಾಯಿ ಬಂಜೆ ಎಂಬತ ಸ್ವವ್ಯಾಹತ.

ಕಥಂಚಿನ್ನೇಕ್ಷತೇ ಪೃಥಕ್ ತತ್ರೈವ ಮನಸೋಽಭಿನಿವೇಶೇನ ತದನ್ಯಂ ನೇಕ್ಷತೇ ।

ವೈರಾದೀನಾಮೇಕತಮೇನಾಪಿ ಯೋ ಯುಂಜ್ಯಾತ್ ಸ ನೇಕ್ಷತೇ ಇತಿ
ಸ್ವಭಾವಕಥನಂ, ನ ವಿಧಿಃ ।

'ಕಥಂಚಿನ್ನೇಕ್ಷತೇ ಪೃಥಕ್' ಎಂದರೆ 'ಭಗವಂತನಲ್ಲಿಯೇ ಮನಸ್ಸು ಲೀನವಾಗುವುದರಿಂದ ಬೇರೆ ಪದಾರ್ಥವನ್ನು ಅದು ಆಲೋಚಿಸುವುದಿಲ್ಲ' ಎಂದರ್ಥ.

ವೈರ ಮುಂತಾಗಿ ಯಾವುದಾದರೊಂದು ಭಾವನೆಯಿಂದ ಯಾರು ಭಗವಂತನಲ್ಲಿ ಮನಸ್ಸನ್ನಿಡುವನೋ ಅವನು ಬೇರೆ ಪದಾರ್ಥವನ್ನು ಆಲೋಚಿಸುವುದಿಲ್ಲ ಎಂದು ಪ್ರಾಸಂಗಿಕವಾಗಿ ಮನಸಿನ ಏಕಾಗ್ರತೆ ಎಂದರೆ ಹೀಗಿರುತ್ತದೆ ಎಂದು ಸ್ವಭಾವವವನ್ನು ಹೇಳಿದ್ದೇ ಹೊರತು, ವೈರಭಾವನೆಯಿಂದ ಮನಸ್ಸಿಡಬೇಕೆಂದು ವಿಧಾನ ಮಾಡಿದ್ದಲ್ಲ.

ಕರ್ಮಣಾ ಮನಸಾ ವಾಚಾ ಯೋ ದ್ವಿಷ್ಯಾದ್ ವಿಷ್ಣುಮವ್ಯಯಂ।
ಮಜ್ಜಂತಿ ಪಿತರಸ್ತಸ್ಯ ನರಕೇ ಶಾಶ್ವತೀಃ ಸಮಾಃ ।
ತಾನಹಂ ದ್ವಿಷತಃ ಕ್ರೂರಾನ್ ಸಂಸಾರೇಷು ನರಾಧಮಾನ್ ।
ಕ್ಷಿಪಾಮ್ಯಜಸ್ರಮಶುಭಾನ್ ಆಸುರೀಷ್ವೇವ ಯೋನಿಷು ।
ಆಸುರೀಂ ಯೋನಿಮಾಪನ್ನಾ ಮೂಢಾ ಜನ್ಮನಿ ಜನ್ಮನಿ ।
ಮಾಮಪ್ರಾಪ್ಯೈವ ಕೌಂತೇಯ ತತೋ ಯಾಂತ್ಯಧಮಾಂ ಗತಿಂ ॥
ಅವಜಾನಂತಿ ಮಾಂ ಮೂಢಾ ಮಾನುಷೀಂ ತನುಮಾಶ್ರಿತಂ ।
ಪರಂ ಭಾವಮಜಾನಂತೋ ಮಮ ಭೂತಮಹೇಶ್ವರಂ ।
ಮೋಘಾಶಾ ಮೋಘಕರ್ಮಾಣೋ ಮೋಘಜ್ಞಾನಾ ವಿಚೇತಸಃ ।
ರಾಕ್ಷಸೀಮಾಸುರೀಂ ಚೈವ ಪ್ರಕೃತಿಂ ಮೋಹಿನೀಂ ಶ್ರಿತಾಃ ।
ಯದನಿಂದತ್ ಪಿತಾ ಮೇ ತ್ವಾಮವಿದ್ವಾಂಸ್ತೇಜ ಐಶ್ವರಂ ।
ತಸ್ಮಾತ್ ಪಿತಾ ಮೇ ಪೂಯೇತ ದುರಂತಾದ್ ದುಸ್ತರಾದಘಾತ್ ।
ಹಿರಣ್ಯಕಶಿಪುಶ್ಚಾಪಿ ಭಗವನ್ನಿಂದಯಾ ತಮಃ ।
ವಿವಿಕ್ಷುರತ್ಯಗಾತ್ ಸೂನೋಃ ಪ್ರಹ್ಲಾದಸ್ಯಾನುಭಾವತಃ ।
ವರತೋಽಪಿ ನ ಮುಚ್ಯಂತೇ ದ್ವೇಷಿಣಃ ಶಾಪತೋಽಪಿತು
ಭಕ್ತಾ ನೈವ ನಿಪಾತ್ಯಂತೇ ಧರ್ಮಾಧರ್ಮೈಸ್ತಥೇತರೈಃ ।
ಅನ್ಯಾವೇಶಕೃತಂ ಯತ್ತು ತದ್ ವರಾದ್ಯೈರಪೋಹ್ಯತೇ ।
ತದ್ವಿರುದ್ಧಸ್ವಭಾವಾನಾಂ ಅನ್ಯಥಾ ನ ಕಥಂಚನ ॥ ಇತ್ಯಾದೇಃ ॥

ಕರ್ಮದಿಂದ ಮನಸಿನಿಂದ ಅಥವಾ ಮಾತಿನಿಂದ ಯಾರು ಅವ್ಯಯನಾದ ವಿಷ್ಣುವನ್ನು ದ್ವೇಷಿಸುವನೋ ಅವನ ಪಿತೃಗಳು ಬಹುವರ್ಷಕಾಲ ನರಕದಲ್ಲಿ ಮುಳುಗುವರು.

ನನ್ನನ್ನು ದ್ವೇಷಿಸುತ್ತ ಕ್ರೂರರಾಗಿದ್ದು ಅಮಂಗಳಕರರಾಗಿರುವ ಆ ಮನುಷ್ಯಾಧಮರನ್ನು ನಾನು ಪುನಃಪುನಃ ಸಂಸಾರದಲ್ಲಿಯೇ ಅದರಲ್ಲಿಯೂ ಅಸುರಜಾತಿಯಲ್ಲಿಯೇ ಹುಟ್ಟಿಸುತ್ತೇನೆ. ತಾಮಸ ಸ್ವಭಾವದ ಆ ಜನರು ಜನ್ಮಜನ್ಮಗಳಲ್ಲಿಯೂ ಅಸುರಜಾತಿಯಲ್ಲಿಯೇ ಹುಟ್ಟಿ ನನ್ನನ್ನು ದ್ವೇಷಿಸಿ ನನ್ನನ್ನು ಹೊಂದದೆಯೇ ಹೀನವಾದ ನಿತ್ಯನರಕವನ್ನು ಹೋಗಿ ಸೇರುತ್ತಾರೆ.

ಮನುಷ್ಯಶರೀರದಂತೆಯೇ ಕಾಣುವ ಶರೀರವನ್ನು ಧರಿಸಿದ ನನ್ನನ್ನು ಕಂಡು ತಾಮಸಪ್ರಕೃತಿಯ ಜನರು ನಿತ್ಯಗುಣಪೂರ್ಣವಾದ ಉತ್ತಮವಾದ ನನ್ನ ನಿಜಸ್ವರೂಪವನ್ನರಿಯದೆ ನನ್ನನ್ನು ಸಾಮಾನ್ಯನೆಂದು ಕಡೆಗಣಿಸುತ್ತಾರೆ. ಅಂದರೆ ಇತರ ದೇವತೆಗಳಂತೆಯೋ ಅಥವಾ ಅವರಿಗಿಂತ ಕಡಿಮೆಯವನೆಂದೋ ತಿಳಿಯುತ್ತಾರೆ. ಅವರು ಪರಲೋಕ ಸುಖಕ್ಕೆ ಆಸೆಪಡುವುದು ವ್ಯರ್ಥ. ಯಜ್ಞಾದಿ ಸತ್ಕರ್ಮವಾಚರಿಸುವುದು ವ್ಯರ್ಥ. ತತ್ವಜ್ಞಾನ ಸಂಪಾದಿಸುವುದೂ ವ್ಯರ್ಥ. ಅವರ ಮನಸ್ಸು ದ್ವೇಷಪೂರ್ಣ. ಇದಕ್ಕೆ ಕಾರಣ ವಿವೇಕವನ್ನು ಹಾಳುಮಾಡುವ ರಾಕ್ಷಸ ಅಥವಾ ಅಸುರಸ್ವಭಾವವನ್ನು ಅವರು ಆಶ್ರಯಿಸಿರುತ್ತಾರೆ.

ನನ್ನ ತಂದೆ ನಿನ್ನ ಸರ್ವಶಕ್ತಿಯನ್ನೂ ತೇಜಸ್ಸನ್ನೂ ನಿನ್ನನ್ನೂ ನಿಂದಿಸಿದ್ದಾನೆ. ಕೊನೆಯಿಲ್ಲದ, ದಾಟಲಸಾಧ್ಯವಾದ ಆ ಪಾಪದಿಂದ ನನ್ನ ತಂದೆ ಮುಕ್ತನಾಗಲಿ.

ಹಿರಣ್ಯಕಶಿಪು ಭಗವಂತನ ನಿಂದೆ ಮಾಡಿದ್ದರಿಂದ ತಮಸ್ಸನ್ನು ಪ್ರವೇಶಿಸಬೇಕಾಗಿತ್ತು. ಆದರೆ ಮಗನಾದ ಪ್ರಹ್ಲಾದನ ಪ್ರಭಾವದಿಂದ ಆ ಆಪತ್ತಿನಿಂದ ಪಾರಾದ.

ಭಗವಂತನನ್ನು ದ್ವೇಷಿಸುವವರು ವರದಿಂದಲೂ ಪುಣ್ಯದಿಂದಲೂ ಮೋಕ್ಷ ಪಡೆಯುವುದಿಲ್ಲ. ಭಕ್ತರು ಶಾಪದಿಂದಲೂ ಪಾಪದಿಂದಲೂ ತಮಸ್ಸಿನಲ್ಲಿ ಬೀಳುವುದಿಲ್ಲ. ದ್ವೇಷವಿರುದ್ಧ ಸ್ವಭಾವದವರಾದ ಸ್ವಾಭಾವಿಕ ಭಕ್ತರಿಗೆ ವರ ಮುಂತಾದವುಗಳಿಂದ ದ್ವೇಷ ಹೋಯಿತೆಂದರೆ ಆ ದ್ವೇಷ ಅಸುರಾ

ವೇಶದಿಂದ ಬಂದಿರುತ್ತದೆ. ಭಕ್ತಿವಿರುದ್ಧ ಸ್ವಭಾವದಿಂದಲ್ಲ. ಅದರಿಂದ ಸ್ವಾಭಾವಿಕ ದ್ವೇಷಿಗಳಿಗೆ ಮೋಕ್ಷವಿಲ್ಲ, ಸ್ವಾಭಾವಿಕ ಭಕ್ತರಿಗೆ ತಮಸ್ಸೂ ಇಲ್ಲ' ಎಂದು ಮುಂತಾಗಿ ವಚನಗಳು ಹೇಳಿರುವುದರಿಂದ ದ್ವೇಷದಿಂದ ಭಗವಂತನಲ್ಲಿ ಮನಸ್ಸನ್ನಿಡಬೇಕೆಂದು ಭಾಗವತ ವಿಧಾನ ಮಾಡುವುದಿಲ್ಲ.

ಯಸ್ಮಾದೇವ ಕೋಽಪ್ಯುಪದ್ರವೋ ನಾಸ್ತಿ ಭಗವತಸ್ತಸ್ಮಾದೇವ ದ್ವೇಷಾದಿನಾಽಪಿ ಮನೋ ಯೋಕ್ತುಂ ಶಕ್ಯತೇ । ತತ್‌ಪ್ರೇರಣಯಾ। ತಾದೃಶಾನಾಂ ತದೇವ ಚಿಂತಯತಿ ಚ। ಅನ್ಯಥಾ ಆತ್ಮನೋ ದುಃಖಕಾರಣಂ ದ್ವೇಷಾದಿಕಂ ಕಥಂ ಸರ್ವನಿಯಾಮಕೋ ಹರಿರುತ್ಪಾದಯೇತ್ ।

ನಿಂದೆಯಿಂದ ಭಗವಂತನಿಗೆ ಯಾವುದೇ ರೀತಿಯ ದುಃಖ ಉಂಟಾಗದೆ ಇರುವುದರಿಂದಲೇ ಶಿಶುಪಾಲಾದಿಗಳು ದ್ವೇಷ ಭಯ ಮುಂತಾದ ಭಾವನೆಗಳಿಂದಲೂ ಭಗವಂತನಲ್ಲಿ ಮನಸ್ಸಿಡಲು, ಕೊನೆಯಲ್ಲಿ ಮನಸ್ಸನ್ನು ಭಕ್ತಿಭರಿತವನ್ನಾಗಿಸಲು, ಶಕ್ಯವಾಗುತ್ತದೆ. ಹಾಗೇ ಭಗವಂತ ಪ್ರೇರಿಸುತ್ತಾನೆ. ಶಿಶುಪಾಲನಂಥ ಸ್ವಾಭಾವಿಕ ಭಕ್ತರ ಬಗ್ಗೆ ಅವರು ಯಾವ ರೀತಿಯಿಂದಲಾದರೂ ನನ್ನಲ್ಲಿ ಮನಸ್ಸಿಟ್ಟು ಕೊನೆಯಲ್ಲಿ ಭಕ್ತಿಮಾಡಲಿ ಎಂದೇ ಬಯಸುತ್ತಾನೆ. ಹಾಗಿಲ್ಲದಿದ್ದರೆ ತನಗೆ ಅನಿಷ್ಟವಾಗಿರುವ, ಮತ್ತು ಭಕ್ತನಿಗೆ ನರಕದುಃಖ ಕಾರಣವಾಗಿರುವ, ದ್ವೇಷಾದಿಗಳನ್ನು ಸರ್ವನಿಯಾಮಕನಾದ ಹರಿ ಹೇಗೆ ಉತ್ಪಾದಿಸಿಯಾನು ?

ಹೀಗಾಗಿ ನಿಂದೆಯಿಂದ ಶಿಶುಪಾಲಾದಿಗಳಿಗೆ ಮಹತ್ತಾದ ಪಾಪವೇ ಬಂದಿದ್ದರೂ ಅವರು ದ್ವೇಷದಿಂದ ಪರಮಾತ್ಮನಲ್ಲಿ ಮನಸ್ಸಿಟ್ಟ ಬಳಿಕ ಹರಿಪ್ರೇರಣೆಯಿಂದ ತಮ್ಮ ಸ್ವಾಭಾವಿಕ ಭಕ್ತಿಯನ್ನು ವ್ಯಕ್ತಮಾಡಿಕೊಂಡು, ಅಸುರಾವೇಶದಿಂದ ಹಿಂದೆ ಮಾಡುತ್ತಿದ್ದ ದ್ವೇಷವನ್ನು ಮರೆಯುತ್ತಾರೆ, ತಾವು ಅಂದಿನವರೆಗೆ ನಿಂದೆಯಿಂದ ಸಂಪಾದಿಸಿದ್ದ ಪಾಪವನ್ನು ಪೂರ್ತಿಯಾಗಿ ಭಕ್ತಿಯ ಬಲದಿಂದಲೆ ನಾಶಮಾಡಿಕೊಳ್ಳುತ್ತಾರೆ.

❖❖❖

ಶಿಶುಪಾಲನಂಥ ಸಜ್ಜೀವರು ಅಸುರಾವೇಶದಿಂದ ದ್ವೇಷ ಭಯ ಮುಂತಾದ ಭಾವನೆಗಳಿಂದ ಭಗವಂತನನ್ನು ನಿಂದಿಸುತ್ತಿದ್ದರೂ ಕೊನೆಯಲ್ಲಿ ಭಗವಂತನ ಅನುಗ್ರಹದಿಂದ ಶುದ್ಧಭಕ್ತಿಯನ್ನೇ ಮಾಡುತ್ತಾರೆ. ಇಂಥ ಸಜ್ಜೀವರು ಕಡಿಮೆ. ಎಲ್ಲ ದ್ವೇಷಿಗಳೂ ಹೀಗೆ ಭಕ್ತರಾಗುತ್ತಿದ್ದರೆ ಭಕ್ತರ ಸಂಖ್ಯೆ ಕಡಿಮೆ ಏಕೆ? ಅದರಿಂದ ಕೆಲವು

ಸಜ್ಜೀವರು ಮಾತ್ರ ಮೊದಲಿಗೆ ದ್ವೇಷಾದಿಗಳನ್ನು ಮಾಡಿ ಕೊನೆಯಲ್ಲಿ ಭಕ್ತರಾಗುವುದುಂಟೆಂದು ಒಪ್ಪಬೇಕು. ಕಣಜದ ಮರಿ ಹುಳು ಕಣಜವನ್ನು ಮೊದಲಿಗೆ ದ್ವೇಷಿಸಿದರೂ ಕೊನೆಯಲ್ಲಿ ಪ್ರೀತಿ ಮಾಡುತ್ತದೆ. ಸಜ್ಜೀವರೂ ಹೀಗೆ ಕೊನೆಯಲ್ಲಿ ಭಕ್ತಿಮಾಡಿ ಹಿಂದಿನ ಪಾಪವನ್ನೆಲ್ಲ ತೊಡೆದುಕೊಳ್ಳುತ್ತಾರೆ ಎಂದು ನಾರದರು ಧರ್ಮರಾಜನಿಗೆ ಉಪದೇಶಿಸುತ್ತಾರೆ.

ಯಥಾ ವೈರಾನುಬಂಧೇನ ಮರ್ತ್ಯಸ್ತನ್ಮಯತಾಮಿಯಾತ್ ।
ನ ತಥಾ ಭಕ್ತಿಯೋಗೇನ ಇತಿ ಮೇ ನಿಶ್ಚಿತಾ ಮತಿಃ ॥ ೨೮ ॥

ಕೀಟಃ ಪೇಶಸ್ಕೃತಾ ರುದ್ಧಃ ಕುಡ್ಯೇ ಯಾಂತಮನುಸ್ಮರನ್ ।
ಸಂರಂಭಭಯಯೋಗೇನ ವಿಂದತೇ ತತ್ಸರೂಪತಾಮ್ ॥ ೨೯ ॥

ಏವಂ ಕೃಷ್ಣೇ ಭಗವತಿ ಮಾಯಾಮನುಜ ಈಶ್ವರೇ ।
ವೈರೇಣ ಧೂತಪಾಪ್ಮಾನಸ್ತಮಾಪುರನುಚಿಂತಯಾ ॥ ೩೦ ॥

> ಸ್ವಭಾವತಃ ಭಕ್ತರಾದ ಶಿಶುಪಾಲನಂಥ ದ್ವೇಷಿಗಳಿಗೆ ಮಾತ್ರ ಕೊನೆಯಲ್ಲಿ ಭಗವಂತ ಭಕ್ತಿ ನೀಡುತ್ತಾನೆ ಎನ್ನಬೇಕು. ಏಕೆಂದರೆ ವೈರಭಾವದಿಂದ ಎಷ್ಟುಮಂದಿ ಭಗವಂತನಲ್ಲಿ ತನ್ಮಯರಾಗುವರೋ ಅಷ್ಟು ಮಂದಿ ಭಕ್ತಿಯಿಂದ ತನ್ಮಯರಾಗುವುದು ಕಂಡಿಲ್ಲ. ಇದು ನನ್ನ ಅಭಿಪ್ರಾಯ.
>
> ಕಣಜದ ಮರಿಹುಳು ಗೋಡೆಯ ಗೂಡಿನಲ್ಲಿ ಬಂಧಿತವಾಗಿರುತ್ತದೆ. ಅದಕ್ಕೆ ಕೋಪ. ಕಣಜದ ಧ್ವನಿಕೇಳಿ ಭಯ. ಅದು ಆಹಾರ ತಂದು ನೀಡುವುದರಿಂದ ಸ್ನೇಹ. ಕೊನೆಯಲ್ಲಿ ಸ್ನೇಹದಿಂದಲೆ ಕಣಜವನ್ನು ನೆನೆಯುತ್ತ ತಾನೂ ಒಂದು ಕಣಜವಾಗಿ ಹೊರಗೆ ಬರುತ್ತದೆ.
>
> ಹೀಗೆಯೆ ಸ್ವೇಚ್ಛೆಯಿಂದ ಮನುಷ್ಯನಂತೆ ತನ್ನನ್ನು ತೋರಿಕೊಳ್ಳುವ ಭಗವಾನ್ ಶ್ರೀಕೃಷ್ಣನಲ್ಲಿ ಮೊದಲಿಗೆ ವೈರ ಮಾಡಿದರೂ ಕೊನೆಯಲ್ಲಿ ಭಕ್ತಿಯಿಂದಲೆ ಪಾಪವನ್ನು ತೊಡೆದುಕೊಂಡು ಶಿಶುಪಾಲಾದಿಗಳು ಸಾರೂಪ್ಯವನ್ನು ಹೊಂದಿದರು.

ಇಲ್ಲಿ ವಿಧಿಬದ್ಧರಾಗಿ ಭಕ್ತಿಮಾಡಿದಾಗ ತನ್ಮಯತೆ ಹೆಚ್ಚು ಗಾಢವಾಗಿರುವುದಿಲ್ಲ ಸ್ವಾಭಾವಿಕವಾಗಿ ದ್ವೇಷ ಜ್ವಲಿಸಿದಾಗ ತನ್ಮಯತೆ ಹೆಚ್ಚು ಗಾಢವಾಗಿರುತ್ತದೆ. ಅದರಿಂದ ಪಾಪ ಪರಿಹಾರವಾಗುತ್ತದೆ. ಮೋಕ್ಷವೂ ಸುಲಭವಾಗಿ ಸಿಗುತ್ತದೆ. ಇದಕ್ಕೆ ದೃಷ್ಟಾಂತ ಕಣಜದ ಮರಿಹುಳು ಕಣಜವನ್ನು ದ್ವೇಷ ಭಯಗಳಿಂದ ಸತತವಾಗಿ ಚಿಂತಿಸಿ ತನ್ಮಯವಾಗಿ ಕೊನೆಗೆ ಕಣಜದ ಸಾರೂಪ್ಯ ಪಡೆಯುತ್ತದೆ ಎಂದು ಬೇರೆ

ವ್ಯಾಖ್ಯಾನಕಾರರು ಹೇಳುತ್ತಾರೆ. ಭಕ್ತಿಯೋಗಕ್ಕಿಂತಲೂ ದ್ವೇಷಚಿಂತನೆಯೆ ಶ್ರೇಷ್ಠ ಎನ್ನುವುದು ಭಾಗವತದ ಅಭಿಪ್ರಾಯ ಎನ್ನುತ್ತಾರೆ.[೧] ಆದರೆ ಭಕ್ತಿಗಿಂತ ದ್ವೇಷದಲ್ಲಿಯೆ ತನ್ಮಯತೆ ಹೆಚ್ಚು ಗಾಢವಾಗಿರುತ್ತದೆ. ಸುಲಭವೂ ಹೌದು ಎನ್ನುವುದನ್ನು ಒಪ್ಪಬಹುದು. ಬ್ರಹ್ಮದೇವರಿಗೆ ಹೊರತು ಉಳಿದವರಿಗೆ ಭಕ್ತಿಯಲ್ಲಿ ಅಷ್ಟು ಗಾಢವಾದ ತನ್ಮಯತೆ ಬರಲಾರದು. ಹಾಗೆಂದ ಮಾತ್ರಕ್ಕೆ ದ್ವೇಷದಲ್ಲಿ ಉಂಟಾಗುವ ತನ್ಮಯತೆ ಮೋಕ್ಷಕ್ಕೆ ಕಾರಣವೆನ್ನಲಾಗದು. ಭಾಗವತದಲ್ಲಿ ಹಾಗೆ ಹೇಳಿಯೇ ಇಲ್ಲ. ತೋಟದಲ್ಲಿ ಕಳೆ ಗಿಡ ತಾನಾಗಿಯೇ ಹುಲುಸಾಗಿ ಬೆಳೆಯುತ್ತದೆ. ಅದು ನಮಗೆ ಅನಿಷ್ಟ ಹಾಗೇ ದ್ವೇಷದಲ್ಲಿ ಬರುವ ತನ್ಮಯತೆ ಎಂಬುದು ಭಾಗವತದ ಅಭಿಪ್ರಾಯ. ಕಣಜದ ಮರಿಹುಳು ತಾಯಿ ಕಣಜವನ್ನು ಮೊದಲಿಗೆ ಭಯದಿಂದ ಕಂಡರೂ ಆಹಾರ ನೀಡುತ್ತದೆ ಎಂದು ಕೊನೆಗೆ ಪ್ರೀತಿಯನ್ನೇ ಮಾಡುತ್ತದೆ. ಪ್ರೀತಿಯಿಂದ ನೆನೆಯುತ್ತ ತನ್ಮಯವಾಗಿಯೇ ಕಣಜದ ಸಾರೂಪ್ಯವನ್ನು ಪಡೆಯುತ್ತದೆ. ಅದರಿಂದ ಈ ದೃಷ್ಟಾಂತವೂ ಭಕ್ತಿಗೆ ಮೋಕ್ಷಸಾಧನತ್ವವನ್ನೇ ಸ್ಪಷ್ಟಗೊಳಿಸುತ್ತದೆ.

ತತ್ರೈವ ಹೇತುಃ ಯಥಾ ವೈರಾನುಬಂಧೇನೇತಿ ।

ಯಥಾ ವೈರಾಭಿನಿವೇಶಿನಃ ತಥಾ ಭಕ್ತ್ಯಭಿನಿವೇಶಿನೋ ನ ಸಂತಿ । ತತ್ ಕಥಮನ್ಯಥಾ ? ಭಕ್ತಾನೇವ ಬಹೂನ್ ಹರಿಃ ಕುರ್ಯಾದಿತಿ ಭಾವಃ ।

ಶಿಶುಪಾಲನಂಥವರಿಗೆ ವೈರದಿಂದಲಾದಲೂ ಭಗವಂತನಲ್ಲಿ ಮನಸ್ಸನ್ನು ನಿಲ್ಲಿಸುವುದು ಶಕ್ಯವೆನ್ನುವ ವಿಷಯದಲ್ಲಿ ಸಮರ್ಥನೆಯನ್ನು ಈ ಶ್ಲೋಕದಲ್ಲಿ ನೀಡಲಾಗಿದೆ. ವೈರದಿಂದ ತನ್ಮಯತೆಯನ್ನು ಹೊಂದುವವರಷ್ಟು ಅಧಿಕ ಸಂಖ್ಯೆಯಲ್ಲಿ ಭಕ್ತಿಯಿಂದ ತನ್ಮಯತೆ ಹೊಂದುವವರಿಲ್ಲ ಎನ್ನುತ್ತದೆ ಈ ಶ್ಲೋಕ. ಭಕ್ತಿಯಿಂದ ತನ್ಮಯತೆ ಸುಲಭವಲ್ಲ ಎಂದು ಅಭಿಪ್ರಾಯ. ಸುಲಭವಾಗಿರುತ್ತಿದ್ದರೆ ವೈರದಿಂದ ತನ್ಮಯತೆ ಪಡೆಯುವವರೇ ಅಧಿಕ ಸಂಖ್ಯೆಯಲ್ಲಿ ಹೇಗೆ ಕಂಡುಬರುತ್ತಿದ್ದರು? ಭಕ್ತರನ್ನೇ, ಭಕ್ತಿಯಿಂದ ತನ್ಮಯತೆ ಹೊಂದುವವರನ್ನೇ, ಅಧಿಕಸಂಖ್ಯೆಯಲ್ಲಿ ಭಗವಂತ ಸೃಷ್ಟಿ ಮಾಡುತ್ತಿದ್ದ ಎಂದು ಅಭಿಪ್ರಾಯ.

---

೧. ತೇಷ್ವಪಿ ವೈರಾನುಬಂಧಃ ಶ್ರೇಷ್ಠ ಇತ್ಯಾಹ ಯಥೇತಿ। ನ ತಥಾ ಭಕ್ತಿಯೋಗೇನಾಪಿ। ಅತ್ರ ದೃಷ್ಟಾಂತಃ ಕೀಟಃ ಪೇಶಸ್ಕೃತಾ ಭ್ರಮರೇಣ ಸಂರಂಭೋ ದ್ವೇಷೋ ಭಯಂ ಚ ಸ ಏವ ಯೋಗಸ್ತೇನ। ವೈರೇಣ ಯಾಽನುಚಿಂತಾ ಚಿಂತನಂ ತಯೈವ ಪೂತಃ ಪಾಪ್ಮಾ ಯೇಷಾಂ ತೇ ತಂ ಪ್ರಾಪುಃ । -ಶ್ರೀಧರಃ

ಕೀಟಃ ಪೇಶಸ್ಕೃತೇತ್ಯಾದಿ ಚೈದ್ಯಾದೀನಾಂ ಭಕ್ತಿಯುತತ್ವಪ್ರತಿಪಾದನಂ।
ಸ್ನೇಹಾದ್ಯಾಯತನನಾಶಾದಿನಾಪ್ಯುಪದ್ರವೋಽಸ್ಯ ನಾಸ್ತೀತಿ
ನಿರ್ವೈರೇಣೇತ್ಯಾದ್ಯುಕ್ತಂ।

'ಕೀಟಃ ಪೇಶಸ್ಕೃತಾ ರುದ್ಧಃ' ಎಂದು ಮುಂತಾಗಿ ಕೀಟ ದೃಷ್ಟಾಂತವನ್ನು ಕೊಟ್ಟಿರುವುದು ಭಕ್ತಿಯಿಂದಲೇ ಶಿಶುಪಾಲಾದಿಗಳು ಭಗವಂತನ ಸಾರೂಪ್ಯ ಪಡೆದರೆಂಬ ವಿಷಯದ ಸಮರ್ಥನೆಗಾಗಿ ಹೊರತು ಭಯದ್ವೇಷಗಳಿಂದ ಸಾರೂಪ್ಯವೆಂದು ಪ್ರತಿಪಾದಿಸುವುದಕ್ಕಲ್ಲ. ಭಕ್ತಿಯಿಂದಲೇ ಮೋಕ್ಷವೆನ್ನುವುದಾದರೆ 'ತಸ್ಮಾದ್ ವೈರಾನುಬಂಧೇನ' ಎಂದು ಮುಂತಾಗಿ ಭಕ್ತಿ ಭಯ ಸ್ನೇಹ ಕಾಮಗಳಿಂದಲೂ ಭಗವಂತನನ್ನು ಭಜಿಸಬಹುದೆಂದು ಹೇಳಿದ್ದು ಏಕೆ ಎಂದರೆ ಸ್ನೇಹಾದಿಗಳನ್ನು ಮಾಡಿದರೂ ಸ್ನೇಹಾದಿಪಾತ್ರರ ಅಗಲಿಕೆಯಿಂದ ಭಗವಂತನ ಮನಸ್ಸಿಗೆ ಏನೂ ನೋವು ಉಂಟಾಗುವುದಿಲ್ಲ, ಆದರಿಂದ ಬಂಧುಗಳು ಮಿತ್ರರು ಸ್ನೇಹಾದಿ ಪೂರ್ವಕ ಭಕ್ತಿಯಿಂದಲೂ ಹರಿಯನ್ನು ಭಜಿಸಬಹುದೆಂದು ಹೇಳುವ ಅಭಿಪ್ರಾಯವಿದೆ.

ತತಃ ಕನೀಯಸಾ ಏವ ದೇವಾ ಜ್ಯಾಯಸಾ ಅಸುರಾಃ ।
ಇತಿ ಶ್ರುತಿಃ । ತನ್ಮಯತಾಂ ಮನಸಸ್ತತ್ರಾಭಿನಿವೇಶನಂ ।
ಮಾಗಧಾದ್ಯಾ ಯಥಾ ನಿತ್ಯಂ ದ್ವೇಷಾದಾಗ್ರಹಿಣೋ ಹರೌ ।
ನ ತಥಾಽಽಗ್ರಹಿಣೋ ಭಕ್ತ್ಯಾ ಋತೇ ಬ್ರಹ್ಮಾಣಮವ್ಯಯಂ॥

ಇತಿ ಹರಿವಂಶೇಷು ।

ಭಕ್ತರಾದ ದೇವತೆಗಳು ಕಡಿಮೆ, ದ್ವೇಷಿಗಳಾದ ಅಸುರರೇ ಅಧಿಕ ಎನ್ನುವುದನ್ನು 'ದೇವತೆಗಳು ಕಡಿಮೆ ಸಂಖ್ಯೆಯಲ್ಲಿಯೇ ಇರುತ್ತಾರೆ, ಅಸುರರು ಅಧಿಕ ಸಂಖ್ಯೆಯಲ್ಲಿದ್ದಾರೆ ಎಂದು ಶ್ರುತಿ ಹೇಳುತ್ತಿದೆ. 'ತನ್ಮಯತಾಮಿಯಾತ್' ಎಂದರೆ ದ್ವೇಷಿ ಭಗವಂತನ ಚಿಂತನೆಯಿಂದ ಭಗವಂತನೇ ಆಗುತ್ತಾನೆ ಎಂದರ್ಥವಲ್ಲ. ಅವನ ಮನಸ್ಸು ಭಗವಂತನ ದ್ವೇಷಚಿಂತನದಲ್ಲಿ ಲೀನವಾಗಿರುತ್ತದೆ ಎಂದರ್ಥ. ಅದರಿಂದ 'ಯಥಾ ವೈರಾನುಬಂಧೇನ' ಎಂಬ ಶ್ಲೋಕಕ್ಕೆ 'ದ್ವೇಷ ಚಿಂತನದಿಂದ ಮನಸ್ಸು ತಲ್ಲೀನವಾಗುವಷ್ಟು ಗಾಢವಾಗಿ ಭಕ್ತಿಭಾವದಿಂದ ತಲ್ಲೀನವಾಗುವುದಿಲ್ಲ' ಎಂದು ಹೇಳುವ ಅಭಿಪ್ರಾಯವೂ ಇದೆ.

ಹರಿವಂಶದಲ್ಲಿ ಇದನ್ನು ಹೀಗೆ ಹೇಳಿದೆ- 'ಜರಾಸಂಧ ಮುಂತಾದ ಅಸುರರು ಎಷ್ಟು ಗಾಢವಾಗಿ ನಿತ್ಯ ಹರಿಯ ದ್ವೇಷ ಚಿಂತನದಲ್ಲಿ ಮುಳುಗುತ್ತಾರೊ ಅಷ್ಟು ಗಾಢವಾಗಿ ಬ್ರಹ್ಮದೇವರು ಹೊರತು ಬೇರೆ ಭಕ್ತರು ಭಕ್ತಿಭಾವದಲ್ಲಿ ತಲ್ಲೀನರಾಗುವುದಿಲ್ಲ' ಎಂದು.

ಯೋಗಃ ಸ್ನೇಹಃ । ಸಂರಂಭಭಯಯುಕ್ತಸ್ನೇಹೇನ ।
ಪ್ರೀತಿಃ ಸ್ನೇಹಸ್ತಥಾ ಯೋಗಃ ಪ್ರೇಮ ಬಂಧ ಇತೀರ್ಯತೇ

ಇತಿ ಶಬ್ದನಿರ್ಣಯೇ ।

'ಸಂರಂಭಭಯಯೋಗೇನ' ಎಂಬಲ್ಲಿ ಯೋಗವೆಂದರೆ ಸ್ನೇಹ. ಸಂರಂಭ ಮತ್ತು ಭಯಗಳಿಂದ ಯುಕ್ತವಾದ ಸ್ನೇಹದಿಂದ ಎಂದು 'ಶಾಕಪ್ರಿಯಃ ಪಾರ್ಥಿವಃ ಶಾಕಪಾರ್ಥಿವಃ' ಎಂಬಂತೆ ಮಧ್ಯಮ ಪದಲೋಪಿ ಸಮಾಸ ವಿಟ್ಟುಕೊಳ್ಳಬೇಕು. ಅದರಿಂದ ಕೀಟಕ್ಕೂ ಸ್ನೇಹವಿದೆ, ಸ್ನೇಹದಿಂದಲೇ ಧ್ಯಾನಮಾಡಿ ಸಾರೂಪ್ಯ ಪಡೆಯಿತು. ಹಾಗೇ ಶಿಶುಪಾಲಾದಿಗಳಿಗೂ ಹರಿಯಲ್ಲಿ ಭಕ್ತಿ ಇತ್ತು. ಭಕ್ತಿಯಿಂದಲೇ ಅವರಿಗೆ ಮುಕ್ತಿ ಎಂದಂತಾಯಿತು. ಸ್ನೇಹವು ಪ್ರೀತಿ ಎಂದೂ ಯೋಗವೆಂದೂ ಪ್ರೇಮವೆಂದೂ ಬಂಧವೆಂದೂ ಹೇಳಲ್ಪಡುತ್ತದೆ ಎಂದು ಶಬ್ದನಿರ್ಣಯದಲ್ಲಿ ಹೇಳಿದೆ.

ವೈರಯುಕ್ತಯಾಽಪ್ಯನುಚಿಂತಯಾ ತಮಾಪುಃ ।
ಅನುಚಿಂತೇತಿ ತಾಮಾಹುರ್ಭಕ್ತಿಪೂರ್ವಾ ತು ಯಾ ಸ್ಮೃತಿಃ ।

ಇತಿ ಚ ।

'ವೈರೇಣ ಧೂತಪಾಪ್ಮಾನಸ್ತಮಾಪುರನುಚಿಂತಯಾ' ಎಂಬಲ್ಲಿ 'ವೈರೇಣ ಅನುಚಿಂತಯಾ' ಎಂದರೆ ವೈರದಿಂದ ಚಿಂತನ ಮಾಡಿ ಅದರಿಂದ ಪಾಪ ಕಳೆದುಕೊಂಡರು ಪರಮಾತ್ಮನನ್ನು ಹೊಂದಿದರು ಎಂದರ್ಥವಲ್ಲ. 'ಸಹ' ಎಂಬ ಅರ್ಥದಲ್ಲಿ ತೃತೀಯಾವಿಭಕ್ತಿ ಇಟ್ಟುಕೊಳ್ಳಬೇಕು. ವೈರದಿಂದ ಸಹಿತವಾದ ಅನುಚಿಂತನದಿಂದಲೂ ಶಿಶುಪಾಲಾದಿಗಳು ಪಾಪವನ್ನು ಕಳೆದುಕೊಂಡರು, ಪರಮಾತ್ಮನನ್ನು ಹೊಂದಿದರು ಎಂದರ್ಥ. ಅನುಚಿಂತನವೆಂದರೆ ಕೇವಲ ಚಿಂತನವಲ್ಲ. ಭಕ್ತಿಪೂರ್ವಕವಾದ ಚಿಂತನ. ಅದನ್ನು ವೈರದಿಂದ ಮಾಡಲು ಬರುವುದಿಲ್ಲ. ಮೊದಲಿಗೆ ವೈರವಿದ್ದುದರಿಂದ ಅದು ವೈರದಿಂದ ಸಹಿತವಾಗಿತ್ತೆನ್ನಬಹುದು.

ಶಬ್ದನಿರ್ಣಯದಲ್ಲಿ ಅನುಚಿಂತಾಶಬ್ದಾರ್ಥ ಉಕ್ತವಾಗಿದೆ- ಭಕ್ತಿಪೂರ್ವಕವಾದ ಭಗವಂತನ ಚಿಂತನವನ್ನೇ 'ಅನುಚಿಂತಾ' ಎನ್ನುತ್ತಾರೆ ಎಂದು.

ಸ್ನೇಹಾದನ್ನಂ ದದಾತೀತಿ ಸ್ವಾಕರ್ಷಣ ಭಯೇಽಪಿ ಚ ।
ವಿದ್ಯಮಾನೇಽಪ್ಯಲ್ಪಕೋಪೇ ಸಂಗತಿ ಸ್ನೇಹತಸ್ತಥಾ ।
ಪೇಶಸ್ಕೃದ್ರೂಪತಾಂ ಕೀಟೋ ಯಥಾ ಯಾತಿ ತಥೈವ ತು ।
ಚೈದ್ಯಾದಯೋಽಸುರಾವೇಶಾದ್ಧರೌ ದ್ವೇಷಯುತಾ ಅಪಿ ।
ನಿಜಸ್ವಭಾವಯಾ ಭಕ್ತ್ಯಾ ನೀತಾ ಹರಿಸರೂಪತಾಂ ।
ತಥಾ ಹಿ ಕರುಣೋ ವಿಷ್ಣುರನ್ಯಾವೇಶಾದ್ಯದಿ ದ್ವಿಷನ್ ।
ಹೀಯತೇ ಕಿಂ ಮಮಾನೇನ ನಿತ್ಯಾನಂದ ಸ್ವರೂಪಿಣಃ ।
ದೇಹಬಂಧಯುತಾನಾಂ ಹಿ ದ್ವೇಷಿಣಾಽಪಕೃತಂ ಭವೇತ್ ।
ಮಮ ಕೋ ಹ್ಯಪರಾಧ್ಯೇತ ನಿರ್ದೋಷ ಸುಖರೂಪಿಣಃ ।
ಅತೋ ಮಯ್ಯಪರಾಧಸ್ತು ಸ್ವಸ್ಮಿನ್ನೇವ ನ ಮೇ ಭವೇತ್ ।
ಅತೋ ಯಚ್ಚಾಸುರಾವೇಶಾತ್ ಕೃತಮೇನೇನ ದುಷ್ಕೃತಂ ।
ಅನಾದಿಭಕ್ತೋ ಯಸ್ಮಾನ್ಮೇ ಮೋಚಯಿಷ್ಯೇ ತತಸ್ತ್ವಹಂ ।
ಇತಿ ಮತ್ವಾ ಮೋಚಯತಿ ಚೈದ್ಯಾದೀನಪಿ ಕೇಶವಃ ॥

ಇತಿ ಬ್ರಹ್ಮಾಂಡೇ ॥

ಕಣಜದ ಮರಿಹುಳುವಿಗೆ ತಾಯಿಕಣಜ ತನ್ನನ್ನು ಸೆಳೆಯುತ್ತದೆ ಎಂದು ಭಯವೂ ಸ್ವಲ್ಪ ಕೋಪವೂ ಇದ್ದರೂ ಆಹಾರ ನೀಡುತ್ತದೆ ಎಂಬ ಸ್ನೇಹದಿಂದಲೂ ಸಹವಾಸ ಪ್ರಯುಕ್ತವಾದ ಸ್ನೇಹದಿಂದಲೂ ಧ್ಯಾನದಿಂದ ಕಣಜದ ಸಾರೂಪ್ಯವನ್ನು ಹೊಂದುವಂತೆ ಶಿಶುಪಾಲ ಮುಂತಾದವರು ಅಸುರಾವೇಶದಿಂದ ಹರಿಯಲ್ಲಿ ದ್ವೇಷಉಳ್ಳವರಾದರೂ ಕೊನೆಯಲ್ಲಿ ಹರಿಯ ಅನುಗ್ರಹದಿಂದ ವ್ಯಕ್ತವಾಗುವ ತಮ್ಮ ಸ್ವಾಭಾವಿಕ ಭಕ್ತಿಯಿಂದಲೇ ಹರಿಯ ಸಾರೂಪ್ಯ ಪಡೆದರು. ಏಕೆಂದರೆ ವಿಷ್ಣು ಕರುಣಾಮಯ. ಈ ಭಕ್ತ ಅಸುರಾವೇಶದಿಂದ ನನ್ನನ್ನು ದ್ವೇಷಿಸಿದರೆ ನಿತ್ಯಾನಂದ ಸ್ವರೂಪನಾದ ನನಗೇನು ನಷ್ಟ? ದೇಹಾಭಿಮಾನಉಳ್ಳವರಿಗೆ ದ್ವೇಷಿಯು ಅಪರಾಧ ಮಾಡಬಹುದು. ನಿರ್ದೋಷಸುಖ ಸ್ವರೂಪನಾದ ನನಗೆ ಯಾರು ಅಪರಾಧ ಮಾಡಬಲ್ಲ? ಅದರಿಂದ ನನ್ನಲ್ಲಿ ಯಾರಾದರೂ ಅಪರಾಧ ಮಾಡಿದರೆ ಅದು ಅವನಿಗೇ ಕೇಡಾಗುವುದು, ನನಗಲ್ಲ. ಅದರಿಂದ ಅಸುರಾವೇಶದಿಂದ ಶಿಶುಪಾಲನಂಥ ಸಜ್ಜೀವ ಮಾಡುವ ಪಾಪವನ್ನು ಅವನು ಅನಾದಿಭಕ್ತನಾಗಿರುವುದರಿಂದ ನಾನು ದೂರ ಮಾಡುವೆನು

ಎಂದು ಆಲೋಚಿಸಿ ಕೇಶವ ಶಿಶುಪಾಲ ಮುಂತಾದವರನ್ನು ಪಾಪದಿಂದ ಬಿಡುಗಡೆ ಮಾಡುತ್ತಾನೆ ಎಂದು ಬ್ರಹ್ಮಾಂಡಪುರಾಣದಲ್ಲಿ ಹೇಳಿದೆ.

❖❖❖

ಅಸುರಾವೇಶ ನಿಮಿತ್ತವಾಗಿ ಕಾಮ ಸ್ನೇಹ ಭಯ ದ್ವೇಷಗಳಿದ್ದರೂ ಸ್ವಾಭಾವಿಕವಾದ ಯಥಾಯೋಗ್ಯವಾದ ವಿಷ್ಣುಭಕ್ತಿಯಿಂದ ವಿಷ್ಣುಲೋಕವನ್ನು ಅನೇಕರು ಪಡೆದಿದ್ದಾರೆ ಎಂದು ನಾರದರು ಧರ್ಮರಾಜನಿಗೆ ಉಪದೇಶಿಸುತ್ತಾರೆ.

ಕಾಮಾತ್ ಸ್ನೇಹಾದ್ಭಯಾದ್ ದ್ವೇಷಾದ್ಯಥಾಭಕ್ತ್ಯೇಶ್ವರೇ ಮನಃ।
ಆವೇಶ್ಯ ತದಘಂ ಹಿತ್ವಾ ಬಹವಸ್ತದ್ಗತಿಂ ಗತಾಃ ॥ ೩೧ ॥

ಸ್ವಯೋಗ್ಯಭಕ್ತಿ ಸಹಿತವಾದ ಕಾಮದಿಂದ ಸ್ನೇಹದಿಂದ ಭಯದಿಂದ ದ್ವೇಷದಿಂದ ಭಗವಂತನಲ್ಲಿ ಮನಸ್ಸಿಟ್ಟು ಕಾಮಾದಿಜನ್ಯವಾದ ಪಾಪವನ್ನು ಕಳೆದುಕೊಂಡು ಬಹುಮಂದಿ ವಿಷ್ಣುಲೋಕವನ್ನು ಹೊಂದಿದ್ದಾರೆ.

---

[೧]ಇಲ್ಲಿ ಭಕ್ತಿಯಿಂದ ಹೇಗೋ ಹಾಗೆ ಕಾಮಾದಿಗಳಿಂದಲೂ ಪಾಪವನ್ನು ಪರಿಹರಿಸಿಕೊಂಡು ವಿಷ್ಣುಲೋಕಕ್ಕೆ ಅನೇಕರು ಹೋಗಿದ್ದಾರೆ ಎಂದು ಮೇಲುನೋಟಕ್ಕೆ ಕಾಣುತ್ತದೆ. ಬೇರೆ ವ್ಯಾಖ್ಯಾನಕಾರರು ಎಲ್ಲರೂ ಹಾಗೇ ವ್ಯಾಖ್ಯಾನಿಸಿದ್ದಾರೆ.

ವಸ್ತುತಃ 'ಯಥಾ' ಶಬ್ದ ದೃಷ್ಟಾಂತ ಎಂಬ ಅರ್ಥದಲ್ಲಿ ಇಲ್ಲಿ ಇಲ್ಲ. ಏಕೆಂದರೆ 'ತಥಾ' ಶಬ್ದವಿಲ್ಲ. ಇಲ್ಲದಿದ್ದರೂ ಇಟ್ಟುಕೊಳ್ಳುತ್ತೇವೆ ಎನ್ನುವುದು ಬೇರೆ ದಾರಿ ಇಲ್ಲದಿದ್ದಾಗ ಮಾತ್ರ ಯುಕ್ತ. ಇಲ್ಲಿ 'ಯಥಾಭಕ್ತ್ಯಾ' ತಾರತಮ್ಯಾನುಗುಣವಾಗಿ ಯಥಾಯೋಗ್ಯವಾಗಿರುವ ಭಕ್ತಿಯಿಂದ ಎಂದು ಸಮಸ್ತಪದ. ಯಥಾಯೋಗ್ಯವಾದ ಭಕ್ತಿಗೇ ಮೋಕ್ಷಸಾಧನತ್ವವಿರುವುದರಿಂದ ಆ ವಿಶೇಷಣ ನೀಡಿರುವುದು ಉಚಿತವಾಗಿದೆ. 'ಯಥಾಭಕ್ತ್ಯಾ' ಎಂದು ತೃತೀಯಾವಿಭಕ್ತಿ 'ಸಹಿತ' ಎಂಬ ಅರ್ಥದಲ್ಲಿ ಇದೆ. ಯಥಾಯೋಗ್ಯವಾದ ಭಕ್ತಿಯಿಂದ ಸಹಿತವಾದ

---

೧. ಯಥಾ ವಿಹಿತಯಾ ಭಕ್ತ್ಯಾ ಈಶ್ವರೇ ಮನ ಆವೇಶ್ಯ ತದ್ಗತಿಂ ಗಚ್ಛಂತಿ ತಥೈವಾವಿಹಿತೇನಾಪಿ ಕಾಮಾದಿನಾ ಬಹವೋ ಗತಾ ಇತ್ಯರ್ಥಃ । ತದಘಂ ತೇಷು ಕಾಮಾದಿಷು ಮಧ್ಯೇ ಯದ್ ದ್ವೇಷ ಭಯಯೋರಘಂ ಭವತಿ ತದ್ಧಿತ್ವೈವ। ಭಯಸ್ಯಾಪಿ ದ್ವೇಷ ಸಂಮಿಲಿತತ್ವಾದಘೋತ್ಪಾದಕತ್ವಂ ಜ್ಞೇಯಂ। ಅತ್ರ ಕೇಚಿತ್ ಕಾಮೇಽಪ್ಯಘಂ ಮನ್ಯಂತೇ।... ಕಾಮುಕತ್ವಾದ್ಯಾರೋಪಣಾಧರಪಾನಾದಿ ರೂಪಸತ್ತ್ರ ವ್ಯವಹಾರೋಽಪಿ ನಾತಿಕ್ರಮಹೇತುಃ। ಲೋಕವತ್ತು ಲೀಲಾ ಕೈವಲ್ಯಮಿತಿ ನ್ಯಾಯೇನ ಲೀಲಾ ತತ್ರ ಸ್ವಭಾವತ ಏವ ಸಿದ್ಧಾ।
-ಜೀವಗೋಸ್ವಾಮಿ

ಕಾಮದಿಂದ ಭಗವಂತನಲ್ಲಿ ಮನಸ್ಸಿಟ್ಟು ವಿಷ್ಣುಲೋಕವನ್ನು ಪಡೆದರು. 'ತದಘಂ ಹಿತ್ವಾ' 'ಪಾಪವನ್ನು ಕಳೆದುಕೊಂಡು' ಎಂಬಲ್ಲಿಯೂ 'ಯಥಾಭಕ್ತ್ಯಾ' ಎಂಬುದು ಅನ್ವಯ ಹೊಂದುತ್ತದೆ. ಆಗ ಮಾತ್ರ ತೃತೀಯಾ ವಿಭಕ್ತಿ ಹೇತ್ವರ್ಥಕ. ಭಕ್ತಿಸಹಿತ ಕಾಮದಿಂದ ಭಗವಂತನಲ್ಲಿ ಮನಸ್ಸಿಟ್ಟು ಭಕ್ತಿಯಿಂದ ಪಾಪವನ್ನು ಕಳೆದುಕೊಂಡು ವಿಷ್ಣುಲೋಕಕ್ಕೆ ಹೋದರು ಎಂದರ್ಥ. ಹೀಗೇ ಯಥಾಭಕ್ತ್ಯಾ ಎಂಬುದನ್ನು ಸ್ನೇಹ ಭಯ ದ್ವೇಷಗಳಿಗೂ ಅನ್ವಯಿಸಬೇಕು.

'ತದಘಂ ಹಿತ್ವಾ' ಎಂಬಲ್ಲಿ 'ತತ್' ಎಂದರೆ ಕಾಮಾದಿಗಳು. ಕಾಮಾದಿಜನ್ಯ ಪಾಪವನ್ನು ಕಳೆದುಕೊಂಡು ಎಂದರ್ಥ. ಬೇರೆ ವ್ಯಾಖ್ಯಾನಕಾರರು ಇದನ್ನು ಒಪ್ಪುವುದಿಲ್ಲ. ಭಯ ದ್ವೇಷಗಳಿಂದ ಪಾಪವಿದೆ ಎನ್ನೋಣ. ಭಯದಲ್ಲಿಯೂ ದ್ವೇಷಭಾವನೆ ಸೇರಿರುವುದರಿಂದ ಪಾಪವಿದೆ. ಆದರೆ ಕಾಮದಿಂದ ಪಾಪ ಹೇಗೆ ಸಂಭವಿಸುತ್ತದೆ? ಗೋಪಿಯರ ಕಾಮ ಕೃಷ್ಣನಿಗೆ ಇಷ್ಟವೇ ಆಗಿದೆ ತಾನೆ? ಎನ್ನುತ್ತಾರೆ. ಆದರೆ ಗೋಪಿಯರು ಕೃಷ್ಣನನ್ನು ಕಾಮುಕನೆಂದು ತಿಳಿದರು. ದರ್ಪದಿಂದ 'ನನ್ನನ್ನು ಹೆಗಲ ಮೇಲೆ ಹೊತ್ತುಕೊಳ್ಳೆ'ಂದಳು ಒಬ್ಬಳು ಗೋಪಿ. ಕೃಷ್ಣ ಕಾಮುಕನಲ್ಲ. ಲೀಲೆಯಿಂದ ಕಾಮುಕನಂತೆ ತೋರಿಕೊಂಡರೂ ವಾಸ್ತವದಲ್ಲಿ ಕಾಮುಕನಲ್ಲದ ಕೃಷ್ಣನನ್ನು 'ಕಾಮೀ ಸ್ವತಾಂ ಪಶ್ಯತಿ' ಎಂಬಂತೆ ಗೋಪಿಯರು ತಪ್ಪಾಗಿ ತಿಳಿದಿದ್ದಾರೆ. ಇದು ಪಾಪಕರ. ಆದರೂ ಅವರಲ್ಲಿ ಭಕ್ತಿ ಇದ್ದುದರಿಂದ ಆ ಪಾಪ ಪರಿಹಾರವಾಯಿತು.

ಶ್ರೀಮದಾಚಾರ್ಯರು 'ತದಘಂ' ಎಂಬುದನ್ನು 'ದ್ವೇಷಾದಿಕೃತಮಘಂ' ಎಂದು ವ್ಯಾಖ್ಯಾನಿಸಿದರೂ ಅದು ದ್ವೇಷಾದಿಗಳು ವಿಶೇಷ ಪಾಪಕರ ಎಂಬ ಅಭಿಪ್ರಾಯದಿಂದ ಹೊರತು ಕಾಮ ಪಾಪಕರವಲ್ಲ ಎಂದಲ್ಲ.

ಇದೇರೀತಿ ಬಂಧುಸ್ನೇಹವೂ ಪಾಪಕರವೆ. ಕೃಷ್ಣ ದ್ವಾರಕೆಗೆ ಹೊರಟಾಗ ಅವನ ರಕ್ಷಣೆಗೆ ಧರ್ಮರಾಜ ತನ್ನ ಸೈನ್ಯವನ್ನು ಜೊತೆಗೆ ಕಳಿಸುತ್ತಾನೆ. ಸ್ನೇಹದ ಭರದಲ್ಲಿ ಸರ್ವರಕ್ಷಕನಿಗೆ ರಕ್ಷಣೆ ಒದಗಿಸುತ್ತಾನೆ. ಇದು ಪಾಪಕರ. ಆದರೂ ಈ ಕಾಮ ಸ್ನೇಹಗಳಿಂದ ಬರುವ ಪಾಪ ಅಲ್ಪ. ಭಯದ್ವೇಷಗಳಿಂದ ಬರುವ ಪಾಪ ಅಧಿಕ.

ಕಾಮಾದಿಭಿರಪಿ ಯಥಾವದ್‌ಭಕ್ತ್ಯಾ ಸಹೈವ ಮನ ಆವೇಶ್ಯ ತದಘಂ ಯತ್ತು ದ್ವೇಷಾದಿಕೃತಮಘಂ ಯಥಾಭೂತಯಾ ಭಕ್ತ್ಯಾ ಹಿತ್ವಾ।

'ಯಥಾಯೋಗ್ಯ ಭಕ್ತಿಯುಕ್ತವಾದ ಕಾಮಾದಿಗಳಿಂದಲೂ ಭಗವಂತನಲ್ಲಿ ಮನಸ್ಸಿಟ್ಟು ಕಾಮಾದಿಜನ್ಯವಾದ ಪಾಪವನ್ನು ಯಥಾಯೋಗ್ಯ ಭಕ್ತಿಯಿಂದಲೆ ತೊಳೆದುಕೊಂಡು ಅನೇಕರು ವಿಷ್ಣುಲೋಕವನ್ನು ಹೊಂದಿದರು' ಎಂದು ಶ್ಲೋಕವನ್ನು ವ್ಯಾಖ್ಯಾನಿಸಬೇಕು.

❖ ❖ ❖

ಸ್ವಾಭಾವಿಕ ಭಕ್ತರಾಗಿದ್ದು ದ್ವೇಷಾದಿಗಳಿಂದ ಹರಿಯಲ್ಲಿ ಮನಸ್ಸಿಟ್ಟು ಅವನ ಲೋಕವನ್ನು ಸೇರಿದವರು ಅನೇಕರು ಎನ್ನುವುದಕ್ಕೆ ಉದಾಹರಣೆಗಳನ್ನು ನಾರದರು ನೀಡುತ್ತಿದ್ದಾರೆ.

ಗೋಪ್ಯಃ ಕಾಮಾದ್ಭಯಾತ್ಕಂಸೋ ದ್ವೇಷಾಚ್ಚೈದ್ಯಾದಯೋ ನೃಪಾಃ ।
ಸಂಬಂಧಾದ್ವೃಷ್ಣಯಃ ಸ್ನೇಹಾದ್ಯೂಯಂ ಭಕ್ತ್ಯಾ ವಯಂ ವಿಭೋ ೩೨

ಗೋಪಿಯರು ಸ್ವಯೋಗ್ಯ ಭಕ್ತಿ ಸಹಿತವಾದ ಕಾಮದಿಂದ, ಕಂಸನಲ್ಲಿ ಆವಿಷ್ಟನಾಗಿದ್ದ ಭೃಗುಮುನಿ ಭಕ್ತಿಸಹಿತವಾದ ಭಯದಿಂದ, ಶಿಶುಪಾಲಾದಿ ರಾಜರಲ್ಲಿದ್ದ ಜಯ ಮುಂತಾದ ದೇವತೆಗಳು ಭಕ್ತಿ ಸಹಿತವಾದ ದ್ವೇಷದಿಂದ, ಯಾದವರು ಭಕ್ತಿಸಹಿತವಾದ ಶರೀರಸಂಬಂಧದ ಭಾವನೆಯಿಂದ, ನೀವು ಪಾಂಡವರು ಜ್ಞಾನಕ್ಕೆ ಸಮಪ್ರಮಾಣದ ಪ್ರೀತಿಯಿಂದ, ನಾವು ಮುನಿಗಳು ಪ್ರೀತಿಗಿಂತ ಅಧಿಕ ಪ್ರಮಾಣವಾದ ಜ್ಞಾನದಿಂದ-ಹೀಗೆ ಎಲ್ಲರೂ ಯಾವುದಾದರೊಂದು ಬಗೆಯ ಭಕ್ತಿಯೋಗದಿಂದಲೇ ಪರಮಾತ್ಮನ ಅನುಗ್ರಹಕ್ಕೆ ಪಾತ್ರರಾಗಿದ್ದೇವೆ.

ಇಲ್ಲಿ 'ಸಂಬಂಧಾದ್ ವೃಷ್ಣಯಃ ಸ್ನೇಹಾದ್ಯೂಯಂ' ಎಂದು ಸಂಬಂಧ ಮತ್ತು ಸ್ನೇಹಗಳೆಂದು ಬೇರೆ ಬೇರೆಯಾಗಿ ಭಕ್ತಿಯೋಗದ ಎರಡು ಪ್ರಕಾರಗಳನ್ನು ಹೇಳಿದೆ. ಇವುಗಳೊಂದಿಗೆ ಇಲ್ಲಿ ಹೇಳಿದ ಕಾಮ, ಭಯ, ದ್ವೇಷ, ಭಕ್ತಿಗಳೆಂಬ ನಾಲ್ಕು ಪ್ರಕಾರಗಳನ್ನು ಇಟ್ಟುಕೊಂಡರೆ ಆರು ಪ್ರಕಾರಗಳಾಗುವುವು. ಆದರೆ ಮುಂದಿನ ಶ್ಲೋಕದಲ್ಲಿ 'ಈ ಐದು ಭಕ್ತಿಯೋಗ ಪ್ರಕಾರಗಳಲ್ಲಿ ಒಂದೂ ವೇನನಲ್ಲಿರಲಿಲ್ಲ' ಎಂದು ಹೇಳುವುದು ಕೂಡಲಾರದು.

[೧]ಬೇರೆ ವ್ಯಾಖ್ಯಾನಕಾರರು 'ಸಂಬಂಧಾತ್ ಸ್ನೇಹಾತ್' ಎಂದರೆ ಶರೀರಸಂಬಂಧ ಪ್ರಯುಕ್ತವಾದ ಸ್ನೇಹ ಎಂದು ಒಂದು ಪ್ರಕಾರವಾಗಿ

೧. ಸಂಬಂಧಾದ್ ವೃಷ್ಣಯಃ ಸ್ನೇಹಾದ್ ಯೂಯಮಿತಿ ವೃಷ್ಣಯೋ ಯೂಯಂ ಚ ದೇಹಸಂಬಂಧಕೃತಸ್ನೇಹಾದಿತ್ಯರ್ಥಃ। ಅನ್ಯಥಾ ಪಂಚಪ್ರಕಾರಾಂತರ್ಭಾವಾಯೋಗಾತ್। ಭಕ್ತ್ಯಾ ವಯಂ ನಾರದಾದಯಃ। ತತ್ರ ಸ್ನೇಹಸ್ತುಲ್ಯಸನ್ನಿಕೃಷ್ಟವಿಷಯಃ ಪ್ರೇಮಾ। ಭಕ್ತಿರುತ್ಕೃಷ್ಟವಿಷಯೇತಿ ಭೇದಃ । -ವೀರರಾಘವಃ

ಪುರುಷೇ ಪುರುಷಸ್ಯ ಕಾಮಾಸಂಭವಾತ್ ಪಂಚಾನಾಮಿತ್ಯುಕ್ತಂ । -ಗಿರಿಧರಃ

ಕೇನಾಪ್ಯುಪಾಯೇನ ಕಾಮಾದಿಪಂಚಪ್ರಕಾರೇಷ್ವೇಕತಮೇನ ನಿಂದಯಾ ಚ ಸಾಂಕೇತ್ಯಸಾಮಗ್ರಾಹಿತ್ವಾದಿನಾ ವಾ ಮನಃ ಶ್ರೀಕೃಷ್ಣೇ ನಿವೇಶಯೇದಿತಿ ಸಿದ್ಧಾಂತಃ । -ಶುಕದೇವಃ

ಪರಿಗಣಿಸಿದ್ದಾರೆ. ಯಾದವರೂ ಪಾಂಡವರೂ ಕೃಷ್ಣನಿಗೆ ಸಂಬಂಧಿಗಳು. ಅದರಿಂದ ಅವರು ಅವನನ್ನು ಬಂಧುಸ್ನೇಹದಿಂದ ಕಂಡರು, ಎಂದು.

ವಸ್ತುತಃ 'ಸ್ನೇಹಾದ್ ಯೂಯಂ' ಎಂಬಲ್ಲಿ ಹೇಳಿದ ಪಾಂಡವರ ತತ್ರಾಪಿ ಭೀಮಸೇನನ ಸ್ನೇಹ ಬರಿ ಸ್ನೇಹ ಹೊರತು ಭಕ್ತಿಯೆ ಇಲ್ಲ ಎನ್ನಬಾರದು. ಸ್ನೇಹ ಭಕ್ತಿಯ ಒಂದು ಅಂಶವಾಗಿರುವ ಶುದ್ಧವಾದ ಸ್ನೇಹ. ಭಕ್ತಿ ಎಂದರೆ ಮಾಹಾತ್ಮ್ಯಜ್ಞಾನಪೂರ್ವಕವಾದ ಸ್ನೇಹ. ಅದರಲ್ಲಿರುವ ಸ್ನೇಹ ಎಂಬ ಅಂಶ ಶುದ್ಧವಾದ ಸ್ನೇಹ. ಬಂಧುಸ್ನೇಹಕ್ಕಿಂತ ಬಹಳ ವಿಲಕ್ಷಣ. ಬಂಧುಸ್ನೇಹ ಮೋಕ್ಷಸಾಧನವಲ್ಲ. ಅದರ ಜೊತೆಗೆ ಶುದ್ಧ ಸ್ನೇಹವೂ ಇದ್ದರೆ ಅದೂ ಒಂದು ಭಕ್ತಿಯೋಗದ ಪ್ರಕಾರವಾಗುತ್ತದೆ, ದ್ವೇಷದೊಂದಿಗೆ ಭಕ್ತಿಯೂ ಇದ್ದರೆ ಅದು ಭಕ್ತಿಯೋಗವೆನಿಸುವಂತೆ. ಹೀಗಾಗಿ ಯಾದವರ ಬಂಧುಸ್ನೇಹವನ್ನೂ ಪಾಂಡವರ ಶುದ್ಧಸ್ನೇಹವನ್ನೂ ಜೊತೆಗೆ ಸೇರಿಸಿ ಒಂದು ಭಕ್ತಿಯೋಗ ಪ್ರಕಾರವೆನ್ನುವಂತಿಲ್ಲ.

'ಭಕ್ತ್ಯಾ ವಯಂ' ಎಂಬಲ್ಲಿ ಹೇಳಿದ ಭಕ್ತಿಯನ್ನೂ 'ಸ್ನೇಹಾದ್‌ಯೂಯಂ' ಎಂದು ಹೇಳಿದ ಸ್ನೇಹವನ್ನೂ ಸೇರಿಸಿ ಒಂದು ಭಕ್ತಿಪ್ರಕಾರವೆಂದೂ ಪರಿಗಣಿಸುವಂತಿಲ್ಲ. ಏಕೆಂದರೆ ಬ್ರಹ್ಮತರ್ಕದಲ್ಲಿ ಹೀಗೆ ಹೇಳಿದೆ- 'ಸ್ನೇಹ' ಶಬ್ದದಿಂದ ಭಕ್ತಿಯಲ್ಲಿ ಜ್ಞಾನಾಂಶಕ್ಕೆ ಸಮಪ್ರಮಾಣದಲ್ಲಿರುವ ಸ್ನೇಹಾಂಶ ವಿವಕ್ಷಿತ. 'ಭಕ್ತಿ'ಶಬ್ದದಿಂದ ಭಕ್ತಿಯಲ್ಲಿ ಸ್ನೇಹಾಂಶಕ್ಕಿಂತ ಅಧಿಕಪ್ರಮಾಣದಲ್ಲಿರುವ ಜ್ಞಾನಾಂಶ ವಿವಕ್ಷಿತ ಎಂದು. ನಾರದಾದಿ ಮುನಿಗಳಲ್ಲಿ ಅವರಲ್ಲಿರುವ ಭಕ್ತಿಯಲ್ಲಿ ಸ್ನೇಹಾಂಶಕ್ಕಿಂತ ಅಧಿಕ ಪ್ರಮಾಣದಲ್ಲಿ ಜ್ಞಾನಾಂಶವಿರುತ್ತದೆ. ಪಾಂಡವರು ದೇವತೆಗಳಾದ್ದರಿಂದ ಮುನಿಗಳ ಜ್ಞಾನಕ್ಕಿಂತ ಅಧಿಕವಾಗಿಯೇ ಜ್ಞಾನವಿರುತ್ತದೆ, ಅದಕ್ಕೆ ಸಮಪ್ರಮಾಣದಲ್ಲಿ ಸ್ನೇಹವೂ ಇರುತ್ತದೆ. ಮುನಿಗಳಿಗಿಂತ ದೇವತೆಗಳು ಶ್ರೇಷ್ಠರು. ದೇವತೆಗಳಲ್ಲಿ ಮತ್ತು ಮುನಿಗಳಲ್ಲಿ ಇರುವ ಭಕ್ತಿಯಲ್ಲಿ ಇಂಥ ವೈಲಕ್ಷಣ್ಯವಿದೆ ಎಂದು ಸೂಚಿಸಲೆಂದೇ ಭಾಗವತದಲ್ಲಿ 'ಸ್ನೇಹಾದ್ ಯೂಯಂ ಭಕ್ತ್ಯಾ ವಯಂ' ಎಂದು ಬೇರೆಬೇರೆಯಾಗಿ ಹೇಳಿದೆ. ವಿಲಕ್ಷಣವಾದ ಅವೆರಡನ್ನೂ ಸೇರಿಸಿ ಒಂದಾಗಿ ಮಾಡಿ ಭಕ್ತಿಯೋಗಗಳ ಸಂಖ್ಯೆಯನ್ನು ಆರರಿಂದ ಐದಕ್ಕೆ ಇಳಿಸುವುದು ಉಚಿತವಾಗದು.

ಸ್ನೇಹವೆಂದರೆ ಸಮಾನರಲ್ಲಿ ಮಾಡುವ ಪ್ರೀತಿ. ಭಕ್ತಿ ಎಂದರೆ ದೊಡ್ಡವರಲ್ಲಿ ಮಾಡುವ ಪ್ರೀತಿ ಎಂದು ಲೋಕವ್ಯವಹಾರವನ್ನು ಅನುಸರಿಸಿ ವೀರರಾಘವ ವ್ಯಾಖ್ಯಾನ ಹೇಳಿದೆ. ಆದರೆ ಅದು ಬ್ರಹ್ಮತರ್ಕ ವಚನಕ್ಕೆ ಹೊಂದಿಕೆಯಾಗದು. ಪಾಂಡವರಿಗೆ ಕೃಷ್ಣ ಸಮಾನನೂ ಅಲ್ಲ.

ಗಿರಿಧರ ವ್ಯಾಖ್ಯಾನ ಹೇಳುತ್ತದೆ. ಮನೋಯೋಗ ಆರು ವಿಧವೆ. ಕಾಮ

ವೇನನಲ್ಲಿ ಅಪ್ರಸಕ್ತ. ಪುರುಷನಾದ ವೇನನಿಗೆ ಪುರುಷನಾದ ಹರಿಯಲ್ಲಿ ಕಾಮಭಾವನೆ ಉದಿಸುವುದು ಅಸಂಭವ. ಪ್ರಸಕ್ತವಾಗುವ ಬೇರೆ ಐದು ವಿಧ ಮನೋಯೋಗಗಳಲ್ಲಿ ಒಂದೂ ವೇನನಲ್ಲಿ ಇರಲಿಲ್ಲ. ಆದರಿಂದ ಅವನಿಗೆ ತಮಸ್ಸಾಯಿತು ಎಂದು. ಆದರೆ ಇದೂ ಸಮಂಜಸವಲ್ಲ. ಹದಿನಾರು ಸಾವಿರದ ನೂರುಮಂದಿ ಅಗ್ನಿಪುತ್ರರಿಗೆ ಹರಿಯಲ್ಲಿ ಕಾಮಭಾವ ಉದಿಸಿತು. ಕೃಷ್ಣನೊಡನೆ ಕಾಮಸುಖವನ್ನು ಅನುಭವಿಸಬೇಕೆಂದು ಅವರು ತಪಸ್ಸಿನಿಂದ ಸ್ತ್ರೀಜನ್ಮವನ್ನು ಸಂಪಾದಿಸಿ ಕೃಷ್ಣನ ಹದಿನಾರು ಸಾವಿರದ ನೂರುಮಂದಿ ಪತ್ನಿಯರೆನಿಸಿದರು.

ಆದರಿಂದ ಈ ಸಮಸ್ಯೆಗೆ ಪರಿಹಾರ ಹೀಗೆ ಹೇಳಬೇಕು- ಭಕ್ತಿಯೋಗಗಳಲ್ಲಿ 'ಸಂಬಂಧಾದ್ ವೃಷ್ಣಯಃ' ಎಂದು ಹೇಳಿದ ಸಂಬಂಧ ಅಂದರೆ ಬಂಧುಗಳೆಂದು ಸ್ನೇಹಮಾಡುವುದೂ ಒಂದು ವಿಧವಾಗಿದೆ. ಇದು ಕೃಷ್ಣನ ಬಂಧುಗಳಾದ ಯಾದವರಲ್ಲಿ ಮತ್ತು ಪಾಂಡವರಲ್ಲಿ ಹೊರತು ಬೇರೆ ಯಾರಲ್ಲಿಯೂ ಪ್ರಸಕ್ತವಾಗುವುದಿಲ್ಲ. ಹಿಂದಿನ 'ತಸ್ಮಾದ್ ವೈರಾನುಬಂಧೇನ' ಎಂಬ ಶ್ಲೋಕ ದಲ್ಲಾಗಲಿ 'ಕಾಮಾತ್ ಸ್ನೇಹಾತ್' ಎಂಬ ಶ್ಲೋಕದಲ್ಲಾಗಲಿ ಈ ಸಂಬಂಧವನ್ನು ಹೇಳಿಲ್ಲ. ಆದರಿಂದ ಅದನ್ನು ಬಿಟ್ಟು ಪ್ರಸಕ್ತವಾಗುವ ಕಾಮಾದಿ ಐದು ವಿಧಗಳನ್ನೇ ಇಟ್ಟುಕೊಂಡು ಮುಂದಿನ ಶ್ಲೋಕದಲ್ಲಿ 'ಪಂಚಾನಾಂ ಕತಮೋಽಪಿ' ಐದರಲ್ಲಿ ಯಾವುದಾದರೊಂದೂ ವೇನನಲ್ಲಿ ಇರಲಿಲ್ಲ' ಎಂದರೆ ಅದು ಸಮಂಜಸ ವೆನಿಸುತ್ತದೆ.

ಗೋಪ್ಯಃ ಕಾಮಯುತಾ ಭಕ್ತಾಃ ಕಂಸಾವಿಷ್ಟಃ ಸ್ವಯಂ ಭೃಗುಃ ।
ಜ್ಞೇಯೋ ಭಯಯುತೋ ಭಕ್ತಶ್ಚೈದ್ಯಾದಿಸ್ಥಾ ಜಯಾದಯಃ ।
ವಿದ್ವೇಷಸಂಯುತಾ ಭಕ್ತಾ ವೃಷ್ಣಯೋ ಬಂಧುಸಂಯುತಾಃ ।
ಬಹುಮಾನಸ್ನೇಹಸಾಮ್ಯಾದ್ ದೇವಾ ಭಕ್ತಾಃ ಪ್ರಕೀರ್ತಿತಾಃ ।
ಸ್ನೇಹೋಪಸರ್ಜನಾದೇವ ಬಹುಮಾನಾನ್ಮುನೀಶ್ವರಾಃ ।
ಬಹುಮಾನೋಽಪಿ ದೇವಾನಾಮೃಷಿಭ್ಯೋಽಪ್ಯಧಿಕೋ ಮತಃ ।
ಬ್ರಹ್ಮವೀಂದ್ರೇಂದ್ರಕಾಮಾದೇರಿತರೇಷಾಂ ಯಥಾಕ್ರಮಂ ॥

ಇತಿ ಬ್ರಹ್ಮತರ್ಕೇ ॥

ಗೋಪಿಯರು ಕಾಮಸಹಿತವಾದ ಭಕ್ತಿಯುಳ್ಳವರು. ಕಂಸನೆಂದರೆ ಕಂಸನಲ್ಲಿ ಆವಿಷ್ಟನಾದ ಭೃಗುಮುನಿಯನ್ನು ಇಟ್ಟುಕೊಳ್ಳಬೇಕು. ಅವನು ಭಯ ಯುಕ್ತವಾದ ಭಕ್ತಿಮಾಡಿದ. 'ಚೈದ್ಯಾದಯೋ ನೃಪಾಃ' ಎಂದರೆ ಶಿಶುಪಾಲ ಮುಂತಾದ ರಾಜರ ಶರೀರದಲ್ಲಿದ್ದ ಜಯ ಮುಂತಾದವರನ್ನು

ಗ್ರಹಿಸಬೇಕು. ಅವರು ದ್ವೇಷದಿಂದ ಕೂಡಿದ ಭಕ್ತಿ ಮಾಡಿದರು. ಸಂಬಂಧವೆಂದರೆ ಶರೀರ ಸಂಬಂಧ, ಬಂಧುತ್ವ ವಿವಕ್ಷಿತವಾಗಿದೆ. ಯಾದವರು ಕೃಷ್ಣನನ್ನು ಬಂಧು ಎಂಬ ಭಾವನೆಯಿಂದ ಕಾಣುತ್ತ ಭಕ್ತಿ ಮಾಡಿದರು. 'ಸ್ನೇಹದಿಂದ ನೀವು ಭಕ್ತಿಯಿಂದ ನಾವು' ಎಂದರೆ 'ಪಾಂಡವರು ಕೇವಲ ಸ್ನೇಹವನ್ನೇ ಕೃಷ್ಣನಲ್ಲಿ ಮಾಡಿದರು, ನಾರದಾದಿ ಮುನಿಗಳು ಭಕ್ತಿಯನ್ನು ಮಾಡಿದರು' ಎಂದರ್ಥವಲ್ಲ. ಸ್ನೇಹವೆಂದರೆ, ಭಕ್ತಿಯಲ್ಲಿ ಸೇರಿರುವ ಸ್ನೇಹಾಂಶ, ಅದರಲ್ಲಿ ಸೇರಿರುವ ಮಾಹಾತ್ಮ್ಯ ಜ್ಞಾನಾಂಶಕ್ಕೆ ಸಮಪ್ರಮಾಣವಾಗಿದೆ. ಅಂಥ ಭಕ್ತಿ ಎಂದು ಗ್ರಹಿಸಬೇಕು. ಅದು ಪಾಂಡವರು ಮಾಡಿದ ಭಕ್ತಿ. ನಾರದರು ಮುಂತಾದವರ ಭಕ್ತಿಯಲ್ಲಿ ಮಾಹಾತ್ಮ್ಯ ಜ್ಞಾನಾಂಶಕ್ಕಿಂತ ಸ್ನೇಹಾಂಶ ಕಡಿಮೆ. ಅಂಥ ಭಕ್ತಿಯನ್ನು ಮುನಿಗಳು ಮಾಡಿದರೆಂದರ್ಥ. ಮುನಿಗಳಲ್ಲಿ ಮಾಹಾತ್ಮ್ಯಜ್ಞಾನ ಅಧಿಕವೆಂದರೆ ಅವರ ಭಕ್ತಿಯಲ್ಲಿರುವ ಸ್ನೇಹಾಂಶಕ್ಕಿಂತ ಅಧಿಕವೇ ಹೊರತು, ದೇವತೆಗಳ ಮಾಹಾತ್ಮ್ಯಜ್ಞಾನಕ್ಕಿಂತ ಅಧಿಕವಲ್ಲ. ದೇವತೆಗಳಲ್ಲಿ ಮಾಹಾತ್ಮ್ಯಜ್ಞಾನ ಮುನಿಗಳಿಗಿಂತ ಹೆಚ್ಚು. ದೇವತೆಗಳಲ್ಲಿಯೂ ಬ್ರಹ್ಮ ಗರುಡ ಇಂದ್ರ ಕಾಮ ಮುಂತಾದವರಲ್ಲಿ ಮತ್ತು ಇತರರಲ್ಲಿ ತಾರತಮ್ಯಾನುಗುಣವಾಗಿ ಅಧಿಕವಾಗಿ ಮಾಹಾತ್ಮ್ಯಜ್ಞಾನವಿರುತ್ತದೆ, ಎಂದು ಬ್ರಹ್ಮತರ್ಕದಲ್ಲಿ ಹೇಳಿದೆ.

❖ ❖ ❖

ಕಾಮಾದಿ ಭಕ್ತಿಯೋಗಗಳಲ್ಲಿ ಒಂದಾದರೂ ವೇನನಲ್ಲಿ ಇಲ್ಲದೆ ಹೋದುದರಿಂದ ಅವನಿಗೆ ತಮಸ್ಸಾಯಿತೆಂದು ನಾರದರು ಧರ್ಮರಾಜನಿಗೆ ಹೇಳುತ್ತಾರೆ.

ಕತಮೋಽಪಿ ನ ವೇನಸ್ಯ ಪಂಚಾನಾಂ ಪೂರುಷಂ ಪ್ರತಿ ।
ತಸ್ಮಾತ್ಕೇನಾಪ್ಯುಪಾಯೇನ ಮನಃ ಕೃಷ್ಣೇ ನಿವೇಶಯೇತ್ ॥ ೩೨ ॥

ಪರಮಪುರುಷನಾದ ಪರಮಾತ್ಮನಲ್ಲಿ ವೇನನಿಗೆ ಕಾಮ ಭಯ ದ್ವೇಷ ಮುಂತಾದ ಐದು ಬಗೆಯ ಭಕ್ತಿಯೋಗಗಳಲ್ಲಿ ಒಂದಾದರೂ ಇಲ್ಲದೆ ಹೋಯಿತು. ಅದರಿಂದ ಅವನಿಗೆ ತಮಸ್ಸಾಯಿತು. ಅದರಿಂದ ಯಾವುದಾದರೊಂದು ಬಗೆಯ ಭಕ್ತಿಯೋಗದಿಂದಲೇ ಮನಸ್ಸನ್ನು ಕೃಷ್ಣನಲ್ಲಿ ನಿಲ್ಲಿಸಬೇಕು.

ಇಲ್ಲಿ 'ತಸ್ಮಾತ್ ಕೇನಾಪ್ಯುಪಾಯೇನ' ಎಂದರೆ ಕಾಮಾದಿ ಐದು ಪ್ರಕಾರಗಳಲ್ಲಿ ಯಾವುದಾದರೊಂದು ಪ್ರಕಾರದಿಂದ, ನಿಂದೆಯಿಂದ, ಯಾರಿಗೋ ಹೆಸರಿಟ್ಟಿದ್ದ ಹರಿನಾಮವನ್ನು ಆಕಸ್ಮಾತ್ತಾಗಿ ಉಸುರುವುದರಿಂದ ಹೀಗೆ ಹೇಗಾದರೂ ಮನಸ್ಸನ್ನು ಕೃಷ್ಣನಲ್ಲಿ ಇಡಬೇಕೆನ್ನುವುದು ಸಿದ್ಧಾಂತ' ಎಂದು ಸಿದ್ಧಾಂತ ಪ್ರದೀಪವೆಂಬ ಭಾಗವತ ಟೀಕೆಯಲ್ಲಿ ಶುಕದೇವ ಹೇಳುತ್ತಾನೆ. ಭಗವಂತನ ನಿಂದೆಯಿಂದ ವೇನ ತಮಸ್ಸಿನಲ್ಲಿ ಬಿದ್ದರೂ ಭಗವಂತನೆ ಪೃಥುರೂಪದಿಂದ ಮಗನಾಗಿ ಜನಿಸಿ ಅವನನ್ನು ಪುನಃ ತಮಸ್ಸಿನಿಂದ ಉದ್ಧಾರ ಮಾಡಿದ್ದಾನೆ. 'ಯದ್ವೇನೋऽಪ್ಯತರತ್ ತಮಃ' ಎಂದು ಭಾಗವತವೇ ಹೇಳಿದೆ ಎನ್ನುತ್ತಾನೆ. ಉಳಿದ ವ್ಯಾಖ್ಯಾನಕಾರರೂ 'ಪ್ರಾಸಂಗಿಕವಾಗಿ ನಿಂದೆಯನ್ನು ಮಾತ್ರ ಮಾಡುವಂಥ ಸಾಮಾನ್ಯವೈರ ತಮಸ್ಸಿಗೆ ಸಾಧನವಾದರೂ ಧ್ಯಾನಾವಸ್ಥೆಗೆ ಒಯ್ಯಬಲ್ಲ ತೀವ್ರವೈರಭಾವನೆ ಮೋಕ್ಷಸಾಧನವೇ' ಎನ್ನುತ್ತಾರೆ. ನಿಂದೆಯಿಂದಲೂ ಮೋಕ್ಷವೇ ಸಿಗುತ್ತದೆ ಎಂದು ಶುಕದೇವ ಹೇಳುತ್ತಾನೆ.

ಶುಕದೇವನ ಸಿದ್ಧಾಂತದಲ್ಲಿ ಶಿಶುಪಾಲ ಸಂಸಾರಿಜೀವನೆ ಅಲ್ಲ ಅವನು ವಿಷ್ಣುಪಾರ್ಷದ. ಭಗವಂತನ ಇಚ್ಛೆಯಿಂದ ವೈಕುಂಠದಿಂದ ಬಂದು ವೈಕುಂಠಕ್ಕೇ ಹೋಗಿದ್ದಾನೆ. ಅದಕ್ಕೆ ಸನಕಾದಿಗಳ ಶಾಪ ನೆಪಮಾತ್ರ ಎಂದು ಹೇಳಲು ಮುಂದೆ ಶಾಪವೃತ್ತಾಂತ ಬರುತ್ತದೆ. ಹೀಗಾಗಿ 'ನಿಂದೆ ಮಾಡಿದ ಶಿಶುಪಾಲನಿಗೆ ಮೋಕ್ಷ ಹೇಗೆ ಸಿಕ್ಕಿತು' ಎಂದು ಧರ್ಮರಾಜ ಕೇಳಿದ್ದಕ್ಕೆ ಆತ ಸಂಸಾರಿ ಜೀವನೆ ಅಲ್ಲ ಎಂದು ಸ್ಪಷ್ಟ ಹೇಳಬೇಕಾಗಿತ್ತು. ನಿಂದೆಯಿಂದ ಮೋಕ್ಷ ಶಿಶುಪಾಲನಿಗೆ ಸಿಕ್ಕಿದೆ ಎಂದು ಹೇಳಿದ್ದು ಅಸಂಗತವೆ. ದ್ವೇಷನಿಂದೆಗಳಿಂದ ಮೋಕ್ಷ ಸಿಕ್ಕಿದ್ದಕ್ಕೆ ದೃಷ್ಟಾಂತವೆ ಇಲ್ಲವಾಗಿದೆ. 'ಕೇನಾಪಿ ಉಪಾಯೇನ' ಎನ್ನುವ ಭಾಗವತದ ಮಾತಿಗೆ ಏನರ್ಥ?

ಶ್ರೀಮದಾಚಾರ್ಯರು ಹೇಳುತ್ತಾರೆ ಇಲ್ಲಿ ಉಪಾಯ ಶಬ್ದಕ್ಕೆ ಭಕ್ತಿ ಎಂದರ್ಥ. 'ಕೇನಾಪಿ ಪ್ರಕಾರೇಣ ಉಪಾಯೇನೈವ' ಯಾವುದಾದರೊಂದು ರೀತಿಯ ಭಕ್ತಿಯೋಗದಿಂದಲೇ ಮೋಕ್ಷ ಎನ್ನುವುದು ಭಾಗವತದ ಸಿದ್ಧಾಂತ.

ಕತಮೋऽಪಿ ಭಕ್ತಿಯೋಗೋ ನ ವೇನಸ್ಯ। ತಸ್ಮಾತ್ ಕೇನಾಪಿ
ಪ್ರಕಾರೇಣ ಉಪಾಯೇನೈವ ಮನೋ ನಿವೇಶಯೇತ್।
ನಾನುಪಾಯೇನ ।
ಉಪಾಯೋ ಭಕ್ತಿರುದಿಷ್ಟೋ ದ್ವೇಷಾದ್ಯಾ ಅನುಪಾಯಕಾಃ।

–ಇತಿ ಶಬ್ದನಿರ್ಣಯೇ ।

ಐದು ಬಗೆಯಾದ ಭಕ್ತಿಯೋಗಗಳಲ್ಲಿ ಯಾವುದಾದರೊಂದು ಬಗೆಯ ಭಕ್ತಿಯೋಗವೂ ವೇನರಾಜನಿಗೆ ಇರಲಿಲ್ಲ. ಅದರಿಂದ ಅವನಿಗೆ ಮೋಕ್ಷ

ಸಿಗಲಿಲ್ಲ. ಯಾವುದಾದರೊಂದು ಬಗೆಯ ಉಪಾಯದಿಂದಲೇ ಅಂದರೆ ಭಕ್ತಿಯೋಗದಿಂದಲೇ ಭಗವಂತನಲ್ಲಿ ಮನಸ್ಸನ್ನಿಡಬೇಕು. ಹೊರತು ಭಕ್ತಿಯೋಗವ್ಯತಿರಿಕ್ತವಾದ ಕೇವಲ ದ್ವೇಷಾದಿಯಿಂದಲ್ಲ.

ಉಪಾಯವೆಂದರೆ ಮೋಕ್ಷೋಪಾಯವಾದ ಭಕ್ತಿ. ಕೇವಲ ದ್ವೇಷ ಭಯ ಮುಂತಾದವು ಉಪಾಯವೆನಿಸುವುದಿಲ್ಲ ಎಂದು ಶಬ್ದನಿರ್ಣಯದಲ್ಲಿ ಉಕ್ತವಾಗಿದೆ.

❖ ❖ ❖

ಅನಾದಿಭಕ್ತರಾದ ವೈಕುಂಠದ್ವಾರಪಾಲಕರಾದ ಜಯವಿಜಯರೇ ಸನಕಾದಿ ಶಾಪದಿಂದ ಶಿಶುಪಾಲ ದಂತವಕ್ರರಾಗಿ ಜನಿಸಿದ್ದರಿಂದ ಅಸುರಾವೇಶ ಪ್ರಯುಕ್ತ ದ್ವೇಷ ಮಾಡಿದರೂ ಸ್ವಾಭಾವಿಕ ಭಕ್ತಿಯಿಂದ ಅದು ಯುಕ್ತವಾಗಿತ್ತು ಎನ್ನಲು ನಾರದರು ಆ ಸನಕಾದಿ ಶಾಪವೃತ್ತಾಂತವನ್ನು ಧರ್ಮರಾಜನಿಗೆ ಹೇಳಲು ತೊಡಗಿದ್ದಾರೆ.

ಮಾತೃಷ್ವಸೇಯೋ ವಶ್ಚೈದ್ಯೋ ದಂತವಕ್ರಶ್ಚ ಪಾರ್ಥಿವ ।
ಪಾರ್ಷದಪ್ರವರೌ ವಿಷ್ಣೋರ್ವಿಪ್ರಶಾಪಾತ್ಪದಚ್ಯುತೌ ॥ ೩೪ ॥

ರಾಜನೆ, ನಿಮ್ಮ ಚಿಕ್ಕಮ್ಮನ ಮಕ್ಕಳಾದ ಶಿಶುಪಾಲ ದಂತವಕ್ರರು ಅಸುರಾವೇಶದಿಂದ ದ್ವೇಷ ಮಾಡಿದರೂ ಸ್ವಾಭಾವಿಕವಾಗಿ ಅವರು ಭಕ್ತರೇ ಆಗಿದ್ದರು. ಏಕೆಂದರೆ ಅವರು ವಿಷ್ಣುವಿನ ದ್ವಾರಪಾಲಕರಾಗಿದ್ದವರು ಮುನಿಶಾಪದಿಂದ ಪದಚ್ಯುತರಾದರು.

ಬೇರೆ ವ್ಯಾಖ್ಯಾನಕಾರರೆಲ್ಲರೂ 'ಕೇವಲ ದ್ವೇಷದಿಂದ ಮೋಕ್ಷ ಲಭಿಸುತ್ತದೆ. ಆದರಿಂದಲೆ ಶಿಶುಪಾಲನಿಗೆ ಮೋಕ್ಷ ಲಭಿಸಿತೆಂದೇ ಧರ್ಮರಾಜನಿಗೆ ನಾರದರು ಹೇಳಿದರು' ಎಂದಿದ್ದಾರೆ. ಹಾಗಿದ್ದರೆ ಶಿಶುಪಾಲ ವಿಷ್ಣುಪಾರ್ಷದನೊಬ್ಬನ ಅವತಾರವೆಂದು ಏಕೆ ಕಥೆ ಹೇಳಬೇಕಾಗಿತ್ತು? ಇದಕ್ಕೆ ಶ್ರೀಧರ ವಿಶ್ವನಾಥ ವ್ಯಾಖ್ಯಾನಗಳಲ್ಲಿ ಶಿಶುಪಾಲನಿಗೆ ಭಗವಂತನಲ್ಲಿ ಮಹಾದ್ವೇಷ ಏಕೆ ಉಂಟಾಯಿತು? ಮುನಿಶಾಪದಿಂದ ಎನ್ನಲು ಕಥೆ ಹೇಳುತ್ತಾರೆ ನಾರದರು ಎನ್ನುತ್ತಾರೆ.

ಆದರೆ ದ್ವೇಷದಿಂದ ನರಕಕ್ಕೆ ಹೋಗುವವರಿಗೆ ದ್ವೇಷ ಏಕೆ ಬಂತು, ಭಕ್ತಿಯಿಂದ ಮೋಕ್ಷಕ್ಕೆ ಹೋಗುವವರಿಗೆ ಭಕ್ತಿ ಏಕೆ ಬಂತು ಎಂದು ಪ್ರಶ್ನೆಯೇ ಏಳುವುದಿಲ್ಲ. ಭಕ್ತನಾದ ಶಿಶುಪಾಲನಿಗೂ ನರಕಸಾಧನವಾದ ದ್ವೇಷ ಏಕೆ ಬಂತು?

ದ್ವೇಷ ಬಂದರೂ ಮೋಕ್ಷ ಹೇಗೆ ಲಭಿಸಿತು? ಎಂದೇ ಪ್ರಶ್ನೆ ಮಾಡಬೇಕು. ಅದಕ್ಕೆ ಮುನಿಶಾಪದಿಂದ ದ್ವೇಷ ಬಂದಿತು. ಆದರೂ ಸ್ವಾಭಾವಿಕವಾದ ಭಕ್ತಿಯೂ ಇದ್ದಿದ್ದರಿಂದ ಮೋಕ್ಷ ಲಭಿಸಿತೆಂದೇ ಉತ್ತರ ಹೇಳಬೇಕು.

ಗಿರಿಧರ ವ್ಯಾಖ್ಯಾನದಲ್ಲಿ "ಶಿಶುಪಾಲ ದ್ವೇಷದಿಂದ ನಿಂದೆ ಮಾಡಿದರೂ ಕೃಷ್ಣನಿಗೆ ಕೋಪ ಬರಲಿಲ್ಲ, ದ್ವೇಷದ ಫಲವಾಗಿ ಮುಕ್ತಿಯನ್ನೇ ಕೊಟ್ಟ, ಆದರೂ ಅವನನ್ನು ಏಕೆ ವಧಿಸಿದ ಎಂಬ ಪ್ರಶ್ನೆ ಬರುತ್ತದೆ. ಅದಕ್ಕೆ ಉತ್ತರವಾಗಿ 'ಅವನನ್ನು ವೈಕುಂಠಕ್ಕೆ ಕಳಿಸಬೇಕಾಗಿತ್ತು, ಏಕೆಂದರೆ, ಆತ ವೈಕುಂಠದ್ವಾರಪಾಲಕನಾಗಿದ್ದವನು ಎನ್ನಲು ಕಥೆ ಹೇಳುತ್ತಿದ್ದಾರೆ" ಎಂದು ಹೇಳಿದೆ. ಆದರೆ ವೈಕುಂಠಕ್ಕೆ ಕಳಿಸಬೇಕಾದರೆ ವಧೆ ಏಕೆ ಮಾಡಬೇಕು? ಭಕ್ತರನ್ನು ವೈಕುಂಠಕ್ಕೆ ಕಳಿಸಲು ಭಗವಂತ ಅವರನ್ನು ವಧಿಸುವನೇನು? ಮತ್ತು ಕೃಷ್ಣ ಅವನನ್ನು ವಧಿಸಿದ್ದು ನಾನೇ ನಿಮ್ಮನ್ನು ವಧಿಸುವೆನೆಂದು ವರ ನೀಡಿದ್ದರಿಂದ ಹೊರತು ವೈಕುಂಠಕ್ಕೆ ಕಳಿಸುವ ಉದ್ದೇಶದಿಂದಲ್ಲ. ಭಗವಂತ ವರ ಕೊಟ್ಟಿದ್ದು, ಹಾಗೇ ಅವನನ್ನು ವಧಿಸಿದ್ದು ಎನ್ನುವ ಈ ಕಥೆ ಈಗ ಅಪ್ರಸ್ತುತ. ಧರ್ಮರಾಜ ಅದನ್ನು ಕೇಳಿಲ್ಲ.

ಶ್ರೀಮದಾಚಾರ್ಯರು ಹೇಳುತ್ತಾರೆ-

ಸ್ವತೋ ಭಕ್ತಾಶ್ಚೈದ್ಯಾದಯೋಽಪಿ ಪರಾವೇಶಾದ್ ದ್ವೇಷಿಣ
ಇತ್ಯತ್ರ ಹೇತುರ್ಮಾತೃಷ್ವಸೇಯ ಇತ್ಯಾದಿ ।

ಶಿಶುಪಾಲ ಮುಂತಾದವರು ಸ್ವಾಭಾವಿಕವಾಗಿ ಭಕ್ತರಾಗಿದ್ದರೂ ಅಸುರಾವೇಶದಿಂದ ದ್ವೇಷ ಮಾಡಿದರು ಎನ್ನುವಲ್ಲಿ ಕಾರಣನ್ನು 'ಮಾತೃಷ್ವಸೇಯೋ ವಶ್ಚೈದ್ಯಃ' ಎಂದು ಮುಂತಾಗಿ ಹೇಳುತ್ತಾರೆ ಎನ್ನಬೇಕು.

ಕಥೆಯಲ್ಲಿ ಮುನಿಶಾಪದಿಂದ ಜಯವಿಜಯರು ಅಸುರ ಯೋನಿಗಳಲ್ಲಿ ಜನಿಸುತ್ತಾರೆ, ಅಸುರ ಸ್ವಭಾವವನ್ನು ಪಡೆಯುತ್ತಾರೆ. ಆದರೆ ಶಾಪದಿಂದಲೂ ದೇವತೆಗಳು ಅಸುರರಾಗುವುದಿಲ್ಲ, ವರದಿಂದಲೂ ಅಸುರರು ದೇವತೆಗಳಾಗುವುದಿಲ್ಲ. ಅವರಲ್ಲಿ ಈ ವ್ಯತ್ಯಾಸ ಕಂಡು ಬರುವುದು ಅನ್ಯಾವೇಶದಿಂದ ಎನ್ನಬೇಕು. ಹೀಗಾಗಿ ಶಿಶುಪಾಲ ದಂತವಕ್ರರಲ್ಲಿ ಆದಿಹಿರಣ್ಯಕಶಿಪು ಆದಿಹಿರಣ್ಯಾಕ್ಷರ ಆವೇಶವೇ ಶಾಪ ವಶದಿಂದ ಬಂದಿದ್ದರಿಂದ ಅವರು ಅಸುರ ಸ್ವಭಾವ ತೋರುತ್ತ ದ್ವೇಷ ಮಾಡಿದರು. ಶಾಪದ ಅಭಿಪ್ರಾಯ ಹೀಗೇ ಇರುವುದರಿಂದ ಶಾಪವೃತ್ತಾಂತವನ್ನು ನಾರದರು ಹೇಳಿದರು.

❖❖❖

ಸನಕಾದಿ ಮುನಿಗಳು ಒಮ್ಮೆ ವೈಕುಂಠಕ್ಕೆ ಹೋಗಿದ್ದಾಗ ಅಲ್ಲಿ ದ್ವಾರಪಾಲಕರಾಗಿದ್ದ ಜಯವಿಜಯರು ಅವರನ್ನು ತಡೆದರೆಂದು ನಾರದರು ಶಾಪವೃತ್ತಾಂತವನ್ನು ಹೇಳಲು ತೊಡಗಿದ್ದಾರೆ.

ಪಂಚಷಡ್ಢಾಯನಾರ್ಭಾಭಾಃ ಪೂರ್ವೇಷಾಮಪಿ ಪೂರ್ವಜಾಃ ।
ದಿಗ್ವಾಸಸಃ ಶಿಶೂನ್ ಮತ್ವಾ ದ್ವಾಃಸ್ಥೌ ತಾನ್ ಪ್ರತ್ಯಷೇಧತಾಮ್ ॥ ೩೮ ॥

ಸನಕಾದಿಗಳು ಪೂರ್ವಿಕರಾದ ಬೇರೆ ಬ್ರಹ್ಮಪುತ್ರರಿಗಿಂತಲೂ ಮೊದಲಿಗೆ ಜನಿಸಿದವರು. ಆದರೂ ದಿಗಂಬರರಾಗಿ ಐದಾರು ವಯಸ್ಸಿನ ಮಕ್ಕಳಂತಿದ್ದರು. ವೈಕುಂಠದ್ವಾರಪಾಲಕರಾದ ಜಯವಿಜಯರು ಅವರನ್ನು ಮಕ್ಕಳೆಂದು ತಿಳಿದು ಬೆತ್ತದಿಂದ ತಡೆದರು.

ಇಲ್ಲಿ ವಿಷ್ಣುಲೋಕ ನಿವಾಸಿಗಳಿಗೆ ಪ್ರಾಕೃತ ದೇಹೇಂದ್ರಿಯ ಪ್ರಾಣಗಳಿಲ್ಲ ವೆಂದಮೇಲೆ ಶಾಪದಿಂದಲಾದರೂ ಪ್ರಾಕೃತ ಶರೀರದಲ್ಲಿ ಜನನ ಕೂಡುವುದಿಲ್ಲ, ಜಯವಿಜಯರು ಶಾಪದಿಂದ ಹೇಗೆ ಜನಿಸಿದರು ಎಂದು ಧರ್ಮರಾಜ ಕೇಳಿದ್ದ ಪ್ರಶ್ನೆಗೆ ನಾರದರು ಸೂಚ್ಯವಾಗಿ ಉತ್ತರ ನೀಡಿದ್ದಾರೆ. ಬೇರೆ ವ್ಯಾಖ್ಯಾನಕಾರರು ಯಾರೂ ಇದನ್ನು ಗಮನಿಸಿಲ್ಲ. ಶುಕದೇವ ಜೀವಗೋಸ್ವಾಮಿ ವ್ಯಾಖ್ಯಾನಗಳಲ್ಲಿ ಜಯವಿಜಯರು ಸಂಸಾರಿ ಜೀವರೇ ಅಲ್ಲ, ಜನಿಸಿದಂತೆ ತೋರಿಕೊಂಡರಷ್ಟೆ ವೀರರಾಘವ ವಿಷ್ಣುಪ್ರಸಾದ ಈ ವ್ಯಾಖ್ಯಾನಗಳಲ್ಲಿ ಜಯವಿಜಯರು ವೈಕುಂಠದಲ್ಲಿರಲೇ ಇಲ್ಲ, ಉಪೇಂದ್ರಾದಿ ಉಪಾಸನೆಗಳಿಂದ ಉಪೇಂದ್ರಾದಿ ವಿಷ್ಣುಲೋಕಗಳನ್ನು ಹೊಂದಿದ ಕೆಲವು ಜೀವರ ಪೈಕಿ ಇವರೂ ಇಬ್ಬರು ಸಂಸಾರಿ ಜೀವರು. ಹೊರತು ವಿಷ್ಣು ಪಾರ್ಷದರಲ್ಲ ಎಂದಿಟ್ಟುಕೊಳ್ಳಬೇಕು. ಏಕೆಂದರೆ ವಿಷ್ಣುಪಾರ್ಷದರೆಲ್ಲ ನಿತ್ಯಮುಕ್ತರು, ಎಂದಿದ್ದಾರೆ.

ವಸ್ತುತಃ ಶ್ವೇತದ್ವೀಪ ಅನಂತಾಸನ ವೈಕುಂಠವೆಂಬ ಧಾಮತ್ರಯದಲ್ಲಿಯೂ ಮುಕ್ತಸ್ಥಾನ ಅಮುಕ್ತಸ್ಥಾನ ಎಂದು ಬೇರೆಬೇರೆ ಪ್ರದೇಶಗಳಿವೆ. ವಿಷ್ಣುಪಾರ್ಷದರಾದ ಗರುಡ ಅನಂತ ವಿಷ್ವಕ್ಸೇನ ಜಯ ವಿಜಯ ಮುಂತಾದವರಲ್ಲಿಯೂ ಮುಕ್ತರು ಮತ್ತು ಅಧಿಕಾರದಲ್ಲಿದ್ದು ಇನ್ನೂ ಮುಕ್ತರಾಗದಿದ್ದವರೆಂದು ಎರಡು ಬಗೆಯವರಿದ್ದಾರೆ. ನಿತ್ಯಮುಕ್ತರು ಯಾರೂ ಇಲ್ಲ, ಲಕ್ಷ್ಮೀನಾರಾಯಣರಿಬ್ಬರೇ ನಿತ್ಯಮುಕ್ತರು. ಅಮುಕ್ತರಾದ ವಿಷ್ಣುಪಾರ್ಷದರು ಅಮುಕ್ತಸ್ಥಾನದಲ್ಲಿ ಮಾತ್ರ ಇರುವರು. ಅವರಿಗೆ ಮುಕ್ತಸ್ಥಾನದಲ್ಲಿ ಪ್ರವೇಶವಿಲ್ಲ, ಮುಕ್ತಿಹೊಂದಿದ ಬಳಿಕ ಮುಕ್ತಸ್ಥಾನದಲ್ಲಿ ಪ್ರವೇಶ. ಮುಕ್ತರು ಮುಕ್ತಸ್ಥಾನ ಅಮುಕ್ತಸ್ಥಾನಗಳೆರಡರಲ್ಲಿಯೂ ಸ್ವೇಚ್ಛೆಯಿಂದ ವಿಹರಿಸುವರು.

ಅಮುಕ್ತರು ಇನ್ನೂ ಲಿಂಗಭಂಗವಾಗದೆ ಜೀವನ್ಮುಕ್ತ್ಯವಸ್ಥೆಯಲ್ಲಿದ್ದು ಪ್ರಾರಬ್ಧವನ್ನು ಅನುಭವಿಸುತ್ತಿರುತ್ತಾರೆ. ಅದರಿಂದ ಅವರಿಗೆ ಪ್ರಾಕೃತ ಶರೀರೇಂದ್ರಿಯಾದಿಗಳಿವೆ. ವರಶಾಪಾದಿಗಳಿಂದ ಅವರು ಪ್ರಾಕೃತಶರೀರದಿಂದ ಅಂಶತಃ ಜನಿಸಿ ಪ್ರಾರಬ್ಧಾನುಸಾರ ಸುಖದುಃಖಾದಿಗಳನ್ನು ಅನುಭವಿಸುತ್ತಾರೆ. ಸನಕಾದಿಗಳೂ ಜಯವಿಜಯರೂ ಹೀಗೇ ಜೀವನ್ಮುಕ್ತರಾಗಿರುವವರು. ಅದರಿಂದ ಧರ್ಮರಾಜ ಕೇಳಿದ ಪ್ರಶ್ನೆಗೆ ಉತ್ತರವಾಗಿ ನಾರದರು ಈ ಶ್ಲೋಕದಲ್ಲಿ 'ದ್ವಾಃ ಸ್ಥೌ' ಎಂಬ ಶಬ್ದದಿಂದ ಜಯವಿಜಯರು ಸನಕಾದಿಗಳ ಸಂಚಾರಕ್ಕೆ ಯೋಗ್ಯವಾದ ಅಮುಕ್ತಸ್ಥಾನದಲ್ಲಿ ದ್ವಾರಪಾಲನದ ಅಧಿಕಾರದಲ್ಲಿದ್ದ ಜೀವನ್ಮುಕ್ತರು, ಅವರಿಗೆ ಪ್ರಾಕೃತ ಶರೀರದಿಂದ ಜನನವು ವರಶಾಪಾದಿಗಳಿಂದ ಬರಬಹುದೆಂದು ಸೂಚಿಸಿದ್ದಾರೆ.

ದ್ವಾಃಸ್ಥಾವಿತ್ಯನೇನಾಧಿಕಾರಸ್ಥತ್ವಮುಕ್ತಂ ।
ಅಧಿಕಾರಸ್ಥಿತಾಶ್ಚೈವ ವಿಮುಕ್ತಾಶ್ಚ ದ್ವಿಧಾ ಜನಾಃ ।
ವಿಷ್ಣುಲೋಕಸ್ಥಿತಾಸ್ತೇಷಾಂ ವರಶಾಪಾದಿಯೋಗಿನಃ ।
ಅಧಿಕಾರಸ್ಥಿತಾ ಮುಕ್ತಿಂ ನಿಯತಂ ಪ್ರಾಪ್ನುವಂತಿ ಚ ।
ವಿಮುಕ್ತ್ಯನಂತರಂ ತೇಷಾಂ ವರ ಶಾಪಾದಯೋ ನ ತು ।
ದೇಹೇಂದ್ರಿಯಾಸುಯುಕ್ತಾಶ್ಚ ಪೂರ್ವಂ ಪಶ್ಚಾನ್ನ ತೈರ್ಯುತಾಃ ।
ಅಪ್ಯಭೀಮಾನಿಭಿಸ್ತೇಷಾಂ ದೇವೈಃ ಸ್ವಾತ್ಮೋತ್ತಮೈರ್ಯುತಾಃ ।
ಇತಿ ತಂತ್ರಸಾರೇ ।

'ದ್ವಾಃ ಸ್ಥೌ' ಎಂಬ ಶಬ್ದದಿಂದ ಸನಕಾದಿಗಳ ಶಾಪಕ್ಕೆ ಗ್ರಸ್ತರಾದ ಜಯವಿಜಯರು ವಿಷ್ಣುಲೋಕದ ಅಮುಕ್ತಸ್ಥಾನದಲ್ಲಿ ದ್ವಾರಪಾಲಕತ್ವದ ಅಧಿಕಾರದಲ್ಲಿ ನಿಯುಕ್ತರಾದವರು, ಮುಕ್ತರಲ್ಲ ಎಂದು ಹೇಳಿದಂತಾಯಿತು.

ವಿಷ್ಣುಲೋಕದಲ್ಲಿರುವ ಜನರು ಅಧಿಕಾರದಲ್ಲಿರುವವರು ಮುಕ್ತರೆಂದು ಎರಡು ಬಗೆಯವರು. ಅವರಲ್ಲಿ ಅಧಿಕಾರದಲ್ಲಿರುವ ಜನರು ವರಶಾಪ ಮುಂತಾದವುಗಳಿಗೆ ಯೋಗ್ಯರು. ಅವರೂ ಮುಕ್ತಿಯನ್ನು ನಿಯಮೇನ ಹೊಂದುತ್ತಾರೆ. ಮುಕ್ತಿಹೊಂದಿದ ಅನಂತರ ಅವರಿಗೆ ವರಶಾಪಾದಿಗಳಿಲ್ಲ. ಮುಕ್ತಿಗಿಂತ ಪೂರ್ವದಲ್ಲಿ ಪ್ರಾಕೃತದೇಹ ಇಂದ್ರಿಯ ಪ್ರಾಣಗಳಿಂದ ಯುಕ್ತರಾಗಿರುತ್ತಾರೆ. ಮುಕ್ತಿಯ ಅನಂತರ ಅವುಗಳಿಂದ ಯುಕ್ತರಾಗಿರುವುದಿಲ್ಲ. ಮುಕ್ತಿಗೆ ಪೂರ್ವದಲ್ಲಿ ದೇಹೇಂದ್ರಿಯಾಭಿಮಾನಿ

ಗಳಾದ ದೇವತೆಗಳಿಂದ ಕೂಡಿರುತ್ತಾರೆ, ಮುಕ್ತಿಯ ಅನಂತರ ಸ್ವೋತ್ತಮ ದೇವತೆಗಳಿಗೆ ಮಾತ್ರ ವಶರಾಗಿರುತ್ತಾರೆ ಎಂದು ತಂತ್ರಸಾರಗ್ರಂಥದಲ್ಲಿ ಉಕ್ತವಾಗಿದೆ.

❖ ❖ ❖

ಹಿರಣ್ಯಕಶಿಪು ಶಿಶುಪ್ರಹ್ಲಾದನನ್ನು ಕೊಲ್ಲಲು ಸರ್ವಪ್ರಯತ್ನ ಮಾಡಿದರೂ ಶಕ್ತನಾಗಲಿಲ್ಲ ಏಕೆ? ಕಾರಣವನ್ನು ನಾರದರು ಧರ್ಮರಾಜನಿಗೆ ಹೇಳುತ್ತಾರೆ.

ತಂ ಸರ್ವಭೂತಾತ್ಮಭೂತಂ ಪ್ರಶಾಂತಂ ಸಮದರ್ಶನಮ್ ।
ಭಗವತ್ತೇಜಸಾ ಸ್ಪೃಷ್ಟಂ ನಾಶಕ್ನೋದ್ಧಂತುಮುದ್ಯಮೈಃ ॥ ೪೪ ॥

ಪ್ರಹ್ಲಾದ ಎಲ್ಲ ಜೀವಿಗಳ ಅಂತರ್ಯಾಮಿಯಾದ ಭಗವಂತನನ್ನೇ ದೃಢಮನಸ್ಸಿನಿಂದ ಆಶ್ರಯಿಸಿದ್ದ. ಮಹಾಭಗವದ್ಭಕ್ತ. ಎಲ್ಲೆಡೆ ಒಂದೇ ರೀತಿಯಿರುವ ಭಗವಂತನನ್ನು ಕಾಣುತ್ತಿದ್ದ. ಭಗವದನುಗ್ರಹದ ಶಕ್ತಿಯಿಂದ ತುಂಬಿಕೊಂಡಿದ್ದ. ಆದರಿಂದ ಎಲ್ಲ ಪ್ರಯತ್ನಮಾಡಿದರೂ ಅವನನ್ನು ಕೊಲ್ಲಲು ಹಿರಣ್ಯಕಶಿಪು ಶಕ್ತನಾಗಲಿಲ್ಲ.

[೧]ಇಲ್ಲಿ 'ಸರ್ವಭೂತಾತ್ಮಭೂತಂ' ಎಂದರೆ ಎಲ್ಲ ಪ್ರಾಣಿಗಳಿಗೂ ಆತ್ಮನಾದ

---

೧. ಸರ್ವಭೂತಾನಾಮಾತ್ಮಭೂತಂ । ಕುತಃ॥ ಸಮಂ ಬ್ರಹ್ಮೈವ ಪಶ್ಯತೀತಿ ತಥಾ ತಂ ।
-ಶ್ರೀಧರಃ

ಸರ್ವೇಷಾಂ ಭೂತಾನಾಮಾತ್ಮಭೂತಂ। ಪರಮಪ್ರೇಮಾಸ್ಪದಂ। -ಜೀವಗೋಸ್ವಾಮೀ

ಸರ್ವೇಷಾಂ ಭೂತಾನಾಮಾತ್ಮಾ ಭಗವಾನ್ ಸ ಭೂತೋಽನುಭೂತಃ ಸಾಕ್ಷಾದ್ ದೃಷ್ಟೋ ಯೇನ ತಂ । -ಶುಕದೇವಃ

ಸರ್ವಭೂತಾನಾಮಾತ್ಮಭೂತ ಈಶ್ವರಃ ತತ್ಪ್ರಕಾರತಯಾ ತದಾತ್ಮತಾಪನ್ನಂ ।-ಭಗವತ್ಪ್ರಸಾದಃ

ಸರ್ವಭೂತಾನಾಮಾತ್ಮಾ ಈಶ್ವರಸ್ತದ್ಭೂತಂ ತತ್ಪ್ರಕಾರತಯಾ ತದಾತ್ಮತಾಪನ್ನಂ। 'ಶಾಸ್ತ್ರದೃಷ್ಟ್ಯಾ ತೂಪದೇಶೋ ವಾಮದೇವವತ್' ಇತ್ಯುಕ್ತರೀತ್ಯಾ ಯಥಾ ವಾಮದೇವಃ 'ತದ್ಧೈತತ್ ಪಶ್ಯನ್ ಋಷಿರ್ವಾಮದೇವಃ ಪ್ರತಿಪೇದೇ ಅಹ ಮನುರಭವಂ ಸೂರ್ಯಶ್ಚಾಹಂ ಕಕ್ಷೀವಾನ್ ಋಷಿರಸ್ಮಿ ವಿಪ್ರಃ' ಇತಿ ಸರ್ವಭೂತಾಂತರಾತ್ಮಾನಂ ಭಗವಂತಂ ಸ್ವಶರೀರಕಂ ಧೀಸಾತ್ಕೃತ್ಯ ಸರ್ವಪ್ರಕಾರತಯಾ ಸ ಏವಾವಸ್ಥಿತ ಇತಿ ಪ್ರಕಾರಭೇದೇಽಪಿ ಪ್ರಕಾರ್ಯೈಕ್ಯಾದ್ ವಿಶಿಷ್ಟವಸ್ತ್ವೇಕದೇಶತ್ವಾತ್ ಸ್ವಸ್ಮಿನ್ ಸ್ವನಿಷ್ಠತ್ವಾಭಾವಮಾಲಕ್ಷ್ಯ ಅಹಮೇವ ಸರ್ವಭೂತಾಂತರಾತ್ಮಾ ಭಗವಾನ್ ಇತ್ಯನುಸಂಹಿತವಾನಿತ್ಯಾಶಯೇನ ತಸ್ಯ ವಿಶೇಷಣಂ ಸರ್ವಭೂತಾತ್ಮಭೂತಮಿತ್ಯುಕ್ತಂ। -ವೀರರಾಘವಃ

ಪರಬ್ರಹ್ಮನನ್ನೇ ಕಾಣುತ್ತ ಅವನೇ ತಾನೆಂದು ಪ್ರಹ್ಲಾದ ಚಿಂತಿಸಿದನೆಂದು ಶ್ರೀಧರವ್ಯಾಖ್ಯಾನ ಹೇಳುತ್ತದೆ. ಆದರೆ ಪ್ರಹ್ಲಾದನಿಗೆ ತಾಯಿಯ ಗರ್ಭದಲ್ಲಿ ನಾರದರು ಉಪದೇಶಿಸಿದ ನರಸಿಂಹಮಂತ್ರದ ಧ್ಯೇಯಮೂರ್ತಿ ನರಸಿಂಹ ತಾನು ನರನೂ ಅಲ್ಲ, ಸಿಂಹವೂ ಅಲ್ಲ, ನರನಂತೆ ಸಿಂಹದಂತೆ ಕಾಣುವೆನಷ್ಟೆ ಎಂದು ಸರ್ವವಿಲಕ್ಷಣತ್ವವನ್ನೇ ತೋರಿದ, ಅಭೇದವನ್ನಲ್ಲ.

ಸರ್ವಪ್ರಾಣಿಗಳಿಗೆ ಪರಮಪ್ರೇಮಾಸ್ಪದ ಪ್ರಹ್ಲಾದನೆಂದು ಜೀವಗೋಸ್ವಾಮಿ ವ್ಯಾಖ್ಯಾನ. ಆದರೆ ಹಿರಣ್ಯಕಶಿಪುವಿಗೆ ಪರಮಪ್ರೇಮಾಸ್ಪದನೆನಿಸಲಿಲ್ಲ, ಪ್ರಹ್ಲಾದ.

ಸರ್ವಪ್ರಾಣಿಗಳ ಅಂತರಾತ್ಮನಾದ ಭಗವಂತನನ್ನು ಪ್ರಹ್ಲಾದ ಸಾಕ್ಷಾತ್ಕರಿಸಿಕೊಂಡಿದ್ದನೆಂದು ಶುಕದೇವ ವ್ಯಾಖ್ಯಾನ. ಆದರೆ 'ಸಮದರ್ಶನಂ' ಎಂಬ ಶಬ್ದದಿಂದಲೂ ಇದನ್ನೇ ಹೇಳುವುದರಿಂದ ಪುನರುಕ್ತಿಯಾಗುತ್ತದೆ.

ವೀರರಾಘವ ಭಗವತ್ಪ್ರಸಾದ ವ್ಯಾಖ್ಯಾನಗಳಲ್ಲಿ ಎಲ್ಲ ಜೀವಿಗಳೂ ಭಗವಂತನ ಶರೀರಗಳಾಗಿವೆ. ಎಲ್ಲರ ಆತ್ಮ ಅವನೆ, ಅವನೇ ನನಗೂ ಆತ್ಮ ಎಂದು ತಿಳಿದವನು ಪ್ರಹ್ಲಾದ. ಸರ್ವಭೂತಾತ್ಮನಾದ ಭಗವಂತನೇ ತಾನು, ಅಂದರೆ ವಾಮದೇವಋಷಿ ನಾನೇ ಮನು, ನಾನೇ ಸೂರ್ಯ ಎಂದಂತೆ ಪ್ರಹ್ಲಾದನೂ ನಾನೇ ಭಗವಂತ, ಎಲ್ಲರೂ ಭಗವಂತರೆ ಎಂದನಂತೆ. ಆದರೆ ಅಂತರ್ಯಾಮ್ಯೈಕ್ಯ ವಿವಕ್ಷೆಯನ್ನು ಮಾತ್ರ ಒಪ್ಪಬಹುದು. ಎಲ್ಲರೂ ಅವನ ಶರೀರ ಎನ್ನುವುದನ್ನು ಒಪ್ಪಲಾಗದು. ಯಾರೂ ಅವನಿಗೆ ಶರೀರರಲ್ಲ, ಶರೀರದಂತೆ ಅಧೀನರು. ಅದರಿಂದ ಹೀಗೆ ಹೇಳಬೇಕು-

ಸರ್ವಭೂತಾತ್ಮನಿ ಭೂತಂ।

ಎಲ್ಲರ ಸ್ವಾಮಿಯಾದ ಭಗವಂತನನ್ನೇ ದೃಢ ಮನಸ್ಸಿನಿಂದ ಆಶ್ರಯಿಸಿದವನು, ತಾನು ಅವನ ದಾಸನೆಂದು ನಂಬಿದವನು ಪ್ರಹ್ಲಾದ ಎಂದರ್ಥ.

❖❖❖

ಜಯವಿಜಯರು ಹಿರಣ್ಯಕಶಿಪು ಹಿರಣ್ಯಾಕ್ಷರಾಗಿ ಜನಿಸಿ ಭಗವಂತನಿಂದ ಹತರಾದ ಬಳಿಕ ಅವರೆ ರಾವಣ ಕುಂಭಕರ್ಣರಾಗಿ ಅವತರಿಸಿದರೆಂದು ನಾರದರು ಧರ್ಮರಾಜನಿಗೆ ಹೇಳುತ್ತಾರೆ.

ತತಸ್ತೌ ರಾಕ್ಷಸೌ ಜಾತೌ ಕೇಶಿನ್ಯಾಂ ವಿಶ್ರವಃಸುತೌ।
ರಾವಣಃ ಕುಂಭಕರ್ಣಶ್ಚ ಸರ್ವಲೋಕಪ್ರತಾಪನೌ ॥ ೪೫ ॥

ಮುಂದೆ ಜಯವಿಜಯರು ವಿಶ್ರವಸನೆಂಬ ಮುನಿಯಿಂದ ಕೇಶಿನಿ ಎಂಬ ರಾಕ್ಷಸಿಯಲ್ಲಿ ರಾಕ್ಷಸರಾಗಿ ಜನಿಸಿದರು. ಅವರೇ ಸರ್ವಲೋಕ ಕಂಟಕರೆನಿಸಿದ ರಾವಣ ಕುಂಭಕರ್ಣರು.

ಇಲ್ಲಿ ಹಿಂದೆ 'ಪಾಪಿಷ್ಠಾಮಾಸುರೀಂ ಯೋನಿಂ' ಎಂದು ಅಸುರಜನ್ಮ ಬರುವಂತೆ ಸನಕಾದಿಗಳು ಜಯವಿಜಯರನ್ನು ಶಪಿಸಿದ್ದಾರೆ. ಆ ಶಾಪಕ್ಕೆ ಅನುಸಾರವಾಗಿ ಹಿರಣ್ಯಕಶಿಪು ಹಿರಣ್ಯಾಕ್ಷ ಜನ್ಮದಲ್ಲಿ ಅಸುರಶರೀರ ಬಂದರೂ ರಾವಣಕುಂಭಕರ್ಣ ಜನ್ಮದಲ್ಲಿ ರಾಕ್ಷಸ ಜನ್ಮವೇಕೆ ಬಂದಿತು? ಶಿಶುಪಾಲ ದಂತವಕ್ರ ಜನ್ಮದಲ್ಲಿ ಕ್ಷತ್ರಿಯ ರಾಜರಾಗಿ ಏಕೆ ಜನಿಸಿದರು? ಎಂಬ ಪ್ರಶ್ನೆ ಬರುತ್ತದೆ. ಮತ್ತು ಅಸುರ ರಾಕ್ಷಸ ಶರೀರಗಳು ಪಾಪಿಷ್ಠವೆಂದರೂ, ಕ್ಷತ್ರಿಯವಾಗಿ ಪಟ್ಟಾಭಿಷೇಕದಿಂದ ಪವಿತ್ರವಾಗುವ ರಾಜಶರೀರ ಪಾಪಿಷ್ಠ ಹೇಗೆ ಎಂಬ ಪ್ರಶ್ನೆಯೂ ಬರ್ತುದೆ. ಅದಕ್ಕೆ ಹೀಗೆ ಸಮಾಧಾನ ಹೇಳಬಹುದು. ಆಸುರೀಯೋನಿ, ಅಸುರ ಜನ್ಮ ಎಂದರೆ ನ ಸುರ ಅಸುರ, ಸುರರಲ್ಲದವರು ರಾಕ್ಷಸರು, ಪಟ್ಟಾಭಿಷಿಕ್ತರಾದ ಕ್ಷತ್ರಿಯರಾಜರು ಕೂಡ. ಅದರಿಂದ ಅಸುರ ಶಬ್ದ ರಾಕ್ಷಸರಿಗೂ ಮನುಷ್ಯರಾಜರಿಗೂ ಕೂಡುತ್ತದೆ. ಮತ್ತು ಪಾಪಿಷ್ಠ ಎಂದರೆ ಶರೀರವೆ ಮಹಾಪಾಪಿಯಾಗುವುದಿಲ್ಲವಾದ್ದರಿಂದ ಮಹಾಪಾಪಕಾರಿಗಳಾದ ದೈತ್ಯರ ಆವೇಶಯುಕ್ತವಾದುದು ಮಹಾಪಾಪಿ, ಪಾಪಿಷ್ಠ. ಅಂಥ ಶರೀರದಿಂದ ಜನಿಸಿದ್ದಾರೆ. ಶಿಶುಪಾಲ ದಂತವಕ್ರರ ರಾಜಶರೀರದಲ್ಲಿಯೂ ಮಹಾಪಾಪರೆನಿಸಿದ ಆದಿ ಹಿರಣ್ಯಕಶಿಪು ಹಿರಣ್ಯಾಕ್ಷರ ಆವೇಶವಿದ್ದಿತು. ಹೀಗೆ ಶಾಪಕ್ಕೆ ಅನುಗುಣವಾಗಿಯೆ ಮೂರು ಜನ್ಮಗಳು ಬಂದಿವೆ.

ಆದರೂ ಮೊದಲನೇ ಜನ್ಮ ಸಾಕ್ಷಾದ್ ದಿತಿಯಲ್ಲಿ ದೈತ್ಯಜನ್ಮ. ಎರಡನೆಯದು ಮಾತ್ರ ರಾಕ್ಷಸ ಜನ್ಮವೇಕಾಯಿತು? ಮೂರನೆಯದಾಗಿ ಮನುಷ್ಯಜನ್ಮವೇಕೆ ಬಂದಿತು? ಇದು ಆಕಸ್ಮಿಕವೆ? ಎಂದರೆ ಅಲ್ಲ, ವಿಶೇಷ ಕಾರಣವಿದೆ ಎಂದು ಗರುಡಪುರಾಣ ಹೇಳುತ್ತದೆ.

ಹಿರಣ್ಯಕಶಿಪುವನ್ನು ಸಂಹರಿಸಲು ಬಂದ ನರಸಿಂಹ, ಹಿರಣ್ಯಾಕ್ಷನನ್ನು ಸಂಹರಿಸಲು ಬಂದ ವರಾಹ ಇಬ್ಬರೂ ಶರೀರದಲ್ಲಿ ನರರಂತೆ ಮುಖದಲ್ಲಿ ಮಾತ್ರ ಸಿಂಹವರಾಹಗಳಂತೆ ಇದ್ದರು. ರುದ್ರನ ಅನುಚರರಾದ ಭೂತಗಳು ಕ್ರೂರವಾಗಿದ್ದು ಹೀಗೇ ನಾನಾ ಮೃಗಗಳ ಮುಖಗಳನ್ನು ಹೊಂದಿರುತ್ತವೆ. ಅಂತ್ಯಕಾಲದಲ್ಲಿ ಹಿರಣ್ಯಕಶಿಪು ಹಿರಣ್ಯಾಕ್ಷರು ಭಗವಂತನಲ್ಲಿ ಈ ಕ್ರೂರಭೂತಗಳ ಭಯಾನಕ ಆಕಾರವನ್ನು ಚಿಂತಿಸಿದ್ದರಿಂದ, 'ಯಂ ಯಂ ವಾಪಿ ಸ್ಮರನ್ ಭಾವಂ ತ್ಯಜತ್ಯಂತೇ ಕಲೇವರಂ' ಎಂದು ಭಗವದ್ಗೀತೆ ಹೇಳುವಂತೆ ಮುಂದಿನ ಜನ್ಮದಲ್ಲಿ ಕ್ರೂರ

ವಿಕೃತರೂಪದ ಭಯಾನಕ ರಾಕ್ಷಸರಾಗಿ ಹುಟ್ಟಿದರು. ಆಗ ಅವರನ್ನು ಸಂಹರಿಸಲು ಬಂದ ಶ್ರೀರಾಮ ಸುಂದರಸೌಮ್ಯಾಕಾರದ ಕ್ಷತ್ರಿಯ ರಾಜಶರೀರದವನು. ಅದನ್ನು ಚಿಂತಿಸುತ್ತ ಶರೀರತ್ಯಾಗ ಮಾಡಿದ್ದರಿಂದ ಶಿಶುಪಾಲ ದಂತವಕ್ರರಾಗಿ ಸೌಮ್ಯ ರಾಜಶರೀರದಿಂದಲೇ ಜನಿಸಿದರು. ಶ್ರೀರಾಮನನ್ನು ಮನುಷ್ಯನೆಂದು ಚಿಂತಿಸಿದರು, ದೇವನೆಂದಲ್ಲ. ದೇವತೆಗಳಿಂದ ತನಗೆ ಮರಣ ಬರಬಾರದೆಂದು ವರವನ್ನೇ ಪಡೆದಿದ್ದ ರಾವಣ. ಹೀಗಾಗಿ ಮನುಷ್ಯನೆಂದು ಅಂತ್ಯಕಾಲದಲ್ಲಿ ಚಿಂತಿಸಿದ್ದರಿಂದ ಮನುಷ್ಯರಾಗಿ ಹುಟ್ಟಿದರು. ಶಿಶುಪಾಲ ದಂತವಕ್ರ ಜನ್ಮದಲ್ಲಿ ಶ್ರೀಕೃಷ್ಣ ಚಕ್ರದಿಂದ ಶಿರಶ್ಛೇದ ಮಾಡಿದ್ದರಿಂದ ಆತ ಚಕ್ರಶಂಖಗದಾಪದ್ಮಧಾರಿ ದೇವೋತ್ತಮನೆಂದು ಚಿಂತಿಸಿ ಪ್ರಾಣತ್ಯಾಗ ಮಾಡಿದರು. ಅದರಿಂದ ಅವರು ಮುಂದೆ ಚಕ್ರಾದ್ಯಾಯುಧಧಾರಿಯಾದ ಭಗವಂತನ ಸಾರೂಪ್ಯವುಳ್ಳ ದೇವಶರೀರದಿಂದ ವೈಕುಂಠದಲ್ಲಿ ದ್ವಾರಪಾಲಕರಾದರು.

ಹಿರಣ್ಯಕಶಿಪುರ್ಭೂತಮಮನ್ಯತ ಮೃತೌ ಹರಿಂ ।
ಅತೋ ಭಯಾನಕೋ ಜಾತಸ್ತತ್ರ ರಾಜಾನಮೇವ ಚ ।
ಮತ್ವಾ ರಾಜೈವ ಸಂಜಾತಃ ಕೃಷ್ಣಂ ಚಕ್ರಾದಿಲಕ್ಷಣೈಃ ।
ಮೃತಿಕಾಲೇ ಹರಿಂ ಚೈವ ಮತ್ವಾ ಭಕ್ತ್ಯೈವ ಕೇವಲಂ ।
ದ್ವಾಃಸ್ಥತ್ವಂ ಹರಿಮಾವಿಶ್ಯ ಪ್ರಾಪ್ಯೈವ ಮನುಜೋಽಪಿತು ।

ಇತಿ ಗಾರುಡೇ ।

ಹಿರಣ್ಯಕಶಿಪು ಹಿರಣ್ಯಾಕ್ಷರು ಮೃತಿಕಾಲದಲ್ಲಿ ಹರಿಯನ್ನು ಭಯಾನಕಭೂತವೆಂದು ತಿಳಿದು ರಾವಣ ಕುಂಭಕರ್ಣರಾಗಿ ಭಯಾನಕ ರಾಕ್ಷಸರಾಗಿ ಜನಿಸಿದರು. ಆ ಜನ್ಮದಲ್ಲಿ ಹರಿಯನ್ನು ರಾಜನೆಂದು ತಿಳಿದು ಶಿಶುಪಾಲ ದಂತವಕ್ರರೆಂಬ ಮನುಷ್ಯ ರಾಜರಾಗಿ ಜನಿಸಿದರು. ಆಗ ಕೃಷ್ಣನನ್ನು ಚಕ್ರ ಮುಂತಾದ ಲಕ್ಷಣಗಳಿಂದ ಹರಿಯೆಂದು ತಿಳಿದು ಭಕ್ತಿಯಿಂದ ಚಿಂತಿಸಿ ಹರಿಯ ಉದರವನ್ನು ಹೊಕ್ಕು ದ್ವಾರಪಾಲಕರಾದರು ಎಂದು ಗರುಡಪುರಾಣದಲ್ಲಿ ಹೇಳಿದೆ.

ಭಾಗವತದಲ್ಲಿ ದ್ವೇಷ ಭಯಾದಿಗಳಿಂದ ಶಿಶುಪಾಲಾದಿಗಳಿಗೆ ಮುಕ್ತಿಯಾಯಿತೆಂದು ಏಕೆ ಹೇಳಬೇಕಾಗಿತ್ತು? ಹೇಳಿದರೂ, 'ದ್ವೇಷಭಯಾದಿಗಳು ಭಕ್ತಿಯುಕ್ತವಾಗಿದ್ದರೆ ಮೋಕ್ಷಕ್ಕೆ ವಿರೋಧಿಯಾಗುವುದಿಲ್ಲ' ಎಂದು ಸ್ಪಷ್ಟ ಏಕೆ ಹೇಳಲಿಲ್ಲ? ಎಂಬ ಪ್ರಶ್ನೆಗೆ ಪ್ರಕಾಶಸಂಹಿತಾವಚನ ಸಮಾಧಾನ ನೀಡುತ್ತದೆ.

ವಿಷ್ಣುಭಕ್ತೇಶ್ಚ ತಜ್ಜ್ಞಾನಾದನ್ಯತೋ ಮುಕ್ತಿವಾಚಕಾಃ
ವಿಷ್ಣೋರ್ಗುಣಹ್ರಾಸವಾಚಃ ಶ್ರೀಬ್ರಹ್ಮಾದೇಸ್ತಥಾಽಕ್ರಮಾತ್ ।
ವಿಷ್ಣ್ವಾದಿದ್ವೇಷತಶ್ಚೈವ ಸುಖವಾಚಸ್ತಥಾಽಖಿಲಾಃ
ಮೋಹನಾರ್ಥಾಃ ಸಮುದ್ದಿಷ್ಟಾ ಯಥಾರ್ಥದ್ಯೋತಕಾಸ್ತಥಾ।
ಇತಿ ಪ್ರಕಾಶಸಂಹಿತಾಯಾಂ ।

ವಿಷ್ಣುಭಕ್ತಿ ವಿಷ್ಣುಜ್ಞಾನಗಳಿಂದ ಹೊರತು ದ್ವೇಷಭಯಾದಿಗಳಿಂದಲೂ ಮುಕ್ತಿಯಾಗುವುದೆಂದು ಹೇಳುವ ವಚನಗಳಾಗಲಿ ವಿಷ್ಣು ರಮಾ ಬ್ರಹ್ಮಾದಿಗಳಲ್ಲಿ ತಾರತಮ್ಯವನ್ನು ಕಡೆಗಣಿಸಿ ಅವರ ಗುಣಗಳಲ್ಲಿ ನ್ಯೂನತೆಯನ್ನು ಬಣ್ಣಿಸುವ ವಚನಗಳಾಗಲಿ, ವಿಷ್ಣುವನ್ನು ದ್ವೇಷಿಸಿದರೂ ಯಾಗಾದಿ ಕರ್ಮಗಳಿಂದ ಸುಖಉಂಟೆನ್ನುವ ವಚನಗಳಾಗಲಿ ಎಲ್ಲವೂ ಕೇವಲ ಅಯೋಗ್ಯರಿಗೆ ಮೋಹನಕ್ಕಾಗಿ ಹೊರಟಿವೆ. ವಿಚಾರ ಮಾಡಿದರೆ ಅವು ಕೂಡ ಅಸುರಾವೇಶದಿಂದ ಭಕ್ತರು ಅಪರಾಧ ಮಾಡಿದರೂ ಹರಿ ಅದನ್ನು ಕ್ಷಮಿಸುತ್ತಾನೆ ಎಂದು ವಾಸ್ತವ ಪ್ರಮೇಯವನ್ನೂ ವ್ಯಕ್ತಮಾಡುತ್ತವೆ ಎಂದು ಪ್ರಕಾಶಸಂಹಿತೆಯಲ್ಲಿ ಉಕ್ತವಾಗಿದೆ.

❖ ❖ ❖

ಶಿಶುಪಾಲದಂತವಕ್ರರು ಶ್ರೀಕೃಷ್ಣನಲ್ಲಿ ವೈರಪೂರ್ವಕ ಭಕ್ತಿಯಿಂದ ತೀವ್ರಧ್ಯಾನಮಾಡಿ ಶ್ರೀಕೃಷ್ಣನ ಉದರವನ್ನು ಪ್ರವೇಶಿಸಿ ಹರಿಯ ದ್ವಾರಪಾಲಕರಾದರೆಂದು ನಾರದರು ಧರ್ಮರಾಜನಿಗೆ ಉಪದೇಶಿಸುತ್ತಾರೆ.

ವೈರಾನುಬಂಧತೀವ್ರೇಣ ಧ್ಯಾನೇನಾಚ್ಯುತಸಾಮ್ಯತಾಮ್ ।
ನೀತೌ ಪುನರ್ಹರೇಃ ಪಾರ್ಶ್ವಂ ಜಗ್ಮತುರ್ವಿಷ್ಣುಪಾರ್ಷದೌ ॥ ೪೮ ॥

ಆ ರಾವಣ ಕುಂಭಕರ್ಣರೇ ನಿನ್ನ ಚಿಕ್ಕಮ್ಮನ ಮಕ್ಕಳಾಗಿ ಹುಟ್ಟಿ ವೈರಪೂರ್ವಕ ಭಕ್ತಿಯಿಂದ ಉತ್ಕಟವಾದ ಧ್ಯಾನದಿಂದ ಅಚ್ಯುತನ ಉದರವನ್ನು ಪ್ರವೇಶಿಸಿದ್ದಾರೆ. ಮುಂದೆ ಶ್ರೀಕೃಷ್ಣ ಪರರಧಾಮಕ್ಕೆ ಹೋಗುವಾಗ ಇವರು ಹರಿಯ ದ್ವಾರಪಾಲಕರಾಗಿ ತಮ್ಮ ಮೂಲರೂಪದಲ್ಲಿ ಐಕ್ಯಹೊಂದುತ್ತಾರೆ.

ಇಲ್ಲಿ 'ವೈರಾನುಬಂಧ ತೀವ್ರೇಣ' ಎಂಬಲ್ಲಿ ವೈರಾನುಬಂಧವೆಂದರೆ ಹಿಂದೆ 'ತಸ್ಮಾದ್ ವೈರಾನುಬಂಧೇನ(ಶ್ಲೋಕ ೨೭) 'ಯಥಾ ವೈರಾನುಬಂಧೇನ' (ಶ್ಲೋಕ

೨೮) ಎಂಬಲ್ಲಿ ಹೇಳಿದಂತೆ ಸತತವಾಗಿ ಅವಿಚ್ಛಿನ್ನವಾಗಿ ಉಕ್ಕುವ ವೈರಭಾವ ವಿವಕ್ಷಿತವಲ್ಲ. [೧]ಬೇರೆ ವ್ಯಾಖ್ಯಾನಕಾರರು ಆ ಅರ್ಥವನ್ನೇ ಇಟ್ಟುಕೊಂಡಿದ್ದಾರೆ. ಅದು ವೈರದಿಂದಲೂ ಮೋಕ್ಷ ಲಭ್ಯವೆಂಬ ಅವರ ಸಿದ್ಧಾಂತಕ್ಕೆ ಸರಿಹೊಂದುತ್ತದೆ. ಆಂತರಿಕವಾಗಿ ಸ್ವಾಭಾವಿಕ ಭಕ್ತಿ ಮಾಡುತ್ತಲೇ ಅಸುರಾವೇಶದಿಂದ ಹೊರಗೆ ಮಾತ್ರ ಆಗಾಗ ವೈರ ಮಾಡುವ ಶಿಶುಪಾಲನಂಥ ಶಾಪಗ್ರಸ್ತರಾದ ಅನಾದಿ ಭಕ್ತರಿಗೆ ಭಗವಂತ ಕರುಣೆಯಿಂದ ಮೋಕ್ಷ ನೀಡುತ್ತಾನೆ, ಅವರು ಮಾಡಿದ ವೈರವನ್ನು ಮರೆಯುತ್ತಾನೆ ಎನ್ನುವ ನಮ್ಮ ಸಿದ್ಧಾಂತದಲ್ಲಿ 'ವೈರಾನುಬಂಧ' ಶಬ್ದಕ್ಕೆ ಬೇರೇ ಅರ್ಥ ಹೇಳಬೇಕಾಗುತ್ತದೆ. ವೈರದ ಅನುಬಂಧ, ವೈರಭಾವ ಅನಾದಿಭಕ್ತರಲ್ಲಿ ಸತತವಾಗಿ ಉಕ್ಕುವುದಿಲ್ಲ, ವೈರಸಹಿತವಾದ ಅನುಬಂಧ, ಅಂದರೆ ಭಕ್ತಿ. ಅನುಬಂಧಶಬ್ದ ಭಕ್ತಿವಾಚಕವೆನ್ನಲು ಪ್ರಕಾಶಸಂಹಿತಾವಚನ ಆಧಾರ.

ವೈರಾನುಬಂಧಃ ವೈರಯುಕ್ತಾ ಭಕ್ತಿಃ ।
ಅನುಬಂಧಸ್ತು ಭಕ್ತಿಃ ಸ್ಯಾದ್ ಬಂಧಃ ಸ್ನೇಹ ಉದಾಹೃತಃ ।
ಇತಿ ಚ ।

'ವೈರಾನುಬಂಧ'ವೆಂದರೆ ಇಲ್ಲಿ ವೈರಯುಕ್ತವಾದ ಭಕ್ತಿ ವಿವಕ್ಷಿತ.

ಅನುಬಂಧ ಶಬ್ದಕ್ಕೆ ಭಕ್ತಿ ಎಂಬ ಅರ್ಥವಿದೆ ಎನ್ನಲು ಪ್ರಕಾಶ ಸಂಹಿತಾವಚನ ಆಧಾರವಾಗಿದೆ. 'ಅನುಬಂಧವೆಂದರೆ ಭಕ್ತಿ ಬಂಧವೆಂದರೆ ಸ್ನೇಹ' ಎಂದು ಆ ವಚನವು ಹೇಳುತ್ತಿದೆ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ಸಪ್ತಮಸ್ಕಂಧೇ
ಪ್ರಥಮೋಽಧ್ಯಾಯಃ

---

೧. ವೈರೇ ವೈರಭಾವೇ ಯೋಽನುಬಂಧಃ ಸಾತತ್ಯಂ । -ವಿಶ್ವನಾಥಃ
ವೈರಾನುಬಂಧೋ ವೈರಭಾವಾವಿಚ್ಛೇದಃ । -ಜೀವಗೋಸ್ವಾಮಿ

ಅಧ್ಯಾಯ-೨

ಅಧ್ಯಾಯ ಸಾರಾಂಶ

ತಮ್ಮನಾದ ಹಿರಣ್ಯಾಕ್ಷ ಶ್ರೀವರಾಹನಿಂದ ಪತನಾದುದನ್ನು ಕೇಳಿದೊಡನೆ ಹಿರಣ್ಯಕಶಿಪು ಕೋಪದಿಂದ ಉರಿದು ದಾನವರಿಗೆ ಆಜ್ಞಾಪಿಸಿದ 'ಹರಿಗೆ ದೇವಾಸುರರಲ್ಲಿ ಪಕ್ಷಪಾತವಿಲ್ಲದಿದ್ದರೂ ದೇವತೆಗಳು ಅವನನ್ನು ತಮ್ಮ ಪಕ್ಷಕ್ಕೆ ಸೆಳೆದುಕೊಂಡು ಅವನ ಮೂಲಕ ನನ್ನ ಪ್ರೀತಿಯ ತಮ್ಮನನ್ನು ಕೊಲ್ಲಿಸಿದ್ದಾರೆ. ಏಕೆಂದರೆ ಅವನಿಗೆ ಸ್ಥಿರ ಬುದ್ಧಿಯಿಲ್ಲ. ತನ್ನನ್ನು ಸೇವಿಸುವವರಿಗೆ ತಾನು ಸೇವಕನಾಗುತ್ತಾನೆ. ಅವನನ್ನು ವಧಿಸಿ ತಮ್ಮನಿಗೆ ರಕ್ತತರ್ಪಣ ವಿತ್ತಾಗಲೇ ನನ್ನ ಮನಸ್ಸಿಗೆ ಶಾಂತಿ ದೊರಕುವುದು. ದೇವತೆಗಳಿಗೆ ಅವನೇ ಬಲ. ಅವನಿಗೆ ಬ್ರಾಹ್ಮಣರ ಯಜ್ಞಾದಿ ಕರ್ಮಗಳೆ ಬಲ. ಆದರಿಂದ ನೀವೆಲ್ಲರೂ ಅವುಗಳನ್ನು ನಾಶಪಡಿಸಿರಿ.' ದಾನವರು ಮೊದಲೆ ಹಿಂಸಾಪ್ರಿಯರು. ಹಿರಣ್ಯಕಶಿಪುವಿನ ಆಜ್ಞೆಯಾದ ಮೇಲಂತೂ ಇನ್ನಷ್ಟು ಹಿಂಸೆಯಲ್ಲಿ ನಿರತರಾದರು. ಎಲ್ಲ ಲೋಕಗಳನ್ನು ನಾಶಪಡಿಸಲು ತೊಡಗಿದರು. ಲೋಕಪಾಲಕರು ದೇವತೆಗಳು ಸ್ವರ್ಗವನ್ನು ತೊರೆದು ಭೂಮಿಯಲ್ಲಿ ಅದೃಶ್ಯರಾಗಿ ಸಂಚರಿಸಿ ಅಸುರರಿಂದ ಪೀಡಿತರಾದ ಜೀವಿಗಳನ್ನು ತಮ್ಮ ಅದೃಶ್ಯಹಸ್ತಗಳಿಂದ ಸಂತೈಸಿದರು.

ಹಿರಣ್ಯಕಶಿಪು ದುಃಖಿಸುತ್ತ ಸತ್ತ ತಮ್ಮನಿಗೆ ಧರ್ಮೋದಕವಿತ್ತು ತಮ್ಮನ ಮಕ್ಕಳನ್ನೂ ತಾಯಿಯಾದ ದಿತಿಯನ್ನೂ ಸಂತೈಸುತ್ತ ತನ್ನ ಸ್ವಾಭಾವಿಕವಾದ ಹರಿಭಕ್ತಿಯಿಂದ ನುಡಿದ- 'ಜೀವಿಗಳು ಜನಿಸಿ ಜೊತೆಯಾಗಿ ಬಾಳುವುದೆಂದೂ ಸ್ಥಿರವಲ್ಲ. ದೈವಾತ್ ಒಂದೆಡೆ ಸೇರುತ್ತಾರೆ. ದೈವಾತ್ ಬೇರೆಯಾಗು ತ್ತಾರೆ. ಶ್ರೀಹರಿಯೊಬ್ಬನೆ ನಿತ್ಯ, ಸ್ವತಂತ್ರ, ಗುಣತ್ರಯ ರಹಿತ. ತ್ರಿಗುಣಗಳಿಂದ ಅಜ್ಞಾನ ಭ್ರಮರೂಪವಾದ ಸಂಸಾರ ಬಂಧನದಲ್ಲಿ ಸಿಲುಕಿದ ಜೀವರಲ್ಲಿ ಅವನು ಅಂತರ್ಯಾಮಿಯಾಗಿ ಇರುವುದ ರಿಂದ ಅವನನ್ನು ಬದ್ಧನೆಂದು ಅಜ್ಞಾನಿಗಳು ಭ್ರಮಿಸುತ್ತಾರೆ. ಆದರ

ಫಲವಾಗಿ ಅವರಿಗೆ ಸುಖದುಃಖಗಳು ಪುಣ್ಯಪಾಪಲೇಪಗಳು ಜನನಮರಣರೂಪ ಸಂಸಾರ ಬಂಧನಗಳು.

'ಜೀವಿಗಳು ಜೊತೆಯಾಗಿ ಇರುವುದು ಸ್ಥಿರವಲ್ಲ' ಎಂಬ ತತ್ವವನ್ನು ಹಿಂದೆ ಯಮನು ಸುಯಜ್ಞರಾಜನ ವಿಯೋಗದಿಂದ ಶೋಕಿಸುತ್ತಿದ್ದ ಬಂಧುಗಳಿಗೆ ಉಪದೇಶಿಸಿದ- 'ಈ ಚರಾಚರ ಜಂತುಗಳು ಭಗವಂತನ ಆಟದ ಬೊಂಬೆಗಳು. ಅವನ ಆಟದಲ್ಲಿ ದೈವಾನುಗ್ರಹಉಳ್ಳ ಅನಾಥ ವ್ಯಕ್ತಿ ಕಾಡುಪಾಲಾದರೂ ಬದುಕುತ್ತಾನೆ. ದೈವಾನುಗ್ರಹವಿಲ್ಲದವನು ಮನೆಯೊಳಗೆ ಸುರಕ್ಷಿತವಾಗಿದ್ದರೂ ಉಳಿಯಲಾರ. ಆ ಜನ್ಮಕ್ಕೆ ಕಾರಣವಾದ ಕರ್ಮ ತೀರುವ ಕಾಲ ಬಂದಾಗ ಸತ್ತು ತಿರುಗಿ ಹುಟ್ಟುತ್ತಾನೆ. ಭಗವಂತ ನಿರ್ಮಿಸಿಕೊಟ್ಟ ಆ ಶರೀರದಲ್ಲಿ ತಿರುಗಿ ಜನನ ಮರಣರೋಗಾದಿ ದುಃಖ ಅಜ್ಞಾನ ಮುಂತಾದುವನ್ನು ಹೊಂದುತ್ತಾನೆ. ಅವನ ಜೊತೆಗೇ ಶರೀರದಲ್ಲಿರುವ ಪರಮಾತ್ಮ ಮಾತ್ರ ನಿರ್ಲಿಪ್ತನಾಗಿರುತ್ತಾನೆ. ಅವನನ್ನು ಭಜಿಸಿದರೆ ಜೀವನೂ ನಿರ್ಲಿಪ್ತನಾಗುತ್ತಾನೆ.

ಸತ್ತವನಿಗಾಗಿ ಅಳುವುದರಿಂದೇನೂ ಪ್ರಯೋಜನವಿಲ್ಲ. ಅವನು ತನ್ನ ಒಡನಾಟದಿಂದ ನಿಮಗೆ ಸುಖ ಕೊಟ್ಟಿರಬಹುದು. ಆದರೆ ವಾಸ್ತವದಲ್ಲಿ ಅವನು ಅಸ್ವತಂತ್ರ. ಸ್ವತಂತ್ರನಾಗಿ ನಿಮಗೆ ಸುಖವಿತ್ತವನು ಅವನ ಜೊತೆಗಿದ್ದ ಭಗವಂತ. ಮತ್ತು ಈ ಒಡನಾಟದ ಸುಖ ಶಾಶ್ವತವೂ ಅಲ್ಲ. ಅದಕ್ಕಾಗಿ ಶೋಕಿಸಿದ ಮಾತ್ರಕ್ಕೆ ಅನಿತ್ಯವಾದ ಶರೀರವನ್ನು ನಿತ್ಯವಾಗಿಸುವುದೂ ಶಕ್ಯವಿಲ್ಲ. ಸತ್ತವರಂತೆ, ಸತ್ತವರಿಗಾಗಿ ಅಳುವವರೂ ಒಂದುದಿನ ಸಾಯಲೇಬೇಕು. ಬೇಡನೊಬ್ಬನ ಬಲೆಯಲ್ಲಿ ಸಿಲುಕಿದ ಹೆಣ್ಣುಹಕ್ಕಿಗಾಗಿ ಅಳುತ್ತ ಬಳಿಯಲ್ಲಿಯೇ ನಿಂತ ಗಂಡುಹಕ್ಕಿ ತಾನೂ ಬೇಡ ನೆಸೆದ ಬಾಣಕ್ಕೆ ತುತ್ತಾಗಿ ಅಸು ನೀಗಿತು'. ಹೀಗೆ ಬಾಲರೂಪಿ ಯಮ ಉಪದೇಶಿಸಿದಾಗ ಸುಯಜ್ಞನ ಬಂಧುಗಳಿಗೆ ಜ್ಞಾನೋದಯವಾಯಿತು. ಅವರು ಅವನಿಗೆ ಉತ್ತರಕ್ರಿಯೆ ನಡೆಸಿದರು.

ಹೀಗೆ ಹಿರಣ್ಯಕಶಿಪು ಉಪದೇಶಿಸಿದ್ದನ್ನು ಕೇಳಿ ದಿತಿದೇವಿ ಪುತ್ರಶೋಕವನ್ನು ಬಿಟ್ಟು ಪರಮಾತ್ಮನಲ್ಲಿ ಮನಸ್ಸನ್ನು ನೆಟ್ಟಳು.

❖ ❖ ❖

ತಮ್ಮ ಹಿರಣ್ಯಾಕ್ಷ ವರಾಹಮೂರ್ತಿಯಿಂದ ಹತನಾದುದನ್ನು ಕೇಳಿ ಹಿರಣ್ಯಕಶಿಪು 'ಆ ಹರಿಯನ್ನು ನಾನು ಕೊಲ್ಲುವೆನೆ'ನ್ನುತ್ತ, ಹರಿಗೆ ಬಲಪುಷ್ಟಿಗಳನ್ನು ನೀಡುವ ಬ್ರಾಹ್ಮಣರನ್ನೂ ಅವರ ತಪಸ್ಸು ಧರ್ಮಾಚರಣೆಗಳನ್ನೂ ನಾಶಪಡಿಸಲು ದಾನವರಿಗೆ ಆದೇಶ ನೀಡುತ್ತಾನೆ.

ತಾವದ್ಯಾತ ಭುವಂ ಯೂಯಂ ಬ್ರಹ್ಮಕ್ಷತ್ರಸಮೇಧಿತಾಮ್ ।
ಸೂದಯಧ್ವಂ ತಪೋಯಜ್ಞಸ್ವಾಧ್ಯಾಯವ್ರತದಾನಕಾನ್ ॥ ೧೦ ॥

ವಿಷ್ಣುರ್ದ್ವಿಜಕ್ರಿಯಾಮೂಲೋ ಯಜ್ಞೋ ಧರ್ಮಮಯಃ ಪುಮಾನ್ ।
ದೇವರ್ಷಿಪಿತೃಭೂತಾನಾಂ ಧರ್ಮಸ್ಯ ಚ ಪರಾಯಣಮ್ ॥ ೧೧ ॥

ಮೊದಲಿಗೆ ನೀವು ಬ್ರಾಹ್ಮಣರಿಂದ ಮತ್ತು ಕ್ಷತ್ರಿಯರಿಂದ ಸಂಪತ್ಸಮೃದ್ಧವಾಗಿ ಇರಿಸಲ್ಪಟ್ಟಿರುವ ಭೂಲೋಕವನ್ನು ಆಕ್ರಮಿಸಿರಿ. ತಪಸ್ಸು ಯಜ್ಞ ವೇದಾಧ್ಯಯನ ವ್ರತ ದಾನಗಳನ್ನು ನಾಶಗೊಳಿಸಿರಿ.

ವಿಷ್ಣು ತ್ರೈವರ್ಣಿಕರ ತಪಸ್ಸು ಮುಂತಾದ ಸತ್ಕರ್ಮಗಳ ಬಲದಿಂದಲೇ ಬೆಳೆದು ನಿಂತವನು. ಧರ್ಮವನ್ನೇ ಆಶ್ರಯಿಸಿದವನು. ದೇವ ಋಷಿ ಪಿತೃಗಳಿಗೂ ಎಲ್ಲ ಜೀವಿಗಳಿಗೂ ಧರ್ಮಕ್ಕೂ ಮುಖ್ಯ ಆಶ್ರಯನೆನಿಸಿ ಎಲ್ಲರು ಮಾಡುವ ಯಜ್ಞಗಳನ್ನು ಸ್ವೀಕರಿಸುವವನು.

ಇಲ್ಲಿ ಬ್ರಾಹ್ಮಣರ ಯಾಗಾದಿ ಸತ್ಕರ್ಮಗಳು ವಿಷ್ಣುವಿಗೆ ಮೂಲಾಶ್ರಯ ಎಂದು ಹಿರಣ್ಯಕಶಿಪು ಹೇಳುವುದು ತಿರುವುಮುರುವು. ವಸ್ತುತಃ ಎಲ್ಲಕ್ಕೂ ವಿಷ್ಣು ಮೂಲಾಶ್ರಯ. ಹಿರಣ್ಯಕಶಿಪು ಹೇಳಿದ ಮಾತ್ರಕ್ಕೆ ನಾವು ಅದನ್ನು ಒಪ್ಪಲಾಗದು. ಬೇರೆ ವ್ಯಾಖ್ಯಾನಕಾರರು ಇಲ್ಲಿ ಮೌನವಾಗಿದ್ದಾರೆ. 'ಮೌನಂ ಸಮ್ಮತಿ ಲಕ್ಷಣಂ' ಅದರಿಂದ ಅದು ಅವರಿಗೆ ಒಪ್ಪಿಗೆಯಾಗಿರಬಹುದು.

[೧]ಭಗವತ್ಪ್ರಸಾದ ವ್ಯಾಖ್ಯಾನದಲ್ಲಿ ವಿಶಿಷ್ಟಾದ್ವೈತ ಸಿದ್ಧಾಂತದಂತೆ ಸಕಲ ಚೇತನಾಚೇತನ ಪ್ರಪಂಚ ವಿಷ್ಣುವಿನ ಶರೀರವಾಗಿರುವುದರಿಂದ ಯಾಗಾದಿ ಧರ್ಮ ಅವನ ಶರೀರ. ಅದನ್ನು ನಾಶಗೊಳಿಸಿದರೆ ಶರೀರನಾಶದಿಂದ ವಿಷ್ಣು ನಾಶಹೊಂದುತ್ತಾನೆ, ಎಂದು ಹಿರಣ್ಯಕಶಿಪು ಭಾವಿಸುತ್ತಾನೆ. ಆದರೆ ಧರ್ಮದಂತೆ

೧. ದ್ವಿಜೇಷು ತತ್ಕರ್ತೃಕ ಯಜ್ಞಾದಿಧರ್ಮೇಷು ವಿನಾಶಿತೇಷು ಶರೀರವಿನಾಶೇನ ವಿಷ್ಣುರಪಿ ವಿನಾಶಿತೋ ಭವತಿ । -ಭಗವತ್ಪ್ರಸಾದಃ

ಅಧರ್ಮವೂ ಪ್ರಪಂಚದಲ್ಲಿ ಸೇರಿದ್ದು ವಿಷ್ಣುವಿಗೆ ಶರೀರವಾಗಿದೆ. ಧರ್ಮ ಎಂಬ ಶರೀರ ನಾಶವಾದರೂ ಅಧರ್ಮವೆಂಬ ಶರೀರ ಹೆಚ್ಚುತ್ತದೆ, ವಿಷ್ಣು ಹೇಗೆ ನಾಶ ಹೊಂದುತ್ತಾನೆ? ಅಧರ್ಮ ಶರೀರಿಯಾಗಿ ಆತನಿದ್ದರೆ ಅಧರ್ಮಿಗಳಾದ ನಮಗೆ, ದಾನವರಿಗೆ ಆತ ಉಪಕಾರ ಮಾಡುತ್ತಾನೆ ಎಂದರೆ ಅದು ವ್ಯಾಹತವಾಗುತ್ತದೆ. ಉಪಕಾರ ಒಂದು ಧರ್ಮ. ಆ ಧರ್ಮವೂ ನಾಶವಾಗಿರುವಾಗ ದಾನವರಿಗೆ ವಿಷ್ಣುವಿನಿಂದ ಏನೂ ಉಪಕಾರವಾಗಲಾರದು. ಆದರೂ, ಅದರಿಂದ ಅನರ್ಥವೇ ಆಗುವುದು. ವಸ್ತುತಃ ಧರ್ಮ ಅಧರ್ಮಗಳು ವಿಷ್ಣುವಿನ ಶರೀರಗಳೇ ಅಲ್ಲ. ಅವನು ಅಧರ್ಮವನ್ನು ನಾಶಮಾಡಿ ಧರ್ಮವನ್ನು ರಕ್ಷಣೆ ಮಾಡುತ್ತಾನೆ. ಧರ್ಮ ಅವನಿಗೆ ಮೂಲ ಆಶ್ರಯವಲ್ಲ, ಧರ್ಮಕ್ಕೇ ಅವನು ಮೂಲಾಶ್ರಯ. ಅದರಿಂದ ಹಿರಣ್ಯಕಶಿಪು ಅಸುರಾವೇಶದಿಂದ ಅಸುರರ ಮತಕ್ಕೆ ಅನುಸಾರವಾಗಿ ಧರ್ಮವು ವಿಷ್ಣುವಿಗೆ ಮೂಲಾಶ್ರಯ ಎಂದಿದ್ದಾನೆ ಎಂದು ಗ್ರಹಿಸಬೇಕು.

ವಿಪ್ರಯಜ್ಞಾದಿ ಮೂಲಂ ತು ಹರೇರಿತ್ಯಾಸುರಂ ಮತಂ ।
ಹರಿರೇವ ಹಿ ಸರ್ವಸ್ಯ ಮೂಲಂ ಸಮ್ಯಜ್ ಮತೋ ನೃಪ ॥
ಇತಿ ಬ್ರಾಹ್ಮೇ ॥

ವಿಪ್ರರು ಮಾಡುವ ಯಜ್ಞಾದಿ ಸತ್ಕರ್ಮವು ಹರಿಗೆ ಮೂಲಾಶ್ರಯ ಎನ್ನುವುದು ಅಸುರರ ಮತ. ಹರಿಯೇ ಎಲ್ಲಕ್ಕೂ ಮೂಲಾಶ್ರಯನೆಂದು ತಿಳಿಯುವುದೇ ಯುಕ್ತ ಎಂದು ಬ್ರಾಹ್ಮಪುರಾಣದಲ್ಲಿ ಹೇಳಿದೆ.

ಇದು ಹೃಷೀಕೇಶ ತೀರ್ಥೀಯ ಪಾಠ. 'ವಿಪ್ರಯಜ್ಞಾದಿಮೂಲಂ ತು ಹರಿಃ' ಎಂದು ಪ್ರಚಲಿತ ಪಾಠವಿದೆ. ಹರಿಯು, ವಿಪ್ರಯಜ್ಞಾದಿಯು ಮೂಲವಾಗಿ ಉಳ್ಳವನೆಂದು ಬಹುವ್ರೀಹಿಸಮಾಸ ಮಾಡಬೇಕಾಗುತ್ತದೆ. ಆಗ 'ಮೂಲಂ' ಎಂದು ನಪುಂಸಕಲಿಂಗವನ್ನು ಛಾಂದಸವೆನ್ನಬೇಕಾಗುತ್ತದೆ. ಅದಕ್ಕಿಂತ ಹೃಷೀಕೇಶ ತೀರ್ಥೀಯ ಪಾಠ ಸುಂದರವಾಗಿದೆ ಎಂದು ಅದನ್ನೇ ಸ್ವೀಕರಿಸಲಾಗಿದೆ.

❖ ❖ ❖

ಹಿರಣ್ಯಾಕ್ಷನ ವಿಯೋಗದಿಂದ ಶೋಕಿಸುತ್ತಿದ್ದ ಬಂಧುಗಳನ್ನು ಹಿರಣ್ಯಕಶಿಪು ಸಮಾಧಾನಪಡಿಸುತ್ತಾನೆ.

ನಿತ್ಯ ಆತ್ಮಾಽವ್ಯಯಃ ಶುದ್ಧಃ ಸರ್ವವಿತ್ಸರ್ವಗಃ ಪರಃ ।
ಧತ್ತೇಽಸಾವಾತ್ಮನೋ ಲಿಂಗಂ ಮಾಯಯಾ ವಿಸೃಜನ್ ಗುಣಾನ್ ॥ ೨೨ ॥

ಪರಮಾತ್ಮ ನಿತ್ಯ. ಶರೀರನಾಶವೂ ಅವನಿಗೆ ಇಲ್ಲ. ಗುಣತ್ರಯ ರಹಿತನಾಗಿದ್ದಾನೆ. ಸರ್ವಜ್ಞ, ಸರ್ವವ್ಯಾಪ್ತ, ಸ್ವತಂತ್ರ. ಜೀವಾತ್ಮರ ಲಿಂಗ ಶರೀರವನ್ನು ಅವರಿಗಾಗಿ ಅವನೇ ಕಾಪಾಡುತ್ತಾನೆ ಪೋಷಿಸುತ್ತಾನೆ. ಸ್ವೇಚ್ಛೆಯಿಂದ ಆದಿ ಸೃಷ್ಟಿಯಲ್ಲಿ ಸೂಕ್ಷ್ಮವಾದ ತ್ರಿಗುಣಗಳನ್ನು ಸ್ಥೂಲರೂಪದಿಂದ ಸೃಜಿಸುತ್ತಾನೆ.

[೧]ಈ ಶ್ಲೋಕದಲ್ಲಿ ಹಿರಣ್ಯಾಕ್ಷನ ವಿಯೋಗದಿಂದ ದುಃಖಿತರಾದ ಬಂಧುಗಳನ್ನು ಹಿರಣ್ಯಕಶಿಪು ಸಾಂತ್ವನಗೊಳಿಸುತ್ತ ತತ್ತ್ವೋಪದೇಶ ನೀಡುತ್ತಿದ್ದಾನೆ. ಈ ಅಂಶದಲ್ಲಿ ವ್ಯಾಖ್ಯಾನಕಾರರಲ್ಲಿ ಭಿನ್ನಾಭಿಪ್ರಾಯವಿಲ್ಲ. ಆದರೆ ತತ್ತ್ವವು ಪರಮಾತ್ಮತತ್ತ್ವವೆ? ಜೀವತತ್ತ್ವವೆ? ಶ್ಲೋಕದ ಪೂರ್ವಾರ್ಧಪೂರ್ತಿ ಪರಮಾತ್ಮತತ್ತ್ವಪರವಾಗಿಯೇ ಕಾಣುತ್ತದೆ. ಶ್ರೀಧರ ವ್ಯಾಖ್ಯಾನ ಪ್ರಕಾರ ಅದು ನಿರ್ಗುಣ ಬ್ರಹ್ಮಪರ. ಆದರೆ ನಿರ್ಗುಣ ಬ್ರಹ್ಮ ಜ್ಞಾನಸ್ವರೂಪವಾದರೂ ಸರ್ವಜ್ಞವಲ್ಲ. ಸರ್ವವಿಷಯಜ್ಞಾನ ಅವಿದ್ಯೆಯಿಂದಲೇ ಬರಬೇಕು.

---

೧. ಏವಂ ಲೌಕಿಕದೃಷ್ಟ್ಯಾ ಶೋಕಂ ನಿವಾರ್ಯ ತತ್ತ್ವದೃಷ್ಟ್ಯಾ ವಾರಯತಿ ನಿತ್ಯ ಇತಿ। ಆತ್ಮಾ ನಿತ್ಯೋ ಮೃತ್ಯುಶೂನ್ಯಃ ಅವ್ಯಯೋಽಪಕ್ಷಯಶೂನ್ಯಃ ಶುದ್ಧೋ ನಿರ್ಮಲಃ ಸರ್ವಗತಃ ಸರ್ವವಿತ್ ಸರ್ವಜ್ಞಶ್ಚ। ಸರ್ವತ್ರ ಹೇತುಃ ಪರೋ ದೇಹಾದಿ ವ್ಯತಿರಿಕ್ತಃ। ಅತೋ ಮೃತ ಇತಿ ಕೃಶ ಇತಿ ಮಲಿನ ಇತಿ ವಿಯುಕ್ತ ಇತಿ ಅಜ್ಞ ಇತಿ ಚ ಮತ್ವಾ ಶೋಕೋ ನ ಕಾರ್ಯ ಇತ್ಯರ್ಥಃ। ಕಥಂ ತರ್ಹಿ ತಸ್ಯ ಸಂಸಾರಸ್ತತ್ರಾಹ ಧತ್ತ ಇತಿ । ಆತ್ಮನೋ ಮಾಯಯಾ ಸ್ವಾವಿದ್ಯಯಾ ಲಿಂಗಂ ಮೂರ್ತಿರ್ಧತ್ತೇ ಗುಣಾನುಚ್ಚಾವಚಾನ್ ದೇಹಾನ್ ಸುಖದುಃಖಾದೀನ್ ವಾ ವಿಶೇಷೇಣ ಸೃಜನ್ ಸ್ವೀಕುರ್ವನ್ । ಲಿಂಗಶರೀರೋಪಾಧಿಃ ಸಂಸಾರ ಇತ್ಯರ್ಥಃ ॥ -ಶ್ರೀಧರಃ

ಆತ್ಮಾ ಪರೋ ದೇಹಾದಿವ್ಯತಿರಿಕ್ತಃ । ವ್ಯತಿರಿಕ್ತತ್ವೇ ಹೇತುತ್ವೇನ ದೇಹಾದಿ ವೈಲಕ್ಷಣ್ಯಂ ದರ್ಶಯತಿ । ನಿತ್ಯಃ ಮೃತ್ಯುಶೂನ್ಯಃ ಅವ್ಯಯಃ ಅಪಕ್ಷಯಶೂನ್ಯಃ ಶುದ್ಧಃ ನಿರ್ಮಲಃ ರಾಗಲೋಭಾದಿಮಲಾನಾಮಂತಃಕರಣಧರ್ಮತ್ವಾತ್। ವಿಣ್ಮೂತ್ರಾದಿ ಸಂಬಂಧೇನಾ-ಪಾವಿತ್ರ್ಯಸ್ಯ ದೇಹಧರ್ಮತ್ವಾಚ್ಚ । ಸರ್ವಗಃ ಸರ್ವತ್ರ ಸ್ವರ್ಗಾದೌ ಗಚ್ಛತೀತಿ ಸರ್ವಗಃ । ದೇಹಸ್ತ್ವತ್ರೈವ ಪತತೀತಿ ಭಾವಃ । ಸರ್ವವಿತ್ ತತ್ತದ್ ವ್ಯವಹಾರೋಪಯುಕ್ತಂ ಸರ್ವಂ ವೇತ್ತೀತಿ । ತಥಾ ದೇಹಾದಿಸ್ತು ನ ಕಿಂಚಿದ್ ವೇತ್ತಿ ಜಡತ್ವಾತ್। ಯತೋಽಸೌ ಆತ್ಮನೋ ಭಗವತೋ ಮಾಯಯಾ ಅವಿದ್ಯಾಖ್ಯಯಾ ಶಕ್ತ್ಯಾ ಮೋಹಿತಃ ಗುಣಾನ್ ತತ್ತದ್ ವಿಷಯಾನ್ ವಿಸೃಜನ್ ಸಂಪಾದಯನ್ ತದರ್ಥಂ ಲೌಕಿಕಾಲೌಕಿಕ ಕರ್ಮಾಣಿ ಕುರ್ವನ್ ಲಿಂಗಂ ಧತ್ತೇ ದೇಹೇಂದ್ರಿಯಾಂತಃ ಕರಣೇಷು ಮಮಾಹಮಿತ್ಯಧ್ಯಾಸಂ ಕರೋತೀತ್ಯರ್ಥಃ॥ -ಗಿರಿಧರಃ

ನಿತ್ಯ ಇತ್ಯತ್ರ ಜೀವೇಽಪೀಶ್ವರಧರ್ಮೋಕ್ತಿರಸುರೌಚಿತ್ಯಾತ್। ಸರ್ವಜ್ಞಸ್ಯಾಜ್ಞಾನಮಿತಿ ಯುಕ್ತಿವಿರುದ್ಧಂ ಚ ತದಿತಿ । -ಜೀವಗೋಸ್ವಾಮಿ

ಸರ್ವಜ್ಞವೆಂದೊಪ್ಪಿ ಅವಿದ್ಯೆಯಿಂದ ಸಂಸಾರ ವೆನ್ನುವುದು ಯುಕ್ತಿವಿರುದ್ಧವೂ ಹೌದು. ಜೀವಗೋಸ್ವಾಮಿ ವ್ಯಾಖ್ಯಾನ ಹಾಗೇ ಹೇಳುತ್ತದೆ.

ಗಿರಿಧರ ಮುಂತಾದ ವ್ಯಾಖ್ಯಾನಗಳಲ್ಲೆಲ್ಲ ಜೀವತತ್ವ ಸ್ವರೂಪವನ್ನೇ ಹಿರಣ್ಯಕಶಿಪು ಉಪದೇಶಿಸುತ್ತಿದ್ದಾನೆ. ಆದರೆ ಜೀವ ಸರ್ವಜ್ಞ ಹೇಗೆ? ತನ್ನ ವ್ಯವಹಾರಕ್ಕೆ ಬೇಕಾದುದನ್ನೆಲ್ಲ ತಿಳಿದುಕೊಳ್ಳುತ್ತಾನೆ! ಸರ್ವಗತ ಹೇಗೆ? ಸ್ವರ್ಗಾದಿ ಎಲ್ಲ ಲೋಕಗಳಿಗೆ ಹೋಗುತ್ತಾನೆ, ಶರೀರ ಇಲ್ಲೇ ಬಿದ್ದುಹೋಗುತ್ತದೆ! ಹೀಗೆ ಪರಮಾತ್ಮನ ಸರ್ವಜ್ಞತ್ವ ಸರ್ವಗತತ್ವಾದಿ ಧರ್ಮಗಳನ್ನು ಬಲಾತ್ಕಾರವಾಗಿ ಜೀವನಲ್ಲಿ ಕೂಡಿಸಲು ಯತ್ನಿಸುವುದು ಈ ವ್ಯಾಖ್ಯಾನಗಳಲ್ಲಿ ಕಂಡುಬರುತ್ತದೆ. 'ಪರಮಾತ್ಮನ ಲಕ್ಷಣಗಳನ್ನು ಜೀವನಲ್ಲಿ ಹಾಗೇ ಆರೋಪಿಸುವುದು ಅಸುರಮತ. ಹಿರಣ್ಯಕಶಿಪು ತನ್ನ ಅಸುರ ಸ್ವಭಾವದಿಂದ ಹಾಗೆ ಹೇಳಿದ್ದಾನೆ' ಎಂದು ಜೀವಗೋಸ್ವಾಮಿ ವ್ಯಾಖ್ಯಾನ ಅಭಿಪ್ರಾಯಪಡುತ್ತದೆ. ಆದರೆ ಪರಮಾತ್ಮತತ್ವವನ್ನೇ ಉಪದೇಶಿಸಲು ಹೊರಟು ತನ್ನ ಅಸುರ ಸ್ವಭಾವದಿಂದ ಪರಮಾತ್ಮನಲ್ಲಿಯೇ 'ಧತ್ತೇಽಸಾವಾತ್ಮನೋ ಲಿಂಗಂ' ಎಂದು ಉತ್ತರಾರ್ಧದಲ್ಲಿ ಜೀವನ ದೋಷಗಳನ್ನು ಆರೋಪಿಸಬಹುದು ತಾನೆ? ಪೂರ್ವಾರ್ಧದಲ್ಲಿ ಸ್ಪಷ್ಟ ಪರಮಾತ್ಮ ಲಕ್ಷಣಗಳೇ ಉಕ್ತವಾಗಿರುವಾಗ ಜೀವತತ್ವೋಪದೇಶಕ್ಕೇ ಏಕೆ ಹೊರಡಬೇಕು? ವಸ್ತುತಃ ಪರಮಾತ್ಮತತ್ವವನ್ನೇ ಉಪದೇಶಿಸುತ್ತಿದ್ದಾನೆ, ಹಿರಣ್ಯಕಶಿಪು. ಉತ್ತರಾರ್ಧದಲ್ಲಿ ಹೇಳಿದ್ದೆಲ್ಲವೂ ಸ್ವರಸವಾಗಿಯೇ ಪರಮಾತ್ಮನಲ್ಲಿ ಕೂಡುತ್ತದೆಯಾದ್ದರಿಂದ ಅವನು ಅಸುರ ಸ್ವಭಾವದಿಂದ ಏನೂ ಹೇಳುತ್ತಿಲ್ಲ. ಅಸುರಾವೇಶವೂ ಸದಾ ಇರುವುದಿಲ್ಲ.

ಧತ್ತೇಽಸಾವಾತ್ಮನೋ ಲಿಂಗಂ ।
ಜೀವಮನಆದೀನಾಮಾಧಾರಂ ಬ್ರಹ್ಮ ।

'ಧತ್ತೇಽಸಾವಾತ್ಮನೋ ಲಿಂಗಂ' ಎಂಬುದಕ್ಕೆ ಜೀವನ ಮನಸ್ಸು ಮೊದಲಾದ ಷೋಡಶಕಲಾತ್ಮಕವಾದ ಲಿಂಗಶರೀರಕ್ಕೆ ಆಧಾರ ಸರ್ವಶಕ್ತನಾದ ಪರಮಾತ್ಮನೆ. ಅವನೇ ಅದನ್ನು ಅನಾದಿಕಾಲದಿಂದ ಕಾಪಾಡುತ್ತಿದ್ದಾನೆ ಪೋಷಿಸುತ್ತಿದ್ದಾನೆ, ಎಂದರ್ಥ.

❖ ❖ ❖

ಜೀವನ ಲಿಂಗಶರೀರವನ್ನು ಕಾಪಾಡುವುದಕ್ಕಾಗಿ ಪರಮಾತ್ಮ ಅದರೊಳಗೆ ನೆಲೆಸಿದರೂ ಜೀವನಂತೆ ಬದ್ಧನಾಗುವುದಿಲ್ಲ. ಏಕೆಂದರೆ ಆತ ಸ್ವತಂತ್ರ, ಸರ್ವಶಕ್ತ. ಆದರೂ ಜೀವನ ಜೊತೆಗೇ ಬಿಂಬರೂಪನಾಗಿ ಇರುವುದರಿಂದ ಜೀವನಂತೆಯೇ

ಅವನೂ ಬದ್ಧನೆಂದು ಅಜ ಜನರು ಕಲ್ಪಿಸುತ್ತಾರೆ ಎಂದು ಹಿರಣ್ಯಕಶಿಪು ತತ್ತ್ವೋಪದೇಶ ನೀಡುತ್ತಾನೆ.

ಯಥಾಽಽಂಭಸಾ ಪ್ರಚಲತಾ ತರವೋಽಪಿ ಚಲಾ ಇವ ।
ಚಕ್ಷುಷಾ ಭ್ರಾಮ್ಯಮಾಣೇನ ದೃಶ್ಯತೇ ಭ್ರಮತೀವ ಭೂಃ ॥ ೨೩ ॥

ಏವಂ ಗುಣೈರ್ಭ್ರಾಮ್ಯಮಾಣೇ ಮನಸ್ಯವಿಕಲಃ ಪುಮಾನ್ ।
ಯಾತಿ ತತ್ಸಾಮ್ಯತಾಂ ಭದ್ರೇ ಹ್ಯಲಿಂಗೋ ಲಿಂಗವಾನಿವ ॥ ೨೪ ॥

ನೀರು ಚಲಿಸುವಾಗ ನೀರಲ್ಲಿ ಮರಗಳ ಪ್ರತಿಬಿಂಬಗಳೂ ಚಲಿಸುವುದರಿಂದ ಮರಗಳೇ ಚಲಿಸುವಂತೆ ಭಾಸವಾಗುತ್ತದೆ. ಕುಡಿದ ಮತ್ತಿನಲ್ಲಿ ಕಣ್ಣಾಲಿ ಸುತ್ತಿದರೆ ನೆಲವೇ ಸುತ್ತುವಂತೆ ಭಾಸವಾಗುತ್ತದೆ.

ಹೀಗೆಯೆ ತ್ರಿಗುಣ ಪ್ರಯುಕ್ತ ಅಜ್ಞಾನಭ್ರಮರೂಪ ಬಂಧನದಲ್ಲಿ ಸಿಲುಕಿದ ಜೀವನಲ್ಲಿ ಅಂತರ್ಯಾಮಿಯಾಗಿ ಏನೂ ವೈಕಲ್ಯವಿಲ್ಲದ ಪರಮಾತ್ಮ ನಿರುವುದರಿಂದ ಜೀವನ ಸಾಮ್ಯ ಹೊಂದಿದಂತೆ ಕಾಣುತ್ತಾನೆ. ಲಿಂಗಶರೀರವಿಲ್ಲದವನು ಉಳ್ಳವನಂತೆ ಕಾಣುತ್ತಾನೆ.

[೧]ಇಲ್ಲಿ ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ- ನೀರಿನಲ್ಲಿರುವ ಚಲನ ಕರ್ತೃತ್ವ ವನ್ನು ನೀರಲ್ಲಿ ಪ್ರತಿಫಲಿಸಿದ ಮರಗಳಲ್ಲಿ ಆರೋಪಿಸುವಂತೆ, ಕಣ್ಣಾಲಿಗಳಲ್ಲಿರುವ ಭ್ರಮಣಕರ್ತೃತ್ವವನ್ನು ಕಣ್ಣಾಲಿಗಳಿಂದ ಗ್ರಾಹ್ಯವಾದ ನೆಲದಲ್ಲಿ ಆರೋಪಿಸುವಂತೆ ಸತ್ವಾದಿಗುಣ ಪ್ರಯುಕ್ತವಾಗಿ ಮನಸ್ಸಿನಲ್ಲಿರುವ ಶೋಕಾದ್ಯನುಭವ ಕರ್ತೃತ್ವವನ್ನು ಮನಸ್ಸಿನಲ್ಲಿ ಪ್ರತಿಬಿಂಬಿತವಾದ ಜೀವನಲ್ಲಿ ಆರೋಪಿಸುತ್ತೇವೆ. ದೇಹಾತ್ಮೈಕ್ಯಾಧ್ಯಾಸ ದಿಂದ ಹೊರತು ವಾಸ್ತವವಾಗಿ ದೇಹಾದಿ ಸಂಗರಹಿತನಾದ ಜೀವ ಅಧ್ಯಾಸದಿಂದ ದೇಹಾದಿಸಂಗ ಉಳ್ಳವನಂತೆ ಕಾಣುತ್ತಾನೆ' ಎಂದು.

---

೧. ಯಥಾಂಭಸಾ ಪ್ರಚಲತಾ ಹೇತುಭೂತೇನ ತತ್ರ ಪ್ರತಿಬಿಂಬಿತಾಸ್ತರವೋಽಪಿ ಚಲಾ ಇವ ಲಕ್ಷ್ಯಂತೇ। ವಸ್ತುತಃ ತರೂಣಾಂ ತೀರಸ್ಥತ್ವೇನಾಧ್ಯಾಸಮಂತರೇಣ ಜಲ ಸಂಬಂಧಾಭಾವಾತ್। ಏವಮುಪಾಧಿಧರ್ಮಾ ಉಪಹಿತೇ ಪ್ರತೀಯಂತೇ ಇತ್ಯುಕ್ತಂ। ಇದಾನೀಂ ಗ್ರಾಹಕಧರ್ಮಾ ಗ್ರಾಹ್ಯೇಪಿ ಪ್ರತೀಯಂತ ಇತ್ಯತ್ರ ದೃಷ್ಟಾಂತಮಾಹ। ಯಥಾ ಚ ಭ್ರಾಮ್ಯಮಾಣೇನ ಚಕ್ಷುಷಾ ಹೇತುನಾ ಭೂಶ್ಚಲತೀವ ದೃಶ್ಯತೇ । ದಾರ್ಷ್ಟಾಂತಿಕಮಾಹ ಏವಮಿತಿ। ಗುಣೈಃ ಸತ್ವಾದಿಭಿರ್ಮನಸಿ ಭ್ರಾಮ್ಯಮಾಣೇ ಸತಿ ಪುಮಾನ್ ಜೀವೋ ವಸ್ತುತಃ ಅವಿಕಲಃ ಶೋಕಾದಿವಿಕಾರ ರಹಿತೋಽಪಿ ತತ್‌ಸಾಮ್ಯತಾಂ ಮನಃಸಮಾನತಾಂ ಶೋಕಾದಿಮತ್ತ್ವಾಂ ಯಾತಿ । ವಸ್ತುತಃ ಅಲಿಂಗೋಽಪಿ ಅಧ್ಯಾಸಮಂತರೇಣ ದೇಹಾದಿಸಂಗರಹಿತೋಽಪಿ ಲಿಂಗವಾನಿವ ದೇಹಾದಿಮಾನಿವ ಪ್ರತೀಯತೇ । -ಗಿರಿಧರಃ

ಆದರೆ ಮನಸ್ಸಿನಲ್ಲಿ ಶೋಕಾದಿಗಳಿಗೆ, ಅವುಗಳ ಅನುಭವಕ್ಕೆ ಪರಿಣಾಮಿಕಾರಣತ್ವವಿದ್ದರೂ ಕರ್ತೃಕಾರಣತ್ವವಿಲ್ಲ. ಅದು ಜಡ. ಕರ್ತೃಕಾರಣತ್ವ ವಿರುವುದು ವಸ್ತುತಃ ಜೀವನಲ್ಲಿ. ಆದರಿಂದ ಜೀವನಲ್ಲಿ ಅದನ್ನು ಆರೋಪಿಸುವುದು ಕೂಡುವುದಿಲ್ಲ. ಮಣ್ಣಿನಲ್ಲಿ ಗಡಿಗೆಯ ಉತ್ಪತ್ತಿಗೆ ಪರಿಣಾಮಿಕಾರಣತ್ವವಿದ್ದರೂ ಕರ್ತೃಕಾರಣತ್ವ ಕುಂಬಾರನಿಗೇ. ಕುಂಬಾರ ಮಣ್ಣಿನಿಂದ ಗಡಿಗೆಯನ್ನು ತಯಾರಿಸು ತ್ತಾನೆ. ಮಣ್ಣು ತಾನೇ ಗಡಿಗೆಯನ್ನು ತಯಾರಿಸುವುದಿಲ್ಲ. ಹಾಗೆಯೇ ಜೀವ ಮನಸ್ಸಿನಿಂದ ದುಃಖಾನುಭವ ಹೊಂದುತ್ತಾನೆ. ಮನಸ್ಸೇ ದುಃಖಾನುಭವವನ್ನು ಹೊಂದುವುದಿಲ್ಲ. ಹಾಗೇ ಇದು. ಆದರಿಂದ ಈ ದೃಷ್ಟಾಂತಗಳನ್ನು ಭಾಗವತ ಪರಮಾತ್ಮನ ವಿಷಯದಲ್ಲಿ ಹೇಳಿದೆ ಎಂದೇ ಗ್ರಹಿಸಬೇಕು. ಹಿಂದಿನ ಶ್ಲೋಕ ಪರಮಾತ್ಮನ ಬಗ್ಗೆ ಇರುವುದರಿಂದ ಈ ಶ್ಲೋಕಗಳೂ ಪರಮಾತ್ಮನ ಬಗ್ಗೆಯೇ ಇವೆ. ಮತ್ತು ಷಾಡ್ಗುಣ್ಯ ಬ್ರಹ್ಮತರ್ಕ ವಚನಗಳೂ ಈ ಎರಡು ಶ್ಲೋಕಗಳಿಗೆ ಪರಮಾತ್ಮ ಪರವಾಗಿ ಸುಂದರವಾದ ವ್ಯಾಖ್ಯಾನ ಮಾಡುತ್ತಿರುವಾಗ ಬೇರೆ ವ್ಯಾಖ್ಯಾನಕಾರರು ತಮಗೆ ತೋಚಿದಂತೆ ಅಸಂಗತವಾಗಿ ವ್ಯಾಖ್ಯಾನಿಸುವುದು ಉಚಿತವೂ ಅಲ್ಲ.

ಲಿಂಗವಾನಿವ ಜೀವ ಇವ ।

ಅಸಮಂ ಸಮತಾಮೇತಿ ಭ್ರಾಂತಿದೃಷ್ಟ್ಯೈವ ಕೇವಲಂ ।
ಜೀವೇನ ಬ್ರಹ್ಮ ನ ಸಮಂ ತತ್ತ್ವದೃಷ್ಟ್ಯಾ ಕಥಂಚನ ।
ಇತಿ ಷಾಡ್ಗುಣ್ಯೇ ।

ಯಥೋದಚಲನಾದ್ ವೃಕ್ಷಪ್ರತಿಬಿಂಬಪ್ರಚಾಲನಾತ್ ।
ತಟಸ್ಥ ವೃಕ್ಷಚಲನಂ ಕಲ್ಪಯೇದಬುಧೋ ನರಃ ।
ತಥಾ ಮನಸಿಜೈರ್ದೋಷೈರಾಭಾಸೇ ದೂಷಿತೇ ನರೇ ।
ಆಭಾಸಿನೋ ಬ್ರಹ್ಮಣಶ್ಚ ದೋಷಮಜ್ಞಃ ಪ್ರಕಲ್ಪಯೇತ್ ।
ಆತ್ಮನಶ್ಚಕ್ಷುಷೋ ಭ್ರಾಂತ್ಯಾಯಥಾ ಪಶ್ಯೇದ್ ಭ್ರಮಂ ಭುವಃ ।
ತಥೈವ ಸ್ವಾತ್ಮನೋ ದೋಷಾದ್ ದೋಷವದ್ ಬ್ರಹ್ಮ ಪಶ್ಯತಿ॥
ಇತಿ ಬ್ರಹ್ಮತರ್ಕೇ ॥

'ಲಿಂಗವಾನಿವ' ಎಂದರೆ ಲಿಂಗಶರೀರಉಳ್ಳ ಜೀವನಂತೆ ಪರಮಾತ್ಮ ತೋರುತ್ತಾನೆ ಎಂದರ್ಥ.

ಸಂಸಾರದುಃಖದ ವಿಷಯದಲ್ಲಿ ಪರಮಾತ್ಮ ಜೀವನಿಗೆ ಸಮಾನ ನಲ್ಲದವನೇ, ಸಮಾನವಾಗಿ ಭ್ರಾಂತಿದೃಷ್ಟಿಯಿಂದ ಮಾತ್ರ ತೋರುತ್ತಾನೆ.

ಯಥಾರ್ಥ ದೃಷ್ಟಿಯಿಂದ ಪರಮಾತ್ಮ ಸರ್ವಥಾ ಜೀವನಿಗೆ ಸಮನಲ್ಲ ಎಂದು ಷಾಡ್ಗುಣ್ಯಗ್ರಂಥದಲ್ಲಿ ಉಕ್ತವಾಗಿದೆ.

ನೀರಿನ ಚಲನೆಯಿಂದ ಮರಗಳ ಪ್ರತಿಬಿಂಬಗಳು ಚಲಿಸಿದಾಗ ದಡದಲ್ಲಿರುವ ಮರಗಳು ಚಲಿಸುತ್ತಿವೆ ಎಂದು ಅಜ್ಞಮಾನವ ಕಲ್ಪಿಸುತ್ತಾನೆ. ಹಾಗೆಯೇ ಮನಸ್ಸಿನ ದೋಷಗಳಿಂದ ಪರಮಾತ್ಮನ ಪ್ರತಿಬಿಂಬನಾದ ಜೀವ ದೋಷಿಯೆನಿಸಿದಾಗ ಅಜ್ಞಮಾನವ ಬಿಂಬನಾದ ಪರಮಾತ್ಮನಲ್ಲಿ ದೋಷವನ್ನು ಕಲ್ಪಿಸುತ್ತಾನೆ. ತನ್ನ ಕಣ್ಣಾಲಿ ಸುತ್ತಿದಾಗ ನೆಲವೇ ಸುತ್ತುತ್ತಿದೆ ಎಂದು ಕಲ್ಪಿಸುವಂತೆ ತನ್ನ ದೋಷದಿಂದ ಪರಮಾತ್ಮನನ್ನೇ ದೋಷಿ ಎಂದು ಕಲ್ಪಿಸುತ್ತಾನೆ. ಎಂದು ಬ್ರಹ್ಮತರ್ಕದಲ್ಲಿ ಹೇಳಿದೆ.

❖ ❖ ❖

ಜೀವವಿಲಕ್ಷಣನಾದ ಪರಮಾತ್ಮನನ್ನು ಜೀವನಂತೆ ತಿಳಿಯುವುದರಿಂದಲೇ ಈ ಸಂಸಾರದುಃಖಗಳು ಜೀವನನ್ನು ಸದಾ ಪೀಡಿಸುತ್ತವೆ ಎಂದು ಹಿರಣ್ಯಕಶಿಪು ಬಂಧುಗಳಿಗೆ ಉಪದೇಶಿಸುತ್ತಾನೆ.

ಸಂಭವಶ್ಚ ವಿನಾಶಶ್ಚ ಶೋಕಶ್ಚ ವಿವಿಧಃ ಸ್ಮೃತಃ ।
ಅವಿವೇಕಶ್ಚ ಚಿಂತಾ ಚ ವಿವೇಕಸ್ಮೃತಿರೇವ ಚ ॥ ೨೬ ॥

ಜನನ ಮರಣಗಳು ಅನುಭವಕ್ಕೆ ಬರುವ ನಾನಾ ಬಗೆಯ ಶೋಕಗಳು ಅವಿವೇಕ, ಚಿಂತೆ, ಅವಿವೇಕಿಯಾದ ತನ್ನನ್ನು ವಿವೇಕಿ ಎಂದು ತಪ್ಪಾಗಿ ತಿಳಿಯುವುದು ಇವೆಲ್ಲಕ್ಕೂ ಪರಮಾತ್ಮನ ವಿಷಯದಲ್ಲಿ ಭ್ರಮವಿರುವುದೇ ಕಾರಣ.

ಇಲ್ಲಿ 'ವಿವೇಕಸ್ಮೃತಿಃ' ಎಂದರೆ ತನ್ನಲ್ಲಿ ವಿವೇಕವಿಲ್ಲದಿದ್ದರೂ ಇದೆ ಎಂದು ಕೊಳ್ಳುವುದು. ಆದರೆ ಬೇರೆ ವ್ಯಾಖ್ಯಾನಕಾರರು 'ವಿವೇಕಾಸ್ಮೃತಿಃ' ಎಂದು ಅಪಪಾಠವಿಟ್ಟುಕೊಂಡು ವಿವೇಕವನ್ನು ಮರೆಯುವುದು, ಅನುಸಂಧಾನ ಮಾಡದಿರುವುದು ಎಂದು ವ್ಯಾಖ್ಯಾನಿಸಿದ್ದಾರೆ. ಆದರೆ ಅನಾದಿ ಅವಿದ್ಯೆಯಿಂದ್ಲೂ ಅನಾದಿಕಾಲದಿಂದಲೂ ಜೀವನಿಗೆ ವಿವೇಕ ಬಂದೇ ಇಲ್ಲ. ಬಂದಿದ್ದರೆ ಆಗಲೆ ಮೋಕ್ಷ ಬರಬೇಕಾಗಿತ್ತು. ಬಂದಿದ್ದನ್ನು ಮರೆತಿದ್ದಾನೆ ಎನ್ನುವುದು ಅಸಂಭವ. ಆದರಿಂದ 'ವಿವೇಕಸ್ಮೃತಿಃ' ಎಂದೇ ಪಾಠವಿಟ್ಟುಕೊಂಡು ಮೇಲಿನಂತೆ ವ್ಯಾಖ್ಯಾನಿಸಬೇಕು.

ತಮ್ಮನಾದ ಹಿರಣ್ಯಾಕ್ಷನನ್ನು ಕೊಂದ ಪರಮಾತ್ಮನನ್ನು ತಾನು ಕೊಲ್ಲುವೆನೆಂದು ಹೊರಟ ಹಿರಣ್ಯಕಶಿಪು ಹೀಗೆ ಪರಮಾತ್ಮತತ್ತ್ವವನ್ನು ಬಂಧುಗಳಿಗೆ ಉಪದೇಶಿಸುವನೆ? ಮುಂದೆ ಪರಮಾತ್ಮನ ಭಕ್ತನೆಂಬ ಕಾರಣದಿಂದ ತನ್ನ ಪ್ರೀತಿಯ ಶಿಶುವಾದ ಪ್ರಹ್ಲಾದನನ್ನು ಕೊಲ್ಲಲು ಯತ್ನಿಸಿದವನು ಪರಮಾತ್ಮನ ಬಗ್ಗೆ ಉಪದೇಶಿಸುವನೆ? ಎಂಬ ಪ್ರಶ್ನೆ ಇಲ್ಲಿ ಬರುತ್ತದೆ. ಮುಂದೆಯೂ 'ಸ ರಕ್ಷಿತಾ ರಕ್ಷತಿ ಯೋ ಹಿ ಗರ್ಭೇ' ತಾಯಿಯ ಗರ್ಭದಲ್ಲಿದ್ದಾಗ ಶಿಶುವನ್ನು ಕಾಪಾಡುವ ಪರಮಾತ್ಮನೇ ಮುಂದೆಯೂ ಕಾಪಾಡುತ್ತಾನೆ ಎಂದು ಮುಂತಾಗಿ (ಶ್ಲೋಕ ೩೮) ಪರಮಾತ್ಮನಲ್ಲಿ ಭಕ್ತಿ ತೋರುವನೆ? ಎಂಬ ಪ್ರಶ್ನೆ ಬರುತ್ತದೆ. ಅವನು ಇಲ್ಲಿ ಉಪದೇಶಿಸುವುದು ಜೀವತತ್ತ್ವವನ್ನು ಎಂದು ಬೇರೆ ವ್ಯಾಖ್ಯಾನಕಾರರು ಹೇಳು ತ್ತಿದ್ದರೂ 'ಸ ರಕ್ಷಿತಾ' ಎಂಬಲ್ಲಿ ಪರಮಾತ್ಮನೇ ಸರ್ವರಕ್ಷಕನೆಂದು ಉಪದೇಶಿಸುವು ದನ್ನು ಒಪ್ಪಿಕೊಂಡಿದ್ದಾರೆ. ಆಗ ಮೇಲಿನ ಪ್ರಶ್ನೆ ಬರುವುದಿಲ್ಲವೆ? ಇದಕ್ಕೆ ಅವರೆಲ್ಲರೂ ಮೌನದಿಂದಿದ್ದಾರೆ. ಶ್ರೀಮದಾಚಾರ್ಯರು ಹೇಳುತ್ತಾರೆ. ಹಿರಣ್ಯಕಶಿಪು ಅಸುರಾವೇಶದಿಂದ ಸದಾ ಪರಮಾತ್ಮನನ್ನು ಅವನ ಭಕ್ತರನ್ನು ದ್ವೇಷಿಸುತ್ತಿದ್ದರೂ ಅದು ಹೊರಗೆ. ಒಳಗೆ ಅವನಲ್ಲಿ ಭಕ್ತಿಯೇ ಇದೆ. ಅದು ಆಗಾಗ ಈ ರೀತಿಯಾಗಿ ಹೊರಗೆ ವ್ಯಕ್ತವಾಗುವುದು ಅಸಂಭವವೇನಲ್ಲ ಎಂದು ಪದ್ಮಪುರಾಣ ಹೇಳಿದೆ.

ವಿವೇಕ ಸ್ಮೃತಿಃ ಅವಿವೇಕಿನ ಏವ ವಿವೇಕಭ್ರಾಂತಿಃ ।
ಅಂತರ್ಹಿರಣ್ಯಕಾದೀನಾಂ ಭಕ್ತಿರಸ್ತ್ಯೇವ ಕೇಶವೇ ।
ಅಸುರಾವೇಶತಸ್ತ್ವನ್ಯಾನ್ ಹರಿಸ್ತೋತ್ರನ್ ದ್ವಿಷಂತಿ ಚ ॥
ಇತಿ ಪಾದ್ಮೇ ॥

'ವಿವೇಕಸ್ಮೃತಿ' ಎಂದರೆ ತಾನು ಅವಿವೇಕಿಯಾಗಿದ್ದೇ ಆ ಅವಿವೇಕವನ್ನು ವಿವೇಕವೆಂದು ಭ್ರಮಿಸುವುದು.

ಹಿರಣ್ಯಕಶಿಪು ಮುಂತಾದವರಿಗೆ ಅಂತರಂಗದಲ್ಲಿ ಹರಿಯಲ್ಲಿ ಭಕ್ತಿ ಇದ್ದೇ ಇದೆ. ಅಸುರಾವೇಶದಿಂದ ಬೇರೆ ಹರಿಸ್ತುತಿ ಮಾಡುವವರನ್ನು ದ್ವೇಷಿಸುತ್ತಾರೆ ಎಂದು ಪದ್ಮಪುರಾಣದಲ್ಲಿ ಉಕ್ತವಾಗಿದೆ.

❖ ❖ ❖

ಹಿರಣ್ಯಾಕ್ಷನ ಮರಣದಿಂದ ಶೋಕತಪ್ತರಾದ ಬಂಧುಗಳನ್ನು ಸಂತೈಸುತ್ತ ಹಿರಣ್ಯಕಶಿಪು, ಸುಯಜರಾಜನ ಮರಣೋತ್ತರದಲ್ಲಿ ಅಳುತ್ತಿದ್ದ ಅವನ ಬಂಧುಗಳಿಗೆ ಬಾಲಕ ರೂಪದಿಂದ ಬಂದು ಯಮ ಸಂತೈಸಿದನೆನ್ನುತ್ತಾನೆ.

ಯಮ ಉವಾಚ-

ಅಹೋ ಅಮೀಷಾಂ ವಯಸಾಽಧಿಕಾನಾಂ
ವಿಪಶ್ಯತಾಂ ಲೋಕವಿಧಿಂ ವಿಮೋಹಃ ।
ಯತ್ರೋದ್ಭವಸ್ತತ್ರ ಗತಂ ಮನುಷ್ಯಂ
ಸ್ವಯಂ ಸಧರ್ಮಾ ಅನುಶೋಚಂತ್ಯಪಾರ್ಥಮ್ ॥ ೩೭ ॥

ಯಮನು ನುಡಿದ- ಆಶ್ಚರ್ಯ! ಇವರೆಲ್ಲ ವಯಸಿನಲ್ಲಿ ನನಗಿಂತ ಹಿರಿಯರು. ಲೋಕದಲ್ಲಿ ಹುಟ್ಟುಸಾವುಗಳು ಭಗವಂತನ ಅಧೀನವಾಗಿ ನಡೆಯುವುದನ್ನು ಚೆನ್ನಾಗಿ ಕಂಡುಬಲ್ಲವರು. ಆದರೂ ಭ್ರಮೆ ಇವರಿಗೆ! ಪರಲೋಕದಿಂದ ಬಂದು ಇಲ್ಲಿ ಹುಟ್ಟಿ ಸತ್ತು ತಿರುಗಿ ಪರಲೋಕಕ್ಕೇ ಹೋಗಿರುವ ಮನುಷ್ಯನ ಬಗ್ಗೆ, ತಾವೂ ಅಂಥವರೇ ಆಗಿದ್ದು ಕೂಡ, ವ್ಯರ್ಥವಾಗಿ ಶೋಕಿಸುತ್ತಿರುವರಲ್ಲ!

[೧]ಇಲ್ಲಿ 'ಯತ್ರೋದ್ಭವಸ್ತತ್ರಗತಂ' ಮನುಷ್ಯ ಅಂದರೆ ಮನುಷ್ಯನ ಶರೀರ ಎಲ್ಲಿ ಹುಟ್ಟಿದೆಯೋ ಅಲ್ಲಿಯೇ ಲೀನವಾಗುವಂಥದ್ದು. ಪಾಂಚಭೌತಿಕವಾದ್ದರಿಂದ ಪಂಚಭೂತಗಳಲ್ಲಿ ಹುಟ್ಟಿ ಪಂಚಭೂತಗಳಲ್ಲಿಯೇ ಲಯ ಹೊಂದುವಂಥದ್ದು. ಅದಕ್ಕೆ ಏಕೆ ಶೋಕಪಡಬೇಕು ಎಂದು ಸುಲಭವಾಗಿ ಅರ್ಥ ಹೇಳಲು ಬರುತ್ತದೆ. ಹಾಗೆಯೇ ವೀರರಾಘವ ಭಗವತ್ಪ್ರಸಾದ ವ್ಯಾಖ್ಯಾನಗಳಲ್ಲಿ ಹೇಳಿದೆ. ಆದರೆ ಶ್ರೀಧರ ಮುಂತಾದ ವ್ಯಾಖ್ಯಾನಗಳಲ್ಲಿ ಎಲ್ಲಿಂದ ಹುಟ್ಟಿದೆಯೋ ಅದನ್ನೇ ಹೋಗಿ ಸೇರುತ್ತದೆ, ಲೀನವಾಗುತ್ತದೆ, ಪ್ರಕೃತಿಯಿಂದ ಅಂದರೆ ಪಂಚಭೂತಗಳಿಂದ ಹುಟ್ಟಿದ್ದು ಕೊನೆಗೆ

---

೧. ಯತ್ರ ಭುವಿ ಸಂಭವ ಉತ್ಪತ್ತಿ ಸ್ತತ್ರೈವ ಗತಂ ಪುನಸ್ತತ್ರೈವ ಲೀನಂ ಮನುಷ್ಯಂ ಪ್ರತಿ ।
-ವೀರರಾಘವಃ

ಯತ್ರ ಯಸ್ಯಾಂ ಭುವಿ ಆಗತಃ ಮನುಷ್ಯಃ ಸಂಭವಂ ಪ್ರಾಪ್ತಃ ತತ್ರ ತಸ್ಯಾಂ ಭುವ್ಯೇವ ಗತಃ। ತಂ ತತ್ರ ಭುವಿ ಲಯಂ ಪ್ರಾಪ್ತಂ ಮನುಷ್ಯಂ ಪ್ರತಿ। ಕೇಚಿತ್ತು ಅಪಾದಾನಾವಿವಕ್ಷಯಾಽಧಿಕರಣಸಪ್ತಮೀಂ ಮತ್ವಾ ಯತ್ರ ಯಸ್ಮಾದವ್ಯಕ್ತಾದಾಗತಸ್ತತ್ರೈವ ಗತಮಪಾರ್ಥಂ ಶೋಚಂತೀತ್ಯುಕ್ತ್ವಾ,

ಅವ್ಯಕ್ತಾದೀನಿ ಭೂತಾನಿ ವ್ಯಕ್ತಮಧ್ಯಾನಿ ಭಾರತ ।
ಅವ್ಯಕ್ತನಿಧನಾನ್ಯೇವ ತತ್ರ ಕಾ ಪರಿದೇವನಾ ॥

ಇತಿ ಭಗವದ್ವಾಕ್ಯಂ ಪ್ರಮಾಣಯಂತಿ। ಪರಂ ಸಾಮಾನಾಧಿಕರಣ್ಯೇನಾಪ್ಯರ್ಥಸೌಲಭ್ಯೇ ವ್ಯಧಿಕರಣವ್ಯಾಖ್ಯಾನಿಗ್ರಹಃ ಕಿಮರ್ಥಃ। ಭೂಶಬ್ದೋಪಾತ್ತಾವ್ಯಕ್ತಶಬ್ದೇನೋಭಯಥಾಪಿ ಸಮಾನಾರ್ಥತ್ವಾತ್ । -ಭಗವತ್ಪ್ರಸಾದಃ

ಅದನ್ನೇ ಆ ಪಂಚಭೂತಾತ್ಮಕ ಪ್ರಕೃತಿಯನ್ನೇ ಹೋಗಿ ಸೇರುತ್ತದೆ ಎಂದು, ವಿಭಕ್ತಿ ಪರಿಣಾಮದಿಂದ 'ಯತ್ರ ತತ್ರ' ಎಂಬುದನ್ನು 'ಯಸ್ಮಾತ್ ತತ್' ಎಂದು ಮಾರ್ಪಡಿಸಿ ಅನ್ವಯಿಸಿದ್ದಾರೆ. ಹೀಗೆ ಮಾಡಿದರೆ,

ಅವ್ಯಕ್ತಾದೀನಿ ಭೂತಾನಿ ವ್ಯಕ್ತಮಧ್ಯಾನಿ ಭಾರತ ।
ಅವ್ಯಕ್ತ ನಿಧನಾನ್ಯೇವ ತತ್ರ ಕಾ ಪರಿದೇವನಾ ॥

ಎಂಬ ಗೀತಾವಾಕ್ಯಕ್ಕೆ ಅನುಗುಣವಾಗುವುದೆಂದು ಅವರ ಅಭಿಪ್ರಾಯ. ಅವ್ಯಕ್ತ ಎಂದರೆ ಪ್ರಕೃತಿ, ಪ್ರಕೃತಿಯಿಂದಾದ ಪಂಚಭೂತಗಳು.

ಭಗವತ್ಪ್ರಸಾದ ವ್ಯಾಖ್ಯಾನ ಈ ವಿಭಕ್ತಿ ಪರಿಣಾಮವನ್ನು ಒಪ್ಪುವುದಿಲ್ಲ. ವಿಭಕ್ತಿ ಪರಿಣಾಮ ಮಾಡದೆ ಅನ್ವಯ ಮಾಡಿದರೂ ಅದೇ ಅರ್ಥಸಿಗುವಾಗ ವ್ಯರ್ಥವಾಗಿ ಏಕೆ ವಿಭಕ್ತಿ ಪರಿಣಾಮ ಮಾಡಬೇಕು? ಎಂಬುದು ಅವರ ಆಕ್ಷೇಪ.

ಆದರೆ ಮನುಷ್ಯಶರೀರ ವಿವಕ್ಷೆ ಇಟ್ಟುಕೊಂಡಾಗ ವಿಭಕ್ತಿ ವಿಪರಿಣಾಮ ವ್ಯರ್ಥವೆನಿಸಿದರೂ ಆತ್ಮವಿವಕ್ಷೆ ಇಟ್ಟುಕೊಂಡಾಗ ಅದು ವ್ಯರ್ಥವಾಗುವುದಿಲ್ಲ. ಬೇರೆ ವ್ಯಾಖ್ಯಾನಕಾರರೆಲ್ಲರೂ ಶರೀರವಿವಕ್ಷೆಯನ್ನೇ ಇಟ್ಟುಕೊಂಡಿದ್ದಾರೆ. ಅವರಿಗೆ ವೈಯರ್ಥ್ಯ ದೋಷವಿದೆ. ಶ್ರೀಮದಾಚಾರ್ಯರು ಆತ್ಮವಿವಕ್ಷೆಯನ್ನೂ ಇಟ್ಟುಕೊಂಡಿದ್ದಾರೆ. ಅದರಿಂದಲೇ 'ಅವ್ಯಕ್ತಾದೀನಿ ಭೂತಾನಿ' ಎಂಬ ಗೀತಾವಾಕ್ಯವನ್ನು ಬಿಟ್ಟು 'ಅದರ್ಶನಾದಿಹಾಯಾತಃ' ಎಂಬ ಭಾರತವಾಕ್ಯವನ್ನು ಉದಾಹರಿಸಿದ್ದಾರೆ. ಆ ವಾಕ್ಯಕ್ಕೆ ಮನುಷ್ಯನ ಆತ್ಮ ನಮಗೆ ಕಾಣದ ಪರಲೋಕದಿಂದ ಬಂದು ಇಲ್ಲಿ ಹುಟ್ಟಿ ತಿರುಗಿ ಕಾಣದ ಆ ಲೋಕಕ್ಕೇ ಹೋಗಿದೆ ಎಂದು ಅರ್ಥ ಗ್ರಹಿಸಬಹುದು. ಆಗ ವಿಭಕ್ತಿ ಪರಿಣಾಮ ಮಾಡಿ ಅನ್ವಯಿಸುವುದೇ ಯುಕ್ತವಾಗುವುದು. ಅದೇ ವಾಕ್ಯಕ್ಕೆ ದೇಹವಿವಕ್ಷೆಯಲ್ಲಿ 'ಪ್ರಕೃತಿಯಿಂದ ಹುಟ್ಟಿ ಪ್ರಕೃತಿಯನ್ನೇ ಹೋಗಿ ಸೇರಿ ಲೀನವಾಗುವುದೆಂ'ದೂ ಅರ್ಥಗ್ರಹಿಸಬಹುದು. ಆಗ ವಿಭಕ್ತಿವಿಪರಿಣಾಮ ಮಾಡಿದರೂ ಮಾಡದಿದ್ದರೂ ಅರ್ಥದಲ್ಲಿ ವ್ಯತ್ಯಾಸ ವಿರುವುದಿಲ್ಲ.

ಯತ್ರೋದ್ಭವಸ್ತತ್ರ ಗತಂ। ಅದರ್ಶನಂ ಗತಂ।
ಅದರ್ಶನಾದಿಹಾಯಾತಃ ಪುನಶ್ಚಾದರ್ಶನಂ ಗತಃ।
ಇತಿ ಭಾರತೇ ॥

'ಯತ್ರೋದ್ಭವಸ್ತತ್ರ ಗತಂ' ಎಂದರೆ ಪರಲೋಕಕ್ಕೆ ಆತ್ಮ ಹೋಗಿದ್ದಾನೆ, ಶರೀರ ಪ್ರಕೃತಿಯಲ್ಲಿ ಲೀನವಾಗುತ್ತದೆ ಎಂದರ್ಥ.

'ಕಣ್ಣಿಗೆ ಕಾಣದ ಪರಲೋಕದಿಂದ ಇಲ್ಲಿಗೆ ಬಂದಿದ್ದಾನೆ, ಆತ್ಮ. ತಿರುಗಿ ಕಾಣದ ಆ ಲೋಕಕ್ಕೇ ಹೋಗಿದ್ದಾನೆ' ಅಥವಾ 'ಅವ್ಯಕ್ತವಾದ ಪ್ರಕೃತಿಯಿಂದ ಹುಟ್ಟಿ ಆ ಪ್ರಕೃತಿಯಲ್ಲಿಯೇ ಲೀನವಾಗುತ್ತದೆ, ಮನುಷ್ಯಶರೀರ' ಎಂದು ಮಹಾಭಾರತದಲ್ಲಿ ಉಕ್ತವಾಗಿದೆ.

ಅದರ್ಶನಾದಾಪತಿತಃ ಪುನಶ್ಚಾದರ್ಶನಂ ಗತಃ ।

ಭೂತಸಂಘಃ....॥

ಎಂದು ಮೇಲಿನ ಭಾರತವಚನಕ್ಕೆ ಛಾಯೆಯಂತಿರುವ ಪುರಾಣ ವಚನವನ್ನು ವಂಶೀಧರ ವ್ಯಾಖ್ಯಾನ ಉದಾಹರಿಸಿದೆ.

❖❖❖

ಮನುಷ್ಯನ ಬದುಕು ಸಾವುಗಳು ಭಗವಂತನ ಅಧೀನ. ಹುಟ್ಟಿದವನು ಆ ಜನ್ಮಕ್ಕೆ ಬೇಕಾಗಿದ್ದ ಕರ್ಮವನ್ನು ಉಂಡು ತೀರಿಸಿದ ಬಳಿಕ ಸಾಯಲೇಬೇಕು. ಆಗ ಅದೇ ಶರೀರದಲ್ಲಿ ಜೀವನೊಂದಿಗೆ ನಿಯಾಮಕನಾಗಿರುವ ಪರಮಾತ್ಮನಿಗೆ ಮಾತ್ರ ಮರಣ ದುಃಖವಿಲ್ಲ. ಜೀವನಿಗೆ ಇದ್ದೇ ಇರುತ್ತದೆ ಎಂದು ಸುಯಜರಾಜನಿಗಾಗಿ ಶೋಕಿಸುತ್ತಿದ್ದ ಅವನ ಬಂಧುಗಳಿಗೆ ಯಮದೇವರು ಉಪದೇಶಿಸುತ್ತಾರೆ.

ಭೂತಾನಿ ತೈಸ್ತೈರ್ನಿಜಯೋನಿಕರ್ಮಭಿ
ರ್ಭವಂತಿ ಕಾಲೇ ನ ಭವಂತಿ ಸರ್ವಶಃ ।
ನ ತತ್ರ ಹಾತ್ಮಾ ಪ್ರಕೃತಾವಪಿ ಸ್ಥಿತ
ಸ್ತಸ್ಯಾ ಗುಣೈರನ್ಯತಮೋ ನಿಬದ್ಧ್ಯತೇ ॥ ೪೧ ॥

ಹುಟ್ಟಿದ ಜೀವರು ಆ ಜನ್ಮಕ್ಕೆ ಕಾರಣವಾದ ಕರ್ಮ ತೀರುವ ಕಾಲದಲ್ಲಿ ಮುಂದಿನ ಜನ್ಮಕ್ಕೆ ಕಾರಣವಾಗುವ ಆಯಾ ಕರ್ಮಗಳ ಪ್ರಭಾವದಿಂದ ಶರೀರತ್ಯಾಗ ಮಾಡುತ್ತಾರೆ. ಆಗ ಆ ಶರೀರಾಕಾರದ ಪ್ರಕೃತಿಯಲ್ಲಿ ನಿಯಾಮಕನಾಗಿ ಜೀವನೊಂದಿಗೇ ಇದ್ದ ಪರಮಾತ್ಮ ಮಾತ್ರ ಜೀವನಂತೆ ಮರಣ ದುಃಖಕ್ಕೆ ಭಾಗಿಯಾಗುವುದಿಲ್ಲ. ಏಕೆಂದರೆ ಅವನು ಜೀವನಿಗಿಂತ ಬಲು ವಿಲಕ್ಷಣ.

ಇಲ್ಲಿ 'ಅನ್ಯತಮಃ' ಎಂದರೆ ಅತ್ಯಂತ ವಿಲಕ್ಷಣ. ಯಾರೆಂದರೆ ಜೀವ ಎನ್ನುತ್ತದೆ ಶ್ರೀಧರವ್ಯಾಖ್ಯಾನ. ಜೀವನಿಗೆ ಜನನ ಮರಣಾದಿಗಳಿವೆ ಎಂದು ಒಪ್ಪಿಕೊಂಡು ಅದು ಭಗವಂತನ ಅಧೀನವಾದ್ದರಿಂದ ಶೋಕಿಸಿ ಫಲವಿಲ್ಲ ಎಂದು ಹಿಂದೆ ಹೇಳಿದೆ.

ಈ ಶ್ಲೋಕದಲ್ಲಿ ವಸ್ತುತಃ ಜನನ ಮರಣಾದಿಗಳು ದೇಹದ ಅವಸ್ಥೆಗಳೇ ಹೊರತು ಜೀವನಿಗೆ ಅವುಗಳ ಸಂಬಂಧವಿಲ್ಲ. ಆದರಿಂದ ಶೋಕ ಮಾಡಬಾರದು ಎಂದು ಯಮ ಹೇಳುತ್ತಿದ್ದಾನೆ. ದೇಹದ ಜನನಾದಿಗಳು ಜೀವನಿಗೆ ಏಕೆ ಸಂಬಂಧಿಸುವುದಿಲ್ಲ ಎಂದರೆ ಜೀವನು ದೇಹಕ್ಕಿಂತ ಅತ್ಯಂತ ವಿಲಕ್ಷಣ. ದೇಹ ಅನಿತ್ಯ, ಜೀವ ನಿತ್ಯ. ಆದರಿಂದ ಜೀವನಿಗೆ ಉತ್ಪತ್ತಿ ನಾಶಗಳಿಲ್ಲ ಎಂದು.[೧]

ಆದರೆ 'ನ ನಿಬಧ್ಯತೇ' ಎಂದರೆ ಜನನಮರಣಾದಿ ರೂಪವಾದ ಸಂಸಾರ ಬಂಧ ಜೀವನಿಗೆ ಇಲ್ಲ ಎಂದು ಸ್ವರಸವಾಗಿ ಕಾಣುತ್ತದೆ. ಅದನ್ನು ಬಿಟ್ಟು ಜನನ ಮರಣಾದಿಗಳು ಜೀವನಿಗೆ ಸಂಬಂಧಿಸುವುದಿಲ್ಲ ಎಂದು ಅರ್ಥಮಾಡುವುದು ಸ್ವರಸವಲ್ಲ.

ಸಂಸಾರಬಂಧ ಜೀವನಿಗೆ ಇಲ್ಲ ಎಂದು ವ್ಯಾಖ್ಯಾನಿಸಿದರೆ ಅದು ವ್ಯಾಹತವಾಗುತ್ತದೆ. ಹೀಗಾಗಿ ಜೀವನಿಗೆ ಸಂಸಾರ ಬಂಧವಿದೆ, ಪರಮಾತ್ಮನಿಗೆ ಇಲ್ಲ ಎನ್ನಬೇಕು. ಹಾಗೇ ವೀರರಾಘವ ಭಗವತ್ಪ್ರಸಾದ ವ್ಯಾಖ್ಯಾನಗಳು ಹೇಳಿವೆ. ಆದರೆ ಅವರು 'ಆತ್ಮಾ ನ ನಿಬಧ್ಯತೇ, ಅನ್ಯತಮಃ ನಿಬಧ್ಯತೇ' ಎಂದು ಎರಡು ವಾಕ್ಯಗಳಾಗಿ ಮಾಡಿ ಆತ್ಮ ಎಂದರೆ ಪರಮಾತ್ಮ, ಅನ್ಯತಮ ಎಂದರೆ ಪರಮಾತ್ಮನಿಗಿಂತ ಅತ್ಯಂತ ವಿಲಕ್ಷಣನಾದ ಜೀವ ಎಂದು ವಿವರಣೆ ನೀಡಿದ್ದಾರೆ. ಇದೂ ಸ್ವರಸವಾದ ವ್ಯಾಖ್ಯಾನವಲ್ಲ. ಈ ಶ್ಲೋಕ ಪೂರ್ವಾರ್ಧದಲ್ಲಿ 'ಭೂತಾನಿ ಕಾಲೇ ಭವಂತಿ, ನ ಭವಂತಿ' 'ಜೀವರು ಹುಟ್ಟುತ್ತಾರೆ ಸಾಯುತ್ತಾರೆ' ಎಂದು ಬಹುವಚನ ಭೂತಶಬ್ದದಿಂದ ಎಲ್ಲ ಜೀವರಿಗೂ ಜನನ ಮರಣ ರೂಪವಾದ ಸಂಸಾರಬಂಧವನ್ನು ಹೇಳಿಯಾಗಿದೆ. ತಿರುಗಿ ಉತ್ತರಾರ್ಧದಲ್ಲಿ 'ಅನ್ಯತಮೋ ನಿಬಧ್ಯತೇ' ಎಂದು ಅಸ್ಪಷ್ಟವಾಗಿ ಜೀವನಿಗೆ ಸಂಸಾರಬಂಧವನ್ನು ಹೇಳಬೇಕಾಗಿಲ್ಲ. ಆದರಿಂದ 'ಅನ್ಯತಮಃ ಆತ್ಮಾ ನ ನಿಬಧ್ಯತೇ' ಎಂದು ಒಂದೇ ವಾಕ್ಯ.

---

೧. ತದೇವಮಾತ್ಮನೋ ಜನ್ಮ ಮರಣಾದಿಕಮಂಗೀಕೃತ್ಯೇಶ್ವರಾಧೀನತ್ವಾನ್ನ ಶೋಕಃ ಕಾರ್ಯ ಇತ್ಯುಕ್ತಂ। ಇದಾನೀಂ ತು ದೇಹಾನಾಮೇವ ಜನ್ಮಾದಿ ನ ತ್ವಾತ್ಮನ ಇತ್ಯಾಹ ಭೂತಾನೀತಿ ತ್ರಿಭಿಃ। ಭೂತಾನಿ ದೇಹಾಃ। ಪ್ರಕೃತೌ ದೇಹೇ ಸ್ಥಿತೋಽಪ್ಯಾತ್ಮಾ ತಸ್ಯಾಃ ಪ್ರಕೃತೇರ್ಗುಣೈರ್ದೇಹಧರ್ಮೈರ್ಜನ್ಮಾದಿಭಿರ್ನ ನಿಬಧ್ಯತೇ ನ ಯುಜ್ಯತೇ ಯತೋಽನ್ಯತಮೋ ದೇಹಾದತ್ಯಂತ ವಿಲಕ್ಷಣಃ । -ಶ್ರೀಧರ

ತತ್ರ ಪ್ರಕೃತೌ ದೇವಾದಿ ಶರೀರೇ ಸ್ಥಿತೋ ಜೀವಾಂತರಾತ್ಮತಯಾವಸ್ಥಿತಃ ಅಪಿ ಆತ್ಮಾ ಪರಮಾತ್ಮಾ ತಸ್ಯಾಃ ಪ್ರಕೃತೇರ್ಗುಣೈರ್ನ ನಿಬಧ್ಯತೇ ಪ್ರಕೃತಿಗುಣೈರ್ನ ಸಂಸರತೀತ್ಯರ್ಥಃ । ಅನ್ಯತಮೋ ಜೀವಃ ಸಂಸರತೀತ್ಯರ್ಥಃ । -ಭಗವತ್ಪ್ರಸಾದ

ಅನ್ಯತಮನಾದ ಅತ್ಯಂತ ವಿಲಕ್ಷಣನಾದ ಆತ್ಮ ಎಂದರೆ ಪರಮಾತ್ಮನೆ. ವಾಮನ ಪುರಾಣವಚನಾನುಸಾರ ಈ ಅರ್ಥ ಸ್ವರಸವಾಗಿ ಶಬ್ದದಿಂದ ತಿಳಿದುಬರುತ್ತದೆ. ಪರಮಾತ್ಮನಿಗಿಂತ ಜೀವ ಅತ್ಯಂತ ವಿಲಕ್ಷಣನೇ ಆದರೂ ಅವನನ್ನು 'ಅನ್ಯತಮ ಆತ್ಮಾ' ಎಂದು ವ್ಯವಹರಿಸುವುದು ಪುರಾಣಾದಿಗಳಲ್ಲಿ ಕಂಡುಬರುವುದಿಲ್ಲ.

ಮುಂದೆ ಈ ಅಧ್ಯಾಯದ ಕೊನೆಯಲ್ಲಿ ಹಿರಣ್ಯಕಶಿಪುವಿನ ಉಪದೇಶದಿಂದ ದಿತಿದೇವಿಯೂ ಪುತ್ರಶೋಕವನ್ನು ಬಿಟ್ಟು 'ತತ್ತ್ವೇ ಚಿತ್ತಮಧಾರಯತ್' ಪರತತ್ತ್ವದಲ್ಲಿ ಮನಸ್ಸಿಟ್ಟಳು ಎಂದಿದೆ. ಇಲ್ಲಿ 'ತತ್ತ್ವ'ವೆಂದರೆ ಬೇರೆ ವ್ಯಾಖ್ಯಾನಕಾರರ ಪಕ್ಷದಲ್ಲಿ ಅಪರತತ್ತ್ವ, ಜೀವ ನಿತ್ಯ ದೇಹ ಅನಿತ್ಯ ಎಂದು. ಆದರೆ ತತ್ತ್ವ ಎಂದಾಗ ಪರತತ್ತ್ವವೇ ಪ್ರತೀತವಾಗುತ್ತದೆ. ಬಲಾತ್ಕಾರವಾಗಿ ಅಪರತತ್ತ್ವವೆಂದಿಟ್ಟುಕೊಂಡು ಹಿರಣ್ಯಕಶಿಪುವಿನ ಉಪದೇಶವನ್ನು ಅಪರತತ್ತ್ವಕ್ಕೆ ಸಂಬಂಧಿಸಿದಂತೆ ವ್ಯಾಖ್ಯಾನಿಸುವುದು ಉಚಿತವಾಗುವುದಿಲ್ಲ. ಹಾಗಾದರೆ ಪರತತ್ತ್ವದ ಉಪದೇಶದಿಂದ ಪ್ರಕೃತದಲ್ಲಿ ಏನು ಪ್ರಯೋಜನ? ಎಂಬ ಪ್ರಶ್ನೆ ಬರುತ್ತದೆ. ಅದಕ್ಕೆ ಸಮಾಧಾನ ಹೀಗೆ- ಸತ್ತು ಹೋದವನನ್ನು ಅತ್ತು ಕರೆದರೆ ಮತ್ತೆ ಬರಲಾರ, ಎಲ್ಲವೂ ಆ ಭಗವಂತನ ಅಧೀನ. ಅವನನ್ನೇ ನೆನೆಯುತ್ತ ದುಃಖವನ್ನು ಮರೆಯಬೇಕು. ಅವನ ಅನುಗ್ರಹದಿಂದಲೇ ದುಃಖವನ್ನು ಮರೆಯುವುದು ಶಕ್ಯವಾಗುತ್ತದೆ. ಹೊರತು ಜೀವ ನಿತ್ಯ ದೇಹ ಅನಿತ್ಯ ಎಂದು ಎಷ್ಟು ಧ್ಯಾನ ಮಾಡಿದರೂ ಅನಿತ್ಯವಾದ ದೇಹದ ಬಗ್ಗೆ ಶೋಕ ಮರೆಯಾಗಲಾರದು. ಮರೆಯುವ ಸಾಮರ್ಥ್ಯವನ್ನು ಭಗವಂತನೆ ನೀಡಬೇಕು.

ಅನ್ಯತಮ ಆತ್ಮಾ ಪರಮಾತ್ಮಾ ।
ಸುವಿರುದ್ಧಸ್ವರೂಪತ್ವಾಜ್ಜೀವಾದನ್ಯತಮೋ ಹರಿಃ॥

ಇತಿ ವಾಮನೇ ।

ಭಗವನ್ಮಾಹಾತ್ಮ್ಯ ಕಥನೇನ ಸರ್ವಸ್ಯ ತದ್ವಶತ್ವಾತ್ ಸ ಏವ ಭಜನೀಯೋ, ನ ಶೋಕೇನ ಪ್ರಯೋಜನಂ ಇತಿ ಫಲಿತಾರ್ಥಃ ॥

ಅತ್ಯಂತ ವಿಲಕ್ಷಣನಾದ ಆತ್ಮನೆಂದರೆ ಪರಮಾತ್ಮ ಎಂದು ಶಾಸ್ತ್ರಗಳಲ್ಲಿ ವ್ಯವಹಾರ. ವಾಮನ ಪುರಾಣದಲ್ಲಿ ಇದು ಸ್ಪಷ್ಟವಿದೆ- 'ಜೀವಸ್ವರೂಪಕ್ಕಿಂತ ಅತ್ಯಂತ ವಿಲಕ್ಷಣ ಸ್ವರೂಪದವನಾದ್ದರಿಂದ ಹರಿ ಅನ್ಯತಮ ಆತ್ಮ ಎಂದು ಹೇಳಲ್ಪಡುತ್ತಾನೆ' ಎಂದು.

ಪುತ್ರಶೋಕದಿಂದ ಅಳುತ್ತಿದ್ದ ದಿತಿದೇವಿಗೆ ಹಿರಣ್ಯಕಶಿಪು ಭಗವಂತನ ಮಹಿಮೆಯನ್ನು ವರ್ಣಿಸುವುದರ ತಾತ್ಪರ್ಯ ಎಲ್ಲವೂ ಭಗವಂತನ

ಅಧೀನವಾಗಿರುವುದರಿಂದ ಅವನನ್ನೇ ಭಜಿಸಬೇಕು ಹೊರತು ಶೋಕಿಸುವುದರಿಂದ ಏನೂ ಫಲವಿಲ್ಲ ಎಂದು.

❖ ❖ ❖

ಪರಮಾತ್ಮ ಜೀವಶರೀರದಲ್ಲಿ ನಿಯಾಮಕನಾಗಿ ನೆಲೆಸಿದರೂ ಜೀವನ ಅಥವಾ ಅವನ ಶರೀರದ ಯಾವುದೇ ದೋಷ ಅವನಲ್ಲಿ ಅಂಟಿಕೊಳ್ಳುವುದಿಲ್ಲ ಎಂದು ಸುಯಜ್ಞನ ಬಂಧುಗಳಿಗೆ ಯಮನು ನೀಡಿದ ಉಪದೇಶವನ್ನು ಹಿರಣ್ಯಕಶಿಪು ದಿತಿದೇವಿಗೆ ಹೇಳುತ್ತಾನೆ.

ಯಥಾಽನಲೋ ದಾರುಷು ಭಿನ್ನ ಈಯತೇ
ಯಥಾಽನಿಲೋ ದೇಹಗತಃ ಪೃಥಕ್‌ಸ್ಥಿತಃ।
ಯಥಾ ನಭಃ ಸರ್ವಗತಂ ನ ಸಜ್ಜತೇ
ತಥಾ ಗುಣೈಃ ಸರ್ವಗುಣಾಶ್ರಯಃ ಪರಃ ॥ ೪೩ ॥

~~ಬೆಂಕಿ ಕಟ್ಟಿಗೆಯಲ್ಲಿದ್ದರೂ ಅದು ಬೇರೆಯೇ ಆಗಿರುತ್ತದೆ. ಕಟ್ಟಿಗೆ~~ ಸುಟ್ಟುಹೋದರೂ ಬೆಂಕಿ ಸುಟ್ಟು ಹೋಗದು. ಪ್ರಾಣವಾಯುವು ದೇಹದಲ್ಲಿದ್ದರೂ ದೇಹಕ್ಕೆ ಗಾಯವಾದಾಗ ಪ್ರಾಣವಾಯುವಿಗೆ ಗಾಯವಾಗುವುದಿಲ್ಲ. ಆಕಾಶ ಎಲ್ಲೆಡೆ ಇದ್ದರೂ ಅದಕ್ಕೆ ಯಾವುದರ ಲೇಪವೂ ಇರುವುದಿಲ್ಲ. ಅದು ಬೇರೆಯೇ ಆಗಿರುತ್ತದೆ. ಹಾಗೇ ಸ್ವಾತಂತ್ರ್ಯಾದಿ ಸಕಲಗುಣಾಕರನಾದ ಪರಮಾತ್ಮ ಜೀವನ ಅಥವಾ ಅವನ ಶರೀರದ ಯಾವುದೇ ದೋಷದಿಂದ ಲೇಪಹೊಂದುವುದಿಲ್ಲ.

ಇಲ್ಲಿ ಜ್ಞಾನಾನಂದಾದಿ ಸಕಲ ಗುಣಾಕರನಾದ ಪರಮಪುರುಷ ನಾರಾಯಣ 'ಸರ್ವಗುಣಾಶ್ರಯಃ ಪರಃ ಪುಮಾನ್' ಎಂದು ವರ್ಣಿತನಾಗಿದ್ದಾನೆ. ಅವನು ಆಕಾಶದಂತೆ ಎಲ್ಲೆಡೆ ಇದ್ದರೂ ಯಾವುದೇ ದೋಷ ಸಂಪರ್ಕ ಅವನಿಗೆ ಇಲ್ಲ ಎಂದೂ ಹೇಳಿದೆ.

ಇಷ್ಟು ಸ್ಪಷ್ಟವಾಗಿ ಭಗವಂತನ ವರ್ಣನೆ ಇಲ್ಲಿ ಕಂಡುಬರುತ್ತಿದ್ದರೂ ಬೇರೆ ವ್ಯಾಖ್ಯಾನಕಾರರು ಜೀವಸ್ವರೂಪ ವರ್ಣನ ಪರವಾಗಿ ಶ್ಲೋಕವನ್ನು ವ್ಯಾಖ್ಯಾನಿಸಿದ್ದಾರೆ- ಪರಃ ಪುಮಾನ್ ಎಂದರೆ ಪರಮಪುರುಷನಲ್ಲ, ದೇಹಾದಿಗಳಿಂದ ಬೇರೆಯಾದ ಜೀವ. ಅವನು ಸರ್ವಗುಣಾಶ್ರಯ ಹೇಗೆಂದರೆ ದೇಹ ಇಂದ್ರಿಯ ಮನಸ್ಸುಗಳೆಂಬ ಎಲ್ಲ ಗುಣಕ್ಕೂ ಆಶ್ರಯ, ಅಥವಾ ಎಲ್ಲವನ್ನೂ ಆಶ್ರಯಿಸಿದವನು. ಅವನಿಗೆ ದೇಹಧರ್ಮವಾದ ಉತ್ಪತ್ತಿನಾಶಾದಿಗಳ ಸಂಬಂಧವಿಲ್ಲ, ನಿತ್ಯನಾದ್ದರಿಂದ.

ದೇಹದ ಉತ್ಪತ್ತಿನಾಶಾದಿಗಳಿಂದ ಅವನು ಎಷ್ಟು ದುಃಖಗಳಿಗೆ ಈಡಾದರೂ ಅವನಿಗೆ ಲೇಪವಿಲ್ಲ! ಏಕೆಂದರೆ ಅವನು ದೇಹಾದಿಗಳಿಗಿಂತ ಭಿನ್ನ, ವಿಲಕ್ಷಣ ! [೧]

ಇಂಥ ಭೇದವೈಲಕ್ಷಣ್ಯಗಳಿಂದ ಅವನು ದುಃಖ ಮುಕ್ತನಾಗುವನೆ? ಅವನಿಗೆ ಲೇಪವಿಲ್ಲವೆನ್ನಬಹುದೆ?

ವಾಮನಪುರಾಣವಚನ ಈ ಭಾಗವತ ಶ್ಲೋಕವನ್ನು ಪರಮಾತ್ಮ ಪರವಾಗಿ ಸುಂದರವಾಗಿ ವ್ಯಾಖ್ಯಾನಿಸಿದೆ.

ದೇಹದಾರುಗತೌ ಪ್ರಾಣವಹ್ನೀ ಸರ್ವಗತಂ ನಭಃ ।
ದೇಹಾದಿಭ್ಯೋ ಯಥಾ ಭಿನ್ನಾ ನ ಲಿಪ್ಯಂತೇ ಚ ತದ್ಗುಣೈಃ ।
ತಥಾ ಜೀವಗತೋ ವಿಷ್ಣುರ್ಜೀವಾದ್ ಭಿನ್ನೋ ನ ತದ್ಗುಣೈಃ॥
ಇತಿ ಚ ॥

ದೇಹದಲ್ಲಿ ಪ್ರಾಣ, ಕಟ್ಟಿಗೆಯಲ್ಲಿ ಬೆಂಕಿ, ಎಲ್ಲೆಡೆ ಆಕಾಶಗಳಿದ್ದರೂ ಅವು ದೇಹ, ಕಟ್ಟಿಗೆ ಎಲ್ಲ ಪದಾರ್ಥಗಳಿಗಿಂತ ವಿಲಕ್ಷಣವಾಗಿದ್ದು ಅವುಗಳ ಗುಣಧರ್ಮಗಳಿಂದ ಲೇಪ ಹೊಂದುವುದಿಲ್ಲ ಹೇಗೋ ಹಾಗೇ ಜೀವನಲ್ಲಿರುವ ವಿಷ್ಣು ಜೀವನಿಗಿಂತ ವಿಲಕ್ಷಣನಾಗಿಯೇ ಇದ್ದು ಅವನ ದುಃಖಾದಿ ಗುಣಗಳಿಂದ ಲೇಪ ಹೊಂದುವುದಿಲ್ಲ ಎಂದೂ ವಾಮನಪುರಾಣದಲ್ಲಿ ಉಕ್ತವಾಗಿದೆ.

❖ ❖ ❖

ಈ ಮೃತಶರೀರ ಸುಯಜ್ಞನಲ್ಲ, ಶರೀರದಲ್ಲಿದ್ದ ಜೀವಾತ್ಮನಾಗಲಿ, ಅವನಿಗೆ ನಿಯಾಮಕನಾದ ಮುಖ್ಯಪ್ರಾಣನಾಗಲಿ, ತನ್ನ ಒಡನಾಟದಿಂದ ನಿಮಗೆ ಸಂತೋಷ ಉಂಟುಮಾಡಲು ಸ್ವತಃ ಶಕ್ತರಲ್ಲ. ಪರಮಾತ್ಮನೇ ಸ್ವತಃ ಶಕ್ತ. ಜೀವ ಮುಖ್ಯ ಪ್ರಾಣರೊಂದಿಗೆ ಜೀವಜನನಕಾಲದಲ್ಲಿ ಶಿಶುಶರೀರವನ್ನು ಪ್ರವೇಶಿಸುವವನೂ ಅವನೆ, ಮರಣಕಾಲದಲ್ಲಿ ಹೊರಗೆ ಹೋಗುವವನೂ ಅವನೆ. ಜೀವನಿಗಾಗಿ ಅತ್ತು

---

೧. ಪೃಥಗವಸ್ಥಾನಾಭಾವೇಽಪಿ ಭಿನ್ನತ್ವೇ ದೃಷ್ಟಾಂತದ್ವಯಮಾಹ ಯಥೇತಿ। ಯಥಾಽನಲೋ ದಾರುಷ್ವೇವ ಸ್ಥಿತೋಽಪಿ ದಾಹಕತ್ವೇನ ಪ್ರಕಾಶಕತ್ವೇನ ಭಿನ್ನ ಏವ ಪ್ರತೀಯತೇ, ಯಥಾ ಚ ದೇಹಗತೋಽಪ್ಯನಿಲೋ ಮುಖನಾಸಿಕಾದಿಷು ಪೃಥಕ್ ಸ್ಥಿತ ಏವ ಪ್ರತೀಯತೇ। ದೇಹಸ್ಥತ್ವೇಽಪ್ಯಾತ್ಮನಸ್ತದ್ಧರ್ಮಯೋಗಾಭಾವೇ ದೃಷ್ಟಾಂತಮಾಹ ಯಥಾ ನಭೋ ನ ಸಜ್ಜತೇ ಕ್ವಾಪಿ ಸಂಗಂ ನ ಪ್ರಾಪ್ನೋತಿ ತಥಾ ಪುಮಾನಪಿ ಸರ್ವೇಷಾಂ ಗುಣಾನಾಂ ದೇಹೇಂದ್ರಿಯಾದೀನಾಮಾಶ್ರಯಸ್ತೇಷ್ವಾಶ್ರಿತೋ ವಾ ಪರಃ ಪೃಥಗೇವೇತ್ಯರ್ಥಃ ।
-ಶ್ರೀಧರಃ

ಫಲವಿಲ್ಲ. ಅವನೆಂದೂ ಶಾಶ್ವತ ಸುಖ ನೀಡುವುದಿಲ್ಲ ಎಂದು ಯಮದೇವರು ಸುಯಜ್ಞನ ಬಂಧುಗಳಿಗೆ ಉಪದೇಶಿಸುವರೆಂದು ಹಿರಣ್ಯಕಶಿಪು ದಿತಿದೇವಿಗೆ ಹೇಳುತ್ತಾನೆ.

ಸುಯಜ್ಞೋ ನನ್ವಯಂ ಶೇತೇ ಮೂಢಾ ಯಮನುಶೋಚಥ ।
ಯಃ ಶ್ರೋತಾ ಯೋಽನುವಕ್ತೇಹ ನ ಸ ದೃಶ್ಯೇತ ಕರ್ಹಿಚಿತ್ ॥ ೪೪ ॥

ನ ಶ್ರೋತಾ ನಾನುವಕ್ತಾಽಯಂ ಮುಖ್ಯೋಽಪ್ಯತ್ರ ಮಹಾನಸುಃ ।
ಯಸ್ತ್ವಿಹೇಂದ್ರಿಯವಾನಾತ್ಮಾ ಸ ಚಾನ್ಯಃ ಪ್ರಾಣದೇಹಯೋಃ ॥ ೪೫ ॥

ಭೂತೇಂದ್ರಿಯಮನೋಲಿಂಗಾನ್ ದೇಹಾನುಚ್ಚಾವಚಾನ್ವಿಭುಃ ।
ಭಜತ್ಯುತ್ಸೃಜತಿ ಹ್ಯನ್ಯಸ್ತಚ್ಚಾಪಿ ಸ್ವೇನ ತೇಜಸಾ ॥ ೪೬ ॥

ಯಾವಲ್ಲಿಂಗಾನ್ವಿತೋ ಹ್ಯಾತ್ಮಾ ತಾವತ್ಕರ್ಮನಿಬಂಧನಃ ।
ತತೋ ವಿಪರ್ಯಯಃ ಕ್ಲೇಶೋ ಮಾಯಾಯೋಗೋಽನುವರ್ತತೇ ॥ ೪೭ ॥

ವಿತಥಾಭಿನಿವೇಶೋಽಯಂ ಯದ್ಗುಣೇಷ್ವರ್ಥದೃಗ್ವಚಃ ।
ಯಥಾ ಮನೋರಥಃ ಸ್ವಪ್ನಃ ಸರ್ವಮೈಂದ್ರಿಯಕಂ ಮೃಷಾ ॥ ೪೮ ॥

ಮೂಢರೆ, ನೀವು ಯಾರಿಗಾಗಿ ಅಳುತ್ತಿರುವಿರಿ? ನಿಮ್ಮ ಮುಂದೆ ಬಿದ್ದಿರುವ ಈ ಜಡಶರೀರ ಸುಯಜ್ಞನೆ? ಅಲ್ಲ. ಈ ಶರೀರದಲ್ಲಿದ್ದು ನಿಮ್ಮ ಮಾತುಗಳನ್ನಾಲಿಸಿ ಪ್ರತಿಯಾಗಿ ನುಡಿಯುತ್ತಿದ್ದ, ಚೇತನನಾದ, ನಿಮ್ಮ ಎಲ್ಲ ವ್ಯವಹಾರಗಳಲ್ಲಿ ಗೋಚರನಾಗುತ್ತಿದ್ದು ಸುಖ ನೀಡುತ್ತಿದ್ದ ಸುಯಜ್ಞನಿಗಾಗಿ ಅಳುತ್ತಿದ್ದೇವೆ ಎನ್ನುವುದಾದರೆ ಅದೂ ಸರಿಯಲ್ಲ. ನಿಮ್ಮ ಮಾತುಗಳನ್ನು ಆಲಿಸುತ್ತಿದ್ದುದು ನುಡಿಯುತ್ತಿದ್ದುದು ಸ್ವತಃ ಸುಯಜ್ಞನಲ್ಲ. ಅವನಿಗೆ ಕಿವಿನಾಲಿಗೆಗಳ ಮೇಲೆ ನನ್ನವೆಂಬ ಅಭಿಮಾನ ಮಾತ್ರವಿದೆ. ಕಿವಿನಾಲಿಗೆಗಳಿಂದ ಕೇಳುವ ನುಡಿಯುವ ಶಕ್ತಿ ಸ್ವತಃ ಇಲ್ಲ. ಕೇಳುವವನೂ ನುಡಿಯುವವನೂ ಪರಮಾತ್ಮನೆ. ಪರಮಾತ್ಮನೆ ಇಂದಿನವರೆಗೆ ನಿಮಗೆ ಬಂಧುವಾಗಿ ವ್ಯವಹರಿಸುತ್ತಿದ್ದವನು. ಹೀಗೆ ಶರೀರದಲ್ಲಿದ್ದೂ ಇಲ್ಲದಂತಿದ್ದ ಆ ಸುಯಜ್ಞನಿಗಾಗಿ ಅತ್ತು ಏನು ಪ್ರಯೋಜನ?

ಜೀವರಿಗೂ ಅವರ ಇಂದ್ರಿಯಗಳಿಗೂ ನಿಯಾಮಕನಾದ ಶ್ವಾಸನಿಯಾಮಕನಾದ ಮುಖ್ಯಪ್ರಾಣನೂ ಸ್ವತಃ ಕೇಳಲು ನುಡಿಯಲು ಶಕ್ತನಲ್ಲವೆಂದಮೇಲೆ ಜೀವರ ಪಾಡೇನು? ದೇಹದಲ್ಲಿದ್ದು

ಇಂದ್ರಿಯಗಳನ್ನು ತನ್ನವೆಂದು ಅಭಿಮಾನಪಡುವ ಜೀವನು ಮುಖ್ಯಪ್ರಾಣನಿಂದಲೂ ದೇಹದಿಂದಲೂ ಬೇರೆ. ಸ್ವತಃ ಕೇಳುವ ನುಡಿಯುವ ಪರಮಾತ್ಮನಿಗಿಂತಲೂ ಬೇರೆ.

ಪಂಚಭೂತಗಳು ಮತ್ತು ಇಂದ್ರಿಯ ಮನಸ್ಸುಗಳು ಕೂಡಿ ಉಂಟಾಗಿರುವ ಮೇಲು ಕೀಳೆನಿಸುವ ಎಲ್ಲ ಶರೀರಗಳನ್ನೂ ಜೀವನ ಜನನಕಾಲದಲ್ಲಿ ಪರಮಾತ್ಮನೇ ಪ್ರವೇಶಿಸುತ್ತಾನೆ. ಮರಣಕಾಲದಲ್ಲಿ ತ್ಯಜಿಸುತ್ತಾನೆ. ಸ್ವಶಕ್ತಿಯಿಂದ ಅವನು ಹೀಗೆ ಮಾಡುತ್ತಾನೆ. ಸ್ವಶಕ್ತಿಯಿಂದಲೇ ಕೇಳುತ್ತಾನೆ ನುಡಿಯುತ್ತಾನೆ ಅವನು ಜೀವನಿಗಿಂತ ವಿಲಕ್ಷಣನೆ. ಈ ಜಡದೇಹವೇ ಆತ್ಮವೆಂದು ಬಗೆದು ನೀವು ಹೀಗೆ ಶೋಕಿಸುವುದು ಸರಿಯಲ್ಲ.

ಶ್ರೀಹರಿ ಜೀವರಿಗಾಗಿ ಅವರ ಶರೀರಗಳನ್ನು ರಕ್ಷಿಸುವಷ್ಟು ಕಾಲ ಕರ್ಮಬದ್ಧರಾದ ಜೀವರು ನಿಜಸ್ವರೂಪದಲ್ಲಿರುವುದಿಲ್ಲ. ಕ್ಲೇಶ ಅಜ್ಞಾನ ಸಂಬಂಧ ಸದಾ ಇರುತ್ತದೆ.

ಜೀವ ತನ್ನ ಒಡನಾಟದಿಂದ ನೀಡುವ ಸುಖವೂ ಶಾಶ್ವತವೆಂದು ತಿಳಿಯುವುದು ಭ್ರಮ. ಹಗಲುಗನಸು ಸ್ವಪ್ನಗಳಂತೆ ಅದು ನಿಷ್ಫಲ.

ಇಲ್ಲಿ ಬೇರೆ ವ್ಯಾಖ್ಯಾನಕಾರರ ಪ್ರಕಾರ ಹಿರಣ್ಯಕಶಿಪು ತಿರುಗಿ ದೇಹ ಬೇರೆ ಆತ್ಮ ಬೇರೆ ಎಂದು ಮಾತ್ರ ಉಪದೇಶಿಸುತ್ತಾನೆ. ಭಗವಂತನ ಸ್ವಾತಂತ್ರ್ಯದ ಬಗ್ಗೆ ಏನೂ ಹೇಳುವುದಿಲ್ಲ. ಅವರು ಈ ಐದು ಶ್ಲೋಕಗಳ ಅಭಿಪ್ರಾಯವನ್ನು ಹೀಗೆ ಹೇಳುತ್ತಾರೆ-

ಸುಯಜ್ಞ ಇಲ್ಲಿಯೇ ನೆಲದ ಮೇಲೆ ಒರಗಿದ್ದಾನೆ ತಾನೆ? ಏಕೆ ಶೋಕ? ಇಷ್ಟರವರೆಗೆ ಅವನು ನಮ್ಮ ಮಾತನ್ನು ಕೇಳುವುದು ಪ್ರತಿಯಾಗಿ ನುಡಿಯುವುದು ಮುಂತಾಗಿ ಎಲ್ಲ ವ್ಯವಹಾರ ಮಾಡುವುದನ್ನು ನಾವು ನೋಡುತ್ತಿದ್ದೆವು. ಅವು ಒಂದೂ ಈಗ ಕಾಣುವುದಿಲ್ಲವೆಂದು ಶೋಕಪಡುತ್ತೇವೆ ಎನ್ನುವುದಾದರೆ, ಅವನೆಂದೂ ನಿಮಗೆ ಕಾಣುವುದಿಲ್ಲ. ನೀವು ಕಂಡಿದ್ದು ಅವನ ದೇಹವನ್ನು, ಅದು ಈಗಲೂ ನಿಮ್ಮ ಮುಂದೆ ಕಾಣುತ್ತಿದೆ.

ಸರ್ವೇಂದ್ರಿಯ ಪ್ರೇರಕನಾದ ಉಸಿರಾಡುವ ಮುಖ್ಯಪ್ರಾಣನೂ ಕೇಳುವವನು ನುಡಿಯುವವನಲ್ಲ. ಏಕೆಂದರೆ ಅವನು ಅಚೇತನ. ಕೇಳುವವನು ನುಡಿಯುವವನು ದೇಹೇಂದ್ರಿಯಗಳುಳ್ಳ ಆತ್ಮ. ಅವನು ಪ್ರಾಣನಿಗಿಂತಲೂ ದೇಹಕ್ಕಿಂತಲೂ ಬೇರೆಯೆ, ಚೇತನನಾಗಿದ್ದಾನೆ.

ಚೇತನನಾಗಿದ್ದು ದೇಹಪ್ರಾಣಗಳಿಗಿಂತ ಬೇರೆಯಾಗಿದ್ದರೂ ಆತ್ಮ ದೇಹವನ್ನು ತಾನೆಂದುಕೊಳ್ಳುತ್ತಾನೆ. ವಿವೇಕ ಬಂದಾಗ ಈ ತಪ್ಪನ್ನು ಮಾಡುವುದಿಲ್ಲ. ಆಗ ಅವನಿಗೆ ಮೋಕ್ಷ. ಜೀವನಿಗೆ ಲಿಂಗಶರೀರವಿರುವಷ್ಟು ಕಾಲ ಮಾತ್ರ ಅವನಿಗೆ ಕರ್ಮ ಬಂಧನವಾಗುತ್ತದೆ. ಆದರಿಂದ ಭ್ರಮ, ಕ್ಲೇಶ. ಶರೀರಾಭಿಮಾನ ಹೋದ ಬಳಿಕ ಅವಿಲ್ಲ. ಅವು ಕೇವಲ ಮಾಯೆ ಸುಳ್ಳು. ವಿಷಯ ಸುಖವೆಲ್ಲ ಹಗಲುಗನಸಿನಂತೆ ಸ್ವಪ್ನದಂತೆ. ಅವನ್ನು ಸತ್ಯವೆಂದು ತಿಳಿಯುವುದು ವಾದಿಸುವುದೆಲ್ಲ ಬರಿ ಸುಳ್ಳು ಆಗ್ರಹ. ೧

ಇಲ್ಲಿ 'ಆತ್ಮನೆಂದೂ ಕಾಣುವುದಿಲ್ಲ. ನೀವು ಕಂಡಿದ್ದು ಅವನ ದೇಹವನ್ನು' ಎಂದು ಹೇಳುವುದು ಅಸಂಗತ. ಆತ್ಮ ಕಣ್ಣಿಗೆ ಕಾಣುತ್ತಾನೆ ಎಂದು ಯಾರೂ ಹೇಳುವುದಿಲ್ಲ. 'ವ್ಯವಹಾರದಲ್ಲಿ ಗೋಚರಿಸುತ್ತಾನೆ' ಎನ್ನುತ್ತೇವೆ. ಅದನ್ನು ಅಲ್ಲಗಳೆಯಲಾಗುವುದಿಲ್ಲ. ಅದರಿಂದ ಶ್ಲೋಕದ ಉತ್ತರಾರ್ಧಕ್ಕೆ 'ವ್ಯವಹಾರ ಗೋಚರನಾಗುವ ಜೀವಾತ್ಮ ಸ್ವತಂತ್ರವಾಗಿ ಕೇಳುವವನಲ್ಲ, ನುಡಿಯುವವಲ್ಲ' ಎಂದೇ ವ್ಯಾಖ್ಯಾನ ಮಾಡಬೇಕು. ಪೂರ್ವಾರ್ಧದಲ್ಲಿಯೂ 'ಸುಯಜ್ಞನು ನೆಲದ ಮೇಲೊರಗಿದ್ದಾನೆ ತಾನೆ?' ಎಂದರ್ಥವಲ್ಲ. ಹಾಗೆ ಅರ್ಥ ಹೇಳಿ ಒರಗಿದವ ಸುಯಜ್ಞನಲ್ಲ ಅವನ ದೇಹ ಎಂದು ಆಕ್ಷೇಪ ಮಾಡಬೇಕಾಗಿಲ್ಲ. ನೇರವಾಗಿ 'ನೆಲದ ಮೇಲೊರಗಿರುವವನು ಸುಯಜ್ಞನೆ?' ಎಂದು ಆಕ್ಷೇಪ ಮಾಡಬಹುದು. 'ನನು' ಶಬ್ದ ಪ್ರಶ್ನೆಯನ್ನು ಮಾತ್ರವಲ್ಲ ಆಕ್ಷೇಪವನ್ನೂ ಹೇಳಬಲ್ಲುದು.

ಸರ್ವೇಂದ್ರಿಯ ಪ್ರೇರಕನಾದ ಮುಖ್ಯಪ್ರಾಣ ಜೀವೋತ್ತಮ. ಅವನನ್ನು ಅಚೇತನನೆನ್ನುವುದು ಉಪನಿಷದ್ ಬ್ರಹ್ಮಸೂತ್ರಾದಿ ಸಕಲ ಶಾಸ್ತ್ರಗಳಿಗೆ

---

೧. ಹೇ ಮೂಢಾ ಯಮನುಶೋಚಥ ಸೋಽಯಂ ಯಷ್ಮದ್ಭರ್ತಾ ಸುಯಜ್ಞಃ ಶೇತೇ। ಕಿಮಿತಿ ಶೋಚಥ। ನನ್ವೇತಾವಂತಂ ಕಾಲಮಸೌ ಶೃಣೋತ್ಯನಂತರಂ ಪ್ರತಿವಕ್ತಿ ಚ । ಇದಾನೀಂ ತಸ್ಯಾದರ್ಶನಾನ್ಮೃತ ಇತಿ ಶೋಚಾಮ ಇತಿ ಚೇತ್ ಸ ತು ಶೋಚ್ಯೋ ನ ಭವತಿ ಪ್ರಾಗಪಿ ತಸ್ಯಾದರ್ಶನಾದಿತ್ಯಾಹ। ನ ಶ್ರೋತೇತಿ। ಮಹಾನ್ ಸರ್ವೇಂದ್ರಿಯಚೇಷ್ಟಾಹೇತುಃ। ಅತ ಏವ ಮುಖ್ಯಃ । ಪ್ರಾಣೋ ವೈ ಮುಖ್ಯ ಇತಿ ಶ್ರುತೇಃ। ಕಸ್ತರ್ಹಿ ಶ್ರೋತಾ ವಕ್ತಾ ಚ ತತ್ರಾಹ। ಯಸ್ತ್ವಿಹ ದೇಹೇಂದ್ರಿಯೈಸ್ತತ್ತದರ್ಥದ್ರಷ್ಟಾ ಆತ್ಮಾ ಸ ತು ಪ್ರಾಣದೇಹಾಭ್ಯಾಮಚೇತನಾಭ್ಯಾಂ ಅನ್ಯ ಏವ ಸ ಚೇತನಃ। ನನು ಚೇತನತ್ವೇಽನ್ಯತ್ವೇ ಚ ತಸ್ಯಾಹಂ ಕೃಶಃ ಸ್ಥೂಲಃ ಕಾಣೋ ಬಧಿರ ಇತ್ಯಾದಿ ದೇಹಧರ್ಮೋಪಲಬ್ಧಿಃ ಕುತಸ್ತತ್ರಾಹ। ಭೂತೇಂದ್ರಿಯ ಮನೋಭಿರ್ಲಿಂಗ್ಯಂತೇ ಲಕ್ಷ್ಯಂತ ಇತಿ ತಥಾ ತಾನ್ ದೇಹಾಂಸ್ತೇಭ್ಯೋಽನ್ಯ ಏವ ಭಜತ್ಯಹಮಿತಿ ಮನ್ಯತೇ। ತರ್ಹಿ ಕಥಂ ಮೋಕ್ಷಸ್ತತ್ರಾಹ। ತಚ್ಚ ಭಜನಂ ಸ್ವೇನ ತೇಜಸಾ ವಿವೇಕಬಲೇನೋತ್ಸೃಜತ್ಯಪಿ ಹೀತ್ಯನುಭವಂ ಪ್ರಮಾಣಯತಿ। -ಶ್ರೀಧರಃ ।

ವಿರುದ್ಧವಾಗುವುದು. ಸರ್ವೇಂದ್ರಿಯ ಪ್ರೇರಕನಾದರೂ ಅವನು ಹರಿಯ ಅಧೀನನಾದ್ದರಿಂದ ಸ್ವತಂತ್ರವಾಗಿ ಕೇಳುವವನೂ ನುಡಿಯುವವನೂ ಅಲ್ಲ ಎನ್ನಬೇಕು. ಜೀವ ಪ್ರಾಣನಿಗಿಂತ ದೇಹಕ್ಕಿಂತ ಮಾತ್ರವಲ್ಲ ಸ್ವತಂತ್ರನಾದ ಪರಮಾತ್ಮನಿಗಿಂತಲೂ ಬೇರೆ ಎಂದು ಭಾಗವತದ ಅಭಿಪ್ರಾಯ. ಇದು ಗರುಡಪುರಾಣದಲ್ಲಿ ಉಕ್ತವಾಗಿದೆ.

'ಅನ್ಯಃ ವಿಭುಃ ಸ್ವೇನ ತೇಜಸಾ ದೇಹಾನ್ ಭಜತಿ ಉತ್ಸೃಜತಿ' ಎಂದು ಸ್ವತೇಜಃ ಶಬ್ದದಿಂದ ಜೀವಾನ್ಯ ಪರಮಾತ್ಮನ ಸ್ವಾತಂತ್ರ್ಯವನ್ನು ಸ್ಪಷ್ಟ ಹೇಳುತ್ತಿರುವಾಗ ಜೀವಪರವಾಗಿ ಶ್ಲೋಕವನ್ನು ಕಷ್ಟದಿಂದ ವ್ಯಾಖ್ಯಾನಿಸುವುದು ಉಚಿತವಲ್ಲ. ಜೀವ ನಾನಾ ಯೋನಿಗಳಲ್ಲಿ ಅಸಹಾಯಕನಾಗಿ ಸುತ್ತುವವನು. ಸ್ವತಂತ್ರವಾಗಿ ದೇಹಗಳನ್ನು ಹೊಂದುವುದಿಲ್ಲ, ಪರಮಾತ್ಮನೇ ಸ್ವತಂತ್ರನಾಗಿ ಜೀವನೊಂದಿಗೆ ಶರೀರಗಳನ್ನು ಪ್ರವೇಶಿಸುತ್ತಾನೆ, ಹೊರಗೆ ಬರುತ್ತಾನೆ, ಇವೇ ಜೀವನಿಗೆ ಜನನ ಮರಣಗಳು.

ಹೀಗೆ ಜೀವನು ಶರೀರದಲ್ಲಿ ಸ್ವತಂತ್ರವಾಗಿ ಇಲ್ಲದಿರುವುದರಿಂದ ಇದ್ದೂ ಇಲ್ಲದಂತೆ. ಅಂಥವನಿಗಾಗಿ ಏಕೆ ಶೋಕ ಪಡಬೇಕು? ಪರಮಾತ್ಮನ ಸ್ವಾತಂತ್ರ್ಯವನ್ನೇ ನೆನೆಯುತ್ತ ಶೋಕವನ್ನು ಮರೆಯಬೇಕು ಎನ್ನುವುದು ಶ್ಲೋಕದ ಅಭಿಪ್ರಾಯ. ಪ್ರಪಂಚ ಮಿಥ್ಯಾತ್ವ ವಿವಕ್ಷೆ ಇಲ್ಲಿ ಇಲ್ಲ.

ಇಲ್ಲಿ 'ಶ್ರೋತಾ' ಮುಂತಾದ ಶಬ್ದಗಳಲ್ಲಿ 'ಸ್ವತಂತ್ರವಾಗಿ ಕೇಳುವವನು' ಎಂದು ಮುಂತಾಗಿ ಅರ್ಥವನ್ನು ಗ್ರಹಿಸುವುದುಕ್ಕೆ ಶ್ರುತಿ ಗರುಡಪುರಾಣ ವಚನಗಳ ಆಧಾರವಿದೆ.

'ಇಂದ್ರಿಯವಾನ್' ಎಂದರೆ ಸ್ವತಂತ್ರವಾಗಿ ಇಂದ್ರಿಯ ಉಳ್ಳವನೆಂದರ್ಥವಲ್ಲ. ಇಂದ್ರಿಯಾಭಿಮಾನಉಳ್ಳ ಜೀವನೆಂದರ್ಥ. ಇದು ಪ್ರಕಾಶಸಂಹಿತೆಯಲ್ಲಿ ಉಕ್ತವಾಗಿದೆ.

'ಲಿಂಗಾನ್ವಿತೋ ಹ್ಯಾತ್ಮಾ' ಎಂದರೆ ಹಿಂದಿನ ಶ್ಲೋಕದಲ್ಲಿ ಹೇಳಿದಂತೆ 'ಜೀವರ ಶರೀರವನ್ನು ಅದರ ರಕ್ಷಣೆಗಾಗಿ ಪ್ರವೇಶಿಸಿರುವ ಪರಮಾತ್ಮ' ಎಂದೇ ಗರುಡಪುರಾಣ ವ್ಯಾಖ್ಯಾನಿಸಿದೆ. ಜೀವ ಎಂದು ವ್ಯಾಖ್ಯಾನಿಸಿದರೆ ಪೂರ್ವಶ್ಲೋಕ ವಿರೋಧ, ಗರುಡಪುರಾಣ ವಿರೋಧ.

ಶ್ರೀಮದಾಚಾರ್ಯರು ಭಾಗವತದ ಐದೂ ಶ್ಲೋಕಗಳನ್ನು ಸುಂದರವಾಗಿ ಪರಮಾತ್ಮ ಪರವಾಗಿ ಹೀಗೆ ವ್ಯಾಖ್ಯಾನಿಸುತ್ತಾರೆ-

ಇಂದ್ರಿಯವಾನ್ ಜೀವಃ ।

ಭಜತ್ಯುತ್‌ಸೃಜತಿ ಹ್ಯನ್ಯಃ ಪರಮಾತ್ಮಾ ।

ಸ ಏವ ಶ್ರೋತಾಽನುವಕ್ತಾ ಚ ।
ನಾನ್ಯೋಽತೋಽಸ್ತಿ ದ್ರಷ್ಟಾ ನಾನ್ಯೋಽತೋಽಸ್ತಿ ಶ್ರೋತಾ
ಸ ಯೋಽತೋಽಶ್ರುತ ಇತ್ಯಾದೇಃ ॥
ಮುಖ್ಯಪ್ರಾಣೋಽಪಿ ಸ್ವತೋ ನ ಶ್ರೋತಾ ಕಿಮು ಜೀವ ಇತಿ ॥
'ಅಯಂ ನನು ಸುಯಜ್ಞಃ?' ಇತ್ಯಾಕ್ಷೇಪಃ।
ಯಶ್ಚ ಸುಯಜ್ಞಃ ಸೋಽಪಿ ಸ್ವತಃ ಶ್ರೋತುಂ ವಕ್ತುಂ ನ ಚ ಶಕ್ತಃ ।
ಅತಸ್ತಸ್ಯಾನುಶೋಕೇನ ಕಿಮಿತ್ಯರ್ಥಃ ॥

'ಇಂದ್ರಿಯವಾನ್‌ಆತ್ಮಾ' ಎಂದರೆ ಇಂದ್ರಿಯಾಭಿಮಾನಉಳ್ಳ ಜೀವ ಎಂದರ್ಥ.

'ವಿಭುಃ ಭಜತ್ಯುತ್ಸೃಜತಿ ಹ್ಯನ್ಯಃ' ಎಂದರೆ ಜೀವಾನ್ಯನಾದ ಪರಮಾತ್ಮ ಜೀವಶರೀರವನ್ನು ಸ್ವತಂತ್ರವಾಗಿ ಪ್ರವೇಶಿಸುತ್ತಾನೆ ಬಿಡುತ್ತಾನೆ ಎಂದರ್ಥ.

ಮುಖ್ಯಪ್ರಾಣ ಸ್ವತಂತ್ರವಾಗಿ ಶ್ರೋತೃ ಅನುವಕ್ತೃ ಅಲ್ಲ ಎಂದು ಹೇಳಿ, ಜೀವಶರೀರವನ್ನು ಸ್ವತಂತ್ರವಾಗಿ ಪ್ರವೇಶಿಸಿರುವವನು ಪರಮಾತ್ಮ ಎಂದು ಹೇಳಿದುದು 'ಆ ಪರಮಾತ್ಮನೇ ಸ್ವತಂತ್ರವಾಗಿ ಶ್ರೋತೃವೂ ಅನುವಕ್ತೃವೂ ಆಗಿದ್ದಾನೆ' ಎಂದು ಹೇಳುವ ಅಭಿಪ್ರಾಯದಿಂದ.

'ಉತ್ಸೃಜತಿ ಹ್ಯನ್ಯಃ' ಎಂಬಲ್ಲಿ ಹಿಶಬ್ದದಿಂದ ಸೂಚಿತವಾದ ಶ್ರುತಿ 'ಪರಮಾತ್ಮನಿಗಿಂತ ಬೇರೆ ಸ್ವತಂತ್ರವಾಗಿ ದ್ರಷ್ಟೃ ಇಲ್ಲ, ಸ್ವತಂತ್ರವಾಗಿ ಶ್ರೋತೃ ಇಲ್ಲ ಅವನು ವ್ಯಾಪ್ತ, ಅವನ ಬಗ್ಗೆ ಪೂರ್ತಿಯಾಗಿ ಯಾರೂ ಕೇಳಿ ತಿಳಿಯಲಾರ' ಎನ್ನುತ್ತದೆ.

'ಮುಖ್ಯಪ್ರಾಣ ಸ್ವತಂತ್ರವಾಗಿ ಶ್ರೋತೃ ಅಲ್ಲ' ಎಂದು ಹೇಳುವುದು 'ಜೀವೋತ್ತಮ ಮುಖ್ಯಪ್ರಾಣನೇ ಸ್ವತಂತ್ರ ಶ್ರೋತೃ ಅಲ್ಲವೆಂದಮೇಲೆ ಸುಯಜ್ಞನಂಥ ಬೇರೆ ಜೀವರ ಬಗ್ಗೆ ಏನು ಹೇಳಬೇಕು ಎಂದು ಕೈಮುತ್ಯನ್ಯಾಯವನ್ನು ಹೇಳುವ ಅಭಿಪ್ರಾಯದ್ದು.

'ಸುಯಜ್ಞೋ ನನ್ವಯಂ ಶೇತೇ' ಎಂಬಲ್ಲಿ ನನು ಎಂದು ಆಕ್ಷೇಪಾರ್ಥದಲ್ಲಿ ಇಟ್ಟುಕೊಳ್ಳಬೇಕು. ಅವ್ಯಯಗಳಿಗೆ ಅನೇಕಾರ್ಥಗಳಿರುವುದರಿಂದ ಇದು ಯುಕ್ತ. 'ಈ ಶರೀರ ಸುಯಜ್ಞನೆ? ಅಲ್ಲ' ಎಂದು ಆಕ್ಷೇಪ.

ಈ ಶರೀರವಂತೂ ಸುಯಜ್ಞನಲ್ಲ. ಇನ್ನು ಸುಯಜ್ಞನೆಂಬ ಆತ್ಮ ಯಾರಿರುವನೋ ಅವನೂ ಕೂಡ ಸ್ವತಃ ಕೇಳಲು ನುಡಿಯಲು ಶಕ್ತನಲ್ಲ.

ಆದರಿಂದ ಅವನ ಬಗ್ಗೆ ಶೋಕಪಡುವುದರಿಂದೇನು? ಎಂದರ್ಥ.

ಅನ್ಯೋ ಜೀವೋಽಚಿತೋ ದೇಹಾತ್ ತದ್ವಶೋ ದೇಹ ಉಚ್ಯತೇ ।
ಪಶ್ಯಾಮೀತ್ಯಭಿಮಾನೋಽಸ್ಯ ಚಕ್ಷುರಾದ್ಯಭಿಮಾನವಾನ್ ।
ನ ತದ್ವಶಾಶ್ಚಕ್ಷುರಾದ್ಯಾ ನ ದೃಷ್ಟ್ಯಾದೌ ಸ ಈಶ್ವರಃ ।
ಚಕ್ಷುರಾದ್ಯಾ ಮನೋ ಜೀವೋ ದೃಷ್ಟ್ಯಾದಿಶ್ಚಾಪಿ ಯದ್ವಶೇ ।
ಸ ಪ್ರಾಣ ಇತಿ ವಿಜ್ಞೇಯೋ ಜ್ಞಾತಾ ಮಂತಾ ಚ ಸ ಪ್ರಭುಃ ।
ತಸ್ಯಾಪಿ ಜ್ಞಾತೃಮಂತೃತ್ವಂ ನ ಸ್ವತಃ ಶಕ್ಯತೇ ಕ್ವಚಿತ್ ।
ಯಸ್ತಸ್ಯ ಜ್ಞಾತೃಮಂತೃತ್ವದಾತಾ ಸ ಭಗವಾನ್ ಹರಿಃ ।
ಸ್ವತೋ ಜ್ಞಾತಾ ಚ ಮಂತಾ ಚ ದ್ರಷ್ಟಾ ಶ್ರೋತಾ ಚ ಕೇಶವಃ ।
ಜ್ಞಾನಾದಿದೋ ನ ತಸ್ಯಾನ್ಯಃ ಸರ್ವಸ್ಯ ಜ್ಞಾನದೋ ಹರಿಃ ।
ಸ ದೇಹಾನ್ ಭಜತೇ ವಿಷ್ಣುಃ ಸ್ವೇಚ್ಛಯೈವೋತ್ಸೃಜತ್ಯಪಿ ।
ಯಾವದ್ದೇಹಸ್ಥಿತೋ ವಿಷ್ಣುಸ್ತಾವಜ್ಜೀವೋ ವಿಪರ್ಯಯಃ ।
ತಾವತ್ಕ್ಲೇಶಾದಯಶ್ಚಾಸ್ಯ ವೃಥಾ ಚೇಂದ್ರಿಯ ವೃತ್ತಯಃ ।
ಯದೋತ್ಸೃಜತಿ ದೇಹಂ ಸ ಹರಿಃ ಸರ್ವಾತ್ಮನಾ ವಿಭುಃ ।
ತದಾ ತದಭಿಮಾನೀ ತು ಜೀವೋ ಮುಚ್ಯೇತ ಸಂಸೃತೇಃ ॥
ಅತಿಭಿನ್ನಸ್ವರೂಪೌ ತೌ ಜೀವೇಶಾವೇಕದೇಹಗೌ ।
ದೇಹಾಭಿಮಾನೀ ತ್ವೇಕೋಽತ್ರ ನ ಮಾನೀ ಮಾನದಃ ಪರಃ ॥

ಇತಿ ಗಾರುಡೇ॥

ಅಚೇತನವಾದ ದೇಹಕ್ಕಿಂತ ಚೇತನನಾದ ಜೀವ ಬೇರೆ. (ಸುಯಜ್ಞೋ ನನ್ವಯಂ ಶೇತೆ? ಎಂಬ ಆಕ್ಷೇಪದಿಂದ ಇದು ಲಭ್ಯವಾಗುತ್ತದೆ.) ಜೀವವಶವಾಗಿಯೇ ದೇಹ ಚಟುವಟಿಕೆಗಳನ್ನು ತೋರುತ್ತದೆ. (ಜೀವವಿಲ್ಲದಿದ್ದರೆ 'ಶೇತೇ' ಸುಮ್ಮನೆ ಬಿದ್ದಿರುತ್ತದೆ) ಜೀವನಾದರೂ ಚಕ್ಷುರಾದಿ ಇಂದ್ರಿಯಗಳಲ್ಲಿ ನನ್ನವೆಂಬ ಅಭಿಮಾನ ಮಾಡುತ್ತಾನೆ, ನೋಡುತ್ತಿದ್ದೇನೆ ಎಂದು ಮುಂತಾಗಿಯೂ ಅಭಿಮಾನ ಮಾಡುತ್ತಾನೆ. (ಸ್ವತಃ ಶ್ರೋತಾ ವಕ್ತಾ ಅಲ್ಲ) ಏಕೆಂದರೆ ಚಕ್ಷುರಾದಿಗಳು ಅವನ ವಶದಲ್ಲಿಲ್ಲ. ದರ್ಶನಾದಿಗಳಲ್ಲಿ ಅವನು ಸ್ವತಂತ್ರನಲ್ಲ. (ಇದು 'ಯಃ ದೃಶ್ಯೇತ ಸ ನ ಶ್ರೋತಾ, ನಾನುವಕ್ತಾ' ಎಂಬುದರ ವ್ಯಾಖ್ಯಾನ.)

ಚಕ್ಷುರಾದಿ ಇಂದ್ರಿಯಗಳೂ ಮನಸ್ಸೂ ಜೀವನೂ ಅವನ ದರ್ಶನಾದಿ ಕ್ರಿಯೆಗಳೂ ಯಾರ ವಶದಲ್ಲಿವೆಯೋ ಅವನು ಮುಖ್ಯಪ್ರಾಣನೆಂದು ತಿಳಿಯಬೇಕು. ಅವನೆ ದರ್ಶನ ಮನನಗಳನ್ನು ಮಾಡುವವನು ಹೊರತು ಜೀವ ಸ್ವತಃ ಅವುಗಳನ್ನು ಮಾಡಲಾರ. ಆದರೂ ಮುಖ್ಯಪ್ರಾಣನೂ ಕೂಡ ದರ್ಶನ ಮನನಗಳನ್ನು ಸ್ವತಃ ಮಾಡಲು ಶಕ್ತನಾಗುವುದಿಲ್ಲ, ಹರಿಗೆ ಅಧೀನನಾಗಿರುವುದರಿಂದ (ಇದು ಎರಡನೇ ಶ್ಲೋಕದ ಪೂರ್ವಾರ್ಧಕ್ಕೆ ವ್ಯಾಖ್ಯಾನ.) ಮುಖ್ಯಪ್ರಾಣನಿಗೂ ದರ್ಶನ ಮನನ ಪ್ರೇರಕನು ಭಗವಾನ್ ಶ್ರೀಹರಿ. ಅವನೇ ಸ್ವತಂತ್ರವಾಗಿ ಜ್ಞಾತೃ ಮಂತೃ ದ್ರಷ್ಟೃ ಶ್ರೋತೃ ಎಲ್ಲವೂ ಆಗಿದ್ದಾನೆ. (ಈ ಅಭಿಪ್ರಾಯದಿಂದಲೇ 'ನ ಶ್ರೋತಾ ನಾನುವಕ್ತಾಯಂ ಮುಖ್ಯೋಽಪ್ಯತ್ರ ಮಹಾನಸುಃ' ಎನ್ನಲಾಗಿದೆ.)

ಶ್ರೀಹರಿಗೆ ಜ್ಞಾನಾದಿ ಪ್ರೇರಕನು ಇನ್ನೊಬ್ಬನಿಲ್ಲ. ಅವನೇ ಎಲ್ಲರಿಗೆ ಜ್ಞಾನಾದಿ ಪ್ರೇರಕ. (ಇದು ಮೂರನೇ ಶ್ಲೋಕದಲ್ಲಿ ಸ್ವೇನ ತೇಜಸಾ ಎಂದು ಹೇಳಿದುದರ ಅಭಿಪ್ರಾಯ.) ಅವನು ಸ್ವೇಚ್ಛೆಯಿಂದಲೇ ಜೀವರ ಶರೀರಗಳನ್ನು ಪ್ರವೇಶಿಸುತ್ತಾನೆ, ಸ್ವೇಚ್ಛೆಯಿಂದಲೇ ಬಿಡುತ್ತಾನೆ. (ಇದು ಮೂರನೇ ಶ್ಲೋಕಕ್ಕೆ ವ್ಯಾಖ್ಯಾನ)

ಅವನು ಜೀವರ ಶರೀರಗಳಲ್ಲಿ ಅವುಗಳನ್ನು ಕಾಪಾಡುತ್ತಿರುವವರೆಗೆ ಜೀವರು ತಮ್ಮ ಸ್ವರೂಪಕ್ಕೆ ವಿರುದ್ಧವಾದ ಸ್ವಭಾವವನ್ನು ತೋರುತ್ತಾರೆ. ಕ್ಲೇಶ ಅಜ್ಞಾನಾದಿಗಳನ್ನು ಹೊಂದುತ್ತಾರೆ. (ಇದು ನಾಲ್ಕನೆ ಶ್ಲೋಕದ ಭಾವ.)

ಇಂದ್ರಿಯಗಳು ವಿಷಯಭೋಗದಲ್ಲಿ ಪ್ರವೃತ್ತಿ ಮಾಡುವುದು ವ್ಯರ್ಥ. ಅದರಿಂದ ಶಾಶ್ವತಸುಖವಿಲ್ಲ (ಇದು ಐದನೇ ಶ್ಲೋಕದ ತಾತ್ಪರ್ಯ)

ಯಾವಾಗ ಹರಿ ಜೀವರ ಶರೀರಗಳನ್ನು ಸರ್ವಾತ್ಮನಾ ಬಿಡುವನೋ ಆಗಲೇ ಶರೀರಾಭಿಮಾನಿಗಳಾದ ಜೀವರು ಸಂಸಾರದಿಂದ ಮುಕ್ತರಾಗುತ್ತಾರೆ. (ಇದು ನಾಲ್ಕನೇ ಶ್ಲೋಕದಲ್ಲಿ ಹೇಳಿದ್ದರ ಫಲಿತಾರ್ಥ)

ಒಂದೇ ದೇಹದೊಳಗೆ ಇದ್ದರೂ ಜೀವೇಶ್ವರರು ಪರಸ್ಪರ ಅತ್ಯಂತ ವಿಲಕ್ಷಣ ಸ್ವರೂಪರು. ಏಕೆಂದರೆ ಜೀವ ದೇಹಾಭಿಮಾನಿ. ಈಶ್ವರ ತಾನು ದೇಹಾಭಿಮಾನಿಯಲ್ಲ, ಜೀವನಿಗೆ ದೇಹಾಭಿಮಾನ ನೀಡುವವನು. (ಇದು ಈ ಎಲ್ಲ ಶ್ಲೋಕಗಳ ಒಟ್ಟು ತಾತ್ಪರ್ಯ. ಎರಡನೇ ಶ್ಲೋಕದ

ಉತ್ತರಾರ್ಧಕ್ಕೆ ವ್ಯಾಖ್ಯಾನರೂಪವಾಗಿದೆ.) ಹೀಗೆ ಗರುಡಪುರಾಣದಲ್ಲಿ ಭಾಗವತ ಶ್ಲೋಕಗಳಿಗೆ ವ್ಯಾಖ್ಯಾನ ಮಾಡಲಾಗಿದೆ.

ಇಂದ್ರಿಯಾದ್ಯಭಿಮಾನೇನ ತದ್ವಾನ್ ಜೀವ ಉದೀರ್ಯತೇ ।
ಅತನ್ಮಾನಾದ್ಧರಿಃ ಪ್ರೋಕ್ತಸ್ತ್ವದೇಹೋಽನಿಂದ್ರಿಯಸ್ತಥಾ ।
ಜೀವಾನಭಿಮತೇ ದೇಹೇ ನ ವಿಷ್ಣುರ್ಜೀವತಿ ಸ್ಥಿತಃ ।
ಅತಶ್ಚಾದೇಹ ಉದ್ದಿಷ್ಟಃ ಪರಮಾತ್ಮಾ ಸನಾತನಃ ॥

ಇತಿ ಪ್ರಕಾಶಸಂಹಿತಾಯಾಂ ॥

ಇಂದ್ರಿಯಾದಿಗಳಲ್ಲಿ ಅಭಿಮಾನವಿರುವುದರಿಂದ ಜೀವನು ಇಂದ್ರಿಯ ಉಳ್ಳವನು ಶರೀರ ಉಳ್ಳವನು ಎಂದು ಮುಂತಾಗಿ ವ್ಯವಹಾರ. (ಅದರಿಂದ 'ಯಸ್ತ್ವಿಹೇಂದ್ರಿಯವಾನಾತ್ಮಾ' ಎಂದು ಜೀವಾತ್ಮ ಉಕ್ತನಾಗಿದ್ದಾನೆ.) ಇಂದ್ರಿಯಾದಿ ಗಳಲ್ಲಿ ಅಭಿಮಾನವಿಲ್ಲದಿರುವುದರಿಂದ ಪರಮಾತ್ಮ ಶರೀರವಿಲ್ಲದವ ಇಂದ್ರಿಯ ವಿಲ್ಲದವನೆಂದು ಶ್ರುತಿಗಳಲ್ಲಿ ಉಕ್ತನಾಗುತ್ತಾನೆ. (ಅದರಿಂದ ಶ್ರುತಿವಿರೋಧವಿಲ್ಲ) ಜೀವನಿಲ್ಲದ ಜೀವಂತ ಶರೀರದಲ್ಲಿ ಹರಿ ಇರುವುದಿಲ್ಲ. ಹರಿ ತಾನೊಬ್ಬನೆ ಅದರಲ್ಲಿದ್ದು ಜೀವಂತವಾಗಿರಿಸುವುದಿಲ್ಲ. ಹೀಗೆ ಸ್ವರೂಪಶರೀರ ಹೊರತಾಗಿ ಬೇರೆ ಶರೀರವಿಲ್ಲದಿರುವುದರಿಂದಲೂ ಹರಿ ಶ್ರುತಿಗಳಲ್ಲಿ ಅಶರೀರನೆನಿಸಿದ್ದಾನೆ ಎಂದು ಪ್ರಕಾಶಸಂಹಿತೆಯಲ್ಲಿ ಹೇಳಿದೆ.

ಸ ಚಾನ್ಯಃ । ಶ್ರೋತುರ್ವಕ್ತುಶ್ಚೇತಿ ಚಶಬ್ದಃ ।
ಲಿಂಗಾನ್ ಭೂತೇಂದ್ರಿಯಮನೋರೂಪಾನ್ ।
ಲಿಂಗಂ ಸ್ವರೂಪಮುದ್ದಿಷ್ಟಂ ಲಿಂಗಂ ಜ್ಞಾಪಕಮೇವ ಚ ।

ಇತಿ ಶಬ್ದನಿರ್ಣಯೇ ।

ಆತ್ಮಾ ಪರಮಾತ್ಮಾ ।
ಕರ್ಮನಿಬಂಧನೋ ಜೀವಃ ।
ತತಃ ಪರಮಾತ್ಮನೋ ವಿಪರೀತಃ ।
ಮೃಷಾ ವೃಥಾ । ಸ್ವಪ್ನದೃಷ್ಟವಿತ್ತಾದಿವತ್ ।
ಲೇಪಾಭಿಮಾನೀ ಜೀವಸ್ತು ಸ್ವರೂಪಾನುಭವೀ ನಚ ।
ಮುಕ್ತೇಃ ಪ್ರಾಕ್ ತೇನ ಮಾನ್ಯುಕ್ತೋ ನ ಮಾನೀ ವಿಷ್ಣುರುಚ್ಯತೇ ।

ಸರ್ವಂ ಮಮೇತಿ ಪಶ್ಯನ್ನಪ್ಯಲೇಪಾಭಿಮತಿರ್ಯತಃ।
ಸಮ್ಯಕ್ ಸ್ವರೂಪಾನುಭವಾತ್ ಸ್ವತಂತ್ರತ್ವಾದದೋಷತಃ॥

ಇತಿ ಬ್ರಹ್ಮತರ್ಕೇ ॥

'ಸ ಚಾನ್ಯಃ ಪ್ರಾಣದೇಹಯೋಃ' ಎಂಬಲ್ಲಿ ಚಶಬ್ದ ವ್ಯರ್ಥವಲ್ಲ. ಜೀವನು ಪ್ರಾಣ ಮತ್ತು ದೇಹಗಳಿಂದ ಮಾತ್ರ ಭಿನ್ನನೆಂದಲ್ಲ, ಸ್ವತಂತ್ರವಾಗಿ ಶ್ರೋತೃವೂ ವಕ್ತೃವೂ ಆದ ಪರಮಾತ್ಮನಿಂದಲೂ ಭಿನ್ನ ಎಂದರ್ಥ. ಇದಕ್ಕಾಗಿ ಚ ಶಬ್ದವಿದೆ.

'ಭೂತೇಂದ್ರಿಯಮನೋಲಿಂಗಾನ್ ದೇಹಾನ್' ಎಂಬಲ್ಲಿ 'ಲಿಂಗ' ಶಬ್ದಕ್ಕೆ 'ಜ್ಞಾಪ್ಯ' ಎಂದರ್ಥವಲ್ಲ. (ಬೇರೆ ವ್ಯಾಖ್ಯಾನಕಾರರು-'ಭೂತೇಂದ್ರಿಯ ಮನೋಭಿರ್ಲಿಂಗ್ಯಂತೇ ಲಕ್ಷ್ಯಂತ ಇತಿ ತಥಾ ತಾನ್‌ದೇಹಾನ್' 'ಪಂಚ ಭೂತಗಳು ದಶೇಂದ್ರಿಯಗಳು ಮತ್ತು ಮನಸ್ಸು ಇವುಗಳಿಂದ ಜ್ಞಾಪ್ಯವಾಗುವಂಥ ದೇಹಗಳನ್ನು' ಎಂದು ವ್ಯಾಖ್ಯಾನಿಸಿದ್ದಾರೆ. ವಸ್ತುತಃ ಪಂಚಭೂತದಶೇಂದ್ರಿಯ ಮನಸ್ಸುಗಳೆಂದು ಹದಿನಾರು ಕಲೆಗಳು ಸೇರಿ ಒಂದು ಶರೀರವಾಗುತ್ತವೆ ಹೊರತು ಅವುಗಳಿಂದ ಜ್ಞಾಪ್ಯವಾಗಬಲ್ಲ ಬೇರೆ ಶರೀರವೆಂಬುದಿಲ್ಲ. ಆದರಿಂದ ಅವುಗಳಿಂದಾದ ಅವುಗಳ ಸ್ವರೂಪವೇ ಆದ ಶರೀರ ಎನ್ನಬೇಕು.) ಭೂತ ಇಂದ್ರಿಯ ಮನೋರೂಪವಾದ ಶರೀರಗಳನ್ನು ಎಂದರ್ಥ. ಲಿಂಗ ಶಬ್ದಕ್ಕೆ ಸ್ವರೂಪ ಎಂಬ ಅರ್ಥ ಕೋಶದಲ್ಲಿ ಇದೆ.

'ಲಿಂಗವೆಂದರೆ ಕೆಲವೆಡೆ ಸ್ವರೂಪವೆಂದು ಅರ್ಥವಿರುತ್ತದೆ. ಹೆಚ್ಚಾಗಿ ಜ್ಞಾಪಕ ಎಂಬ ಅರ್ಥವಿರುತ್ತದೆ' ಎಂದು ಶಬ್ದನಿರ್ಣಯದಲ್ಲಿ ಹೇಳಿದೆ.
'ಯಾವಲ್ಲಿಂಗಾನ್ವಿತೋ ಹ್ಯಾತ್ಮಾ' ಎಂಬಲ್ಲಿ ಆತ್ಮನೆಂದರೆ ಪರಮಾತ್ಮ.

'ತಾವತ್‌ಕರ್ಮನಿಬಂಧನಃ' ಎಂಬಲ್ಲಿ ಕರ್ಮಗಳಿಂದ ಬಿಗಿಯಾದ ಬಂಧನವನ್ನು ಹೊಂದಿರುವವನು ಜೀವ ಎಂದರ್ಥ. (ಬೇರೆ ವ್ಯಾಖ್ಯಾನ ಕಾರರು 'ತಾವತ್ ಕರ್ಮ ನಿಬಂಧನಂ' ಎಂದು ಪಾಠವಿಟ್ಟುಕೊಂಡು 'ಕರ್ಮವು ಬಿಗಿಯಾಗಿ ಬಂಧಿಸುತ್ತದೆ' ಎಂದು ವ್ಯಾಖ್ಯಾನಿಸಿದ್ದಾರೆ.)

('ತತೋ ವಿಪರ್ಯಯಃ' ಎಂಬಲ್ಲಿ 'ತಾವತ್ ಕರ್ಮ ನಿಬಂಧನಂ' ಎಂದು ಪಾಠವಿಟ್ಟುಕೊಳ್ಳುವ ಪಕ್ಷದಲ್ಲಿ ತತಃ-ಕರ್ಮವು ಬಂಧಕ ವಾಗಿರುವುದರಿಂದ, ವಿಪರ್ಯಯಃ-ಸ್ವರೂಪಕ್ಕಿಂತ ವಿರುದ್ಧವಾದ

ಸ್ವಭಾವ ಜೀವನಲ್ಲಿ ಕಾಣುತ್ತದೆ ಎಂದು ವ್ಯಾಖ್ಯಾನ ಮಾಡಿದ್ದಾರೆ, ಬೇರೆ ವ್ಯಾಖ್ಯಾನಕಾರರು. ಆದರೆ 'ಕರ್ಮನಿಬಂಧನಃ' ಎಂಬ ಪಾಠದಲ್ಲಿ 'ಕರ್ಮನಿಬಂಧನಃ' - ಕರ್ಮಬದ್ಧನಾದ ಜೀವನು 'ತತಃ ವಿಪರ್ಯಯಃ' ಎಂದು ಅನ್ವಯ ಕೂಡುವುದಿಲ್ಲ ಎಂಬ ಅನುಪಪತ್ತಿ ಬರುತ್ತದೆ. ಅದಕ್ಕೆ ಹೇಳುತ್ತಾರೆ-) ತತಃ-ಆ ಪರಮಾತ್ಮನ ಪ್ರೇರಣೆಯಿಂದ ಜೀವನು, 'ವಿಪರ್ಯಯಃ' ಎಂದರೆ ವಿಪರ್ಯಯ ಉಳ್ಳವನು, ವಿಪರೀತ, ವಿರುದ್ಧ ಸ್ವಭಾವ ಉಳ್ಳವನಾಗುತ್ತಾನೆ ಎಂದರ್ಥ. ('ವಿಪರ್ಯೇತೀತಿ ವಿಪರ್ಯಯಃ' ಎಂದು ವಿವರಣೆ ನೀಡಬೇಕು.)

'ಸರ್ವಮೈಂದ್ರಿಯಕಂ ಮೃಷಾ' ಎಂಬಲ್ಲಿ ಇಂದ್ರಿಯಗಳು ವಿಷಯಭೋಗದಲ್ಲಿ ಪ್ರವೃತ್ತಿ ಮಾಡುವುದು ಮೃಷಾ ಎಂದರೆ ಮಿಥ್ಯಾ ಎಂದರ್ಥವಲ್ಲ. ವ್ಯರ್ಥ ಎಂದರ್ಥ. ಸ್ವಪ್ನದಲ್ಲಿ ಕಂಡ ಹಣದಂತೆ ವ್ಯರ್ಥ. ಆ ಹಣದಿಂದ ಅರಮನೆಯನ್ನು ಕೊಂಡುಕೊಳ್ಳಲಾಗದು.

(ಜೀವನ ಶರೀರದಲ್ಲಿ ಈಶ್ವರನಿದ್ದರೂ ಅದರಲ್ಲಿ ಅವನಿಗೆ ತನ್ನದೆಂದು ಅಭಿಮಾನ ವಿಲ್ಲದ್ದರಿಂದ ಅವನು ಅಶರೀರ ಎಂದು 'ಅತನ್ಮಾನಾದ್ಧರಿಃ ಪ್ರೋಕ್ತಃ' ಎಂಬ ಪ್ರಕಾಶಸಂಹಿತಾವಚನ ಹೇಳುವುದು ಹೇಗೆ ಕೂಡುತ್ತದೆ, ಸರ್ವೇಶ್ವರನಾದ ಈಶ್ವರನಿಗೆ ಜೀವಶರೀರದಲ್ಲಿಯೂ ನನ್ನದೆಂಬ ಅಭಿಮಾನವಿರುತ್ತದೆ ತಾನೆ? ಎಂಬ ಪ್ರಶ್ನೆಗೆ ಬ್ರಹ್ಮತರ್ಕದಲ್ಲಿ ಹೀಗೆ ಪರಿಹಾರವಿದೆ-) ಇನ್ನೊಬ್ಬರ ಸ್ವತ್ತನ್ನು ತನ್ನದೆಂದು ತಿಳಿಯುವುದು ಪಾಪಲೇಪಕರವಾದ ಅಭಿಮಾನ. ಇಂಥ ಪಾಪಲೇಪಕರವಾದ ಅಭಿಮಾನಉಳ್ಳವನು ಜೀವ. ಅದರಿಂದ ಮುಕ್ತಿ ಹೊಂದುವುದಕ್ಕೆ ಮುಂಚೆ ಅವನಿಗೆ ಸ್ವಸ್ವರೂಪದ ಅನುಭವ ಪೂರ್ತಿ ದೊರಕುವುದಿಲ್ಲ. ಹೀಗಾಗಿ ಅವನು ಶರೀರಾಭಿಮಾನಿ, ಶರೀರಿ ಎನಿಸುತ್ತಾನೆ. ಪರಮಾತ್ಮ ತನ್ನ ಸ್ವತ್ತನ್ನೇ ತನ್ನದೆಂದು ಅಭಿಮಾನ ಪಡುತ್ತಾನೆ, ಎಲ್ಲವೂ ಅವನ ಸ್ವತ್ತೇ ಆಗಿದೆ. ಅದರಿಂದ ಪಾಪಲೇಪಕರವಾದ ಶರೀರಾಭಿಮಾನವಿಲ್ಲದ ಪ್ರಯುಕ್ತ ಶರೀರಾಭಿಮಾನರಹಿತ, ಅಶರೀರಿ ಎನಿಸುತ್ತಾನೆ. ತನ್ನ ಸ್ವರೂಪವನ್ನು ಪೂರ್ತಿಯಾಗಿ ಚೆನ್ನಾಗಿ ಅನುಭವಿಸುವುದರಿಂದ ಸ್ವತಂತ್ರನಾದ್ದರಿಂದ ನಿರ್ದೋಷನಾದ್ದರಿಂದ ಪಾಪಲೇಪಕರ ಅಭಿಮಾನ ಅವನಿಗೆ ಎಂದೂ ಇಲ್ಲ' ಎಂದು ಬ್ರಹ್ಮತರ್ಕದಲ್ಲಿ ಉಕ್ತವಾಗಿದೆ.

❖ ❖ ❖

ಬಾಲಕನ ರೂಪದಿಂದ ಬಂದು ಯಮನಾಡಿದ ಮಾತುಗಳನ್ನು ಕೇಳಿ ಸುಯಜ್ಞರಾಜನ ಬಂಧುಗಳು ಐಹಿಕ ಸುಖ ಸಂಪತ್ತೆಲ್ಲವೂ ಅಶಾಶ್ವತವೆಂದೂ ಅವುಗಳಲ್ಲಿ ನಮ್ಮವೆನ್ನುವ ಅಭಿಮಾನ ಭ್ರಾಂತಿ ಎಂದೂ ಮನವರಿಕೆ ಮಾಡಿಕೊಂಡರೆಂದು ಹಿರಣ್ಯಕಶಿಪು ತನ್ನ ತಾಯಿ ಮುಂತಾದವರಿಗೆ ಉಪದೇಶಿಸಿದ. ಹೀಗೆ ನಾರದರು ಧರ್ಮರಾಜನಿಗೆ ಹೇಳುತ್ತಾರೆ.

ಬಾಲ ಏವಂ ಪ್ರವದತಿ ಸರ್ವೇ ವಿಸ್ಮಿತಚೇತಸಃ ।
ಜ್ಞಾತಯೋ ಮೇನಿರೇ ಸರ್ವಮನಿತ್ಯಮಯಥೋತ್ಥಿತಮ್ ॥ ೫೮ ॥

ಬಾಲಕ ಹೀಗೆ ನುಡಿದಾಗ ಅಚ್ಚರಿಗೊಂಡ ಎಲ್ಲ ಸುಯಜ್ಞರಾಜನ ಬಂಧುಗಳು ತಮ್ಮ ಐಹಿಕ ಸುಖಸಂಪತ್ತೆಲ್ಲ ಅನಿತ್ಯವೆಂದು ಅವುಗಳ ಮೇಲೆ ತಮ್ಮ ಒಡೆತನವೆಂಬುದು ಮಿಥ್ಯೆ ಎಂದು ತಿಳಿದರು.

ಇಲ್ಲಿ 'ಅಯಥೋತ್ಥಿತಂ' ಎಂದರೆ 'ಎಲ್ಲವೂ ಮಿಥ್ಯೆಯೇ ಕಾಣಿಸಿ ಕೊಂಡಿದ್ದುವು' ಎಂದು ಶ್ರೀಧರವ್ಯಾಖ್ಯಾನ. 'ಅಯಥೋತ್ಥಿತಮನಿತ್ಯಂ ಮೇನಿರೇ' ಎಂದರೆ 'ಅಯಥೋತ್ಥಿತಂ' ಇಷ್ಟರವರೆಗೆ ಪುರುಷಾರ್ಥವಲ್ಲವೆಂದು ತಿಳಿಯದಿದ್ದುದನ್ನು ಈಗ 'ಅನಿತ್ಯಂ' ಪುರುಷಾರ್ಥವಲ್ಲ ಎಂದು ತಿಳಿದರು ಎನ್ನುವುದು ವೀರರಾಘವ ವ್ಯಾಖ್ಯಾನ. ಸರ್ವಮಿಥ್ಯಾತ್ವ ಪ್ರಮಾಣ ಬಾಧಿತ ವಾದ್ದರಿಂದ ಶ್ರೀಧರ ವ್ಯಾಖ್ಯಾನ ಅಯುಕ್ತ. ವೀರರಾಘವ ವ್ಯಾಖ್ಯಾನ ಕ್ಲಿಷ್ಟ.

'ಅಯಥೋತ್ಥಿತ'ವೆಂದರೆ 'ಸುಳ್ಳೇ ಕಾಣಿಸಿಕೊಂಡಿದ್ದು' ಎಂದು ಸ್ವರಸವಾಗಿ ಅರ್ಥ ಹೊರಡುತ್ತದೆ. ಆದರಿಂದ 'ಎಲ್ಲವನ್ನೂ ಸುಳ್ಳೆಂದು ಅನಿತ್ಯವೆಂದು ತಿಳಿದರು' ಎಂಬ ಅರ್ಥವನ್ನೇ ಇಟ್ಟುಕೊಂಡು ಆ ಅರ್ಥದ ವ್ಯಾಪ್ತಿಗೆ ಪ್ರಮಾಣಾನುಗುಣವಾಗಿ ಸಂಕೋಚ ಮಾಡಬೇಕು. ಎಲ್ಲವೂ ಸುಳ್ಳಲ್ಲ, ಎಲ್ಲವೂ ಅನಿತ್ಯವಲ್ಲ, ನಾನೇ ಸ್ವತಂತ್ರವಾಗಿ ಮಾಡುತ್ತೇನೆ, ಎಲ್ಲವೂ ಸ್ವತಂತ್ರವಾಗಿ ನನ್ನವು ಎನ್ನುವಲ್ಲಿ ಕಾಣುವ ಸ್ವಾತಂತ್ರ್ಯ ಮಾತ್ರ ಸುಳ್ಳು ಎಂದು ತಿಳಿದರು. ಪ್ರಕೃತಿಯ ಪರಿಣಾಮವಾಗಿ ಉಂಟಾಗಿರುವ ಮಹದಾದಿ ಬ್ರಹ್ಮಾಂಡ ಪರ್ಯಂತ ಎಲ್ಲವೂ ಸತ್ಯವಾದರೂ ಅನಿತ್ಯ. ಪ್ರಕೃತಿ ನಿತ್ಯ, ಸತ್ಯ. ಪರಮಾತ್ಮನೂ ನಿತ್ಯ, ಸತ್ಯ. ಆದರೆ ಪ್ರಕೃತಿ ಅಸ್ವತಂತ್ರ, ಪರಮಾತ್ಮ ಸ್ವತಂತ್ರ ಎಂದೂ ತಿಳಿದರು. ಶ್ಲೋಕದಲ್ಲಿ ಅಸತ್ಯ ಅನಿತ್ಯಗಳೆಂದುದು ಸತ್ಯ ನಿತ್ಯ ಸ್ವತಂತ್ರ ಎನ್ನುವುದಕ್ಕೂ ಉಪಲಕ್ಷಣವೆನ್ನಬೇಕು. ಆಗಲೆ ಅದು ಪರಿಪೂರ್ಣ ತತ್ವಜ್ಞಾನವೆನಿಸುತ್ತದೆ. ಈ ರೀತಿ ವ್ಯಾಖ್ಯಾನಿಸುವುದು ಬ್ರಹ್ಮತರ್ಕವಚನಕ್ಕೆ ಅನುಗುಣವಾಗುತ್ತದೆ.

ಅಹಂಮಮಾಭಿಮಾನಾದಿ ತ್ವಯಥೋತ್ಥಮನಿತ್ಯಕಂ ।
ಮಹದಾದಿ ಯಥೋತ್ಥಂ ಚ ನಿತ್ಯಾ ಚಾಪಿ ಯಥೋತ್ಥಿತಾ ।
ಅಸ್ವತಂತ್ರೈವ ಪ್ರಕೃತಿಃ ಸ್ವತಂತ್ರೋ ನಿತ್ಯ ಏವ ಚ ।
ಯಥಾರ್ಥಭೂತಶ್ಚ ಪರ ಏಕ ಏವ ಜನಾರ್ದನಃ । ಇತಿ ಚ ॥

ಜೀವನಿಗೆ ನಾನೇ ನನ್ನದೇ ಎಂಬ ಅಭಿಮಾನದಲ್ಲಿ ಕಾಣುವ ಸ್ವಾತಂತ್ರ್ಯಾದಿಗಳು ಮಾತ್ರ ಅಸತ್ಯ. ಮಹದಾದಿ ತತ್ವಗಳು ಮಾತ್ರ ಸತ್ಯವಾಗಿದ್ದರೂ ಅನಿತ್ಯ. ಪ್ರಕೃತಿ ಮಾತ್ರ ಸತ್ಯವೂ ನಿತ್ಯವೂ ಅಸ್ವತಂತ್ರವೂ ಆಗಿದೆ. ಪರಮಾತ್ಮನು ಒಬ್ಬನು ಮಾತ್ರವೆ ಸತ್ಯನೂ ನಿತ್ಯನೂ ಸ್ವತಂತ್ರನೂ ಆಗಿರುತ್ತಾನೆ ಎಂದೂ ಬ್ರಹ್ಮತರ್ಕದಲ್ಲಿ ಹೇಳಿದೆ.

❖❖❖

ಶ್ರೀಹರಿ ಶತ್ರುಪಕ್ಷದಲ್ಲಿ ನಿಂತು ನಮ್ಮ ಹಿರಣ್ಯಾಕ್ಷನನ್ನು ಕೊಂದನೆಂದು ದುಃಖಿಸುತ್ತಿದ್ದ ದಿತಿ ಮುಂತಾದವರಿಗೆ ಶತ್ರು ನಮ್ಮವನೆಂಬ ಭೇದಭಾವನೆ ಅಜ್ಞಾನ ಮೂಲಕವೆಂದು ಹಿರಣ್ಯಕಶಿಪು ಉಪದೇಶಿಸುತ್ತಾನೆ. ಇದನ್ನು ನಾರದರು ಧರ್ಮರಾಜನಿಗೆ ಹೇಳುತ್ತಾರೆ.

ಕ ಆತ್ಮಾ ಕಃ ಪರೋ ವಾಽತ್ರ ಸ್ವೀಯಃ ಪಾರಕ್ಯ ಏವ ಚ ।
ಸ್ವಪರಾಭಿನಿವೇಶೇನ ವಿನಾಽ ಜ್ಞಾನೇನ ದೇಹಿನಃ ॥ ೬೦ ॥

ದೇಹಿಗಳು ಅಜ್ಞಾನದಿಂದ ತಮ್ಮ ಶರೀರಗಳನ್ನು ತಾವೆಂದೂ ಪರರ ಶರೀರಗಳನ್ನು ಶತ್ರುಗಳೆಂದೂ ಭಾವಿಸುತ್ತಾರಲ್ಲದೆ ವಾಸ್ತವದಲ್ಲಿ ಯಾವ ಶರೀರಗಳು ತಾವು? ಯಾವ ಶರೀರಗಳು ಶತ್ರುಗಳು? ಯಾವ ವಸ್ತುಗಳು ತಮ್ಮವು ಯಾವ ವಸ್ತುಗಳು ಶತ್ರುಗಳವು?

ಇಲ್ಲಿ ಎಲ್ಲ ವ್ಯಾಖ್ಯಾನಕಾರರೂ ಹೇಳುತ್ತಾರೆ- 'ತಾನು ಬೇರೆ, ಪರನು ಬೇರೆ, ತನ್ನದು ಬೇರೆ ಪರನದು ಬೇರೆ ಎಂಬ ಭೇದಜ್ಞಾನ ಅಜ್ಞಾನ ಮೂಲಕವಾದುದು, ಅದರಿಂದಲೆ ತನಗೆ ಪರನಿಂದ ವಿಯೋಗವಾದರೆ ದುಃಖ ಉಂಟಾಗುವುದೆ'ಂದು. ಆದರೆ ಅದ್ವೈತದಲ್ಲಿ ಜೀವ- ಜೀವ ಭೇದಜ್ಞಾನ ಭ್ರಮವೆನಿಸಿದರೂ ಉಳಿದ ಮತಗಳಲ್ಲಿ ಅದು ಯಥಾರ್ಥವೆ. ಅದರಿಂದ ಅಜ್ಞಾನಮೂಲಕ ಎನ್ನುವುದು ತಮ್ಮ ಸಿದ್ಧಾಂತವನ್ನು ಮರೆತು, ಆಡುವ ಮಾತಾಗುತ್ತದೆ.

ವಸ್ತುತಃ ಇಲ್ಲಿ 'ಆತ್ಮ' ಎಂದರೆ ತಾನು, 'ಪರ' ಎಂದರೆ ಇನ್ನೊಬ್ಬನು

ಎಂದರ್ಥವಲ್ಲ. 'ಪರ' ಎಂದರೆ ಶತ್ರು. ತಾನು ಮತ್ತು ಶತ್ರು ಎಂದು ಭೇದಭಾವನೆ, ತನ್ನವನು ಮತ್ತು ಶತ್ರುಪಕ್ಷದವನು ಎನ್ನುವ ಭೇದಭಾವನೆ ಇಲ್ಲಿ ಪ್ರಕೃತವಾಗಿದೆ. ಏಕೆಂದರೆ ಹರಿ ಶತ್ರುಪಕ್ಷದವನಾಗಿ ತಮ್ಮವನಾದ ಹಿರಣ್ಯಾಕ್ಷನನ್ನು ಕೊಂದಿದ್ದಾನೆ ಎಂಬ ಭಾವನೆ ದಿತಿ ಮುಂತಾದವರಿಗೆ ಬಂದಿತ್ತು. ಈ ಭಾವನೆ ಅಜ್ಞಾನ ಮೂಲಕ. ಏಕೆಂದರೆ ಎರಡು ಶರೀರಗಳಲ್ಲಿ ಒಂದು ತಾನು, ಇನ್ನೊಂದು ತನ್ನ ಶತ್ರು ಎಂದು ತಿಳಿಯುವುದು ಅಜ್ಞಾನದಿಂದ, ಶರೀರ ಜಡವಾದ್ದರಿಂದ. ಎರಡು ಆತ್ಮಗಳಲ್ಲಿ ಒಂದು ತಾನು, ಇನ್ನೊಂದು ತನ್ನ ಶತ್ರುವಾಗಬಹುದು. ಆದರೆ ಶತ್ರು ಆತ್ಮನನ್ನು ಕೊಲ್ಲಲಾರ. ಕೊಲ್ಲುತ್ತಾನೆ ಎಂಬ ವ್ಯವಹಾರ ಅಜ್ಞಾನದಿಂದ. ಹೀಗಾಗಿ ಶತ್ರುವಿಗೆ ಜಯವಾಯಿತು, ನಾವು ನಾಶ ಹೊಂದಿದೆವೆಂದು ಶೋಕಿಸುವುದು ಅರ್ಥಹೀನವಾಗುತ್ತದೆ. ಈ ರೀತಿ ವ್ಯಾಖ್ಯಾನಿಸುವುದು ಬ್ರಹ್ಮವೈವರ್ತಾನುಗುಣ.

ಕ ಆತ್ಮಾ ಕಃ ಪರ ಇತಿ ದೇಹಾದ್ಯಪೇಕ್ಷಯಾ ।
ನಹಿ ದೇಹಾದಿರಾತ್ಮಾ ಸ್ಯಾನ್ನಚ ಶತ್ರುರುದೀರಿತಃ ।
ಅತೋ ದೈಹಿಕವೃದ್ಧೌ ವಾ ಕ್ಷಯೇ ವಾ ಕಿಂ ಪ್ರಯೋಜನಂ ।
ಯಸ್ತು ದೇಹಗತೋ ಜೀವಃ ಸ ಹಿ ನಾಶಂ ನ ಗಚ್ಛತಿ ।
ತತಃ ಶತ್ರುವಿವೃದ್ಧೌ ವಾ ಸ್ವನಾಶೇ ಶೋಚನಂ ಕುತಃ ?
ದೇಹಾದಿವ್ಯತಿರಿಕ್ತೌ ತೌ ಜೀವೇಶೌ ಪ್ರತಿಜಾನತಾಂ ।
ಅತ ಆತ್ಮವಿವೃದ್ಧಿಸ್ತು ವಾಸುದೇವೇ ರತಿಃ ಸ್ಥಿರಾ॥
ಶತ್ರುನಾಶಸ್ತಥಾಽಜ್ಞಾನನಾಶೋ ನಾನ್ಯಃ ಕಥಂಚನ ॥
ಇತಿ ಬ್ರಹ್ಮವೈವರ್ತೇ ॥

ಯಾರು ತಾನು, ಯಾರು ಶತ್ರು ಎಂದು ಆಕ್ಷೇಪಿಸಿದ್ದು ದೇಹಾದಿಗಳ ವಿಷಯದಲ್ಲಿ ಎಂದು ತಿಳಿಯಬೇಕು.

ದೇಹಾದಿ, ತಾನು ಆಗುವುದಿಲ್ಲ, ಶತ್ರುವೆನಿಸುವುದೂ ಇಲ್ಲ. ಆದರಿಂದ ದೇಹಕ್ಕೆ ಜಯವಾಗಲಿ, ನಾಶವಾಗಲಿ, ಅದರಿಂದೇನು ಪ್ರಯೋಜನ? ದೇಹದಲ್ಲಿರುವ ಜೀವನಂತೂ ನಾಶಹೊಂದುವುದಿಲ್ಲ. ಹೀಗಾಗಿ 'ಜೀವೇಶರು ದೇಹಾದಿ ವ್ಯತಿರಿಕ್ತರೆಂ'ದು ತಿಳಿದವರಿಗೆ, ಶತ್ರುವಿಗೆ ಜಯವಾಗಲಿ, ತಮಗೆ ನಾಶವಾಗಲಿ, ಏಕೆ ಶೋಕ? 'ತಾನು ಜಯ ಸಂಪಾದಿಸಬೇಕು, ಶತ್ರುವನ್ನು ನಾಶ ಮಾಡಿಕೊಳ್ಳಬೇಕೆ'ಂದು ಶಾಸ್ತ್ರಗಳಲ್ಲಿ ಹೇಳಿದುದು, ತಮ್ಮ ಜಯಲಾಭ ತಮಗೆ ವಾಸುದೇವನಲ್ಲಿ ಸ್ಥಿರವಾದ

ಭಕ್ತಿಲಾಭವೆ, ಶತ್ರುನಾಶವೆಂದರೆ ಅಜ್ಞಾನ ನಾಶವೆ, ಹೊರತು ಬೇರೇನಲ್ಲ ಎಂಬ ಅಭಿಪ್ರಾಯದಿಂದ ಎಂದು ಬ್ರಹ್ಮವೈವರ್ತ ಪುರಾಣದಲ್ಲಿ ಹೇಳಿದೆ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ಸಪ್ತಮಸ್ಕಂಧೇ
ದ್ವಿತೀಯೋಽಧ್ಯಾಯಃ

❖ ❖ ❖

ಅಧ್ಯಾಯ ೩

ಅಧ್ಯಾಯ ಸಾರಾಂಶ

ನಾರದರು ನುಡಿದರು- ಧರ್ಮರಾಜ, ಹಿರಣ್ಯಕಶಿಪು ಬ್ರಹ್ಮದೇವನನ್ನು ಕುರಿತು ಮಂದರಪರ್ವತದ ತಪ್ಪಲಿನಲ್ಲಿ ಉಗ್ರತಪಸ್ಸು ಮಾಡಿದ. ಕಾಲಿನ ಹೆಬ್ಬೆರಳನ್ನು ಊರಿ ನಿಂತು ಎರಡು ತೋಳುಗಳನ್ನು ಮೇಲೆತ್ತಿ ಆಕಾಶದ ಕಡೆಗೆ ದಿಟ್ಟಿಸಿ ನೋಡಿದ. ಅವನ ತಲೆಯಿಂದ ತಪೋಜ್ವಾಲೆ ಹೊರಟು ಎಲ್ಲ ಲೋಕಗಳನ್ನು ಸುಡತೊಡಗಿತು. ನದೀ ಸಮುದ್ರಗಳು ಕ್ಷೋಭೆಗೊಂಡುವು. ಭೂಮಿ ಕಂಪಿಸಿತು.

ದೇವತೆಗಳು ಬ್ರಹ್ಮನಲ್ಲಿ ದೂರಿತ್ತರು. ಪ್ರಭು, ಈ ಹಿರಣ್ಯಕಶಿಪು ಬ್ರಹ್ಮಪದವಿಗಾಗಿ ತಪಸ್ಸು ಮಾಡುತ್ತಿದ್ದಾನೆ. ತಾನೇ ಬ್ರಹ್ಮನಾಗಿ ಲೋಕವ್ಯವಸ್ಥೆಯನ್ನೇ ತಲೆಕೆಳಗೆ ಮಾಡಲು ಹೊರಟಿದ್ದಾನೆ.'

ಒಡನೆ ಬ್ರಹ್ಮದೇವ ಬಿದಿರು ಮೆಳೆಗಳ ನಡುವೆ ಹುತ್ತದೊಳಗೆ ಇರುವೆಗಳು ತಿಂದಿದ್ದ ಹಿರಣ್ಯಕಶಿಪುವಿನ ಶರೀರಕ್ಕೆ ಕಮಂಡಲು ಜಲದಿಂದ ಪ್ರೋಕ್ಷಣ ಮಾಡಿದ. ಒಡನೆ ಆತ ಮೈಕೈ ತುಂಬಿ ಕೊಂಡು ವಜ್ರಕಾಯನಾಗಿ ಪುಟಕ್ಕಿಟ್ಟ ಚಿನ್ನದಂತೆ ಹೊಳೆಯುತ್ತ ಎದ್ದು ನಿಂತು ಹಂಸವಾಹನನಾದ ಬ್ರಹ್ಮದೇವನನ್ನು ಕಂಡು ಆನಂದ ತುಂದಿಲನಾಗಿ ದಂಡಪ್ರಣಾಮ ಗೈದ. ಕಣ್ಣೀರು ಸುರಿಸುತ್ತ ಗದ್ಗದ ಧ್ವನಿಯಿಂದ ಸುತ್ತಿಸಿದ.

'ಸ್ವತಂತ್ರ ಸೃಷ್ಟಿಕರ್ತನಾದ ಹರಿಯಿಂದ ಜನಿಸಿ ಅವನಲ್ಲಿಯೇ ಮನಸ್ಸಿಟ್ಟು ಸತ್ಯಲೋಕವನ್ನು ಆಳುತ್ತಿರುವ ಬ್ರಹ್ಮಾಂಡ ಶರೀರಿ ಯಾದ ನೀನು ನನಗೆ ಬೇಕಾದ ವರಗಳನ್ನು ನೀಡುವಿಯಾದರೆ ನೀನು ಹುಟ್ಟಿಸಿರುವ ಯಾವ ಜೀವಿಯಿಂದಲೂ ನನಗೆ ಮರಣ ಬಾರದಿರಲಿ. ನನಗೆ ಮರಣವೆಂದೂ ಒಳಗೆ ಅಲ್ಲ, ಹೊರಗೂ ಅಲ್ಲ, ಹಗಲಲ್ಲೂ ಅಲ್ಲ ರಾತ್ರಿಯಲ್ಲೂ ಅಲ್ಲ, ಯಾವ ಆಯುಧಗಳಿಂದಲೂ ಅಲ್ಲ. ಮಾನವನಿಂದ ಅಲ್ಲ ಮೃಗದಿಂದಲ್ಲ, ನಿರ್ಜೀವ ವಸ್ತುವಿನಿಂದಲ್ಲ, ಸಜೀವ ವಸ್ತುವಿನಿಂದಲ್ಲ.

ರಣರಂಗದಲ್ಲಿ ಎದುರಾಳಿಯಿಂದ ಮರಣ ಬರಕೂಡದು. ಎಲ್ಲ ಲೋಕಪಾಲಕರ ಶಕ್ತಿ ನನಗೆ ಬರಬೇಕು' ಎಂದ.

❖❖❖

ಹಿರಣ್ಯಕಶಿಪು ಮಂದರಪರ್ವತದ ತಪ್ಪಲಿನಲ್ಲಿ ಬಲು ಘೋರವಾದ ತಪಸ್ಸು ಮಾಡಿದ. ದೇವತೆಗಳು ಬ್ರಹ್ಮನ ಬಳಿಗೆ ಹೋಗಿ ದೂರಿಕೊಂಡರು. ಈತ ತಪಸ್ಸಿನಿಂದ ಸತ್ಯಲೋಕಾಧಿಪತ್ಯವನ್ನು ಹೊಂದಲು ಬಯಸಿದ್ದಾನೆ, ಅವನು ತಪಸ್ಸನ್ನು ನಿಲ್ಲಿಸುವಂತೆ ಮಾಡೆಂದು ಬೇಡಿಕೊಂಡರು.

ಶ್ರೂಯತಾಂ ಕಿಂ ನ್ವವಿದಿತಂ ತಥಾಪಿ ಸ ನಿವೇದ್ಯತೇ ।
ಸೃಷ್ಟ್ವಾ ಚರಾಚರಮಿದಂ ತಪೋಯೋಗಸಮಾಧಿನಾ ॥ ೯ ॥
ಅಧ್ಯಾಸ್ತೇ ಸರ್ವಧಿಷ್ಣ್ಯೇಭ್ಯಃ ಪರಮೇಷ್ಠೀ ನಿಜಾಸನಮ್ ।
ತದಹಂ ವರ್ಧಮಾನೇನ ತಪೋಯಜ್ಞಸಮಾಧಿನಾ ॥ ೧೦ ॥
ಕಾಲಾತ್ಮನೋಶ್ಚ ನಿತ್ಯತ್ವಾತ್ಸಾಧಯಿಷ್ಯೇ ತಥಾಽಽತ್ಮನಃ ॥ ೧೧ ॥

ನಿನಗೆ ತಿಳಿಯದುದೇನಿದೆ? ಆದರೂ ಹೇಳುತ್ತೇವೆ, ಕೇಳು. ಬ್ರಹ್ಮನು ತಪಸ್ಸು ಯೋಗಸಮಾಧಿಗಳ ಬಲದಿಂದ ಈ ಚರಾಚರ ಪ್ರಪಂಚವನ್ನು ಸೃಜಿಸಿ ಎಲ್ಲ ಲೋಕಗಳಿಗಿಂತ ಮಿಗಿಲಾದ ಸತ್ಯಲೋಕ ಪದವಿಯನ್ನು ಆಳುತ್ತಿದ್ದಾನೆ. ಕಾಲವೂ ನಿತ್ಯ ಆತ್ಮವೂ ನಿತ್ಯವಾಗಿರುವುದರಿಂದ ಬಹು ಜನ್ಮಗಳಿಂದಲಾದರೂ ಹೆಚ್ಚು ಹೆಚ್ಚಿನ ತಪಸ್ಸು ಯಜ್ಞ ಯೋಗ ಸಮಾಧಿಗಳಿಂದ ಆ ಬ್ರಹ್ಮಪದವಿಯನ್ನು ನನಗೆ ನಾನು ಸಂಪಾದಿಸಿಕೊಳ್ಳುವೆನು.

ಇಲ್ಲಿ ಪ್ರಶ್ನೆ ಬರುತ್ತದೆ- ಬ್ರಹ್ಮರುದ್ರಾದಿ ಪದವಿಗಳಿಗೆ, ಅವುಗಳಿಗೆ ಯೋಗ್ಯರಾದವರೇ ಸಾಧನ ಮಾಡಿದರೆ ಬರುತ್ತಾರೆ ಹೊರತು ಯಾರೂ ಯಾವ ಕಾಲಕ್ಕೂ ತಮಗೆ ಅಯೋಗ್ಯವಾದ ಪದವಿಗಳನ್ನು ಎಷ್ಟು ಸಾಧನೆ ಮಾಡಿದರೂ ಪಡೆಯಲಾರರು. ಅದರಿಂದ ಬ್ರಹ್ಮಜ್ಞಾನಿಗಳು ತಮಗೆ ಯೋಗ್ಯವಾದ ಪದವಿಗಳನ್ನು ಪಡೆಯಲು ಯತ್ನ ಮಾಡಬೇಕು ಹೊರತು ಅಯೋಗ್ಯವಾದ ಪದವಿಗಳಿಗೆ ಆಸೆ ಪಡಬಾರದು. ಪ್ರಕೃತ ಹಿರಣ್ಯಕಶಿಪು ವೈಕುಂಠದ ದ್ವಾರಪಾಲಕನಾದ ದೇವ, ಬ್ರಹ್ಮಜ್ಞಾನಿ. ಅವನು ತನಗೆ ಅಯೋಗ್ಯವಾದ ಬ್ರಹ್ಮಪದವಿಗಾಗಿ ಏಕೆ ತಪಸ್ಸು ಮಾಡಿದ? ತಪಸ್ಸು ಮಾಡಿದರೂ ಅವನಿಗೆ ಆ ಪದವಿ ದೊರಕುವುದೇ ಇಲ್ಲ ಎಂದು ತಿಳಿದವರು ದೇವತೆಗಳು, ಬ್ರಹ್ಮನೂ ಕೂಡ, ಅವನ ತಪಸ್ಸನ್ನು ನಿಲ್ಲಿಸಲು ಏಕೆ ಪ್ರಯತ್ನಪಟ್ಟರು?

ಬೇರೆ ವ್ಯಾಖ್ಯಾನಕಾರರು ಜೀವಸ್ವರೂಪ ಯೋಗ್ಯತೆ ಸಾಧನೆಗಳನ್ನು ಒಪ್ಪದಿರುವುದರಿಂದ ಅವರು ಯಾರೂ ಈ ಸಮಸ್ಯೆಯನ್ನು ಆಲೋಚಿಸುವುದಿಲ್ಲ. ಗಿರಿಧರ ವ್ಯಾಖ್ಯಾನದಲ್ಲಿ ದೇವತೆಗಳು ಹಿರಣ್ಯಕಶಿಪುವಿನ ತಪಸ್ಸಿನ ಉದ್ದೇಶವನ್ನು ಬ್ರಹ್ಮನ ಮುಂದೆ ಹೇಳಿದರೂ ಬ್ರಹ್ಮನಿಗೆ ಕೋಪದ್ವೇಷಗಳು ಬರಲಿಲ್ಲ. ಪ್ರೀತಿಯಿಂದಲೆ ವರ ನೀಡಲು ಅವನ ಬಳಿಗೆ ಬಂದನೆಂದಿದೆ. ಆದರೆ ಅಯೋಗ್ಯ ಕರ್ಮ ಮಾಡುವವನಲ್ಲಿ ದುರ್ಲಭವಾದ ವರ ನೀಡುವಷ್ಟು ಪ್ರೀತಿ ಬರುತ್ತದೆ ಎಂದರೆ ಅದು ಅತ್ಯಂತ ಅಸಂಗತ. ಸಮಸ್ಯೆಗೆ ಪರಿಹಾರ ಹೀಗೆ-

ಜಾನತಾಮಪಿ ಕರ್ತವ್ಯಂ ಕರ್ಮಾತ್ಮಸದೃಶಂ ಸದಾ ।
ತತ್ರಾತ್ಮಸದೃಶಾಜ್ಞಾನಾದ್ ರಾಗಾದ್ಯೈರ್ವಾ ವಿಮೋಹಿತಾಃ ।
ಜಾನಂತೋಽಪಿ ಹ್ಯಸದೃಶಂ ಕರ್ಮ ಕುರ್ಯುರ್ಋತೇ ವಿಭುಂ ।
ಚತುರಾಸ್ಯಂ ಸ ನಾಯೋಗ್ಯಂ ಕರ್ಮ ಕುರ್ಯಾತ್ ಕಥಂಚನ ।
ಇತಿ ನಾರದೀಯೇ ॥

ತಪಸಾ ವಿದ್ಯಯಾ ವಾಽಪಿ ಜ್ಞಾನಧ್ಯಾನಾದಿನಾಽಥವಾ
ವ್ಯಸ್ತೈಃ ಸಮಸ್ತೈರಪಿ ವಾ ಕುರ್ವತಾಂ ಯತ್ನಮುತ್ತಮಂ ।
ಸಂಹಾರ ವಿಕ್ಷೇಪಶತೈರ್ಬಹುಕೋಟಿಭಿರೇವ ವಾ ।
ನ ಶಕ್ಯಂತೇ ಸಮಾರೋಢುಂ ಸ್ವಾತ್ಮಾಯೋಗ್ಯಪದಾನಿ ತು ।
ತಥಾಽಪ್ಯಾಚರತಾಂ ಕುರ್ಯುರ್ದೈತ್ಯಾನಾಂ ಸುರನಾಯಕಾಃ ।
ವಿಘ್ನಂ ತು ತಪಆದೀನಾಂ ವೈಯರ್ಥ್ಯಸ್ಯಾಪನುತ್ತಯೇ॥
ಇತಿ ಪ್ರಕಾಶಸಂಹಿತಾಯಾಂ ॥

ಜ್ಞಾನಿಗಳು ಯಾವಾಗಲೂ ತಮಗೆ ಯೋಗ್ಯವಾದ ಕರ್ಮವನ್ನೇ ಮಾಡಬೇಕು. ಆದರೂ ಬ್ರಹ್ಮದೇವರು ಹೊರತು ಬೇರೆ ಜ್ಞಾನಿಗಳು ಕೆಲವೊಮ್ಮೆ ತಮ್ಮ ಯೋಗ್ಯಕರ್ಮವನ್ನು ತಿಳಿಯದಿರುವುದರಿಂದ ಅಥವಾ ರಾಗಾದಿ ದೋಷಗಳಿಂದ ಮೂಢರಾಗಿ ಅಯೋಗ್ಯಕರ್ಮಗಳಲ್ಲಿ ತೊಡಗುವುದುಂಟು. (ಹಿರಣ್ಯಕಶಿಪುವೂ ಜ್ಞಾನಿಯಾದರೂ ಹೀಗೆ ಮೂಢತನದಿಂದ ತನಗೆ ಅಯೋಗ್ಯವಾದ ಬ್ರಹ್ಮಪದವಿಯ ಸಾಧನೆಯಲ್ಲಿ ತೊಡಗಿದ್ದಾನೆ.) ಬ್ರಹ್ಮದೇವರು ಮಾತ್ರ ಹೀಗೆ ಅಯೋಗ್ಯ ಕರ್ಮವನ್ನು ಸರ್ವಥಾ ಮಾಡುವುದಿಲ್ಲ ಎಂದು ನಾರದೀಯ ಪುರಾಣದಲ್ಲಿ ಹೇಳಿದೆ. ತಪಸ್ಸು ವಿದ್ಯೆ ಜ್ಞಾನ ಧ್ಯಾನಾದಿಗಳು ಇವುಗಳನ್ನು ಒಂದೊಂದಾಗಿ ಅಥವಾ ಎಲ್ಲವನ್ನೂ ಒಮ್ಮೆಗೆ ಮಾಡುತ್ತ ಯತ್ನಿಸಿದರೂ ನೂರು ಕೋಟಿ

ಬಹುಕೋಟಿ ಪ್ರಾಣಾಯಾಮಗಳಿಂದಲೂ ತಮಗೆ ಅಯೋಗ್ಯವಾದ ಪದವಿಯನ್ನೇರುವುದು ಯಾರಿಗೂ ಶಕ್ಯವಿಲ್ಲ. ಆದರೂ ಅದಕ್ಕಾಗಿ ದೈತ್ಯರು ಮಾಡುವ ತಪಸ್ಸು ಮುಂತಾದವುಗಳಿಗೆ ದೇವೋತ್ತಮರು ವಿಘ್ನ ಮಾಡುತ್ತಾರೆ. ಏಕೆಂದರೆ ಬ್ರಹ್ಮದೇವರನ್ನು ಕುರಿತು ತಪಸ್ಸು ಮಾಡಿದರೂ ಅದು ಫಲಕಾರಿಯಾಗುವುದಿಲ್ಲ ಎಂದು ದೈತ್ಯರು ತೀರ್ಮಾನಕ್ಕೆ ಬರಬಾರದು ಎಂಬುದು ಅವರ ಉದ್ದೇಶ. (ತಪಸ್ಸಿಗೆ ವಿಘ್ನ ಮಾಡಿದರೆ, ತಪಸ್ಸು ನಿಂತಿದ್ದರಿಂದ ಫಲ ಸಿಗಲಿಲ್ಲ ಹೊರತು ತಪಸ್ಸು ನಿಷ್ಫಲವಲ್ಲ ಎಂದು ದೈತ್ಯರು ತಿಳಿಯುತ್ತಾರೆ ಎನ್ನುವುದು ದೇವತೆಗಳ ಮತ್ತು ಬ್ರಹ್ಮದೇವರ ಅಭಿಪ್ರಾಯವಾಗಿತ್ತು) ಎಂದು ಪ್ರಕಾಶಸಂಹಿತೆಯಲ್ಲಿ ಹೇಳಿದೆ.

❖ ❖ ❖

ಬ್ರಹ್ಮಪದವಿಯೊಂದನ್ನೇ ನಾನು ಸಾಧಿಸಿಕೊಳ್ಳುತ್ತೇನೆ. ನಶ್ವರವಾದ ವೈಷ್ಣವಾದಿ ಪದವಿಗಳಿಂದೇನು ಎಂದು ಹಿರಣ್ಯಕಶಿಪು ಆಲೋಚಿಸುತ್ತಾನೆ ಎನ್ನುತ್ತಾರೆ ದೇವತೆಗಳು ಬ್ರಹ್ಮದೇವರ ಮುಂದೆ.

ಅನ್ಯಥೇದಂ ವಿಧಾಸ್ಯೇಽಹಮಯಥಾಪೂರ್ವಮೋಜಸಾ ।
ಕಿಮನ್ಯೈಃ ಕಾಲನಿರ್ಧೂತೈಃ ಕಲ್ಪಾಂತೈರ್ವೈಷ್ಣವಾದಿಭಿಃ ॥ ೧೨ ॥

ಇಂದ್ರಾದಿಗಳು ದಿಕ್ಪಾಲಕರಲ್ಲ, ದೈತ್ಯರೇ ದಿಕ್ಪಾಲಕರು ಎಂದು ಮುಂತಾಗಿ ಬೇರೆಯೆ ವ್ಯವಸ್ಥೆ ಮಾಡಿ ಬ್ರಹ್ಮಪದವಿಯನ್ನೇ ಆಳುತ್ತೇನೆ. ಬ್ರಹ್ಮನು ಸೃಜಿಸಿರುವ ಬೇರೆ ಇಂದ್ರಾದಿ ಪದವಿಗಳು ಕಾಲದ ನಿಯಂತ್ರಣದಲ್ಲಿದ್ದು ಕಲ್ಪಾಂತ್ಯದವರೆಗೆ ಮಾತ್ರ ಆಯುಷ್ಯ ಉಳ್ಳವುಗಳು. ಅವುಗಳಿಂದೇನಾದೀತು?

[೧]ಇಲ್ಲಿ ವೈಷ್ಣವ ಪದವಿ ಎಂದರೆ ದಿವ್ಯವಾದ ವೈಕುಂಠಾದಿ ಧಾಮತ್ರಯವೂ ನಶ್ವರವೆಂದು ಹೇಳಿದಂತಿದೆ. ಬೇರೆ ವ್ಯಾಖ್ಯಾನ ಕಾರರು ಹಾಗೇ ವ್ಯಾಖ್ಯಾನಿಸಿದ್ದಾರೆ.

---

೧. ಕಲ್ಪಾಂತೈಃ ಕಲ್ಪಾವಧಿಭಿರತ ಏವ ಕಾಲೇನ ನಿರ್ಧೂತೈರ್ವಿನಾಶ್ಯೈರ್ವೈಷ್ಣವಾದಿಭಿಃ ಪದೈಃ ವೈಕುಂಠಾದಿಭಿಃ ಕಿಂ ಪ್ರಯೋಜನಂ ನ ಕಿಮಪೀತ್ಯರ್ಥಃ। ಅನೇನ ಸರ್ವಾರ್ಥಾನ್ ವಿಪರೀತಾಂಶ್ಚ ಬುದ್ಧಿಃ ಸಾ ಪಾರ್ಥ ತಾಮಸೀತ್ಯುಕ್ತರೀತ್ಯಾ ಸ್ಥಾಯಿನೋ ವೈಷ್ಣವಪದಸ್ಯಾಸ್ಥಿರತ್ವಂ ಸತ್ಯಾದಿಲೋಕಾನಾಂ ಸ್ಥಿರತ್ವಂ ಚಾಭಿಸಂಹಿತವತೋ ದೈತ್ಯಸ್ಯ ಕೇವಲ ತಾಮಸ ಬುದ್ಧಿಮತ್ತ್ವಮಾವೇದಿತಂ । -ವೀರರಾಘವಃ

ಅನ್ಯೈರ್ವೈಷ್ಣವಾದಿಭಿರ್ಧ್ರುವಾದಿಪದೈಃ ಕಿಂ ಪ್ರಯೋಜನಂ। -ಶ್ರೀಧರಃ

ಧ್ರುವಪದಸ್ಯಾನಿತ್ಯತ್ವಮನನಮಸುರಸ್ವಭಾವತ್ವಾತ್ । -ವಿಶ್ವನಾಥಃ

ಆದರೆ ವೈಕುಂಠಾದಿ ಲೋಕಗಳು ಶಾಶ್ವತ ವೆಂಬುದು ಪ್ರಸಿದ್ಧ. ಹಿರಣ್ಯಕಶಿಪು ಅವನ್ನು ನಶ್ವರವೆಂದು ಹೇಗೆ ಹೇಳುತ್ತಾನೆ ಎಂಬ ಪ್ರಶ್ನೆ ಬರುತ್ತದೆ. ಇದಕ್ಕೆ ಪರಿಹಾರ ವೀರರಾಘವ ವ್ಯಾಖ್ಯಾನದಲ್ಲಿ ಹೀಗಿದೆ- ಇದು ಹಿರಣ್ಯಕಶಿಪುವಿನ ತಾಮಸ ಬುದ್ಧಿಯನ್ನು ತೋರಿಸುತ್ತದೆ. ಶಾಶ್ವತವಾದ ವೈಷ್ಣವ ಪದವಿಯನ್ನು ನಶ್ವರವೆಂದೂ, ನಶ್ವರವಾದ ಸತ್ಯಲೋಕಾದಿಗಳನ್ನು ಶಾಶ್ವತವೆಂದೂ ವಿಪರೀತವಾಗಿ ತಿಳಿಯುತ್ತಿದ್ದಾನೆ' ಎಂದು. ಶುಕದೇವ ವ್ಯಾಖ್ಯಾನವೂ ಹೀಗೇ ಹೇಳುತ್ತದೆ.

ಶ್ರೀಧರ ವ್ಯಾಖ್ಯಾನದಲ್ಲಿ ವೈಷ್ಣವ ಪದವಿಗಳೆಂದರೆ ಧ್ರುವಾದಿ ಪದವಿಗಳು. ಅವು ನಶ್ವರಗಳೆಂದಿದೆ. ಆದರೆ ವೈಷ್ಣವ ಪದವಿಗಳೆಂದು ಪ್ರಸಿದ್ಧವಾದ ವೈಕುಂಠಾದಿಗಳನ್ನು ಬಿಟ್ಟು ಅಪ್ರಸಿದ್ಧವಾದ ಧ್ರುವಾದಿಪದವಿಗಳನ್ನು ಆ ಶಬ್ದದಿಂದ ಇಟ್ಟುಕೊಂಡು ನಶ್ವರ ಎಂಬ ಮಾತನ್ನು ಕೂಡಿಸುವುದು ಸ್ವರಸವಲ್ಲ.

ವಿಶ್ವನಾಥ ವ್ಯಾಖ್ಯಾನದಲ್ಲಿ ಧ್ರುವಾದಿಪದವಿಯೂ ಶಾಶ್ವತವಾಗಿದ್ದು ಅವುಗಳನ್ನು ನಶ್ವರವೆಂದು ಹಿರಣ್ಯಕಶಿಪು ಹೇಳಿದ್ದು ಅವನ ಅಸುರಸ್ವಭಾವವನ್ನು ತೋರಿಸುತ್ತದೆ ಎನ್ನಲಾಗಿದೆ. ಇದೂ ಅಸಂಗತ. ಧ್ರುವಾದಿ ಪದವಿ ಶಾಶ್ವತವಲ್ಲ. ವೈಕುಂಠಾದಿಲೋಕಗಳಲ್ಲಿರುವ ಮುಕ್ತಸ್ಥಾನ ಮಾತ್ರ ಶಾಶ್ವತ. 'ಅದನ್ನೂ ನಶ್ವರವೆನ್ನುತ್ತಾನೆ ಹಿರಣ್ಯಕಶಿಪು, ಇದು ತಾಮಸಬುದ್ಧಿ' ಎಂದು ವೀರರಾಘವ ವ್ಯಾಖ್ಯಾನ ಹೇಳುವುದು ಪೂರ್ವೋತ್ತರವಿರುದ್ಧ. ಹಿರಣ್ಯಕಶಿಪು ಹಿಂದೆ ದಿತಿಗೆ ಉಪದೇಶಿಸಿದ್ದು, ಮುಂದೆ ಬ್ರಹ್ಮ ಪ್ರತ್ಯಕ್ಷನಾದಾಗ ಅವನ ಸ್ತೋತ್ರ ಮಾಡುವುದು ಎರಡೂ ಪರಮ ಸಾತ್ವಿಕವಾಗಿದೆ. ಅವನು ಅಸುರನಾಗಿ ಹುಟ್ಟಿದ್ದಾನೆ ಅಸುರಾವೇಶ ಯುಕ್ತನಾಗಿದ್ದಾನೆ ಎಂದ ಮಾತ್ರಕ್ಕೆ ಅವನು ಆಡುವುದೆಲ್ಲ ವಿಪರೀತ, ತಾಮಸ ಬುದ್ಧಿಯ ಮಾತುಗಳು ಎನ್ನಲಾಗದು. ಅದರಿಂದ ಹೀಗೆ ಸಮಾಧಾನ ಹೇಳಬೇಕು-

ವೈಷ್ಣವಾದಿಭಿರ್ಬ್ರಹ್ಮನಿರ್ಮಿತೈಃ।
ಬ್ರಹ್ಮಾ ಸ್ವಯಂಭೂರ್ದ್ರುಹಿಣೋ ವೈಷ್ಣವಃ ಶತಧೃಕ್ ತಥಾ।
ಇತಿ ಶಬ್ದನಿರ್ಣಯೇ ॥

'ಕಿಮನ್ಯೈಃ ವೈಷ್ಣವಾದಿಭಿಃ' ಎಂಬಲ್ಲಿ ವೈಷ್ಣವಾದಿ ಎಂದರೆ ವೈಷ್ಣವನೆಂದು ಹೆಸರಿನವನಾದ ಬ್ರಹ್ಮನೇ ಆದಿ, ಕಾರಣವಾಗಿ ಉಳ್ಳ, ಅಂದರೆ ಬ್ರಹ್ಮ ನಿರ್ಮಿತವಾದ ಲೋಕಗಳೆಂದರ್ಥ. ಬ್ರಹ್ಮನಿಗೆ ವೈಷ್ಣವ ಎಂದೂ ಹೆಸರಿದೆ.

ಬ್ರಹ್ಮ, ಸ್ವಯಂಭು, ದ್ರುಹಿಣ, ವೈಷ್ಣವ, ಶತಧೃಕ್ ಮುಂತಾದ ನಾಮಗಳು ಬ್ರಹ್ಮನ ಹೆಸರುಗಳೆಂದು ಶಬ್ದನಿರ್ಣಯದಲ್ಲಿ ಉಕ್ತವಾಗಿದೆ.

ಬ್ರಹ್ಮನಿರ್ಮಿತವಾದ ಎಲ್ಲ ಲೋಕಗಳೂ ನಶ್ವರ. ಧ್ರುವಾದಿ ಲೋಕಗಳೂ ನಶ್ವರ ಎನ್ನುತ್ತಿದ್ದಾನೆ ಹಿರಣ್ಯಕಶಿಪು. ಬ್ರಹ್ಮನ ಸತ್ಯಲೋಕವೂ ಬ್ರಹ್ಮಪ್ರಳಯದಲ್ಲಿ ನಾಶವಾಗುತ್ತದೆ. ಆದರೂ ಅಂದಿನವರೆಗೆ ಸ್ಥಾಯಿಯಾಗಿರುತ್ತದೆ. ಮತ್ತು 'ನಾನು ಬ್ರಹ್ಮಪದವಿಯನ್ನೇ ಹೊಂದುತ್ತೇನೆ. ಬ್ರಹ್ಮನೇ ಆಗುತ್ತೇನೆ' ಎನ್ನುವವನು ಬ್ರಹ್ಮನಿರ್ಮಿತವಾದ ಪದವಿಯನ್ನು ಬಯಸುವನೆ? ಬ್ರಹ್ಮಪದವಿ ತನಗೆ ಅಯೋಗ್ಯವೆಂದು ತಿಳಿದಿದ್ದರೂ ರಾಗೋದ್ರೇಕದಿಂದ ಅದಕ್ಕೆ ಆಶಿಸುತ್ತಿದ್ದಾನೆ ಎಂದು ಹಿಂದೆಯೇ ಹೇಳಿದೆ.

❖ ❖ ❖

ಚತುರ್ದಶಲೋಕಾಧಿಪತ್ಯರೂಪವಾದ ಬ್ರಹ್ಮಪದವಿ ಎಲ್ಲ ಬಗೆಯ ಸಂಪತ್ತಿಗೂ ಕಾರಣವಾಗಿರುವುದರಿಂದ ಅದನ್ನೇ ಪಡೆಯಬೇಕೆಂದು ಹಿರಣ್ಯಕಶಿಪು ತಪಸ್ಸು ಮಾಡುತ್ತಿದ್ದಾನೆ ಎನ್ನುತ್ತಾರೆ ಬ್ರಹ್ಮನ ಬಳಿಯಲ್ಲಿ ದೇವತೆಗಳು.

ತವಾಸನಂ ಹಿ ಜಗತಾಂ ಪಾರಮೇಷ್ಠ್ಯಂ ಜಗತ್ಪತೇ ।
ಭವಾಯ ಶ್ರೇಯಸೇ ಭೂತ್ಯೈ ಕ್ಷೇಮಾಯ ವಿಜಯಾಯ ಚ ॥ ೧೪ ॥

ಜಗದೊಡೆಯನೆ, ನಿನ್ನ ಚತುರ್ದಶಲೋಕಾಧಿಪತ್ಯರೂಪವಾದ ಪದವಿಯು ಲೋಕಕ್ಕೆ ಜ್ಞಾನಾದಿಗುಣವೃದ್ಧಿಗೂ ಮೋಕ್ಷಕ್ಕೂ, ಆ ಗುಣಗಳು ಹ್ರಾಸವಾಗದಿರುವುದಕ್ಕೂ, ಬಂದ ಸಂಪತ್ತು ಉಳಿಯುವುದಕ್ಕೂ ಬೇರೆ ಸಂಪತ್ತು ಲಭಿಸುವುದಕ್ಕೂ ಕಾರಣವಾಗಿದೆ. ಅದರಿಂದ ಹಿರಣ್ಯಕಶಿಪುವಿಗೆ ನಿನ್ನ ಪದವಿಯನ್ನೇ ಪಡೆಯುವಾಸೆ.

ಹಿರಣ್ಯಕಶಿಪು ಬ್ರಹ್ಮಪದವಿಯನ್ನು ಪಡೆಯಲು ಯತ್ನಿಸುತ್ತಿದ್ದಾನೆ ಎಂದು ದೇವತೆಗಳು ಬ್ರಹ್ಮನಲ್ಲಿ ದೂರುತ್ತಾರೆ. ಹೀಗೆ ಭಾಗವತದಲ್ಲಿ ಉಕ್ತವಾಗಿದೆ. ಜ್ಞಾನಿಯಾದ ಹಿರಣ್ಯಕಶಿಪು ಹೀಗೆ ಮಾಡುವುದು ಸಂಭವವೆ? ಎಂಬ ಪ್ರಶ್ನೆ ನಮಗೆ ಬರಬಹುದೆಂದು ಶ್ರೀಮದಾಚಾರ್ಯರು ನಾರದೀಯಪುರಾಣ ವಚನದ ಆಧಾರಕೊಟ್ಟು ರಾಗೋದ್ರೇಕದಿಂದಾಗಿ ಮೂಢತನದಿಂದ ಹೀಗೆ ಮಾಡುವುದು ಸಂಭವವೇ ಎಂದು ಹಿಂದೆ ಹೇಳಿದ್ದರು. ಇದೀಗ ಬ್ರಹ್ಮಾಂಡಪುರಾಣದ ಆಧಾರಕೊಟ್ಟು ಹಿರಣ್ಯಕಶಿಪು ಬ್ರಹ್ಮಪದವಿಯನ್ನು ಬಯಸಿದ್ದನೆಂದೂ ಇದರಲ್ಲಿ ಸಂಶಯ ಬೇಡವೆಂದೂ ಹೇಳುತ್ತಾರೆ. ಜೊತೆಗೆ ಬ್ರಹ್ಮಪದವಿಗೆ ಯೋಗ್ಯರಾದ ಋಜುಯೋಗಿಗಳು ಲೋಕಕ್ಕೆ ಜ್ಞಾನಭಕ್ತ್ಯಾದಿಗಳನ್ನಿತ್ತು ಅವು ಹ್ರಾಸವಾಗದಂತೆಯೂ

ನೋಡಿಕೊಂಡು ಮೋಕ್ಷ ನೀಡುವುದಕ್ಕಾಗಿ ಬ್ರಹ್ಮಪದವಿಯನ್ನು ಬಯಸುತ್ತಾರೆ. ಅಯೋಗ್ಯರು ಹಿರಣ್ಯಕಶಿಪು ಮಧು ಕೈಟಭ ಮುಂತಾದವರು ಲೌಕಿಕ ಸುಖಸಂಪತ್ತಿಗಾಗಿ ಅದನ್ನು ಬಯಸುತ್ತಾರೆ. ಉಳಿದವರು ಯಾರೂ ಹಾಗೆ ಮಾಡುವುದಿಲ್ಲ ಎಂದೂ ತಿಳಿಸುತ್ತಾರೆ. ಅದಕ್ಕಾಗಿಯೇ 'ಭವ ಶ್ರೇಯಸ್ ಭೂತಿ' ಎಂಬ ಶಬ್ದಗಳಿಗೆ ಪ್ರಸಿದ್ಧವಾದ ಸಾಮಾನ್ಯ ಅರ್ಥವನ್ನು ಬಿಟ್ಟು ಶಬ್ದನಿರ್ಣಯದ ಆಧಾರದಿಂದ ಭವವೆಂದರೆ ಜ್ಞಾನಭಕ್ತ್ಯಾದಿ ವೃದ್ಧಿ, ಭೂತಿ ಎಂದರೆ ಆ ಗುಣಗಳು ಹ್ರಾಸವಾಗದಿರುವುದು, ಶ್ರೇಯಸ್ಸೆಂದರೆ ಮೋಕ್ಷ ಎಂಬ ವಿಶೇಷಾರ್ಥವನ್ನು ತೋರಿಸುತ್ತಾರೆ. ಬ್ರಹ್ಮಪದವಿ ಎಂದರೆ ಜಗದ್ಗುರುಪದವಿ ಎಂದು ಸ್ಪಷ್ಟಪಡಿಸುತ್ತಾರೆ. ಬೇರೆ ವ್ಯಾಖ್ಯಾನಕಾರರು ಈ ಶಬ್ದಗಳಿಗೆ ಪ್ರಸಿದ್ಧವಾದ ಸಾಮಾನ್ಯ ಅರ್ಥವನ್ನಿಟ್ಟುಕೊಂಡು ಬ್ರಹ್ಮಪದವಿಯೂ ಐಹಿಕ ಸುಖ ಭೋಗಕ್ಕಾಗಿ ಇರುವ ಒಂದು ಪದವಿ ಎಂದು ಭಾವನೆ ಬರುವಂತೆ ವ್ಯಾಖ್ಯಾನಿಸಿದ್ದಾರೆ.

ಭವಾಯ ಶ್ರೇಯಸೇ ಚೈವ ನ ಕಶ್ಚಿತ್ತದಪೇಕ್ಷತೇ ।
ಮಧುಕೈಟಭಯೋಶ್ಚೈವ ಹಿರಣ್ಯಾದೇಸ್ತಥೈವ ಚ ।
ನಾನ್ಯೋ ಬ್ರಹ್ಮಪದಂ ವಾಂಛತ್ಯೃಜೂನ್ ಯೋಗ್ಯಾನ್ ವಿನಾ ಕ್ವಚಿತ್ ।
ತತಃ ಶ್ರೇಯಾಂಸಿ ವಾಂಛಂತಿ ನತು ತತ್ ಪದಮಾಪ್ತವೇ ।
ಇತಿ ಬ್ರಹ್ಮಾಂಡೇ ॥

ಭವೋ ವೃದ್ಧಿಃ ಸಮುದ್ದಿಷ್ಟಾ ಶ್ರೇಯೋ ಮೋಕ್ಷ ಉದಾಹೃತಃ ।
ವೃದ್ಧಸ್ಯ ನ ಪುನರ್ಹ್ರಾಸೋ ಭೂತಿರಿತ್ಯೇವ ಕಥ್ಯತೇ ।
ಇತಿ ಶಬ್ದನಿರ್ಣಯೇ ॥

ಲೌಕಿಕ ಸಮೃದ್ಧಿಗಾಗಿ ಸುಖಕ್ಕಾಗಿ ವಿವೇಕಿಯಾದವನು ಯಾರೂ ಬ್ರಹ್ಮಪದವಿಯನ್ನು ಅಪೇಕ್ಷಿಸುವುದಿಲ್ಲ. ಏಕೆಂದರೆ ಅದು ಜಗದ್ಗುರುವಿನ ಪದವಿ. ಆ ಪದವಿಗೆ ಅಯೋಗ್ಯರಾದ ಮಧುಕೈಟಭರು ಮತ್ತು ಹಿರಣ್ಯಕಶಿಪು ಮುಂತಾದವರನ್ನೂ ಯೋಗ್ಯರಾದ ಋಜುಯೋಗಿಗಳನ್ನೂ ಹೊರತುಪಡಿಸಿ ಬೇರೆ ಯಾರೂ ಆ ಪದವಿಯನ್ನು ಬಯಸುವುದೇ ಇಲ್ಲ. ಎಲ್ಲರೂ ಬ್ರಹ್ಮನಿಂದ ಮೋಕ್ಷಾದಿ ಪುರುಷಾರ್ಥಗಳನ್ನು ಬಯಸುತ್ತಾರೆ ಹೊರತು ಅವನ ಪದವಿಯನ್ನು ಹೊಂದಲು ಬಯಸುವುದಿಲ್ಲ ಎಂದು ಬ್ರಹ್ಮಾಂಡಪುರಾಣದಲ್ಲಿ ಉಕ್ತವಾಗಿದೆ.

ಭವ ಎಂದರೆ ಜ್ಞಾನಭಕ್ತ್ಯಾದಿಗುಣಗಳ ವೃದ್ಧಿ. ಶ್ರೇಯಸ್ಸೆಂದರೆ ಮೋಕ್ಷ. ಭೂತಿ ಎಂದರೆ ವೃದ್ಧಿ ಹೊಂದಿದ ಗುಣಗಳು ತಿರುಗಿ ಹ್ರಾಸ ಹೊಂದದಿರುವುದು ಎಂದು ಶಬ್ದನಿರ್ಣಯದಲ್ಲಿ ಉಕ್ತವಾಗಿದೆ.

ಪ್ರಚಲಿತ ಪಾಠದಲ್ಲಿ 'ತತ್ಪದಮಾಪ್ತಯೇ' ಎಂದಿದೆ. ಆದರೆ ದ್ವಿತೀಯಾ ವಿಭಕ್ತಿ ಕೂಡುವುದಿಲ್ಲ. ಅದಕ್ಕಿಂತ ಹೃಷೀಕೇಶತೀರ್ಥರ ಪಾಠದಲ್ಲಿ 'ತತ್ಪದಂ ಆಪ್ತವೇ' ಎಂದಿದೆ, 'ಆಪ್ತವೇ' ಎಂದರೆ 'ಆಪ್ತುಂ' 'ಹಂತವೇ' ಎಂಬಂತೆ ಇದಕ್ಕೆ ದ್ವಿತೀಯಾವಿಭಕ್ತಿ ಕೂಡುತ್ತದೆ, ಎಂದು ಅದೇ ಪಾಠವನ್ನಿಟ್ಟುಕೊಳ್ಳಲಾಗಿದೆ.

❖ ❖ ❖

ಹಿರಣ್ಯಕಶಿಪು ತಪಸ್ಸು ಮಾಡಿದ್ದು ಭಗವಂತನ ಪ್ರೀತಿಗಾಗಿ ಅಲ್ಲ. ಹಾಗೆ ತಪಸ್ಸು ಮಾಡುತ್ತಿದ್ದರೆ ಲೋಕಕ್ಕೆ ಸುಖವೇ ಆಗುತ್ತಿತ್ತು. ಆದರೆ ಈತ ಅಯೋಗ್ಯವಾದ ಬ್ರಹ್ಮಪದವಿಗಾಗಿ ಕ್ರೂರವಾದ ತಪಸ್ಸು ಮಾಡಿದ. ಅದರಿಂದ ಲೋಕ ತಪೋಜ್ವಾಲೆಯಲ್ಲಿ ಬೇಯಲು ತೊಡಗಿತು. ಅದರಿಂದ ಬ್ರಹ್ಮದೇವರು ಬೇಗನೆ ಅವನಿಗೆ ವರ ನೀಡಿ ತಪಸ್ಸನ್ನು ನಿಲ್ಲಿಸುವ ಉದ್ದೇಶದಿಂದ ಬಂದರು.

ತಪಂತಂ ತಪಸಾ ಲೋಕಾನ್ ಯಥಾ ಭಾವಿತತಂ ರವಿಮ್ ।
ವಿಲಕ್ಷ್ಯ ವಿಸ್ಮಿತಃ ಪ್ರಾಹ ಹಸಂಸ್ತಂ ಹಂಸವಾಹನಃ ॥ ೧೭ ॥

ತೇಜಃಪುಂಜನಾದ ಸೂರ್ಯನಂತೆ ಲೋಕವನ್ನು ತಪೋಜ್ವಾಲೆಯಿಂದ ಸುಡುತ್ತಿದ್ದ ಹಿರಣ್ಯಕಶಿಪುವನ್ನು ಕಂಡು ಬ್ರಹ್ಮದೇವರು ಅಚ್ಚರಿಗೊಂಡು ಅಯೋಗ್ಯವಾದ ಅಲಭ್ಯವಾದ ಪದವಿಗಾಗಿ ಮಹಾಪ್ರಯತ್ನವನ್ನು ವ್ಯರ್ಥವಾಗಿ ಮಾಡುತ್ತಿದ್ದಾನೆ ಎಂಬ ಭಾವದಿಂದ ನಗುತ್ತ ನುಡಿದರು.

ಇಲ್ಲಿ ಹಿರಣ್ಯಕಶಿಪು ತಪಸ್ಸು ಮಾಡಿದಾಗ ಲೋಕವೇಕೆ ತಾಪಕ್ಕೆ ಈಡಾಗುತ್ತದೆ? ಎಂಬ ಪ್ರಶ್ನೆಗೆ ಬೇರೆ ವ್ಯಾಖ್ಯಾನಕಾರರಲ್ಲಿ ಸಮಾಧಾನವಿಲ್ಲ. ಫಲಕಾಮನೆಯಿಂದ ಕ್ರೂರವಾದ ತಪಸ್ಸು ಮಾಡಿದರೆ ಲೋಕಕ್ಕೆ ತಾಪವಾಗುತ್ತದೆ. ನಿಷ್ಕಾಮನೆಯಿಂದ ಭಗವಂತನ ಪ್ರೀತಿಗಾಗಿ ತಪಸ್ಸು ಮಾಡಿದರೆ ಲೋಕಕ್ಕೆ ಶಾಂತಿ ದೊರಕುತ್ತದೆ ಎಂಬುದನ್ನು ಪ್ರಕಾಶಿಕಾವಚನದ ಆಧಾರದಿಂದ ಶ್ರೀಮದಾಚಾರ್ಯರು ಸ್ಪಷ್ಟಪಡಿಸುತ್ತಾರೆ. ಹಿರಣ್ಯಕಶಿಪು ಬ್ರಹ್ಮಪದವಿಯ ಕಾಮನೆಯಿಂದ ಕ್ರೂರ ತಪಸ್ಸನ್ನು ಮಾಡುತ್ತಿದ್ದಾನೆ. ಅದರಿಂದ ಲೋಕಕ್ಕೆ ತಾಪ. ಆತ ಬ್ರಹ್ಮಪದವಿಯನ್ನು ಬಯಸಿ ತಪಸ್ಸು

ಮಾಡಿದನೆನ್ನಲು ಹಿಂದೆ ಬ್ರಹ್ಮಾಂಡಪುರಾಣದ ವಚನವನ್ನು ಉದಾಹರಿಸಿದ್ದರು. ಆದರೆ ಅಲ್ಲಿ ಹಿರಣ್ಯಕಶಿಪು ಬ್ರಹ್ಮಪದವಿಯನ್ನು ಬಯಸಿದ್ದ ಎಂದು ಮಾತ್ರ ಹೇಳಿದೆ. ಆ ಬಯಕೆಯಿಂದ ತಪಸ್ಸು ಮಾಡಿದ್ದನೆಂದು ಹೇಳಿಲ್ಲ. ಇದೀಗ ಸ್ಕಾಂದಪುರಾಣ ವಚನವನ್ನು ಉದಾಹರಿಸುತ್ತಿದ್ದಾರೆ. ಅದರಲ್ಲಿ ಇದು ಸ್ಪಷ್ಟವಾಗಿ ಉಕ್ತವಾಗಿದೆ.

ಸಕಾಮಂ ತು ತಪಃ ಕ್ರೂರಂ ಲೋಕಾನಾಂ ಭಯಕೃದ್ ಭವೇತ್ ।
ಇತರಚ್ಛಾಂತಯೇ ಸರ್ವಲೋಕಾನಾಂ ಭವತಿ ಧ್ರುವಂ॥

ಇತಿ ಪ್ರಕಾಶಿಕಾಯಾಂ ॥

ಬ್ರಹ್ಮಾಣಮಭಜದ್ ಬ್ರಹ್ಮಪದಾರ್ಥಂ ಸ ಹಿರಣ್ಯಕಃ ॥

ಇತಿ ಸ್ಕಾಂದೇ ॥

ಫಲಕಾಮನೆಯಿಂದ ಮಾಡುವ ಕ್ರೂರತಪಸ್ಸು ಲೋಕಗಳಿಗೆ ತಾಪಕರವಾಗುತ್ತದೆ. ಭಗವತ್ಪ್ರೀತಿಗಾಗಿ ಮಾಡುವ ಸೌಮ್ಯವಾದ ತಪಸ್ಸು ಎಲ್ಲ ಲೋಕಗಳಿಗೂ ನಿಶ್ಚಯವಾಗಿ ಸುಖದಾಯಕವಾಗುತ್ತದೆ, ಎಂದು ಪ್ರಕಾಶಿಕಾ ಗ್ರಂಥದಲ್ಲಿ ಉಕ್ತವಾಗಿದೆ.

ಹಿರಣ್ಯಕಶಿಪು ಬ್ರಹ್ಮಪದವಿಗಾಗಿ ಬ್ರಹ್ಮನನ್ನು ಕುರಿತು ತಪಸ್ಸು ಮಾಡಿದನೆಂದು ಸ್ಕಾಂದಪುರಾಣದಲ್ಲಿ ಹೇಳಿದೆ.

❖ ❖ ❖

'ಹಿರಣ್ಯಕಶಿಪು, ನೀನು ತಪಸ್ಸಿನಿಂದ ನನ್ನನ್ನು ಒಲಿಸಿಕೊಂಡು ವಶಪಡಿಸಿಕೊಂಡಿರುವೆ' ಎಂದು ಬ್ರಹ್ಮದೇವರು ಹೇಳುತ್ತಾರೆ.

ವ್ಯವಸಾಯೇನ ತೇಽನೇನ ದುಷ್ಕರೇಣಾಮನಸ್ವಿಭಿಃ ।
ತಪೋನಿಷ್ಠೇನ ಭವತಾ ಜಿತೋಽಹಂ ದಿತಿನಂದನ ॥ ೨೦ ॥

ದಿತಿ ಕುಮಾರನೆ, ಮನೋಬಲವಿಲ್ಲದ ಬೇರೆಯವರಿಗೆ ಮಾಡಲಾಗದಂಥ ಸಾಧನೆ ನಿನ್ನದು. ಅದನ್ನು ಕಂಡು ತಪೋನಿಷ್ಠೆಯುಳ್ಳ ನಿನಗೆ ನಾನು ವಶನಾಗಿ ಹೋಗಿದ್ದೇನೆ.

ಇಲ್ಲಿ 'ಜಿತೋಽಹಂ' ಎಂದರೆ 'ನಾನು ಪರಾಜಿತನಾಗಿದ್ದೇನೆ' ಎಂದು ಅರ್ಥಗ್ರಹಿಸುವ ಸಂಭವವಿದೆ. ಏಕೆಂದರೆ ಸಕರ್ಮಕ 'ಜಿ' ಧಾತುವಿಗೆ ಅಭಿಭವ, ಪರಾಜಯಗೊಳಿಸುವುದು ಮುಖ್ಯವಾದ ಅರ್ಥ. ಆದರೆ ಹಿರಣ್ಯಕಶಿಪು ಬ್ರಹ್ಮನನ್ನು

ಪರಾಜಯಗೊಳಿಸುವುದಕ್ಕಾಗಿ ಈಗ ತಪಸ್ಸು ಮಾಡುತ್ತಿಲ್ಲ. ಆತನನ್ನು ಮೆಚ್ಚಿಸಿ ವಶಪಡಿಸಿಕೊಳ್ಳಬೇಕಾಗಿದೆ. ದುರ್ಲಭವಾದ ವರವನ್ನು ಪಡೆಯಬೇಕಾಗಿದೆ. ವರಬಲದಿಂದ ಕೊನೆಯಲ್ಲಿ ಅವನ ಪದವಿಯನ್ನು ಆಕ್ರಮಿಸಬೇಕು, ಅವನನ್ನು ಪರಾಜಯಗೊಳಿಸಬೇಕು ಎಂದು ಆಸೆ. ಆದ್ದರಿಂದ ಬ್ರಹ್ಮದೇವರು 'ಈತ ತಪಸ್ಸನ್ನು ನಿಲ್ಲಿಸಲಿ' ಎಂಬ ಅಭಿಪ್ರಾಯದಿಂದ ನಾನು ನಿನಗೆ ವಶನಾಗಿದ್ದೇನೆ ಎನ್ನುತ್ತಾರೆ. ಬೇರೆ ವ್ಯಾಖ್ಯಾನಕಾರರು 'ಜಿತ' ಶಬ್ದಕ್ಕೆ ವ್ಯಾಖ್ಯಾನ ಮಾಡುವುದಿಲ್ಲ. ಗಿರಿಧರ ವ್ಯಾಖ್ಯಾನದಲ್ಲಿ ಮಾತ್ರ 'ವಶೀಕೃತ' ಎಂದು ವಿವರಣೆ ಕಾಣುತ್ತದೆ. ಆದರೆ ಅದಕ್ಕೆ ಕೋಶವ್ಯಾಕರಣಗಳ ಆಧಾರವನ್ನು ತೋರಿಸಿಲ್ಲ. ಶ್ರೀಮದಾಚಾರ್ಯರು ಶಬ್ದನಿರ್ಣಯದ ವಚನವನ್ನು ಉದಾಹರಿಸುತ್ತಾರೆ.

ಜಿತಃ ವಶೀಕೃತಃ ।

ಪರಾಭೂತಂ ವಶಸ್ಥಂ ಚ ಜಿತಮಿತ್ಯುಚ್ಯತೇ ಬುಧೈಃ ।

ಇತಿ ಶಬ್ದನಿರ್ಣಯೇ ॥

'ಜಿತೋಽಹಂ' ಎಂಬಲ್ಲಿ ಜಿತ ಎಂದರೆ ವಶೀಕೃತ ಎಂದರ್ಥ.

ಪರಾಜಿತ ಮತ್ತು ವಶೀಕೃತ ಎರಡೂ ಜಿತವೆನಿಸುತ್ತದೆ ಎಂದು ಶಬ್ದನಿರ್ಣಯದಲ್ಲಿ ಉಕ್ತವಾಗಿದೆ.

❖ ❖ ❖

ಬ್ರಹ್ಮದೇವರು ಹಿರಣ್ಯಕಶಿಪುವಿಗೆ ವರ ನೀಡಲು ಪ್ರತ್ಯಕ್ಷರಾಗಿ ನಿಂತಾಗ ಹಿರಣ್ಯಕಶಿಪು ಆನಂದ ತುಂದಿಲನಾಗಿ ಗದ್ಗದ ಕಂಠದಿಂದ ಸ್ತೋತ್ರಗೈದ.

ಹಿರಣ್ಯಕಶಿಪುರುವಾಚ-

ಕಲ್ಪಾಂತೇ ಕಾಲಸೃಷ್ಟೇನ ಯೋಽಂಧೇನ ತಮಸಾಽಽವೃತಮ್ ।
ಅಭಿವ್ಯನಗ್ ಜಗದಿದಂ ಸ್ವಯಂಜ್ಯೋತಿಃ ಸ್ವರೋಚಿಷಾ ॥ ೨೭ ॥

ಆತ್ಮನಾ ತ್ರಿವೃತಾ ಚೇದಂ ಸೃಜತ್ಯವತಿ ಲುಂಪತಿ ।
ರಜಃಸತ್ತ್ವತಮೋಧಾಮ್ನೇ ಪರಾಯ ಮಹತೇ ನಮಃ ॥ ೨೮ ॥

ಹಿರಣ್ಯಕಶಿಪು ನುಡಿದ- ಕಲ್ಪಾಂತ್ಯದಲ್ಲಿ ಪ್ರಳಯಕಾಲ ಪ್ರವರ್ತಕನಾದ ಶ್ರೀಹರಿ ದುರ್ಗಾಭಿಮನ್ಯಮಾನವಾದ ಗಾಢವಾದ ಕತ್ತಲನ್ನು ಸೃಜಿಸಿದ. ಅದರಿಂದ ಈ ಜಗತ್ತು ಆವೃತವಾಯಿತು. ಬಳಿಕ ಸೃಷ್ಟಿ ಕಾಲದಲ್ಲಿ ಸ್ವತಂತ್ರ

ಜ್ಯೋತಿಯಾದ ಆ ಹರಿಯೇ ತನ್ನ ತೇಜಸ್ಸಿನಿಂದ ಕತ್ತಲನ್ನು ಸರಿಸಿ ಜಗತ್ತನ್ನು ಅಭಿವ್ಯಕ್ತಿಗೊಳಿಸಿದ.

ಅವನೇ ಪ್ರಕೃತಿಯಿಂದ ಜಗತ್ತನ್ನು ಸೃಜಿಸುತ್ತಾನೆ, ಪಾಲಿಸುತ್ತಾನೆ, ಲಯಗೊಳಿಸುತ್ತಾನೆ. ಈ ಸೃಷ್ಟಿಸ್ಥಿತಿಲಯಗಳಿಗಾಗಿ ರಜ ಸತ್ವತಮಸ್ಸುಗಳಿಗೆ ಆಶ್ರಯನೆನಿಸುವ ಗುಣಪೂರ್ಣನಾದ ಸರ್ವೋತ್ತಮನಾದ ಹರಿಗೆ ನಮಸ್ಕಾರ.

ಇಲ್ಲಿ ಶ್ರೀಹರಿಯೇ ಸರ್ವಕರ್ತನಾದ ಭಗವಂತ. ಚತುರ್ಮುಖ ಬ್ರಹ್ಮನಲ್ಲ. ಬ್ರಹ್ಮ ಪ್ರತ್ಯಕ್ಷನಾಗಿ ನಿಂತಾಗ ಅವನನ್ನು ಸರ್ವಕರ್ತ ಎಂದು ಹಿರಣ್ಯಕಶಿಪು ಹೇಗೆ ಸ್ತುತಿಸುತ್ತಾನೆ? ಎಂಬ ಪ್ರಶ್ನೆ ಬರುತ್ತದೆ. ಇದಕ್ಕೆ ಶ್ರೀಧರ ವ್ಯಾಖ್ಯಾನ ಪ್ರಕಾರ ಸಮಾಧಾನ ಹೀಗೆ- ತ್ರಿಮೂರ್ತಿಗಳಲ್ಲಿ ಭೇದವಿಲ್ಲ. ಮೂವರೂ ಪರಬ್ರಹ್ಮ ಸ್ವರೂಪರೆ. ಮೂವರಿಗೂ ತಮ್ಮ ಸ್ವರೂಪ ಅವಿದ್ಯೆಯಿಂದ ತಿರೋಹಿತವಾಗಿಲ್ಲ. ಮೂವರೂ ಮಾಯಾಶಕ್ತಿಯಿಂದ ಈಶ್ವರರೆನಿಸಿದ್ದಾರೆ.

ಭುಂಕ್ತೇ ಸ್ಥಿತೋ ಧಾಮನಿ ಪಾರಮೇಷ್ಠ್ಯೇ
ಅವ್ಯಕ್ತ ಆತ್ಮಾ ಪುರುಷಃ ಪುರಾಣಃ (ಶ್ಲೋಕ ೩೪)

ಎಂಬಲ್ಲಿ ಶ್ರೀಧರವ್ಯಾಖ್ಯಾನ ಹಾಗೇ ಹೇಳಿದೆ. ಅದರಿಂದ ಬ್ರಹ್ಮನನ್ನು ಶ್ರೀಹರಿಯೆಂದು ಹಿರಣ್ಯಕಶಿಪು ಸ್ತೋತ್ರ ಮಾಡಿದ್ದು ಎಲ್ಲವೂ ಸಮರ್ಪಕವೇ ಆಗಿದೆ ಎಂದು. ಆದರೆ 'ಏಕೋ ನಾರಾಯಣ ಆಸೀನ್ನ ಬ್ರಹ್ಮಾ ನ ಚ ಶಂಕರಃ' ಎಂದು ಪ್ರಳಯಕಾಲದಲ್ಲಿಯೂ ಅಳಿವಿಲ್ಲದೆ ಉಳಿಯುವ ನಾರಾಯಣನೇ ಭಗವಂತ, ಅಳಿದುಹೋಗುವ ಬ್ರಹ್ಮರುದ್ರರು ಜೀವರು. ಅಂಥ ಬ್ರಹ್ಮನನ್ನು ಭಗವಂತನೆಂದು ಸ್ತುತಿಸುವುದು ಸರಿಯಲ್ಲ ಎಂಬ ಅನುಪಪತ್ತಿ ಪರಿಹಾರವಾಗಿಲ್ಲ.

ಇದಕ್ಕೆ ವೀರರಾಘವ ವ್ಯಾಖ್ಯಾನದಲ್ಲಿ ಹಿರಣ್ಯಕಶಿಪು ತಾಮಸನಾದ್ದರಿಂದ ಜೀವನನ್ನು ಈಶ್ವರನೆಂದು, ಅಥವಾ ಈಶ್ವರನಂತೆ ಸರ್ವಕರ್ತನೆಂದು ಸ್ತುತಿಸುತ್ತಿದ್ದಾನೆ ಎಂದಿದೆ. ಶುಕದೇವ ವ್ಯಾಖ್ಯಾನವೂ ಹಾಗೇ ಹೇಳಿದೆ. ಹಿರಣ್ಯಕಶಿಪು ರಾಜಸನಾದ್ದರಿಂದ ಹಾಗೆ ಸ್ತುತಿಸುತ್ತಾನೆ ಎಂದು ಭಗವತ್ಪ್ರಸಾದ ವ್ಯಾಖ್ಯಾನ ಹೇಳಿದೆ. ಆದರೆ ವೈಕುಂಠದ ದ್ವಾರಪಾಲಕನಾದ ಒಬ್ಬ ದೇವತೆ ಹಿರಣ್ಯಕಶಿಪು ರಾಜಸನೋ ತಾಮಸನೋ ಆಗುವುದಿಲ್ಲ. ಕೆಲವೊಮ್ಮೆ ಹರಿಯನ್ನು ದ್ವೇಷಿಸಿದರೂ ಅದು ಅಸುರಾವೇಶದಿಂದ. ಅದರಿಂದ ಈ ಸಮಸ್ಯೆಗೆ ಬೇರೆ ಪರಿಹಾರ ಹೇಳಬೇಕು.

'ಆತ್ಮನಾ ತ್ರಿವೃತಾ ಚೇದಂ' ಎಂಬಲ್ಲಿ ತ್ರಿವೃತ್ ಎಂದರೆ ಸತ್ವರಜಸ್ತಮಸ್ಸೆಂಬ ಮೂರು ಗುಣಉಳ್ಳ ಪ್ರಕೃತಿ ಎನ್ನುವುದು ಪ್ರಸಿದ್ಧ. ಆದರೆ 'ಆತ್ಮ' ಶಬ್ದಕ್ಕೆ ಅದು

ವಿಶೇಷಣವಾಗಿದೆ. ಆತ್ಮ ತ್ರಿಗುಣಮಯನಲ್ಲ ಎಂಬ ಪ್ರಶ್ನೆ ಬರುತ್ತದೆ. ಇದಕ್ಕೆ ಶುಕದೇವ ವ್ಯಾಖ್ಯಾನದಲ್ಲಿ 'ತ್ರೀನ್ ಗುಣಾನ್ ವೃಣೋತಿ ನಿಯಮ್ಯತಯಾ ಸ್ವೀಕರೋತಿ' ಮೂರು ಗುಣಗಳಿಗೆ ಪರಮಾತ್ಮ ನಿಯಾಮಕನಾಗಿದ್ದಾನೆ ಎಂದಿದೆ. ಇದಕ್ಕೆ 'ರಜಆದಿಧಾಮ್ನೇ ಆಶ್ರಯಾಯ' ಎಂದು ವಿವರಣೆ ಇದೆ. ಇದು ಪುನರುಕ್ತಿ. ಹೀಗಾಗಿ ವೀರರಾಘವ ವ್ಯಾಖ್ಯಾನದಲ್ಲಿ 'ತ್ರಿವೃತ್' ಎಂದರೆ ತ್ರಿಗುಣಾತ್ಮಕ, ತ್ರಿಗುಣಾಧಾರ ಎಂಬ ಎರಡೂ ಅರ್ಥಗಳನ್ನು ಬಿಟ್ಟು 'ಸೃಷ್ಟ್ಯಾದಿ ಶಕ್ತಿತ್ರಯವೃತಾ ಆತ್ಮನಾ' ಸೃಷ್ಟ್ಯಾದಿ ಶಕ್ತಿತ್ರಯ ಉಳ್ಳ ಪರಮಾತ್ಮ ಸೃಷ್ಟ್ಯಾದಿತ್ರಯವನ್ನು ಮಾಡುತ್ತಾನೆ ಎಂದು ವ್ಯಾಖ್ಯಾನಿಸಲಾಗಿದೆ. ಇದೂ ಪುನರುಕ್ತಿಯೆ.

ಈ ಎಲ್ಲ ವ್ಯಾಖ್ಯಾನಕಾರರೂ ತ್ರಿವೃತ್ ಎಂಬುದನ್ನು ಆತ್ಮಶಬ್ದಕ್ಕೆ ವಿಶೇಷಣವೆಂದಿಟ್ಟುಕೊಂಡಿದ್ದೇ ತಪ್ಪು. 'ತ್ರಿವೃತಾ' ತ್ರಿಗುಣಾತ್ಮಕವಾದ ಪ್ರಕೃತಿಯಿಂದ ಸೃಷ್ಟ್ಯಾದಿಗಳನ್ನು 'ಆತ್ಮನಾ' ಸ್ವತಃ ಮಾಡುತ್ತಾನೆ ಎಂದು ಸುಲಭವಾಗಿ ಅರ್ಥೈಸಲು ಶಕ್ಯವಿರುವಾಗ ಇವರು ಮಾಡುವುದು ವ್ಯರ್ಥಶ್ರಮ.

ಪ್ರಾಯಸ್ತು ಸ್ತುತಿಶಬ್ದೇಷು ಮಿಶ್ರಾ ವಾಚೋ ಹರಿಂ ವಿನಾ ।
ಕೇಚಿಜ್ಜೀವಗುಣಾಸ್ತತ್ರ ತನ್ನಿಯಂತುರ್ಹರೇಃ ಪರೇ ।
ಏಕಸ್ಥಾನ್ಯೆಕಕಾರ್ಯತ್ವಾದ್ ವಿಷ್ಣೋಃ ಪ್ರಾಧಾನ್ಯತಸ್ತಥಾ ।
ಜೀವಸ್ಯ ತದಧೀನತ್ವಾನ್ನ ಭಿನ್ನಾಧಿಕೃತಂ ವಚಃ ॥

ಇತಿ ಬ್ರಹ್ಮತರ್ಕೇ ॥

ತ್ರಿವೃತಾ ಪ್ರಕೃತ್ಯಾ ॥

ಕೇವಲ ಹರಿಸ್ತುತಿಗಳನ್ನು ಬಿಟ್ಟರೆ ಬೇರೆ ಎಲ್ಲ ಸ್ತುತಿ ಶಬ್ದಗಳಲ್ಲಿಯೂ ಹೆಚ್ಚಾಗಿ ಜೀವ ಈಶ್ವರರಿಬ್ಬರನ್ನೂ ಜೊತೆಯಾಗಿ ಹೇಳುವ ಮಾತುಗಳೇ ಇರುತ್ತವೆ. ಏಕೆಂದರೆ ಅವುಗಳಲ್ಲಿ ಕೆಲವು ಗುಣಗಳು ಜೀವರಲ್ಲಿ ಅಮುಖ್ಯವೃತ್ತಿಯಿಂದ ಇರುವುದುಂಟು. ಅಮುಖ್ಯವೃತ್ತಿಯಿಂದಲೂ ಕೂಡದ ಬೇರೆ ಗುಣಗಳು ಆ ಜೀವರಲ್ಲಿ ನಿಯಾಮಕನಾಗಿರುವ ಹರಿಯ ಗುಣಗಳೆಂದು ತಿಳಿಯಬೇಕು. ಎಲ್ಲ ಗುಣಗಳೂ ಮುಖ್ಯವೃತ್ತಿಯಿಂದ ಸ್ವತಂತ್ರನಾದ ಹರಿಯಲ್ಲಿಯೇ ಇರುತ್ತವೆ. ಜೀವ-ಈಶ್ವರರು ಇಬ್ಬರೂ ಒಂದೇ ಶರೀರದಲ್ಲಿರುತ್ತಾರೆ. ಸ್ತೋತ್ರ ಮಾಡುವ ಭಕ್ತನಿಗೆ ಅಭೀಷ್ಟಗಳನ್ನು ನೀಡುವ ಒಂದೇ ಕಾರ್ಯವನ್ನು ಇಬ್ಬರೂ ಮಾಡುತ್ತಾರೆ. ಆದರೆ ಅದರಲ್ಲಿ ವಿಷ್ಣು ಸ್ವತಂತ್ರ, ಜೀವ ಅವನ ಅಧೀನ. ಅದರಿಂದ ಒಂದೇ ಸ್ತುತಿಯಿಂದ

ಇಬ್ಬರನ್ನೂ ಜೊತೆಯಾಗಿಯೆ, ಆದರೆ ಯಥಾಯೋಗ್ಯವಾಗಿ ಹೊಗಳುತ್ತಾರೆ ಎಂದು ಬ್ರಹ್ಮತರ್ಕದಲ್ಲಿ ಉಕ್ತವಾಗಿದೆ.

'ಆತ್ಮನಾ ತ್ರಿವೃತಾ' ಎಂಬಲ್ಲಿ ತ್ರಿವೃತಾ ಎಂದರೆ ಪ್ರಕೃತಿಯಿಂದ ಎಂದರ್ಥ.

❖ ❖ ❖

ಮುಖ್ಯಪ್ರಾಣ ಬ್ರಹ್ಮನಿಗೆ ಸಮಾನ, ವಿಷ್ಣುವಿಗೆ ಅಧೀನ. ಅಂಥ ಪ್ರಾಣನೊಂದಿಗೆ ಬ್ರಹ್ಮವಿಷ್ಣುಗಳನ್ನು ಹಿರಣ್ಯಕಶಿಪು ಸ್ತೋತ್ರ ಮಾಡುತ್ತಾನೆ.

ತ್ವಮೀಶಿಷೇ ಜಗತಸ್ತಸ್ಥುಷಶ್ಚ
ಪ್ರಾಣೇನ ಮುಖ್ಯೇನ ಪತಿಃ ಪ್ರಜಾನಾಮ್ ।
ಚಿತ್ತಸ್ಯ ಚಿತ್ತಿರ್ಮನ ಇಂದ್ರಿಯಾಣಾಂ
ಪತಿರ್ಮಹಾಭೂತಗುಣಾಶಯೇಶಃ ॥ ೩೦ ॥

ಶ್ರೀಹರಿ, ನೀನೆ ಮುಖ್ಯಪ್ರಾಣಸಹಿತವಾದ ಜಂಗಮ ಸ್ಥಾವರಗಳಿಗೆ, ನಿಯಾಮಕನಾಗಿರುವೆ. ಬ್ರಹ್ಮನೆ, ನೀನು ಮುಖ್ಯಪ್ರಾಣನಿಂದೊಡಗೂಡಿ ಜಂಗಮ ಸ್ಥಾವರಗಳನ್ನು ನಿಯಂತ್ರಿಸುವೆ. ಎಲ್ಲ ಜೀವಿಗಳನ್ನು ಕಾಪಾಡುವೆ. ಚಿತ್ತಕ್ಕೆ ಸ್ಮರಣಶಕ್ತಿ ಕೊಡುವೆ. ಮನ ಇಂದ್ರಿಯಗಳನ್ನು ಕಾಪಾಡುವೆ. ಪಂಚ ಮಹಾಭೂತಗಳ ಶಬ್ದಾದಿಗುಣಗಳನ್ನೂ ಅಂತಃಕರಣವನ್ನೂ ಆಳುವೆ.

ಇಲ್ಲಿ ಪ್ರಾಣೇನ ಮುಖ್ಯೇನ ಈಶೀಷೇ' ಎಂದರೆ ಮುಖ್ಯಪ್ರಾಣರೂಪದಿಂದ, ಸೂತ್ರವಾಯುರೂಪದಿಂದ ಭಗವಂತ ಲೋಕವನ್ನು ಆಳುತ್ತಾನೆ ಎಂದು ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ. ಆದರೆ ಭಗವಂತ ಜಡವಾದ ವಾಯುರೂಪ ನೆನಿಸುವುದು ಅಸಂಭವ. ಅದಕ್ಕೆ ವೀರರಾಘವ ವ್ಯಾಖ್ಯಾನದಲ್ಲಿ ಮುಖ್ಯವಾಯು ವಿಗೆ ನಿರ್ವಾಹಕನಾಗಿ ಎಲ್ಲ ಜಗತ್ತನ್ನು ಆಳುತ್ತಾನೆ ಎಂದಿದ್ದಾರೆ- 'ಪ್ರಾಣೇನ ಮುಖ್ಯೇನ ಮುಖ್ಯಪ್ರಾಣೋಪಲಕ್ಷಿತಸ್ತ್ವಮೇವ, ಮುಖ್ಯಪ್ರಾಣನಿರ್ವಾಹಕ ಸ್ತ್ವಮೇವೇತ್ಯರ್ಥಃ' ಹೀಗೆ ವ್ಯಾಖ್ಯಾನಿಸುವುದು ಕ್ಲಿಷ್ಟ, ಅದರಿಂದ ಮುಖ್ಯಪ್ರಾಣ ಎಂದರೆ ಜಡವಾಯುವನ್ನು ಇಟ್ಟುಕೊಳ್ಳಬಾರದು. ಜೀವೋತ್ತಮನನ್ನಿಟ್ಟುಕೊಳ್ಳ ಬೇಕು. ತೃತೀಯಾವಿಭಕ್ತಿಗೆ 'ಸಹಿತ' ಎಂದರ್ಥ. ಮುಖ್ಯಪ್ರಾಣನಿಂದ ಸಹಿತರು, ಬ್ರಹ್ಮ ಮತ್ತು ಅವನೊಳಗಿರುವ ವಿಷ್ಣು, ಅವರು ಲೋಕವನ್ನು ಆಳುತ್ತಾರೆ. ಅಥವಾ ಮುಖ್ಯಪ್ರಾಣನಿಂದ ಸಹಿತವಾದ ಲೋಕವನ್ನು ಬ್ರಹ್ಮನೊಳಗಿರುವ ವಿಷ್ಣು ಆಳುತ್ತಾನೆ.

ಪ್ರಾಣೇನ ಸಹ ।

'ಪ್ರಾಣೇನ ಮುಖ್ಯೇನ' ಎಂಬಲ್ಲಿ ತೃತೀಯಾವಿಭಕ್ತಿಗೆ ಸಹಿತ ಎಂದರ್ಥ.

❖❖❖

'ನೀನು ವೇದಶಾಸ್ತ್ರಗಳಿಗೆ ಆಧಾರನಾಗಿದ್ದು ಲೋಕದಲ್ಲಿ ಯಜ್ಞಾದಿ ಕರ್ಮಗಳು ನಡೆಯುವಂತೆ ಮಾಡಿ ಸಂಸಾರಿಗಳಿಗೆ ಮೋಕ್ಷ ನೀಡುವೆ' ಎಂದು ಹಿರಣ್ಯಕಶಿಪು ಬ್ರಹ್ಮವಿಷ್ಣುಗಳನ್ನು ಸ್ತುತಿಸುತ್ತಾನೆ-

ತ್ವಂ ಸಪ್ತತಂತೂನ್ ವಿತನೋಷಿ ತನ್ವಾ
ತ್ರಯ್ಯಾ ಚತುರ್ಹೋತ್ರಕವಿದ್ಯಯಾ ಚ ।
ತ್ವಮೇಕ ಆತ್ಮಾಽಽತ್ಮವತಾಮನಾದಿ
ರನಂತಪಾರಃ ಕವಿರವ್ಯಯಾತ್ಮಾ ॥ ೩೦ ॥

ಮೂರು ವೇದಗಳೂ ಬ್ರಹ್ಮ ಹೋತೃ ಅಧ್ವರ್ಯು ಆಗ್ನೀಧ್ರ ಎಂಬ ನಾಲ್ಕು ಮಂದಿ ಋತ್ವಿಜರಿಂದ ನಡೆಯುವ ಯಜ್ಞ ವಿಧಾಯಕ ಶಾಸ್ತ್ರಗಳೂ ನಿನ್ನ ಶರೀರವನ್ನು ಆಶ್ರಯಿಸಿವೆ. ಇವುಗಳ ಮೂಲಕ ಎಲ್ಲ ಯಜ್ಞಕಾರ್ಯಗಳನ್ನೂ ಲೋಕದಲ್ಲಿ ಪ್ರಚಾರ ಪಡಿಸುವೆ. ಎಲ್ಲ ಜೀವಿಗಳ ಅಂತರ್ಯಾಮಿ ನೀನು. ಅನಾದಿ ನೀನು, ಅಪಾರವಾದ ಸಂಸಾರವನ್ನು ದಾಟಿಸುವವನು, ಸರ್ವಜ್ಞ, ಮುಕ್ತರಿಗೆ ಒಡೆಯ, ನೀನು.

ಇಲ್ಲಿ 'ಸಪ್ತತಂತೂನ್ ಅಗ್ನಿಷ್ಟೋಮಾದಿಯಜ್ಞಾನ್' ಸಪ್ತತಂತುಗಳೆಂದರೆ ಅಗ್ನಿಷ್ಟೋಮಾದಿ ಯಜ್ಞಗಳು ಎಂದು ಶ್ರೀಧರವ್ಯಾಖ್ಯಾನ. ಅಗ್ನಿಷ್ಟೋಮಾದಿ ಎಲ್ಲ ಯಜ್ಞಗಳೆಂದು ಅಭಿಪ್ರಾಯವಿಟ್ಟುಕೊಳ್ಳಬಹುದು. ಆದರೆ ಇದರ ವ್ಯಾಖ್ಯಾನಕ್ಕೆ ಹೊರಟ ವಂಶೀಧರ ವ್ಯಾಖ್ಯಾನದಲ್ಲಿ 'ಅಗ್ನಿಷ್ಟೋಮಾದಿ' ಎಂಬ ಆದಿಶಬ್ದದಿಂದ ಅತ್ಯಗ್ನಿಷ್ಟೋಮ, ಉಕ್ಥ್ಯ, ಷೋಡಶಿ, ವಾಜಪೇಯ, ಅಪ್ತೋರ್ಯಾಮ, ಅತಿರಾತ್ರ ಎಂಬ ಆರು ಯಜ್ಞಗಳನ್ನು ಸೇರಿಸಿಕೊಂಡು ಒಟ್ಟು ಏಳು ಸೋಮಯಾಗಗಳು ಸಪ್ತತಂತುಗಳು ಎಂದಿದೆ. ಹಾಗಾದರೆ ಏಳು ಸೋಮಯಾಗಗಳನ್ನು ಮಾತ್ರವೆ ಭಗವಂತ ನಡೆಸಿಕೊಡುತ್ತಾನೆಯೆ? ಬೇರೆ ಇಷ್ಟಿಗಳನ್ನು ಪಶುಯಾಗಗಳನ್ನು ಪಿಂಡಪಿತೃಯಜ್ಞ ಮುಂತಾದುವನ್ನು ನಡೆಸಿಕೊಡುವವನು ಯಾರು?

ಶುಕದೇವ ವ್ಯಾಖ್ಯಾನದಲ್ಲಿ 'ಸಪ್ತತಂತು' ಶಬ್ದದೊಳಗಿನ ತಂತು ಶಬ್ದಕ್ಕೆ ಯಜ್ಞ ಎಂದು ಅರ್ಥಮಾಡಿದ್ದಾರೆ.

'ತನ್ಯಂತೇ ವಿಸ್ತಾರ್ಯಂತೇ ಇತಿ ತಂತವಃ'

ಎಂದಿದ್ದಾರೆ. ಆದರೆ 'ಸಪ್ತ ತಂತು' ಎಂದರೆ 'ಏಳು ಯಜ್ಞಗಳು', ಅಗ್ನಿಷ್ಟೋಮ ಮುಂತಾದವುಗಳು, ಎಂದಿದ್ದಾರೆ. ಈಗ ಹಿಂದೆ ಹೇಳಿದ ಸಮಸ್ಯೆಯೇ ಬರುತ್ತದೆ.

ವೀರರಾಘವ ವ್ಯಾಖ್ಯಾನದಲ್ಲಿ ತಂತುಶಬ್ದಕ್ಕೆ 'ತನ್ಯಂತೇ' ಎಂದು ಯಜ್ಞಪರವಾಗಿ ವಿವರಣೆ ನೀಡಿದರೂ ಸಪ್ತತಂತುಗಳೆಂದರೆ ಏಳು ಸೋಮಯಾಗ ಗಳೆಂದು ಹೇಳಿಲ್ಲ. ಪಶು ಸೋಮ ಇಷ್ಟಿ ಸತ್ರ ಅಹೀನ ಹೋಮ ಇಷ್ಟಕಚಿದಗ್ನಿ ಎಂದು ಏಳು ಬಗೆಯಾಗಿ ನಡೆಸುವ ಎಲ್ಲ ಯಜ್ಞಗಳೆಂದೇ ಹೇಳಿದ್ದಾರೆ. ಅಥವಾ ಅಧ್ವರ್ಯು ಹೋತೃ ಪ್ರಸ್ತೋತೃ ಪ್ರತಿಹರ್ತೃ ಉದ್ಗಾತೃ ಬ್ರಹ್ಮ ಯಜಮಾನ ಈ ಏಳು ಮಂದಿ ಕೂಡಿ ನಡೆಸುವ ಎಲ್ಲ ಯಜ್ಞಗಳೂ ಆಗಬಹುದೆಂದಿದ್ದಾರೆ. ಹೀಗಾಗಿ ಹಿಂದೆ ಹೇಳಿದ ಸಮಸ್ಯೆ ಇಲ್ಲವಾಗಿದೆ. ಆದರೆ 'ಸಪ್ತತಂತು' ಶಬ್ದಕ್ಕೆ ಎಲ್ಲ ಯಜ್ಞಗಳಲ್ಲಿ ರೂಢಿ ಇಲ್ಲದಿರುತ್ತಿದ್ದರೆ ಈ ಕೇವಲ ಯೋಗದ ಪ್ರದರ್ಶನಕ್ಕೆ ಅವಕಾಶವಿರುತ್ತಿತ್ತು. ರೂಢಿ ಇದೆ.

ಸಪ್ತತಂತುರ್ಮಖೋಽಧ್ವರಃ ।

ಎಂದು ಹಲಾಯುಧ ಕೋಶವನ್ನು ಸುಮಧ್ವವಿಜಯ ವ್ಯಾಖ್ಯಾನದಲ್ಲಿ ವಿಶ್ವಪತಿತೀರ್ಥರು ತೋರಿಸಿದ್ದಾರೆ.

ಯಜ್ಞಃ ಸವೋಽಧ್ವರೋ ಯಾಗಃ ಸಪ್ತತಂತುರ್ಮಖಃ ಕ್ರತುಃ ಎಂದು ಕೋಶವನ್ನು ವಿಜಯಧ್ವಜೀಯದಲ್ಲಿಯೂ ವ್ಯಾಸತತ್ವಜ್ಞರಲ್ಲಿಯೂ ಕಾಣುತ್ತೇವೆ.

ಆದರಿಂದ 'ಸಪ್ತತಂತು' ಎಂದರೆ ಯಜ್ಞ ಎಂದಿಷ್ಟೇ ಅರ್ಥ ಹೊರತು ಏಳು ಸೋಮಯಾಗಗಳು ಎಂದರ್ಥವಲ್ಲ.

'ಸಪ್ತತಂತೂನ್ ಸಪ್ತಕ್ರತೂನ್'

ಎಂದು ತಾತ್ಪರ್ಯದಲ್ಲಿ ಹೇಳಿದಂತೆ ಕಂಡರೂ ವಸ್ತುತಃ ಅದು ಸರಿಯಾದ ಪಾಠವಲ್ಲ. ಬಾಗಲಿಂಗಪಲ್ಲಿ ಪ್ರಕಾಶನದಲ್ಲಿ ವಿಜಯಧ್ವಜೀಯ ವಾಕ್ಯ ಹಾಗೇ ಕಂಡರೂ ಗುಜರಾತ ಪ್ರಕಾಶನದ ವಿಜಯಧ್ವಜೀಯದಲ್ಲಿ 'ಸಪ್ತಕ್ರತೂನ್' ಎಂಬ ಅಂಶವಿಲ್ಲ. ಅದು ಅಪಪಾಠವೆಂದು ವ್ಯಾಸತತ್ವಜ್ಞರು ಹೇಳಿದ್ದಾರೆ. ಸರಿಯಾದ ಪಾಠ 'ಸಪ್ತತಂತೂನ್ ಕ್ರತೂನ್' ಎಂದಿದ್ದಾರೆ. ಪ್ರಸಿದ್ಧವಾದ ಹಲಾಯುಧ ಮುಂತಾದ ಕೋಶಗಳಲ್ಲಿ ಸಪ್ತತಂತು ಶಬ್ದವಿದೆ ಎಂಬ ಅಭಿಪ್ರಾಯದಿಂದ ಶ್ರೀಮದಾಚಾರ್ಯರು ಕೋಶವನ್ನು ಉದಾಹರಿಸಲಿಲ್ಲ. ಅರ್ಥವನ್ನು ಮಾತ್ರ ಹೇಳಿದ್ದಾರೆ.

ರೂಢಿ ಇದ್ದ ಮಾತ್ರಕ್ಕೆ ಯೋಗವನ್ನು ಬಿಡಬೇಕೆಂದು ಇದರ ಅರ್ಥವಲ್ಲ. ರೂಢಿಗೆ ಅನುಗುಣವಾಗಿ ಯೋಗವನ್ನು ಹೇಳಬೇಕು. ಆಗ ಅದರ ಸ್ವಾರಸ್ಯ ಹೆಚ್ಚುತ್ತದೆ.

ಸಪ್ತತಂತೂನ್ ಕ್ರತೂನ್ ।

ಸಪ್ತತಂತುಗಳನ್ನು ಎಂದರೆ ಯಜ್ಞಗಳನ್ನು ಎಂದರ್ಥ.

❖ ❖ ❖

ಶ್ರೀಹರಿಯೂ ಬ್ರಹ್ಮನೂ ಕಾಲನಿಯಾಮಕರು. ಜೀವರ ಆಯುಷ್ಯವನ್ನು ಕ್ರಮವಾಗಿ ಕಳೆಯುವವರು. ಹಾಗೇ ಜೀವರು ಬದುಕಿರುವಷ್ಟು ಕಾಲ ಜೀವರಿಗಾಗಿ ಉಸಿರಾಟವನ್ನು ಮಾಡುವವರೂ ಅವರೇ ಎಂದು ಹಿರಣ್ಯಕಶಿಪು ಬ್ರಹ್ಮನ ಮುಂದೆ ನಿಂತು ಸ್ತೋತ್ರ ಮಾಡುತ್ತಾನೆ.

ತ್ವಮೇವ ಕಾಲೋऽನಿಮಿಷೋ ಜನಾನಾಂ

ಆಯುರ್ಲವಾದ್ಯಾವಯವೈಃ ಕ್ಷಿಣೋಷಿ ।

ಕೂಟಸ್ಥ ಆತ್ಮಾ ಪರಮೇಷ್ಠ್ಯಜೋ ಮಹಾಂ-

ಸ್ತ್ವಂ ಜೀವಲೋಕಸ್ಯ ಚ ಜೀವ ಆತ್ಮಾ ॥ ೩೨ ॥

ಶ್ರೀಹರಿಯೆ, ಬ್ರಹ್ಮನೆ, ನೀನು ಕಾಲನಿಯಾಮಕ. ಸುಪ್ತಿಯಿಲ್ಲದೆ ಸದಾ ಎಚ್ಚರದಿಂದಿರುವವನು. ಜನರ ಆಯುಸ್ಸನ್ನು ಲವ ತ್ರುಟಿ ಮುಂತಾಗಿ ಕ್ರಮದಿಂದ ಕಳೆಯುವಿ. ನಿರ್ವಿಕಾರನಾಗಿದ್ದು ಜಗದೊಡೆಯನೆನಿಸಿರುವಿ. ಅತ್ಯುನ್ನತವಾದ ಲೋಕದಲ್ಲಿ ಇರುವಿ. ನೀನು ಜನನರಹಿತ, ಸರ್ವೋತ್ತಮ. ಜೀವರಿಗೆ ಪ್ರಾಣಧಾರಕ, ವ್ಯಾಪಕ.

ಇಲ್ಲಿ 'ತ್ವಂ ಜೀವಲೋಕಸ್ಯ ಜೀವಃ' ಎಂದರೇನು? 'ಜೀವಲೋಕಕ್ಕೆ ಜೀವನಹೇತು ಪರಮಾತ್ಮ' ಎಂದು ಶ್ರೀಧರವ್ಯಾಖ್ಯಾನ. ಆದರೆ ಅನ್ನದಾತನೂ ಜೀವನಹೇತುವಾಗುತ್ತಾನೆ, ಸಾಯುತ್ತಿದ್ದವನಿಗೆ ಔಷಧಿಕೊಟ್ಟು ಬದುಕಿಸುವ ವೈದ್ಯನೂ ಜೀವನಹೇತುವಾಗುತ್ತಾನೆ, ಇಂಥ ಮಹಿಮೆ ಭಗವಂತನಲ್ಲಿ ಹೇಳತಕ್ಕದ್ದಲ್ಲ. ವೀರರಾಘವ ವ್ಯಾಖ್ಯಾನದಲ್ಲಿ 'ಜೀವಯಿತಾ ಆತ್ಮಾ ತ್ವಮೇವ' ಎನ್ನುತ್ತ ಜೀವರು ಪರಮಾತ್ಮನಿಗೆ ಶರೀರಭೂತರು. ಜಡಶರೀರದಲ್ಲಿ ಉಸಿರಾಡುವ ಜೀವ ಹೇಗೆ ಆತ್ಮನೋ ಹಾಗೆ ಜೀವನಲ್ಲಿ ಭಗವಂತ ಆತ್ಮ ಎನ್ನುತ್ತಾರೆ. ಆದರೆ

ಭಗವಂತನಿಗೆ ಜೀವನು ಶರೀರಭೂತನಲ್ಲ. ಅದರಿಂದ ಈ ವ್ಯಾಖ್ಯಾನವೂ ಸರಿಯಲ್ಲ.

'ಜೀವಲೋಕಸ್ಯ ಜೀವವಚ್ಛರೀರಸ್ಯ ಜೀವಾಖ್ಯ ಆತ್ಮಾ'

'ಜೀವಂತವಾದ ಶರೀರದಲ್ಲಿರುವ ಜೀವನು ಭಗವಂತನೇ' ಎಂದು ವಿಶ್ವನಾಥವ್ಯಾಖ್ಯಾನ ಜೀವೇಶ್ವರಾಭೇದವನ್ನು ಹೇಳುವುದರಿಂದ ಅಯುಕ್ತ.

ಜೀವಶಬ್ದಕ್ಕೆ 'ಜೀವಯತಿ' ಎಂಬುದು ಮುಖ್ಯಾರ್ಥವಲ್ಲ. 'ಜೀವತೀತಿ ಜೀವಃ' ಎನ್ನಬೇಕು. ಶರೀರದಲ್ಲಿ ಉಸಿರಾಡುವವನು ಜೀವ. ಭಗವಂತ ಈ ಅರ್ಥದಲ್ಲಿ ಜೀವನೆನಿಸುವನೆ? ಎಂದರೆ ಹೌದು, ಸ್ವತಂತ್ರವಾಗಿ ಉಸಿರಾಡುವವನು ಭಗವಂತನೆ. ಅವನ ಉಪಾಸನೆಗಾಗಿ ಹಂಸಮಂತ್ರರೂಪವಾಗಿ ಉಸಿರಾಡುವವರು ಬ್ರಹ್ಮ ವಾಯುಗಳು ಎಂಬ ಅಭಿಪ್ರಾಯದಿಂದ 'ಜೀವ' ಶಬ್ದಾರ್ಥವನ್ನು ಶ್ರೀಮದಾಚಾರ್ಯರು ಹೇಳುತ್ತಾರೆ-

ಜೀವಾನಾಂ ಪ್ರಾಣಧಾರಕಃ ।

'ಜೀವಲೋಕಸ್ಯ ಜೀವಃ' ಎಂದರೆ ಜೀವರ ಶರೀರಗಳಲ್ಲಿದ್ದು, ಜೀವರಿಂದ ಉಸಿರಾಡಿಸುವುದಕ್ಕಾಗಿ, ತಾವು ಉಸಿರಾಡುವವರು ಶ್ರೀಹರಿ ಬ್ರಹ್ಮ ವಾಯುಗಳು ಎಂದರ್ಥ.

❖ ❖ ❖

ಎಲ್ಲಕ್ಕೂ ಆಧಾರ ಭಗವಂತ. ಅವನನ್ನು ಬಿಟ್ಟು ಸ್ವತಂತ್ರವಾಗಿ ಏನೂ ಇರುವುದಿಲ್ಲ. ಎಲ್ಲೆಡೆ ವ್ಯಾಪ್ತನಾದ ಅವನಲ್ಲಿಯೇ ಎಲ್ಲ ವೇದ ಉಪವೇದಗಳೂ ಆಶ್ರಯಿಸಿವೆ. ಅವನು ಅವಸ್ಥಾತ್ರಯ ರಹಿತನೆಂದು ಹಿರಣ್ಯಕಶಿಪು ಬ್ರಹ್ಮನ ಮುಂದೆ ಸ್ತೋತ್ರಮಾಡುತ್ತಾನೆ.

ತ್ವತ್ತಃ ಪರಂ ನಾಪರಮಪ್ಯನೇಜದ್
ಏಜಚ್ಚ ಕಿಂಚಿದ್ ವ್ಯತಿರಿಕ್ತಮಸ್ತಿ ।
ವಿದ್ಯಾಕಲಾಸ್ತೇ ತನವಶ್ಚ ಸರ್ವಾ
ಹಿರಣ್ಯಗರ್ಭೋಽಸಿ ಬೃಹತ್ತ್ರಿಪೃಷ್ಠಃ ॥ ೩೩ ॥

ಅತೀತವಾಗಲಿ ಭವಿಷ್ಯ, ವರ್ತಮಾನವಾಗಲಿ ಯಾವುದೇ ಸ್ಥಾವರ ಜಂಗಮ ಪದಾರ್ಥ ನಿನ್ನನ್ನು ಬಿಟ್ಟು ಇಲ್ಲ. ಎಲ್ಲದರಲ್ಲೂ ನೀನು ವ್ಯಾಪಿಸಿರುವೆ. ವೇದ ಉಪವೇದವೆಲ್ಲವೂ ನಿನ್ನ ಶರೀರವನ್ನೇ ಆಶ್ರಯಿಸಿವೆ. ಬ್ರಹ್ಮಾಂಡೋದರ, ಗುಣಪೂರ್ಣ, ಅವಸ್ಥಾತ್ರಯಾತೀತ ನೀನು.

ಇಲ್ಲಿ 'ತ್ವತ್ತಃ ವ್ಯತಿರಿಕ್ತಂ ಕಿಂಚಿನ್ನಾಸ್ತಿ' 'ನಿನಗಿಂತ ವ್ಯತಿರಿಕ್ತವಾದ ಪದಾರ್ಥ ಒಂದೂ ಇಲ್ಲ' ಎಂದುದನ್ನು ಶ್ರೀಧರವ್ಯಾಖ್ಯಾನ ಹಾಗೇ ಒಪ್ಪಿಕೊಂಡಿದೆ. ನಿನಗೆ ಶರೀರಭೂತವಲ್ಲದ ಪದಾರ್ಥ ಒಂದೂ ಇಲ್ಲ ಎಂದು ವೀರರಾಘವ ವ್ಯಾಖ್ಯಾನ ವಿವರಣೆ ನೀಡಿದೆ.

'ವಿದ್ಯಾಕಲಾಸ್ತೇ ತನವಃ' ವೇದ ಉಪವೇದಗಳೆಲ್ಲವೂ ನಿನ್ನ ಶರೀರಗಳು ಎಂದು ಹೇಳಿದ್ದನ್ನು ಇಬ್ಬರೂ ಹಾಗೇ ಒಪ್ಪಿದ್ದಾರೆ.

ಇವೆಲ್ಲವೂ ಪ್ರಮಾಣವಿರುದ್ಧ. ಆದರಿಂದ ಬೇರೆಯೇ ಅರ್ಥ ಹೇಳಬೇಕು.

'ತ್ರಿಪೃಷ್ಠ' ಎಂದರೆ ಮೂರು ಗುಣಗಳಿಂದ ಆಚೆ ಇರುವವನು ಎಂದು ಶ್ರೀಧರವ್ಯಾಖ್ಯಾನ ಹೇಳಿದೆ. ಮೂರು ಲೋಕಗಳಿಂದಾಚೆ ಪರಮವ್ಯೋಮದಲ್ಲಿ ಇರುವವನೆಂದು ವೀರರಾಘವ ವ್ಯಾಖ್ಯಾನ ಹೇಳಿದೆ. ಮೂರುಲೋಕಕ್ಕಿಂತ ಮೇಲೆ ಸತ್ಯಲೋಕದಲ್ಲಿರುವವನೆಂದು ಶುಕದೇವ ವ್ಯಾಖ್ಯಾನ ಹೇಳಿದೆ.

ಆದರೆ ಬ್ರಹ್ಮಾಂಡೋದರನಾಗಿ ಸರ್ವವ್ಯಾಪಿ ವೇದೋಪವೇದವರ್ಣಗಳಿಗೆ ಆಶ್ರಯನಾಗಿರುವ ಸರ್ವವ್ಯಾಪಿಯನ್ನು ಮೂರು ಗುಣಗಳಿಂದ ಮೂರು ಲೋಕಗಳಿಂದ ಆಚೆ ಎತ್ತರದಲ್ಲಿರುವವನು ಎನ್ನುವುದು ಉಚಿತವಾಗುವುದಿಲ್ಲ. ಆದರಿಂದ ಮೂರುಗುಣಗಳಿಂದ ಮೂರುಲೋಕಗಳಿಂದಾಚೆ ಇರುವುದು ಭಗವಂತನ ತುರೀಯರೂಪವೆಂದು ತ್ರಿಪೃಷ್ಠ ಶಬ್ದದಿಂದ ಹೇಳಿದರೆ ಅನೌಚಿತ್ಯ ಉಂಟಾಗುವುದಿಲ್ಲ. ಈ ತುರೀಯರೂಪ ಅವಸ್ಥಾತ್ರಯದಿಂದಾಚೆ ಮೋಕ್ಷಾವಸ್ಥೆಗೆ ನಿಯಾಮಕವಾಗಿದೆ. ಅದು ತ್ರಿಪೃಷ್ಠವೆನಿಸಿದೆ.

ಹಿರಣ್ಯಕಶಿಪು ವಿಷ್ಣುಪಾರ್ಷದನಾದ ಒಬ್ಬ ದೇವತೆಯಾದ್ದರಿಂದ ರಾಜಸತಾಮಸ ಸ್ವಭಾವದವನಲ್ಲವೆಂದೊಪ್ಪಿದರೂ ಅವನು ವಿಷ್ಣುವನ್ನು ವಿಷ್ಣುಭಕ್ತನಾದ ಪ್ರಹ್ಲಾದನನ್ನು ದ್ವೇಷಮಾಡುವುದು ಕಂಡಿದೆಯಾದ್ದರಿಂದ ಅಸುರಾವೇಶದಿಂದ ಬ್ರಹ್ಮನನ್ನೇ ವಿಷ್ಣುವಿನ ಎಲ್ಲ ಮಹಿಮೆಗಳುಳ್ಳವನೆಂದು ಏಕೆ ಸ್ತುತಿಸಿರಬಾರದು? ಅವನು ಮಾಡಿದ ಸ್ತುತಿಯನ್ನು ಮಿಶ್ರಸ್ತುತಿಯೆಂದು ಕೂಡಿಸುವ ಶ್ರಮವೇಕೆ ಮಾಡಬೇಕು ಎಂಬ ಪ್ರಶ್ನೆ ಇಲ್ಲಿ ಬರುತ್ತದೆ. ಆದರೆ ಪಾದ್ಮಪುರಾಣದ ವಚನದಿಂದ ಇದು ಮಿಶ್ರಸ್ತುತಿಯೇ ಎಂಬುದು ಖಚಿತವಾಗುತ್ತದೆ ಎಂದು ಶ್ರೀಮದಾಚಾರ್ಯರು ಹೇಳುತ್ತಾರೆ.

ಪರಾವರೇಷು ಯಸ್ಮಾತ್ ತ್ವಂ ವ್ಯಾಪ್ತೋ ವಿಷ್ಣೋ ಸನಾತನ ।
ತಸ್ಮಾನ್ನ ವ್ಯತಿರಿಕ್ತಂ ತ್ವದಿತ್ಯಾಹುರ್ವೇದವಾದಿನಃ

ಇತಿ ಪಾದ್ಮೇ ॥

ವಿದ್ಯಾಃ ಕಲಾಶ್ಚ ವಿದ್ಯಾಕಲಾಃ ।

ಮಹಾವಿದ್ಯಾಃ ಕಲಾಶ್ಚೈವ ತ್ವತ್ತನ್ನಾವಾಶ್ರಿತಾ ಯತಃ

ವಿದ್ಯಾತನುರಿತಿ ಪ್ರಾಹುರತಸ್ತ್ವಾಂ ತತ್ತ್ವವೇದಿನಃ । ಇತಿ ಚ ॥

ತ್ರಿಪೃಷ್ಠಃ ತುರೀಯಃ ।

ಬ್ರಹ್ಮಣೋಽಪ್ಯಧಿಕಂ ವಿಷ್ಣುಂ ಜಾನನ್ನಪಿ ಹಿರಣ್ಯಕಃ ।

ಬ್ರಹ್ಮಾಣಂ ತದ್ಗುಣೈಃ ಸ್ತೌತಿ ತದ್ಗವಿಷ್ಣುವಿವಕ್ಷಯಾ ॥ ಇತಿ ಚ ॥

ಹೇ ಸನಾತನನಾದ ವಿಷ್ಣುವೆ, ನೀನು ಅತೀತ ವರ್ತಮಾನ ವಸ್ತುಗಳಲ್ಲಿ ಸರ್ವತ್ರ ನಿಯಾಮಕನಾಗಿ ವ್ಯಾಪಿಸಿರುವುದರಿಂದ ಅವು ನಿನಗಿಂತ ವ್ಯತಿರಿಕ್ತವಾಗಿಲ್ಲ ಎಂದು ವೇದೋಪದೇಶಕರು ಹೇಳುತ್ತಾರೆ ಎಂದು ಪದ್ಮಪುರಾಣದಲ್ಲಿ ಹೇಳಿದೆ.

ವಿದ್ಯಾಕಲಾಃ ಎಂದೇ ಸರಿಯಾದ ಪಾಠ, ಹೊರತು 'ವಿದ್ಯಾಃ ಕಲಾಃ' ಎಂದಲ್ಲ. ವಿದ್ಯೆಗಳೂ ಕಲೆಗಳೂ ಎಂದು ಸಮಾಸವನ್ನು ಬಿಡಿಸಬೇಕು. ವಿದ್ಯೆಗಳ ಕಲೆಗಳೆಂದಲ್ಲ.

ವೇದರೂಪವಾದ ಮಹಾವಿದ್ಯೆಗಳೂ ಗಾಂಧರ್ವಕಲೆ ಮುಂತಾದ ಉಪವೇದಗಳೂ ನಿನ್ನ ಶರೀರದಲ್ಲಿ ಆಶ್ರಯ ಪಡೆದಿರುವುದರಿಂದ ವಿದ್ಯೆಗಳೂ ಕಲೆಗಳೂ ನಿನ್ನ ಶರೀರಗಳೆಂದು ತತ್ತ್ವವೇದಿಗಳು ಹೇಳುತ್ತಾರೆ ಎಂದೂ ಪದ್ಮಪುರಾಣದಲ್ಲಿ ಹೇಳಿದೆ.

'ತ್ರಿಪೃಷ್ಠ' ಎಂಬ ಶಬ್ದದಿಂದ ಅವಸ್ಥಾತ್ರಯಾತೀತವಾದ ಮುಕ್ತನಿಯಾಮಕ ವಾದ ತುರೀಯ ಎಂಬ ಭಗವದ್ರೂಪ ವಿವಕ್ಷಿತವಾಗಿದೆ.

ಬ್ರಹ್ಮನಿಗೂ ಅವನೊಳಗಿರುವ ತುರೀಯನಿಗೂ ಅಭೇದವೆಂದು ಹಿರಣ್ಯ ಕಶಿಪುವಿಗೆ ಭ್ರಮವಿರಲಿಲ್ಲ. ತಾನು ಮಿಶ್ರಸ್ತುತಿ ಮಾಡುತ್ತಿದ್ದೇನೆ ಎಂಬ ಅನುಸಂಧಾನ ಆತನಿಗಿತ್ತು. ಇದೂ ಪದ್ಮಪುರಾಣದಲ್ಲಿ ಹೀಗೆ ಉಕ್ತವಾಗಿದೆ-

'ಬ್ರಹ್ಮನಿಗಿಂತಲೂ ವಿಷ್ಣು ಉತ್ತಮನೆಂದು ಹಿರಣ್ಯಕಶಿಪು ತಿಳಿದಿದ್ದರೂ ಬ್ರಹ್ಮನೊಳಗಿರುವ ವಿಷ್ಣುವೇ ಇಂಥ ಮಹಿಮೆಉಳ್ಳವನೆಂಬ ಅಭಿಪ್ರಾಯ ದಿಂದ ಬ್ರಹ್ಮ ಇಂಥ ಮಹಿಮೆ ಉಳ್ಳವನೆಂದು ಸ್ತುತಿಸುತ್ತಾನೆ' ಎಂದು.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ

ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ಸಪ್ತಮಸ್ಕಂಧೇ

ತೃತೀಯೋಽಧ್ಯಾಯಃ

ಅಧ್ಯಾಯ ೪

ಅಧ್ಯಾಯ ಸಾರಾಂಶ

ಬ್ರಹ್ಮದೇವ 'ಅಪ್ಪ ಹಿರಣ್ಯಕಶಿಪು, ನೀನು ಕೇಳಿದ ಈ ವರಗಳೆಲ್ಲ ದುರ್ಲಭ, ಆದರೂ ಕೊಡುತ್ತಿದ್ದೇನೆ' ಎನ್ನುತ್ತ ಹೊರಟುಹೋದ. ಹಿರಣ್ಯಕಶಿಪು ವರಬಲದಿಂದ ಬಲಿಷ್ಠನಾಗಿ ಇಡೀ ಪ್ರಪಂಚವನ್ನು ವಶಪಡಿಸಿಕೊಂಡ. ಸ್ವರ್ಗವನ್ನು ಆಕ್ರಮಿಸಿ ಇಂದ್ರನ ಅರಮನೆಯಲ್ಲಿ ವಾಸಮಾಡಿದ. ಗಂಧರ್ವರು ಅಪ್ಸರೆಯರು ಋಷಿಗಳು ಅವನನ್ನೇ ಕೊಂಡಾಡಬೇಕು. ಎಲ್ಲ ವರ್ಣಾಶ್ರಮದವರೂ ಅವನನ್ನೇ ಯಜ್ಞಗಳಿಂದ ಆರಾಧಿಸಬೇಕು. ಸಪ್ತದ್ವೀಪಗಳಿಂದ ಯುಕ್ತವಾದ ಭೂಮಿ ಉಳದೆ ಇದ್ದರೂ ಬೆಳೆ ನೀಡಬೇಕು. ಸಪ್ತಸಾಗರಗಳು ಅಲೆಗಳೆಂಬ ಕೈಗಳಿಂದ ತಮ್ಮಲ್ಲಿರುವ ರತ್ನಗಳನ್ನು ಅವನಿಗೆ ಅರ್ಪಿಸಬೇಕು. ಹಾಗೆ ಏಕಚಕ್ರಾಧಿಪತಿಯಾಗಿ ಮೆರೆದ.

ಎಲ್ಲರನ್ನೂ ಎಲ್ಲವನ್ನೂ ಗೆದ್ದರೂ ತನ್ನ ಇಂದ್ರಿಯಗಳನ್ನು ಗೆಲ್ಲದೆ ಹೋದ. ಆದರಿಂದ ಎಲ್ಲ ವಿಷಯಭೋಗಗಳನ್ನು ಉಂಡರೂ ತೃಪ್ತಿಕಾಣಲಿಲ್ಲ. ಐಶ್ವರ್ಯ ಮದದಿಂದ ಮತ್ತನಾಗಿ ಶಾಸ್ತ್ರವಿಹಿತವಾದ ಕಟ್ಟುಪಾಡುಗಳ ಎಲ್ಲೆ ಮೀರಿದ. ಅವನ ಉಗ್ರ ಆಳ್ವಿಕೆಗೆ ಲೋಕಗಳೂ ಲೋಕ ಪಾಲಕರೂ ತತ್ತರಿಸಿದರು. ಶ್ರೀಹರಿಯನ್ನು ಮೊರೆಹೊಕ್ಕರು. ಶ್ರೀಹರಿ ಅವರನ್ನು ಸಂತೈಸುತ್ತ 'ಹಿರಣ್ಯಕಶಿಪು ಗೋಬ್ರಾಹ್ಮಣರಲ್ಲಿ ವೇದಧರ್ಮಗಳಲ್ಲಿ ದ್ವೇಷ ಮಾಡುತ್ತಿರುವುದರಿಂದ ಬೇಗನೆ ನಾಶ ಹೊಂದುತ್ತಾನೆ. ನನ್ನ ಪರಮಭಕ್ತನಾದ ಶಿಶುಪ್ರಹ್ಲಾದನನ್ನು ಆತ ಪೀಡಿಸಿದರೆ ಆತ ಬ್ರಹ್ಮನ ವರಬಲದಿಂದ ಎಷ್ಟೇ ಬಲಿಷ್ಠನಾದರೂ ಒಡನೆ ನಾನು ಆತನನ್ನು ಸಂಹರಿಸುತ್ತೇನೆ' ಎಂದು ನುಡಿದ.

ಪ್ರಹ್ಲಾದ ಮಹಾ ಭಗವದ್ಭಕ್ತ, ಜಿತೇಂದ್ರಿಯ, ಶೀಲಸಂಪನ್ನ ಎಲ್ಲ ಜೀವಿಗಳನ್ನೂ ತನ್ನಂತೆ ಪ್ರೀತಿಯಿಂದ ನೋಡುತ್ತಿದ್ದ. ಗುರುಹಿರಿಯರಲ್ಲಿ ವಿನೀತ, ದೀನಜನರಲ್ಲಿ ತಂದೆಯಂತೆ ವಾತ್ಸಲ್ಯ ತೋರುವವ, ವ್ಯಸನಗಳಲ್ಲಿ ವ್ಯಾಕುಲಚಿತ್ತನಾಗದವ. ವಿಷಯಾಸಕ್ತಿ

ತೊರೆದವ. ಅಸುರಜಾತಿಯಲ್ಲಿ ಹುಟ್ಟಿದ್ದರೂ ಅಸುರಸ್ವಭಾವವಿಲ್ಲದವ. ಅವನ ಸದ್ಗುಣಗಳನ್ನು ಜ್ಞಾನಿಗಳೂ ನೋಡಿ ಕಲಿಯುತ್ತಿದ್ದರು. ಸಜ್ಜನರಲ್ಲಿರಬೇಕಾದ ಲಕ್ಷಣಗಳಿಗೆಲ್ಲಕ್ಕೂ ಆತ ಉದಾಹರಣೆಯಾಗಿದ್ದ. ಅವನ ಸದ್ಗುಣಗಳನ್ನೆಲ್ಲ ಪಟ್ಟಿ ಮಾಡಿ ಹೇಳಬೇಕಾಗಿಲ್ಲ, ಭಗವಾನ್ ವಾಸುದೇವನಲ್ಲಿ ಸ್ವಾಭಾವಿಕ ಭಕ್ತಿ ಉಳ್ಳವನಾಗಿದ್ದನೆಂದರೆ ಸಾಕು.

ಶಿಶುವಾದರೂ ಆಟದ ಸಾಮಾನುಗಳನ್ನೊಲ್ಲದೆ, ಕುಳಿತಾಗ ಓಡಾಡುವಾಗ ಉಣ್ಣುವಾಗ ಮಲಗುವಾಗ ಸದಾ ನಾರಾಯಣನ ಧ್ಯಾನ. ಆ ಧ್ಯಾನದಲ್ಲಿ ಆಗಾಗ ನಗುತ್ತಾನೆ ಅಳುತ್ತಾನೆ ಕುಣಿಯುತ್ತಾನೆ 'ಹರೇ' ಎಂದು ಕೂಗಿಕೊಳ್ಳುತ್ತಾನೆ. ವಿಷಯ ಪದಾರ್ಥಗಳಲ್ಲಿ ಅನಾಸಕ್ತಿಯಿಂದ ಸುಮ್ಮನೆ ಕುಳಿತಿರುತ್ತಾನೆ, ಉಸಿರಾಟವನ್ನೂ ಮರೆತುಬಿಡುತ್ತಾನೆ. ಧ್ಯಾನಾನಂದದಲ್ಲಿ ಮುಳುಗಿರುತ್ತಾನೆ. ಇಂಥ ಮಹಾತ್ಮನಾದ ಮಗನಲ್ಲಿ ತಂದೆ ಹಿರಣ್ಯಕಶಿಪು ದ್ರೋಹ ಬಗೆಯಲು ತೊಡಗಿದ.

❖ ❖ ❖

ಬ್ರಹ್ಮನಿಂದ ವರಪಡೆದ ಬಳಿಕ ಹಿರಣ್ಯಕಶಿಪು ಶ್ರೀಹರಿಯಲ್ಲಿ ದ್ವೇಷಸಾಧನೆ ಮಾಡಲು ತೊಡಗಿದನೆಂದು ನಾರದರು ಧರ್ಮರಾಜನಿಗೆ ಹೇಳುತ್ತಾರೆ.

ಏವಂ ಲಬ್ಧವರೋ ದೈತ್ಯೋ ಬಿಭ್ರದ್ಧೇಮಮಯಂ ವಪುಃ ।
ಭಗವತ್ಯಕರೋದ್ ದ್ವೇಷಂ ಭ್ರಾತುರ್ವಧಮನುಸ್ಮರನ್ ॥ ೪ ॥

ಹೀಗೆ ವರ ಪಡೆದ ಬಳಿಕ ಸುವರ್ಣ ಶರೀರಿಯಾದ ಹಿರಣ್ಯಕಶಿಪು ತನ್ನ ತಮ್ಮನ ವಧೆಯನ್ನು ನೆನೆಯುತ್ತ ಭಗವಂತನಲ್ಲಿ ದ್ವೇಷ ಮಾಡಿದ.

ಇಲ್ಲಿ ಹಿಂದೆ ಹೇಳಿದಂತೆ ಮಿಶ್ರಸ್ತುತಿಯಿಂದ ಹರಿಯನ್ನು ಭಕ್ತಿಯಿಂದ ಸ್ತೋತ್ರ ಮಾಡಿದ್ದ ಹಿರಣ್ಯಕಶಿಪು ಈಗ ಹರಿಯನ್ನು ದ್ವೇಷಿಸಲು ಏನು ಕಾರಣ? ತಮ್ಮನಾದ ಹಿರಣ್ಯಾಕ್ಷನನ್ನು ಹರಿ ಕೊಂದುದು ಹಿಂದೆಯೂ ಅವನಿಗೆ ಸ್ಮರಣೆಯಲ್ಲಿತ್ತು ತಾನೆ? ಎಂಬ ಪ್ರಶ್ನೆ ಬರುತ್ತದೆ. ಇದಕ್ಕೆ ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ, ಹಿರಣ್ಯಕಶಿಪು ದೈತ್ಯ. ಅವನಿಗೆ ಹಿಂದೆಯೂ ಭಗವಂತನಲ್ಲಿ ಭಕ್ತಿ ಇರಲೇ ಇಲ್ಲ. ಹಿರಣ್ಯಾಕ್ಷವಧೆಗೆ ಸೇಡು ತೀರಿಸಿಕೊಳ್ಳಲೆಂದೇ, ಅದಕ್ಕೆ ಶಕ್ತಿ ಸಂಪಾದನೆಗಾಗಿಯೇ ತಪಸ್ಸು ಮಾಡಿದ್ದ.

ಅದರಿಂದಲೇ ಘೋರವಾದ ತಪಸ್ಸಿನಿಂದಲೂ ಅವನಲ್ಲಿ ಚಿತ್ತಶುದ್ಧಿ ಉಂಟಾಗಲಿಲ್ಲ. ಭಗವಂತನ ಸ್ವರೂಪವನ್ನು ತಿಳಿದಿದ್ದರೂ ಭಕ್ತಿ ಉಂಟಾಗಲಿಲ್ಲ. ದ್ವೇಷವೇ ಹೆಚ್ಚಿತು. ಅದರಿಂದ ಯಾವ ಉದ್ದೇಶದಿಂದ ತಪಸ್ಸು ಮಾಡಿದನೋ ಆ ಉದ್ದೇಶ ಸಾಧನೆಗೇ ಹೊರಟು ಹರಿಯನ್ನು ದ್ವೇಷಿಸಿದ ಎಂದು.[೧]

ಆದರೆ ಶ್ಲೋಕದಲ್ಲಿ 'ದೈತ್ಯ' ಎಂಬ ಶಬ್ದದಿಂದಲೇ ಹಿರಣ್ಯಕಶಿಪು ದುಷ್ಟನೆಂದು ಭಾಗವತ ಸೂಚಿಸುತ್ತಿದೆ ಎನ್ನಲಾಗದು. ಹಿಂದೆ ಭಾಗವತದಲ್ಲಿಯೇ ದಿತಿಪುತ್ರರು ಮರುತ್ತುಗಳು ದೇವತೆಗಳಾದರು ದೇವತೆಗಳಿಗೆ ಅತ್ಯಂತ ಪ್ರಿಯರಾದರು ಎಂದು ಹೇಳಿದೆ. ಮುಂದೆಯೂ ದೈತ್ಯರಾದ ಪ್ರಹ್ಲಾದ ಬಲಿ ಮುಂತಾದವರನ್ನು ಭಕ್ತರೆಂದು ಭಾಗವತ ವರ್ಣಿಸುತ್ತದೆ. ಬ್ರಹ್ಮದೇವರು ಪ್ರೀತಿಯಿಂದ 'ದಿತಿ ನಂದನ!' (ಶ್ಲೋಕ ೨೧) ಎಂದು ಅವನನ್ನು ಸಂಬೋಧಿಸಿದ್ದೂ ಉಂಟು. ಅದರಿಂದ ದೈತ್ಯಶಬ್ದ ಒಂದು ದುಷ್ಟ ಜಾತಿಯನ್ನು ಹೇಳುತ್ತದೆ ಎನ್ನಬಾರದು. ಮತ್ತು ಹಿರಣ್ಯಕಶಿಪುವಿನ ತಪಸ್ಸಿಗೆ ಹರಿಯಲ್ಲಿ ದ್ವೇಷಸಾಧನೆ ಉದ್ದೇಶವಾಗಿರಲಿಲ್ಲ. ಹಾಗಿರುತ್ತಿದ್ದರೆ ಹರಿಗೆ ಅತ್ಯಂತ ಪ್ರಿಯರಾದ ಬ್ರಹ್ಮದೇವರು ವರ ನೀಡುತ್ತಿರಲಿಲ್ಲ. ಅವನ ಉದ್ದೇಶ ಬ್ರಹ್ಮಪದವಿಯನ್ನು ಹೊಂದುವುದಾಗಿತ್ತು. ಅದು ರಾಗೋದ್ರೇಕದ ಪರಿಣಾಮವಷ್ಟೆ. ಅದರಿಂದ ಹರಿಭಕ್ತನೆಂದು ಪ್ರೀತಿಯಿಂದ ಅವನು ಕೇಳಿದ ದುರ್ಲಭವಾದ ವರವನ್ನೂ ಬ್ರಹ್ಮದೇವರು ನೀಡಿದರು. ಆದರೆ ವರಬಲದಿಂದ ಅಹಂಕಾರ, ಅಸುರಾವೇಶಗಳುಂಟಾದುವು. ಅವು ಹರಿದ್ವೇಷಕ್ಕೆ ಕಾರಣವಾದುವು. ಇದೂ ಪದ್ಮಪುರಾಣ ವಚನದಿಂದ ಸ್ಪಷ್ಟವಾಗುವುದು.

ಸ್ವತೋ ಭಕ್ತಾ ಹಿರಣ್ಯಾದ್ಯಾಃ ಪರಾವೇಶಾದ್ಧರೌ ದ್ವಿಷಃ ॥ ಇತಿ ಚ ।
ಹಿರಣ್ಯಕಶಿಪು ಮುಂತಾದವರು ಸ್ವಾಭಾವಿಕವಾಗಿ ಭಕ್ತರು. ಕೆಲವೊಮ್ಮೆ ಶತ್ರುಗಳಾದ ಅಸುರರ ಆವೇಶದಿಂದ ಹರಿಯಲ್ಲಿ ದ್ವೇಷ ಮಾಡುತ್ತಾರೆ.

❖ ❖ ❖

೧. ಯದರ್ಥಂ ತಪಸ್ತಪ್ತಂ ತದಾಹ ಏವಮಿತ್ಯಾದಿನಾ । -ಶ್ರೀಧರಃ

ದೈತ್ಯ ಇತ್ಯನೇನ ಕಥಮೀದೃಕ್ ತಪಃ ಕೃತಂ ತಥಾಪಿ ತಸ್ಯ ಚಿತ್ತಶುದ್ಧಿರ್ನ ಜಾತಾ ಯೇನ ಪರಮೇಶ್ವರೇ ಭಗವತಿ ವಿಷ್ಣೌ ದ್ವೇಷಂ ಕೃತವಾನ್ ಇತಿ ಶಂಕಾ ನಿರಸ್ತಾ। ತೇನೇದೃಕ್ ತಪಃ ಕೃತ್ವಾಽಪಿ ಭಗವತಸ್ತತ್ವಂ ಜ್ಞಾತ್ವಾ ನಿರೂಪ್ಯಾಪಿ ತಸ್ಮಿನ್ ವಿದ್ವೇಷಮೇವ ಕೃತವಾನ್ ನ ಭಕ್ತಿಮಿತಿ । -ಗಿರಿಧರಃ

ಹಿರಣ್ಯಕಶಿಪು ಬ್ರಹ್ಮವರ ಬಲದಿಂದ ಕೊಬ್ಬಿ ಎಲ್ಲ ಲೋಕಗಳನ್ನು ಆಕ್ರಮಿಸಿದ. ದೇವತೆಗಳು ಪೀಡಿತರಾಗಿ ಅವನ ಕಾಲಿಗೆ ಬಿದ್ದರೆಂದು ನಾರದರು ಧರ್ಮರಾಜನಿಗೆ ಹೇಳುತ್ತಾರೆ.

ತಮಂಗ ಮತ್ತಂ ಮಧುನೋರುಗಂಧಿನಾ
ವಿವೃತ್ತತಾಮ್ರಾಕ್ಷಮಶೇಷಧಿಷ್ಣ್ಯಪಾಃ ।
ಉಪಾಸತೋಪಾಯನಪಾಣಿಭಿರ್ವಿನಾ
ತ್ರಿಭಿಸ್ತಪೋಯೋಗಬಲೌಜಸಾಂ ಪದಮ್ ॥ ೧೩ ॥

ತೀಕ್ಷ್ಣವಾಸನೆಯ ಮದ್ಯವನ್ನು ಕುಡಿದು ಮದವೇರಿದಾಗ ಅವನ ಕೆಂಪು ಕಣ್ಣುಗಳು ತೇಲುವಂತಿದ್ದುವು. ಆದರೆ ತಪಸ್ಸು ಯೋಗಬಲ ಓಜಸ್ಸುಗಳಿಂದಲೂ ತುಂಬಿಕೊಂಡಿದ್ದ. ಹೀಗಾಗಿ ವಸು ರುದ್ರಾದಿತ್ಯರೆಂಬ ಮೂರು ಬಗೆಯ ದೇವತೆಗಳು ಹೊರತು ಉಳಿದ ಎಲ್ಲ ಲೋಕಪಾಲಕರಾದ ದೇವತೆಗಳೂ ಕೈಗಳಲ್ಲಿ ಕಾಣಿಕೆ ಹಿಡಿದುಕೊಂಡು ಬಂದು ಅವನನ್ನು ಓಲೈಸಿದರು.

ಇಲ್ಲಿ 'ವಿನಾ ತ್ರಿಭಿಃ' ಎಂದರೆ ತ್ರಿಮೂರ್ತಿಗಳು ಹೊರತಾಗಿ ಎಲ್ಲ ದೇವತೆಗಳೂ ಹಿರಣ್ಯಕಶಿಪುವನ್ನು ಓಲೈಸಿದರೆಂದು ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ. ಹಾಗೆ ಹೇಳಲು ಏನೂ ಆಧಾರ ಕೊಟ್ಟಿಲ್ಲ. 'ತ್ರಿ' ಶಬ್ದದಿಂದ ತ್ರಿಮೂರ್ತಿಗಳ ನೆನಪಾಯಿತಷ್ಟೆ. ವಸು ರುದ್ರ ಆದಿತ್ಯರೆಂಬ ಮೂರು ಗುಂಪಿನ ದೇವತೆಗಳೂ ಏಕೆ ನೆನಪಾಗಿಲ್ಲ? ಅವರೂ ಪ್ರಸಿದ್ಧರೆ. ವಸ್ತುತಃ ಮರುತ್ತುಗಳು ವಿಶ್ವೇದೇವತೆಗಳು ಮತ್ತು ಸಾಧ್ಯರೂ ಕೂಡ ಮೂರು ಗುಂಪಿನವರು. ಸ್ಕಂದಪುರಾಣದಲ್ಲಿ ಇವರೂ 'ತ್ರಿ' ಶಬ್ದದಿಂದ ಉಕ್ತರಾಗುತ್ತಾರೆ ಎಂದು ಸ್ಪಷ್ಟವಚನವಿದೆ.

ಸ್ಕಂದಪುರಾಣದಲ್ಲಿ ಇನ್ನೊಂದು ಕಡೆ ದೇವತೆಗಳನ್ನು ಹೊರತು ಉಳಿದ ಗಂಧರ್ವರು ಯಕ್ಷರು ಮುಂತಾದವರು ಮಾತ್ರ ಹಿರಣ್ಯಕಶಿಪುವನ್ನು ಓಲೈಸಿದರು ಎಂದಿದೆ. ಇದು 'ರೇಮೇಽಭಿವಂದ್ಯಾಂಘ್ರಿಯುಗಃ ಸುರಾದಿಭಿಃ' ಎಂಬ ಭಾಗವತ ವಚನಕ್ಕೆ ವಿರೋಧಿಯಾದಂತೆ ಕಾಣಬಹುದು. ಆದರೆ ವಿರೋಧಪರಿಹಾರಕ್ಕೆ ಯಜ್ಞಗಳಲ್ಲಿ ಸೋಮಾಹುತಿಗೆ ಅರ್ಹರಾದ ನೂರು ಮಂದಿ ದೇವತೆಗಳು ಮತ್ತು ಅವರಿಗೆ ಸಮಾನರಾದವರು ಹೊರತಾಗಿ ಬೇರೆ ದೇವತೆಗಳು ಹಿರಣ್ಯಕಶಿಪುವನ್ನು ಓಲೈಸಿದರು, ಎಂದು ವಿವರಣೆ ನೀಡಬಹುದು. ಈ ರೀತಿ ವಿವರಣೆ ನೀಡುವುದು ಸರಿಯೆಂದು ಸ್ಕಂದಪುರಾಣವೇ ಇನ್ನೊಂದು ಕಡೆ ಸ್ಪಷ್ಟ ಹೇಳಿದೆ.

ಶತಸ್ಥರು ಹೊರತಾಗಿ ಎಲ್ಲ ದೇವತೆಗಳೂ ಒಬ್ಬ ದೈತ್ಯನನ್ನು ಓಲೈಸಿದರು ಎಂದರೆ ಅವರಿಗೆ ಇದು ನಾಚಿಕೆಗೇಡು, ಅಪಕೀರ್ತಿ. ಇಂಥ ಅಪಕೀರ್ತಿಗೆ ಅವರು ಯೋಗ್ಯರಲ್ಲ. ಮತ್ತು ಎಲ್ಲ ದೇವತೆಗಳಿಗೂ ಹಿರಣ್ಯಕಶಿಪುವಿನಿಂದ ಬಾಧೆ ಉಂಟಾದಾಗಲೂ ಶ್ರೀಹರಿ ನರಸಿಂಹಾವತಾರ ತಾಳದೆ ಒಬ್ಬ ದೈತ್ಯ ಬಾಲಕ ಪ್ರಹ್ಲಾದನಿಗೆ ಬಾಧೆ ಉಂಟಾದಾಗ ಉಗ್ರನರಸಿಂಹನಾಗಿ ಆವಿರ್ಭವಿಸಿದ್ದರಿಂದ ದೇವತೆಗಳಿಗೆ ಅಪಕೀರ್ತಿ ಬರಬಹುದು ಎಂದರೆ ಸ್ಕಂದಪುರಾಣ ಹೇಳುತ್ತದೆ. 'ದೇವತೆಗಳಿಗೆ ಎಂದೂ ದೈತ್ಯನ ಸೇವೆ ಮಾಡಿದರೆಂದು ಅಪಕೀರ್ತಿಯಿಲ್ಲ, ಅವರಿಗೆ ಸದಾ ಕೀರ್ತಿಯೇ ಇರುತ್ತದೆ. ಪ್ರಹ್ಲಾದನಂಥ ದೈತ್ಯರಿಗೆ ಸದಾ ಕೀರ್ತಿಯಿಲ್ಲ, ಕೆಲವೊಮ್ಮೆಯಾದರೂ ಕೀರ್ತಿ ತರಬೇಕೆಂದು ಹರಿ ವಿಶೇಷವಾಗಿ ಅವನಲ್ಲಿ ಪ್ರೀತಿಯನ್ನು ವ್ಯಕ್ತಪಡಿಸಿದ್ದಾನೆ' ಎಂದು.

ಅದರಿಂದ ಯಜ್ಞಗಳಲ್ಲಿ ಸೋಮಾಹುತಿಗೆ ಅರ್ಹರಾದ ಶತಸ್ಥ ದೇವತೆಗಳು ಹೊರತಾಗಿ ಬೇರೆ ದೇವತೆಗಳೂ ಗಂಧರ್ವರೂ ಮುಂತಾದವರೂ ಹಿರಣ್ಯಕಶಿಪುವಿನ ಸೇವೆ ಮಾಡಿದರೆಂದೇ ಭಾಗವತದ ಅಭಿಪ್ರಾಯವನ್ನು ಸ್ಕಂದಪುರಾಣದ ಆಧಾರದಿಂದ ಶ್ರೀಮದಾಚಾರ್ಯರು ಸ್ಪಷ್ಟಗೊಳಿಸುತ್ತಾರೆ-

ಆದಿತ್ಯಾ ವಸವೋ ರುದ್ರಾ ಸ್ತ್ರಿವಿಧಾ ಹಿ ಸುರಾ ಯತಃ ।
ಮರುತಶ್ಚೈವ ವಿಶ್ವೇ ಚ ಸಾಧ್ಯಾಶ್ಚೈವ ಚ ತದ್ಗತಾಃ ।
ಅತಸ್ತ್ರಯ ಇತಿ ಪ್ರೋಕ್ತಾಶ್ಚತ್ವಾರೋ ಮಾನುಷಾಃ ಸ್ಮೃತಾಃ ।
ಇತಿ ಸ್ಕಾಂದೇ ।

ಉಪಾಯನಂ ದದುಃ ಸರ್ವೇ ವಿನಾ ದೇವಾನ್ ಹಿರಣ್ಯಕೇ ।
ಇತಿ ಚ ॥

ಅಯಜ್ಞಭಾಗೇಷ್ವಪಿ ತು ಸುರಶಬ್ದಃ ಪ್ರದೃಶ್ಯತೇ ।
ಯಜ್ಞಭಾಗಭುಜಸ್ತ್ವೇವ ತ್ರಯ ಇತ್ಯಭಿಶಬ್ದಿತಾಃ ॥ ಇತಿ ಚ ॥

ಆದಿತ್ಯರು ವಸುಗಳು ರುದ್ರರು ಎಂದು ದೇವತೆಗಳು ಮೂರು ಬಗೆಯವರು. ಮರುತ್ತುಗಳೂ ವಿಶ್ವೇದೇವತೆಗಳೂ ಸಾಧ್ಯರೂ ಈ ಮೂರು ಬಗೆಯಲ್ಲಿಯೇ ಸೇರುವುದರಿಂದ ಇವರೆಲ್ಲರೂ 'ತ್ರಿ' ಶಬ್ದದಿಂದ ಉಕ್ತರಾಗುತ್ತಾರೆ. ಮನುಷ್ಯರು ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರರೆಂದು ನಾಲ್ಕು ಬಗೆಯಾಗಿರುವುದರಿಂದ ಚತುಃಶಬ್ದದಿಂದ ಉಕ್ತರಾಗುತ್ತಾರೆ ಎಂದು ಸ್ಕಾಂದ ಪುರಾಣದಲ್ಲಿ ಉಕ್ತವಾಗಿದೆ.

ದೇವತೆಗಳು ಹೊರತಾಗಿ ಬೇರೆ ಎಲ್ಲರೂ ಹಿರಣ್ಯಕನಿಗೆ ಕಾಣಿಕೆ ಒಪ್ಪಿಸಿದರೆಂದೂ ಸ್ಕಂದಪುರಾಣದಲ್ಲಿದೆ. ಯಜ್ಞಗಳಲ್ಲಿ ಸೋಮಾಹುತಿ ಇಲ್ಲದವರನ್ನೂ ದೇವತೆಗಳೆಂದು ಕರೆಯುವುದು ಕಂಡುಬರುತ್ತದೆ. ಆದರೆ ಯಜ್ಞಗಳಲ್ಲಿ ಸೋಮಾಹುತಿ ಉಳ್ಳವರನ್ನು ಮಾತ್ರ ತ್ರಿಶಬ್ದದಿಂದ ವ್ಯವಹರಿಸಲಾಗುತ್ತದೆ ಎಂದೂ ಸ್ಕಂದಪುರಾಣದಲ್ಲಿ ಹೇಳಿದೆ.

ದೈತ್ಯನಿಗೆ ಸೇವೆ ಮಾಡುವುದರಿಂದ ಬರಬಹುದಾದ ಅಪಯಶಸ್ಸಿಗೆ ದೇವತೆಗಳು ಭಾಗಿಗಳಾಗುವುದಿಲ್ಲ ಎನ್ನುವುದು ಮುಂದೆ ೨೯ನೇ ಶ್ಲೋಕದ ತಾತ್ಪರ್ಯದಲ್ಲಿ ಸ್ಪಷ್ಟವಾಗುವುದು.

ಮುಂದೆ ೧೫ನೇ ಶ್ಲೋಕದಲ್ಲಿ 'ಸ ಏವ ವರ್ಣಾಶ್ರಮಿಭಿಃ' ಎಂದು 'ನಾಲ್ಕು ವರ್ಣಗಳು ನಾಲ್ಕು ಆಶ್ರಮಗಳುಳ್ಳ ಮನುಷ್ಯರು ಯಜ್ಞಗಳಲ್ಲಿ ಹಿರಣ್ಯಕಶಿಪುವಿಗೇ ಆಹುತಿ ನೀಡುತ್ತಿದ್ದರು' ಎಂದು ಹೇಳಿದೆ. ಅದನ್ನು ಸ್ಕಂದಪುರಾಣ 'ಚತ್ವಾರೋ ಮಾನುಷಾಃ ಸ್ಮೃತಾಃ' ಎಂದಿದೆ.

❖ ❖ ❖

ದೇವತೆಗಳು ಹಿರಣ್ಯಕಶಿಪುವಿನ ದೌರ್ಜನ್ಯವನ್ನು ತಾಳಲಾರದೆ ಭಗವಂತನನ್ನು ಮೊರೆಹೊಕ್ಕರು. ಹಿರಣ್ಯಕಶಿಪು ಪ್ರಹ್ಲಾದನಿಗೆ ಪೀಡೆ ಉಂಟುಮಾಡಿದಾಗ ಅವನನ್ನು ವಧಿಸುವೆನೆಂದು ಭಗವಂತ ಆಶ್ವಾಸನೆಯಿತ್ತ.

ಯದಾ ದೇವೇಷು ವೇದೇಷು ಗೋಷು ವಿಪ್ರೇಷು ಸಾಧುಷು ।
ಧರ್ಮೇ ಮಯಿ ಚ ವಿದ್ವೇಷಃ ಸ ವಾ ಆಶು ವಿನಶ್ಯತಿ ॥ ೨೮ ॥

ನಿರ್ವೈರಾಯ ಪ್ರಶಾಂತಾಯ ಸ್ವಸುತಾಯ ಮಹಾತ್ಮನೇ ।
ಪ್ರಹ್ಲಾದಾಯ ಯದಾ ದ್ರುಹ್ಯೇದ್ಧನಿಷ್ಯೇಽಪಿ ವರೋರ್ಜಿತಮ್ ॥ ೨೯ ॥

ಯಾವಾಗ ಹಿರಣ್ಯಕಶಿಪುವಿಗೆ ದೇವತೆಗಳಲ್ಲಿ ವೇದಗಳಲ್ಲಿ ಗೋವುಗಳಲ್ಲಿ ಬ್ರಾಹ್ಮಣರಲ್ಲಿ ಸಾಧುಜನರಲ್ಲಿ ಧರ್ಮದಲ್ಲಿ ಮತ್ತು ನನ್ನಲ್ಲಿ ದ್ವೇಷಭಾವನೆ ಹೆಚ್ಚುವುದೋ ಆಗ ಅವನು ಬೇಗನೆ ನಾಶಹೊಂದುವನು.

ಸಜ್ಜನರಲ್ಲಿ ವೈರವಿಲ್ಲದ ಒಳ್ಳೆಯ ಭಕ್ತನಾದ ಮಹಾತ್ಮನಾದ ಮಗನಾದ ಪ್ರಹ್ಲಾದನನ್ನು ಯಾವಾಗ ಆತ ಪೀಡಿಸುವನೋ ಆಗ, ಆತ ಬ್ರಹ್ಮನ ವರದಿಂದ ಎಷ್ಟೇ ಬಲಿಷ್ಠನಾಗಿದ್ದರೂ, ಅವನನ್ನು ಸಂಹರಿಸುವೆನು.

ಇಲ್ಲಿ ಭಗವಂತ ದೇವತೆಗಳು ವೇದಗಳು ಗೋವುಗಳು ಮುಂತಾದವರಲ್ಲಿ ಹಿರಣ್ಯಕಶಿಪು ಅಪಚಾರ ಮಾಡಿದರೆ ಬೇಗನೆ ಕೊಲ್ಲುವೆನೆಂದು ಒಂದು ಶ್ಲೋಕದಲ್ಲಿ ಹೇಳಿ ಮುಂದಿನ ಶ್ಲೋಕದಲ್ಲಿ 'ಪ್ರಹ್ಲಾದನಿಗೆ ಹಿಂಸೆ ಮಾಡಿದರೆ' ಎಂದು ವಿಶೇಷವಾಗಿ ಹೇಳುವ ಮೂಲಕ ದೇವತೆಗಳಿಗಿಂತಲೂ ಪ್ರಹ್ಲಾದನೇ ಭಗವಂತನಿಗೆ ಹೆಚ್ಚು ಪ್ರಿಯನೆಂದು ಹೇಳಿದಂತೆ ಕಾಣುತ್ತದೆ. ಇದು ಸರಿಯಲ್ಲ. ಬೇರೆ ವ್ಯಾಖ್ಯಾನಕಾರರು ಈ ಬಗ್ಗೆ ಏನೂ ಹೇಳುವುದಿಲ್ಲ. ಸ್ಕಂದ ಪುರಾಣದಲ್ಲಿ ಭಗವಂತನ ಈ ಮಾತಿನ ಅಭಿಪ್ರಾಯ ಸ್ಪಷ್ಟವಾಗಿ ಉಕ್ತವಾಗಿದೆ.

ಯತ್ರಕ್ವಚ ಯಶಃಸ್ಥಾನಮನ್ಯೇಷಾಮಿತಿ ಕೇಶವಃ ।
ಸರ್ವತ್ರಾಪಿ ತು ದೇವಾನಾಮಿತ್ಯನ್ಯಾನ್ ಪೂಜಯೇತ್ ಕ್ವಚಿತ್ ।
ಇತಿ ಚ ॥

ದೇವತೆಗಳಿಗೆ ಎಲ್ಲ ಕಾಲಗಳಲ್ಲಿಯೂ ಕೀರ್ತಿಯೇ ಇರುತ್ತದೆ. ಬೇರೆ ಭಕ್ತರಿಗೆ ಕೆಲವೊಮ್ಮೆ ಮಾತ್ರ. ಆದರಿಂದ ಶ್ರೀಹರಿ ಕೆಲವೊಮ್ಮೆ ಆ ಬೇರೆ ಭಕ್ತರನ್ನು ಹೆಚ್ಚು ಹೊಗಳುತ್ತಾನೆ. ಎಂದು ಸ್ಕಂದಪುರಾಣ ಹೇಳಿದೆ.

ದೇವತೆಗಳು ದೊಡ್ಡ ಭಕ್ತರೆನ್ನುವಲ್ಲಿ ಯಾರಿಗೂ ಸಂಶಯವಿಲ್ಲ. ಅವರು ಸದಾ ಮಹಾಕೀರ್ತಿಶಾಲಿಗಳು. ಪ್ರಹ್ಲಾದನಂಥ ಸಣ್ಣ ಭಕ್ತರ ಕೀರ್ತಿ ಹಾಗಲ್ಲ. ಅವರ ಕೀರ್ತಿಯೂ ಹರಡಬೇಕು ಎಂಬ ಅಭಿಪ್ರಾಯದಿಂದ ಭಗವಂತ ಅವರನ್ನು ವಿಶೇಷವಾಗಿ ಕೆಲವೊಮ್ಮೆ ಹೊಗಳುತ್ತಾನೆ ಎಂದು ಸ್ಕಂದಪುರಾಣವಚನದ ಅಭಿಪ್ರಾಯವಿದೆ.

❖ ❖ ❖

ಪ್ರಹ್ಲಾದನಲ್ಲಿರುವ ಸದ್ಗುಣಗಳು ಜ್ಞಾನಿಗಳೂ ಕೂಡ ನೋಡಿ ಕಲಿಯುವಂತಿದ್ದುವು. ಭಗವಂತನಂತೆ ಅವನೂ ಕೂಡ ವರ್ಣನೆಗೆ ನಿಲುಕದಷ್ಟು ಅಪಾರ ಗುಣಗಳುಳ್ಳವನೆಂದು ನಾರದರು ಧರ್ಮರಾಜನಿಗೆ ಹೇಳುತ್ತಾರೆ.

ಯಸ್ಮಿನ್ ಮಹಾಗುಣಾ ರಾಜನ್ ಗೃಹ್ಯಂತೇ ಕವಿಭಿರ್ಮುಹುಃ ।
ನ ತೇಽಧುನಾಽಭಿಧೀಯಂತೇ ಯಥಾ ಭಗವತೀಶ್ವರೇ ॥ ೩೫ ॥

ಧರ್ಮರಾಜ, ಜ್ಞಾನಿಗಳೂ ಕೂಡ ಮತ್ತೆ ಮತ್ತೆ ಅವನಲ್ಲಿದ್ದ ಸದ್ಗುಣಗಳನ್ನು ನೋಡಿ ಕಲಿತುಕೊಳ್ಳುತ್ತಾರೆ. ಆ ಗುಣಗಳನ್ನು ಭಗವಂತನಲ್ಲಿ ಹೇಗೋ

ಹಾಗೆ ಪ್ರಹ್ಲಾದನಲ್ಲಿಯೂ ಈಗ ಪೂರ್ತಿ ಹೇಳಲು ನನಗೆ ಶಕ್ಯವಾಗುವುದಿಲ್ಲ.

ಇಲ್ಲಿ ಪ್ರಹ್ಲಾದನ ಗುಣಗಳನ್ನು ವರ್ಣಿಸಲು ಭಗವಂತನ ಗುಣಗಳನ್ನು ದೃಷ್ಟಾಂತವಾಗಿ ಕೊಡುವುದು ಉಚಿತವಾಗುವುದಿಲ್ಲ. ಭಗವಂತನ ಗುಣಗಳಿಗೆ ಭಗವಂತನ ಗುಣಗಳೇ ಸಮಾನ ಹೊರತು ಬೇರೆ ಇಲ್ಲವೆ ಇಲ್ಲ ತಾನೆ? ಎಂಬ ಪ್ರಶ್ನೆ ಬರುತ್ತದೆ. ಬೇರೆ ವ್ಯಾಖ್ಯಾನಕಾರರಿಗೆ ಇಲ್ಲಿ ಅನುಪಪತ್ತಿ ಏನೂ ಕಂಡುಬರಲಿಲ್ಲ. ಸ್ಕಂದ ಪುರಾಣದಲ್ಲಿ ಈ ಅನುಪಪತ್ತಿಯನ್ನು ಪರಿಹರಿಸಲಾಗಿದೆ.

ಅನ್ಯೇಷಾಂ ಹರಿಸಾಮ್ಯಂ ತು ಕಿಂಚಿತ್‌ಸಾಮ್ಯಮುದೀರಿತಂ ।
ಸಮ್ಯಕ್‌ಸಾಮ್ಯಂ ತು ಮತ್ಸ್ಯಾದೇರಿತಿ ಶಾಸ್ತ್ರಸ್ಯ ನಿರ್ಣಯಃ ॥

ಇತಿ ಚ ॥

ಬೇರೆಯವರಿಗೆ ಹರಿಯ ಸಾಮ್ಯವನ್ನು ಎಲ್ಲಿಯಾದರೂ ಹೇಳಿದ್ದರೆ ಅದು ಅತ್ಯಲ್ಪ ಸಾಮ್ಯವೆಂದು ತಿಳಿಯಬೇಕು ಹೊರತು ಹರಿಯ ಪೂರ್ತಿಸಾಮ್ಯ ಮತ್ಸ್ಯಾದಿ ಹರಿಮೂರ್ತಿಗಳಿಗೆ ಮಾತ್ರ ಎನ್ನುವುದು ಶಾಸ್ತ್ರಸಿದ್ಧಾಂತ ಎಂದೂ ಸ್ಕಂದ ಪುರಾಣದಲ್ಲಿ ಉಕ್ತವಾಗಿದೆ.

'ಆತ್ಮವತ್ ಸರ್ವಭೂತಾನಾಂ' (ಶ್ಲೋ. ೩೨) ಎಂಬಲ್ಲಿ 'ಆತ್ಮ' ಪರಮಾತ್ಮನೆಂದಿಟ್ಟುಕೊಂಡರೆ 'ಪ್ರಹ್ಲಾದ ಪರಮಾತ್ಮನಂತೆ ಎಲ್ಲ ಜೀವಿಗಳಿಗೂ ಹಿತಕರನೆಂ'ದು ಹೇಳಿದಂತಾಗುತ್ತದೆ. ಇಲ್ಲಿಯೂ ಹರಿಯ ಸಾಮ್ಯ ಅತ್ಯಲ್ಪವೇ ವಿವಕ್ಷಿತ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ಸಪ್ತಮಸ್ಕಂಧೇ
ಚತುರ್ಥೋऽಧ್ಯಾಯಃ

❖ ❖ ❖

ಅಧ್ಯಾಯ ೫

ಅಧ್ಯಾಯ ಸಾರಾಂಶ

ದೈತ್ಯಗುರು ಶುಕ್ರಾಚಾರ್ಯರ ಇಬ್ಬರು ಪುತ್ರರು ಶಂಡ ಮತ್ತು ಮರ್ಕರು ಹಿರಣ್ಯಕಶಿಪುವಿನ ಅರಮನೆ ಬಳಿ ವಾಸವಾಗಿದ್ದು ಬೇರೆ ಅಸುರ ಬಾಲಕರೊಂದಿಗೆ ಪ್ರಹ್ಲಾದನಿಗೆ ರಾಜನೀತಿ ಪಾಠ ಹೇಳಿ ಕೊಡುತ್ತಿದ್ದರು. ವೈಷ್ಣವಸಿದ್ಧಾಂತಕ್ಕೆ ವಿರುದ್ಧವಾದ ಆ ಪಾಠ ಪ್ರಹ್ಲಾದನಿಗೆ ರುಚಿಸಲಿಲ್ಲ.

ಒಮ್ಮೆ ಹಿರಣ್ಯಕಶಿಪು ಪ್ರಹ್ಲಾದನಿಗೆ 'ನೀನು ಕಲಿತುದರಲ್ಲಿ ಚೆನ್ನಾಗಿರುವ ಒಂದು ಪಾಠವನ್ನು ಹೇಳು' ಎಂದ. ಪ್ರಹ್ಲಾದ ನೆಂದ- 'ಸತ್ಸಿದ್ಧಾಂತಕ್ಕೆ ವಿರುದ್ಧವಾಗಿದ್ದು ಮನಸ್ಸಿನ ನೆಮ್ಮದಿಯನ್ನು ಹಾಳುಮಾಡುವ ಪಾಠವನ್ನು ಬಿಟ್ಟು ಹರಿಭಕ್ತಿಯ ಪಾಠ ಕಲಿಯಬೇಕು. ಹರಿಯನ್ನಾಶ್ರಯಿಸಬೇಕು.'

ಹಿರಣ್ಯಕಶಿಪು ಇದನ್ನು ಕೇಳಿ ತನ್ನ ಮಗನ ಬುದ್ಧಿಯನ್ನು ಯಾರೋ ಕೆಡಿಸಿರಬೇಕು ಎಂದುಕೊಂಡು ಇನ್ನು ಮುಂದೆ ಹಾಗಾಗದಂತೆ ಎಚ್ಚರವಹಿಸಲು ಗುರುಗಳಿಗೆ ಆದೇಶ ನೀಡಿದ. ಗುರುಗಳು ಪ್ರಹ್ಲಾದನನ್ನು ಮಿದುಮಾತಿನಿಂದ ಕೇಳಿದರು. 'ನಿನ್ನ ಬುದ್ಧಿ ಸ್ವತಃ ಹಾಳಾಯಿತೆ, ಅಥವಾ ಬೇರೆಯವರು ಹಾಳು ಮಾಡಿದರೆ, ಹೇಳು' 'ಸ್ವತಃ ನಾನಾಗಲಿ, ಬೇರೆಯವರಾಗಲೀ ಯಾರೂ ಸ್ವತಂತ್ರರಲ್ಲ. ಸ್ವತಂತ್ರರೆಂಬ ಭಾವನೆ ಬುದ್ಧಿಹಾಳಾದವ ರಲ್ಲಿ ಮಾತ್ರ ಕಂಡು ಬರುತ್ತದೆ. ಅದು ಪರಮಾತ್ಮನ ಲೀಲೆ. ನನ್ನ ಮನಸ್ಸು ನಿಮಗಿಂತ ವಿಲಕ್ಷಣವಾಗಿದ್ದು ಪರಮಾತ್ಮನ ಕಡೆಗೇ ಹೋಗುತ್ತದೆ. ಕಬ್ಬಿಣ ಆಯಸ್ಕಾಂತದ ಬಳಿಗೆ ಓಡುವಂತೆ,' ಎಂದ ಪ್ರಹ್ಲಾದ.

ಗುರುಗಳು ಕುಪಿತರಾಗಿ 'ದೈತ್ಯರೆಂಬ ಗಂಧದ ಮರಗಳ ಕಾಡಿನಲ್ಲಿ ಈತ ಮುಳ್ಳಿನ ಗಿಡವಾಗಿ ಹುಟ್ಟಿಕೊಂಡಿದ್ದಾನೆ. ಈ ಗಂಧದ ಮರಗಳ ಬುಡಕ್ಕೆ ಕೊಡಲಿ ವಿಷ್ಣು, ಆ ಕೊಡಲಿಯ ಕಾವು ಈತ' ಎನ್ನುತ್ತ ಬಲಾತ್ಕಾರವಾಗಿ ಲೌಕಿಕವಿದ್ಯೆಯನ್ನು ಉಪದೇಶಿಸಿ ದರು. ಅದನ್ನು ಆತನೀಗ ಗ್ರಹಿಸಿರುವನೆಂದು ವಿಶ್ವಾಸದಿಂದ

ಅವನನ್ನು ತಾಯಿಯ ಮೂಲಕ ಸ್ನಾನ ಅಲಂಕಾರಗಳನ್ನು ಮಾಡಿಸಿ ಹಿರಣ್ಯಕಶಿಪುವಿನ ಮುಂದೆ ನಿಲ್ಲಿಸಿದರು. ಆತ ಮಗನನ್ನು ಪ್ರೀತಿಯಿಂದ ಎತ್ತಿ ತಬ್ಬಿಕೊಂಡು ತೊಡೆಯ ಮೇಲೇರಿಸಿಕೊಂಡು 'ಮಗು, ನೀನು ಇಷ್ಟರವರೆಗೆ ಕಲಿತ ಉತ್ತಮವಾದ ಪಾಠವನ್ನು ಹೇಳು' ಎಂದ. ಆಗ ಪ್ರಹ್ಲಾದನೆಂದ, 'ವಿಷ್ಣುವಿನ ಮಹಿಮೆಗಳ ಶ್ರವಣ, ನಾಮಸಂಕೀರ್ತನ, ಸ್ಮರಣ, ಹರಿಭಕ್ತರ ಪಾದಸೇವೆ, ತುಲಸಿ ಮುಂತಾದವುಗಳಿಂದ ಹರಿಯ ಅರ್ಚನೆ, ವಂದನೆ, ಹರಿದಾಸನು ತಾನೆಂದುಕೊಳ್ಳುವುದು ಹರಿಯಲ್ಲಿ ಗಾಢವಾದ ಸ್ನೇಹ, ಮುಕ್ತನಾದಾಗಲೂ ತನ್ನಲ್ಲಿ ಹರಿಯೆ ನಿಯಾಮಕನೆಂದು ತಿಳಿಯುವುದು ಈ ನವವಿಧ ಭಕ್ತಿಯನ್ನು ಹರಿಗೆ ಸಮರ್ಪಿಸಿದಾಗಲೆ ಕಲಿತ ಪಾಠ ಉತ್ತಮವೆನಿಸುತ್ತದೆ.'

ಈ ಮಾತನ್ನು ಕೇಳಿದಾಗ ಹಿರಣ್ಯಕಶಿಪು ರೋಷದಿಂದ ತುಟಿಗಳನ್ನು ಅದುರಿಸುತ್ತ 'ದುರ್ಬ್ರಾಹಣನೆ, ಬಾಲಕನಿಗೆ ವಿಷ್ಣುಭಕ್ತಿಯ ಪಾಠ ಹೇಳಿ ಕೊಟ್ಟೆಯ? ನೀನು ವಂಚಕ, ದ್ರೋಹಿ' ಎಂದ. 'ರಾಜನೆ, ಈ ನಿನ್ನ ಮಗ ಈಗ ಹೇಳಿದ್ದು ನಾನು ಹೇಳಿಕೊಟ್ಟಿದ್ದಲ್ಲ. ಪರರು ಹೇಳಿಕೊಟ್ಟದ್ದೂ ಅಲ್ಲ. ಈ ಬುದ್ಧಿ ಅವನಿಗೆ ಸ್ವಾಭಾವಿಕವಾಗಿ ಬಂದಿದೆ' ಎಂದ ಆ ಬ್ರಾಹ್ಮಣ. 'ಪ್ರಹ್ಲಾದ, ಯಾರೂ ಹೇಳಿಕೊಡದಿದ್ದ ಈ ದುರ್ಬುದ್ಧಿ ನಿನಗೆ ಎಲ್ಲಿಂದ ಬಂತು? ಎಂದು ಗದರಿದ ಹಿರಣ್ಯಕಶಿಪು. ಪ್ರಹ್ಲಾದನೆಂದ, 'ವಿಷಯಾಸಕ್ತರಾದ ಜನರಿಗೆ ಹರಿಭಕ್ತಿ ಸ್ವತಃ ಲಭಿಸುವುದಿಲ್ಲ, ಬೇರೆಯವರಿಂದಲೂ ಲಭಿಸುವುದಿಲ್ಲ. ಅವರ ಗುರುಗಳೂ ಅಂಥವರೆ. ಕುರುಡನನ್ನು ಹಿಂಬಾಲಿಸುವ ಕುರುಡರು ಹಳ್ಳಕ್ಕೆ ಬೀಳುವಂತೆ ಇವರು ಸಂಸಾರಕೂಪದಲ್ಲಿಯೇ ಬೀಳುತ್ತಾರೆ. ಮಹಾತ್ಮರ ಪಾದಧೂಳಿಯಲ್ಲಿ ಸ್ನಾನ ಮಾಡದ ಹೊರತು ಹರಿಭಕ್ತಿಯನ್ನು ಹೊಂದಲಾರರು.'

ಹಿರಣ್ಯಕಶಿಪು ಕೋಪದಿಂದ ಕುರುಡಾಗಿ ಮಗನನ್ನು ಮಡಿಲಿಂದ ಎತ್ತಿ ನೆಲಕ್ಕೆ ಎಸೆದ. 'ಈತನನ್ನು ಕೊಂದು ದೂರಕ್ಕೆ ಎಸೆದು ಬಿಡಿರಿ. ಈತ ತನ್ನ ಚಿಕ್ಕಪ್ಪನ ಹಂತಕನಾದ ಹರಿಯ ಪಾದಗಳನ್ನು ದಾಸನಾಗಿ ಪೂಜಿಸುತ್ತಾನೆ. ಕೇವಲ ಐದರ

ಚಿಕ್ಕವಯಸ್ಸಿನಲ್ಲಿ ಕೂಡ ತಂದೆತಾಯಿಗಳ ಪ್ರೀತಿಯ ಸಂಬಂಧವನ್ನು ತೊರೆದಿರುವ ಈ ದುಷ್ಟ ನಂಬಿಕೆಗೆ ಅರ್ಹನಲ್ಲ. ನನ್ನ ಶರೀರ ದಿಂದ ಜನಿಸಿದರೂ ಶರೀರದಲ್ಲಿ ಉದ್ಭವಿಸಿದ ರೋಗದಂತೆ ಈತ ಅಹಿತಕರ, ರೋಗಗ್ರಸ್ತವಾದ ಅಂಗದಂತೆ ಅಪಾಯಕಾರಿ. ಅದನ್ನು ಕಿತ್ತು ಹಾಕಿದರೆ ಉಳಿದ ಅಂಗಗಳಾದರೂ ಉಳಿಯುತ್ತವೆ. ಅದರಿಂದ ಈತ ನನಗೆ ಹಿತಶತ್ರು. ಇವನಿಗೆ ವಿಷ ಉಣಿಸಿರಿ, ಶೂಲಕ್ಕೇರಿಸಿರಿ. ಯಾವುದಾದರೊಂದು ಬಗೆಯಿಂದ ಕೊಲ್ಲಿರಿ' ಎಂದು ದೈತ್ಯರಿಗೆ ಆಜ್ಞೆಮಾಡಿದ.

ಅವರು ಪ್ರಹ್ಲಾದನನ್ನು ಎಲ್ಲ ಆಯುಧಗಳಿಂದ ಕೊಲ್ಲಲು ಯತ್ನಿಸಿದರು. ಅದೃಷ್ಟವಿಲ್ಲದವನು ಎಷ್ಟೇ ಪ್ರಯತ್ನ ಮಾಡಿದರೂ ವ್ಯರ್ಥವಾಗುವಂತೆ ಅದು ಎಲ್ಲವೂ ವ್ಯರ್ಥವಾಯಿತು. ಆನೆಯ ಕಾಲಿಂದ ತುಳಿಸುವುದು ಹಾವುಗಳಿಂದ ಕಚ್ಚಿಸುವುದು ಬೆಟ್ಟದ ಮೇಲಿಂದ ಕೆಳಗೆ ತಳ್ಳುವುದು ಹಳ್ಳದಲ್ಲಿ ಹೂತುಹಾಕುವುದು, ವಿಷ ಉಣಿಸುವುದು ಉಪವಾಸ ದಲ್ಲಿರಿಸುವುದು ಹಿಮಗಾಳಿ ಬೆಂಕಿ ನೀರು ಕಲ್ಲುಬಂಡೆಗಳನ್ನು ಮೈಮೇಲೆ ಸುರಿಯುವುದು ಮಾಟ ಮಂತ್ರ ಮಾಯೆ ಎಲ್ಲವೂ ವಿಫಲವಾದುವು.

ಹಿರಣ್ಯಕಶಿಪುವಿಗೆ ಈಗ ಭಯ ಉಂಟಾಯಿತು. ಏಕೆಂದರೆ ಪ್ರಹ್ಲಾದನಿಗೆ ಯಾರ ಭಯವೂ ಇಲ್ಲ, ಮರಣವಿಲ್ಲ. ಅವನ ವಿರೋಧ ಮಾಡಿ ತಾನೇ ಸಾಯುವೆನೆ? ಎಂದು ತಲೆತಗ್ಗಿಸಿ ಕುಳಿತ. ಶಂಡಾಮರ್ಕರು ಸಮಾಧಾನ ಹೇಳಿದರು, 'ಪ್ರಹ್ಲಾದನಿನ್ನೂ ಎಳೆ ಮಗು. ಮಕ್ಕಳ ಮನಸ್ಸಿನಲ್ಲಿ ಗುಣವಾಗಲಿ ದೋಷವಾಗಲಿ ಒಂದೇ ರೀತಿ ಸ್ಥಿರವಾಗಿರುವುದಿಲ್ಲ. ಶುಕ್ರಾಚಾರ್ಯರು ಬರುವವರೆಗೆ ಈತ ಭಯದಿಂದ ಪಲಾಯನ ಮಾಡದಂತೆ ಬಂಧನದಲ್ಲಿಡು. ವಯಸ್ಸಾದಂತೆ ಮನುಷ್ಯನಿಗೆ ಬುದ್ಧಿ ಬರುತ್ತದೆ.' 'ಸರಿ, ಹಾಗಾದರೆ ಅವನಿಗೆ ರಾಜಧರ್ಮಗಳನ್ನು ಮಾತ್ರ ಉಪದೇಶಿಸುತ್ತಿರಿ' ಎಂದು ಆದೇಶಿಸಿದ.

ಆದರೆ ಪ್ರಹ್ಲಾದ ಗುರುಗಳ ಉಪದೇಶಗಳನ್ನು ಸ್ವೀಕರಿಸಲಿಲ್ಲ. ಗುರುಗಳು ಗೃಹಕೃತ್ಯನಿಮಿತ್ತವಾಗಿ ಮನೆಗೆ

ಹೋಗಿದ್ದಾಗ ಪ್ರಹ್ಲಾದನ ಜೊತೆಯ ಬಾಲಕರು ಕುತೂಹಲದಿಂದ ಅವನ ಬಳಿಗೆ ಬಂದು ಸೇರಿದರು. ಅವರ ಸ್ವರೂಪಯೋಗ್ಯತೆಯನ್ನು ಅರಿತಿದ್ದ ಮಹಾಜ್ಞಾನಿಯಾದ ಪ್ರಹ್ಲಾದ ಅವರಿಗೆ ಕರುಣೆಯಿಂದ ತತ್ತ್ವೋಪದೇಶ ಮಾಡಿದ.

❖ ❖ ❖

ಶಿಶುಪ್ರಹ್ಲಾದನ ಬುದ್ಧಿಯನ್ನು ಯಾರೋ ಕೆಡಿಸುತ್ತಿದ್ದಾರೆ. ಹಾಗಾಗದಂತೆ ಕಟ್ಟೆಚ್ಚರ ವಹಿಸಿರೆಂದು ಹಿರಣ್ಯಕಶಿಪು ಶಂಡಾಮರ್ಕರಿಗೆ ಆಜ್ಞೆ ಮಾಡಿದಾಗ ಅವರು ಏಕಾಂತದಲ್ಲಿ ಪ್ರಹ್ಲಾದನನ್ನು ನಿನಗೀ ದುರ್ಬುದ್ಧಿಯನ್ನು ಪರರು ಬೋಧಿಸಿದರೆ? ಏನು? ಎಂದು ಕೇಳುತ್ತಾರೆ. ಆಗ ಪ್ರಹ್ಲಾದ ಹೇಳುತ್ತಾನೆ.

ಪ್ರಹ್ಲಾದ ಉವಾಚ-

ಪರಃ ಸ್ವಶ್ಚೇತ್ಯಸದ್ಗ್ರಾಹಃ ಪುಂಸಾಂ ಯನ್ಮಾಯಯಾ ಕೃತಃ ।
ವಿಮೋಹಿತಧಿಯಾಂ ದೃಷ್ಟಸ್ತಸ್ಮೈ ಭಗವತೇ ನಮಃ ॥ ೧೧ ॥

ಸ ಯದಾಽನುಗತಃ ಪುಂಸಾಂ ಪಶುಬುದ್ಧಿರ್ವಿಭಿದ್ಯತೇ ।
ಅನ್ಯ ಏಷ ತಥಾಽನ್ಯೋಽಹಮಿತಿ ದೇಹಗತಾಽಸತೀ ॥ ೧೨ ॥

ಪ್ರಹ್ಲಾದ ನುಡಿದ- ಪರರು ಸ್ವತಂತ್ರರೆಂದೂ ತಾವು ಸ್ವತಂತ್ರರೆಂದೂ ದುರಭಿಮಾನ ಬುದ್ಧಿ ಹಾಳಾಗಿರುವವರಲ್ಲಿ ಕಂಡುಬರುತ್ತದೆ. ವಸ್ತುತಃ ಅದು ಪರಮಾತ್ಮನ ಇಚ್ಛೆಯಿಂದಲೆ. ಅಂಥ ಪರಮಾತ್ಮನಿಗಿದೋ ನಮಸ್ಕಾರ.

ದುರಭಿಮಾನದ ಉತ್ಪತ್ತಿಗೆ ಪರಮಾತ್ಮ ಅನುಕೂಲನಾದಾಗ ಈತನೂ ಸ್ವತಂತ್ರ ನಾನೂ ಸ್ವತಂತ್ರ ಎಂಬ ದುರಭಿಮಾನ ಜನರಲ್ಲಿ ಉಂಟಾಗುತ್ತದೆ. ಇದು ಶಾಸ್ತ್ರವಿಚಾರದಿಂದ ಬರುವಂಥದ್ದಲ್ಲ. ಕೇವಲ ಪಶುಬುದ್ಧಿ. ಇದು ಜೀವಸ್ವರೂಪದಲ್ಲಿಲ್ಲ. ಲಿಂಗಶರೀರದಲ್ಲಿ, ಅದರ ಮನಸ್ಸಿನಲ್ಲಿ ಇರುತ್ತದೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರು 'ಭೇದಗತಾಽಸತೀ' ಎಂದು ಅಪಪಾಠವಿಟ್ಟುಕೊಳ್ಳುತ್ತಾರೆ. ಈತ ನಮ್ಮವನು, ನಮ್ಮ ಮಿತ್ರ, ಈತ ಪರಕೀಯ ಶತ್ರು ಎಂದು ಭೇದಭಾವನೆ ಒಳ್ಳೆಯದಲ್ಲ, ಅದು ಪಶುಬುದ್ಧಿ ಪರಮಾತ್ಮನ ಅನುಗ್ರಹವಾದರೆ ಅದು ತೊಲಗುತ್ತದೆ ಎಂದು ವ್ಯಾಖ್ಯಾನ ಮಾಡುತ್ತಾರೆ. ಇವರಿಗೆ ಶ್ಲೋಕದಲ್ಲಿ 'ಭೇದಗತಾ' ಎಂಬ ಶಬ್ದ ವ್ಯರ್ಥವಾಗುತ್ತದೆ. 'ಈತ ನಮ್ಮವ ಈತ

ಪರಕೀಯ ಎಂಬ ಭಾವನೆ ಪಶುಬುದ್ಧಿ' ಎಂದು ಹೇಳಿದರೆ ಸಾಕು. ನಮ್ಮ ಪಾಠದಲ್ಲಿ 'ದೇಹಗತಾ' ಈ ಪಶುಬುದ್ಧಿ ಲಿಂಗ ಶರೀರದಲ್ಲಿ ಇದೆ, ಅಂದರೆ ಅದರ ಷೋಡಶ ಕಲೆಗಳಲ್ಲಿ ಒಂದಾದ ಮನಸ್ಸಿನಲ್ಲಿ ಇದೆ ಹೊರತು ಜೀವಸ್ವರೂಪದಲ್ಲಿ ಇಲ್ಲ. ಅದರಿಂದ ಸಜ್ಜೀವರಿಗೂ ಈ ಪಶುಬುದ್ಧಿ ಬರಬಹುದು, ಅದು ಅನರ್ಥಕಾರಿ ಯಾದ್ದರಿಂದ ತೊಲಗಬೇಕು ತೊಲಗುತ್ತದೆ ಎಂದು ತಿಳಿಸಲು 'ದೇಹಗತಾ' ಎಂಬ ಶಬ್ದ ಸಾರ್ಥಕ.

[೧]'ವಿಭಿದ್ಯತೇ' ಎಂಬ ಶಬ್ದವೂ ಬೇರೆ ವ್ಯಾಖ್ಯಾನಕಾರರಿಗೆ ಅನಾವಶ್ಯಕ. 'ವಿಭಿದ್ಯತೇ' ಎಂದರೆ ಅವರ ಪ್ರಕಾರ ತೊಲಗುತ್ತದೆ ಎಂದರ್ಥ. ಶಂಡಾಮರ್ಕರು ಪ್ರಹ್ಲಾದನಿಗೆ ಕೇಳಿದ ಪ್ರಶ್ನೆ ಪರಕೀಯರು ಯಾರೋ ನಿನಗೆ ಈ ದುರ್ಬುದ್ಧಿ ಉಪದೇಶ ಮಾಡಿರಬೇಕು, ಯಾರು ಅವರು?' ಎಂದು. ಅದಕ್ಕೆ ಪ್ರಹ್ಲಾದ 'ಪರಕೀಯರೆಂದು ಯಾರೂ ಇಲ್ಲ. ಈ ಸ್ವಪರ ಭಾವನೆ ಪಶುಬುದ್ಧಿ ಪರಮಾತ್ಮನಿಂದ ಬಂದಿದೆ, ಯನ್ಮಾಯಯಾ ಕೃತಃ' ಎಂದರೆ ಸಾಕು. ಪರಮಾತ್ಮನ ಅನುಗ್ರಹದಿಂದ ತೊಲಗುತ್ತದೆ ಎನ್ನಬಾರದು. ಭೇದಭಾವನೆ ಭ್ರಮಮೂಲಕ ವಾಗಿದ್ದು ಜ್ಞಾನದಿಂದ ಅದು ತೊಲಗುತ್ತದೆ ಎನ್ನಬೇಕು. ಸರ್ಪಭ್ರಮ ರಜ್ಜು ಜ್ಞಾನದಿಂದ ತೊಲಗುತ್ತದೆ. ಹಾಗೇ ಭೇದಭ್ರಮ ಅಭೇದಜ್ಞಾನದಿಂದ ತೊಲಗುತ್ತದೆ. ದೇಹಾತ್ಮೈಕ್ಯ ಭ್ರಮಮೂಲಕವಾದ ಶತ್ರುತ್ವಮಿತ್ರತ್ವಭಾವನೆಯೂ ಆ ಭ್ರಮವು ಜ್ಞಾನದಿಂದ ಕರಗಿಹೋದಾಗಲೇ ತೊಲಗುತ್ತದೆ. ನಮ್ಮ ವ್ಯಾಖ್ಯಾನದಲ್ಲಿ ಸ್ವಾತಂತ್ರ್ಯಭ್ರಮ ಅಸ್ವಾತಂತ್ರ್ಯಜ್ಞಾನದಿಂದ ತೊಲಗುವುದಿಲ್ಲ, ಭಗವಂತನ ಅನುಗ್ರಹದಿಂದ ಮಾತ್ರವೇ ಅದು ಸಾಧ್ಯ.

ದೇಹಾತ್ಮೈಕ್ಯಭಾವನೆಯಿಂದ ಶತ್ರುಮಿತ್ರರೆಂಬ ಭೇದಭಾವನೆ ಉಂಟಾಗು ತ್ತದೆ. ಅದರಿಂದ ಅದು ಪಶುಬುದ್ಧಿ ಎಂದು ವೀರರಾಘವ ವ್ಯಾಖ್ಯಾನ ಹೇಳುವುದು ಅಸಂಗತ. ಶತ್ರುಮಿತ್ರರೆಂಬ ಭಾವನೆಗೆ ಕಾರಣ ದೇಹಾತ್ಮೈಕ್ಯ ಭಾವನೆಯಲ್ಲ. ನಮಗೆ ಅತಿಪ್ರಿಯವಾದ ವಸ್ತುವನ್ನು ಯಾರಾದರೂ ಹಾಳುಗೆಡವಿದರೆ ಅವನು

---

೧. ಸ ಭಗವಾನ್ ಯದಾಽನುವ್ರತೋಽನುಕೂಲೋ ಭವತಿ ತದಾ ಪಶೂನಾಮವಿವೇಕಿನಾಮಿವ ಬುದ್ಧಿರ್ಭೇದಗತಾಽಸತೀ ಮಿಥ್ಯಾಸಂಸಾರವಿಷಯಾ ವಿಭಿದ್ಯತೇಽಭಿನ್ನಾತ್ಮನಿಷ್ಠಾ ಭವತಿ ।
-ಶ್ರೀಧರಃ

ಸ್ವಃ ಪರಶ್ಚೇತ್ಯಸದ್ಗ್ರಾಹ ಇದಂ ಮಿತ್ರಮಯಂ ಶತ್ರುರಯಂ ದೇವೋ ಮನುಷ್ಯೋ ಬ್ರಾಹ್ಮಣ ಇತ್ಯಾದಿ ದೇಹಾತ್ಮಭ್ರಮಃ ಕೃತಃ।... ಸ ಭಗವಾನ್ ಯದಾ ಪುಂಭಿರನುವ್ರತ ಆಶ್ರಿತಃ ತದಾ ಪುಂಸಾಂ ಪಶುಬುದ್ಧಿಃ ಪಶುಷ್ವಿವ ಬುದ್ಧಿಃ ದೇಹಾತ್ಮಾಭಿಮಾನರೂಪಾ ಬುದ್ಧಿರ್ವಿಭಿದ್ಯತೇ ನಿರಸ್ಯತೇ।
-ವೀರರಾಘವಃ

ಶತ್ರುವೆನಿಸುತ್ತಾನೆ. ಎಲ್ಲಕ್ಕಿಂತ ಹೆಚ್ಚು ಪ್ರಿಯವಾದ ದೇಹಕ್ಕೆ ಅಪಾಯ ಉಂಟುಮಾಡುವವನು ಮಹಾಶತ್ರುವೆನಿಸುತ್ತಾನೆ, ಹೊರತು, ನನ್ನ ಶರೀರ ನನಗೆ ಶತ್ರುವಾಗುವುದಿಲ್ಲ, ಪರರ ಶರೀರವೂ ನನಗೆ ಶತ್ರುವಾಗುವುದಿಲ್ಲ, ಶರೀರಾತ್ಮೈಕ್ಯ ಬುದ್ಧಿಯಿಂದ ಶತ್ರುತ್ವ ಭಾವನೆ ಆತ್ಮನಲ್ಲಿ ಉಂಟಾಗುವುದಿಲ್ಲ. ಪರನು ತನ್ನ ಶರೀರದ ಸಹಾಯದಿಂದ ನನಗೆ ಕೇಡು ಉಂಟುಮಾಡಿದ ಮಾತ್ರಕ್ಕೆ ಪರನ ಶರೀರ ನನಗೆ ಶತ್ರುವಾಗುವುದಿಲ್ಲ. ಆಯುಧದ ಸಹಾಯದಿಂದ ನನಗೆ ಕೇಡುಮಾಡುತ್ತಿದ್ದಾನೆ ಎಂದು ಆಯುಧವನ್ನು ಶತ್ರುವೆಂದು ನಾನು ಬಗೆಯುವುದಿಲ್ಲ. ಆದರಿಂದ ದೇಹಧರ್ಮವಾದ ಶತ್ರುತ್ವಮಿತ್ರತ್ವಗಳು ದೇಹಾತ್ಮೈಕ್ಯ ಭಾವನೆಯಿಂದಾಗಿ ಆತ್ಮನಲ್ಲಿ ಆರೋಪಿತವಾಗುತ್ತದೆ ಎನ್ನುವುದು ಅಸಂಗತ.

'ಭೇದಭ್ರಮ ಪಶುಬುದ್ಧಿ' ಎಂದು ಶ್ರೀಧರವ್ಯಾಖ್ಯಾನ ಹೇಳುವುದು ಭಾಗವತದ ಅಭಿಪ್ರಾಯವಲ್ಲ. 'ಪಶುಬುದ್ಧಿ' ಎಂಬ ಶಬ್ದದಿಂದ ಅದು,

> ಯೋಽನ್ಯಾಂ ದೇವತಾಮುಪಾಸ್ತೇಽನ್ಯೋಽಸಾವನ್ಯೋಽ ಹಮಸ್ಮೀತಿ
> ನ ಸ ವೇದ ಯಥಾ ಪಶುಃ ।

ಎಂಬ ಶ್ರುತಿಯಲ್ಲಿ ಹೇಳಿದ್ದನ್ನೇ ಅನುವಾದ ಮಾಡುತ್ತದೆ. ಈ ಶ್ರುತಿ ಭೇದಜ್ಞಾನವನ್ನು ಪಶುಬುದ್ಧಿ ಎಂದು ಹಳಿಯುತ್ತಿಲ್ಲ. ಅನ್ಯಶಬ್ದಕ್ಕೆ ಭಿನ್ನ ಎಂದರ್ಥವಲ್ಲ. ಸ್ವತಂತ್ರ ಎಂದರ್ಥ ಇಲ್ಲಿ ವಿವಕ್ಷಿತವಾಗಿದೆ. ಪರಮಾತ್ಮ ಸ್ವತಂತ್ರ ನಾನೂ ಸ್ವತಂತ್ರನೆಂದು ತಿಳಿಯುವುದು ಪಶುಬುದ್ಧಿ. ಪರಮಾತ್ಮನೊಬ್ಬನೇ ಸ್ವತಂತ್ರ. ಶ್ರುತಿಗೆ ಹೀಗೆ ಅಭಿಪ್ರಾಯವೆನ್ನುವುದು ಬ್ರಹ್ಮತರ್ಕವಚನದಿಂದ ಸಿದ್ಧವಾಗುತ್ತದೆ. ಈ ಸ್ವಾತಂತ್ರ್ಯಾಭಿಮಾನ ಪಶುಬುದ್ಧಿ. ಸಜ್ಜೀವರ ಬಾಹ್ಯಮನಸ್ಸಿನಲ್ಲಿ ಭಗವಂತನ ಇಚ್ಛೆಯಿಂದ ಮೂಡುತ್ತದೆ. ಅವನ ಅನುಗ್ರಹದಿಂದಲೇ ತೊಲಗುತ್ತದೆ ಎಂದು ಪ್ರಹ್ಲಾದನ ಅಭಿಪ್ರಾಯವೆನ್ನಬೇಕು.

ಸ್ವಾತಂತ್ರ್ಯೇಽನ್ಯಸದ್ಭಾವನಿಷೇಧಾಯ ಶ್ರುತಿಸ್ತ್ವಿಯಂ ।
ಅನ್ಯೋಽಸಾವನ್ಯೋಽಹಮಿತಿ ಪಶ್ಯನ್ನಜ್ಞ ಇತಿ ಸ್ಮ ಹ ॥
ಆತ್ಮಾನಮಂತರ್ಯಾಮಯೇದಿತಿ ಭೇದಂ ಸ್ವರೂಪತಃ ।
ಆಹ ತದ್ ಬ್ರಹ್ಮಣೋಽಧೀನಾ ಭಿನ್ನಾ ಜೀವಾಃ ಸದೈವ ತು ।
ಸ್ವರೂಪಸತ್ತಾ ಕರ್ತೃತ್ವಂ ಭೋಗೋ ಮೋಕ್ಷಸ್ತಥೈವ ಚ ।
ಮುಕ್ತಸ್ಯಾವಸ್ಥಿತಿಶ್ಚೈವ ಸರ್ವಂ ವಿಷ್ಣೋರ್ವಶೇ ಸದಾ ॥

ಇತಿ ಬ್ರಹ್ಮತರ್ಕೇ ॥

ಅನ್ಯೋऽಸಾವನ್ಯೋऽಹಮಸ್ಮೀತಿ ನ ಸ ವೇದ ಯಥಾ ಪಶುಃ 'ಇವನು ಅನ್ಯ ನಾನೂ ಅನ್ಯನಾಗಿದ್ದೇನೆ ಎನ್ನುವವನು ಏನೂ ತಿಳಿಯುವುದಿಲ್ಲ ಪಶುವಿನಂತೆ' ಎಂದು ಹೇಳುವ ಶ್ರುತಿ ಸ್ವತಂತ್ರನಾಗಿ ಇನ್ನೊಬ್ಬ ಕರ್ತೃ ಇರುವನೆಂಬುದನ್ನು ನಿಷೇಧ ಮಾಡಲು ಹೊರಟಿದೆ ಹೊರತು ಇನ್ನೊಬ್ಬನು ಇಲ್ಲವೇ ಇಲ್ಲ ಎಂದು ಭೇದನಿಷೇಧ ಮಾಡಲು ಹೊರಟಿಲ್ಲ. ಏಕೆಂದರೆ 'ಯ ಆತ್ಮಾನಮಂತರೋ ಯಮಯತ್ಯೇಷ ತ ಆತ್ಮಾऽಂ-ತರ್ಯಾಮ್ಯಮೃತಃ' ಪರಮಾತ್ಮ ಜೀವಾತ್ಮರ ಒಳಗಿದ್ದು ಪ್ರೇರಿಸುತ್ತಾನೆ, ಅವನು ನಿತ್ಯಮುಕ್ತ, ಅಂತರ್ಯಾಮಿ, ನಿನ್ನ ಸ್ವಾಮಿ ಎಂಬ ಶ್ರುತಿಯಲ್ಲಿ ಸ್ಪಷ್ಟವಾಗಿ ಭೇದವು ಪ್ರತಿಪಾದಿತವಾಗಿದೆ. ಆದ್ದರಿಂದ ಜೀವಾತ್ಮರು ಬ್ರಹ್ಮನಿಗಿಂತ ಭಿನ್ನರು ಸದಾ ಬ್ರಹ್ಮನಿಗೇ ಅಧೀನರು. ಅವರ ಸ್ವರೂಪ ಸತ್ತೆ ಕರ್ತೃತ್ವ ಭೋಗ ಮೋಕ್ಷ ಮತ್ತು ಮುಕ್ತರಾಗಿ ಇರುವುದೂ ಕೂಡ ಸದಾ ವಿಷ್ಣುವಿಗೇ ಅಧೀನವಾಗಿರುತ್ತದೆ ಎಂದು ಬ್ರಹ್ಮತರ್ಕದಲ್ಲಿ ಉಕ್ತವಾಗಿದೆ.

❖ ❖ ❖

ಹಿರಣ್ಯಕಶಿಪು ಒಂದುದಿನ ಪ್ರಹ್ಲಾದನನ್ನು ತೊಡೆಯ ಮೇಲೇರಿಸಿಕೊಂಡು ನೀನು ಗುರುಗಳಿಂದ ಕಲಿತಿರುವ ಯಾವುದಾದರೊಂದು ಒಳ್ಳೆಯ ವಿಷಯವನ್ನು ಹೇಳು ಎಂದಾಗ ಪ್ರಹ್ಲಾದ ಹೇಳುತ್ತಾನೆ-

ಪ್ರಹ್ಲಾದ ಉವಾಚ-

ಶ್ರವಣಂ ಕೀರ್ತನಂ ವಿಷ್ಣೋಃ ಸ್ಮರಣಂ ಪಾದಸೇವನಮ್ ।
ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮನಿವೇದನಮ್ ॥ ೨೩ ॥

ಇತಿ ಪುಂಸಾऽರ್ಪಿತಾ ವಿಷ್ಣೌ ಭಕ್ತಿಶ್ಚೇನ್ನವಲಕ್ಷಣಾ ।
ಕ್ರಿಯತೇ ಭಗವತ್ಯದ್ಧಾ ತನ್ಮನ್ಯೇऽಧೀತಮುತ್ತಮಮ್ ॥ ೨೪ ॥

ಪ್ರಹ್ಲಾದ ನುಡಿದ, ವಿಷ್ಣುವಿನ ಮಹಿಮೆಯನ್ನು ಶ್ರವಣ ಮಾಡುವುದು, ಅವನ ನಾಮ ಸಂಕೀರ್ತನೆ, ಹರಿಸ್ಮರಣೆ, ಹರಿಭಕ್ತರೊಳಗೆ ಹರಿಯನ್ನು ಕಾಣುತ್ತ ಪಾದಸೇವೆ ಮಾಡುವುದು, ತುಲಸಿ ಪುಷ್ಪ ಮುಂತಾದವುಗಳಿಂದ ಹರಿಮೂರ್ತಿಯನ್ನು ಅರ್ಚಿಸುವುದು ಸ್ತುತಿ ಅಭಿವಾದನಗಳನ್ನು ಅರ್ಪಿಸುವುದು ಹರಿದಾಸ ತಾನೆಂದುಕೊಳ್ಳುವುದು ಹರಿಯಲ್ಲಿ ಅತ್ಯಂತ ಸ್ನೇಹ ಮಾಡುವುದು, ತಾನು ಮುಕ್ತನಾದಾಗಲೂ ತನ್ನೊಳಗೆ ನಿಯಾಮಕನಾಗಿ ಹರಿ ಇರುತ್ತಾನೆ ಎಂದು ತಿಳಿಯುವುದು. ಹೀಗೆ

ನವವಿಧವಾದ ಭಕ್ತಿ ಮಾಡುವುದೇ ಎಲ್ಲರೂ ಕಲಿಯಬೇಕಾಗಿರುವ ಒಳ್ಳೆಯ ವಿಷಯವೆಂದು ನನ್ನ ಅಭಿಪ್ರಾಯ.

[೧]ಇಲ್ಲಿ ಆತ್ಮನಿವೇದನವೆಂದರೇನು ಎನ್ನುವ ವಿಷಯದಲ್ಲಿ ಬೇರೆ ವ್ಯಾಖ್ಯಾನಕಾರರು ತನ್ನ ಶರೀರವನ್ನು ಭಗವಂತನಿಗೆ ಅರ್ಪಿಸುವುದೆಂದು ವಿವರಣೆ ನೀಡುತ್ತಾರೆ. ತನ್ನ ಶರೀರವನ್ನು ಮಾತ್ರವೆ ಏನು ತನ್ನದೆಂಬುದೇನಿದೆಯೋ ಅದೆಲ್ಲವನ್ನೂ ಸಮರ್ಪಿಸಬೇಕೆಂದು ಗಿರಿಧರ ವ್ಯಾಖ್ಯಾನ ಹೇಳುತ್ತದೆ. ಆಗ ದಾಸ್ಯವೆಂದರೇನು ಎಂಬ ಪ್ರಶ್ನೆ ಬರುತ್ತದೆ. ಏಕೆಂದರೆ ದಾಸ್ಯದಲ್ಲಿಯೂ ದಾಸನದು ಎಂದೇನೂ ಇರುವುದಿಲ್ಲ, ಎಲ್ಲವೂ ಪ್ರಭುವಿನದು. ಪ್ರಭು ದಾಸನನ್ನು ಬೆಲೆಗೆ ಮಾರಾಟ ಮಾಡಬಹುದು. ತ್ಯಾಗ ಮಾಡಬಹುದು. ಹೀಗಾಗಿ ಪುನರುಕ್ತಿ. ಅದಕ್ಕೆ ದಾಸ್ಯವೆಂದರೆ ಕರ್ಮಸಮರ್ಪಣೆ ಎಂದೂ ಆತ್ಮಸಮರ್ಪಣೆ ಎಂದರೆ ಶರೀರ ಸಮರ್ಪಣೆ ಎಂದೂ ವ್ಯವಸ್ಥೆ ಮಾಡುತ್ತಾರೆ. ಆದರೆ ಶರೀರವನ್ನು ಅರ್ಪಿಸದೆ ಕೇವಲ ಕರ್ಮಸಮರ್ಪಣೆ ಮಾಡಿದರೆ ಅವನು ದಾಸನಾಗುವುದಿಲ್ಲ, ಮಿತ್ರನಾಗಬಹುದು, ಉಪಕಾರಿ ಎನಿಸಬಹುದು. ಹೀಗಾಗಿ ದಾಸ್ಯವೆಂದರೂ ಸರ್ವಸ್ವ ಸಮರ್ಪಣೆ, ಆತ್ಮಸಮರ್ಪಣೆ ಎಂದರೂ ಸರ್ವಸ್ವ ಸಮರ್ಪಣೆಯೆ ಎಂದು ಪುನರುಕ್ತಿ.

ಶರೀರ ಸಮರ್ಪಣವೆಂದರೇನು? ಶರೀರದ ಎಲ್ಲ ಕರ್ಮಗಳನ್ನೂ ಭಗವಂತನಿಗಾಗಿ ಮಾಡುವುದು, ಮಾಡಿ ಅರ್ಪಿಸುವುದೇ ತಾನೆ? ಇದೇ ದಾಸ್ಯ. ಅದರಿಂದಲೂ ಪುನರುಕ್ತಿ. ಅದಕ್ಕೆ ಶ್ರೀಧರವ್ಯಾಖ್ಯಾನ ಹೇಳುತ್ತದೆ, ಶರೀರ

೧. ಆತ್ಮನಿವೇದನಂ ಸ್ವಶರೀರಸಮರ್ಪಣಂ। ಯಥಾ ವಿಕ್ರೀತಸ್ಯ ಗವಾಶ್ವಾದೇರ್ಭರಣಪಾಲನಾದಿಚಿಂತಾ ನ ಕ್ರಿಯತೇ ತಥಾ ದೇಹಂ ತಸ್ಮೈಸಮರ್ಪ್ಯ ತಚ್ಚಿಂತಾವರ್ಜನಮಿತ್ಯರ್ಥಃ। ದಾಸ್ಯಂ ಕರ್ಮಾರ್ಪಣಂ। -ಶ್ರೀಧರಃ

ಆತ್ಮನಿವೇದನಂ ಓಮಿತ್ಯಾತ್ಮಾನಂ ಯುಂಜೀತೇತಿ ಶ್ರುತ್ಯುಕ್ತರೀತ್ಯಾ ತಚ್ಛೇಷತ್ವಾನುಸಂಧಾನಂ । -ವೀರರಾಘವಃ

ಆತ್ಮನಿವೇದನಮಾತ್ಮ ಸಮರ್ಪಣಂ । -ವಿಶ್ವನಾಥಃ

ಆತ್ಮನಿವೇದನಂ ಸ್ವಶರೀರ ಸಮರ್ಪಣಂ । -ಭಗವತ್ಪ್ರಸಾದಃ

ಆತ್ಮನಿವೇದನಮಾತ್ಮಾ ದೇಹಸ್ತದುಪಲಕ್ಷಣಂ ದಾರಾಗಾರಪುತ್ರವಿತ್ತ ದೇಹಾದಿಕಂ ಸರ್ವಂ ಭಗವದೀಯಮೇವ, ನಾತ್ರ ಕಿಂಚಿದಣುಮಾತ್ರಮಪಿ ಮದೀಯಂ। ಸ ಚ ಸರ್ವಪಾಲನೇ ಸಮರ್ಥಃ ಸ್ವತಂತ್ರಶ್ಚೇತಿ ತತ್ರ ಕಿಂ ಮದೀಯಯಾ ಚಿಂತಯೇತಿ ಭಾವನಯಾ ಸರ್ವಚಿಂತಾತ್ಯಾಗಃ । -ಗಿರಿಧರಃ

ಸಮರ್ಪಣವೆಂದರೆ ಶರೀರದ ರಕ್ಷಣೆಯ ಭಾರವನ್ನು ಭಗವಂತನಿಗೆ ಒಪ್ಪಿಸಿ ನಿಶ್ಚಿಂತನಾಗುವುದು ಎಂದು. ಇದೂ ಸರಿಯಲ್ಲ, ತನ್ನ ಶರೀರವನ್ನು ಕಾಪಾಡಲು ತಾನು ಯತ್ನ ಮಾಡಬೇಕು. ಭಗವಂತನ ಸೇವೆಗಾಗಿ ನೂರು ವರ್ಷ ಆಯುಷ್ಯವನ್ನು ಬಯಸಬೇಕು, ಹೊರತು ನನಗೆ ಶರೀರ ಬೇಡ ಎನ್ನಬಾರದು 'ಆತ್ಮಾನಂ ಸತತಂ ರಕ್ಷೇದ್ ದಾರೈರಪಿ ಧನೈರಪಿ' ಎಂದು ವಿಧಿ ಇದೆ. 'ವೃತ್ತ್ಯರ್ಥೇ ಪ್ರಾಣಸಂಕಟೇ' 'ಪ್ರಾಣಾತ್ಯಯೇ ಸರ್ವಧನಾಪಹಾರೇ' ಎಂದು ಮುಂತಾಗಿ ಆತ್ಮರಕ್ಷಣೆಗಾಗಿ ಸುಳ್ಳು ಹೇಳಿದರೂ ದೋಷವಿಲ್ಲ ಎಂದಿರುವಾಗ ತನ್ನ ಶರೀರರಕ್ಷಣೆ ಮಾಡಿಕೊಳ್ಳಲು ಯತ್ನ ಮಾಡದಿರುವುದು ತಪ್ಪಾಗುತ್ತದೆ. ವಿಷ್ಣುಚಕ್ರ ತನ್ನನ್ನು ಬೆನ್ನಟ್ಟಿ ಬಂದರೆ ದುರ್ವಾಸರು ತ್ನಷ್ಮ್ರ ರಕ್ಷಣೆಗಾಗಿ ಒಂದು ವರ್ಷಕಾಲ ಬ್ರಹ್ಮಾಂಡವಿಡೀ ಸುತ್ತಿದರು. ತಕ್ಷಕನಿಂದ ಮರಣ ನಿಶ್ಚಿತವಾಗಿದ್ದರೂ ಪರೀಕ್ಷಿದ್ರಾಜ ಗಂಗಾನದೀ ಪ್ರವಾಹದ ನಡುವೆ ಏಕಸ್ತಂಭದ ಅರಮನೆಯಲ್ಲಿ ಇದ್ದು ತನ್ನ ರಕ್ಷಣೆಗೆ ಯತ್ನ ಮಾಡಿದ. ಆತ ಅಪರೋಕ್ಷ ಜ್ಞಾನಿ, ಚರಮಶರೀರಿ ಹೊರತು ಅಜ್ಞಾನಿಯಲ್ಲ. ಹಾಗಾದರೆ ಜ್ಞಾನಿ ತನ್ನ ರಕ್ಷಣೆಗೆ ತಾನು ಬಯಸುವುದಿಲ್ಲ ಎನ್ನುವ 'ತತೋ ನ ವಿಜುಗುಪ್ಸತೇ' 'ನಾತ್ಮಾನಂ ಗೋಪ್ತುಮಿಚ್ಛತಿ' ಎಂದು ಮುಂತಾದ ವಚನಗಳಿಗೆ ಏನರ್ಥ? ಎಂದರೆ ಸ್ವತಂತ್ರವಾಗಿ ತಾನು ತನ್ನನ್ನು ರಕ್ಷಣೆ ಮಾಡಿಕೊಳ್ಳಲು ಬಯಸುವುದಿಲ್ಲ, ಅಥವಾ ಅವನಿಗೆ ತನ್ನ ನಾಶದ ಭಯವಿರುವುದಿಲ್ಲ, ಭಗವಂತ ಕಾಪಾಡುತ್ತಾನೆ ಎಂಬ ವಿಶ್ವಾಸವಿರುತ್ತದೆ ಎಂದರ್ಥ. ಭಗವಂತನೇ ಕಾಪಾಡಲಿ ಎಂದುಕೊಂಡು ತಾನು ಸುಮ್ಮನಿದ್ದರೆ ಭಗವಂತ ಕಾಪಾಡುವುದಿಲ್ಲ.

ಆತ್ಮನಿವೇದನವೆಂದರೆ ಏನೆಂಬುದನ್ನೂ ಕೂಡ ಬ್ರಹ್ಮತರ್ಕವಚನವೊಂದು ಸ್ಪಷ್ಟಪಡಿಸಿದೆ.

ಆತ್ಮಸ್ಥತ್ವೇನ ವೇದನಮಾತ್ಮನಿವೇದನಂ ।
ಮುಕ್ತಸ್ಯಾಪಿ ಮಮಾಂತಃಸ್ಥೋ ನಿಯಂತೈವ ಹರಿಃ ಸದಾ ।
ಇತಿ ಜ್ಞಾನಂ ಸಮುದ್ದಿಷ್ಟಂ ಸಮ್ಯಗಾತ್ಮನಿವೇದನಂ ॥ ಇತಿ ಚ ।

ಭಗವಂತ ತನ್ನೊಳಗೆ ನಿಯಾಮಕನಾಗಿ ರಕ್ಷಕನಾಗಿ ಸದಾ ಇರುತ್ತಾನೆ ಎಂದು ತಿಳಿಯುವುದು ಆತ್ಮನಿವೇದನವೆನಿಸುತ್ತದೆ.

ನಾನು ಮುಕ್ತನಾದಾಗಲೂ ಸದಾ ನನ್ನೊಳಗಿದ್ದು ನಿಯಮನ ಮಾಡುತ್ತಲೇ ಇರುತ್ತಾನೆ ಶ್ರೀಹರಿ ಎಂಬ ಯಥಾರ್ಥಜ್ಞಾನವೇ ಆತ್ಮನಿವೇದನವೆನಿಸುತ್ತದೆ ಎಂದೂ ಬ್ರಹ್ಮತರ್ಕದಲ್ಲಿ ಉಕ್ತವಾಗಿದೆ.

'ಆತ್ಮ ನಿವೇದನ' ಎಂಬಲ್ಲಿ 'ನಿ' ಎಂದರೆ ನಿತರಾಂ ವಿಶೇಷವಾಗಿ ತಿಳಿಯುವುದು, 'ಆತ್ಮ' ಎಂದರೆ ಪರಮಾತ್ಮ ಮತ್ತು ತಾನು. ಪರಮಾತ್ಮನನ್ನು ತನ್ನಲ್ಲಿ ಅಂತರ್ಯಾಮಿ ಎಂದು ವಿಶೇಷವಾಗಿ ತಿಳಿಯುವುದು ಆತ್ಮನಿವೇದನ. ದಾಸ್ಯದಲ್ಲಿ ತನ್ನ ಶರೀರದ ಹಾಗೂ ಶರೀರದಿಂದಾಗುವ ಕರ್ಮಗಳ ಸಮರ್ಪಣೆ ಇರುತ್ತದೆ. ಹೊರತು ಅಂತರ್ಯಾಮಿತ್ವದ ಅನುಸಂಧಾನವಿಲ್ಲ. ರಾಜ ತನ್ನ ದಾಸನಿಗೆ ಹೊರಗೆ ನಿಯಾಮಕನಾಗಿರುತ್ತಾನೆ. ಅಂತರ್ಯಾಮಿಯಾಗಿರುವುದಿಲ್ಲ. ಆತ್ಮನಿವೇದನದಲ್ಲಿ ಅಂತರ್ಯಾಮಿತ್ವದ ವಿಶೇಷ ಅನುಸಂಧಾನವಿರುವುದು ವಿಶೇಷ. ಆದ್ದರಿಂದ ಪುನರುಕ್ತಿ ಇಲ್ಲ.

❖ ❖ ❖

'ನೀವು ವಂಚಕರು, ದ್ರೋಹಿಗಳು, ಪ್ರಹ್ಲಾದನಿಗೆ ವಿಷ್ಣುಭಕ್ತಿಯ ಪಾಠ ಹೇಳಿಕೊಟ್ಟಿರುವಿರಿ' ಎಂದು ಹಿರಣ್ಯಕಶಿಪು ಆಕ್ಷೇಪಿಸಿದಾಗ ಶಂಡಾಮರ್ಕರು ಹೇಳುತ್ತಾರೆ-

ನ ಮತ್ಪ್ರಣೀತಂ ನ ಪರಪ್ರಣೀತಂ
ಸುತೋ ವದತ್ಯೇಷ ತವೇಂದ್ರಶತ್ರೋ ।
ನೈಸರ್ಗಿಕೀಯಂ ಮತಿರಸ್ಯ ರಾಜನ್
ನಿಯಚ್ಛ ಮನ್ಯುಂ ಕ್ವ ತದಾತ್ಮಮಾನಃ ॥ ೨೮ ॥

ರಾಜನೆ, ಈ ನಿನ್ನ ಮಗ ಹೇಳುತ್ತಿರುವುದು ನಾನು ಹೇಳಿಕೊಟ್ಟಿದ್ದೂ ಅಲ್ಲ, ಪರರು ಹೇಳಿಕೊಟ್ಟಿದ್ದೂ ಅಲ್ಲ. ಈ ಬುದ್ಧಿ ಇವನಿಗೆ ಸ್ವಾಭಾವಿಕವಾಗಿ ಬಂದುಬಿಟ್ಟಿದೆ. ಕೋಪವನ್ನು ತಡೆದುಕೊಳ್ಳು. ನಾನು ವಂಚನ ಮಾಡುವ ಬ್ರಾಹ್ಮಣನಾಗಿದ್ದಲ್ಲಿ ನನಗೆ ಬ್ರಹ್ಮಜ್ಞಾನ ಎಲ್ಲಿ ಬರುತ್ತಿತ್ತು? ನಿನ್ನ ಆಜ್ಞೆ ಮೀರುವಷ್ಟು ಅಹಂಕಾರವೂ ನನಗೆಲ್ಲಿ?

ಇಲ್ಲಿ 'ಕ್ವ ತದಾತ್ಮಮಾನಃ' ಎಂಬಲ್ಲಿ 'ಕದದಾಃ ಸ್ಮ ಮಾ ನಃ 'ನಮ್ಮಲ್ಲಿ ದೋಷಾರೋಪಣ ಮಾಡಬೇಡ' ಎಂದು ಪಾಠಾಂತರವನ್ನು ಬೇರೆ ವ್ಯಾಖ್ಯಾನಕಾರರು ಇಟ್ಟುಕೊಂಡಿದ್ದಾರೆ. ನಮ್ಮ ಪಾಠದಲ್ಲಿ ಹೀಗೆ ಅರ್ಥ-

ಕ್ವ ತದಾತ್ಮಮಾನೋ ಮಮ?

ನಾನು ವಂಚನ ಮಾಡುವ ಬ್ರಾಹ್ಮಣನಾಗಿದ್ದಲ್ಲಿ ನನಗೆ ಆತ್ಮಜ್ಞಾನ ಬ್ರಹ್ಮಜ್ಞಾನ ಎಲ್ಲಿ ಬರುತ್ತಿತ್ತು? ಅಥವಾ ಪ್ರಹ್ಲಾದನಿಗೆ ಹರಿಭಕ್ತಿ

ಸ್ವಾಭಾವಿಕವಾಗಿಯೇ ಇರುವಾಗ ನಾನು ಹರಿಭಕ್ತಿಯನ್ನು ಹೇಳಿಕೊಡಬಲ್ಲೆನೆನ್ನುವ ಆತ್ಮಮಾನ ಅಹಂಕಾರ ನನಗೆ ಇರಬಹುದೆ?

ಹಿರಣ್ಯಕಶಿಪು ಮಾಡಿರುವ ಆಕ್ಷೇಪ ಎರಡು. ನೀವು ವಂಚಕರು ದ್ರೋಹಿಗಳು ಎಂದು, ಮತ್ತು ನೀವು ಹರಿಭಕ್ತಿಯ ಪಾಠ ಹೇಳಿಕೊಟ್ಟಿರುವಿರಿ ಎಂದು. ಮೊದಲನೆ ಆಕ್ಷೇಪಕ್ಕೆ ಉತ್ತರ, ಆತ್ಮಮಾನ ಎಂದರೆ ಬ್ರಹ್ಮಜ್ಞಾನ. ನಾವು ಬ್ರಹ್ಮಜ್ಞಾನಿಗಳು. ಬ್ರಹ್ಮಜ್ಞಾನಿಗಳಲ್ಲಿ ವಂಚನೆ ಮಾಡುವ ಪ್ರವೃತ್ತಿ ಇರುವುದಿಲ್ಲ, ಅದರಿಂದ ನನ್ನನ್ನು ವಂಚಕನೆನ್ನಬೇಡ. ಎರಡನೆ ಆಕ್ಷೇಪಕ್ಕೆ ಉತ್ತರ-ಪ್ರಹ್ಲಾದನಿಗೆ ವಿಷ್ಣುಭಕ್ತಿ ಸ್ವಾಭಾವಿಕ ವಾಗಿಯೇ ಇದೆ ಎನ್ನುತ್ತಿದ್ದೇವೆ. ಸ್ವಾಭಾವಿಕವಾಗಿರುವಾಗ ಉಪದೇಶದಿಂದ ಹೊಸದಾಗಿ ವಿಷ್ಣುಭಕ್ತಿಯನ್ನು ಹುಟ್ಟಿಸಬಲ್ಲೆವೆಂಬ ಆತ್ಮಮಾನ ಅಹಂಕಾರ ನಮಗೆ ಹೇಗೆ ಇರಬಲ್ಲುದು? ಎಂದು. ಹೀಗೆ ನಮ್ಮ ಭಾಗವತ ಪಾಠ ಹೆಚ್ಚು ಅರ್ಥಗರ್ಭಿತವಾಗಿದೆ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ಸಪ್ತಮಸ್ಕಂಧೇ
ಪಂಚಮೋऽಧ್ಯಾಯಃ

❖ ❖ ❖

ಅಧ್ಯಾಯ ೬

ಅಧ್ಯಾಯ ಸಾರಾಂಶ

ಪ್ರಹ್ಲಾದ ಬಾಲಕರಿಗೆ ಹೀಗೆ ಉಪದೇಶಿಸಿದ 'ನೀವು ಯಾರೂ ಆಟವಾಡುತ್ತ ಆಯುಷ್ಯವನ್ನು ವ್ಯರ್ಥ ಮಾಡಿಕೊಳ್ಳ ಬೇಡಿ. ಆಯುಷ್ಯ ಸ್ಥಿರವಲ್ಲ. ಹಿಂದಿನ ಕಾಲದಲ್ಲಿ ಮಕ್ಕಳು ಆಟವಾಡುತ್ತ ಮೋಕ್ಷಸಾಧನೆಯನ್ನು ಮರೆತಿರಲಿಲ್ಲ. ತತ್ವಜ್ಞಾನ ವನ್ನು ಸಂಪಾದಿಸುತ್ತಿದ್ದರು. ಅದರಿಂದ ನಾವೀಗ ಗುರುಗಳ ಮಾತನ್ನು ಕೇಳಬಾರದು. ಅವರು ಕೇವಲ ಲೌಕಿಕ ವಿದ್ಯೆಯನ್ನು ಉಪದೇಶಿಸುತ್ತಾರೆ. ಅವರು ಹೇಳುವ ನೀತಿಶಾಸ್ತ್ರನಮಗೆ ಯಾರು ಶತ್ರುಗಳು ಯಾರು ಮಿತ್ರರು ಎಂದು ಮುಂತಾಗಿ ಹೇಳುತ್ತದೆ. ಆದರೆ ನಮಗೆ ಶತ್ರು ಯಾರು, ಮಿತ್ರ ಯಾರು, ಎಲ್ಲವೂ ಭಗವಂತನೆ. ಶತ್ರುಮಿತ್ರರುಗಳಿಂದ ವಿಪತ್ತು ಸಂಪತ್ತು ಬರುವುದಕ್ಕೂ ಅವನೇ ಕಾರಣ. ಹೀಗೆ ತಿಳಿದು ನಿಷ್ಕಾಮ ಕರ್ಮಗಳಿಂದ ಭಗವಂತನನ್ನು ಆರಾಧಿಸಬೇಕು ಹೊರತು ಕಾಮ್ಯಕರ್ಮ ಮಾಡಿ ಐಹಿಕ ಸುಖಭೋಗಗಳನ್ನು ಸಂಪಾದಿಸಿ ಮೋಕ್ಷ ಸಾಧನೆಯನ್ನು ಕೈಬಿಟ್ಟರೆ ಅನರ್ಥವಿದೆ. ಎಳೆವಯಸ್ಸಿ ನಿಂದಲೆ ಭಗವತ್ ಪ್ರೀತಿಕರವಾದ ಧರ್ಮಾಚರಣೆಯನ್ನು ಪ್ರಾರಂಭಿಸಬೇಕು. ಇಳಿವಯಸ್ಸಿಗೆ ಅದನ್ನು ಮುಂದೂಡಬಾರದು. ಏಕೆಂದರೆ ಆಯುಷ್ಯ ಸ್ಥಿರವಲ್ಲ.

ಹಾಗಾದರೆ ಐಹಿಕ ಸುಖವನ್ನು ಸಾಧಿಸಿಕೊಳ್ಳುವುದು ಯಾವಾಗ? ಎಂದರೆ ಈ ಪ್ರಶ್ನೆಯೆ ಅನಾವಶ್ಯಕ. ಏಕೆಂದರೆ ದೇಹಿಗಳಿಗೆ ಯಾವುದಾದರೊಂದು ದೇಹ ಬರುತ್ತಲೇ ಇರುತ್ತದೆ. ಎಲ್ಲ ದೇಹಗಳಲ್ಲಿಯೂ ಪ್ರಯತ್ನವಿಲ್ಲದೆಯೆ ಅದೃಷ್ಟವಶದಿಂದ ದುಃಖದಂತೆ ಸುಖವೂ ಬರುತ್ತದೆ. ದುಃಖಕ್ಕೆ ಪ್ರಯತ್ನಬೇಡ, ತಾನೇ ಬರುತ್ತದೆ ಎಂದರೆ ಸುಖವೂ ಹಾಗೇ ತಾನಾಗಿಯೇ ಬರು ತ್ತದೆ. ಅದನ್ನು ಸಾಧಿಸಿಕೊಳ್ಳುವ ಪ್ರಶ್ನೆಯೆ ಬರುವುದಿಲ್ಲ. ಹಾಗಿ ದ್ದರೂ ಇಂದ್ರಿಯ ಜನ್ಯ ಸುಖಕ್ಕಾಗಿ ಯತ್ನ ಮಾಡುತ್ತಿದ್ದರೆ ಆಯುಷ್ಯ ವ್ಯರ್ಥವಾಗಿ ಕಳೆಯುತ್ತದೆ. ಮೋಕ್ಷಸಾಧನೆಯಾಗುವುದಿಲ್ಲ.

ಆಯುಷ್ಯ ಪರಮಾವಧಿ ನೂರು ವರ್ಷವಾದರೆ ಅದರಲ್ಲಿ ಅರ್ಧಭಾಗ ನಿದ್ರೆಯಲ್ಲಿ ಕಳೆಯುತ್ತದೆ. ಇನ್ನು ಅರ್ಧಭಾಗದಲ್ಲಿ ಇಪ್ಪತ್ತು ಬಾಲ್ಯದ ಆಟದಲ್ಲಿ, ಇಪ್ಪತ್ತು ಮುಪ್ಪಿನ ಅಶಕ್ತಿಯಲ್ಲಿ ಕಳೆದು ಹೋದರೆ, ಉಳಿದ ಹತ್ತುವರ್ಷ ವಿಷಯ ಸುಖಸಂಪಾದನೆಯಲ್ಲಿ ಕಳೆದರೆ ಮೋಕ್ಷಸಾಧನೆ ಯಾವಾಗ?

ಗೃಹಸ್ಥ ಜೀವನದಲ್ಲಿ ಸಂಬಂಧಿಗಳೊಳಗೆ ಅಂತಃಕಲಹಗಳು ನೂರಾರು. ಅವನ್ನು ಪರಿಹರಿಸುತ್ತ ಸಂಸಾರಬಂಧನವನ್ನು ಇನ್ನಷ್ಟು ದೃಢಗೊಳಿಸುತ್ತ ಆಯುಷ್ಯವನ್ನು ವ್ಯರ್ಥಗೊಳಿಸುತ್ತಾರೆ. ಬಂಧುಗಳ ಸ್ನೇಹಪಾಶ, ಧನದಾಹ, ಸ್ತ್ರೀಸುಖದಾಸೆ, ಮಕ್ಕಳ ಮೇಲಿನ ಮೋಹ ಇವೆಲ್ಲವೂ ದೃಢವಾದ ಬಂಧನಗಳು. ರೇಶಿಮೆ ಹುಳು ತಾನೇ ಗೂಡನ್ನು ಹೆಣೆದು ಅದರೊಳಗೆ ಬಂದಿಯಾಗು ವಂತೆ ಗೃಹಸ್ಥ ತಾನೇ ಈ ಬಂಧನದಲ್ಲಿ ಸಿಲುಕಿಕೊಳ್ಳುತ್ತಾನೆ. ಇಂದ್ರಿಯ ನಿಗ್ರಹವಿಲ್ಲದೆ ನೂರಾರು ಬಯಕೆಗಳನ್ನು ಪೂರೈಸಿಕೊಳ್ಳುವುದಕ್ಕಾಗಿ ಪರಸ್ವವನ್ನು ಅಪಹರಿಸಿ ಅನರ್ಥ ಭಾಜನವಾಗುತ್ತಾನೆ. ಇಂಥ ವಿಷಯಲಂಪಟರ ಸಂಗದಿಂದ ದೂರವಿರಬೇಕು. ಅಚ್ಯುತನನ್ನು ಭಜಿಸಬೇಕು.

ಎಲ್ಲರೊಳಗೂ ಅವನಿರುವುದರಿಂದ ಅವನ ಆರಾಧನೆ ಕಷ್ಟವೇನಲ್ಲ. ಎಲ್ಲ ಪ್ರಾಣಿಗಳೂ ಅವನ ವಾಸಸ್ಥಾನವಾಗಿರುವುದ ರಿಂದ ನೀವು ನಿಮ್ಮ ಅಸುರ ಸ್ವಭಾವವಾದ ಹಿಂಸಾಪ್ರವೃತ್ತಿಯನ್ನು ಬಿಟ್ಟು ಎಲ್ಲರಲ್ಲಿ ಪ್ರೀತಿ ಮಾಡಿರಿ, ದಯೆ ತೋರಿರಿ. ಅದರಿಂದ ಅಚ್ಯುತ ಒಲಿಯುತ್ತಾನೆ. ಅವನೊಲಿದರೆ ಅಲಭ್ಯವೇನಿದೆ? ಆದರೆ ಅವನೊಲಿಮೆಯ ಮುಂದೆ ಮೋಕ್ಷ ಸುಖವೂ ಬಯಸಲು ಯೋಗ್ಯವಲ್ಲ. ಇನ್ನು ವಿಷಯಸುಖದ ಬಗ್ಗೆ ಏನು ಹೇಳಬೇಕು.

ನಾವು ಕಲಿಯುವ ಎಲ್ಲ ಲೌಕಿಕ ವೈದಿಕ ವಿದ್ಯೆಗಳೂ ಸಫಲವೆನಿಸುವುದು ಅವು ಹರಿಭಕ್ತಿ ಉದಿಸಲು ಸಹಕಾರಿ ಯಾದಾಗಲೆ ಎಂಬುದು ನನ್ನ ಅಭಿಪ್ರಾಯ. ಈ ನಿರ್ಮಲ ಜ್ಞಾನ ಬಲು ದುರ್ಲಭ. ನರಸಖನಾದ ಧರ್ಮಪುತ್ರ ನಾರಾಯಣ ನಾರದರಿಗೆ ಉಪದೇಶಿಸಿದುದು. ನಾನು ಅದನ್ನು ನಾರದರಿಂದ ಶ್ರವಣ ಮಾಡಿದೆ.'

ಪ್ರಹ್ಲಾದ ದೈತ್ಯ ಬಾಲಕರಿಗೆ ಹೀಗೆ ಹೇಳಿದಾಗ ಅವರು ಕೇಳಿದರು, 'ಅರಮನೆಯ ಅಂತಃಪುರದಲ್ಲಿ ವಾಸಮಾಡುವ ನಿನಗೆ ನಾರದರ ಸಂಪರ್ಕ ಹೇಗಾಯಿತು?' ಎಂದು.

❖ ❖ ❖

ದೈತ್ಯಬಾಲಕರಿಗೆ ಪ್ರಹ್ಲಾದನ ಉಪದೇಶ-

ಪ್ರತ್ಯಗಾತ್ಮಸ್ವರೂಪೇಣ ಕಾಲರೂಪೇಣ ಚ ಸ್ವಯಮ್ ।
ವ್ಯಾಪ್ಯವ್ಯಾಪಕನಿರ್ದೇಶ್ಯೋ ಹ್ಯನಿರ್ದೇಶ್ಯೋ ವಿಕಲ್ಪಿತಃ ॥ ೨೮ ॥

ಶ್ರೀಹರಿಯನ್ನು ಪೂರ್ತಿಯಾಗಿ ವರ್ಣಿಸುವುದು ಶಕ್ಯವಿಲ್ಲ. ಆದರೆ ಅಂತರ್ಯಾಮಿ ರೂಪದಿಂದ ಹೃದಯದೊಳಗೆ ಸಣ್ಣ ಪ್ರದೇಶದಲ್ಲಿ ಇರುವನೆಂದೂ ಕಾಲರೂಪದಿಂದ ತಾನೇ ಸರ್ವವ್ಯಾಪಕನಾಗಿರುವ ನೆಂದೂ ವರ್ಣಿಸುವುದು ಶಕ್ಯ. ಒಬ್ಬನಲ್ಲಿಯೇ ವ್ಯಾಪಕ ವ್ಯಾಪ್ಯತ್ವಗಳು ಅಚಿಂತ್ಯಶಕ್ತಿಯಿಂದ ಕೂಡುವುದರಿಂದ ಅವನು ವಿ-ಕಲ್ಪಿತ ಅಂದರೆ, ವಿವಿಧ ರೂಪಗಳಿಂದ ಸ್ಥಿತನಾಗಿದ್ದಾನೆ.

[೧]ಇಲ್ಲಿ 'ಪ್ರತ್ಯಗಾತ್ಮಸ್ವರೂಪೇಣ ದೃಶ್ಯರೂಪೇಣ ಚ ಸ್ವಯಂ' ಎಂದು ಬೇರೆ ವ್ಯಾಖ್ಯಾನಕಾರರು ಅಪಪಾಠವಿಟ್ಟುಕೊಂಡಿದ್ದಾರೆ.

ಒಬ್ಬನೇ ಪರಬ್ರಹ್ಮ ಜೀವರೂಪದಿಂದ ವ್ಯಾಪಕನಾಗಿದ್ದಾನೆ. ದೃಶ್ಯರೂಪದಿಂದ ಅಂದರೆ ದೇಹಾದಿರೂಪದಿಂದ ವ್ಯಾಪ್ಯನಾಗಿದ್ದಾನೆ ಎಂದು ಶ್ರೀಧರ ವ್ಯಾಖ್ಯಾನ ಹೇಳುತ್ತದೆ. ದ್ರಷ್ಟೃವೂ ಭೋಕ್ತೃವೂ ಆದ ಜೀವ ಎಂದು ವಿಶೇಷಣವನ್ನೂ ಕೊಡುತ್ತದೆ. ಅಣುವಾಗಿರುವ ಅಂತಃಕರಣದಿಂದ ಅವಚ್ಛಿನ್ನವಾದ ಬ್ರಹ್ಮವೇ ಭೋಕ್ತೃ

---

೧. ಪ್ರತ್ಯಗಾತ್ಮಾ ದ್ರಷ್ಟಾ ಭೋಕ್ತಾ ತತ್ಸ್ವರೂಪೇಣ ವ್ಯಾಪಕತಯಾ ನಿರ್ದೇಶ್ಯಃ। ದೃಶ್ಯಂ ಭೋಗ್ಯಂ ದೇಹಾದಿ ತದ್ರೂಪೇಣ ಚ ವ್ಯಾಪ್ಯತಯಾ ನಿರ್ದೇಶ್ಯಃ ಸನ್ ವಿಕಲ್ಪಿತಃ । -ಶ್ರೀಧರಃ

ಪ್ರತ್ಯಗಾತ್ಮಾ ಜೀವಃ ಸ್ವಂ ಸ್ವಾಸಾಧಾರಣಂ ರೂಪಂ ಶರೀರಂ ಯಸ್ಯ ತೇನ ಪ್ರತ್ಯಗಾತ್ಮಶರೀರಕತ್ವೇನೇತ್ಯರ್ಥಃ। ದೃಶ್ಯಮಚೇತನಂ ರೂಪಂ ಯಸ್ಯ ತೇನ ಅಚೇತನ ಶರೀರಕತ್ವೇನ ಚೇತ್ಯರ್ಥಃ । ವೀರರಾಘವಃ

ಪ್ರತ್ಯಗಾತ್ಮಾ ತತ್ತದ್‌ದ್ರಷ್ಟಾ ಭೋಕ್ತಾ ಚ ಜೀವಃ ತತ್ಸ್ವರೂಪೇಣ ದೃಶ್ಯಂ ಭೋಗ್ಯದೇಹಾದಿ ತದ್ರೂಪೇಣ ಚ ಸ್ವಯಮೇವ ವಿಕಲ್ಪಿತಃ ಭಿನ್ನಃ ಸನ್ ವ್ಯಾಪ್ಯತಯಾ ಕಾಲಾಕಾಶಾದಿ ರೂಪೇಣ ಚ ವ್ಯಾಪಕತಯಾ ನಿರ್ದೇಶ್ಯೋ ಭವತಿ । -ಗಿರಿಧರಃ

ಜೀವ. ಇದು ಅಣು. ವ್ಯಾಪಕವಲ್ಲ. ಅಣುವಾದ ಜೀವರೂಪದಿಂದ ಬ್ರಹ್ಮ ವ್ಯಾಪಕವೆನಿಸುವುದು ಹೇಗೆ? ದೃಶ್ಯ ಎಂದರೆ ದೇಹಾದಿಗಳಂತೆ ಕಾಲ ಆಕಾಶ ಮುಂತಾದುವೂ ಆಗುತ್ತವೆ. ಅವು ಕಣ್ಣಿಗೆ ಕಾಣದಿದ್ದರೂ ಮಿಥ್ಯೆಯಾಗಿದ್ದು ದೃಶ್ಯವೇ ಆಗಿವೆ ಎಂದು ಅದ್ವೈತಮತ. ಆದರಿಂದ 'ದೃಶ್ಯರೂಪೇಣ' ಎಂಬ ಭಾಗವತದ ಮಾತಿಗೆ ದೃಶ್ಯವಾದ ದೇಹಾದಿ ಪದಾರ್ಥರೂಪದಿಂದ ಆತ್ಮ ವ್ಯಾಪ್ಯ ಎನ್ನುವುದು, ಕಾಲಾಕಾಶಾದಿರೂಪದಿಂದ ಆತ್ಮ ವ್ಯಾಪಕನೆ? ಅಲ್ಲವೆ? ಎಂಬುದರ ಬಗ್ಗೆ ಮೌನವಾಗಿರುವುದು ಸರಿಯಲ್ಲ.

ಆತ್ಮನಿಗೆ ಜೀವರೂಪವೆಂದು ಒಂದುರೂಪವನ್ನು ಒಪ್ಪಿದರೂ ಜಡರೂಪ ವನ್ನು ಒಪ್ಪಲಾಗದು. ಬ್ರಹ್ಮನಿಗೆ ಜೀವಾಭೇದವನ್ನು ಸ್ವರೂಪವಿವಕ್ಷೆಯಿಂದ ಹೇಳಬಹುದು. ಜಡಾಭೇದವನ್ನು ಅದ್ವೈತಿಗಳು ಹೇಳುವುದಿಲ್ಲ. ಜಡಕ್ಕೆ ವಾಸ್ತವ ಸ್ವರೂಪವಿಲ್ಲ. ಜೀವನಿಗೆ ಶುದ್ಧಸ್ವರೂಪ ಒಂದಿದೆ. ಆದರಿಂದಲೇ ಸರ್ವಂ ಖಲ್ವಿದಂ ಬ್ರಹ್ಮ ಎಂದರೆ ಜಡ ಎಲ್ಲವೂ ಬ್ರಹ್ಮ ಎಂದಲ್ಲ, ಜಡ ಯಾವುದೂ ಬ್ರಹ್ಮನಿಗಿಂತ ಬೇರೆಯಾಗಿ ಒಂದು ಸ್ವರೂಪ ಉಳ್ಳ ಪದಾರ್ಥವಲ್ಲ, ಕೇವಲ ಭ್ರಾಂತಿ ಎನ್ನುತ್ತಾರೆ. ಹೀಗಾಗಿ ಜಡವಾದ ದೇಹಾದಿರೂಪದಿಂದ ಬ್ರಹ್ಮ ವ್ಯಾಪ್ಯವಾಗಿದೆ ಎನ್ನುವುದು ಯುಕ್ತವಲ್ಲ.

ಇನ್ನು ಜಡರೂಪವೆಂದರೆ ಜಡಾವಚ್ಛಿನ್ನವಾದ ರೂಪ ಎಂದಿಟ್ಟುಕೊಂಡರೂ ಅವಿದ್ಯೆಯೂ ಜಡ. ಅವಿದ್ಯಾವಚ್ಛಿನ್ನವಾದ ರೂಪ ವ್ಯಾಪ್ಯವಲ್ಲ. ವ್ಯಾಪಕವಾಗಿದೆ. ಏಕೆಂದರೆ ಅವಚ್ಛೇದಕವಾದ ಅವಿದ್ಯೆ ವ್ಯಾಪಕವಾಗಿದೆ. 'ದೃಶ್ಯರೂಪೇಣ' ಎನ್ನುವುದಕ್ಕೆ 'ದೃಶ್ಯಾವಚ್ಛಿನ್ನರೂಪೇಣ' ಎಂದು, 'ಪ್ರತ್ಯಗಾತ್ಮಸ್ವರೂಪೇಣ' ಎನ್ನುವುದಕ್ಕೆ ಪ್ರತ್ಯಗಾತ್ಮವೇ ಸ್ವರೂಪವೆಂದೂ ವ್ಯಾಖ್ಯಾನ ಮಾಡುವುದು ಬಹಳ ಅಸ್ವರಸವೂ ಆಗುತ್ತದೆ. ದೃಶ್ಯ ಎಂಬ ಸಾಮಾನ್ಯ ಶಬ್ದಕ್ಕೆ ದೇಹಾದಿರೂಪವಾದ ದೃಶ್ಯ ಎಂದು ಅರ್ಥ ಸಂಕೋಚ ಮಾಡುವುದೂ ಅಸ್ವರಸ.

ವೀರರಾಘವ ವ್ಯಾಖ್ಯಾನದ ಪ್ರಕಾರ 'ಪ್ರತ್ಯಗಾತ್ಮ' ಎಂದರೆ ಜೀವ. ಅವನು ಪರಮಾತ್ಮನಿಗೆ ಸ್ವರೂಪ ಅಂದರೆ ಶರೀರ. ಜೀವ ಎಂಬ ಶರೀರದೊಳಗಿರುವ ಪರಮಾತ್ಮ ವ್ಯಾಪ್ಯ. ಏಕೆಂದರೆ ಜೀವ ಅಣುವಾಗಿದ್ದು ವ್ಯಾಪ್ಯನಾಗಿದ್ದಾನೆ. 'ದೃಶ್ಯರೂಪೇಣ' ಎಂದರೂ ದೃಶ್ಯವಾದ ಜಡಪ್ರಪಂಚ ಪರಮಾತ್ಮನ ಶರೀರ. ಆ ಶರೀರದೊಳಗಿರುವ ಪರಮಾತ್ಮ ವ್ಯಾಪಕ. ಏಕೆಂದರೆ ಕಾಲಾಕಾಶಾದಿ ರೂಪವಾದ ದೃಶ್ಯಪದಾರ್ಥ ವ್ಯಾಪಕವಾಗಿದೆ. ಈ ವ್ಯಾಖ್ಯಾನದಲ್ಲಿ ದೃಶ್ಯವೆಂದರೆ ದೃಶ್ಯವಾದ ದೇಹಾದಿ ಪದಾರ್ಥಗಳಲ್ಲ, ಅದೃಶ್ಯವಾದ ಕಾಲಾಕಾಶಾದಿಗಳು ಎಂದರ್ಥ. ಇದು ಅಸ್ವರಸ. ಇದಕ್ಕಿಂತ 'ಕಾಲರೂಪೇಣ' ಎಂಬ ಪ್ರಾಚೀನಪಾಠವೇ ಇವರಿಗೆ ಹೆಚ್ಚು

ಅನುಕೂಲ. ಕಾಲಶರೀರಕನಾಗಿ ಪರಮಾತ್ಮ ವ್ಯಾಪಕನಾಗಿದ್ದಾನೆ ಎಂದು ಸ್ವರಸವಾಗಿ ವ್ಯಾಖ್ಯಾನಿಸಬಹುದು. ವಸ್ತುತಃ ಜೀವಜಡಗಳು ಪರಮಾತ್ಮನಿಗೆ ಶರೀರವಲ್ಲ. ಆದರಿಂದ ಈ ವ್ಯಾಖ್ಯಾನ ಗ್ರಾಹ್ಯವಲ್ಲ.

ಗಿರಿಧರ ವ್ಯಾಖ್ಯಾನದಲ್ಲಿ 'ಪ್ರತ್ಯಗಾತ್ಮ ಸ್ವರೂಪೇಣ, ದೃಶ್ಯರೂಪೇಣ' ಎಂಬುದನ್ನು 'ವಿಕಲ್ಪಿತಃ' ಎಂಬಲ್ಲಿ ಅನ್ವಯಿಸಿ, 'ವ್ಯಾಪ್ಯವ್ಯಾಪಕ ನಿರ್ದೇಶ್ಯ' ಎಂಬುದಕ್ಕೆ 'ದೇಹಾದಿರೂಪೇಣ ವ್ಯಾಪ್ಯಃ ಕಾಲಾಕಾಶಾದಿರೂಪೇಣ ವ್ಯಾಪಕ' ಎಂದು ಅನೇಕ ಅಧ್ಯಾಹಾರಗಳನ್ನು ಮಾಡಿದ್ದಾರೆ. 'ಕಾಲ ರೂಪೇಣ' ಎಂಬ ನಮ್ಮ ಪಾಠವಿಟ್ಟುಕೊಂಡಿದ್ದರೆ ಈ ಕ್ಲೇಶವಿರುತ್ತಿರಲಿಲ್ಲ.

ಅಂತರ್ಯಾಮಿೂ ಪ್ರತ್ಯಗಾತ್ಮಾ ವ್ಯಾಪ್ತಃ ಕಾಲೋ ಹರಿಃ ಸ್ಮೃತಃ ।

ಇತಿ ಚ ।

'ಜೀವರೊಳಗೆ ಅಂತರ್ಯಾಮಿಯಾಗಿರುವ ವಿಷ್ಣುರೂಪಕ್ಕೆ ಪ್ರತ್ಯಗಾತ್ಮ ಎಂದೂ, ಸರ್ವವ್ಯಾಪ್ತವಾದ ವಿಷ್ಣುರೂಪಕ್ಕೆ ಕಾಲ ಎಂದೂ ಹೆಸರಿದೆ. ಈ ವಿಷಯದಲ್ಲಿ ಸ್ಮೃತಿಗಳು ಪ್ರಮಾಣವಾಗಿವೆ' ಎಂದು ಬ್ರಹ್ಮತರ್ಕದಲ್ಲಿ ಉಕ್ತವಾಗಿದೆ.

ಆದರಿಂದ ವಿಷ್ಣು ಅಂತರ್ಯಾಮಿ ರೂಪದಿಂದ ವ್ಯಾಪ್ಯನೆಂದೂ, ಕಾಲ ಎಂಬ ರೂಪದಿಂದ ವ್ಯಾಪಕನೆಂದೂ ಭಾಗವತ ಹೇಳುತ್ತಿದೆ ಹೊರತು, ವಿಷ್ಣು ಪ್ರತ್ಯಗಾತ್ಮನೆನಿಸಿದ ಜೀವನಿಂದ ಅಭಿನ್ನನಲ್ಲ, ಜಡವಾದ ಕಾಲದಿಂದಲೂ ಅಭಿನ್ನನಲ್ಲ ಎಂದು ಬ್ರಹ್ಮತರ್ಕ ಎಚ್ಚರಿಸುತ್ತಿದೆ.

❖ ❖ ❖

ದೈತ್ಯಬಾಲಕರಿಗೆ ಪ್ರಹ್ಲಾದನ ಉಪದೇಶ-

ಕೇವಲಾನುಭವಾನಂದಸ್ವರೂಪಃ ಪರಮೇಶ್ವರಃ ।
ಮಾಯಯಾಽಂತರ್ಹಿತೈಶ್ವರ್ಯ ಈಡ್ಯತೇ ಗುಣಸರ್ಗಯಾ ॥ ೨೯ ॥

ಪರಮಾತ್ಮ ಶುದ್ಧ ಜ್ಞಾನಾನಂದ ಸ್ವರೂಪನೆ. ಆದರೆ ಜೀವರಿಗೆ ಆವರಣಗಳಾಗಿರುವ ಗುಣತ್ರಯಗಳಿಗೆ ಕಾರಣವಾಗಿರುವ ಪ್ರಕೃತಿಯೇ ಜೀವನಿಗೆ ಪರಮಾತ್ಮ ಸ್ವರೂಪ ಕಾಣದಂತೆ ಅಜ್ಞಾನದಿಂದ ಜೀವನನ್ನು ಆಚ್ಛಾದಿಸುತ್ತದೆ ಎಂದು ಶಾಸ್ತ್ರಗಳಲ್ಲಿ ತಿಳಿದುಬರುತ್ತದೆ.

ಇಲ್ಲಿ ಪರಮಾತ್ಮ ಕೇವಲ ಜ್ಞಾನಾನಂದ ಸ್ವರೂಪನೇ ಆದರೂ ಅವನ ಈ ಐಶ್ವರ್ಯ ಮಾಯೆಯಿಂದ, ಅಂದರೆ ಜಡವಾದ ಅವಿದ್ಯೆಯಿಂದ ಆಚ್ಛಾದಿತವಾಗುವುದರಿಂದ ಪ್ರಕಾಶಿಸುವುದಿಲ್ಲ ಎಂದು ಶ್ರೀಧರವ್ಯಾಖ್ಯಾನ ಹೇಳುತ್ತದೆ. ಉಳಿದ ವ್ಯಾಖ್ಯಾನಗಳು ಇದನ್ನು ಒಪ್ಪುವುದಿಲ್ಲ. ಪರಮಾತ್ಮನ ಈ ಐಶ್ವರ್ಯ ಸದಾ ಪ್ರಕಾಶಿಸುತ್ತಲೇ ಇದೆ. ಆದರೆ ಅವಿದ್ಯೆಯಿಂದ ಜೀವರ ಕಣ್ಣಿಗೆ ಪಟ್ಟಿಕಟ್ಟಿದಂತಾಗಿರುವುದರಿಂದ ಜೀವರಿಗೆ ಆ ಪ್ರಕಾಶ ಕಾಣಿಸುತ್ತಿಲ್ಲ ಎಂದು ಅಭಿಪ್ರಾಯವನ್ನು ಹೇಳುತ್ತಾರೆ. ಪದಾರ್ಥವನ್ನು ಯಾವುದಾದರೊಂದು ಆವರಣದಿಂದ ಮುಚ್ಚಿದರೂ ಆ ಪದಾರ್ಥ ಕಾಣುವುದಿಲ್ಲ, ಕಣ್ಣು ಮುಚ್ಚಿದರೂ ಆ ಪದಾರ್ಥ ಕಾಣುವುದಿಲ್ಲ. ಅವಿದ್ಯೆ ಬ್ರಹ್ಮನಿಗೆ ಆವರಣ ಎನ್ನುತ್ತಾರೆ ಅದ್ವೈತಿಗಳು. ಜೀವನಿಗೇ ಆವರಣ ಎಂದು ದ್ವೈತಿಗಳು ಹೇಳುತ್ತಾರೆ. ಭಾಗವತದಲ್ಲಿ ಮಾಯೆಯಿಂದ ಆವೃತವಾದ ಐಶ್ವರ್ಯ ಉಳ್ಳವನು ಪರಮಾತ್ಮ ಎಂದು ಹೇಳಿದೆ. ಐಶ್ವರ್ಯ ಆವೃತವಾಗಿದೆ ಎಂದರೆ ಸೂರ್ಯ ಪ್ರಕಾಶಿಸುತ್ತಲೇ ಇರುವಾಗ ಮೋಡಗಳು ಆವರಣವಾಗಿ ನಮಗೆ ಸೂರ್ಯದರ್ಶನವಾಗದಂತೆ ಮಾಡುತ್ತವೆ. ಮೋಡಗಳಿಂದ ಸೂರ್ಯ ಆವೃತನಾಗಿದ್ದಾನೆ ಎಂದು ನಾವು ವ್ಯವಹರಿಸುತ್ತೇವೆ. ಹಾಗೇ ಪರಮಾತ್ಮನ ಐಶ್ವರ್ಯ ಪ್ರಕಾಶಿಸುತ್ತಲೇ ಇದೆ. ಜೀವನನ್ನು ಪ್ರಕೃತಿ ಅಜ್ಞಾನದಿಂದ ಆವರಿಸುವುದರಿಂದ ಪರಮಾತ್ಮ ದರ್ಶನ ಆವನಿಗಾಗುವುದಿಲ್ಲ ಎಂದು ಭಾಗವತದ ಅಭಿಪ್ರಾಯ-

'ಪ್ರಕೃತ್ಯಾ ತಮಸಾಽಽವೃತತ್ವಾತ್ ಹರೇರೈಶ್ವರ್ಯಂ ನ ಜ್ಞಾಯತೇ ॥

ಪ್ರಕೃತಿಯು ಜೀವನನ್ನು ಅಜ್ಞಾನಾವರಣದಲ್ಲಿ ಇರಿಸಿರುವುದರಿಂದ ಅವನಿಗೆ ಹರಿಯ ಐಶ್ವರ್ಯದ ದರ್ಶನವಾಗುವುದಿಲ್ಲ.

❖ ❖ ❖

ದೈತ್ಯಬಾಲಕರಿಗೆ ಪ್ರಹ್ಲಾದನ ಉಪದೇಶ-

ತಸ್ಮಾತ್ಸರ್ವೇಷು ಭೂತೇಷು ದಯಾಂ ಕುರುತ ಸೌಹೃದಮ್ ।
ಭಾವಮಾಸುರಮುನ್ಮುಚ್ಯ ತಯಾ ತುಷ್ಯತ್ಯಧೋಕ್ಷಜಃ ॥ ೨೦ ॥

ಎಲ್ಲ ಪ್ರಾಣಿಗಳೂ ಪರಮಾತ್ಮನ ವಾಸಸ್ಥಾನವಾಗಿರುವುದರಿಂದ ನೀವು ಅಸುರ ಸ್ವಭಾವವನ್ನು ಬಿಟ್ಟು ಎಲ್ಲ ಪ್ರಾಣಿಗಳಲ್ಲಿ ದಯೆದೋರಿರಿ ಪ್ರೀತಿ ಮಾಡಿರಿ. ಅದರಿಂದ ಪರಮಾತ್ಮ ಸಂತುಷ್ಟನಾಗುತ್ತಾನೆ.

[೧]ಈ ಶ್ಲೋಕದಲ್ಲಿ 'ತಸ್ಮಾತ್' ಆ ಕಾರಣದಿಂದ ನೀವು ಪ್ರಾಣಿಗಳಲ್ಲಿ ದಯೆ ತೋರಿರಿ' ಎಂದು ಭಾಗವತ ಹೇಳುತ್ತಿದೆ. ಯಾವ ಕಾರಣದಿಂದ ಎನ್ನುವುದು ಸ್ಪಷ್ಟವಾಗುವುದಿಲ್ಲ. 'ಪರಮಾತ್ಮ ಭಕ್ತಿಗೆ ಮಾತ್ರ ಲಭ್ಯ. ಆ ಭಕ್ತಿ ಭೂತದಯೆ ಇದ್ದರೆ ಮಾತ್ರ ಸ್ಥಿರವಾಗಿರುತ್ತದೆ. ಅದರಿಂದ ಭೂತದಯೆಯನ್ನು ಅನುಷ್ಠಾನ ಮಾಡಿರಿ' ಎನ್ನುವದು ಪ್ರಹ್ಲಾದನ ಉಪದೇಶವೆಂದು ವಿಶ್ವನಾಥ ವ್ಯಾಖ್ಯಾನ ಹೇಳುತ್ತದೆ. ಆದರೆ ಭಗವದ್ಭಕ್ತಿ ಭೂತದಯೆಯಿಂದ ಸ್ಥಿರವಾಗುವುದು ಹೇಗೆ ಎನ್ನುವುದು ಸ್ಪಷ್ಟವಾಗಿಲ್ಲ.

'ತಸ್ಮಾತ್' ಎಂಬ ಶಬ್ದದಿಂದ ಅದನ್ನು ಹೇಳಬೇಕೆಂದರೆ ಹಿಂದೆ ಅದು ಪ್ರಸ್ತುತವಾಗಿರಬೇಕು. ಹಾಗೆ ಪ್ರಸ್ತುತವಾಗಿರುವುದೂ ಕಂಡುಬರುವುದಿಲ್ಲ.

ಅದರಿಂದ 'ಎಲ್ಲ ಪ್ರಾಣಿಗಳೂ ಪರಮಾತ್ಮನ ವಾಸಸ್ಥಾನವಾದ್ದರಿಂದ ಎಲ್ಲ ಪ್ರಾಣಿಗಳಲ್ಲಿ ದಯೆದೋರಬೇಕು. ಆಗ ಪರಮಾತ್ಮನಿಗೆ ಸಂತೋಷವಾಗುತ್ತದೆ' ಎನ್ನಬೇಕು. ಎಲ್ಲ ಪ್ರಾಣಿಗಳೂ ಪರಮಾತ್ಮನ ವಾಸಸ್ಥಾನವೆಂಬುದು ಹಿಂದಿನ ಐದು ಶ್ಲೋಕಗಳಲ್ಲಿ ವಿಸ್ತಾರವಾಗಿ ವರ್ಣಿತವಾಗಿದೆ. ಅದರಿಂದ ಅದು ಪ್ರಸ್ತುತವೇ ಆಗಿದೆ. ಮತ್ತು ಭಾಗವತದ 'ತಸ್ಮಾತ್' ಎಂಬ ಮಾತಿನ ಅಭಿಪ್ರಾಯ ಇದೇ ಆಗಿದೆ ಎನ್ನುವುದು ಬ್ರಹ್ಮತರ್ಕವಚನದಿಂದ ಸ್ಪಷ್ಟವೂ ಆಗುತ್ತದೆ.

ವಿಷ್ಣೋರ್ಗೃಹತ್ವಾದ್ ಭೂತೇಷು ದಯಾ ಕಾರ್ಯಾ ವಿಜಾನತಾ ।
ಇತಿ ಚ ।

ಎಲ್ಲ ಪ್ರಾಣಿಗಳೂ ವಿಷ್ಣುವಿನ ವಾಸಸ್ಥಾನವಾಗಿರುವುದರಿಂದ ಇದನ್ನು ತಿಳಿದು ಎಲ್ಲ ಪ್ರಾಣಿಗಳಲ್ಲಿ ದಯೆದೋರಬೇಕು ಎಂದು ಬ್ರಹ್ಮತರ್ಕ ಹೇಳಿದೆ.

❖ ❖ ❖

ದೈತ್ಯಬಾಲಕರಿಗೆ ಪ್ರಹ್ಲಾದನ ಉಪದೇಶ-

ತುಷ್ಟೇ ಚ ತತ್ರ ಕಿಮಲಭ್ಯಮನಂತ ಆದ್ಯೇ
ಕಿಂ ತೈರ್ಗುಣವ್ಯತಿಕರೈರಿಹ ಯೇಽನುಸಿದ್ಧಾಃ ।
ಧರ್ಮಾದಿಭಿಃ ಕಿಮಗುಣೇನ ಚ ಕಾಂಕ್ಷಿತೇನ
ಸಾರಂ ಜುಷಾಂ ಚರಣಯೋರುಪಗಾಯತಾಂ ನಃ ॥ ೩೦ ॥

---

೧. ಯತೋ ಭಕ್ತಿಗಮ್ಯ ಏವ ಭಗವಾನ್, ಸಾ ಚ ಭಕ್ತಿಃ ಸರ್ವಭೂತೇಷು ದಯಾ ಸೌಹೃದಾಭ್ಯಾಂ ಸುಸ್ಥಿರಾ ನಿರ್ವಿಘ್ನಾ ಭವತಿ ಅತಸ್ತೇ ಏವ ವಿಧತ್ತೇ ತಸ್ಮಾದಿತಿ ।-ವಿಶ್ವನಾಥಃ

ಆದಿಪುರುಷನಾದ ಅನಂತ ಸಂತುಷ್ಟನಾದನೆಂದರೆ ಏನು ಅಲಭ್ಯವಿದೆ? ಆದರೆ ಅವನ ಪಾದಕಮಲದ ಮಕರಂದ ರಸವನ್ನು ಸೇವಿಸುವ ನಮಗೆ ಅವನ ಅನುಗ್ರಹದಿಂದ ಅಮುಖ್ಯ ಫಲವಾಗಿ ದೊರಕುವ ಗುಣತ್ರಯಾತ್ಮಕ ವಿಷಯ ಸುಖಗಳಿಂದೇನು? ತ್ರಿಗುಣರಹಿತವಾದ ಮೋಕ್ಷಸುಖವನ್ನೂ ಕೂಡ ಬಯಸಿ ಏನು ವಿಶೇಷ ಲಾಭ? ಹೀಗೆಂದಮೇಲೆ ಧರ್ಮಾದಿ ಪುರುಷಾರ್ಥಗಳನ್ನು ಬಯಸಿ ಏನಾಗಬೇಕಾಗಿದೆ ಎನ್ನುವುದನ್ನು ಬೇರೆ ಹೇಳಬೇಕಾಗಿಲ್ಲ.

ಇಲ್ಲಿ 'ಕಿಮಗುಣೇನ ಚ ಕಾಂಕ್ಷಿತೇನ' ಭಗವಂತನ ಪಾದಕಮಲ ಭಜನೆಯ ಆನಂದದ ಮುಂದೆ ಮೋಕ್ಷಾನಂದ ಅಲ್ಪವೆಂದು ಹೇಳಿದಂತೆ ಕಾಣುತ್ತದೆ. ವಸ್ತುತಃ ಇದು ಸರಿಯಲ್ಲ. ಮೋಕ್ಷಸುಖ ಎಲ್ಲಕ್ಕಿಂತ ಉತ್ತಮ. ಅದಕ್ಕೆ ಸಮಾನವಾದ ಸುಖವೇ ಇಲ್ಲ, ಹೆಚ್ಚಿನ ಸುಖ ಇನ್ನೆಲ್ಲಿ? ಆದರೂ ಬೇರೆ ವ್ಯಾಖ್ಯಾನಕಾರರೆಲ್ಲರೂ ಮೋಕ್ಷಸುಖ ಅಲ್ಪವೆಂದೇ ಹೇಳಿದ್ದಾರೆ. ಭಾಗವತಕ್ಕೆ ಹಾಗೆ ಅಭಿಪ್ರಾಯವಿಲ್ಲ. ಮೋಕ್ಷಸುಖವನ್ನು ಬಯಸಿ ಏನು ಹೆಚ್ಚಿನ ಲಾಭ? ಎಂಬ ಮಾತಿನಲ್ಲಿ 'ಬಯಸಿ ಪಡೆವ ಮೋಕ್ಷಸುಖ ಅಲ್ಪ' ಎಂದು ಹೇಳಿದೆ ಹೊರತು ಬಯಸದೇ ಪಡೆವ ಮೋಕ್ಷಸುಖವನ್ನು ಅಲ್ಪವೆನ್ನಲಿಲ್ಲ. ಅದು ಮಹಾಸುಖ. ಏಕಾಂತ ಭಕ್ತರಿಗೆ ಮಾತ್ರ ಲಭ್ಯ. ಏಕೆಂದರೆ ಅವರು ಮೋಕ್ಷಸುಖವನ್ನು ತಮ್ಮ ಭಕ್ತಿಗೆ ಫಲವಾಗಿ ಬಯಸುವುದಿಲ್ಲ. ಇದನ್ನು ಬ್ರಹ್ಮತರ್ಕವಚನ ಒಂದು ಸ್ಪಷ್ಟ ಹೇಳುತ್ತಿದೆ-

ಕಾಂಕ್ಷತೋ ಮೋಕ್ಷಗಮಪಿ ಸುಖಂ ನಾಕಾಂಕ್ಷತೋ ಯಥಾ ।

ಇತಿ ಚ ।

ಬಯಸದವರಿಗೆ ಸಿಗುವ ಮೋಕ್ಷಸುಖ ಬಯಸುವವರಿಗೆ ಸಿಗುವ ಮೋಕ್ಷಸುಖದಂತೆ ಅಲ್ಪವಾಗಿರುವುದಿಲ್ಲ ಎಂದೂ ಬ್ರಹ್ಮತರ್ಕದಲ್ಲಿ ಉಕ್ತವಾಗಿದೆ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ಸಪ್ತಮಸ್ಕಂಧೇ
ಷಷ್ಠೋಽಧ್ಯಾಯಃ

❖ ❖ ❖

ಅಧ್ಯಾಯ ೭

ಅಧ್ಯಾಯ ಸಾರಾಂಶ

ಪ್ರಹ್ಲಾದ ನುಡಿದ. ನಮ್ಮ ತಂದೆ ತಪಸ್ಸಿಗಾಗಿ ಮಂದರಪರ್ವತಕ್ಕೆ ಹೋಗಿದ್ದಾಗ ಇತ್ತ ದೇವತೆಗಳು ದಾನವರ ಮೇಲೆ ಆಕ್ರಮಣ ನಡೆಸಿದರು. ಅಸುರರು ಭಯದಿಂದ ಓಡಿದರು. ಜಯಶಾಲಿಗಳಾದ ದೇವತೆಗಳು ನನ್ನ ತಂದೆಯ ಅರಮನೆಯನ್ನು ಸೂರೆ ಮಾಡಿದರು. ನನ್ನ ತಾಯಿಯಾದ ಕಯಾಧುವನ್ನು ದೇವೇಂದ್ರ ಸೆರೆ ಹಿಡಿದೊಯ್ಯಲು ತೊಡಗಿದ. ಆಗ ಅವಳು ಗರ್ಭಿಣಿ. ನಾನು ಅವಳ ಗರ್ಭದಲ್ಲಿದ್ದೆ. ಹರೀಚ್ಛೆಯಿಂದ ನಾರದರು ಬಂದು ದೇವೇಂದ್ರನನ್ನು ತಡೆದರು. ಪತಿವ್ರತೆಯಾದ ಪರಸ್ತ್ರೀಯನ್ನು ಬಿಟ್ಟುಬಿಡು ಎಂದರು. ದೇವೇಂದ್ರನೆಂದ, 'ಇವಳು ಗರ್ಭಿಣಿ. ಇವಳ ಹೊಟ್ಟೆಯಲ್ಲಿ ಬಲಿಷ್ಠವಾದ ದೈತ್ಯಸಂತಾನವಿದೆ. ಪ್ರಸವಪರ್ಯಂತ ಅವಳು ನನ್ನ ವಶದಲ್ಲಿರಬೇಕು. ಹುಟ್ಟುವ ಮಗುವನ್ನು ಕೊಂದು ಅವಳನ್ನು ಬಿಟ್ಟುಬಿಡುತ್ತೇನೆ' ನಾರದರೆಂದರು, 'ಈ ಸಂತಾನ ಸಾಕ್ಷಾತ್ ಮಹಾಭಾಗವತ. ಮಹಾಬಲಿಷ್ಠ ಇವನನ್ನು ಕೊಲ್ಲುವುದು ನಿನ್ನಿಂದಾಗದು.' ದೇವೇಂದ್ರ ಹರಿಭಕ್ತನಾದ ನನ್ನ ಮೇಲಿನ ಆದರದಿಂದ ಅವಳಿಗೆ ಪ್ರದಕ್ಷಿಣೆ ಮಾಡಿ ಹೊರಟುಹೋದ.

ನಾರದರು ನನ್ನ ತಾಯಿಯನ್ನು ತಮ್ಮ ಆಶ್ರಮದಲ್ಲಿ ಇರಿಸಿಕೊಂಡರು. ನಮ್ಮ ತಂದೆ ತಪಸ್ಸು ಮುಗಿಸಿ ಹಿಂದಿರುಗಿ ಬರುವವರೆಗೂ ಅವಳು ಭಕ್ತಿಯಿಂದ ಮುನಿಯ ಸೇವೆ ಮಾಡಿದಳು. ತನ್ನ ಗರ್ಭ ಕ್ಷೇಮದಿಂದಿರುವುದಕ್ಕೂ ಇಚ್ಛಾನುಸಾರ ಪ್ರಸವವಾಗುವುದಕ್ಕೂ ಮುನಿಯಿಂದ ವರ ಪಡೆದಳು. ಈ ಸಮಯದಲ್ಲಿ ಮುನಿ ನನ್ನನ್ನು ಉದ್ದೇಶಿಸಿ ತಾಯಿಗೆ ತತ್ತ್ವೋಪದೇಶ ನೀಡಿದರು. ಅವಳು ಅದನ್ನು ಮರೆತರೂ ನಾನು ಮರೆತಿಲ್ಲ ಮುನಿಯ ಅನುಗ್ರಹದಿಂದ ಅದರ ಸ್ಮರಣೆ ನನ್ನಲ್ಲಿ ಇಂದಿಗೂ ಹಚ್ಚಹಸಿರಾಗೇ ಇದೆ.

ನಮ್ಮ ಶರೀರಗಳ ಹುಟ್ಟು ಬೆಳವಣಿಗೆ ಮುಂತಾದುವೆಲ್ಲವೂ

ಭಗವಂತನ ಅಧೀನ. ಅವನು ನಾಶರಹಿತ ದೋಷರಹಿತ, ಸ್ವತಂತ್ರ, ಸರ್ವಜ್ಞ, ಸರ್ವಾಶ್ರಯ. ಸರ್ವವ್ಯಾಪ್ತ. ಕರ್ಮಲೇಪ ರಹಿತ. ಚಿನ್ನದ ಗಣಿಗಳಲ್ಲಿ ಚಿನ್ನವಿದ್ದರೂ ಅದನ್ನು ತೆಗೆಯುವ ಉಪಾಯ ಬಲ್ಲವನಿಗೆ ಮಾತ್ರ ಚಿನ್ನ ಲಭ್ಯ. ಹಾಗೇ ಎಲ್ಲೆಡೆ ಇರುವ ಭಗವಂತನನ್ನು ಕಾಣಲು ಭಕ್ತ್ಯಾದಿ ಉಪಾಯ ಬೇಕು.

ಪ್ರಕೃತಿ ಮಹತ್ತತ್ವ ಮುಂತಾದ ಇಪ್ಪತ್ತನಾಲ್ಕು ತತ್ವಗಳಲ್ಲಿಯೂ ಅವನು ನಿಯಾಮಕನಾಗಿದ್ದಾನೆ. ಅವನು ಇಪ್ಪತ್ತೈದನೆಯ ತತ್ವ. ಜಡ ಶರೀರವು ಇಪ್ಪತ್ತನಾಲ್ಕು ತತ್ವಗಳಿಂದಾಗಿದೆ. ಅದರೊಳಗೆ ಅದನ್ನು ಕಾಪಾಡುತ್ತ ಜೀವನಿಗೆ ಜಾಗರ ಸ್ವಪ್ನ ಸುಷುಪ್ತಿಗಳೆಂಬ ಮೂರು ಅವಸ್ಥೆಗಳನ್ನು ನೀಡುತ್ತ ಭಗವಂತನಿರುತ್ತಾನೆ. ಅದೇ ಶರೀರದಲ್ಲಿ ಗುಣಬದ್ಧನಾಗಿರುವ ಜೀವನಿಗಿಂತ ತ್ರಿಗುಣಾತೀತನಾಗಿ ಇರುವ ಈ ಭಗವಂತ ಬೇರೆ ಎಂಬುದು ಅಜ್ಞಾನಿಗಳಿಗೆ ತಿಳಿಯುವುದಿಲ್ಲ. ಈ ಅಜ್ಞಾನವೇ ಜೀವರ ಸಂಸಾರಕ್ಕೆ ಮೂಲಕಾರಣ.

ತ್ರಿಗುಣಜನ್ಯವಾದ ಕರ್ಮಗಳಿಗೆ ಮೂಲಕಾರಣವಾದ ಅಜ್ಞಾನವನ್ನು ಕಳೆಯಲು ಭಗವದ್ಭಕ್ತಿಯೊಂದೇ ಉತ್ತಮವಾದ ಉಪಾಯ. ಭಕ್ತಿಗೆ ಗುರುಸೇವೆ; ಹರಿದಾಸಸಂಗ ಹರಿಕಥಾ ಶ್ರವಣ, ಧ್ಯಾನ, ಹರಿಯ ಚಲ ಅಚಲ ಪ್ರತಿಮೆಗಳ ದರ್ಶನ, ಹರಿಭಕ್ತರಲ್ಲಿ ಹರಿಯನ್ನು ಕಾಣುತ್ತ ಅವರನ್ನು ಆದರಿಸುವುದು ಇವೆಲ್ಲವೂ ಉಪಾಯಗಳು. ಈ ಉಪಾಯಗಳಿಂದ ಕಾಮ ಕ್ರೋಧಾದಿಗಳನ್ನು ನಿಗ್ರಹಿಸಿದಾಗಲೇ ಹರಿಭಕ್ತಿ ಲಭ್ಯ. ಅದರಿಂದ ಧ್ಯಾನ ಸುಖ ಲಭ್ಯ.

ಹರಿಕಥೆಯನ್ನು ಕೇಳಿದಾಗ ಹರಿಭಕ್ತನಿಗೆ ಮೈನವಿರೇಳುತ್ತದೆ, ಆನಂದಬಾಷ್ಪ ಸುರಿಯುತ್ತದೆ. ಕಂಠ ಗದ್ಗದವಾಗುತ್ತದೆ. ಉಚ್ಚಧ್ವನಿಯಿಂದ ಆತ ಹಾಡುತ್ತಾನೆ ಕುಣಿಯುತ್ತಾನೆ ನಗುತ್ತಾನೆ ಅಳುತ್ತಾನೆ ಪುನಃಪುನಃ ನಿಟ್ಟುಸಿರು ಬಿಡುತ್ತ ಧ್ಯಾನದಲ್ಲಿ ತಲ್ಲೀನನಾಗಿ ಲಜ್ಜೆ ಬಿಟ್ಟು ಹರೇ ಜಗತ್ಪತೇ ನಾರಾಯಣ ಎನ್ನುತ್ತಾನೆ. ಅವನ ಮನಸ್ಸು ಶರೀರಗಳು ಭಕ್ತಿ ಪ್ರವಾಹವನ್ನು ಹರಿಯ ಕಡೆಗೇ ಹರಿಸುವುದರಿಂದ ಅವನ ಸಂಸಾರದ ಬೀಜವಾದ ಕರ್ಮಗಳೂ ಜಡಅಂತಃಕರಣವೂ ಸುಟ್ಟುಹೋಗುತ್ತವೆ. ಮೋಕ್ಷದಲ್ಲಿ ವ್ಯಕ್ತವಾಗುವ ಸ್ವರೂಪಾನಂದ ಈಗಲೂ ಹರಿಕಥಾಶ್ರವಣ

ಕಾಲದಲ್ಲಿ ಅವನಿಗೆ ಲಭ್ಯವಾಗುತ್ತದೆ. ಅದರಿಂದ ಸ್ಥೂಲಶರೀರದ ಹೃದಯದಲ್ಲಿ ನೆಲೆಸಿರುವ ಪ್ರಾಜ್ಞನಾಮಕ ಪರಮಾತ್ಮನನ್ನು ಹರಿಕಥಾಶ್ರವಣಾದಿಗಳಿಂದ ಆರಾಧಿಸಬೇಕು.

ಈ ಲೋಕದಲ್ಲಿ ಸಿಗುವ ಹೆಣ್ಣು ಹೊನ್ನು ಮಣ್ಣು ಎಲ್ಲವೂ ಅಶಾಶ್ವತ. ಸ್ವರ್ಗಸುಖವೂ ನಾಶಹೊಂದುವಂಥದ್ದೇ. ಅದೂ ಪ್ರಾಕೃತವಾಗಿರುವುದರಿಂದ ಅದರಲ್ಲಿ ರಾಗಾದಿದೋಷಗಳಿಗೆ ಅವಕಾಶವಿದೆ. ಹರಿಯನ್ನು ಭಜಿಸಿದರೆ ಶಾಶ್ವತವಾದ ಸ್ವರೂಪಾನಂದ ಲಭಿಸುತ್ತದೆ.

ಸುಖದ ಬಯಕೆಯಿಂದ ಕರ್ಮಮಾಡಿದರೆ ದುಃಖವೇ ಬರುತ್ತದೆ. ಸುಖವನ್ನು ಬಯಸದೆ ಪರಮಾತ್ಮ ಸುಪ್ರೀತನಾಗಲೆಂದು ಕರ್ಮಮಾಡಿದರೆ ಮಾತ್ರ ಸುಖ ಲಭಿಸುತ್ತದೆ. ದೇಹದಿಂದ ಕಾಮ್ಯಕರ್ಮ ಮಾಡಿದರೆ ಅದರಿಂದ ತಿರುಗಿ ಬೇರೆ ದೇಹ ಸಂಪಾದನೆಯಾಗುತ್ತದೆ. ಅದರಿಂದ ತಿರುಗಿ ಕಾಮ್ಯಕರ್ಮಾಚರಣೆ. ಇದಕ್ಕೆ ಪರಮಾತ್ಮ ಜ್ಞಾನವಿಲ್ಲದಿರುವುದೇ ಕಾರಣ.

ಮುಕುಂದನನ್ನು ಒಲಿಸಲು ಬ್ರಾಹ್ಮಣನಾಗಿರುವುದಾಗಲಿ ದೇವತೆ ಅಥವಾ ಋಷಿಯಾಗಿರುವುದಾಗಲಿ ಸದಾಚಾರ ದಾನ ತಪಸ್ಸು ಪೂಜೆ ಶೌಚ ವ್ರತಗಳಾಗಲಿ ಯಾವುವೂ ಸಾಲವು. ನಿರ್ಮಲ ಭಕ್ತಿ ಬೇಕು. ಪಾಪ ಮಾಡಿದ ಜೀವರೂ ಅನೇಕರು ಭಕ್ತಿಯಿಂದ ಮೋಕ್ಷ ಪಡೆದುದು ಉಂಟು. ಗೋವಿಂದನಲ್ಲಿ ಭಕ್ತಿ, ಅವನನ್ನು ಎಲ್ಲೆಡೆ ಕಾಣುವುದು ಇವಿಷ್ಟೇ ಲೋಕದಲ್ಲಿ ಜೀವನಿಗೆ ಪರಮ ಪುರುಷಾರ್ಥವೆನಿಸಿದೆ.

❖ ❖ ❖

ಪ್ರಹ್ಲಾದ ತಾಯಿಯ ಗರ್ಭದಲ್ಲಿದ್ದಾಗಲೇ ಅವನಿಗೆ ನಾರದರಿಂದ ಉಪದೇಶ ದೊರಕಿತ್ತು. ಅದನ್ನು ಸ್ಮರಿಸಿಕೊಂಡು ದೈತ್ಯಬಾಲಕರಿಗೆ ಉಪದೇಶಿಸುತ್ತಾನೆ.

ಜನ್ಮಾದ್ಯಾಃ ಷಡಿಮೇ ಭಾವಾ ದೃಷ್ಟಾ ದೇಹಸ್ಯ ನಾತ್ಮನಃ ।
ಫಲಾನಾಮಿವ ವೃಕ್ಷಸ್ಯ ಕಾಲೇನೇಶ್ವರಮೂರ್ತಿನಾ ॥ ೧೮ ॥

ಹೇಗೆ ಮರದಲ್ಲಿ ಹಣ್ಣುಗಳು ಹುಟ್ಟಿ ಅಸ್ತಿತ್ವಕ್ಕೆ ಬಂದು ಬೆಳೆದು ಮಾಗಿ

ಸೊರಗಿ ಕೊನೆಗೆ ನಶಿಸುವುವೋ ಹಾಗೇ ದೇಹವೂ ಹುಟ್ಟು ಮುಂತಾದ ಆರು ವಿಕಾರಗಳನ್ನು ಹೊಂದುವುದು ಕಂಡಿದೆ. ಆದರೆ ಅವೆಲ್ಲವೂ ದೇಹಕ್ಕೇ ಹೊರತು ದೇಹದಲ್ಲಿ ನಿಯಾಮಕನಾಗಿರುವ ಪರಮಾತ್ಮನಿಗಲ್ಲ. ಏಕೆಂದರೆ ಅವು ಕಾಲನಿಯಾಮಕ ಪರಮಾತ್ಮನಿಂದಲೇ ದೇಹದಲ್ಲಿ ಉಂಟಾಗುತ್ತಿವೆ.

ಇಲ್ಲಿ ದೇಹಾತ್ಮವಿವೇಕದ ಉಪದೇಶವಿದೆ ಎನ್ನುತ್ತಾರೆ ಬೇರೆ ವ್ಯಾಖ್ಯಾನಕಾರರು. 'ದೃಷ್ಟಾ ದೇಹಸ್ಯ ನಾತ್ಮನಃ' ಆರು ವಿಕಾರಗಳು ಜೀವಾತ್ಮನ ದೇಹಕ್ಕೇ ಹೊರತು ಜೀವಾತ್ಮನಿಗೆ ಅವು ಇಲ್ಲ ಎನ್ನುತ್ತಾರೆ. ಆದರೆ ಅವರೇ ಜೀವಾತ್ಮನಿಗೆ ಜನನ ಮರಣಾದಿ ವಿಕಾರವನ್ನು ಒಪ್ಪುತ್ತಾರೆ. ನಿರ್ವಿಕಾರ ಪರಮಾತ್ಮನೊಬ್ಬನೆ. ಜೀವಾತ್ಮನಿಗೆ ಸ್ವತಃ ಜನ್ಮಾದಿ ವಿಕಾರವಿಲ್ಲ, ಮೋಕ್ಷಸ್ಥಿತಿಯಲ್ಲಿ ಅದು ಕಂಡಿಲ್ಲ, ನಿಜ. ಆದರೆ ಸಂಸಾರಾವಸ್ಥೆಯಲ್ಲಿ ದೇಹ ಪ್ರಯುಕ್ತವಾಗಿ ಎಲ್ಲ ವಿಕಾರಗಳೂ ಅವನಿಗೆ ಇವೆ. ಇಲ್ಲವೆಂದು ಉಪದೇಶಿಸುವುದು ಸರಿಯಲ್ಲ. 'ಮುಕ್ತಸ್ಥಿತಿಯಲ್ಲಿ ಜೀವಾತ್ಮನಿಗೆ ವಿಕಾರಗಳಿಲ್ಲದುದರಿಂದ ಆ ಸ್ಥಿತಿಯನ್ನು ಪಡೆಯಲು ಯತ್ನ ಮಾಡಬೇಕೆಂಬ ಅಭಿಪ್ರಾಯದಿಂದ ಜೀವಾತ್ಮಸ್ವರೂಪ ನಿರ್ವಿಕಾರವಾಗಿದೆ ಎಂದೇಕೆ ಉಪದೇಶಿಸಬಾರದು' ಎಂದರೆ ಜೀವಾತ್ಮ ತನ್ನ ನಿರ್ವಿಕಾರಸ್ವರೂಪವನ್ನು ಸಂಪಾದಿಸಲು ತನ್ನ ನಿರ್ವಿಕಾರ ಸ್ವರೂಪವನ್ನು ಉಪಾಸನೆ ಮಾಡುವುದು ವ್ಯರ್ಥ. ಅವನು ತನ್ನ ಬಿಂಬಮೂರ್ತಿಯಾದ ಪರಮಾತ್ಮನನ್ನೇ ನಿರ್ವಿಕಾರನೆಂದು ಉಪಾಸನೆ ಮಾಡಬೇಕು. ಬೇರಿಗೆ ನೀರೆರೆದರೆ ಮಾತ್ರ ಮರದ ಎಲೆಗಳು ಹೂಹಣ್ಣುಗಳು ಬೆಳೆಯುವುವು. ಆದ್ದರಿಂದ 'ದೃಷ್ಟಾ ದೇಹಸ್ಯ ನಾತ್ಮನಃ' ಎಂಬಲ್ಲಿ ಆತ್ಮ ಎಂದರೆ ಜೀವಾತ್ಮ ವಿವಕ್ಷಿತವಲ್ಲ, ಪರಮಾತ್ಮ ವಿವಕ್ಷಿತ. ವಿಕಾರಉಳ್ಳ ದೇಹದಲ್ಲಿ ವಿಕಾರಿಯಾದ ಜೀವನೊಂದಿಗೆ ಇದ್ದೂ ಕೂಡ ನಿರ್ವಿಕಾರನಾಗಿರುವವನು ಪರಮಾತ್ಮ ಎಂದು ಉಪಾಸನೆ ಮಾಡಬೇಕು.

ಮುಂದೆ, ಇಲ್ಲಿ ಹೇಳಿದ ಆತ್ಮನಿಗೆ ಹನ್ನೆರಡು ಲಕ್ಷಣಗಳನ್ನು ಹೇಳುತ್ತಾರೆ- 'ಆತ್ಮಾ ನಿತ್ಯೋಽವ್ಯಯಃ ಶುದ್ಧ ಏಕಃ' ಎಂದು ಮುಂತಾಗಿ. ಈ ಲಕ್ಷಣಗಳು ಜೀವಾತ್ಮನಲ್ಲಿ ಕೂಡುವುದಿಲ್ಲ. ಉದಾಹರಣೆಗೆ 'ಏಕಃ' ಎಂದು ಹೇಳಿದ ಏಕತ್ವ ಜೀವನಲ್ಲಿ ಸರ್ವಥಾ ಕೂಡುವುದಿಲ್ಲ. ಜೀವಾತ್ಮರು ಅನಂತ. ಅದ್ವೈತದಲ್ಲಿಯೂ ಅಂತಃಕರಣಾವಚ್ಛಿನ್ನ ಚೈತನ್ಯಗಳು ಅನಂತವೆ. ವೀರರಾಘವ ವ್ಯಾಖ್ಯಾನದಲ್ಲಿ ಈ ಅನುಪಪತ್ತಿಯನ್ನು ಎತ್ತಿಕೊಂಡು ಸಮುದಾಯೈಕವಚನ ಎಂದಿದ್ದಾರೆ. ಇಂಥ ಏಕತ್ವವನ್ನು ಹೇಳಿ ಫಲವಿಲ್ಲ. ವ್ಯಾಪಕ, ಅಸಂಗಿ, ಅನಾವೃತ ಎಂದು ಮುಂತಾದ

ಲಕ್ಷಣಗಳೂ ಜೀವನಲ್ಲಿಲ್ಲ. ಜೀವ ಅಣು, ಪುಣ್ಯಪಾಪಲೇಪ ಉಳ್ಳವನು, ಅವನ ಸ್ವರೂಪಾನಂದಾದಿಗಳು ಅಜ್ಞಾನದಿಂದ ಆವೃತವಾಗಿವೆ. ಇನ್ನು ಉಳಿದ ಲಕ್ಷಣಗಳೂ ಮುಖ್ಯವಾಗಿ ಪರಮಾತ್ಮನಲ್ಲಿಯೇ ಬರುತ್ತವೆ ಹೊರತು ಜೀವಾತ್ಮನಲ್ಲಿ ಅಲ್ಲ.

ಜನ್ಮಾದಿ ವಿಕಾರಗಳು ಪರಮಾತ್ಮನಲ್ಲಿ ಇಲ್ಲವೆನ್ನಲು ಶ್ಲೋಕದಲ್ಲಿ 'ಕಾಲೇನೇಶ್ವರ ಮೂರ್ತಿನಾ' ಕಾಲರೂಪಿ ಪರಮಾತ್ಮನಿಂದ ದೇಹದಲ್ಲಿ ಈ ವಿಕಾರ ಗಳುಂಟಾಗುವುದರಿಂದ ಅವು ಆ ಪರಮಾತ್ಮನಲ್ಲಿ ಉಂಟಾಗಲು ಸಾಧ್ಯವಿಲ್ಲ ಎಂದು ಯುಕ್ತಿಯೂ ಕಂಡುಬರುತ್ತದೆ. ಜೀವನಲ್ಲಿ ಇಲ್ಲವೆನ್ನಲು ಯುಕ್ತಿ ಇಲ್ಲ. ಮತ್ತು 'ಕಾಲೇನೇಶ್ವರಮೂರ್ತಿನಾ' ಶಬ್ದಕ್ಕೆ ಈ ಪಕ್ಷದಲ್ಲಿ ಸಾರ್ಥಕ್ಯವೂ ಇಲ್ಲ.

ಶರೀರದಲ್ಲಿ ಬರುವ ವಿಕಾರಗಳು ಜೀವನಲ್ಲಿ ಅಭಿಮಾನ ಪ್ರಯುಕ್ತವಾಗಿ ಬರುವಂತೆ ಪರಮಾತ್ಮನಲ್ಲಿ ಬರುವುದಿಲ್ಲ. ಅವನು ಶರೀರದಲ್ಲಿ ಅಭಿಮಾನಿಯಾಗಿ ಇಲ್ಲ, ನಿಯಾಮಕನಾಗಿ ಇದ್ದಾನೆ. ಆದರಿಂದ ಶರೀರ ಪರಮಾತ್ಮನ ಅಧೀನ ಎಂದು ಉಪಾಸನೆ ಮಾಡಬೇಕು, ಶರೀರದಲ್ಲಿ ಮಮತೆಯನ್ನು ಬಿಡಬೇಕು ಎನ್ನುವುದು ಭಾಗವತದ ಅಭಿಪ್ರಾಯ. ಇದೂ ಕೂಡ ಬ್ರಹ್ಮತರ್ಕದಲ್ಲಿ ಉಕ್ತವಾಗಿದೆ.

ಷಡ್ವಿಕಾರಾಃ ಶರೀರಸ್ಯ ನ ವಿಷ್ಣೋಸ್ತದ್ಗತಸ್ಯ ತು ।
ತದಧೀನಂ ಶರೀರಂ ಚ ಜ್ಞಾತ್ವಾ ತನ್ಮಮತಾಂ ತ್ಯಜೇತ್ ॥ ಇತಿ ಚ ।
ಹೇತುತ್ವಾದ್ ವಿಷ್ಣ್ವಧೀನತ್ವಂ ಶರೀರಸ್ಯ॥

ಜನ್ಮಾದಿ ಆರು ವಿಕಾರಗಳು ಶರೀರಕ್ಕೇ ಹೊರತು ಆ ಶರೀರದಲ್ಲಿ ನಿಯಾಮಕನಾಗಿರುವ ವಿಷ್ಣುವಿಗೆ ಇಲ್ಲ. ಮತ್ತು ಶರೀರ ಅವನ ಅಧೀನ ಎಂದೂ ತಿಳಿಯಬೇಕು. ಶರೀರದಲ್ಲಿ ಮಮತೆಯನ್ನು ಬಿಡಬೇಕು ಎಂದೂ ಬ್ರಹ್ಮತರ್ಕದಲ್ಲಿ ಉಕ್ತವಾಗಿದೆ.

ಶರೀರಕ್ಕೂ ಅದರಲ್ಲಿ ಉಂಟಾಗುವ ಆರು ವಿಕಾರಗಳಿಗೂ ಕಾಲರೂಪಿಯಾದ ಕಾಲನಿಯಾಮಕನಾದ ವಿಷ್ಣುವು ಕಾರಣನಾದ್ದರಿಂದ ಶರೀರ ವಿಷ್ಣುವಿನ ಅಧೀನ ವೆನಿಸುತ್ತದೆ.

❖ ❖ ❖

ಪ್ರಹ್ಲಾದ ದೈತ್ಯಬಾಲಕರಿಗೆ ಉಪದೇಶಿಸುತ್ತಾನೆ

ಅಷ್ಟೌ ಪ್ರಕೃತಯಃ ಪ್ರೋಕ್ತಾಸ್ತ್ರಯ ಏವ ಹಿ ತದ್ಗುಣಾಃ ।
ವಿಕಾರಾಃ ಷೋಡಶಾಚಾರ್ಯೈಃ ಪುಮಾನೇಕಃ ಸಮನ್ವಯಾತ್ ॥ ೨೨ ॥

ಮೂಲಪ್ರಕೃತಿ ಮಹತ್ತತ್ತ್ವ ಅಹಂಕಾರತತ್ತ್ವ ಪಂಚತನ್ಮಾತ್ರೆಗಳೆಂದು ಎಂಟು ಪ್ರಕೃತಿಗಳು. ಸತ್ವರಜಸ್ತಮೋಗುಣಗಳು ಮೂರೂ ಇವುಗಳ ಬೇರೆಬೇರೆ ಅವಸ್ಥೆಗಳೇ ಆಗಿರುವುದರಿಂದ ಬೇರೆಯಲ್ಲ. ಮನಸ್ಸು ಪಂಚ ಜ್ಞಾನೇಂದ್ರಿಯಗಳು ಪಂಚಕರ್ಮೇಂದ್ರಿಯಗಳು ಪಂಚಭೂತಗಳೆಂದು ಹದಿನಾರು ವಿಕಾರಗಳು ಎಂದು ಕಪಿಲ ಮನು ಮುಂತಾದ ಆಚಾರ್ಯರು ಹೇಳಿದ್ದಾರೆ. ಈ ಎಲ್ಲ ಇಪ್ಪತ್ತನಾಲ್ಕು ತತ್ವಗಳಲ್ಲಿ ಅವುಗಳ ಅಭಿಮಾನಿ ಜೀವರಲ್ಲಿ ಬೇರೆಬೇರೆ ರೂಪಗಳಿಂದ ಒಬ್ಬನೇ ಪರಮಾತ್ಮನಿದ್ದಾನೆ. ಇವನು ಇಪ್ಪತ್ತೈದನೆಯ ತತ್ವ

ಇಲ್ಲಿ 'ಪುಮಾನೇಕಃ ಸಮನ್ವಯಾತ್' ಎಂದರೆ ಪ್ರತಿಯೊಂದು ಶರೀರದಲ್ಲಿ ಒಬ್ಬೊಬ್ಬ ಜೀವಾತ್ಮನಿರುತ್ತಾನೆ ಎಂದರ್ಥ. ಎಲ್ಲ ಶರೀರದಲ್ಲಿಯೂ ಒಬ್ಬನೇ ಜೀವನೆಂದರೆ ಸುಖದುಃಖ ಬಂಧಮೋಕ್ಷ ಶಿಷ್ಯ ಆಚಾರ್ಯ ಮುಂತಾಗಿ ವ್ಯವಸ್ಥೆ ಇಲ್ಲವೆಂದಾದೀತು, ಎಂದು ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ. ಆದರೆ ಇಲ್ಲಿ 'ಪುಮಾನ್' ಎಂದರೆ ಪುರುಷನೆನಿಸಿದ ಜೀವ ವಿವಕ್ಷಿತನಲ್ಲ, ಪರಮಪುರುಷನಾದ ಪರಮಾತ್ಮ ವಿವಕ್ಷಿತ. 'ಸಮನ್ವಯ' ಎಂದರೆ ಪ್ರತಿಯೊಂದು ತತ್ವದಲ್ಲಿ ಒಂದೊಂದು ರೂಪದಿಂದ ಪರಮಾತ್ಮನಿರುತ್ತಾನೆ. ಎಲ್ಲ ತತ್ವಗಳಲ್ಲಿಯೂ ಹೀಗೆ ಒಬ್ಬನೆ ಇದ್ದಾನೆ ಎಂದರ್ಥ.

ಅಭಿಮಾನ್ಯಪೇಕ್ಷಯಾ ವಿಷ್ಣುಃ ಪಂಚವಿಂಶ ಇತಿ ಸ್ಮೃತಃ ।
ಜಡವ್ಯಪೇಕ್ಷಯಾ ಜೀವಃ ಸಮ್ಯಗ್ಜ್ಞೇಯೋ ಹರಿಃ ಸ್ಮೃತಃ । ಇತಿ ಚ ।

'ಪ್ರಕೃತಿ' ಮೊದಲಾದ ಶಬ್ದಗಳಿಂದ ಇಪ್ಪತ್ತನಾಲ್ಕು ತತ್ವಗಳೊಂದಿಗೆ ಅವುಗಳ ಅಭಿಮಾನಿಗಳನ್ನೂ ವಿವಕ್ಷೆ ಮಾಡಿದಾಗ ವಿಷ್ಣು ಇಪ್ಪತ್ತೈದನೆಯ ತತ್ವವೆನಿಸುತ್ತಾನೆ. ಕೇವಲ ಜಡತತ್ವಗಳನ್ನೇ ಇಟ್ಟುಕೊಂಡಾಗ ಜೀವ ಇಪ್ಪತ್ತೈದನೆಯ ತತ್ವವೆನಿಸುತ್ತಾನೆ ಮತ್ತು ವಿಷ್ಣು ಆ ಎಲ್ಲ ಇಪ್ಪತ್ತೈದು ತತ್ವಗಳಲ್ಲಿ 'ಸಮ್ಯಕ್' ನಿಯಾಮಕನಾಗಿ ಇರುವುದರಿಂದ ಅವನೂ ಇಪ್ಪತ್ತೈದನೆಯ ತತ್ವವೆನಿಸುತ್ತಾನೆ ಎಂದೂ ಬ್ರಹ್ಮತರ್ಕದಲ್ಲಿ ಉಕ್ತವಾಗಿದೆ.

❖ ❖ ❖

ಜೀವ-ಪರಮಾತ್ಮರ ಭೇದವನ್ನು ತಿಳಿಯದಿರುವುದೇ ಸಂಸಾರಕ್ಕೆ ಮೂಲಕಾರಣ ಎಂದು ಪ್ರಹ್ಲಾದ ದೈತ್ಯಬಾಲಕರಿಗೆ ಉಪದೇಶಿಸುತ್ತಾನೆ.

ಬುದ್ಧೇರ್ಜಾಗರಣಂ ಸ್ವಪ್ನಃ ಸುಷುಪ್ತಿರಿತಿ ವೃತ್ತಯಃ ।
ತಾ ಯೇನೈವಾನುಭೂಯಂತೇ ಸೋऽಧ್ಯಕ್ಷಃ ಪುರುಷಃ ಪರಃ ॥ ೨೫ ॥

ಏಭಿಸ್ತ್ರಿವರ್ಣೈಃ ಪರ್ಯಸ್ತೈರ್ಬುದ್ಧಿಭೇದೈಃ ಕ್ರಿಯೋದ್ಭವೈಃ ।
ಸರೂಪಮಾತ್ಮನೋ ಧತ್ತೇ ಗಂಧೈರ್ವಾಯುರಿವಾನ್ವಯಾತ್ ॥ ೨೬ ॥

ಏತದ್ದ್ವಾರೋ ಹಿ ಸಂಸಾರೋ ಗುಣಕರ್ಮನಿಬಂಧನಃ ।
ಅಜ್ಞಾನಮೂಲೋऽಪಾರ್ಥೋऽಪಿ ಪುಂಸಃ ಸ್ವಪ್ನ ಇವಾಪ್ಯತೇ ॥ ೨೭ ॥

ಜಾಗರ ಸ್ವಪ್ನ ಸುಷುಪ್ತಿಗಳೆಂದು ಮೂರು ಅವಸ್ಥೆಗಳು ಜೀವನಿಗೆ ಬರುತ್ತವೆ. ಅವುಗಳ ಅನುಭವ ಜೀವನಿಗೆ ಬರುವಂತೆ ಮಾಡುವವನು ಸರ್ವಜ್ಞನಾದ ಶ್ರೀಹರಿ. ಆದರಿಂದ ಅವನು ಜೀವರಿಗಿಂತ ವಿಲಕ್ಷಣ.

ಗುಣತ್ರಯಗಳು ಕರ್ಮಗಳಿಂದ ಉದ್ಭವಿಸಿ ಜೀವತಾರತಮ್ಯವನ್ನು ತೋರಿಸುತ್ತ ಜೀವರಲ್ಲಿ ಅಂಟಿಕೊಂಡಿವೆ. ಅವುಗಳಿಗೆ ಪ್ರವರ್ತಕನಾದ ಪರಮಾತ್ಮ ಗುಣತ್ರಯಬದ್ಧರಾದ ಜೀವರ ಜೊತೆಗಿರುವುದರಿಂದ ಅವನೂ ಗುಣತ್ರಯ ಬದ್ಧನೆಂದು ಅಜ್ಞಾನಿಗಳ ದೃಷ್ಟಿಯಲ್ಲಿ ಜೀವಸಾದೃಶ್ಯವನ್ನು ಹೊಂದುತ್ತಾನೆ. ಸುಗಂಧದ್ರವ್ಯ ಸಂಬಂಧ ಪ್ರಯುಕ್ತ ವಾಯು ಗಂಧಯುಕ್ತವಾಗಿ ಕಾಣುವಂತೆ. ಹೀಗಾಗಿ ಜೀವಪರಮಾತ್ಮರೊಳಗಿನ ಭೇದ ಅಜ್ಞದೃಷ್ಟಿಗೆ ಗೋಚರವಾಗುವುದಿಲ್ಲ.

ಜೀವಪರಮಾತ್ಮರೊಳಗೆ ಹೀಗೆ ಭೇದವನ್ನು ಕಾಣದಿರುವುದೇ ಸಂಸಾರಕ್ಕೆ ಮೂಲಕಾರಣ. ಏಕೆಂದರೆ ಈ ಭೇದವನ್ನು ಕಾಣದವನು ಪರವಶತೆಯಿಂದ ಸ್ವಪ್ನದಲ್ಲಿ ತನ್ನ ಶಿರವನ್ನು ತಾನೇ ಛೇದ ಮಾಡಿಕೊಂಡು ದುಃಖ ಪಡುವಂತೆ ಅಜ್ಞಾನಮೂಲಕವಾದ ಈ ಸಂಸಾರ ದುಃಖಕರವೆಂದು ತಿಳಿದೂ ಕೂಡ ಪರವಶತೆಯಿಂದ ತ್ರಿಗುಣಗಳ ಮೂಲಕ ಮತ್ತು ಕರ್ಮಗಳ ಮೂಲಕ ಸಂಸಾರವನ್ನು ತನಗೆ ತಾನೇ ತಂದುಕೊಳ್ಳುತ್ತಾನೆ.

ಶ್ರೀಧರವ್ಯಾಖ್ಯಾನ ಪ್ರಕಾರ ಈ ಮೂರು ಶ್ಲೋಕಗಳ ಅರ್ಥ ಹೀಗೆ- 'ಜಾಗರ ಸ್ವಪ್ನ ಸುಷುಪ್ತಿ ಇವು ಮೂರು ಅಂತಃಕರಣದ ಪರಿಣಾಮಗಳು. ಅವುಗಳನ್ನು ಅನುಭವಿಸುವವನು 'ಅಧ್ಯಕ್ಷ' ಸಾಕ್ಷಿಯಾದ 'ಪುರುಷ' ಜೀವ. ಅವನು 'ಪರ' ಅಂತಃಕರಣಕ್ಕಿಂತ ವಿಲಕ್ಷಣ.

ಈ ಅಂತಃಕರಣ ಪರಿಣಾಮಗಳು ವಾಸ್ತವದಲ್ಲಿ ಜೀವನಿಗೆ ಸಂಬಂಧಿಸಿದ್ದಲ್ಲ. ಏಕೆಂದರೆ ತ್ರಿಗುಣಾತ್ಮಕವಾದ ಅಂತಃಕರಣವೇ ಕರ್ಮಮಾಡುತ್ತದೆ. ಅದರಿಂದ ತ್ರಿಗುಣಾತ್ಮಕವಾದ ಕರ್ಮಜನ್ಯವಾದ ಅಂತಃಕರಣ ಪರಿಣಾಮಗಳು ಅಂತಃಕರಣದಲ್ಲಿಯೇ ಇರುವಂಥವು. ಜೀವಾತ್ಮನಿಗೆ ಅಂತಃಕರಣದ ಸಂಬಂಧವಿರುವುದರಿಂದ ಅಂತಃಕರಣದ ಪರಿಣಾಮಗಳು ಜೀವಾತ್ಮನಲ್ಲಿ ಇರುವಂತೆ ಭಾಸವಾಗುತ್ತವೆ. ಹೂವಿನ ಸಂಬಂಧ ಗಾಳಿಗೆ ಇರುವುದರಿಂದ ಹೂವಿನ ಪರಿಮಳ ಗಾಳಿಯಲ್ಲಿರುವಂತೆ ಭಾಸವಾಗುತ್ತದೆ. ಹಾಗೇ ಇದು. ಹೀಗೆ ತಿಳಿದಾಗಲೆ ಜೀವಾತ್ಮನ ನಿಜ ಸ್ವರೂಪ ತಿಳಿದು ಬರುತ್ತದೆ.

ಗಾಳಿಯಲ್ಲಿ ಸ್ವತಃ ಪರಿಮಳವಿಲ್ಲ ಎಂದು ತಿಳಿದ ಮೇಲೂ ಗಾಳಿಯಲ್ಲಿ ಪರಿಮಳದ ಅನುಭವವಿದ್ದೇ ಇರುತ್ತದೆ. ಅದು ತೊಲಗುವುದಿಲ್ಲ. ಏಕೆಂದರೆ ಗಾಳಿಯಲ್ಲಿ ಹೂವಿನ ಸಂಬಂಧ ಸತ್ಯ. ಆದರೆ ಜೀವಾತ್ಮನಲ್ಲಿ ಅಂತಃಕರಣದ ಸಂಬಂಧ ಸತ್ಯವಲ್ಲ. ಅಜ್ಞಾನಮೂಲಕವಾಗಿದ್ದು ಮಿಥ್ಯೆಯಾಗಿದೆ. ಅದರಿಂದ ಅಜ್ಞಾನಮೂಲಕವಾದ ಅಂತಃಕರಣ ದ್ವಾರಕವಾದ ಸಂಸಾರವೂ, ಮಿಥ್ಯೆ, ಸ್ವಪ್ನದಂತೆ. ತತ್ವಜ್ಞಾನ ಬಂದಾಗ ತೊಲಗುತ್ತದೆ'.

ನಮ್ಮ ಪಾಠದಲ್ಲಿ ಪುರುಷ ಎಂದರೆ ಪರಮಾತ್ಮ. ಅವನಿಗೆ 'ಆತ್ಮ'ನ ಸಾರೂಪ್ಯವನ್ನು ಹೇಳುವುದರಿಂದ 'ಆತ್ಮ' ಎಂದರೆ ಜೀವಾತ್ಮ. ಇಲ್ಲಿ 'ಸರೂಪಮಾತ್ಮನೋ ಧತ್ತೇ' ಎಂಬ ನಮ್ಮ ಪಾಠವನ್ನು ಬಿಟ್ಟು 'ಸ್ವರೂಪಮಾತ್ಮನೋ ಬುಧ್ಯೇತ್' ಎಂದು ಅಪಪಾಠವಿಟ್ಟುಕೊಂಡು ಆತ್ಮನ ಅಂದರೆ ಜೀವಾತ್ಮನ ಸ್ವರೂಪವನ್ನು ತಿಳಿಯಬೇಕು ಎಂದು ಅರ್ಥೈಸಿದ್ದಾರೆ. ವಸ್ತುತಃ 'ಆತ್ಮ' ಎಂದರೆ ಈ ಪಾಠದಲ್ಲಿ ಹಿಂದೆ ಹತ್ತೊಂಬತ್ತನೇ ಶ್ಲೋಕದಲ್ಲಿ ಹೇಳಿದಂತೆ, ಪರಮಾತ್ಮ ಎನ್ನಬೇಕು. ಅಲ್ಲಿ 'ಏಕಃ ವ್ಯಾಪಕಃ ಅಸಂಗೀ' ಎಂದು ಮುಂತಾಗಿ ಆತ್ಮನಿಗೆ ಕೊಟ್ಟ ವಿಶೇಷಣಗಳು ಜೀವಾತ್ಮನಿಗೆ ಕೂಡುವುದಿಲ್ಲ. ಜೀವಾತ್ಮ ಏಕನಲ್ಲ, ಅನೇಕ. ವ್ಯಾಪಕನಲ್ಲ, ಅಣು. ಅಸಂಗಿಯಲ್ಲ, ಪುಣ್ಯಪಾಪಲೇಪ ಉಳ್ಳವನು.

ಜಾಗರ ಸ್ವಪ್ನ ಸುಷುಪ್ತಿ ಇವು ಮೂರೂ ಅಂತಃಕರಣದ ಪರಿಣಾಮಗಳು ಎಂದಿರುವುದೂ ಅಸಂಗತ. ವೀರರಾಘವ ವ್ಯಾಖ್ಯಾನದಲ್ಲಿಯೇ ಇದು ಸ್ಪಷ್ಟವಿದೆ. 'ಬಾಹ್ಯೇಂದ್ರಿಯ ವ್ಯಾಪಾರಯುಕ್ತವಾದ ಅಂತಃಕರಣ ಪರಿಣಾಮ ಜಾಗರ. ಬಾಹ್ಯೇಂದ್ರಿಯ ವ್ಯಾಪಾರವಿಲ್ಲದ ಅಂತಃಕರಣ ಪರಿಣಾಮ ಸ್ವಪ್ನ. ಅಂತಃಕರಣದಲ್ಲಿ ಪರಿಣಾಮ ಯಾವುದೂ ಇಲ್ಲದಂತಾಗುವುದೇ ಸುಷುಪ್ತಿ. ಪರಿಣಾಮವೇನೂ ಇಲ್ಲದಂತಾಗುವುದೂ ಕೂಡ ಅಂತಃಕರಣದಲ್ಲಿಯೇ ತಾನೆ? ಅದರಿಂದ ಅದನ್ನು

ಅಂತಃಕರಣದ ಪರಿಣಾಮವೆನ್ನಲಾಗಿದೆ' ಎನ್ನುತ್ತಾರೆ. ಅದರಿಂದ ಶ್ರೀಧರ ವ್ಯಾಖ್ಯಾನವೂ ಅದನ್ನೇ ಅನುಸರಿಸುವ ವೀರರಾಘವ ಮುಂತಾದ ವ್ಯಾಖ್ಯಾನಗಳೂ ಇಲ್ಲಿ ಮುಗ್ಗರಿಸಿರುವುದು ಸ್ಪಷ್ಟವಿದೆ.[೧]

ನಮ್ಮ ವ್ಯಾಖ್ಯಾನದಲ್ಲಿ 'ಬುದ್ಧಿ' ಎಂದರೆ ಅಂತಃಕರಣ ವಿವಕ್ಷಿತವಲ್ಲ. ಜ್ಞಾನಸ್ವರೂಪನಾದ ಜೀವಾತ್ಮ ವಿವಕ್ಷಿತ. ಜಾಗರ ಸ್ವಪ್ನ ಸುಷುಪ್ತಿ ಇವು ಮೂರೂ ಜೀವಾತ್ಮನ ಅವಸ್ಥೆಗಳು.

'ಅಂತಃಕರಣದ ಸಂಬಂಧ ಜೀವಾತ್ಮನಿಗಿರುವುದರಿಂದ ಅವನಲ್ಲಿ ಅಂತಃಕರಣದ ಕರ್ತೃತ್ವ ಭೋಕ್ತೃತ್ವ ಸುಖದುಃಖಾದಿಗಳು ಭಾಸವಾಗುತ್ತವೆ' ಎಂದು ಶ್ರೀಧರವ್ಯಾಖ್ಯಾನ ಹೇಳುವುದೂ ಅನುಭವ ವಿರುದ್ಧ. ಅಂತಃಕರಣ ಅದರ ಹೆಸರೇ ಹೇಳುವಂತೆ ಜೀವಾತ್ಮನಿಗೆ ಕರಣ, ಸಾಧನ. ಅದರ ಸಹಾಯದಿಂದ ಅವನು ಕರ್ತಭೋಕ್ತನಾಗಿದ್ದು ಸುಖದುಃಖಾದಿಗಳನ್ನು ಉಣ್ಣುತ್ತಾನೆ. ಅದರಿಂದ ಅವು ಮಿಥ್ಯೆಯಲ್ಲ.

'ಅಂತಃಕರಣದ ಸಂಬಂಧ ಜೀವಾತ್ಮನಿಗೆ ವಾಸ್ತವವಲ್ಲ' ಎಂದು ಶ್ಲೋಕದಲ್ಲಿ ಹೇಳಿಲ್ಲ. 'ಅಂತಃಕರಣಸಂಬಂಧದ್ವಾರಕವಾದ, ಸಂಸಾರದುಃಖ ಅಜ್ಞಾನ ಮೂಲಕವಾಗಿದೆ' ಎಂದಿದೆ. ಈ ಅಜ್ಞಾನ ಅನಾದಿ ಭಾವರೂಪವಾದ ಅನಿರ್ವಚನೀಯ ಅವಿದ್ಯೆ ಎನ್ನಲು ಇಲ್ಲಿ ಪ್ರಸಕ್ತಿ ಇಲ್ಲ. ಹಿಂದೆ ಪ್ರಸಕ್ತವಾಗಿರುವುದು ಗಾಳಿಯಲ್ಲಿ ಸತ್ಯವಾಗಿ ಇರುವ ಹೂವಿನ ಸಂಬಂಧ. ಅದರ ಅಜ್ಞಾನದಿಂದ

---

೧. ಏಭಿರ್ಬುದ್ಧಿಭೇದೈಃ ಪರಿಣಾಮೈಃ ಪರ್ಯಸ್ತೈಃ ಪರಿತಃ ಕ್ಷಿಪ್ತೈರನಾತ್ಮಧರ್ಮತ್ವೇನ ನಿರಸ್ತೈಃ। ಬುದ್ಧಿಧರ್ಮತ್ವೇ ಹೇತುಃ ತ್ರಿವರ್ಣೈಸ್ತ್ರಿಗುಣಾತ್ಮಕೈಃ ಕ್ರಿಯೋದ್ಭವೈಃ ಕರ್ಮಜನ್ಯೈಃ। ಬುದ್ಧೇರೇವ ತ್ರಿಗುಣಾತ್ಮಕತ್ವಾತ್ ಕರ್ಮಕರ್ತೃತ್ವಾಚ್ಚ ತಸ್ಯಾ ಏವೈತಾ ಅವಸ್ಥಾಃ। ಆತ್ಮಾ ತು ಬುಧ್ಯನ್ವಯಾತ್ ತದವಸ್ಥಾವಾನಿವಾಭಾತಿ। ನ ತತ್ತ್ವತ ಇತ್ಯಾತ್ಮನಃ ಸ್ವರೂಪಂ ಬುಧ್ಯೇದ್ ಜಾನೀಯಾದಿತ್ಯರ್ಥಃ। ಅತ್ರ ದೃಷ್ಟಾಂತಃ। ಕುಸುಮ ಧರ್ಮೈರ್ಗಂಧೈಸ್ತದಾಶ್ರಯಂ ವಾಯುಮಿವ। ನನು ತರ್ಹಿ ಯಥಾ ಕುಸುಮೋಪಾಧಿಕೋಽಪಿ ವಾಯೋರ್ಗಂಧೋ ವಿವೇಕ ಜ್ಞಾನೇ ನ ನಿವರ್ತತೇ ಏವಮಾತ್ಮನಃ ಸಂಸಾರೋ ನ ನಿವರ್ತತ ಇತ್ಯಾಶಂಕ್ಯಾಹ। ಏತದ್ದ್ವಾರೋ ಬುದ್ಧಿ ದ್ವಾರಕಸ್ತದವಸ್ಥಾದ್ವಾರಕೋ ವಾ ಸಂಸಾರೋ ನ ಸ್ವತಃ। ಹಿ ಯಸ್ಮಾತ್ ಬುದ್ಧೇರ್ಯೇ ಗುಣಾಃ ಕರ್ಮಾಣಿ ಚ ತೈರ್ನಿಬಧ್ಯತ ಇತಿ ತಥಾ ಸ ಚಾಜ್ಞಾನಮೂಲೋಽತೋಽಪಾರ್ಥೋ ಮಿಥ್ಯಾಭೂತೋಽಪಿ ಸ್ವಪ್ನ ಇವೇಷ್ಯತೇ। ವಾಯೋಸ್ತು ಗಂಧದ್ರವ್ಯ ಸಂಬಂಧಸ್ಯ ವಾಸ್ತವತ್ವಾದ್ ವಿಷಮೋ ದೃಷ್ಟಾಂತಃ। -ಶ್ರೀಧರಃ

ಸುಷುಪ್ತಿ ರ್ಬುದ್ಧಿವೃತ್ತ್ಯುಪರಮಃ। ತದುಪರಮೋಽಪಿ ತತ್ಸಂಬಂಧ್ಯೇವೇತಿ ಬುದ್ಧೇರ್ವೃತ್ತಯ ಇತ್ಯುಕ್ತಂ। -ವೀರರಾಘವ

ಗಾಳಿಯಲ್ಲಿ ಪರಿಮಳದ ಭ್ರಮೆ. ಹಾಗೇ ಆತ್ಮನಲ್ಲಿ ಅಂತಃಕರಣದ ಸಂಬಂಧವೂ ಸತ್ಯ. ಅದರ ಅಜ್ಞಾನದಿಂದ ಆತ್ಮನಲ್ಲಿ ಸುಖದುಃಖಾದಿಗಳು 'ಸ್ವತಃ' ಎಂದು ಭ್ರಮೆ ಬರಬಹುದು. ಸುಖದುಃಖಾದಿಗಳು ಕಾಣುವುದೇ ಭ್ರಮೆ ಎನ್ನಲಾಗದು.

ಹೀಗಾಗಿ ಸಂಸಾರ 'ಅಪಾರ್ಥ' ಎಂದರೆ ಮಿಥ್ಯೆಯಲ್ಲ. ಜೀವಾತ್ಮನಿಗೆ ಅನಾದಿಕಾಲದಿಂದ ಪರಮಾತ್ಮನ ಅಜ್ಞಾನವಿದೆ. ಅದಕ್ಕೆ ಪರಮಾತ್ಮ ಮುನಿದು ಅನರ್ಥಕರವಾದ ಸತ್ಯವಾದ ಸಂಸಾರ ನೀಡಿದ್ದಾನೆ. 'ಅಪಾರ್ಥ' ಎಂದರೆ ಅನರ್ಥ. 'ಸ್ವಪ್ನದಂತೆ ಮಿಥ್ಯಾ' ಎನ್ನುವುದು ಸ್ವಾಪ್ನಪದಾರ್ಥದ ಸತ್ಯತ್ವವನ್ನು ತಿಳಿಯದವರು ಆಡುವ ಮಾತು. ವಸ್ತುತಃ ಜೀವಾತ್ಮ ಸ್ವಪ್ನದಲ್ಲಿ ಪರಾಧೀನನಾಗಿದ್ದು ತನಗೆ ಅನರ್ಥಕರವಾದ ಸ್ವಶಿರಶ್ಛೇದಾದಿಗಳನ್ನು ತಾನೇ ಮಾಡಿಕೊಂಡು ದುಃಖಿಸುವಂತೆ ಜಾಗರದಲ್ಲಿಯೂ ಪರಾಧೀನನಾಗಿದ್ದು ತನಗೆ ಅನರ್ಥಕರವಾದ ವಿಷಯ ಸುಖಾನ್ವೇಷಣವನ್ನು ತಾನೇ ಮಾಡಿ ದುಃಖಿಸುತ್ತಾನೆ ಎಂಬ ಅಭಿಪ್ರಾಯದಿಂದ ಭಾಗವತದಲ್ಲಿ ಸ್ವಪ್ನದೃಷ್ಟಾಂತವನ್ನು ನೀಡಲಾಗಿದೆ.

ಬುದ್ಧೇರ್ಜೀವಸ್ಯ ।

ಸತ್ವಬುದ್ಧ್ಯಾದಿ ಶಬ್ದೈಸ್ತು ಜೀವೋऽಪಿ ಕ್ವಚಿದೀರ್ಯತೇ ।
ಜಾಗ್ರದಾದ್ಯಾಃ ಕರ್ಮ ಚೈವ ಸುಖದುಃಖೇ ಚ ತಸ್ಯ ಹಿ ।
ಜಾಗ್ರದಾದೇಃ ಪರೋ ದ್ರಷ್ಟಾ ಸುಖನಿಷ್ಠೋ ಹರಿಃ ಸ್ಮೃತಃ ।
ಸ ಜೀವೇನ ಸಹ ಸ್ಥಾನಾತ್ ತತ್‌ಸ್ವರೂಪಃ ಪ್ರದೃಶ್ಯತೇ ।
ಅಜ್ಞದೃಷ್ಟ್ಯಾ ನ ಜ್ಞದೃಷ್ಟ್ಯಾ ಯಥಾ ಗಂಧಯುತೋऽನಿಲಃ ।
ಅದೃಷ್ಟೇ ಜೀವಪರಯೋ ರ್ಭೇದಸ್ಯಾಪ್ನೋತಿ ಸಂಸೃತಿಂ ।
ಅಭೇದ ನಿಶ್ಚಯಾದ್‌ಯಾತಿ ತಮೋ ನಾಸ್ತ್ಯತ್ರ ಸಂಶಯಃ ॥

ಇತಿ ಚ ।

ಬುದ್ಧಿಭೇದೈಃ ಜೀವಾನಾಂ ತಾರತಮ್ಯಜ್ಞಾಪಕೈಃ ।

ದುಃಖರೂಪೋऽಪಿ ಸಂಸಾರೋ ಬುದ್ಧಿಪೂರ್ವಮವಾಪ್ಯತೇ
ಯಥಾ ಸ್ವಪ್ನೇ ಶಿರಶ್ಛೇದಂ ಸ್ವಯಂ ಕೃತ್ವಾऽऽತ್ಮನೋऽವಶಃ ।
ತತೋ ದುಃಖಮವಾಪ್ನೇತ ತಥಾ ಜಾಗರಿತೇऽಪಿ ತು ।
ಜಾನನ್ನಪ್ಯಾತ್ಮನೋ ದುಃಖಮವಶಸ್ತು ಪ್ರವರ್ತತೇ ॥ ಇತಿ ಚ ।

'ಬುದ್ಧೇಃ' ಎಂದರೆ ಜೀವನಿಗೆ, ಮೂರು ಅವಸ್ಥೆಗಳು ಎಂದರ್ಥ.

'ಸತ್ವ ಬುದ್ಧಿ ಮುಂತಾದ ಶಬ್ದಗಳಿಂದ ಕೆಲವೆಡೆ ಜೀವನನ್ನೂ

ಹೇಳುವುದುಂಟು. ಮತ್ತು ಇಲ್ಲಿ ಹೇಳಿರುವ ಜಾಗರ ಮುಂತಾದ ಅವಸ್ಥೆಗಳು ಅವುಗಳಿಗೆ ಕಾರಣವಾದ ಕರ್ಮ, ಮತ್ತು ಸುಖದುಃಖ ಗಳೆಲ್ಲವೂ ಜೀವನಿಗೇ ಆಗುವುದರಿಂದ ಬುದ್ಧಿಶಬ್ದದಿಂದ ಜೀವನನ್ನಿಟ್ಟು ಕೊಳ್ಳಬೇಕು. ಅಂತಃಕರಣವನ್ನಲ್ಲ. ಜಾಗರ ಮುಂತಾದ ಅವಸ್ಥೆಗಳನ್ನು ಜೀವನೇ ಅನುಭವಿಸುತ್ತಾನೆ. ಸರ್ವೋತ್ತಮನಾದ ಜೀವವಿಲಕ್ಷಣನಾದ ಹರಿ ಕೇವಲ ನೋಡುತ್ತಿರುತ್ತಾನೆ. ಏಕೆಂದರೆ ಅವನು ತನ್ನ ಸ್ವರೂಪಾನಂದದಲ್ಲಿ ತಾನು ಮುಳುಗಿರುತ್ತಾನೆ. ಅವಸ್ಥಾತ್ರಯವನ್ನು ಅನುಭವಿಸುವ ಜೀವನ ಜೊತೆಗೆ ಹರಿ ಇರುವುದರಿಂದ ಅವನೂ ಜೀವನಂತೆಯೇ ಎಂದು ಅಜ್ಞದೃಷ್ಟಿಗೆ ಗೋಚರಿಸುತ್ತಾನೆ. ಜ್ಞಾನಿಯ ದೃಷ್ಟಿಗೆ ಹಾಗೆ ಗೋಚರಿಸುವುದಿಲ್ಲ. ವಿಲಕ್ಷಣನಾಗಿಯೆ ಗೋಚರಿಸುತ್ತಾನೆ. ಹೂವಿನಂತೆ ಗಾಳಿಗೂ ಪರಿಮಳವಿದೆ ಎಂದು ಅಜ್ಞರು ಭ್ರಮಿಸುತ್ತಾರೆ. ಜ್ಞಾನಿಯು ಹಾಗೆ ಭ್ರಮಿಸುವುದಿಲ್ಲ. ಹಾಗೇ ಇದು. ಈ ಜೀವಪರಮಾತ್ಮರ ವೈಲಕ್ಷಣ್ಯವನ್ನು ತಿಳಿಯದಿರುವುದರಿಂದಲೇ ಜೀವನಿಗೆ ಸಂಸಾರವಿದೆ. ಅಭೇದವನ್ನೇ ನಿಶ್ಚಯವಾಗಿ ತಿಳಿದರೆ ತಮಸ್ಸು ಪ್ರಾಪ್ತವಾಗುವುದು. ಇದರಲ್ಲಿ ಸಂಶಯವಿಲ್ಲ' ಎಂದೂ ಹೇಳಿದೆ.

('ಬುದ್ಧಿಭೇದೈಃ' ಎಂದರೆ ಅಂತಃಕರಣದ ಪರಿಣಾಮರೂಪವಾದ ಅವಸ್ಥಾತ್ರಯಗಳೆಂದು ವ್ಯಾಖ್ಯಾನಿಸುವುದು ಸರಿಯಲ್ಲ.) ಬುದ್ಧಿಗಳೆಂದರೆ ಜೀವರು. ಅವರಲ್ಲಿ ಸಾತ್ವಿಕ ರಾಜಸ ತಾಮಸರೆಂಬ ಭೇದವನ್ನು ತಾರತಮ್ಯವನ್ನು ತೋರಿಸುವವು ತ್ರಿಗುಣಗಳು. (ಸಾತ್ವಿಕರು ಉತ್ತಮರು, ರಾಜಸರು ಮಧ್ಯಮರು, ತಾಮಸರು ಅಧಮರು ಎಂದು ಮುಂತಾಗಿ ಜೀವತಾರತಮ್ಯವನ್ನು ತ್ರಿಗುಣಗಳು ತೋರಿಸುತ್ತವೆ.)

ಸ್ವಪ್ನದೃಷ್ಟಾಂತದ ಅಭಿಪ್ರಾಯ ಹೀಗೆ- ಸಂಸಾರ ದುಃಖಕರವೆಂದು ತಿಳಿದೂ ಕೂಡ ಜೀವರು ಅದನ್ನು ಸಂಪಾದಿಸುತ್ತಾರೆ. ಸ್ವಪ್ನದಲ್ಲಿ ಜೀವ ಪರಮಾತ್ಮಾಧೀನನಾಗಿ ಪೂರ್ವ ಸಂಸ್ಕಾರಾಧೀನನಾಗಿ ತನ್ನ ಶಿರಶ್ಛೇದವನ್ನು ತಾನೇ ಮಾಡಿಕೊಂಡು ದುಃಖ ಪಡುತ್ತಾನೆ. ಹಾಗೆಯೇ ಜಾಗರದಲ್ಲಿಯೂ ಕೂಡ ಪರಮಾತ್ಮಾಧೀನನಾಗಿ ಪೂರ್ವಕರ್ಮಾಧೀನನಾಗಿ, ದುಃಖಕರ ವೆಂದು ತಿಳಿದೂ ಕೂಡ, ವಿಷಯ ಭೋಗಗಳ ಅನ್ವೇಷಣೆಯಲ್ಲಿ ತೊಡಗುತ್ತಾನೆ ಎಂದೂ ಹೇಳಿದೆ.

❖ ❖ ❖

ಜೀವವಿಲಕ್ಷಣನಾದ ಹರಿಯನ್ನು ಅರಿಯದಿರುವುದೇ ಸಂಸಾರಕ್ಕೆ ಮೂಲಕಾರಣವಾದ್ದರಿಂದ ಅಂಥ ಹರಿಯನ್ನು ನಿರಂತರ ನೆನೆಯುವುದೇ ಸಂಸಾರ ಪರಿಹಾರಕ್ಕೆ ತಕ್ಕ ಉಪಾಯ ಎಂದು ಪ್ರಹ್ಲಾದ ದೈತ್ಯಬಾಲಕರಿಗೆ ಉಪದೇಶಿಸುತ್ತಾನೆ.

ತಸ್ಮಾದ್ಭವದ್ಭಿಃ ಕರ್ತವ್ಯಃ ಕರ್ಮಣಾಂ ತ್ರಿಗುಣಾತ್ಮನಾಮ್ ।
ಬೀಜನಿರ್ಹರಣೇ ಯೋಗಃ ಪ್ರವಾಹೋಪರಮೋ ಧಿಯಃ ॥ ೨೯ ॥

ಅದರಿಂದ ನೀವು ತ್ರಿಗುಣಜನ್ಯವಾದ ಕರ್ಮಗಳಿಗೆ ಮೂಲ ಕಾರಣವಾದ ಅಜ್ಞಾನವನ್ನು ಕಳೆಯಲು ಉಪಾಯ ಮಾಡಬೇಕು. ಅದೇನೆಂದರೆ ಬುದ್ಧಿಪ್ರವಾಹವನ್ನು ಪರಮಾತ್ಮನಲ್ಲಿಯೇ ನೆಲೆ ನಿಲ್ಲಿಸಬೇಕು.

[೧]ಇಲ್ಲಿ 'ಬೀಜನಿರ್ಹರಣಂ ಯೋಗಃ ಪ್ರವಾಹೋಪರಮೋ ಧಿಯಃ' ಎಂದು ಬೇರೆ ವ್ಯಾಖ್ಯಾನಕಾರರ ಪಾಠ. 'ಸಂಸಾರಕ್ಕೆ ಮೂಲಕಾರಣವಾದ ಅಜ್ಞಾನವನ್ನು ನಿವೃತ್ತಿ ಮಾಡಿಕೊಳ್ಳಬೇಕು. ಅದೇ ಜಾಗರ ಮುಂತಾದ ಬುದ್ಧಿಪ್ರವಾಹ ನಿವೃತ್ತಿಗೆ ಸಾಧನ' ಎಂದು ಶ್ರೀಧರವ್ಯಾಖ್ಯಾನ ಹೇಳುತ್ತದೆ. ಬುದ್ಧಿಪ್ರವಾಹ ನಿವೃತ್ತಿಯೇ ಪರಮ ಪುರುಷಾರ್ಥ ಎಂದು ಹೇಳಿದಂತಾಗುತ್ತದೆ. ವಸ್ತುತಃ ಬುದ್ಧಿಪ್ರವಾಹ ನಿವೃತ್ತಿಯು ಸುಷುಪ್ತಿಯಲ್ಲಿಯೂ ಇರುವುದರಿಂದ ಅದು ಪರಮಪುರುಷಾರ್ಥವಾಗಲಾರದು.

'ಜಾಗರ ಸ್ವಪ್ನ ಸುಷುಪ್ತಿ ಇವು ಮೂರೂ ಬುದ್ಧಿಯ ಪ್ರವಾಹರೂಪಗಳು. ಅವುಗಳ ನಿವೃತ್ತಿಯೇ ಪರಮಪುರುಷಾರ್ಥ' ಎಂದು ವಿಶ್ವನಾಥ ವ್ಯಾಖ್ಯಾನ ಹೇಳುತ್ತದೆ. ಇದು ಅಸಂಗತ. ಸುಷುಪ್ತಿಯು ಬುದ್ಧಿಪ್ರವಾಹ ನಿವೃತ್ತಿ ರೂಪವಾಗಿದೆ ಹೊರತು ಬುದ್ಧಿ ಪ್ರವಾಹರೂಪವಲ್ಲ.

---

೧. 'ಬೀಜಮಜ್ಞಾನಂ ತಸ್ಯ ನಿರ್ಹರಣಂ ದಹನಂ। ಕಿಂ ತತ್ ಯೋಗಃ। ಕಥಂಭೂತಃ। ಧಿಯಃ ಪ್ರವಾಹಂ ಜಾಗ್ರದಾದಿರೂಪಮುಪರಮಯತೀತಿ ತಥಾ। -ಶ್ರೀಧರಃ
ಧಿಯೋ ಬುದ್ಧೇಃ ಪ್ರವಾಹಾಣಾಂ ಜಾಗರಾದ್ಯವಸ್ಥಾನಾಂ ಉಪರಮಃ ಸ ಏವ ಯೋಗಃ ಫಲಂ । -ವಿಶ್ವನಾಥಃ
ಕರ್ಮಣಾಂ ಯದ್‌ಬೀಜಂ ಮೂಲಂ ದೇಹಾತ್ಮಭ್ರಮಾದಿರೂಪಂ ತಸ್ಯ ನಿರ್ಹರಣಂ ನಿರ್ಹರಣೋಪಾಯಾತ್ಮಕೋ ಯೋ ಯೋಗೋ ವಕ್ಷ್ಯಮಾಣಃ ಸ ಚ ಧಿಯಃ ಪ್ರವಾಹಃ ಶಬ್ದಾದಿ ವಿಷಯಕಂ ಜ್ಞಾನಂ ತಸ್ಯೋಪರತಿರೂಪೋ ಭವದ್ಭಿಃ ಕರ್ತವ್ಯಃ ।-ವೀರರಾಘವಃ
ಬೀಜನಿರ್ಹರಣಂ ಪೂರ್ವೋಕ್ತಸ್ಯ ಸಂಸಾರಮೂಲಸ್ಯ ಅಜ್ಞಾನಸ್ಯ ನಿರ್ಹರಣಂ ದಹನಂ ತದ್ದಹನಾರ್ಥಂ ತತ್ತ್ವಜ್ಞಾನಸಂಪಾದನಂ ಕರ್ತವ್ಯಂ। ಧಿಯೋ ಬುದ್ಧೇಃ ಕಾರಣ ಭೂತಾಯಾ ಯಾನಿ ಕರ್ಮಾಣಿ ತೇಷಾಂ ಫಲಭೂತಸ್ಯ ಪ್ರವಾಹಸ್ಯ ಜನ್ಮ ಮರಣ ಪ್ರವಾಹಭೂತಸ್ಯ ಸಂಸಾರಸ್ಯೋಪರಮೋ ಯಸ್ಮಾತ್ ಸ ಯೋಗಃ ಸಂಸಾರ ತರಣೋಪಾಯಶ್ಚ ಕರ್ತವ್ಯ ಇತ್ಯನ್ವಯಃ । -ಶುಕದೇವಃ

'ಬುದ್ಧಿ ಪ್ರವಾಹವು ಶಬ್ದಾದಿ ವಿಷಯಗಳ ಕಡೆಗೆ ಹರಿಯದಂತೆ ಮಾಡುವುದು ದೇಹಾತ್ಮಭ್ರಮನಿವೃತ್ತಿಗೆ ಸಾಧನ'ವೆಂದು ವೀರರಾಘವ ವ್ಯಾಖ್ಯಾನ ಹೇಳುತ್ತದೆ. ಇಲ್ಲಿ 'ಶಬ್ದಾದಿ ವಿಷಯಗಳ ಕಡೆಗೆ' ಎನ್ನುವುದು ಶ್ಲೋಕದಲ್ಲಿ ಇಲ್ಲ.

'ಪ್ರವಾಹವೆಂದರೆ ಜನನ ಮರಣ ಪ್ರವಾಹ'. ಅದು ಬುದ್ಧಿಜನ್ಯವಾದ ಕರ್ಮಪ್ರಯುಕ್ತವಾಗಿದೆ. ಅದರ ನಿವೃತ್ತಿಗೆ ಅಂದರೆ ಸಂಸಾರ ನಿವೃತ್ತಿಗೆ ಉಪಾಯ ಮಾಡಬೇಕು. ಸಂಸಾರಕ್ಕೆ ಮೂಲಕಾರಣವಾದ ಅಜ್ಞಾನನಿವೃತ್ತಿಗೆ ತತ್ವಜ್ಞಾನವನ್ನೂ ಸಂಪಾದಿಸಬೇಕು' ಎಂದು ಶುಕದೇವ ವ್ಯಾಖ್ಯಾನ ಹೇಳುತ್ತದೆ. ತತ್ವಜ್ಞಾನವೇ ಸಂಸಾರನಿವೃತ್ತ್ಯುಪಾಯವಾಗಿರುವುದರಿಂದ ಅದೊಂದನ್ನು ಸಂಪಾದಿಸಿದರೆ ಇನ್ನು ಬೇರೆ ಉಪಾಯವೇನಿದೆ? ಏನಿದ್ದರೂ ಅದು ತತ್ವಜ್ಞಾನ ಸಂಪಾದನೆಗೇ ಉಪಾಯವಾಗಿರುತ್ತದೆ. ಅದರಿಂದ ಈ ವ್ಯಾಖ್ಯಾನವೂ ಸಮರ್ಪಕವಾಗಿಲ್ಲ.

ಹೀಗೆ 'ಪ್ರವಾಹೋಪರಮ' ಶಬ್ದಕ್ಕೆ ಬೇರೆ ವ್ಯಾಖ್ಯಾನಕಾರರಲ್ಲಿ ಸರಿಯಾದ ವಿವರಣೆ ಇಲ್ಲ. ಸರಿಯಾದ ವಿವರಣೆ ಇದು-

---

ಧಿಯಃ ಪ್ರವಾಹಸ್ಯೋಪರಮಃ ಪರಮೇಶ್ವರೇ ರಮಣಂ I

ಬುದ್ಧಿಯ ಪ್ರವಾಹಕ್ಕೆ 'ಉಪರಮ' ಎಂದರೆ ನಿವೃತ್ತಿಯಲ್ಲ. 'ಉಪ' ಪರಮಾತ್ಮನಲ್ಲಿ 'ರಮ' ಆಸಕ್ತವಾಗುವುದು.

'ಉಪ' ಎಂದರೆ ಸಮೀಪಕ್ಕೆ ಪರಮಾತ್ಮನ ಬಳಿಗೆ, ಬುದ್ಧಿಪ್ರವಾಹ ಹರಿಯ ಬೇಕು.

ಅಥವಾ 'ಉಪೋऽಧಿಕೇ ಚ' ಎಂಬ ವ್ಯಾಕರಣ ಸೂತ್ರದಂತೆ ಉಪ ಎಂದರೆ ಉತ್ತಮ, ಸರ್ವೋತ್ತಮನಾದ ಶ್ರೀಹರಿ.

ಅಥವಾ 'ಉಕಾರಃ ಕ್ಷೇತ್ರಪೇ ಶಂಭೌ ಹರಮೌಲೌ ಶುಚೌ ಹರೌ' ಎಂಬ ಏಕಾಕ್ಷರರತ್ನಮಾಲಾ ಕೋಶಾನುಸಾರವಾಗಿ 'ಉ' ಎಂದರೆ ಶ್ರೀಹರಿ. ಅವನು 'ಪ' ಸರ್ವರಕ್ಷಕ.

ಅಥವಾ ಉ ಎಂದರೆ ಶಂಭು. ಅವನಿಗೆ 'ಪ' ರಕ್ಷಕನಾದ್ದರಿಂದ 'ಉಪ' ಎಂದರೆ ಶ್ರೀಹರಿ. ಮನೋಭಿಮಾನಿ ಶಂಭು. ಅವನ ಅನುಗ್ರಹವಾದರೆ, ಮನೋವೃತ್ತಿಗಳ ಪ್ರವಾಹ ಅವನ ರಕ್ಷಕನಾದ ಹರಿಯಲ್ಲಿ ತೈಲಧಾರೆಯಂತೆ ಹರಿಯಬಲ್ಲುದು. ತ್ರಿಗುಣಜನ್ಯವಾದ ಕರ್ಮಗಳ ಮೂಲಕಾರಣವಾದ ಅಜ್ಞಾನವನ್ನು ಪರಿಹರಿಸಬಲ್ಲುದು.

❖❖❖

ಭಕ್ತನ ಮನಸ್ಸು ಶರೀರಗಳು ಯಾವಾಗಲೂ ಭಕ್ತಿಗೆ ಅನುಗುಣವಾಗಿಯೇ ಕೆಲಸ ಮಾಡುತ್ತವೆ ಎಂದು ಪ್ರಹ್ಲಾದ ದೈತ್ಯಬಾಲಕರಿಗೆ ಉಪದೇಶಿಸುತ್ತಾನೆ.

ನಿಶಮ್ಯ ಕರ್ಮಾಣಿ ಗುಣಾನತುಲ್ಯಾನ್
ವೀರ್ಯಾಣಿ ಲೀಲಾತನುಭಿಃ ಕೃತಾನಿ ।
ಯದಾಽತಿಹರ್ಷೋತ್ಪುಲಕಾಶ್ರುಗದ್ಗದಃ
ಪ್ರೋತ್ಕಂಠ ಉದ್ಗಾಯತಿ ರೌತಿ ನೃತ್ಯತಿ ॥ ೩೫ ॥

ಯದಾ ಗ್ರಹಗ್ರಸ್ತ ಇವ ಕ್ವಚಿದ್ಧಸ-
ತ್ಯಾಕ್ರಂದತೇ ಧ್ಯಾಯತಿ ವಂದತೇ ಜನಾನ್ ।
ಮುಹುಃಶ್ವಸನ್ ವಕ್ತಿ ಹರೇ ಜಗತ್ಪತೇ
ನಾರಾಯಣೇತ್ಯಾತ್ಮಮತಿರ್ಗತತ್ರಪಃ ॥ ೩೬ ॥

ತದಾ ಪುಮಾನ್ ಮುಕ್ತಸಮಸ್ತಬಂಧನ
ಸ್ತದ್ಭಾವಭಾವಾನುಕೃತಾಶಯಾಕೃತಿಃ ।
ನಿರ್ದಗ್ಧಬೀಜಾನುಶಯೋ ಮಹೀಯಸಾ
ಭಕ್ತಿಪ್ರಯೋಗೇಣ ಸಮೇತ್ಯಧೋಕ್ಷಜಮ್ ॥ ೩೭ ॥

ಹರಿಯ ಜಗತ್ಸೃಷ್ಟ್ಯಾದಿ ಕಾರ್ಯಗಳನ್ನೂ ಅನುಪಮವಾದ ಜ್ಞಾನಾನಂದಾದಿ ಗುಣಗಳನ್ನೂ ಅವತಾರರೂಪಗಳಿಂದ ಅವನು ಮಾಡುವ ಲೀಲೆಗಳನ್ನೂ ಕೇಳಿದಾಗಲೆಲ್ಲ ಭಕ್ತನಿಗೆ ಬಹಳ ಆನಂದವಾಗುತ್ತದೆ. ಮೈ ನವಿರೇಳುತ್ತದೆ. ಕಣ್ಣುಗಳಿಂದ ನೀರು ಹರಿಯುತ್ತದೆ. ಕಂಠ ಗದ್ಗದವಾಗುತ್ತದೆ. ಉಚ್ಚಧ್ವನಿಯಿಂದ ಆತ ಹಾಡುತ್ತಾನೆ, ಅಳುತ್ತಾನೆ, ಕುಣಿಯುತ್ತಾನೆ.

ದೆವ್ವ ಹಿಡಿದವನಂತೆ ಒಮ್ಮೊಮ್ಮೆ ನಗುತ್ತಾನೆ. ಜೋರಾಗಿ ಕೂಗುತ್ತಾನೆ. ಧ್ಯಾನ ಮಾಡುತ್ತಾನೆ. ಭಕ್ತಜನರಿಗೆ ವಂದನೆ ಮಾಡುತ್ತಾನೆ. ಪುನಃಪುನಃ ನಿಟ್ಟುಸಿರು ಬಿಡುತ್ತ ಭಗವಂತನ ಯೋಚನೆಯಲ್ಲಿ ತಲ್ಲೀನನಾಗಿ ಲಜ್ಜೆಬಿಟ್ಟು ಹರಿ! ಜಗತ್ಪತಿ! ನಾರಾಯಣ! ಎನ್ನುತ್ತಾನೆ.

ಭಕ್ತನ ಮನಸ್ಸು ಶರೀರಗಳು ಹೀಗೆ ಹರಿಯ ಯಥಾರ್ಥ ಸ್ವರೂಪದ ಭಕ್ತಿಗೆ ಅನುಗುಣವಾಗಿಯೇ ಕೆಲಸ ಮಾಡುತ್ತವೆ. ಪ್ರಬಲವಾದ ಭಕ್ತಿಪ್ರವಾಹವನ್ನು ಹರಿಯ ಕಡೆಗೆ ಹರಿಸುವುದರಿಂದ ಅವನ

ಸಂಸಾರಬೀಜವಾದ ಕರ್ಮಗಳೂ ಜಡ ಅಂತಃಕರಣವೂ ಸುಟ್ಟು ಹೋಗುತ್ತವೆ. ಸಮಸ್ತ ಬಂಧನಗಳಿಂದ ಬಿಡುಗಡೆಯಾಗುತ್ತದೆ. ಅವನು ಅಧೋಕ್ಷಜನನ್ನು ಹೊಂದುತ್ತಾನೆ.

[೧]ಇಲ್ಲಿ 'ತದ್‌ಭಾವಭಾವಾನುಕೃತಾಶಯಾಕೃತಿಃ' ಎಂಬ ಶಬ್ದಕ್ಕೆ 'ಭಗವಂತನ ಲೀಲೆಗಳ ಧ್ಯಾನಕ್ಕೆ ಅನುರೂಪವಾಗಿ ಭಕ್ತನ ಮನಸ್ಸು ಶರೀರಗಳು ಇರುತ್ತವೆ ಎಂದು ಶ್ರೀಧರವ್ಯಾಖ್ಯಾನ ಹೇಳುತ್ತದೆ. ಆದರೆ ಭಕ್ತ ಧ್ಯಾನಕ್ಕೆ ಅನುಗುಣವಾಗಿ ಸ್ಥಿರವಾದ ಆಸನದಲ್ಲಿ ಕುಳಿತಿರಬೇಕು ಹೊರತು ಹಾಡುವುದು, ಅಳುವುದು ಕುಣಿಯುವುದು ಮುಂತಾದುವು ಧ್ಯಾನಕ್ಕೆ ಅನುರೂಪವಲ್ಲ.

ಭಗವಂತನ ಆಕೃತಿಯ ಧ್ಯಾನದಿಂದ ಅವನಂತೆಯೇ ದಿವ್ಯ ಅಂತಃಕರಣ ಶರೀರಯುಕ್ತನಾಗುತ್ತಾನೆ ಭಕ್ತ ಅಂದರೆ ಸಾರೂಪ್ಯ ಮೋಕ್ಷ ಪಡೆಯುತ್ತಾನೆ, ಎಂದು ವೀರರಾಘವ ಶುಕದೇವ ವ್ಯಾಖ್ಯಾನಗಳು ಹೇಳುತ್ತವೆ. ಆದರೆ ದ್ವೇಷಪೂರ್ವಕ ಧ್ಯಾನದಿಂದ ಸಾರೂಪ್ಯ ಸಿಗುವುದಿಲ್ಲ, ಭಕ್ತಿಪೂರ್ವಕ ಧ್ಯಾನದಿಂದ ಎನ್ನಬೇಕು. ಅರ್ಥಾತ್ ಭಕ್ತಿಯಿಂದಲೇ ಸಾರೂಪ್ಯಲಾಭ. 'ಭಾವ' ಎಂದರೆ ಧ್ಯಾನವೆಂದು ಅರ್ಥೈಸಿ ಭಕ್ತಿಪೂರ್ವಕ ಧ್ಯಾನ ಎಂದಿಟ್ಟುಕೊಳ್ಳುವುದಕ್ಕಿಂತ ಭಾವಶಬ್ದಕ್ಕೆ ನೇರವಾಗಿ ಭಕ್ತಿ ಎಂದೇ ಅರ್ಥೈಸುವುದು ಉಚಿತ.

'ಭಾವೋ ಭಕ್ತಿಃ ಸಮುದ್ದಿಷ್ಟಾ ತದ್ವಾನ್ ಭಾವುಕ ಉಚ್ಯತೇ' ಎಂದು ಬೃಹದಾರಣ್ಯಕ ಭಾಷ್ಯದಲ್ಲಿ ಶ್ರೀಮದಾಚಾರ್ಯರು ಭಾವಶಬ್ದಕ್ಕೆ ಭಕ್ತಿ ಎಂಬ ಅರ್ಥದಲ್ಲಿ ರೂಢಿಯನ್ನು ತೋರಿಸಿದ್ದಾರೆ. ಹೀಗಾಗಿ 'ತದ್ಭಾವ ಭಾವ' ಎಂದರೆ ಪರಮಾತ್ಮನ ಯಥಾವತ್ ಸ್ವರೂಪದಲ್ಲಿ ಭಕ್ತಿ ಎಂದೇ ವಿವರಣೆ ನೀಡಬೇಕು.

ನಾರದಾದಿ ಭಕ್ತರು ಕೆಲವರು ಹೆಚ್ಚಾಗಿ ಕುಣಿದು ಹಾಡುತ್ತಾರೆ, ಧ್ರುವಾದಿ

---

೧. ತಸ್ಯ ಭಾವಶ್ಚೇಷ್ಟಾದಿಸ್ತಸ್ಯ ಭಾವೋ ಭಾವನಾ ತೇನಾನುಕೃತೇ ಆಶಯಾಕೃತೀ ಮನಃಶರೀರೇ ಯಸ್ಯ । -ಶ್ರೀಧರಃ

ತಸ್ಯಭಗವತೋ ಭಾವಃ ಪ್ರಕಾರ ಆಕೃತಿರಿತ್ಯರ್ಥಃ। ತಸ್ಯ ಭಾವೋ ಭಾವನಾಽನುಧ್ಯಾನಂ ತೇನಾನುಕೃತಃ ಆಶಯೋಽಂತಃಕರಣಂ ಆಕೃತಿರ್ವಿಗ್ರಹಶ್ಚ ಯಸ್ಯ । ಭಗವತಾ ಸಮಾನರೂಪ ಇತ್ಯರ್ಥಃ । -ವೀರರಾಘವಃ

ಭಾವೋ ಧ್ಯಾನಂ ತೇನ ಅನುಕೃತೋಽನುಯೋಜಿತಃ ಆಶಯೋಽಂತಃಕರಣಂ ತದುಪಲಕ್ಷಿತಾಪ್ರಾಕೃತ ಸಕಲ ಕರಣಕಲಾಪಃ ಆಕೃತಿರಪ್ರಾಕೃತ ವಿಗ್ರಹಶ್ಚ ಯಸ್ಯ ಸಃ । -ಶುಕದೇವಃ

ಭಕ್ತರು ಹೆಚ್ಚಾಗಿ ಕುಳಿತು ಧ್ಯಾನಮಾಡುತ್ತಾರೆ, ಪ್ರಹ್ಲಾದನಂಥವರು ಎರಡನ್ನೂ ಮಾಡುತ್ತಾರೆ, ಹೊರತು ಎಲ್ಲರೂ ಎಲ್ಲವನ್ನೂ ಯಾವಾಗಲೂ ಮಾಡುತ್ತಾರೆ ಎಂದು ನಿಯಮವಿಲ್ಲ. ಈ ಅಂಶವನ್ನು ಬೇರೆ ವ್ಯಾಖ್ಯಾನಕಾರರು ಯಾರೂ ಗಮನಿಸುವುದಿಲ್ಲ.

ತದ್‌ಭಾವಭಾವಃ ತದ್ಯಥಾಸ್ವರೂಪೇ ಭಕ್ತಿಃ ।
ಕೇಚಿದ್ ಭಕ್ತಾ ವಿನೃತ್ಯಂತಿ ಗಾಯಂತಿ ಚ ಯಥೇಪ್ಸಿತಂ ।
ಕೇಚಿತ್ ತೂಷ್ಣೀಂ ಜಪಂತ್ಯೇವ ಕೇಚಿಚ್ಚೋಭಯಕಾರಿಣಃ ।
ಇತಿ ಚ ।

'ತದ್‌ಭಾವಭಾವ' ಎಂದರೆ ಪರಮಾತ್ಮನ ಯಥಾವತ್ ಸ್ವರೂಪದಲ್ಲಿ ಭಕ್ತಿ ಎಂದು ತಿಳಿಯಬೇಕು.

ಕೆಲವು ಭಕ್ತರು ಚೆನ್ನಾಗಿ ಕುಣಿಯುತ್ತಾರೆ, ಇಷ್ಟಬಂದಂತೆ ಹಾಡುತ್ತಾರೆ, ಕೆಲವರು ಸುಮ್ಮನೆ ಕುಳಿತು ಧ್ಯಾನವನ್ನೇ ಮಾಡುತ್ತಾರೆ. ಇನ್ನು ಕೆಲವರು ಎರಡನ್ನೂ ಮಾಡುತ್ತಾರೆ ಎಂದೂ ಹೇಳಿದೆ.

❖ ❖ ❖

ಮೋಕ್ಷದಲ್ಲಿ ವ್ಯಕ್ತವಾಗುವ ಸ್ವರೂಪಸುಖವೇ ಈಗಲೂ ಕೂಡ ಹರಿಕಥಾಶ್ರವಣ ಕಾಲದಲ್ಲಿ ಅನುಭವಕ್ಕೆ ಬರಬಹುದೆಂದು ಪ್ರಹ್ಲಾದ ದೈತ್ಯ ಬಾಲಕರಿಗೆ ಉಪದೇಶಿಸುತ್ತಾನೆ.

ಅಧೋಕ್ಷಜಾಲಾಪಮಿಹಾಶುಭಾತ್ಮನಃ
ಶರೀರಿಣಃ ಸಂಸೃತಿಚಕ್ರಶಾತನಮ್ ।
ತದ್‌ಬ್ರಹ್ಮನಿರ್ವಾಣಸುಖಂ ವಿದುರ್ಬುಧಾ
ಸ್ತತೋ ಭಜಧ್ವಂ ಹೃದಯೇ ಹೃದೀಶ್ವರಮ್ ॥ ೩೮ ॥

ವಿಷಯಭೋಗದಿಂದ ಕಲುಷಿತವಾದ ಮನಸ್ಸು ಮತ್ತು ಅಪವಿತ್ರವಾದ ಶರೀರ ಉಳ್ಳವನು ಹರಿಕಥಾಶ್ರವಣ ಮಾಡುತ್ತಿದ್ದರೆ ಅದು ನಿರಂತರ ಉರುಳುವ ಹುಟ್ಟುಸಾವುಗಳ ಚಕ್ರವನ್ನು ನಿಲ್ಲಿಸುತ್ತದೆ. ಮೋಕ್ಷದಲ್ಲಿ ಭಗವಂತ ವ್ಯಕ್ತಮಾಡಿಕೊಡುವ ಸ್ವರೂಪಾನಂದವನ್ನು ಈಗಲೂ ಕೂಡ ಹರಿಕಥಾಶ್ರವಣ ಕಾಲದಲ್ಲಿ ಅವನು ಅನುಭವಿಸಬಲ್ಲನೆಂದು ಬಲ್ಲವರು

ಹೇಳುತ್ತಾರೆ. ಅದರಿಂದ ದೈತ್ಯಬಾಲಕರೆ, ನೀವು ಸ್ಥೂಲಶರೀರದ ಹೃದಯದಲ್ಲಿ ನೆಲೆಸಿರುವ ಪ್ರಾಜ್ಞನಾಮಕ ಪರಮಾತ್ಮನನ್ನು ಶ್ರವಣಾದಿಗಳಿಂದ ಆರಾಧಿಸಿರಿ.

[೧]ಇಲ್ಲಿ 'ಬ್ರಹ್ಮನಿರ್ವಾಣಸುಖಂ' ಎಂದರೆ ಬ್ರಹ್ಮನಲ್ಲಿ ನಿರ್ವಾಣ, ಲಯ, ಅಂದರೆ ಮೋಕ್ಷ, ಮೋಕ್ಷರೂಪವಾದ ಸುಖ. ಇದು ಅಧೋಕ್ಷಜ ಧ್ಯಾನದಿಂದ ಲಭ್ಯವಾಗುವುದು ಎಂದು ಶ್ರೀಧರವ್ಯಾಖ್ಯಾನ. ಏಕೆಂದರೆ 'ಅಧೋಕ್ಷಜಾಲಾಪಂ' ಎಂಬಲ್ಲಿ 'ಅಧೋಕ್ಷಜಾಲಂಭಂ' ಎಂದು ಇವರ ಪಾಠ. ಆದರೆ ಬ್ರಹ್ಮನಲ್ಲಿ ಲಯವೆಂಬುದು ನಿರ್ಗುಣಮೋಕ್ಷ. ಅಧೋಕ್ಷಜನು ಸಗುಣ ಬ್ರಹ್ಮ. ಸಗುಣಧ್ಯಾನದಿಂದ ನಿರ್ಗುಣ ಮೋಕ್ಷಸುಖ ಬರಲಾರದು. ಅದಕ್ಕೆ ಸಗುಣ ಬ್ರಹ್ಮನು ವ್ಯಕ್ತಮಾಡಿಕೊಡುವ ಮೋಕ್ಷಸುಖವೇ ಬ್ರಹ್ಮನಿರ್ವಾಣ ಸುಖ ಎನ್ನಬೇಕು. ಸಗುಣ ಮೋಕ್ಷದಲ್ಲಿ ಸಗುಣ ಬ್ರಹ್ಮ ಸುಖ ನೀಡುತ್ತಾನೆ.

'ನಿರ್ವಾಣ ಎಂದರೆ ಪರಮಾನಂದ. ಬ್ರಹ್ಮರೂಪವಾದ ಅಂಥ ಆನಂದದ ಅನುಭವ ಅಧೋಕ್ಷಜಪ್ರಾಪ್ತಿಯಲ್ಲಿ ಲಭ್ಯ' ಎಂದು ವೀರರಾಘವ ವ್ಯಾಖ್ಯಾನ. ಆದರೆ ಒಬ್ಬನ ಸ್ವರೂಪಾನಂದವನ್ನು ಇನ್ನೊಬ್ಬ ಅನುಭವಿಸುತ್ತಾನೆ ಎಂದರೆ ಆ ಇಬ್ಬರೊಳಗೆ ಭೇದವಿಲ್ಲ ಎಂದಂತಾಗುವುದು. ಮೋಕ್ಷದಲ್ಲಿ ಜೀವ ಜೀವ ಭೇದ, ಜೀವೇಶ್ವರ ಭೇದಗಳಿವೆ ಎಂದು ಒಪ್ಪುವವರು ಹೀಗೆ ಹೇಳಬಾರದು. ಅದರಿಂದ ಬ್ರಹ್ಮನು ನೀಡುವ ನಿರ್ವಾಣಸುಖ ಅಂದರೆ ಮೋಕ್ಷಾನಂದವೆಂದೇ ಇವರೂ ಹೇಳಬೇಕು.

ಬ್ರಹ್ಮನಿರ್ವಾಣಸುಖಂ ಬ್ರಹ್ಮನಿಮಿತ್ತನಿರ್ವಾಣಸುಖಂ ।

ಪರಮಾತ್ಮನು ವ್ಯಕ್ತಮಾಡಿಕೊಡುವ ಮೋಕ್ಷಸುಖವು ಹರಿಕಥಾಲಾಪದಿಂದಲೂ ಲಭ್ಯ. 'ಹರಿಕಥಾಲಾಪವು ಬ್ರಹ್ಮನಿರ್ವಾಣಸುಖ' ಎಂದರೆ ಹೀಗೇ ಅರ್ಥ.

❖ ❖ ❖

೧. ಅಧೋಕ್ಷಜಸ್ಯಾಲಂಭಂ ಮನಸಾ ಸ್ಪರ್ಶಂ । ತದೇವ ಬ್ರಹ್ಮಣಿ ನಿರ್ವಾಣಂ ಲಯೋ ಮೋಕ್ಷಸ್ತದಾತ್ಮಕಂ ಸುಖಂ ವಿದುಃ । -ಶ್ರೀಧರಃ

ಅಧೋಕ್ಷಜಸ್ಯಾಲಂಭಃ ಸ್ಪರ್ಶಃ॥ ಪ್ರಾಪ್ತಿರಿತಿ ಯಾವತ್। ತದೇವ ನಿರ್ವಾಣಂ ನಿರತಿಶಯಾನಂದೋ ಬ್ರಹ್ಮರೂಪಂ ಯನ್ನಿರ್ವಾಣಂ ತಸ್ಯ ಸುಖಮನುಭವರೂಪಂ ಯಸ್ಮಿಂಸ್ತಾದೃಶಂ । -ವೀರರಾಘವಃ

ಎಲ್ಲ ಜೀವರ ಹೃದಯಗಳಲ್ಲಿಯೂ ಸಾಮಾನ್ಯವಾಗಿ ಜೀವರ ಜೊತೆಗೇ ಗೆಳೆಯನಾಗಿ ಪರಮಾತ್ಮನಿರುವಾಗ, ಅವನ ಉಪಾಸನೆಗೆ ಎಲ್ಲಿಯೂ ದೂರದೇಶಕ್ಕೆ ಹೋಗುವ ಪ್ರಸಂಗವಿಲ್ಲದಿರುವಾಗ, ಉಪಾಸನೆಯಲ್ಲಿ ಪ್ರಯಾಸವೇನಿದೆ? ಅದರಿಂದ ಸುಲಭವಾಗಿರುವ ಹರಿಯ ಉಪಾಸನೆಯನ್ನು ನೀವು ಅವಶ್ಯ ಮಾಡಿರಿ ಎಂದು ಪ್ರಹ್ಲಾದ ದೈತ್ಯಬಾಲಕರಿಗೆ ಉಪದೇಶಿಸುತ್ತಾನೆ.

ಕೋಽತಿಪ್ರಯಾಸೋಽಸುರಬಾಲಕಾ ಹರೇ
ರುಪಾಸನೇ ಸ್ವೇ ಹೃದಿ ಛಿದ್ರವತ್ಸತಃ ।
ಅಸ್ಯಾತ್ಮನಃ ಸಖ್ಯುರಶೇಷದೇಹಿನಾಂ
ಸಾಮಾನ್ಯತಃ ಕಿಂ ವಿಷಯೋಪಪಾದನೈಃ ॥ ೩೮ ॥

ಅಸುರಬಾಲಕರೆ, ಶ್ರೀಹರಿಯ ಉಪಾಸನೆಯಲ್ಲಿ ಏನು ಹೆಚ್ಚಿನ ಪ್ರಯಾಸವಿದೆ? ಏಕೆಂದರೆ ಅವನು ಎಲ್ಲ ಶರೀರಿಗಳಲ್ಲಿಯೂ ಸಾಮಾನ್ಯವಾಗಿ ತಮ್ಮತಮ್ಮ ಹೃದಯದಲ್ಲಿಯೇ ಆಕಾಶದಂತೆ ಇದ್ದು ಗೆಳೆಯನಾಗಿದ್ದಾನೆ. ಎಲ್ಲಿಯೂ ದೂರಕ್ಕೆ ಹೋಗಬೇಕಾಗಿಲ್ಲ. ದೂರದೇಶಕ್ಕೆ ಹೋಗುವುದರಿಂದೇನು ಪ್ರಯೋಜನ?

ಇಲ್ಲಿ ಶ್ರೀಹರಿ ಸಾಮಾನ್ಯವಾಗಿ ಎಲ್ಲ ಶರೀರಿಗಳ ಹೃದಯದಲ್ಲಿದ್ದು ಗೆಳೆಯನಾಗಿರುವಾಗ ಅವನ ಉಪಾಸನೆಯಲ್ಲಿ ಏನು ಹೆಚ್ಚಿನ ಪ್ರಯಾಸವಿದೆ?' ಎಂದು 'ಸಾಮಾನ್ಯತಃ' ಎಂಬ ಶಬ್ದವನ್ನು ಅನ್ವಯಿಸಿ ವಿವರಣೆ ನೀಡಬೇಕು. ಆದರೆ [೧]ಶುಕದೇವ ವ್ಯಾಖ್ಯಾನದಲ್ಲಿ ಹೀಗೆ ಹೇಳಿದೆ- 'ಸಾಮಾನ್ಯವಾಗಿ ಎಲ್ಲರ ಹೃದಯದಲ್ಲಿ ಪರಮಾತ್ಮನಿದ್ದರೂ ಭಕ್ತರ ಹೃದಯ ಗುಹೆಯಲ್ಲಿ ಅವರ ಭಕ್ತಿರಸವನ್ನು ಸವಿಯುವ ಆಸೆಯಿಂದ ಕಳ್ಳನಂತೆ ಅವಿತುಕೊಂಡಿರುತ್ತಾನೆ. ಆದ್ದರಿಂದ ಅವನ ಉಪಾಸನೆಯಲ್ಲಿ ಏನು ಪ್ರಯಾಸವಿದೆ?' ಎಂದು. ಇವರ ಪ್ರಕಾರ 'ಸಾಮಾನ್ಯತಃ' ಎಂಬುದನ್ನು 'ಅಶೇಷದೇಹಿನಾಂ ಸಾಮಾನ್ಯತಃ ಹೃದಿಸ್ಥತ್ವೇಽಪಿ' ಎಂದು ಅನ್ವಯಿಸಬೇಕಾಗುತ್ತದೆ. 'ಹೃದಿಸ್ಥತ್ವೇನ' ಎಂದಲ್ಲ.

---

೧. ಅಶೇಷದೇಹಿನಾಂ ಹೃದಿ ಸಾಮಾನ್ಯತಃ ಸತೋ ವಿದ್ಯಮಾನಸ್ಯಾಪಿ ಸ್ವೇ ಹೃದಿ ತು ಸ್ವಕೀಯೇ ಭಕ್ತಹೃತ್ಸರೋಜೇ ತು ಛಿದ್ರವತ್ ಛಿದ್ರೇ ಇವ ಸತಃ ಚೋರೋ ಯಥಾ ಮಹತಾ ಯತ್ನೇನ ಛಿದ್ರೇ ಧನಲೋಭೇನ ಧನಿಕಗೃಹಛಿದ್ರೇ ಪ್ರವಿಷ್ಟೋ ಭವತಿ ತದ್ವದ್ ಭಕ್ತಿರಸಲೋಭೇನ ಸ್ವಭಕ್ತ ಹೃದಿ ಪ್ರವಿಷ್ಟಸ್ಯ ಹರೇಃ ಉಪಾಸನೇ ಕೋಽತಿಪ್ರಯಾಸಃ ।
-ಶುಕದೇವಃ

ವಸ್ತುತಃ 'ಪರಮಾತ್ಮ ಕೆಲವರ ಹೃದಯದಲ್ಲಿ ಮಾತ್ರ ಉಪಾಸನೆಯನ್ನು ಸ್ವೀಕರಿಸುವುದಕ್ಕಾಗಿ ನೆಲೆಸುತ್ತಾನೆ. ಸಾಮಾನ್ಯವಾಗಿ ಎಲ್ಲರ ಹೃದಯದಲ್ಲಿ ಸುಮ್ಮನೆ ಇರುತ್ತಾನೆ' ಎಂದರೆ, ಉಪಾಸನೆಯಲ್ಲಿ ಪ್ರಯಾಸವಿದೆ ಎಂದೇ ಹೇಳಿದಂತಾಗುವುದು. 'ಏನು ಪ್ರಯಾಸವಿದೆ?' ಎಂದು ಹೇಳುವುದು ಅಸಂಗತವಾಗುವುದು. 'ಭಕ್ತರಿಗೆ ಏನು ಪ್ರಯಾಸವಿದೆ?' ಎಂದು ಭಕ್ತರನ್ನು ಕೇಳಬಹುದು. ಅಸುರ ಬಾಲಕರನ್ನಲ್ಲ. ಭಕ್ತರು 'ಪ್ರಯಾಸವಿದೆ' ಎನ್ನುವುದಿಲ್ಲ.

ಅಶೇಷದೇಹಿನಾಂ ಸಾಮಾನ್ಯತೋ ಹೃದಿಸ್ಥತ್ವೇನ ।

'ಎಲ್ಲ ಶರೀರಿಗಳಲ್ಲಿಯೂ ಶ್ರೀಹರಿ ಸಾಮಾನ್ಯವಾಗಿ ಹೃದಯದಲ್ಲಿದ್ದು ಗೆಳೆಯನಾಗಿರುವುದರಿಂದ ಅವನ ಉಪಾಸನೆಯಲ್ಲಿ ಹೆಚ್ಚಿನ ಪ್ರಯಾಸವಿಲ್ಲ' ಎಂದು ಶ್ಲೋಕದ ಅಭಿಪ್ರಾಯ.

❖ ❖ ❖

ಧರ್ಮ ಅರ್ಥ ಕಾಮಗಳು ಪರಮಾತ್ಮನಿಗೆ ಅರ್ಪಿತವಾದಾಗಲೇ ಸಫಲವಾಗುತ್ತವೆ. ಅದರಿಂದ ಏನೂ ಪ್ರಯಾಸವಿಲ್ಲದೆ ಸ್ವಾಭಾವಿಕವಾಗಿಯೇ ಎಲ್ಲವನ್ನೂ ಮಾಡುವ ಪರಮಾತ್ಮನನ್ನೇ ನಾವೂ ಪ್ರಯಾಸವಿಲ್ಲದೆ ಸ್ವಾಭಾವಿಕವಾಗಿ ಭಜಿಸೋಣ ಎಂದು ಪ್ರಹ್ಲಾದ ದೈತ್ಯಬಾಲಕರಿಗೆ ಉಪದೇಶಿಸುತ್ತಾನೆ.

ತಸ್ಮಾದರ್ಥಾಶ್ಚ ಕಾಮಾಶ್ಚ ಧರ್ಮಾಶ್ಚ ಯದಪಾಶ್ರಯಾತ್ ।
ಭಜತಾನೀಹಯಾಽಽತ್ಮಾನಮನೀಹಂ ಹರಿಮೀಶ್ವರಮ್ ॥ ೪೯ ॥

ಪರಮಾತ್ಮನ ಅನುಗ್ರಹವಿಲ್ಲದೆ ಸಂಸಾರಕ್ಕೆ ಕೊನೆ ಇಲ್ಲದ್ದರಿಂದ ಧರ್ಮ ಅರ್ಥ ಕಾಮಗಳು ಯಾರಿಂದಲೇ ಸಫಲವಾಗುವುವೋ ಅಂಥ ಪರಮಾತ್ಮನನ್ನೇ ಭಜಿಸಿರಿ. ಪ್ರಯಾಸವಿಲ್ಲದೆ ಎಲ್ಲವನ್ನೂ ಮಾಡುವ ಆತನನ್ನು ನಾವೂ ಪ್ರಯಾಸವಿಲ್ಲದೆ ಸ್ವಾಭಾವಿಕವಾಗಿ ಭಜಿಸಬೇಕು.

ಇಲ್ಲಿ 'ಅನೀಹಯಾ ಅನೀಹಂ ಭಜತ' ಎಂದರೆ,

'ಅಹಂ ತ್ವಕಾಮಸ್ತ್ವದ್ಭಕ್ತಸ್ತ್ವಂ ಚ ಸ್ವಾಮ್ಯನಪಾಶ್ರಯಃ'

ನಾನು ನಿನ್ನಲ್ಲಿ ಏನನ್ನೂ ಬೇಡದ ಭಕ್ತ. ನೀನು ಭಕ್ತರಿಂದ ಏನೂ ಬಯಸದಿರುವ ಭಗವಂತ' (೭.೧೦.೭) ಎಂದು ಪ್ರಹ್ಲಾದ ನರಸಿಂಹನಲ್ಲಿ ಹೇಳಿಕೊಂಡಿರುವುದನ್ನು ತೋರಿಸಿ ಏನೂ ಅಪೇಕ್ಷಿಸದ ಭಕ್ತ ಏನೂ ಅಪೇಕ್ಷಿಸದ

ಭಗವಂತನನ್ನು ಭಜಿಸಬೇಕು ಎಂದು ಬೇರೆ ವ್ಯಾಖ್ಯಾನಕಾರರು ವಿವರಣೆ ನೀಡುತ್ತಾರೆ. ಆದರೆ ಪ್ರಹ್ಲಾದನಂಥ ಧೀರ ಏಕಾಂತಭಕ್ತರು ಬಹಳ ಕಡಿಮೆ. ದೈತ್ಯಬಾಲಕರಲ್ಲಿ ಅಂಥ ಭಕ್ತಿಯನ್ನು ನಿರೀಕ್ಷಿಸಲಾಗದು. ಆದರಿಂದ ಅಂಥ ಉಪದೇಶವನ್ನು ಪ್ರಹ್ಲಾದ ನೀಡಲಾರ. ಮತ್ತು ನಿಷ್ಕಾಮಭಕ್ತಿಯನ್ನೇ ಮಾಡಬೇಕೆಂದು ನಿಯಮವಿಲ್ಲ. ಧರ್ಮ ಅರ್ಥ ಕಾಮಗಳನ್ನು ಬಯಸಿ ಅರ್ಥಾರ್ಥಿಯಾಗಿ ಭಕ್ತಿಮಾಡಿ ಭಗವಂತ ನೀಡುವ ಆ ಪದಾರ್ಥಗಳನ್ನು ಅವನಿಗೇ ಕೆರೆಯ ನೀರನ್ನು ಕೆರೆಗೆ ಚೆಲ್ಲುವಂತೆ ಅರ್ಪಿಸುವುದೂ ಭಾಗವತಕ್ಕೆ ಸಮ್ಮತವೆ-

> ಅಕಾಮಃ ಸರ್ವಕಾಮೋ ವಾ ಮೋಕ್ಷಕಾಮ ಉದಾರಧೀಃ
> ತೀವ್ರೇಣ ಭಕ್ತಿಯೋಗೇನ ಯಜೇತ ಪುರುಷಂ ಪರಂ
>
> (ಭಾಗ. ೨.೩.೧೦)
>
> ಅಕಾಮೋ ಧರ್ಮಕಾಮೋ ವಾ ಮೋಕ್ಷಕಾಮೋಽಪಿ ಯೋ ಭವೇತ್
> ಅಥವಾ ಸರ್ವಕಾಮೋ ಯಃ ಸ ವಿಷ್ಣುಂ ಪುರುಷಂ ಯಜೇತ್।

ಎಂದು ತಾತ್ಪರ್ಯೋದಾಹೃತ ಸ್ಕಾಂದಪುರಾಣ ವಚನವೂ ಹೀಗೇ ಹೇಳುತ್ತದೆ.

ಆದರಿಂದ 'ಅನೀಹಯಾ ಅನೀಹಂ ಭಜತ' ಎಂಬ ಭಾಗವತ ವಾಕ್ಯಕ್ಕೆ 'ಫಲಕಾಮನೆ ಇರಲಿ, ಇಲ್ಲದಿರಲಿ, ಪ್ರಯಾಸವಿಲ್ಲದೆ ಸ್ವಾಭಾವಿಕವಾಗಿ ಭಕ್ತಿಯಿಂದ ಭಗವಂತನನ್ನು ಆರಾಧಿಸಬೇಕು' ಎಂದೇ ಅರ್ಥ ಹೇಳಬೇಕು. ಇಲ್ಲದಿದ್ದರೆ ಧ್ರುವಲೋಕವನ್ನು ಬಯಸಿ ಧ್ರುವನು ಮಾಡಿದ ಉಪಾಸನೆಗೂ ಪ್ರಹ್ಲಾದನ ಈ ಉಪದೇಶಕ್ಕೂ ವಿರೋಧ ಉಂಟಾದೀತು.

ಅಪ್ರಯತ್ನೇನ ಕರಣಮನೀಹಾ ಪ್ರೋಚ್ಯತೇ ಬುಧೈಃ । ಇತಿ ಚ ।

ಪ್ರಯಾಸವಿಲ್ಲದೆ ಕ್ರಿಯೆಯನ್ನು ಮಾಡುವುದು ಅನೀಹಾ ಎನಿಸುತ್ತದೆ ಎಂದು ಕೋಶವು ಹೇಳುತ್ತದೆ.

'ಈಹಾ' ಎಂದರೆ ಕಾಮನೆ, ಕ್ರಿಯೆ ಎಂದು ಎರಡೂ ಅರ್ಥಗಳು ಪ್ರಸಿದ್ಧ. ಆದರೆ ಇಲ್ಲಿ ಅನೀಹಾ ಎಂದರೆ ಕಾಮನೆ ಇಲ್ಲದಿರುವುದು ಎಂದು ವಿವಕ್ಷಿತವಲ್ಲ. ಕ್ರಿಯೆ ಇಲ್ಲದಿರುವುದು, ಅಂದರೆ ಶ್ರಮಸಾಧ್ಯವಾದ ಕ್ರಿಯೆ ಇಲ್ಲದಿರುವುದು ವಿವಕ್ಷಿತ. ಭಗವಂತ ಸರ್ವಶಕ್ತನಾದ್ದರಿಂದ ಶ್ರಮಸಾಧ್ಯವಾದ ಕ್ರಿಯೆ ಅವನಲ್ಲಿಲ್ಲ. ಭಕ್ತ ಸ್ವಾಭಾವಿಕವಾಗಿ ಭಗವಂತನೆಡೆಗೆ ಆಕರ್ಷಿತನಾಗುವುದರಿಂದ ಅವನಲ್ಲಿಯೂ ಭಜನಕ್ರಿಯೆ ಶ್ರಮಸಾಧ್ಯವಲ್ಲ. ಶ್ರಮಸಾಧ್ಯವಾದ ಕ್ರಿಯೆ ಅವನಲ್ಲಿಲ್ಲ.

❖❖❖❖

ಸೂಕ್ಷ್ಮವಾದ ಮೂಲ ಪ್ರಕೃತಿಯಿಂದ ಈ ಸ್ಥೂಲ ಪ್ರಪಂಚವನ್ನು ಭಗವಂತ ಸೃಷ್ಟಿಮಾಡುತ್ತಾನೆ ಎಂದು ಪ್ರಹ್ಲಾದ ದೈತ್ಯಬಾಲಕರಿಗೆ ಉಪದೇಶಿಸುತ್ತಾನೆ.

ಸರ್ವೇಷಾಮಪಿ ಭೂತಾನಾಂ ಹರಿರಾತ್ಮೇಶ್ವರಃ ಪ್ರಿಯಃ ।
ಭೂತೈರ್ಮಹದ್ಭಿಃ ಸ್ವಕೃತೈರ್ಭೂತಾನಾಂ ಬೀಜಸಂಜ್ಞಿತಃ ॥ ೫೦ ॥

ಶ್ರೀಹರಿ ತಾನು ಸೃಷ್ಟಿಮಾಡಿದ ಪಂಚಭೂತಗಳಿಂದ ನಾನಾ ಯೋನಿಗಳಲ್ಲಿ ಜೀವರನ್ನು ಹುಟ್ಟಿಸುತ್ತಾನೆ. ಎಲ್ಲ ಜೀವಿಗಳಿಗೂ ಅವನು ಅಂತರ್ಯಾಮಿ, ಸ್ವಾಮಿ, ಪ್ರಿಯಕಾರಿ. ಸೂಕ್ಷ್ಮವಾದ ಮೂಲಪ್ರಕೃತಿಯಿಂದ ಈ ಪ್ರಪಂಚವನ್ನು ಸ್ಥೂಲವಾಗಿ ಬೆಳೆಸಿ ವ್ಯಕ್ತವಾಗುವಂತೆ ಮಾಡುವುದರಿಂದ ಅವನಿಗೆ ಬೀಜ ಎಂದು ಹೆಸರು.

ಇಲ್ಲಿ 'ಬೀಜಸಂಜ್ಞಿತಃ' ಎಂದರೆ ಪ್ರಪಂಚದ ಉತ್ಪತ್ತಿಗೆ ಬೀಜರೂಪ ಪರಮಾತ್ಮನೆಂದು ಹೇಳುವ ವಿವಕ್ಷೆ ಇಲ್ಲ. ಪರಮಾತ್ಮನು ವೃಕ್ಷಕ್ಕೆ ಬೀಜದಂತೆ ಪರಿಣಾಮಿಕಾರಣನಲ್ಲ. ಗಡಿಗೆಗೆ ಕುಂಬಾರನಂತೆ ಕರ್ತನಾಗಿದ್ದಾನೆ.

'ಜೀವಸಂಜ್ಞಿತಃ' ಎಂದು ಅಪಪಾಠವಿಟ್ಟುಕೊಂಡು ಶ್ರೀಧರ ಮುಂತಾದ ಬೇರೆ ವ್ಯಾಖ್ಯಾನಕಾರರು 'ಅಂತರ್ಯಾಮಿ' ಎಂದು ಅರ್ಥ ಮಾಡಿದ್ದಾರೆ. ಆದರೆ ಜೀವಶಬ್ದಕ್ಕೆ ಆ ಅರ್ಥ ಹೇಗೆ ಸಿಗುತ್ತದೆ ಎಂಬುದನ್ನು ಹೇಳಿಲ್ಲ. ಮತ್ತು 'ಆತ್ಮಾ' ಎಂದೂ ಶ್ಲೋಕದಲ್ಲಿ ಹೇಳಿದೆ. ಆತ್ಮ ಎಂದರೆ ಅಂತರ್ಯಾಮಿ. ಅದರಿಂದ ಪುನರುಕ್ತಿ.

'ಬೀಜಸಂಜ್ಞಿತಃ' ಎಂದೇ ಪಾಠವಿಟ್ಟುಕೊಂಡು ವೀರರಾಘವ ಭಗವತ್ಪ್ರಸಾದ ವ್ಯಾಖ್ಯಾನಗಳಲ್ಲಿ ಮೂಲಕಾರಣ ಎಂದು ಅರ್ಥಮಾಡಿದ್ದಾರೆ. ವೃಕ್ಷಕ್ಕೆ ಬೀಜದಂತೆ ಪ್ರಪಂಚಕ್ಕೆ ಮೂಲಕಾರಣ, ಅಂದರೆ ಪರಿಣಾಮಿ ಕಾರಣ ಎಂದು ಅವರ ಅಭಿಪ್ರಾಯ. ಆದರೆ ಭಾಗವತ ಭಗವಂತನನ್ನು 'ಬೀಜ' ಎಂದಿಷ್ಟೇ ಹೇಳದೆ 'ಬೀಜ ಸಂಜ್ಞಿತಃ' 'ಬೀಜವೆಂದು ಸಂಜ್ಞೆ ಹೆಸರು ಮಾತ್ರ, ವಸ್ತುತಃ ಬೀಜ ಅಲ್ಲ' ಎಂದು ಹೇಳಿಬಿಟ್ಟಿದೆ. ಅದರಿಂದ ಬೀಜದಂತೆ ಪರಿಣಾಮಿಕಾರಣನಲ್ಲದಿದ್ದರೂ ಬೀಜ ಎಂದು ಹೆಸರು ಇದೆ ಎಂದು ಹೇಳಿದಂತಾಯಿತು. ಹಾಗಾದರೆ ಬೀಜವೆಂಬ ಹೆಸರು ಹೇಗೆ ಕೂಡುತ್ತದೆ ಎಂದರೆ 'ವ್ಯಂಜಯತೀತಿ ಬೀಜಂ' ಎಂದು ವ್ಯುತ್ಪತ್ತಿ. ಪೃಷೋದರಾದಿಗಣದಲ್ಲಿ ಈ ಶಬ್ದವನ್ನು ಸೇರಿಸಿ ಶಬ್ದಸಾಧುತ್ವವನ್ನು ಹೇಳಬೇಕು. ಇದು ಪ್ರಮಾಣಸಮ್ಮತವಾಗಿದೆ. ಏಕೆಂದರೆ-

ವ್ಯಂಜನಾಜ್ಜಗತೋ ವಿಷ್ಣುರ್ಬೀಜಂ ನ ಪರಿಣಾಮತಃ । ಇತಿ ಚ ॥

ಜಗತ್ತನ್ನು ಸೂಕ್ಷ್ಮಪ್ರಕೃತಿರೂಪದಿಂದ ಸ್ಥೂಲರೂಪಕ್ಕೆ ತಂದು ವ್ಯಕ್ತಮಾಡುವುದರಿಂದ ವಿಷ್ಣು ಬೀಜನೆನಿಸಿದ್ದಾನೆ ಹೊರತು ಬೀಜ ವೃಕ್ಷವಾಗಿ ಪರಿಣಮಿಸುವಂತೆ ತಾನೇ ಈ ಜಗತ್ತಾಗಿ ಪರಿಣಾಮ ಹೊಂದುವುದಿಲ್ಲ ಎಂದೂ ಹೇಳಿದೆ.

ಶುಕದೇವ ವ್ಯಾಖ್ಯಾನದಲ್ಲಿ 'ಜೀವಸಂಜ್ಞಿತಃ' ಎಂದೇ ಪಾಠವಿಟ್ಟುಕೊಂಡು ಅದನ್ನು ಮುಂದಿನ ಶ್ಲೋಕಕ್ಕೆ ಅನ್ವಯಿಸಿ ದೇವನಾಗಲಿ ಅಸುರನಾಗಲಿ ಮನುಷ್ಯ ಯಕ್ಷ ಗಂಧರ್ವರು ಯಾರೇ ಇರಲಿ ಎಲ್ಲ ಜೀವಸಂಜ್ಞಿತರು, ಅಂದರೆ ಜೀವರು ಮುಕುಂದನ ಭಜನೆಯಿಂದ ಸದ್ಗತಿ ಪಡೆಯುತ್ತಾರೆ ಎಂದು ಅರ್ಥ ಹೇಳಿದ್ದಾರೆ. ಆದರೆ ಜೀವಸಂಜ್ಞಿತಃ ಎಂಬ ಶಬ್ದ ಈಗ ವ್ಯರ್ಥವೆನಿಸುತ್ತದೆ. ಅದರಲ್ಲಿಯೂ 'ಜೀವಃ' ಎನ್ನದೆ ಜೀವಸಂಜ್ಞಿತಃ ಎಂದುದಕ್ಕೆ ಸಾರ್ಥ್ಯಕ್ಯವನ್ನು ಹೇಳುವುದು ಕಷ್ಟ. ನಮ್ಮ ಪಾಠದಲ್ಲಿ ಬೀಜದಂತೆ ಪರಿಣಾಮಿಕಾರಣವಲ್ಲದಿದ್ದರೂ ವ್ಯಂಜಕನಾದ್ದರಿಂದ ಬೀಜ ಎಂಬ ಹೆಸರು ಭಗವಂತನಿಗಿದೆ ಎಂದು ವಿವರಣೆ ಸುಲಭ.

❖❖❖

ಮೇಲುನೋಟಕ್ಕೆ ಪಾಪಯೋನಿಯಲ್ಲಿ ಜನಿಸಿದಂತೆ ಕಾಣುವ ಭಕ್ತರೂ ಅನೇಕರು ಅಚ್ಯುತನನ್ನು ಭಜಿಸಿ ಶಾಶ್ವತವಾದ ಮೋಕ್ಷವನ್ನು ಸಂಪಾದಿಸಿರುವುದು ಕಂಡುಬರುತ್ತದೆ ಎಂದು ಪ್ರಹ್ಲಾದ ದೈತ್ಯಬಾಲಕರಿಗೆ ಉಪದೇಶಿಸುತ್ತಾನೆ.

ದೈತೇಯಾ ಯಕ್ಷರಕ್ಷಾಂಸಿ ಸ್ತ್ರಿಯಃ ಶೂದ್ರಾ ವ್ರಜೌಕಸಃ ।
ಖಗಾ ಮೃಗಾಃ ಪಾಪಜೀವಾಃ ಸಂತಿ ಹ್ಯಚ್ಯುತತಾಂ ಗತಾಃ ॥ ೫೫ ॥

ದೈತ್ಯರು ಯಕ್ಷರು ರಾಕ್ಷಸರು ಸ್ತ್ರೀಯರು ಶೂದ್ರರು ಗೋವಳರು ಪಕ್ಷಿಗಳು ಮೃಗಗಳು ಬೇರೆ ಪಾಪಯೋನಿಗಳಲ್ಲಿ ಜನಿಸಿದವರು ಅನೇಕರು ಮೋಕ್ಷವನ್ನು ಪಡೆದುದು ಉಂಟು.

[೧]ಇಲ್ಲಿ 'ಅಚ್ಯುತತಾಂ ಗತಾಃ' ಎಂದರೆ ಅಚ್ಯುತನೊಂದಿಗೆ ಸೇರಿ ಒಂದಾಗಿ ಬಿಡುತ್ತಾರೆ. ತಾದಾತ್ಮ್ಯ ಹೊಂದುತ್ತಾರೆ ಎಂದು ಹೇಳಿದಂತೆ ಕಾಣುತ್ತದೆ. ಶುಕದೇವ ವ್ಯಾಖ್ಯಾನದಲ್ಲಿ ಹಾಗೇ ಹೇಳಿದ್ದಾರೆ.

---

೧. ಭಕ್ತ್ಯೈವ ದೈತೇಯಾದಯಃ ಅಚ್ಯುತತಾಂ ಭಗವದ್ಭಾವಾಪತ್ತಿಲಕ್ಷಣಂ ಮೋಕ್ಷಂ ಗತಾಃ ಸಂತಿ ।
-ಶುಕದೇವಃ

ಆದರೆ ಹೀಗೆ ಹೇಳುವುದು ಪ್ರಮಾಣ ಬಾಧಿತವಾಗುವುದರಿಂದ 'ಅ-ಚ್ಯುತ' ಎಂದರೆ ಚ್ಯುತಿರಹಿತನಾದವನು ಎಂದಿಷ್ಟೇ ಅರ್ಥ ಇಲ್ಲಿ ವಿವಕ್ಷಿತ. ವಿಷ್ಣು ಎಂದಲ್ಲ ಎಂದಿಟ್ಟುಕೊಂಡು ಅಚ್ಯುತತಾ ಎಂದರೆ ಚ್ಯುತಿರಾಹಿತ್ಯ, ಅರ್ಥಾತ್ ಮೋಕ್ಷ ಎಂದು ವಿವರಣೆ ನೀಡಬೇಕು.

ಅಚ್ಯುತತಾಂ ಚ್ಯುತಿವರ್ಜನಂ।

'ಅಚ್ಯುತತಾಂ' ಎಂದರೆ ಚ್ಯುತಿ, ಸಂಸಾರಕ್ಕೆ ಪುನರಾವೃತ್ತಿ ಇಲ್ಲದಂಥ ಸ್ಥಿತಿಯನ್ನು ಮೋಕ್ಷವನ್ನು ಹೊಂದಿದ್ದಾರೆ ಎಂದರ್ಥ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ಸಪ್ತಮಸ್ಕಂಧೇ
ಸಪ್ತಮೋಽಧ್ಯಾಯಃ

❖ ❖ ❖

ಅಧ್ಯಾಯ ೮

ಅಧ್ಯಾಯ ಸಾರಾಂಶ

ಪ್ರಹ್ಲಾದ ಉಪದೇಶಿಸಿದ ವೈಷ್ಣವ ಧರ್ಮವನ್ನು ಕೇಳಿ ಅದನ್ನೇ ದೈತ್ಯಬಾಲಕರು ಸ್ವೀಕರಿಸಿದರು. ಏಕೆಂದರೆ ಅದರಲ್ಲಿ ದೋಷವಿರಲಿಲ್ಲ. ಆ ಬಾಲಕರು ಅಸುರ ಜಾತಿಯವರಾದರೂ ಅವರಲ್ಲೂ ದೋಷವಿರಲಿಲ್ಲ. ಹೀಗಾಗಿ ದೋಷಪೂರ್ಣವಾದ ಶಂಡಾಮರ್ಕರ ಉಪದೇಶವನ್ನು ಅವರು ಸ್ವೀಕರಿಸಲಿಲ್ಲ.

ಬಾಲಕರೆಲ್ಲರೂ ಹೀಗೆ ವಿಷ್ಣುಭಕ್ತರಾದುದನ್ನು ಕಂಡು ಭಯದಿಂದ ಶಂಡ ಬೇಗನೆ ಹಿರಣ್ಯಕಶಿಪುವಿಗೆ ನಿವೇದನ ಮಾಡಿದ. ಒಡನೆ ಅವನ ಮೈ ಕೋಪಾವೇಶದಿಂದ ನಡುಗಿತು. ಮಗನನ್ನು ಕೊಲ್ಲಲು ಆತ ತೀರ್ಮಾನಿಸಿದ. ತುಳಿದ ಹಾವಿನಂತೆ ಬುಸುಗುಟ್ಟಿದ. ವಿನಯದಿಂದ ಕೈಮುಗಿದು ನಿಂತ ಪ್ರಹ್ಲಾದನನ್ನು ವಕ್ರದೃಷ್ಟಿಯಿಂದ ದುರದುರನೆ ನೋಡುತ್ತ 'ನಾನು ಕುಪಿತನಾದೆನೆಂದರೆ ಮೂಲೋಕ ನಡುಗುತ್ತದೆ. ಅಂಥ ನನ್ನಾಜ್ಞೆಯನ್ನು ನೀನು ಯಾರ ಬಲದಿಂದ ಉಲ್ಲಂಘಿಸಿರುವೆ?' ಎಂದು ಗದರಿದ. ಪ್ರಹ್ಲಾದ ನುಡಿದ. 'ನನಗೆ ಮಾತ್ರವಲ್ಲ ನಿನಗೂ ಎಲ್ಲ ಬಲಿಷ್ಠ ಜನರಿಗೂ ಬಲ ನೀಡುವವನು ಹರಿಯೆ. ಅವನು ಸರ್ವಶಕ್ತ. ಸರ್ವೋತ್ತಮ. ಜಗತ್ತಿಗೆ ಸೃಷ್ಟಿ ಸ್ಥಿತಿ ಲಯಗಳನ್ನು ಮಾಡುವವನು. ನಿನ್ನ ಆಸುರೀ ಬುದ್ಧಿಯನ್ನು ಬಿಟ್ಟುಬಿಡು. ಎಲ್ಲರಲ್ಲಿ ಆ ಪರಮಾತ್ಮನನ್ನು ಕಾಣು. ನಿನ್ನ ಹತೋಟಿಯಲ್ಲಿಲ್ಲದೆ ದುರ್ಮಾಗದಲ್ಲಿ ಹರಿಯುವ ನಿನ್ನ ಬುದ್ಧಿಯನ್ನು ಬಿಟ್ಟರೆ ನಿನಗೆ ಬೇರೆ ಯಾರೂ ಶತ್ರುಗಳಿಲ್ಲ. ಕಾಮಕ್ರೋಧಾದಿಗಳನ್ನು ಗೆಲ್ಲದೆ ಹತ್ತುದಿಕ್ಕುಗಳನ್ನು ಗೆದ್ದೆನೆನ್ನುವುದು ಬರಿ ಭ್ರಮೆ.'

ಹಿರಣ್ಯಕಶಿಪು ನುಡಿದ- ಮೂರ್ಖ, ನೀನು ನನ್ನ ಕೈಯಿಂದ ಸಾಯಲು ಬಯಸುತ್ತಿರುವಿ ಎನ್ನುವುದು ಇದೀಗ ಸ್ಪಷ್ಟವಾಯಿತು. ಏಕೆಂದರೆ ನನ್ನ ಮುಂದೆ ನನ್ನ ಶತ್ರುವನ್ನು ಮಿತಿಮೀರಿ ಹೊಗಳುತ್ತಿರುವೆ. ಸಾಯಲು ಹೊರಟಿರುವವರ ಮಾತುಗಳು ಹೀಗೆ ಅಸಂಬದ್ಧವಾಗಿರುತ್ತವೆ. ಹೇಳು, ನನಗಿಂತ ಬೇರೆ ಇನ್ನೊಬ್ಬ

ಆ ಜಗದೀಶ್ವರ ಎಲ್ಲಿ ಇದ್ದಾನೆ? ಎಲ್ಲೆಲ್ಲೂ ಅವನಿರುವುದಾದರೆ ಈ ಕಂಬದಲ್ಲಿ ಏಕೆ ಕಾಣಿಸುವುದಿಲ್ಲ? ನಾನೀಗ ನಿನ್ನ ತಲೆಯನ್ನು ಕತ್ತರಿಸುವೆನು. ನೀನು ರಕ್ಷಕನೆಂದು ನಂಬಿರುವ ಆ ನಿನ್ನ ಹರಿ ಈಗ ನಿನ್ನನ್ನು ರಕ್ಷಿಸಲಿ.'

ಹೀಗೆ ಹೇಳುತ್ತ ಹಿರಣ್ಯಕಶಿಪು ಖಡ್ಗ ಹಿರಿದು ಸಿಂಹಾಸನದಿಂದ ಮೇಲೆ ಹಾರಿ ಮುಷ್ಟಿಯಿಂದ ಕಂಬವನ್ನು ಹೊಡೆದ. ಆಗ ಆ ಕಂಬದೊಳಗಿಂದ ಬ್ರಹ್ಮಾಂಡ ಕಟಾಹವನ್ನು ಭೇದಿಸುವಂಥ ಅತಿ ಭಯಂಕರ ಶಬ್ದ ಉಂಟಾಯಿತು. ಇದೇನು ನಮ್ಮ ಲೋಕಗಳು ನಾಶವಾಗುವ ಕಾಲ ಬಂದಿತೆ? ಎಂದು ಬ್ರಹ್ಮಾದಿ ಲೋಕಪಾಲಕರು ಭಯಭೀತರಾದರು. ಆ ಧ್ವನಿ ಆ ಸಭೆಯೊಳಗೆ ಎಲ್ಲಿಂದ ಯಾರಿಂದ ಬಂದಿತೆಂದು ಹಿರಣ್ಯಕಶಿಪುವಿಗೆ ಕಾಣಲಿಲ್ಲ.

ತಾನು ಎಲ್ಲೆಡೆ ವ್ಯಾಪಿಸಿದ್ದೇನೆ ಎನ್ನುವುದನ್ನೂ ಬ್ರಹ್ಮ ಹಿರಣ್ಯಕಶಿಪುವಿಗೆ ನೀಡಿರುವ ವರವನ್ನೂ ಸತ್ಯಮಾಡುವುದಕ್ಕಾಗಿ ನರಮೃಗ ಸದೃಶವಾದ ಅತ್ಯದ್ಭುತವಾದ ನರಸಿಂಹರೂಪವನ್ನು ಸಭಾಸ್ತಂಭದಲ್ಲಿ ಹರಿ ಆಗ ವ್ಯಕ್ತಮಾಡಿದ್ದ.

ಆ ರೂಪ ಬಲು ಭಯಾನಕವಾಗಿತ್ತು. ಚಿನ್ನದಂತೆ ಹೊಳೆಯುವ ಕಣ್ಣುಗಳು ಹೊಳೆಯುವ ಕೇಸರಗಳು ತೆರೆದ ಬಾಯಿ ಭೀಕರ ಕೋರೆದಾಡೆಗಳು ಬಳುಕುವ ಚೂರಿಯ ಅಲುಗಿನಂಥ ನಾಲಿಗೆ ಹುಬ್ಬು ಗಂಟಿಕ್ಕಿದ ಮುಖ ಮೇಲೆ ನಿಮಿರಿ ನಿಂತಿದ್ದ ಕಿವಿಗಳು. ಗಗನಚುಂಬಿಯಾದ ಉನ್ನತ ಶರೀರ ಅಗಲವಾದ ಎದೆ ಸಣ್ಣ ನಡು ಬಿಳಿಕೂದಲುಗಳು ಎಲ್ಲ ದಿಕ್ಕುಗಳಿಗೆ ಹರಡಿದ ನೂರಾರು ತೋಳುಗಳಲ್ಲಿ ನಖಗಳು ಮತ್ತು ಎಲ್ಲ ಬಗೆಯ ಆಯುಧಗಳು ಯಾರಿಗೂ ಸಮೀಪಿಸಲಾಗದಂಥ ಉಗ್ರ ರೂಪ.

'ನನ್ನ ಸಹಜ ಶತ್ರು ಹರಿ ಈತನೇ ಇರಬೇಕು. ಮಗನನ್ನು ಕೊಲ್ಲಲು ಹೊರಟಿರುವ ನನ್ನನ್ನು ಕೊಲ್ಲಲು ಈತ ಬಂದಿರಬಹುದೆ? ಎಂದು ಹೇಳಿಕೊಳ್ಳುತ್ತ ಹಿರಣ್ಯಕಶಿಪು ಗದೆಯನ್ನು ಹಿಡಿದು ನರಸಿಂಹನ ಮೇಲೇರಿ ಹೋದ. ಆದರೆ ಬೆಂಕಿಯಲ್ಲಿ

ಬೀಳುವ ಪತಂಗದಂತೆ ಆತ ನರಸಿಂಹನ ತೇಜಸ್ಸಿನಲ್ಲಿ ಬಿದ್ದು ಕಣ್ಣಿಗೇ ಕಾಣದಂತಾದ. ಆದರೂ ಅಸುರನಿಗೆ ಕೀರ್ತಿ ಬರಲೆಂದು ಸ್ವಲ್ಪ ಕಾಲ ಸ್ವಾಮಿ ಆತನೊಂದಿಗೆ ಹೋರಾಟದ ಲೀಲೆ ತೋರಿದ. ಗರುಡ ಹಾವನ್ನು ಹಿಡಿಯುವಂತೆ ಹಿಡಿದ. ಹಿಡಿದ ಹಾವನ್ನು ಗರುಡ ಆಟಕ್ಕಾಗಿ ಸ್ವಲ್ಪ ಬಿಟ್ಟಾಗ ಅದು ಜಾರಿ ಕೆಳಗೆ ಬೀಳುವಂತೆ ನರಸಿಂಹನ ಕೈಯಿಂದ ಜಾರಿಬಿದ್ದ ಹಿರಣ್ಯಕಶಿಪು. ಆದರೂ ನರಸಿಂಹನೇ ತನ್ನ ಪರಾಕ್ರಮಕ್ಕೆ ಅಂಜಿದನೆಂದುಕೊಂಡ. ಕತ್ತಿ ಗುರಾಣಿಗಳನ್ನು ಹಿಡಿದು ಗಿಡುಗನಂತೆ ಮೇಲೆ ಕೆಳಗೆ ಎಲ್ಲೆಡೆ ಸಂಚರಿಸಿದ.

ನರಸಿಂಹ ಮಹಾಧ್ವನಿಯ ಭೀಕರ ಅಟ್ಟಹಾಸ ಮಾಡಿ ಆತನನ್ನು ಹಿಡಿದುಕೊಂಡ. ಹಾವು ಇಲಿಯನ್ನು ಹಿಡಿಯುವಂತೆ. ಆತ ಭಯದಿಂದ ಕಣ್ಣು ಮುಚ್ಚಿ ನೋವಿನಿಂದ ಸುತ್ತಲೂ ಕೈಕಾಲು ಬಡಿಯುತ್ತಿದ್ದಂತೆ ಆತನನ್ನು ಹೊಸ್ತಿಲ ಮೇಲೆ ತೊಡೆಯಲ್ಲಿ ಹಾಕಿಕೊಂಡ. ಇಂದ್ರನ ವಜ್ರಾಯುಧದಿಂದಲೂ ಚರ್ಮದ ಮೇಲೆ ಒಂದಿಷ್ಟೂ ಗಾಯ ಹೊಂದದಿದ್ದ ಆತನ ಉದರವನ್ನು ಅನಾಯಾಸವಾಗಿ ಉಗುರುಗಳಿಂದ ಸೀಳಿದ. ಆಗ ಅವನ ಕಣ್ಣುಗಳು ಕೋಪದಿಂದ ಭಯಂಕರವಾಗಿದ್ದು ನೋಡಲು ಅಶಕ್ಯವಾಗಿದ್ದುವು. ತೆರೆದ ಬಾಯಿಯನ್ನು ಎರಡು ಕಡೆಗಳಲ್ಲಿ ನಾಲಿಗೆಯಿಂದ ನೆಕ್ಕುತ್ತಿದ್ದ. ಉದರವನ್ನು ಸೀಳಿ ಕರುಳನ್ನು ತೆಗೆದು ಮಾಲೆಯಾಗಿ ಧರಿಸಿದ. ಹೃದಯವನ್ನು ಕಿತ್ತು ಹಾಕಿ ಅವನನ್ನು ಬಿಸುಟ. ಅವನ ಭಟರು ಆಯುಧಪಾಣಿಗಳಾಗಿ ಬಂದರು, ಹತರಾದರು.

ನರಸಿಂಹನ ಕೇಸರಗಳ ಹೊಡೆತದಿಂದ ಮೋಡಗಳು ಚದುರಿದುವು ಅವನ ಕಣ್ಣುಗಳ ಪ್ರಭೆಯಿಂದ ಗ್ರಹಗಳು ಮಂಕಾದುವು. ಉಸಿರಿನ ಹೊಡೆತದಿಂದ ಸಮುದ್ರಗಳು ಉಲ್ಲೋಲ ಕಲ್ಲೋಲಗಳಾದುವು. ಗರ್ಜನೆಗೆ ದಿಗ್ಗಜಗಳು ಓಡಿದುವು. ಹೆಜ್ಜೆಯ ಭಾರಕ್ಕೆ ನೆಲ ಅದುರಿತು. ವೇಗಕ್ಕೆ ಬೆಟ್ಟಗಳು ಹಾರಿದುವು.

ಬಳಿಕ ನರಸಿಂಹ ರಾಜಸಿಂಹಾಸನದಲ್ಲಿ ಕುಳಿತ. ಬಲುಕುಪಿತನಾದ ಭೀಕರ ಮುಖದ ನರಸಿಂಹನನ್ನು ಸಮೀಪಿಸಲು

ಯಾರೂ ಶಕ್ತರಾಗಲಿಲ್ಲ. ದೇವತೆಗಳು ಪುಷ್ಪವೃಷ್ಟಿ ಮಾಡಿದರು. ದೇವ ದುಂದುಭಿಗಳು ಮೊಳಗಿದವು. ಗಂಧರ್ವರು ಹಾಡಿದರು. ಅಪ್ಸರೆಯರು ಕುಣಿದರು. ಬ್ರಹ್ಮ ಇಂದ್ರ ರುದ್ರಾದಿ ದೇವತೆಗಳು ಋಷಿಗಳು ಪಿತೃಗಳು ಸಿದ್ಧರು ವಿದ್ಯಾಧರರು ಗಂಧರ್ವರು ಮುಂತಾದವರು ತಲೆಯ ಮೇಲೆ ಕೈಜೋಡಿಸಿ ನಿಂತರು. ಒಬ್ಬೊಬ್ಬರಾಗಿ ಸ್ತುತಿಸಿದರು.

ಬ್ರಹ್ಮ- ಅನಂತನಿಗೆ ನಮಸ್ಕಾರ. ನಿನ್ನ ಶಕ್ತಿ ಅಪಾರ. ಪರಾಕ್ರಮ ಅದ್ಭುತ, ಕಾರ್ಯ ಪವಿತ್ರ. ತ್ರಿಗುಣಗಳಿಂದ ವಿಶ್ವದ ಸೃಷ್ಟಿಸ್ಥಿತಿ ಲಯಗಳನ್ನು ಲೀಲೆಯಿಂದ ಮಾಡುವೆ. ನಿನ್ನ ಶರೀರಕ್ಕೆ ಅಳಿವಿಲ್ಲ.

ರುದ್ರ- ನಿನ್ನ ಕೋಪಕ್ಕೆ ತಕ್ಕ ಕಾಲ ಪ್ರಳಯಕಾಲ. ಇದಲ್ಲ. ಅಲ್ಪನಾದ ಅಸುರನನ್ನು ಕೊಂದೂ ಆಯಿತು. ಇನ್ನು ನಿನ್ನಲ್ಲಿ ಶರಣಾಗಿರುವ ಭಕ್ತ ಪ್ರಹ್ಲಾದನನ್ನು ಕಾಪಾಡು.

ಇಂದ್ರ- ನೀನು ನಮಗೆ ನಮ್ಮ ಯಜ್ಞಭಾಗಗಳನ್ನು ತಿರುಗಿ ತಂದುಕೊಟ್ಟಿರುವೆ. ನಿನ್ನ ವಾಸಸ್ಥಾನವಾದ ನಮ್ಮ ಹೃದಯಕಮಲ ದೈತ್ಯನ ಆಕ್ರಮಣದಿಂದ ಮುಚ್ಚಿಹೋಗಿತ್ತು. ಅದನ್ನು ನೀನು ತಿರುಗಿ ಅರಳಿಸಿರುವೆ. ನಿನ್ನ ಭಕ್ತರಿಗೆ ಶಾಶ್ವತವಾದ ಮುಕ್ತಿಯೂ ಮಹಾಫಲವೆಂಬ ಭಾವನೆ ಇಲ್ಲ. ಇನ್ನು ಈ ಯಜ್ಞಭಾಗ ಮುಂತಾದ ಕ್ಷಣಿಕ ಫಲಗಳಿಂದೇನು?

ಋಷಿಗಳು- ನೀನು ನಮಗೆ ಉಪದೇಶಿಸಿದ್ದ ತಪಸ್ಸನ್ನು ದೈತ್ಯ ನಾಶಪಡಿಸಿದ್ದ. ಅದನ್ನು ತಿರುಗಿ ನಮಗೆ ಅನುಗ್ರಹಿಸಿರುವೆ.

ಪಿತೃಗಳು- ನಮ್ಮ ಸಂತತಿಯವರು ನಮಗೆ ನೀಡುತ್ತಿದ್ದ ಪಿಂಡ ತಿಲೋದಕಗಳನ್ನು ಕಸಿದುಕೊಂಡಿದ್ದ ದೈತ್ಯನ ಕರುಳನ್ನು ಕಿತ್ತುಹಾಕಿ ತಿರುಗಿ ಆ ಶ್ರಾದ್ಧಾನ್ನ ಜಲಗಳನ್ನು ನಮಗೆ ಒದಗಿಸಿಕೊಟ್ಟಿರುವ ಸರ್ವಧರ್ಮರಕ್ಷಕನಿಗೆ ನಮಸ್ಕಾರ.

ಸಿದ್ಧರು- ನಮ್ಮ ಯೋಗಸಿದ್ಧಿಗಳನ್ನು ಅಪಹರಿಸಿದ್ದ ದೈತ್ಯನನ್ನು ಉಗುರುಗಳಿಂದ ಸೀಳಿದ ನಿನಗೆ ನಮಿಸುವೆವು.

ವಿದ್ಯಾಧರರು- ನಮ್ಮ ಅಂತರ್ಧಾನಾದಿ ವಿದ್ಯೆಯನ್ನು ನಿಷೇಧಿಸಿದ್ದ ದೈತ್ಯನನ್ನು ಪಶುವಿನಂತೆ ಕೊಂದ ನಿನಗಿದೋ ನಮಸ್ಕಾರ.

ನಾಗರು- ಈ ಪಾಪಿ ನಮ್ಮ ರತ್ನಗಳನ್ನೂ ಸುಂದರ

ಸ್ತ್ರೀಯರನ್ನೂ ಅಪಹರಿಸಿದ್ದ. ಅವನೆದೆಯನ್ನು ಬಗಿದ ನಿನಗಿದೋ ನಮಸ್ಕಾರ.

ಮನುಗಳು- ನೀನು ಮಾಡಿದ್ದ ಧರ್ಮನಿಯಮವನ್ನು ಮೀರುವಂತೆ ನಮ್ಮನ್ನು ಬಲಾತ್ಕರಿಸಿದ ಈ ದುಷ್ಟನನ್ನು ನೀನು ಕೊಂದಿರುವಿ. ನಾವು ನಿನಗೇನು ಸೇವೆ ಮಾಡಲಿ? ಆದೇಶ ನೀಡು.

ಪ್ರಜಾಪತಿಗಳು- ನಮ್ಮ ಪ್ರಜಾ ಸೃಷ್ಟಿಕಾರ್ಯವನ್ನು ನಿಷೇಧಿಸಿದ್ದ ಈ ದೈತ್ಯ ನಿನ್ನಿಂದ ಎದೆ ಒಡೆದು ಸತ್ತುಬಿದ್ದಿದ್ದಾನೆ. ನಿನ್ನ ಅವತಾರ ಜಗತ್ತಿಗೆ ಮಂಗಳಕರ.

ಗಂಧರ್ವರು- ನಿನ್ನ ಗುಣಗಾನ ಮಾಡುತ್ತಿದ್ದ ನಮ್ಮನ್ನು ಈತ ವಶಪಡಿಸಿಕೊಂಡಿದ್ದ. ಅವನನ್ನು ನೀನೀ ಸ್ಥಿತಿಗೆ ತಂದಿರುವೆ. ದುರ್ಮಾರ್ಗಿಗಳಿಗೆ ಎಂದಾದರೂ ಕ್ಷೇಮ ಉಂಟೆ?

ಚಾರಣರು- ನಾವು ಮೋಕ್ಷದಾಯಕನಾದ ನಿನ್ನ ಪಾದಕಮಲವನ್ನೆ ಆಶ್ರಯಿಸಿದವರು. ಈತ ಲೋಕಕಂಟಕರಿಗೆ ಆಶ್ರಯ ಕೊಟ್ಟಿದ್ದ. ಅಂಥ ಅಸುರನನ್ನು ನೀನು ಮುಗಿಸಿಬಿಟ್ಟೆ.

ಯಕ್ಷರು- ನಿನ್ನ ಭಾರ ಹೊರುತ್ತಿದ್ದ ನಿನ್ನ ಸೇವಕರಾದ ನಾವು ಈ ದೈತ್ಯನ ಭಾರ ಹೊರಬೇಕಾಗಿ ಬಂದಿತ್ತು. ನೀನೀತನ ದೇಹವನ್ನು ಪಂಚಭೂತಗಳಲ್ಲಿ ಸೇರಿಸಿಬಿಟ್ಟೆ.

ಕಿಂಪುರುಷರು- ನಾವು ಕಿಂಪುರುಷರು. ನೀನು ಮಹಾಪುರುಷ. ದುಷ್ಟಪುರುಷ ಈತ ಸಜ್ಜನರ ಶಾಪ ತಂದುಕೊಂಡ. ನಿನ್ನ ಕೈಯಿಂದ ಹತನಾದ.

ಬೇತಾಳರು- ನಾವು ಯಜ್ಞಗಳಲ್ಲಿ ನಿನ್ನ ಗುಣಗಾನ ಮಾಡುತ್ತಿದ್ದೆವು. ದೊಡ್ಡ ರೋಗದಂತೆ ನಮ್ಮನ್ನು ಪೀಡಿಸುತ್ತಿದ್ದ ಈತ ನಿನ್ನಿಂದ ಹತನಾಗಿದ್ದಾನೆ.

ಕಿನ್ನರರು- ನಿನ್ನ ಸೇವಕರಾದ ನಮ್ಮಿಂದ ಈತ ಬಿಟ್ಟಿ ಕೆಲಸ ಮಾಡಿಸಿಕೊಳ್ಳುತ್ತಿದ್ದ. ಅಂಥ ಪಾಪಿಯನ್ನು ನೀನು ಕೊಂದಿರುವೆ ಸ್ವಾಮಿ, ಹೀಗೇ ನಮಗೆ ಮಂಗಳ ಉಂಟು ಮಾಡುತ್ತಿರು.

ವಿಷ್ಣುದೂತರು- ಅದ್ಭುತವಾದ ನಿನ್ನ ರೂಪವನ್ನು ನಾವು ಕಂಡೆವು. ಈ ಹಿರಣ್ಯಕಶಿಪುವೂ ನಮ್ಮಂತೇ ನಿನ್ನ ಒಬ್ಬ ಸೇವಕ. ಮುನಿಶಾಪದಿಂದ ಅಸುರಾವೇಶ ಹೊಂದಿ ಬಳಲುತ್ತಿದ್ದ ಈತನನ್ನು ಕೊಂದುದು ವಿಶೇಷಾನುಗ್ರಹವೇ ಸರಿ.

❖ ❖ ❖

ನೀನು ನಮ್ಮ ತಪಸ್ಸಿಗೆ ವಿಘ್ನ ಉಂಟುಮಾಡುತ್ತಿದ್ದ ಹಿರಣ್ಯಕಶಿಪುವನ್ನು ವಧಿಸಿ ನಮ್ಮನ್ನು ಅನುಗ್ರಹಿಸಿರುವೆ ಎಂದು ಋಷಿಗಳು ನರಸಿಂಹನನ್ನು ಸ್ತೋತ್ರಮಾಡುತ್ತಾರೆ.

ಋಷಯ ಊಚುಃ

ತ್ವಂ ನಸ್ತಪಃ ಪರಮಮಾತ್ಥ ಯದಾತ್ಮತೇಜೋ
ಯೇನೇದಮಾದಿಪುರುಷಾತ್ಮಗತಂ ಸಮಸ್ತಂ ।
ತದ್ ವಿಪ್ರಲುಪ್ತಮಮುನಾऽದ್ಯ ಶರಣ್ಯಪಾಲ
ರಕ್ಷಾಗೃಹೀತವಪುಷಾ ಪುನರನ್ವಮಂಸ್ಥಾಃ ॥ ೪೪ ॥

ಋಷಿಗಳು ಹೇಳುತ್ತಾರೆ- ಆದಿಪುರುಷ, ಶರಣಾಗತ ರಕ್ಷಕ, ನೀನು ನಮಗೆ ನಿನ್ನ ಜ್ಞಾನಸ್ವರೂಪವಾದ ಉತ್ತಮವಾದ ತಪಸ್ಸನ್ನು ಹಿಂದೆ ಉಪದೇಶಿಸಿದ್ದೆ. ಅದರಿಂದ ನಾವು ಧ್ಯಾನರೂಪವಾದ ತಪಸ್ಸಿನಿಂದ ಸಮಸ್ತ ಜಗತ್ತನ್ನು ನಮ್ಮ ಮನಸ್ಸಿಗೆ ತಂದುಕೊಂಡಿದ್ದೆವು. ಆ ತಪಸ್ಸನ್ನು ಈ ದೈತ್ಯ ನಾಶ ಮಾಡಿದ್ದ. ಈಗ ನಮ್ಮ ರಕ್ಷಣೆಗಾಗಿ ನೀನು ಅವತರಿಸಿ ತಿರುಗಿ ಆ ತಪಸ್ಸನ್ನು ನಮಗೆ ಅನುಗ್ರಹಿಸಿರುವೆ.

ಇಲ್ಲಿ 'ಆತ್ಮತೇಜಃ' ಅಂದರೆ ನರಸಿಂಹನ ಸ್ವರೂಪಭೂತವಾದ ತಪಸ್ಸನ್ನು ದೈತ್ಯ ಹಾಳುಗೆಡವಿದನೆಂದು ಹೇಳಿದಂತೆ ಕಾಣುತ್ತದೆ.

ಶ್ರೀಧರ ವ್ಯಾಖ್ಯಾನದಲ್ಲಿ ಹೀಗೇ ಹೇಳಿದೆ. ಆದರೆ ಭಗವಂತನ ಸ್ವರೂಪಭೂತವಾದ ತಪಸ್ಸಿಗೆ ನಾಶವಿಲ್ಲ.

ಬೇರೆ ಎಲ್ಲ ವ್ಯಾಖ್ಯಾನಕಾರರೂ ಶ್ರೀಧರ ವ್ಯಾಖ್ಯಾನವನ್ನೇ ಅನುಸರಿಸಿದ್ದಾರೆ. 'ಆತ್ಮಗತಂ ಸಸರ್ಜ' ಎಂದು ಪಾಠವಿಟ್ಟುಕೊಂಡಿದ್ದಾರೆ. ಪರಮಾತ್ಮ ತನ್ನ ಸ್ವರೂಪಭೂತವಾದ ತಪಸ್ಸಿನಿಂದ ಜಗತ್ತನ್ನು ಸೃಜಿಸಿದ್ದಾನೆ ಎಂದು ವಿವರಣೆ ನೀಡಿದ್ದಾರೆ. ವೀರರಾಘವ ಭಗವತ್ಪ್ರಸಾದ ವ್ಯಾಖ್ಯಾನಗಳಲ್ಲಿ ಮಾತ್ರ ಪರಮಾತ್ಮ

ಉಪದೇಶಿಸಿದ್ದು ಋಷಿಗಳ ಧ್ಯಾನರೂಪವಾದ ತಪಸ್ಸನ್ನು. ಆ ತಪಸ್ಸು 'ಆತ್ಮತೇಜ' ಎಂದರೆ ಪರಮಾತ್ಮಸ್ವರೂಪವನ್ನು ಋಷಿಗಳಿಗೆ ತಿಳಿಯುವಂತೆ ಮಾಡುವಂಥದ್ದು. ಆ ತಪಸ್ಸಿನಿಂದಲೆ ಬ್ರಹ್ಮದೇವರು ಜಗತ್ತನ್ನು ಸೃಷ್ಟಿಮಾಡಿದರು. ಅದನ್ನು ಹಿರಣ್ಯಕಶಿಪು ಹಾಳುಮಾಡಿದ್ದಾನೆ ಎಂದಿದ್ದಾರೆ. ಆದರೆ ಪರಮಾತ್ಮ ಋಷಿಗಳಿಗೆ ಉಪದೇಶ ಮಾಡಿದ ತಪಸ್ಸಿನಿಂದ ಬ್ರಹ್ಮದೇವರು ಜಗತ್ತನ್ನು ಸೃಜಿಸಿದರೆಂದರೆ ಇದು ಅಸಂಗತವಾಗುತ್ತದೆ.

ಪರಮಾತ್ಮ ತನ್ನ ಸ್ವರೂಪಭೂತವಾದ ಜ್ಞಾನರೂಪವಾದ ತಪಸ್ಸನ್ನು ಉಪದೇಶ ಮಾಡಿದ್ದಾನೆ. ಋಷಿಗಳು ಅದೇ ರೀತಿಯ ತಮ್ಮದೇ ಆದ ಧ್ಯಾನರೂಪ ವಾದ ತಪಸ್ಸನ್ನು ಮಾಡುತ್ತಿದ್ದರು. ಅದನ್ನು ಹಿರಣ್ಯಕಶಿಪು ನಿಲ್ಲಿಸಿದನೆನ್ನಬೇಕು. ಬ್ರಹ್ಮದೇವರೂ ಅದೇರೀತಿಯ ತಮ್ಮದೇ ಆದ ಧ್ಯಾನರೂಪವಾದ ತಪಸ್ಸಿನಿಂದ ಜಗತ್ತನ್ನು ಸೃಜಿಸಿದರೆನ್ನಬೇಕು. ಹೊರತು ಪರಮಾತ್ಮ ಉಪದೇಶಿಸಿದ್ದ ತನ್ನ ಸ್ವರೂಪಭೂತವಾದ ತಪಸ್ಸಿನಿಂದ ಬ್ರಹ್ಮದೇವರು ಸೃಷ್ಟಿಮಾಡಲಿಲ್ಲ. ಆ ತಪಸ್ಸನ್ನು ಹಿರಣ್ಯಕಶಿಪು ಹಾಳು ಮಾಡಲೂ ಇಲ್ಲ. ಆ ತಪಸ್ಸಿನಿಂದ ಸೃಷ್ಟಿಮಾಡಿದರೆಂದರೆ ಅಂಥದ್ದೇ ಆದ ಬೇರೆ ತಪಸ್ಸಿನಿಂದ ಸೃಷ್ಟಿಮಾಡಿದರು, ಆ ತಪಸ್ಸನ್ನು ಹಿರಣ್ಯಕಶಿಪು ಹಾಳುಮಾಡಿದನೆಂದರೆ ಅಂಥದ್ದೇ ಆದ ತಪಸ್ಸನ್ನು ಹಾಳುಮಾಡಿದನೆಂದೇ ಅರ್ಥವಿಟ್ಟುಕೊಳ್ಳಬೇಕು. ಅದೇ ತಪಸ್ಸೆಂದರೆ ಅಂಥದ್ದೇ ಆದ ತಪಸ್ಸು. ಹೀಗೆ ಹೇಳುವುದು ಲೋಕವ್ಯವಹಾರ. ಭಾಗವತದಲ್ಲಿಯೂ ಹಿಂದೆ ಪ್ರಥಮಸ್ಕಂಧದಲ್ಲಿ ಅರ್ಜುನ ಧರ್ಮರಾಜನಿಗೆ ಹೇಳಿದ ಮಾತು-

'ತದ್ವೈ ಧನುಸ್ತ ಇಷವಃ ಸ ರಥೋ ಹಯಾಸ್ತೇ'

ಇಲ್ಲಿ ಅದೇ ಧನುಸ್ಸು ಅವೇ ಬಾಣಗಳು ಎಂದರೆ ಅಂಥವೇ ಧನುರ್ಬಾಣಗಳು. ಬ್ರಹ್ಮತರ್ಕದಲ್ಲಿ ಇಂಥ ವ್ಯವಹಾರವನ್ನು ಒಪ್ಪಿದ್ದಾರೆ.

ಸದೃಶೇ ವಾ ಪ್ರಧಾನೇ ವಾ ಕಾರಣೇ ವಾ ತದಿತ್ಯಯಂ ।
ಶಬ್ದಃ ಸಂಘಟತೇ ಭೇದೇ ವಿದ್ಯಮಾನೇಽಪಿ ತತ್ತ್ವತಃ ।

ವಸ್ತುತ ಭೇದವಿದ್ದರೂ ಸಾದೃಶ್ಯವಿದ್ದರೆ ಅಥವಾ ಪ್ರಧಾನತ್ವಕಾರಣತ್ವಗಳಿದ್ದರೆ ಅದೇ ಎಂದು ಅಭೇದ ವ್ಯವಹಾರ ಕೂಡುತ್ತದೆ ಎಂದು. ಅದರಿಂದ ಪ್ರಕೃತ ಶ್ಲೋಕದಲ್ಲಿಯೂ ಹೀಗೇ ಸಾದೃಶ್ಯಪ್ರಯುಕ್ತ ಅಭೇದ ವ್ಯವಹಾರವೆಂದಿಟ್ಟು ಕೊಳ್ಳಬೇಕು.

ತದ್ ವಿಪ್ರಲುಪ್ತಮಿತಿ ಸಾದೃಶ್ಯಾಭೇದವಚನಂ ।
ಆಲೋಚನಮೇವ ತಪಃ। 'ಯಸ್ಯ ಜ್ಞಾನಮಯಂ ತಪಃ'
ಇತಿ ಶ್ರುತೇಃ ॥

ಪರಮಾತ್ಮ ಉಪದೇಶಿಸಿದ್ದ ತನ್ನ ಸ್ವರೂಪಭೂತವಾದ ತಪಸ್ಸನ್ನು ಹಿರಣ್ಯಕಶಿಪು ಹಾಳುಮಾಡಿದನೆಂದು ಹೇಳುವುದು ಸಾದೃಶ್ಯ ಪ್ರಯುಕ್ತವಾದ ಅಭೇದವ್ಯವಹಾರ ವೆಂದಿಟ್ಟುಕೊಳ್ಳಬೇಕು.

ಪರಮಾತ್ಮಸ್ವರೂಪಭೂತವಾದ ತಪಸ್ಸೆಂದರೆ ಕೃಚ್ಛ್ರ ಚಾಂದ್ರಾಯಣ ಮುಂತಾದ ಕಾಯಕ್ಲೇಶಾತ್ಮಕ ತಪಸ್ಸಲ್ಲ. ಜ್ಞಾನರೂಪವಾದ ತಪಸ್ಸು ವಿವಕ್ಷಿತ. ಅವನ ಜ್ಞಾನವೇ ತಪಸ್ಸೆನಿಸುತ್ತದೆ.

ಯಃ ಸರ್ವಜ್ಞಃ ಸರ್ವವಿತ್ ಯಸ್ಯ ಜ್ಞಾನಮಯಂ ತಪಃ । ಎಂದು ಜ್ಞಾನವನ್ನೇ ತಪಸ್ಸೆಂದು ಶ್ರುತಿಯು ಹೇಳಿದೆ.

❖❖❖

ನಿನ್ನ ಸೇವಾರೂಪವಾಗಿ ನಾಟ್ಯ ಸಂಗೀತಗಳನ್ನು ನಡೆಸುತ್ತಿದ್ದ ನಮ್ಮನ್ನು ಇನ್ನು ಮುಂದೆ ಹಿರಣ್ಯಕಶಿಪು ತಡೆಯುವುದಿಲ್ಲ. ಅವನನ್ನು ನೀನು ಸಂಹರಿಸಿಬಿಟ್ಟೆ ಎಂದು ಗಂಧರ್ವರು ನರಸಿಂಹನನ್ನು ಸ್ತುತಿಸುತ್ತಾರೆ-

ಗಂಧರ್ವಾ ಊಚುಃ

ವಯಂ ವಿಭೋ ತೇ ನಟನಾಟ್ಯಗಾಯಕಾ
ಯೇನಾತ್ಮಸಾದ್ ವೀರ್ಯಬಲೌಜಸಾ ಕೃತಾಃ ।
ಸ ಏಷ ನೀತೋ ಭವತಾ ದಶಾಮಿಮಾಂ
ಕಿಮುತ್ಪಥಸ್ಥಃ ಕುಶಲಾಯ ಕಲ್ಪತೇ ॥ ೫೦ ॥

ಗಂಧರ್ವರು ನುಡಿದರು- ಪ್ರಭು ನಾವು ನಿನ್ನ ಲೀಲೆಗಳನ್ನೇ ನಾಟಕದಲ್ಲಿ ನಾಟ್ಯದಲ್ಲಿ ಅಭಿನಯಿಸುತ್ತಿದ್ದೆವು. ನಿನ್ನನ್ನು ಹಾಡಿ ಹೊಗಳುತ್ತಿದ್ದೆವು. ಈ ದೈತ್ಯ ನಮ್ಮನ್ನು ವೀರ್ಯಬಲ ಪರಾಕ್ರಮಗಳಿಂದ ತನ್ನ ವಶದಲ್ಲಿರಿಸಿ ಕೊಂಡಿದ್ದ. ಅವನನ್ನು ನೀನು ಈ ಸ್ಥಿತಿಗೆ ತಂದಿರುವೆ. ದುರ್ಮಾರ್ಗಿಗಳಿಗೆ ಕ್ಷೇಮ ಉಂಟೆ?

ಇಲ್ಲಿ 'ನಟನಾಟ್ಯಗಾಯಕಾಃ' ಎಂದರೆ 'ನಟರು ಮತ್ತು ನಾಟ್ಯಗಾಯಕರು' ಅಂದರೆ 'ನರ್ತಕರು ಮತ್ತು ನೃತ್ಯಗಳಲ್ಲಿ ಗಾಯಕರು' ಎಂದು ಬೇರೆ ವ್ಯಾಖ್ಯಾನಕಾರರು ವಿವರಣೆ ನೀಡುತ್ತಾರೆ.[೧] ಆದರೆ ಗಂಧರ್ವರು ಕೇವಲ ನೃತ್ಯ ಗಾಯನಗಳನ್ನು ಮಾತ್ರವಲ್ಲ, ನಾಟಕಗಳನ್ನೂ ನಡೆಸುತ್ತಾರೆ. ಅವರು ನಾಟಕಗಳಲ್ಲಿ ಅಭಿನಯಿಸುವ ನಟರೂ ಆಗಿದ್ದಾರೆ. ನರ್ತಕರಾಗಿ ನಾಟ್ಯಗಳಲ್ಲಿ ಭಾವಾಭಿನಯವನ್ನೂ ಮಾಡುತ್ತಾರೆ. ನಾಟ್ಯಗಳಲ್ಲಿ ಮಾತ್ರವಲ್ಲದೆ ಸ್ವತಂತ್ರವಾಗಿ ಸಂಗೀತ ಕಛೇರಿಗಳನ್ನೂ ನಡೆಸುತ್ತಾರೆ. ಆದರಿಂದ ನಟರು ನಾಟ್ಯರು ಗಾಯಕರು ನಟನಾಟ್ಯಗಾಯಕರು ಎಂದು ಸಮಾಸ ಮಾಡಬೇಕು. ಸಂಭಾಷಣೆಗಳಿಂದ ಕೂಡಿದ ನಾಟಕಗಳಲ್ಲಿ ಅಭಿನಯಿಸುವವರು ನಟರು. ಸಂಗೀತಕ್ಕೆ ಅನುಗುಣವಾಗಿ ನಾಟ್ಯವಾಡುವವರು ನಾಟ್ಯರು. ಸಂಗೀತಗಾರರು ಗಾಯಕರು. ಇದು ಗಾಂಧರ್ವಶಾಸ್ತ್ರದಲ್ಲಿ ಉಕ್ತವಾಗಿದೆ.

ನಟನಂ ತು ಕಥಾಬಂಧೋ ನಾಟ್ಯಕಂ ಭಾವದರ್ಶನಂ ।

ಇತಿ ಗಾಂಧರ್ವೇ ।

ಸಂಭಾಷಣೆಗಳಿಂದ ಕೂಡಿದ ಅಭಿನಯವು ನಟನ. ಗೀತಬದ್ಧವಾಗಿ ಭಾವಾಭಿನಯ ಮಾಡುವುದು ನಾಟ್ಯ ಎಂದು ಗಾಂಧರ್ವಶಾಸ್ತ್ರದಲ್ಲಿ ಹೇಳಿದೆ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ಸಪ್ತಮಸ್ಕಂಧೇ
ಅಷ್ಟಮೋऽಧ್ಯಾಯಃ

❖ ❖ ❖

---

೧. ನಟಾ ನರ್ತಕಾಃ । ನಾಟ್ಯೇ ನೃತ್ಯೇ ಗಾಯಕಾಶ್ಚ । -ಶ್ರೀಧರಃ

ಅಧ್ಯಾಯ ೯

ಅಧ್ಯಾಯ ಸಾರಾಂಶ

ಯಾರೇ ಹತ್ತಿರ ಬರಲು ಅಂಜುವಷ್ಟು ಕೋಪ ಮಾಡಿಕೊಂಡು ಕುಳಿತಿದ್ದ ನರಸಿಂಹನ ಬಳಿಗೆ ಬರಲು ಬ್ರಹ್ಮಾದಿಗಳಾರೂ ಶಕ್ತರಾಗಲಿಲ್ಲ. ಲಕ್ಷ್ಮೀದೇವಿಯನ್ನು ಎಲ್ಲರೂ ಕೇಳಿಕೊಂಡರು. ಅವಳೂ ಅಂಜಿ ಬಳಿಗೆ ಹೋಗದೆ ಹಾಗೇ ನಿಂತಳು.

ಬ್ರಹ್ಮದೇವ ಪ್ರಹ್ಲಾದನನ್ನು ಕಳಿಸಿದ, 'ಮಗು, ನಿನ್ನ ತಂದೆಯ ಮೇಲೆ ಕುಪಿತನಾಗಿರುವ ಪ್ರಭುವನ್ನು ನೀನೇ ಬಳಿಗೆ ಹೋಗಿ ಸಮಾಧಾನ ಮಾಡು' ಎಂದ. ಆಗ ಪ್ರಹ್ಲಾದ ಭಗವಂತನ ಬಳಿಗೆ ಹೋಗಿ ಕೈಮುಗಿದು ನೆಲದ ಮೇಲೆ ಮೈಚಾಚಿ ನಮಿಸಿದ. ಪ್ರಭು ಆತನನ್ನು ಎಬ್ಬಿಸಿ ತಲೆಯ ಮೇಲೆ ತನ್ನ ಅಭಯಹಸ್ತವನ್ನಿರಿಸಿದ. ಒಡನೆ ಆತನ ಸ್ವರೂಪಾನಂದ ವ್ಯಕ್ತವಾಯಿತು. ಮೈನವಿರೆದ್ದಿತು. ಆನಂದಬಾಷ್ಪ ಸುರಿಯಿತು. ಏಕಾಗ್ರಚಿತ್ತದಿಂದ ಪ್ರೇಮಗದ್ಗದ ಧ್ವನಿಯಿಂದ ಸ್ತುತಿಸಿದ.

'ಬ್ರಹ್ಮಾದಿಗಳೆಲ್ಲರೂ ನಿನ್ನಲ್ಲಿ ಸ್ತೋತ್ರಗಳ ಹೊಳೆ ಹರಿಸಿದರೂ ನಿನಗೆ ಸಮಾಧಾನವಾಗಲಿಲ್ಲ. ತಾಮಸವಾದ ಅಸುರಜಾತಿಯಲ್ಲಿ ಜನಿಸಿದ ನನ್ನ ಸ್ತುತಿಗೆ ನೀನು ಮೆಚ್ಚುವೆಯ? ನನಗೆ ಗೊತ್ತು ಧನಸಂಪತ್ತು ಕುಲ ವಿದ್ಯೆ ತಪಸ್ಸುಗಳಿಗಿಂತಲೂ ಭಕ್ತಿ ನಿನಗೆ ಹೆಚ್ಚುಪ್ರಿಯ. ಅದಕ್ಕೇ ನೀನು ಗಜೇಂದ್ರನಿಗೆ ಒಲಿದೆ. ಜ್ಞಾನಾದಿ ಹನ್ನೆರಡು ಗುಣವಿದ್ದೂ ಭಕ್ತಿ ಒಂದಿಲ್ಲದ ಬ್ರಾಹ್ಮಣನಿಗಿಂತ ಭಕ್ತನಾದ ಅಂತ್ಯಜನೇ ಶ್ರೇಷ್ಠ. ಅವನು ಇಡೀ ಜಗತ್ತನ್ನು ಪವಿತ್ರೀಕರಿಸಬಲ್ಲ.

ಭಕ್ತರಿಂದಲೂ ನೀನು ನಿನಗಾಗಿ ಪೂಜೆ ಸ್ವೀಕರಿಸುವುದಿಲ್ಲ. ಭಕ್ತರ ಲಾಭಕ್ಕಾಗಿ ಸ್ವೀಕರಿಸುವೆ. ಮುಖವನ್ನು ಸಿಂಗರಿಸಿದರೆ ಭಾವಚಿತ್ರ ಸುಂದರವಾಗಿ ಮಾಡಿ ಬರುವಂತೆ ಭಕ್ತರು ನಿನ್ನನ್ನಾರಾಧಿಸಿದರೆ ಅದರಿಂದ ಭಕ್ತರಿಗೇ ಲಾಭ. ನಿನ್ನನ್ನು ಪೂರ್ತಿ ಸ್ತುತಿಸಲು ಯಾರಿಗೂ ಶಕ್ಯವಲ್ಲ. ಆದರೂ ನಮ್ಮ ಬಂಧ ಮುಕ್ತಿಗಾಗಿ ನಾವು ನಿನ್ನನ್ನು ಸ್ತುತಿಸಲೇಬೇಕು. ನಾವು ನಿನಗೆ ಭಯಪಡುವುದಿಲ್ಲ.

ಏಕೆಂದರೆ ನಿನ್ನ ಅವತಾರಲೀಲೆಗಳು ನಮ್ಮ ಕ್ಷೇಮಕ್ಕಾಗಿಯೇ ಇರುತ್ತವೆ. ನೀನು ಇನ್ನು ಕೋಪವನ್ನು ಶಾಂತಿಮಾಡಿಕೊಳ್ಳು. ಏಕೆಂದರೆ ದೈತ್ಯನನ್ನು ಕೊಂದಿದ್ದಾಯಿತು. ಸಜ್ಜನರಿಗೆ ಸಂತೋಷವಾಗಿದೆ. ಹಾವುಚೇಳುಗಳಂಥ ಕ್ರೂರಜಂತುಗಳನ್ನು ಕೊಂದರೆ ಅಹಿಂಸಾಪ್ರಿಯರಾದ ಸಜ್ಜನರೂ ಸಂತೋಷಪಡುತ್ತಾರೆ.

ನಾನು ನಿನ್ನ ಭಯಂಕರ ರೂಪಕ್ಕೆ ಅಂಜುವುದಿಲ್ಲ. ಸಂಸಾರ ಬಂಧನಕ್ಕೆ ಅಂಜುತ್ತೇನೆ. ನಿನ್ನ ಪಾದವನ್ನು ಆಶ್ರಯಿಸುತ್ತೇನೆ. ಸಂಸಾರದುಃಖ ನನ್ನನ್ನು ಬೆಂಕಿಯಂತೆ ಸುಡುತ್ತಿದೆ. ಅದಕ್ಕೆ ಏನು ಪರಿಹಾರ ಮಾಡಿದರೂ ಆ ಪರಿಹಾರದಲ್ಲಿ ತಿರುಗಿ ದುಃಖವೇ ಇರುತ್ತದೆ. ನಿನ್ನ ದಾಸ್ಯ ಒಂದೇ ಸರಿಯಾದ ಪರಿಹಾರೋಪಾಯ. ಅದನ್ನು ಪಡೆಯುವ ಉಪಾಯವೇನು, ನನಗೆ ಉಪದೇಶಿಸು.

ನಾನು ನಿನ್ನ ಗುಣಗಾನ ಮಾಡುತ್ತೇನೆ, ಗುಣತ್ರಯ ಬಂಧನವನ್ನು ನೀಗಿಕೊಳ್ಳುತ್ತೇನೆ. ನಿನ್ನ ಭಕ್ತರ ಸಂಗದಲ್ಲಿ ಎಲ್ಲ ದುಃಖಗಳನ್ನು ಮರೆಯುತ್ತೇನೆ. ಮಗುವಿಗೆ ತಂದೆತಾಯಿಗಳಂತೆ, ರೋಗಿಗೆ ಔಷಧಿಯಂತೆ, ಸಾಗರದಲ್ಲಿ ಮುಳುಗುವವನಿಗೆ ನೌಕೆಯಂತೆ, ಬಿಸಿಲ ಬೇಗೆಗೆ ಬೆಂದವನಿಗೆ ಶೀತೋಪಚಾರದಂತೆ ನಿನ್ನ ಉಪಾಸಕರಿಗೆ ನೀನೇ ರಕ್ಷಕನಾಗಿರುತ್ತಿ. ಬೇರೆ ಎಲ್ಲರೂ ನಿನ್ನ ಪ್ರೇರಣೆಗೊಳಗಾದವರೆ.

ಪ್ರಾಕೃತ ಮನೋಮಯವಾದ ಸಂಸಾರಚಕ್ರಕ್ಕೆ ಇಂದ್ರಿಯ ಪ್ರಾಣ ಮನಸ್ಸುಗಳೇ ಹದಿನಾರು ಅರೆಗಳು. ಇಂಥ ಸಂಸಾರ ಚಕ್ರದಿಂದ ಜನನರಹಿತನಾದ ನೀನಲ್ಲದೆ ಇನ್ನಾರು ನಮ್ಮನ್ನು ರಕ್ಷಿಸಬಲ್ಲರು?

ಲೋಕಪಾಲಕರ ವೈಭವಗಳೆಲ್ಲ ನನ್ನ ತಂದೆ ಕೋಪದಿಂದ ಹುಬ್ಬುಗಂಟಿಕ್ಕಿದ ಮಾತ್ರಕ್ಕೆ ನಾಶವಾದುದನ್ನು ನಾನು ಕಂಡಿದ್ದೇನೆ. ತಂದೆಯ ವೈಭವವನ್ನೂ ನೀನು ನಾಶ ಮಾಡಿರುವೆ. ಅದರಿಂದ ವಿಷಯ ಸುಖ ವೈಭವವನ್ನು ಯಾವುದನ್ನೂ ನಾನು ಬಯಸಲಾರೆ. ನಿನ್ನ ಭಕ್ತರ ಸಂಗವೊಂದನ್ನು ಮಾತ್ರ ಕೊಡು. ವಿಷಯಸುಖ ವರ್ಣನೆ ಕೇಳಲು ಆಕರ್ಷಕ. ಆದರೆ ಅದು ಮರುಮರೀಚಿಕೆ. ಹಾಗಿದ್ದರೂ ಜನರಿಗೆ ಅದರಲ್ಲಿ ವೈರಾಗ್ಯ ಬರುವುದೇ ಇಲ್ಲ. ಎಲ್ಲ

ತಿಳಿದವನೂ ಬಯಕೆಯ ಬೆಂಕಿಯನ್ನು ವಿಷಯಸುಖದಿಂದ ತೃಪ್ತಿಪಡಿಸಲು ಯತ್ನಿಸುತ್ತಾನೆ.

ವಿಷಯಾಸಕ್ತರಾದ ಅಸುರರ ಕುಲದವನು ನಾನೆಲ್ಲಿ? ನನ್ನ ಮೇಲೆ ನೀನು ಹರಿಸಿರುವ ಅನುಕಂಪೆ ಎಲ್ಲಿ? ಈಗ ನೀನು ನನ್ನ ತಲೆಯ ಮೇಲಿಟ್ಟಿರುವ ಕರಕಮಲದ ಅನುಗ್ರಹ ಬ್ರಹ್ಮನಿಗೂ ಇಲ್ಲ ಶಿವನಿಗೂ ಇಲ್ಲ ರಮಾದೇವಿಗೂ ಇಲ್ಲ. ನಿನಗೆ ತನ್ನ ಜಾತಿಯವನು ಅನ್ಯಜಾತಿಯವನೆಂಬ ಭೇದಭಾವನೆ ಇಲ್ಲ. ಸೇವೆಯೊಂದಕ್ಕೇ ಒಲಿಯುವವನು, ಸೇವೆಗೆ ತಕ್ಕ ಫಲ ನೀಡುವ ನಿಷ್ಪಕ್ಷಪಾತಿ ನೀನು.

ನಾನು ವಿಷಯಭೋಗವೆಂಬ ಹಾವುಗಳಿಂದ ತುಂಬಿದ ಸಂಸಾರಕೂಪದಲ್ಲಿ ಬಿದ್ದಿದ್ದೆ. ವಿಷಯಾಸಕ್ತರ ಸಂಗದಿಂದ ಪತಿತನಾಗುತ್ತಿದ್ದೆ. ದೇವರ್ಷಿ ನಾರದರು ನನ್ನನ್ನು ತಮ್ಮವನೆಂದು ಸ್ವೀಕರಿಸಿ ಅನುಗ್ರಹಿಸಿದರು. ಆದರಿಂದ ನಿನ್ನ ದಾಸರ ಸಂಗವನ್ನು ನಾನು ಹೇಗೆ ತೊರೆಯಬಲ್ಲೆ? ನೀನು ನನ್ನ ಪ್ರಾಣರಕ್ಷಣೆ ಮಾಡಿದ್ದು ನನ್ನ ತಂದೆಯನ್ನು ಕೊಂದಿದ್ದು ನಿನ್ನ ದಾಸರಾದ ನಾರದಮುನಿ ನನಗೆ ಉಪದೇಶಿಸಿದ್ದನ್ನು ಸತ್ಯಮಾಡುವುದಕ್ಕಾಗಿ. ಮತ್ತು ನನ್ನ ತಂದೆ ನನ್ನನ್ನು ಕೊಲ್ಲಲು ಖಡ್ಗಹಿರಿದು 'ನಾ ನಿನ್ನ ಶಿರವನ್ನು ತರಿಯುತ್ತೇನೆ. ನನ್ನಿಂದ ಬೇರೆ ಒಬ್ಬ ಜಗದೀಶ್ವರನಿದ್ದರೆ ಅವನೀಗ ನಿನ್ನನ್ನು ಕಾಪಾಡಲಿ' ಎಂದು ಹೇಳಿದ್ದನ್ನು ಸತ್ಯ ಮಾಡುವುದಕ್ಕಾಗಿ.

ನೀನು ಈ ಸೃಷ್ಟಿಗಿಂತ ಮೊದಲು ಪ್ರಳಯ ಸಮುದ್ರದಲ್ಲಿ ಆಲದೆಲೆಯಮೇಲೆ ಕಣ್ಣುಮುಚ್ಚಿ ಮಲಗಿ ಸ್ವರೂಪಾನಂದ ಅನುಭವಿಸುವವನು. ಬಳಿಕ ನಿನ್ನ ನಾಭಿಕಮಲದಲ್ಲಿ ಬ್ರಹ್ಮ ಜನಿಸಿ ನಿನ್ನನ್ನು ತೀವ್ರತಪಸ್ಸಿನಿಂದ ಕಂಡುಕೊಂಡ. ನೀನು ಹಯಗ್ರೀವ ರೂಪ ತಾಳಿ ಮಧುಕೈಟಭರನ್ನು ಕೊಂದು ವೇದವನ್ನು ಬ್ರಹ್ಮನಿಗೆ ತಂದಿತ್ತೆ. ಹೀಗೆ ನಾನಾ ಅವತಾರ ತಾಳಿ ಲೋಕಕಂಟಕರನ್ನು ಕೊಂದು ಧರ್ಮವನ್ನು ಕಾಪಾಡುವವನು ನೀನು. ನಿನ್ನ ಕಥಾಶ್ರವಣದಲ್ಲಿ ನನ್ನ ಮನಇಂದ್ರಿಯಗಳು ಆಸಕ್ತಿಹೊಂದುವುದಿಲ್ಲ. ವಿಷಯಪದಾರ್ಥಗಳ ಕಡೆಗೇ ಹರಿಯು ತ್ತವೆ. ಒಂದೊಂದು ಇಂದ್ರಿಯ ಒಂದೊಂದು ಕಡೆಗೆ ನನ್ನನ್ನು ಸೆಳೆಯುತ್ತ

ಕ್ಲೇಶಪಡಿಸುತ್ತಿವೆ. ಕರ್ಮವಶದಿಂದ ಸಂಸಾರವೆಂಬ ವೈತರಣಿಯಲ್ಲಿ ಬಿದ್ದಿದ್ದೇನೆ. ಕಾಪಾಡು. ನಾನಾದರೂ ನಿನ್ನ ಕಥಾಮೃತ ಪಾನದಿಂದ ಸಂಸಾರ ದುಃಖವನ್ನು ಮರೆಯಬಲ್ಲೆ. ಆದರೆ ನಿನ್ನನ್ನು ಮರೆತು ವಿಷಯಸುಖಕ್ಕಾಗಿ ಸಂಸಾರದ ಭಾರವನ್ನು ಹೊರುತ್ತಾರೆ ಮೂಢಜನರು. ಅವರ ದುರವಸ್ಥೆಯನ್ನು ಕಂಡು ನನಗೆ ಸಹಿಸಲಾಗುವುದಿಲ್ಲ. ದೀನರಾದ ಈ ಅಸುರಬಾಲಕರನ್ನು ಬಿಟ್ಟು ನಾನೊಬ್ಬನೇ ಮೋಕ್ಷವನ್ನು ಹೊಂದಲು ಬಯಸುವುದಿಲ್ಲ. ಸಂಸಾರದ ಗೊಂಡಾರಣ್ಯದಲ್ಲಿ ಸುತ್ತುತ್ತಿರುವ ಇವರಿಗೂ ನೀನೇ ಗತಿ. ಇನ್ನಾರನ್ನೂ ನಾ ಕಾಣೆ. ಇವರು ಬಯಸುವ ವಿಷಯ ಸುಖಭೋಗ ಅಲ್ಪ ಮಾತ್ರವಲ್ಲ. ಎರಡೂ ಕೈಗಳನ್ನು ತಿಕ್ಕಿಕೊಂಡು ನವೆಯನ್ನು ಹೋಗಲಾಡಿಸಲು ಯತ್ನಿಸುವಂತೆ ಹೆಚ್ಚುಹೆಚ್ಚು ದುಃಖಕ್ಕೇ ಕಾರಣವಾಗುತ್ತದೆ.

ಇಂದ್ರಿಯನಿಗ್ರಹವಿಲ್ಲದವರಿಗೆ ಮೌನ ವ್ರತಾನುಷ್ಠಾನ ಶಾಸ್ತ್ರಶ್ರವಣ ವೆಲ್ಲವೂ ಬರಿ ಜೀವನೋಪಾಯವಾಗುತ್ತದೆ. ಹಾಗೆ ಜನರಿಗೆ ಅದು ತಿಳಿದು ಹೋದರೆ ಜೀವನೋಪಾಯವೂ ಆಗದೆ ಹೋದೀತು. ಅದರಿಂದ ಎಲ್ಲ ಇಂದ್ರಿಯಗಳೂ ನಿನ್ನ ಸೇವೆಯಲ್ಲಿ ಆಸಕ್ತವಾಗುವಂತೆ ಮಾಡಿ ಶಾಸ್ತ್ರಶ್ರವಣದಿಂದ ಭಕ್ತಿಯನ್ನು ಸಂಪಾದಿಸಬೇಕು, ಮುಕ್ತನಾಗಬೇಕು.

ಹೀಗೆ ಪ್ರಹ್ಲಾದ ಸ್ತುತಿಸಿದಾಗ ನರಸಿಂಹ ಸಂತುಷ್ಟನಾಗಿ ಕೋಪವನ್ನು ಬಿಟ್ಟು ನುಡಿದ, 'ಪ್ರಹ್ಲಾದ, ನಿನ್ನಲ್ಲಿ ನಾನು ಸುಪ್ರೀತ ನಾಗಿದ್ದೇನೆ. ಬೇಕಾದ ವರವನ್ನು ಕೇಳು. ನಾನೊಲಿಯದಿದ್ದರೆ ನನ್ನ ದರ್ಶನ ದುರ್ಲಭ. ಅದನ್ನು ಪಡೆದರೆ ಯಾವುದೇ ಕಷ್ಟವಿರುವುದಿಲ್ಲ.'

ಪ್ರಹ್ಲಾದ ಫಲದಾಸೆ ಬಿಟ್ಟು ಭಗವಂತನನ್ನು ಆರಾಧಿ ಸುವವನಾದ್ದರಿಂದ ಭಗವಂತ ವರಗಳನ್ನು ಕೊಡುವೆನೆಂದರೂ ಈತ ಬೇಡವೆಂದ.

❖❖❖

ಉಗ್ರ ನರಸಿಂಹನ ಬಳಿಗೆ ಹೋಗಲು ಸಾಕ್ಷಾತ್ ಲಕ್ಷ್ಮೀದೇವಿಯೂ ಭಯದಿಂದ ಹಿಂಜರಿದಳು. ಪ್ರಹ್ಲಾದ ಅಂಜಲಿಲ್ಲ ಎಂದು ನಾರದರು ಧರ್ಮರಾಜನಿಗೆ ಹೇಳುತ್ತಾರೆ.

ಸಾಕ್ಷಾಚ್ಛ್ರೀಃ ಪ್ರೇಷಿತಾ ದೇವೈರ್ದೃಷ್ಟ್ವಾ ತನ್ಮಹದದ್ಭುತಮ್ ।
ಅದೃಷ್ಟಾಶ್ರುತಪೂರ್ವತ್ವಾತ್ ಸಾ ನೋಪೇಯಾಯ ಶಂಕಿತಾ ॥ ೨ ॥

ಪ್ರಹ್ಲಾದಂ ಪ್ರೇಷಯಾಮಾಸ ಬ್ರಹ್ಮಾಽವಸ್ಥಿತಮಂತಿಕೇ ।
ತಾತ ಪ್ರಶಮಯೋಪೇಹಿ ಸ್ವಪಿತ್ರೇ ಕುಪಿತಂ ಪ್ರಭುಮ್ ॥ ೩ ॥

ದೇವತೆಗಳು ಸಾಕ್ಷಾತ್ ಲಕ್ಷ್ಮೀದೇವಿಯನ್ನು ಪ್ರಾರ್ಥಿಸಿ ನರಸಿಂಹನ ಬಳಿಗೆ ಕಳಿಸಿದರು. ಆದರೆ ಅವಳು ಆ ಮಹಾದ್ಭುತ ರೂಪವನ್ನು ಕಂಡು ಅದು ಹಿಂದೆಂದೂ ಕಂಡಿಲ್ಲದ ಕೇಳಿಲ್ಲದ ರೂಪವಾದ್ದರಿಂದ ಅಂಜಿ ಬಳಿಗೆ ಹೋಗದೆ ಸುಮ್ಮನೆ ನಿಂತಳು.

ಬಳಿಕ ಬ್ರಹ್ಮದೇವರು ಬಳಿಯಲ್ಲಿದ್ದ ಪ್ರಹ್ಲಾದನನ್ನು ಕರೆದು ಮಗು, ಪ್ರಭು ನಿನ್ನ ತಂದೆಯ ಬಗ್ಗೆ ಕುಪಿತನಾಗಿದ್ದಾನೆ, ಬಳಿಗೆ ಹೋಗು, ಸಮಾಧಾನಪಡಿಸು ಎಂದರು.

[೧]'ಅದೃಷ್ಟಾಶ್ರುತಪೂರ್ವತ್ವಾತ್ ಸಾ ನೋಪೇಯಾಯ ಶಂಕಿತಾ' ಎಂದು ನರಸಿಂಹರೂಪ ಸಾಕ್ಷಾತ್ ಲಕ್ಷ್ಮಿಯೂ ಹಿಂದೆಂದೂ ಕಂಡಿರದ ಕೇಳಿಲ್ಲದ ರೂಪ ಎನ್ನುವುದು ಹೇಗೆ ಕೂಡುತ್ತದೆ? ಪೂರ್ವಕಲ್ಪದಲ್ಲಿ ನೋಡಿರುತ್ತಾಳೆ, ವೈಕುಂಠದಲ್ಲಿ ಸದಾ ನೋಡುತ್ತಿರುತ್ತಾಳೆ ಎಂದು ಪ್ರಶ್ನೆ ಮಾಡಿಕೊಂಡು ವಿಶ್ವನಾಥ ವ್ಯಾಖ್ಯಾನ ಹೇಳುತ್ತದೆ- 'ಭಗವಂತ ತನ್ನ ಲೀಲಾಶಕ್ತಿಯಿಂದ ಲಕ್ಷ್ಮೀದೇವಿಗೆ ಇದು ಅದೃಷ್ಟ ಅಶ್ರುತವಾದ ಅದ್ಭುತರೂಪವೆಂಬ ಭಾವನೆ ಬರುವಂತೆ ಮಾಡಿದ್ದಾನೆ. ಇದು ಅವಳಿಗೆ ಅದ್ಭುತರಸಾಸ್ವಾದನ ಮಾಡಿಸುವುದಕ್ಕಾಗಿ' ಎಂದು.

ಆದರೆ ಇದು ಕೇವಲ ಕಲ್ಪನೆ. ಪ್ರಮಾಣದ ಆಧಾರವಿಲ್ಲ. ಬ್ರಹ್ಮಾಂಡ ಪುರಾಣ ಸ್ಪಷ್ಟವಾಗಿ ಬೇರೆಯೇ ವಿವರಣೆಯನ್ನು ನೀಡಿದೆ-

೧. ನೃಸಿಂಹರೂಪಸ್ಯ ಪೂರ್ವಕಲ್ಪದೃಷ್ಟತ್ವೇಽಪಿ ನೃಸಿಂಹಸ್ಯ ವೈಕುಂಠೇ ಸದೈವ ದೃಷ್ಟತ್ವೇಪಿ ತದಾನೀಮದೃಷ್ಟಾಶ್ರುತತ್ವಪ್ರತೀತಿರ್ಲೀಲಾಶಕ್ತ್ಯೈವ ಕಾರಿತಾ ಅದ್ಭುತರಸಾಸ್ವಾದ ಪ್ರಾಪಣಾರ್ಥಮಿತ್ಯಾಹುಃ । -ವಿಶ್ವನಾಥಃ

ಅದೃಷ್ಟಾಶ್ರುತಪೂರ್ವತ್ವಾದನ್ಯೈಃ ಸಾಧಾರಣೈರ್ಜನೈಃ।
ನೃಸಿಂಹಂ ಶಂಕಿತೇವ ಶ್ರೀರ್ಲೋಕಮೋಹಾಯ ನೋ ಯಯೌ
ಪ್ರಹ್ಲಾದೇ ಚೈವ ವಾತ್ಸಲ್ಯದರ್ಶನಾಯ ಹರೇರಪಿ।
ಜ್ಞಾತ್ವಾ ಮನಸ್ತಥಾ ಬ್ರಹ್ಮಾ ಪ್ರಹ್ಲಾದಂ ಪ್ರೇಷಯತ್ತದಾ।
ಏಕತ್ರೈಕಸ್ಯ ವಾತ್ಸಲ್ಯಂ ವಿಶೇಷಾದ್‌ದರ್ಶಯೇದ್ಧರಿಃ॥
ಅವರಸ್ಯಾಪಿ ಮೋಹಾಯ ಕ್ರಮೇಣೈವಾಪಿ ವತ್ಸಲಃ॥

ಇತಿ ಬ್ರಹ್ಮಾಂಡೇ॥

ಬೇರೆ ಸಾಧಾರಣ ಜನರಿಗೆ ನರಸಿಂಹರೂಪ ಹಿಂದೆಂದೂ ಕಂಡಿಲ್ಲದ ಕೇಳಿಲ್ಲದ ರೂಪವಾದ್ದರಿಂದ ಲೋಕಮೋಹನಕ್ಕಾಗಿ ಶ್ರೀದೇವಿ ಅಂಜಿದವಳಂತೆ ನರಸಿಂಹನ ಬಳಿಗೆ ಹೋಗದೆ ನಿಂತಳು. ಮತ್ತು ಇದು ಪ್ರಹ್ಲಾದನಲ್ಲಿ ಹರಿಗೂ ತನಗೂ ವಾತ್ಸಲ್ಯವನ್ನು ತೋರಿಸುವುದಕ್ಕಾಗಿ ಎಂದೂ ತಿಳಿಯಬೇಕು. ಹರಿಯ ಮತ್ತು ಲಕ್ಷ್ಮಿಯ ಈ ಅಭಿಪ್ರಾಯವನ್ನು ತಿಳಿದೇ ಬ್ರಹ್ಮದೇವರೂ ಕೂಡ ತಾನು ಅಂಜಿದವನಂತೆ ತೋರಿಕೊಂಡು ಪ್ರಹ್ಲಾದನನ್ನು ಕಳಿಸಿದರು. ಕೆಲವೊಮ್ಮೆ ಸಣ್ಣವರಲ್ಲಿಯೂ ಕೂಡ ದೊಡ್ಡವರಿಗಿಂತ ಹೆಚ್ಚಿನ ವಾತ್ಸಲ್ಯವನ್ನು ಹರಿ ತೋರುವುದುಂಟು. ಇದು ಅಜ್ಞಜನರ ಮೋಹನಕ್ಕಾಗಿ. ವಾಸ್ತವದಲ್ಲಿ ಹರಿಗೆ ಜೀವರಲ್ಲಿ ತಾರತಮ್ಯಾನುಗುಣವಾಗಿಯೆ ದೊಡ್ಡವರಲ್ಲಿ ಹೆಚ್ಚು ಸಣ್ಣವರಲ್ಲಿ ಕಡಿಮೆ ವಾತ್ಸಲ್ಯವಿರುತ್ತದೆ, ಎಂದು ಬ್ರಹ್ಮಾಂಡಪುರಾಣದಲ್ಲಿ ಹೇಳಿದೆ.

❖❖❖

ಹರಿಭಕ್ತಿ ಒಂದಿಲ್ಲದಿದ್ದಲ್ಲಿ ಜ್ಞಾನಾದಿ ಹನ್ನೆರಡು ಗುಣಗಳಿದ್ದರೂ ಪ್ರಯೋಜನವಿಲ್ಲ ಎಂದು ಪ್ರಹ್ಲಾದ ನರಸಿಂಹನನ್ನು ಸ್ತುತಿಸುತ್ತಾನೆ.

ವಿಪ್ರಾದ್ ದ್ವಿಷಡ್ಗುಣಯುತಾದರವಿಂದನಾಭ
ಪಾದಾರವಿಂದವಿಮುಖಾತ್ ಶ್ವಪಚಂ ವರಿಷ್ಠಮ್।
ಮನ್ಯೇ ತದರ್ಪಿತಮನೋವಚನಾತ್ಮಗೇಹ
ಪ್ರಾಣಃ ಪುನಾತಿ ಸಕಲಂ ನ ತು ಭೂರಿಮಾನಃ ॥ ೧೦ ॥

ಜ್ಞಾನ ಸತ್ಯ ಮುಂತಾದ ಹನ್ನೆರಡು ಗುಣಗಳನ್ನು ಸಂಪಾದಿಸಿಯೂ ಬ್ರಾಹ್ಮಣನು ಒಂದುವೇಳೆ ಪದ್ಮನಾಭನ ಪಾದಪದ್ಮಗಳಿಂದ ವಿಮುಖ

ನಾಗಿದ್ದಲ್ಲಿ, ನಾನೇ ಸ್ವತಂತ್ರನೆಂದು ಬೀಗಿದ್ದಲ್ಲಿ ಅವನಿಗಿಂತಲೂ ಪದ್ಮನಾಭನಲ್ಲಿ ತನ್ನ ಮನಸ್ಸು ಮಾತು ಶರೀರ ಮನೆ ಪ್ರಾಣಗಳೆಲ್ಲವನ್ನೂ ಅರ್ಪಿಸಿರುವ ಅಂತ್ಯಜನೇ ಶ್ರೇಷ್ಠನೆಂದು ನನ್ನ ಅಭಿಪ್ರಾಯವಿದೆ. ಆ ಅಂತ್ಯಜ ಇಡೀ ಜಗತ್ತನ್ನು ಪವಿತ್ರೀಕರಿಸುತ್ತಾನೆ ಹೊರತು ಮಹಾ ಅಹಂಕಾರಿಯಾದ ಆ ಬ್ರಾಹ್ಮಣನಲ್ಲ.

ಇಲ್ಲಿ ಬ್ರಾಹ್ಮಣನ ಹನ್ನೆರಡು ಗುಣಗಳು ಯಾವುವು ಎಂದರೆ ಬೇರೆ ವ್ಯಾಖ್ಯಾನಕಾರರು ಹಿಂದಿನ ಪದ್ಯದಲ್ಲಿ ಹೇಳಿದ ಐಶ್ವರ್ಯ ಕುಲ ರೂಪ ಮುಂತಾದುವು ಎನ್ನುತ್ತಾರೆ. ಅದು ಸರಿಯಲ್ಲ, ಅವು ಬ್ರಾಹ್ಮಣನಲ್ಲಿ ಅವಶ್ಯ ಇರಬೇಕಾದ ಗುಣಗಳಲ್ಲ, ಈ ಅಭಿಪ್ರಾಯದಿಂದಲೆ ಅವರು ಮಹಾಭಾರತ ಉದ್ಯೋಗಪರ್ವ ಸನತ್ಸುಜಾತೀಯದಲ್ಲಿ ಉಕ್ತವಾದ ಬ್ರಾಹ್ಮಣನ ಹನ್ನೆರಡು ಗುಣಗಳನ್ನೂ ಇಟ್ಟುಕೊಳ್ಳಬಹುದೆಂದು ಹೇಳುತ್ತಾರೆ. ವಸ್ತುತಃ ಅವನ್ನೇ ಇಟ್ಟುಕೊಳ್ಳಬೇಕು. ಮಹಾಭಾರತದಲ್ಲಿ ಹೇಳಿದ್ದೇ ಮೊದಲಿಗೆ ಗ್ರಾಹ್ಯ.

ಹಾಗಿದ್ದರೂ ತಿರುಗಿ ಪುರಾಣೋಕ್ತವಾದ ಬೇರೆ ಹನ್ನೆರಡು ಗುಣಗಳನ್ನೂ ಇಟ್ಟುಕೊಳ್ಳಬಹುದು ಎನ್ನುತ್ತಾರೆ-

ಶಮೋ ದಮಸ್ತಪಃ ಶೌಚಂ ಕ್ಷಾಂತ್ಯಾರ್ಜವವಿರಕ್ತತಾಃ ।
ಜ್ಞಾನ ವಿಜ್ಞಾನ ಸಂತೋಷಾಃ ಸತ್ಯಾಸ್ತಿಕ್ಯೇ ದ್ವಿಷಡ್ಗುಣಾಃ ॥

ಆದರೆ ಹೀಗೆ ಸಂಪ್ರದಾಯಜ್ಞರು ಹೇಳುವುದಿಲ್ಲವಾದ್ದರಿಂದ ಗ್ರಾಹ್ಯವಲ್ಲ ಎಂದು ವಿಜಯಧ್ವಜೀಯದಲ್ಲಿ ಹೇಳಿದೆ.

ದ್ವಿಷಡ್ಗುಣಯುತಾತ್-
ಜ್ಞಾನಂ ಚ ಸತ್ಯಂ ಚ ದಮಃ ಶಮಶ್ಚ
ಅಮಾತ್ಸರ್ಯಂ ಹ್ರೀಸ್ತಿತಿಕ್ಷಾಽನಸೂಯಾ ।
ದಾನಂ ಚ ಯಜ್ಞಶ್ಚ ತಪಃ ಶ್ರುತಂ ಚ
ಮಹಾವ್ರತಾ ದ್ವಾದಶ ಬ್ರಾಹ್ಮಣಸ್ಯ ॥ ಇತಿ ಭಾರತೇ ॥

ಬ್ರಾಹ್ಮಣನಲ್ಲಿರಬೇಕಾದ ಹನ್ನೆರಡು ಗುಣಗಳೆಂದರೆ, ಜ್ಞಾನ ಸತ್ಯ ದಮ ಶಮ ಅಮಾತ್ಸರ್ಯ ಹ್ರೀ ತಿತಿಕ್ಷಾ ಅನಸೂಯಾ ದಾನ ಯಜ್ಞ ತಪಸ್ಸು ಮತ್ತು ಶ್ರುತ ಎಂದು ಭಾರತದಲ್ಲಿ ಉಕ್ತವಾಗಿದೆ.

ಪರಾಪರತತ್ವಜ್ಞಾನ, ಯಥಾರ್ಥವಚನ, ಇಂದ್ರಿಯನಿಗ್ರಹ, ಶಾಂತಿ,

ಮಾತ್ಸರ್ಯವಿಲ್ಲದಿರುವುದು, ಅಕಾರ್ಯ ಮಾಡುವುದರಲ್ಲಿ ಲಜ್ಜೆ ದ್ವಂದ್ವ ಸಹಿಷ್ಣುತೆ, ಕೋಪವಿಲ್ಲದಿರುವುದು, ಸತ್ಪಾತ್ರರಿಗೆ ದಾನ, ಬ್ರಹ್ಮಯಜ್ಞಾದಿ ಪಂಚಯಜ್ಞ, ಚಾಂದ್ರಾಯಣಾದಿ ತಪಸ್ಸು, ಸಚ್ಛಾಸ್ತ್ರಶ್ರವಣ-ಇವೇ ಮಹಾಭಾರತ ದಲ್ಲಿ ಹೇಳಿದ ಹನ್ನೆರಡು ಗುಣಗಳು. ಇವು ಹರಿಭಕ್ತಿ ಇದ್ದರೆ ಮಾತ್ರ ಲಭ್ಯ. ಒಂದು ವೇಳೆ ಹರಿಭಕ್ತಿ ಇಲ್ಲದೆ ಲಭ್ಯವಾದರೂ ಅಪ್ರಯೋಜಕವೆನಿಸುತ್ತವೆ.

❖ ❖ ❖

ಶ್ರೀಹರಿ ನೀನೊಬ್ಬನೇ ಸ್ವತಂತ್ರ. ಬೇರೆ ಎಲ್ಲರೂ ನಿನ್ನ ಪ್ರೇರಣೆಗೊಳಗಾಗಿಯೇ ಎಲ್ಲ ಕಾರ್ಯಗಳನ್ನು ಮಾಡುತ್ತಾರೆ ಎಂದು ಪ್ರಹ್ಲಾದ ನರಸಿಂಹನನ್ನು ಕೊಂಡಾಡುತ್ತಾನೆ.

ಯಸ್ಮಿನ್ ಯತೋ ಯರ್ಹಿ ಚ ಯೇನ ಯಸ್ಯ
ಯಸ್ಮೈ ಯಥಾ ಯಮುತ ಯಸ್ತ್ವಪರಃ ಪರೋ ವಾ ।
ಭಾವಂ ಕರೋತಿ ವಿಕರೋತಿ ಪೃಥಕ್‌ಸ್ವಭಾವಃ
ಸಂಚೋದಿತಸ್ತದಖಿಲಂ ಭವತಃ ಸ್ವರೂಪಮ್ ॥ ೨೦ ॥

ನಿನಗಿಂತ ಬೇರೆಯಾದವರು ಬ್ರಹ್ಮಾದಿ ದೇವತೆಗಳಿರಲಿ ಕುಂಬಾರನಂಥ ಮಾನವನಿರಲಿ ಎಲ್ಲರೂ ನಿನ್ನ ಪ್ರೇರಣೆಗೆ ಒಳಗಾದವರೆ. ವಿಲಕ್ಷಣ ಸ್ವಭಾವದವರಾದ ಅವರು ಎಲ್ಲಿ ಯಾವ ಪದಾರ್ಥದಿಂದ ಯಾವ ಸಾಧನದಿಂದ ಯಾವಾಗ ಯಾರ ಸಹಾಯ ಪಡೆದು ಯಾರಿಗಾಗಿ ಹೇಗೆ ಯಾವ ವಸ್ತುವನ್ನು ಉತ್ಪಾದಿಸುವರೋ ಅಥವಾ ಪರಿಣಾಮ ಗೊಳಿಸುವರೋ ಅದೆಲ್ಲವೂ ನಿನಗೇ ಅಧೀನವಾಗಿರುತ್ತದೆ.

ಇಲ್ಲಿ 'ಅಖಿಲಂ ಭವತಃ ಸ್ವರೂಪಂ' ಎಲ್ಲವೂ ನಿನ್ನ ಸ್ವರೂಪವೇ ಆಗಿದೆ ಎಂದು ಹೇಳಿದಂತೆ ಕಾಣುತ್ತದೆ. ಹಾಗೇ ಶ್ರೀಧರ ವ್ಯಾಖ್ಯಾನ ಹೇಳುತ್ತದೆ. ಉಳಿದ ವ್ಯಾಖ್ಯಾನಗಳೂ ಅದನ್ನೇ ಅನುಸರಿಸುತ್ತವೆ, ವೀರರಾಘವ ಭಗವತ್ಪ್ರಸಾದ ವ್ಯಾಖ್ಯಾನಗಳು ಎಲ್ಲವೂ ಭಗವಂತನ ಶರೀರ ಎನ್ನುತ್ತವೆ. ಇವೆರಡೂ ಪ್ರಮಾಣ ವಿರುದ್ಧವಾಗಿವೆ. ಎಲ್ಲವೂ ಭಗವಂತನ ಅಧೀನವಾಗಿರುವುದರಿಂದ ಭಗವಂತನ ಸ್ವರೂಪವೆಂದು ವ್ಯವಹಾರವೆಂದು ಬ್ರಹ್ಮತರ್ಕದಲ್ಲಿ ಹೇಳಿದೆ.

ಕರ್ತೃಕರ್ಮಕ್ರಿಯಾದೀನಾಂ ಸತ್ತಾ ವೃತ್ತಿಸ್ತಥೈವ ಚ ।
ವಿಷ್ಣ್ವಧೀನಂ ಯತಃ ಸರ್ವಂ ಸರ್ವರೂಪಸ್ತದುಚ್ಯತೇ ॥
ಇತಿ ಬ್ರಹ್ಮತರ್ಕೇ ॥

ಕರ್ತೃಕರ್ಮಕ್ರಿಯಾ ಮುಂತಾದವುಗಳ ಸ್ವರೂಪಸತ್ತಾ ಪ್ರವೃತ್ತಿ ಪ್ರಮಿತಿಗಳು ಎಲ್ಲವೂ ವಿಷ್ಣುವಿನ ಅಧೀನವಾಗಿರುವುದರಿಂದ ಅವನು ಸರ್ವರೂಪ, ಸರ್ವವೂ ಅವನ ಸ್ವರೂಪ ಎಂದು ವ್ಯವಹಾರ ಹೊರತು ಎಲ್ಲವೂ ಅವನ ಸ್ವರೂಪವೂ ಅಲ್ಲ, ಶರೀರವೂ ಅಲ್ಲ ಎಂದು ಬ್ರಹ್ಮತರ್ಕದಲ್ಲಿ ಹೇಳಿದೆ.

❖ ❖ ❖

ಮನಸ್ಸು ಹದಿನಾರು ಅರೆಗಳುಳ್ಳ ಸಂಸಾರಚಕ್ರವೆನಿಸುತ್ತದೆ. ನರಸಿಂಹನೇ ಈ ಸಂಸಾರಚಕ್ರದಿಂದ ಜೀವನನ್ನು ಬಿಡುಗಡೆ ಮಾಡಬಲ್ಲನೆಂದು ಪ್ರಹ್ಲಾದ ಸ್ತುತಿಸುತ್ತಾನೆ.

ಮಾಯಾ ಮನಃ ಸೃಜತಿ ಕರ್ಮಮಯಂ ಬಲೀಯಃ
ಕಾಲೇನ ಚೋದಿತಗುಣಾನುಮತೇನ ಪುಂಸಃ ।
ಛಂದೋಮಯಂ ಯದಜಯಾऽರ್ಪಿತಷೋಡಶಾರಂ
ಸಂಸಾರಚಕ್ರಮಜ ಕೋऽತಿತರೇತ್ ತ್ವದನ್ಯಃ ॥ ೨೧ ॥

ಸತ್ವಾದಿ ಗುಣಗಳಿಗೆ ಅನುಗುಣವಾಗಿ ಪ್ರಕೃತಿಯು ಜೀವನಿಗೆ ಪುಣ್ಯಪಾಪಕರ್ಮಕಾರಣವಾದ ಸಂಕಲ್ಪವಿಕಲ್ಪಾತ್ಮಕವಾದ ಬಲಿಷ್ಠವಾದ ಮನಸ್ಸನ್ನು ಸೃಜಿಸುತ್ತದೆ. ಈ ಮನೋ ಮೂಲಕವಾದ ಸಂಸಾರಚಕ್ರಕ್ಕೆ ಹದಿನಾರು ಅರೆಗಳು. ಹತ್ತು ಇಂದ್ರಿಯಗಳು ಪಂಚಪ್ರಾಣಗಳು ಮತ್ತು ಮನಸ್ಸು ಎಂದು. ಜನನ ರಹಿತನಾದ ಹರಿಯೆ, ಇಂಥ ಸಂಸಾರ ಚಕ್ರದಿಂದ ನಮ್ಮನ್ನು ನೀನಲ್ಲದೆ ಇನ್ನಾರು ದಾಟಿಸಬಲ್ಲರು?

ಸಂಸಾರಚಕ್ರದ ಅರೆಗಳು ಯಾವುವು ಎನ್ನುವ ಬಗ್ಗೆ ಬೇರೆ ವ್ಯಾಖ್ಯಾನಕಾರರಲ್ಲಿ ನಿಶ್ಚಿತವಾದ ಅಭಿಪ್ರಾಯಗಳಿಲ್ಲ. ಹದಿನಾರು ವಿಕಾರಗಳು ಅಂದರೆ, ಏಕಾದಶ ಇಂದ್ರಿಯಗಳು ಮತ್ತು ಪಂಚಭೂತಗಳು ಹದಿನಾರು ಅರೆಗಳೆಂದು ಶ್ರೀಧರ ವ್ಯಾಖ್ಯಾನವಿದೆ. ವೀರರಾಘವ ವ್ಯಾಖ್ಯಾನ ಇದನ್ನು ಒಪ್ಪಿ ಭಗವಂತನ ಮಾಯೆ ಈ ಸಂಸಾರಚಕ್ರಕ್ಕೆ ನಾಭಿ ಎನ್ನುತ್ತದೆ. ಅಥವಾ ಮನಸ್ಸು ನಾಭಿ. ಇಂದ್ರಿಯ ಪ್ರಾಣ ಮನಸ್ಸುಗಳ ಹದಿನಾರು ವೃತ್ತಿಗಳೇ ಅರೆಗಳೆಂದೂ ಹೇಳುತ್ತದೆ. ಏಕಾದಶ ಇಂದ್ರಿಯಗಳು ಪಂಚತನ್ಮಾತ್ರೆಗಳು ಇವೇ ಹದಿನಾರು ಅರೆಗಳೆಂದು ಶುಕದೇವ ವ್ಯಾಖ್ಯಾನ ಹೇಳುತ್ತದೆ.

ವಸ್ತುತಃ ಸಂಸಾರಚಕ್ರವೆಂದರೆ ಇಂದ್ರಿಯ ಪ್ರಾಣ ಮನಸ್ಸುಗಳೆಂಬ ಹದಿನಾರು ಅರೆಗಳುಳ್ಳದ್ದು ಎಂದು ಶ್ರೀಮದಾಚಾರ್ಯರು ಹೇಳುತ್ತಿದ್ದಾರೆ.

ಶ್ಲೋಕದ ಪೂರ್ವಾರ್ಧದಲ್ಲಿ 'ಮಾಯಾ ಮನಃ ಸೃಜತಿ' 'ಪ್ರಕೃತಿಯು ಮನಸ್ಸನ್ನು ಸೃಜಿಸುತ್ತದೆ' ಎಂದು ಹೇಳಿ ಉತ್ತರಾರ್ಧದಲ್ಲಿ ಸಂಸಾರ ಚಕ್ರವನ್ನು ನೀನಲ್ಲದೆ ಇನ್ನಾರು ದಾಟಿಸಬಲ್ಲರು? ಅಥವಾ ನಿನ್ನ ಭಕ್ತನಲ್ಲದೆ ಇನ್ನಾರು ದಾಟಬಲ್ಲರು? ಎಂದು ಹೇಳಿದೆ. ಪರಸ್ಪರ ಅನ್ವಯ ಹೇಗೆ? ಎಂಬ ಪ್ರಶ್ನೆ ಬರುತ್ತದೆ. ಶ್ರೀಧರಾದಿ ವ್ಯಾಖ್ಯಾನಗಳಲ್ಲಿ 'ಮನಸ್ಸನ್ನು ಸೃಜಿಸುತ್ತದೆ' ಎಂದರೆ ಮನಃ ಪ್ರಧಾನಕವಾದ ಲಿಂಗಶರೀರವನ್ನು ಸೃಜಿಸುತ್ತದೆ. ಲಿಂಗಶರೀರವೇ ಸಂಸಾರಚಕ್ರ, ಅದರಿಂದ ಮನಆತ್ಮಕ ಸಂಸಾರಚಕ್ರವನ್ನು ಯಾರು ದಾಟಬಲ್ಲರೆಂದು ಅನ್ವಯ ಎಂದಿದೆ. ಆದರೆ ಲಿಂಗಶರೀರ ಇಂದ್ರಿಯ ಪಂಚಭೂತ ಮನಸ್ಸುಗಳಿಂದಾದುದು. ಸಂಸಾರಚಕ್ರ ಇಂದ್ರಿಯ ಪ್ರಾಣ ಮನಸ್ಸುಗಳಿಂದಾದುದು. ಅದರಿಂದ ಎರಡೂ ಒಂದೇ ಅಲ್ಲ.

ವೀರರಾಘವ ವ್ಯಾಖ್ಯಾನದಲ್ಲಿ ಮನಸ್ಸು ಸಂಸಾರಚಕ್ರಕ್ಕೆ ನಾಭಿ ಅಂದರೆ ಆಧಾರ. ಅದರಿಂದ ಪ್ರಕೃತಿ ಮನಸ್ಸನ್ನು ಸೃಜಿಸುತ್ತದೆ. ಆ ಮನಸ್ಸಿನಲ್ಲಿ ಸಂಸಾರಚಕ್ರವಿದೆ ಎಂದು ಅನ್ವಯ ಹೇಳಿದ್ದಾರೆ. ಆದರೆ ಸಂಸಾರಚಕ್ರಕ್ಕೆ ಆಧಾರ ಜೀವಾತ್ಮ, ಹೊರತು ಮನಸ್ಸಲ್ಲ. ಮನಸ್ಸು ಸಂಸಾರಚಕ್ರದಲ್ಲಿ ಪ್ರಧಾನ. ಮನಸ್ಸಿಗೇ ಸಂಸಾರ, ಮನಸ್ಸಿಗೇ ಮೋಕ್ಷ ಎನ್ನುವುದು ಸಾಂಖ್ಯಸಿದ್ಧಾಂತವಾಗುತ್ತದೆ ಹೊರತು ವೇದಾಂತವಾಗುವುದಿಲ್ಲ.

ಅದರಿಂದ ಶ್ಲೋಕದಲ್ಲಿ ಮನ ಆತ್ಮಕವಾದ ಸಂಸಾರ ಚಕ್ರ ಎಂದೇ ಅನ್ವಯ. ಮನಸ್ಸೆಂದರೆ ಲಿಂಗಶರೀರವಲ್ಲ, ಅದರಲ್ಲಿ ಪ್ರಧಾನವಾಗಿರುವ ಮನಸ್ಸು ಸಂಸಾರಚಕ್ರದಲ್ಲಿಯೂ ಪ್ರಧಾನ. ಈ ಅಭಿಪ್ರಾಯದಿಂದ ಮನಸ್ಸೇ ಸಂಸಾರಚಕ್ರವೆಂದು ಗೌಣವಾಗಿ ಅಭೇದವನ್ನು ಇಟ್ಟುಕೊಳ್ಳಬೇಕು.

ದಶೇಂದ್ರಿಯ ಪ್ರಾಣಮನೋಽರಂ ।
ಮೂಲಂ ಮನ ಏವ ಸಂಸಾರಚಕ್ರಂ ।

ದಶೇಂದ್ರಿಯಗಳು ಪಂಚಪ್ರಾಣಗಳು ಮನಸ್ಸು ಸೇರಿ ಸಂಸಾರಚಕ್ರದ ಹದಿನಾರು ಅರೆಗಳಾಗುವುವು.

ಸಂಸಾರಚಕ್ರದಲ್ಲಿ ಮನಸ್ಸು ಪ್ರಧಾನವಾಗಿರುವುದರಿಂದ ಅದೇ ಸಂಸಾರ ಚಕ್ರವೆಂದು ಗೌಣ ಅಭೇದ ವ್ಯವಹಾರ.

❖ ❖ ❖

ರಮಾಬ್ರಹ್ಮರುದ್ರಾದಿಗಳಲ್ಲಿಯೂ ಮಾಡದಿರುವಂಥ ಪರಮಾನುಗ್ರಹವನ್ನು ನನ್ನಲ್ಲಿ ಮಾಡಿರುವಿ ಎಂದು ಪ್ರಹ್ಲಾದ ನರಸಿಂಹನನ್ನು ಸ್ತುತಿಸುತ್ತಾನೆ.

ಕ್ವಾಹಂ ರಜಃಪ್ರಭವ ಈಶ ತಮೋಽಧಿಕೇಽಸ್ಮಿನ್
ಜಾತಃ ಸುರೇತರಕುಲೇ ಕ್ವ ತವಾನುಕಂಪಾ ।
ನ ಬ್ರಹ್ಮಣೋ ನ ತು ಭವಸ್ಯ ನ ವೈ ರಮಾಯಾ
ಯನ್ಮೇಽರ್ಪಿತಃ ಶಿರಸಿ ಪದ್ಮಕರಪ್ರಸಾದಃ ॥ ೨೬ ॥

ಹೇ ಸರ್ವೇಶ್ವರ, ವಿಷಯಾಸಕ್ತಿಯ ಉತ್ಪತ್ತಿಸ್ಥಾನವೆನಿಸಿದ ತಮೋಗುಣವೇ ಹೆಚ್ಚಾಗಿರುವ ಅಸುರಕುಲದಲ್ಲಿ ಹುಟ್ಟಿರುವ ನಾನೆಲ್ಲಿ? ನನ್ನಲ್ಲಿ ನೀನು ತೋರುತ್ತಿರುವ ಈ ಅನುಕಂಪೆ ಎಲ್ಲಿ? ನನ್ನ ತಲೆಯ ಮೇಲೆ ನೀನು ಇರಿಸಿರುವ ನಿನ್ನ ಈ ಕರಕಮಲದ ಅನುಗ್ರಹ ಬ್ರಹ್ಮನ ತಲೆಯ ಮೇಲೂ ಇಲ್ಲ, ಶಿವನ ತಲೆಯ ಮೇಲೂ ಇಲ್ಲ, ರಮಾದೇವಿಯ ತಲೆಯ ಮೇಲೂ ಇಲ್ಲ!

ಅಸುರಜನ ಮೋಹನಕ್ಕಾಗಿ ಹೇಳಿದ ಮಾತು ಇದು. ಇದರ ಆಂತರ್ಯ ಬೇರೆಯೇ ಇದೆ. 'ಇದಾನೀಮೇವ' 'ಈಗ ಮಾತ್ರ' ಎಂದು ಶಬ್ದವನ್ನು ಅಧ್ಯಾಹಾರ ಮಾಡಬೇಕು. 'ರಮಾದಿಗಳ ತಲೆಯ ಮೇಲೆ ನೀನು ಹಸ್ತವನ್ನಿಡುವುದು ಈಗ ಮಾತ್ರವಲ್ಲ, ಸದಾಕಾಲ ನಿನ್ನ ಅನುಗ್ರಹ ಹಸ್ತವನ್ನು ಇಡುತ್ತಿ. ನಾನು ಅಲ್ಪನಾದ್ದರಿಂದ ಈಗ ಮಾತ್ರ ನನ್ನ ತಲೆಯ ಮೇಲೆ ಅನುಗ್ರಹ ಹಸ್ತವನ್ನಿಟ್ಟಿರುವಿ' ಎಂದು ಪ್ರಹ್ಲಾದ ಹೇಳುತ್ತಿರುವುದರಿಂದ ಶ್ಲೋಕದಲ್ಲಿ ಅಸಂಗತಿ ಏನೂ ಇರುವುದಿಲ್ಲ.

ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ, ರಮಾದಿಗಳಲ್ಲಿ ತೋರದಿದ್ದ ಕರುಣೆಯನ್ನು ಪ್ರಹ್ಲಾದನಲ್ಲಿ ತೋರಿದುದು ಅಸಂಭಾವಿತವಲ್ಲ. ಮುಂದಿನ ಶ್ಲೋಕದಲ್ಲಿ ಅವನಿಗೆ ಪಕ್ಷಪಾತ ಧೋರಣೆ ಇಲ್ಲ ಎಂದಿದೆ ಎಂದು. ಆದರೆ ಅತ್ಯುತ್ತಮ ಭಕ್ತರಾದ ರಮಾದಿಗಳಲ್ಲಿ ತೋರದಿದ್ದ ಕರುಣೆಯನ್ನು ಅಲ್ಪಭಕ್ತನಾದ ಪ್ರಹ್ಲಾದನಲ್ಲಿ ತೋರಿದರೆ ಅದೇ ಪಕ್ಷಪಾತ ಧೋರಣೆಯಾಗುತ್ತದೆ!

ರಮಾದೀನಾಂ ಇದಾನೀಂ ನಾರ್ಪಿತಃ ।

'ರಮಾದಿಗಳ ತಲೆಯ ಮೇಲೆ ನೀನು ಅನುಗ್ರಹ ಹಸ್ತವನ್ನಿಡುವುದು ಈಗ ಮಾತ್ರವೇ ಅಲ್ಲ' ಎಂದರ್ಥ.

'ನ ಬ್ರಹ್ಮಣ ಇತ್ಯಾದಿ ತದಾನೀಂತನ ವೃತ್ತಾಪೇಕ್ಷಯಾ'

'ನೀನು ಬ್ರಹ್ಮನ ತಲೆಯ ಮೇಲೆ ಹಸ್ತವಿಟ್ಟಿಲ್ಲ' ಎನ್ನುವುದು ಆ ಕಾಲಕ್ಕೆ ಮಾತ್ರ ಸಂಬಂಧಿಸಿದ ವೃತ್ತಾಂತ ಎಂದು ಜೀವಗೋಸ್ವಾಮಿ ಹೇಳುವುದು ಬಾಧಿತ. ಬ್ರಹ್ಮನ ತಲೆಯ ಮೇಲೆ ಸದಾ ಹರಿಯ ಅನುಗ್ರಹ ಹಸ್ತವಿದೆ. ಏಕೆ ಎಂದರೆ ರಮಾಬ್ರಹ್ಮಾದಿಗಳು ಮಾಡುವ ಭಕ್ತಿ ಅಧಿಕ. ಇದು ಮುಂದಿನ ಶ್ಲೋಕದ ತಾತ್ಪರ್ಯವಚನದಲ್ಲಿ ಸ್ಪಷ್ಟವಾಗುತ್ತದೆ.

❖ ❖ ❖

ಸೇವೆಗೆ ಅನುಗುಣವಾಗಿ ಫಲ ನೀಡುವವನು ನೀನು, ನಿನಗೆ ಭಕ್ತರಲ್ಲಿ ಯಾವುದೇ ಪಕ್ಷಪಾತ ಧೋರಣೆ ಇಲ್ಲ ಎಂದು ಪ್ರಹ್ಲಾದ ನರಸಿಂಹನನ್ನು ಸ್ತುತಿಸುತ್ತಾನೆ.

ನೈಷಾ ಪರಾವರಮತಿರ್ಭವತೋ ನನು ಸ್ಯಾ
ಜ್ಜಂತೋರ್ಯಥಾತ್ಮಸುಹೃದೋ ಜಗತಸ್ತಥಾಪಿ ।
ಸಂಸೇವಯಾ ಸುರತರೋರಿವ ತೇ ಪ್ರಸಾದಃ
ಸೇವಾನುರೂಪ ಉದಯೋ ನ ಪರಾವರತ್ವಾತ್ ॥ ೨೭ ॥

ಇವನು ನನ್ನ ಜಾತಿಯವನು, ಅನುಗ್ರಹಿಸಬೇಕು, ಈತ ಅನ್ಯ ಜಾತಿಯವನು, ಅನುಗ್ರಹಿಸಬಾರದು ಎನ್ನುವ ಪಕ್ಷಪಾತ ಬುದ್ಧಿ ಜಗತ್ತಿನ ಎಲ್ಲ ಜಂತುಗಳಿಗೂ ಆಪ್ತಮಿತ್ರನಾಗಿರುವ ನಿನಗೆ ಇಲ್ಲ. ಸೇವೆಯಿಂದ ಕಲ್ಪವೃಕ್ಷಕ್ಕೆ ಸಂತೋಷ. ಹಾಗೇ ನಿನಗೂ. ನಮ್ಮ ಅಭೀಷ್ಟ ಫಲಸಿದ್ಧಿ ನಿನಗೆ ನಾವು ಮಾಡುವ ಸೇವೆಗೆ ಅನುಗುಣವಾಗಿರುತ್ತದೆ ಹೊರತು ಪಕ್ಷಪಾತದಿಂದ ಅದು ವ್ಯತ್ಯಾಸ ಹೊಂದುವುದಿಲ್ಲ.

ಇಲ್ಲಿ 'ಸ್ವರೂಪಯೋಗ್ಯತೆಯಲ್ಲಿ ಕಡಿಮೆಯೆನಿಸಿದವನು ಹೆಚ್ಚು ಸೇವೆ ಮಾಡಿದ ಮಾತ್ರಕ್ಕೆ ಅವನಿಗೆ ಹೆಚ್ಚು ಫಲವನ್ನು ಭಗವಂತ ಕೊಟ್ಟರೆ ಅದು ಪಕ್ಷಪಾತವಾಗುವುದಿಲ್ಲವೆ? ಸ್ವರೂಪಯೋಗ್ಯತೆಯಲ್ಲಿ ಉತ್ತಮನೆನಿಸಿದವನು ಸೇವೆ ಕಡಿಮೆ ಮಾಡಿದನೆಂದು ಕಡಿಮೆ ಫಲ ನೀಡಿದರೆ ಅದೂ ಪಕ್ಷಪಾತವಾಗುವುದಿಲ್ಲವೆ? ಸೇವೆಗೆ ಅನುರೂಪವಾಗಿ ಫಲ ನೀಡಿದ ಮಾತ್ರಕ್ಕೆ ಪಕ್ಷಪಾತ ದೋಷವಿಲ್ಲ ಎಂದಾಗುವುದು ಹೇಗೆ? ಎಂದು ಪ್ರಶ್ನೆ ಬರುತ್ತದೆ.

ಬೇರೆ ವ್ಯಾಖ್ಯಾನಕಾರರು ಯಾರೂ ಸ್ವರೂಪ ಯೋಗ್ಯತೆ ಎಂಬುದನ್ನು ಒಪ್ಪದಿರುವುದರಿಂದ ಅವರಿಗೆ ಈ ಪ್ರಶ್ನೆ ಬರುವುದಿಲ್ಲ. ಆದರೆ ನಮಗೆ ಬರುತ್ತದೆ.

ಇದಕ್ಕೆ ಸಮಾಧಾನ ಹೀಗೆ, ಸ್ವರೂಪಯೋಗ್ಯತೆ ಅಧಿಕವಿರುವುದಾದರೆ ಅವರಿಂದ ಅಧಿಕ ಸೇವೆಯನ್ನೇ ಮಾಡಿಸಿ ಅಧಿಕ ಫಲವನ್ನೇ ನೀಡುತ್ತಾನೆ. ಸ್ವರೂಪಯೋಗ್ಯತೆ ಅಧಿಕವಿರುವವರು ರಮಾ ಬ್ರಹ್ಮಾದಿಗಳು. ಅವರು ಅಲ್ಪಸೇವೆ ಮಾಡುವುದಿಲ್ಲ. ಯೋಗ್ಯತೆ ಇಲ್ಲದ ಅಸುರರು ಅಧಿಕಸೇವೆ ಮಾಡುವುದೂ ಇಲ್ಲ. ಯೋಗ್ಯತಾನುಸಾರವೇ ಶ್ರೀಹರಿ ಸೇವೆ ಮಾಡಿಸಿಕೊಳ್ಳುತ್ತಾನೆ. ಹೀಗಾಗಿ ರಮಾಬ್ರಹ್ಮಾದಿಗಳಲ್ಲಿ ಹರಿಭಕ್ತಿ ಜ್ಞಾನಾದಿಗಳೂ ಮೋಕ್ಷಸುಖವೂ ಯೋಗ್ಯತಾನುಗುಣವಾಗಿಯೇ ಇರುತ್ತವೆ ಎಂದೂ ವ್ಯತ್ಯಾಸ ಹೊಂದುವುದಿಲ್ಲ.

ರಮಾದೀನಾಮಧಿಕೋದಯೋऽಪಿ ಸೇವಾಧಿಕತ್ವಾದೇವ ।

ಶ್ರೀಬ್ರಹ್ಮಬ್ರಾಹ್ಮೀವೀಂದ್ರಾದಿತ್ರಿಕತತ್‌ಸ್ತ್ರೀಪುರುಷ್ಟುತಾಃ ।
ತದನ್ಯೇ ಚ ಕ್ರಮಾದೇವ ಸರ್ವೇ ಮುಕ್ತೌ ಸೃತಾವಪಿ ।
ಹರಿಭಕ್ತೌ ಚ ತಜ್ಞಾನೇ ಸುಖೇ ಚ ನಿಯಮೇನ ತು ।
ಪರತಃ ಸ್ವತಃ ಕರ್ಮತೋ ವಾ ನ ಕಥಂಚಿತ್ ತದನ್ಯಥಾ ॥

ಇತಿ ಬ್ರಹ್ಮತರ್ಕೇ ॥

ಸ್ವರೂಪಯೋಗ್ಯತೆಯಲ್ಲಿ ಉತ್ತಮರಾದ ರಮಾದಿಗಳಿಗೂ ಕೂಡ ಹರಿಯ ಪರಮಾನುಗ್ರಹವಾದುದು ಅವರ ಸೇವೆ ಅಧಿಕವಾಗಿರುವುದರಿಂದಲೆ.

'ಲಕ್ಷ್ಮೀದೇವಿ, ಬ್ರಹ್ಮವಾಯುಗಳು, ಸರಸ್ವತಿ ಭಾರತಿಯರು. ಗರುಡ ಶೇಷರುದ್ರರು ಸೌಪರ್ಣಿವಾರುಣಿ ಪಾರ್ವತಿಯರು ದೇವೇಂದ್ರ ಕಾಮ ಬೇರೆ ಪದವಿಗಳಲ್ಲಿರುವ ದೇವತೆಗಳು ಎಲ್ಲರೂ ತಮ್ಮ ಯೋಗ್ಯತಾನುಸಾರ ಸದಾ ಸಂಸಾರದಲ್ಲಿಯೂ ಮೋಕ್ಷದಲ್ಲಿಯೂ ತಪ್ಪದೆ ತಾರತಮ್ಯದಿಂದ ಹರಿಭಕ್ತಿ ಜ್ಞಾನ ಹಾಗೂ ಸುಖಗಳಲ್ಲಿ ಉತ್ತಮರೇ ಇರುತ್ತಾರೆ. ಇತರರ ಶಾಪವರಗಳಿಂದಾಗಲಿ ತಮ್ಮ ಸಾಧನೆಗಳಿಂದಲಾಗಲಿ ಯಾವರೀತಿಯಿಂದಲೂ ಆನಂದತಾರತಮ್ಯದಲ್ಲಿ ಹೆಚ್ಚು ಕಡಿಮೆ ಯಾಗುವುದೆಂದಿಲ್ಲ ಎಂದು ಬ್ರಹ್ಮತರ್ಕದಲ್ಲಿ ಹೇಳಿದೆ.

❖❖❖

ಎಲ್ಲವೂ ನಿನ್ನ ಅಧೀನ. ಆದರಿಂದ ಎಲ್ಲವೂ ನೀನೇ ಎಂದು ಶ್ರುತಿಸ್ಮೃತಿಗಳು ನಿನ್ನನ್ನು ಕೊಂಡಾಡುತ್ತವೆ ಎಂದು ಪ್ರಹ್ಲಾದ ನರಸಿಂಹನನ್ನು ಕೊಂಡಾಡುತ್ತಾನೆ.

ತ್ವಂ ವಾ ಇದಂ ಸದಸದೀಶ ಭವಾಂಸ್ತತೋಽನ್ಯೋ
ಮಾಯಾ ಯದಾತ್ಮಪರಬುದ್ಧಿರಿಯಂ ಹ್ಯಪಾರ್ಥಾ ।
ಯದ್ಯಸ್ಯ ಜನ್ಮ ನಿಧನಂ ಸ್ಥಿತಿರೀಕ್ಷಣಂ ಚ
ತದ್ವೈ ತದೇವ ಖಲು ಕಾಲವದುಷ್ಟಿತರ್ವೋಃ ॥ ೩೧ ॥

ಈ ಚೇತನಾಚೇತನಾತ್ಮಕ ಪ್ರಪಂಚವೆಲ್ಲ ನಿನ್ನ ಅಧೀನವಾದ್ದರಿಂದ ಎಲ್ಲವೂ ನೀನೆ 'ಸರ್ವಂ ಖಲ್ವಿದಂ ಬ್ರಹ್ಮ' ಎಂದು ಹೇಳುವುದುಂಟು. ವಸ್ತುತಃ ಎಲ್ಲವೂ ನೀನೆ ಅಲ್ಲ. ನೀನು ಭಿನ್ನನೇ ಆಗಿರುವಿ. ಹೀಗೆ ನೀನೇ ಪ್ರಪಂಚಕ್ಕೆ ಪ್ರಭುವಾಗಿರುವಾಗ ನಾವು ನಮ್ಮನ್ನು ಪ್ರಭುಗಳೆಂದು ತಿಳಿಯುವುದು ಕೇವಲ ಭ್ರಾಂತಿ. ಅದು ಅನರ್ಥಕರ. ಯಾವುದರ ಹುಟ್ಟು ಸಾವು ಉಳಿವು ಅರಿವುಗಳು ಯಾರಿಂದಾಗುವುವೋ ಅದನ್ನು ಅವನೇ ಎನ್ನುತ್ತಾರೆ ಇದಕ್ಕೆ ಉದಾಹರಣೆ-ವೃಕ್ಷ, ವೃಕ್ಷದಾಹಗಳು ದೈವಕಾಲಾಧೀನವಾಗಿರುವುದರಿಂದ ದೈವಕಾಲಗಳೆಂದೇ ಕರೆಯುತ್ತಾರೆ.

ಇಲ್ಲಿ 'ತದ್ವೈ ತದೇವ ಖಲು ಕಾಲವದುಷ್ಟಿತರ್ವೋಃ' ಎಂದು ಕಾಲವನ್ನು ಮಾತ್ರ ಹೇಳಿದಂತೆ ಕಂಡರೂ ಕಾಲಶಬ್ದಕ್ಕೇ ಅದೃಷ್ಟ, ದೈವ ಎಂದು ಕೂಡ ಅರ್ಥವಿಟ್ಟುಕೊಳ್ಳಬೇಕು. ಅಥವಾ ಕಾಲ ಉಪಲಕ್ಷಣ. ದೈವವನ್ನೂ ಇಟ್ಟುಕೊಳ್ಳಬೇಕು. 'ಉಷ ದಾಹೇ' ಎಂದು ಧಾತುವಿರುವುದರಿಂದ 'ಉಷ್ಟಿ' ಎಂದರೆ ವೃಕ್ಷದಾಹ. ಬ್ರಹ್ಮಾಂಡ ಪುರಾಣ ಸತ್ಯಕ್ಷೇತ್ರ ಮಾಹಾತ್ಮ್ಯ ಪ್ರಥಮಾಧ್ಯಾಯ ದಲ್ಲಿ ಒಂದು ಹಲಸಿನ ಮರವನ್ನೂ ತ್ರಿಕಾಲಜ್ಞಾನಿ ಎಂದು ವರ್ಣಿಸಲಾಗಿದೆ. ತಾನು ಫಲಭರಿತವಾಗಿ ಸುಭಿಕ್ಷವನ್ನೂ ಫಲಕೊಡದೆ ಅನಾವೃಷ್ಟಿಯನ್ನೂ ಮೊದಲೇ ಸೂಚಿಸುತ್ತದೆ ಎಂದಿದೆ. ಇಲ್ಲಿ ಮರದ ಅಭಿಮಾನಿದೇವತೆ ತ್ರಿಕಾಲಜ್ಞಾನಿ. ಮರವನ್ನೇ ತ್ರಿಕಾಲಜ್ಞಾನಿ ಎಂದು ದೈವ ಮತ್ತು ವೃಕ್ಷಗಳಿಗೆ ಅಭೇದ ವ್ಯವಹಾರ ಮಾಡಲಾಗಿದೆ. ಇದೇರೀತಿ 'ವಸಂತಕಾಲ ಫಲಪುಷ್ಪಭರಿತವಾಗಿದೆ' ಎಂದರೆ ವಸಂತಕಾಲದ ಅಧೀನವಾಗಿ ಮರಗಿಡಗಳು ಫಲಪುಷ್ಪಭರಿತವಾಗಿವೆ ಎಂಬ ಅಭಿಪ್ರಾಯದಿಂದ ಅಭೇದ ವ್ಯವಹಾರ. ವೃಕ್ಷದಾಹವೂ ದೈವಾಧೀನವಾಗಿ ಆಗಿಹೋದರೆ 'ಅದು ದೈವ' ಎನ್ನುತ್ತೇವೆ. ಕಾಲಾಧೀನವಾಗಿ ಆದರೆ 'ಅದು ಕಾಲ' ಎನ್ನುತ್ತೇವೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರು ಪರಮಾತ್ಮನನ್ನು ಜಗತ್ತಿಗೆ ಉಪಾದಾನ ವೆಂದಿಟ್ಟುಕೊಂಡು ಅಭೇದ ವ್ಯವಹಾರ ಎಂದಿದ್ದಾರೆ. ಉದಾಹರಣೆಗೆ ಬೀಜ ವೃಕ್ಷ ಗಳಿಗೂ ಗಂಧತನ್ಮಾತ್ರೆ ಪೃಥಿವಿಗಳಿಗೂ ಅಭೇದವ್ಯವಹಾರವನ್ನು ತೋರಿಸುತ್ತಾರೆ.

'ವಸುಕಾಲವದಷ್ಟಿತರ್ವೋಃ'

ಎಂದು ಇವರ ಪಾಠ. 'ಅಷ್ಟಿ ಎಂದರೆ ಬೀಜ. ತರು ಎಂದರೆ ಮರ. ವಸು ಎಂದರೆ ವಸ್ತು ಮಾತ್ರವಾದ ಭೂತಸೂಕ್ಷ್ಮ. ಕಾಲ ಎಂದರೆ ಕರಿಬಣ್ಣದ ಮಣ್ಣು ಪೃಥ್ವಿ. ಭೂತಸೂಕ್ಷ್ಮವೇ ಪೃಥ್ವಿಯಾಗುತ್ತದೆ. ಪೃಥ್ವೀಮಯವಾದ ಬೀಜವೇ ಮರವಾಗುತ್ತದೆ. ಹೀಗಾಗಿ ಬೀಜವೃಕ್ಷಗಳು ಭೂತಸೂಕ್ಷ್ಮ ಪೃಥಿವಿಗಳ ರೂಪಾಂತರ ವಾಗಿದ್ದು ಒಂದೇ ಆಗಿವೆ. ಹೀಗೆ ಜಗತ್ತೆಲ್ಲವೂ ಮೂಲಕಾರಣವಾದ ಬ್ರಹ್ಮನ ರೂಪಾಂತರವೇ ಆಗಿದೆ' ಎನ್ನುತ್ತಾರೆ. ಇದಕ್ಕೆ ಬ್ರಹ್ಮಸೂತ್ರದ ತದನನ್ಯತ್ವಾಧಿ ಕರಣವನ್ನು ಆಧಾರವಾಗಿ ತೋರಿಸುತ್ತಾರೆ.

ಆದರೆ ವಸು ಕಾಲ ಅಷ್ಟಿ ಶಬ್ದಗಳಿಗೆ ಇವರು ನೀಡುವ ವಿವರಣೆ ಬಲು ಕ್ಲಿಷ್ಟವಾಗಿದೆ. ವಸುಕಾಲವತ್ ಎಂದರೆ 'ಅಷ್ಟಿತರ್ವೋಃ ವಸುಕಾಲ ಮಾತ್ರತ್ವವತ್' ಎಂದು ತಿರುಗಿ ಅಮುಖ್ಯಾರ್ಥ ಮಾಡುತ್ತಾರೆ. ಬೀಜ ವೃಕ್ಷಗಳಿಗೆ ಭೂತಸೂಕ್ಷ್ಮ ಪೃಥಿವೀಮಾತ್ರತ್ವ ಎಂದರೆ ಅವುಗಳ ಅಭೇದ ಹೇಗೋ ಹಾಗೆ ಎಂದು ವಿವರಣೆ. ಬ್ರಹ್ಮನಿಗೆ ಜಗದುಪಾದಾನತ್ವ ಅಪ್ರಾಮಾಣಿಕವಾದ್ದರಿಂದಲೂ ಈ ವಿವರಣೆ ಗ್ರಾಹ್ಯವಲ್ಲ.

ಯಥಾ ವೃಕ್ಷಶ್ಚ ವೃಕ್ಷದಾಹಶ್ಚ ದೈವಕಾಲಾಧೀನತ್ವಾದ್ ದೈವಂ ಕಾಲಶ್ಚೇತ್ಯುಚ್ಯತೇ ಏವಂ ತ್ವದಧೀನತ್ವಾತ್ ಸರ್ವಸ್ಯ ಸರ್ವಂ ತ್ವಮಿತ್ಯುಚ್ಯಸೇ ಸ್ವತಸ್ತದ್ಭಿನ್ನೋಽಪಿ । ಅಹಂ ಚಾನ್ಯಶ್ಚ ಪರಮೇಶ್ವರ ಏವೇತ್ಯಪಾರ್ಥಾ ಭ್ರಾಂತಿಃ। ತದಧೀನತ್ವಾದೇವ ಸ ಇತ್ಯುಚ್ಯತೇ। ನ ಸ್ವರೂಪತ್ವಾದಿತ್ಯರ್ಥಃ॥

ವೃಕ್ಷವೂ ವೃಕ್ಷದ ದಾಹವೂ ದೈವಾಧೀನ ಕಾಲಾಧೀನವಾಗಿರುವುದರಿಂದ ಅವುಗಳನ್ನು ದೈವವೆ ಕಾಲವೆ ಎಂದು ಅಭೇದ ವ್ಯವಹಾರ ಮಾಡುವುದುಂಟು. ಹಾಗೇ ಎಲ್ಲವೂ ನಿನ್ನ ಅಧೀನವಾಗಿರುವುದು. ಸ್ವತಃ ಎಲ್ಲಕ್ಕಿಂತ ವಿಲಕ್ಷಣನಾಗಿದ್ದರೂ ನೀನೇ ಎಲ್ಲವೂ ಎಂದು ಸ್ತುತಿಸಿಕೊಳ್ಳುವೆ, ನಾನೂ ಇತರರೂ ಪರಮೇಶ್ವರ ಸ್ವರೂಪರೆನ್ನುವುದು ಅನರ್ಥಕಾರಿಯಾದ ಭ್ರಾಂತಿ ಎಂದು ಶ್ಲೋಕದಲ್ಲಿ ಪ್ರಹ್ಲಾದ ಹೇಳುತ್ತಿದ್ದಾನೆ. ಪ್ರಪಂಚ ಪರಮಾತ್ಮನ ಅಧೀನವಾಗಿರುವುದರಿಂದಲೇ ಪರಮಾತ್ಮನೆಂದು ಉಕ್ತವಾಗುತ್ತದೆ ಹೊರತು ಪರಮಾತ್ಮ ಸ್ವರೂಪವಾದ್ದರಿಂದ ಅಲ್ಲ ಎಂದು ತಾತ್ಪರ್ಯ.

❖ ❖ ❖

ಪ್ರಳಯಕಾಲದಲ್ಲಿ ಕಣ್ಣುಮುಚ್ಚಿ ವಟಪತ್ರದಲ್ಲಿ ಶಯನ ಮಾಡಿದವನು ಮೋಕ್ಷದಾಯಕನಾದ ನೀನೆ ಎಂದು ಪ್ರಹ್ಲಾದ ನರಸಿಂಹನನ್ನು ಸ್ತುತಿಸುತ್ತಾನೆ.

ನ್ಯಸ್ಯೇದಮಾತ್ಮನಿ ಜಗದ್ ವಿಲಯಾಂಬುಮಧ್ಯೇ
ಶೇಷಾಸನೋ ನಿಜಸುಖಾನುಭವೋ ನಿರೀಹಃ ।
ಯೋಗೇನ ಮೀಲಿತದೃಗಾತ್ಮನಿ ವೀತನಿದ್ರ
ಸ್ತುರ್ಯಃ ಸ್ಥಿತೋ ನನು ತಮೋ ನ ಗುಣಾಂಶ್ಚ ಭುಂಕ್ಷೇ॥ ೩೨ ॥

ನಿದ್ರೆ ಇಲ್ಲದ ನೀನು ಪ್ರಳಯಕಾಲದಲ್ಲಿ ಈ ಜಗತ್ತನ್ನು ತನ್ನ ಉದರದೊಳಗಿಟ್ಟುಕೊಂಡು ಪ್ರಳಯಸಮುದ್ರದಲ್ಲಿ ಶೇಷಶಾಯಿಯಾಗಿ ಅಂದರೆ, ಕೊನೆಗೆ ಉಳಿದಿರುವ ವಟಪತ್ರದಲ್ಲಿ ಮಲಗಿ ಸ್ವರೂಪಾನಂದ ವನ್ನು ಅನುಭವಿಸುತ್ತ ಸೃಷ್ಟ್ಯಾದಿಕಾರ್ಯಗಳಲ್ಲಿ ಅನಾಸಕ್ತನಾಗಿ ಸ್ವೇಚ್ಛೆಯಿಂದ ಕಣ್ಣು ಮುಚ್ಚಿಕೊಂಡಿರುತ್ತಿ. ಮುಕ್ತನಿಯಾಮಕ ತುರ್ಯ ರೂಪದಿಂದ ಇರುತ್ತಿ. ಪ್ರಳಯದ ಕೊನೆಯಲ್ಲಿ ನಿನ್ನ ವಶದಲ್ಲಿರುವ ಪ್ರಕೃತಿಯನ್ನೂ ಅದರ ಗುಣಗಳನ್ನೂ ಸೃಷ್ಟಿಕಾರ್ಯದಲ್ಲಿ ಪ್ರೇರಿಸುತ್ತಿ.

ಇಲ್ಲಿ ಬೇರೆ ವ್ಯಾಖ್ಯಾನಕಾರರು 'ತುರ್ಯೇ ಸ್ಥಿತಃ' ಎಂದು ಪಾಠವಿಟ್ಟುಕೊಂಡಿದ್ದಾರೆ. 'ತುರ್ಯೇ ಸ್ವರೂಪೇ ಸ್ಥಿತಃ' ತುರ್ಯಸ್ವರೂಪದಲ್ಲಿರುವವನು ಎಂದು ಶ್ರೀಧರ ಮುಂತಾದ ವ್ಯಾಖ್ಯಾನಗಳಲ್ಲಿ ವಿವರಣೆ ನೀಡಿದ್ದಾರೆ. 'ತುರ್ಯೇ ಆತ್ಮನಿ ಸ್ಥಿತಃ' ಎಂದು ಅನ್ವಯಿಸಿ ಆತ್ಮ ಎಂದರೆ ಸ್ವರೂಪವೆಂದಿಟ್ಟುಕೊಂಡು ಅದೇ ಅರ್ಥ ವನ್ನು ವೀರರಾಘವ ಭಗವತ್ಪ್ರಸಾದ ವ್ಯಾಖ್ಯಾನಗಳಲ್ಲಿ ಹೇಳಿದ್ದಾರೆ. ಈ ಪಕ್ಷದಲ್ಲಿ ಸ್ವರೂಪೇ ಎಂದು ಅಧ್ಯಾಹಾರ ಬೇಡ. ಆದರೆ ಸ್ವರೂಪದಲ್ಲಿ ಇರುವುದೆಂದ ರೇನು? ಸ್ವರೂಪದಿಂದ ಇರುವವನು ಎನ್ನಬೇಕು ತಾನೆ? 'ಸ್ವೇ ಮಹಿಮ್ನಿ ಪ್ರತಿಷ್ಠಿತಃ' ಎಂಬಲ್ಲಿ ಅನ್ಯಾಧಾರ ನಿಷೇಧದ ಅಭಿಪ್ರಾಯವಿದೆ. ಇಲ್ಲಿ ಅದು ಇರುತ್ತಿದ್ದರೆ ತುರ್ಯೇ ಎನ್ನದೆ ಸ್ವೇ ಎಂದೇ ಹೇಳಬೇಕಾಗಿತ್ತು. 'ತುರ್ಯಸ್ವರೂಪೇಣ' ಎನ್ನುವ ಅಭಿಪ್ರಾಯವಿರುತ್ತಿದ್ದರೆ 'ತುರ್ಯಃ ಸ್ಥಿತಃ' ಎಂದೇ ಹೇಳಬೇಕಾಗಿತ್ತು. ಈ ಪಕ್ಷದಲ್ಲಿ ಸ್ಥಿತಶಬ್ದ ವ್ಯರ್ಥವಲ್ಲ. ಪ್ರಳಯಕಾಲದಲ್ಲಿ ತುರ್ಯರೂಪದಿಂದ ಇದ್ದನೆಂದು ಹೇಳುವ ಅಭಿಪ್ರಾಯವಿದೆ. ಹೀಗಾಗಿ ತುರ್ಯಸ್ಥಿತಃ ಎಂದೇ ಸರಿಯಾದ ಪಾಠ.

ತುರ್ಯಃ ಸ್ಥಿತಃ ।

'ತುರ್ಯಸ್ಥಿತಃ' ಎಂದೇ ಪಾಠ. 'ತುರ್ಯಃ ಸ್ಥಿತಃ' ಎಂದರ್ಥ.

❖ ❖ ❖

ಪ್ರಳಯ ಸಮುದ್ರದಲ್ಲಿ ಮಲಗಿದ್ದ ನೀನು ಯೋಗನಿದ್ರೆಯನ್ನು ಬಿಟ್ಟು ಎದ್ದಾಗ ನಿನ್ನ ನಾಭಿಯಿಂದ ಮಹಾಕಮಲ ವ್ಯಕ್ತವಾಯಿತೆಂದು ಪ್ರಹ್ಲಾದ ನರಸಿಂಹನನ್ನು ಸ್ತುತಿಸುತ್ತಾನೆ.

ತಸ್ಯೈವ ತೇ ವಪುರಿದಂ ನಿಜಕಾಲಶಕ್ತ್ಯಾ
ಸಂಚೋದಿತಂ ಪ್ರಕೃತಿಧರ್ಮಿಣ ಆತ್ಮಗೂಢಮ್ ।
ಅಂಭಸ್ಯನಂತಶಯನಾದ್ ವಿರಮತ್ಸಮಾಧೇ
ರ್ನಾಭೇರಭೂತ್ ಸ್ವಕಣಿಕಾದ್ ವಟವನ್ಮಹಾಬ್ಜಮ್ ॥ ೩೩ ॥

ತತ್ಸಂಭವಃ ಕವಿರತೋಽನ್ಯದಪಶ್ಯಮಾನ
ಸ್ತ್ವಾಂ ಬೀಜಮಾತ್ಮನಿ ತತಂ ಸ ಬಹಿರ್ವಿಚಿನ್ವನ್ ।
ನಾವಿಂದದಬ್ದಶತಮಪ್ಸು ನಿಮಜ್ಜಮಾನೋ
ಜಾತೇಽಂಕುರೇ ಕಥಮಿಹೋಪಲಭೇತ ಬೀಜಮ್ ॥ ೩೪ ॥

ಪ್ರಳಯಸಮುದ್ರದಲ್ಲಿ ಮಲಗಿದ್ದ ನೀನು ಯೋಗನಿದ್ರೆಯನ್ನು ಬಿಟ್ಟು ಎದ್ದಾಗ ಪ್ರಕೃತ್ಯಾದಿ ತತ್ವಗಳನ್ನು ಉದರದಲ್ಲಿ ಇರಿಸಿಕೊಂಡಿದ್ದ ನಿನ್ನೊಳಗೆ ಸೂಕ್ಷ್ಮರೂಪದಿಂದ ಇದ್ದ ಮಹಾಕಮಲ ನಿನ್ನ ಅಧೀನವಾದ ಕಾಲಶಕ್ತಿಯಿಂದ ಪ್ರೇರಿತವಾಗಿ ತನ್ನ ಬೀಜಕ್ಕೆ ಆಧಾರವಾದ ನಿನ್ನ ನಾಭಿಯಿಂದ ವ್ಯಕ್ತವಾಯಿತು, ವಟಬೀಜದಿಂದ ವಟವೃಕ್ಷ ವ್ಯಕ್ತವಾಗುವಂತೆ. ಆ ನಾಭಿಕಮಲ ನಿನಗೆ ಶರೀರದಂತಿದೆ.

ಆ ನಾಭಿಕಮಲದಿಂದ ಜನಿಸಿದ ಸರ್ವಜ್ಞನಾದ ಚತುರ್ಮುಖನು ಪದ್ಮಕ್ಕಿಂತ ಬೇರೇನನ್ನೂ ಕಾಣದೆ ನೂರುವರ್ಷಕಾಲ ನೀರಲ್ಲಿ ಮುಳುಗಿ ಹಿಂದೆ ಬೀಜದಲ್ಲಿದ್ದ ನಿನ್ನನ್ನು ಈಗ ಪದ್ಮದಿಂದ ಹೊರಗೆ ಎಲ್ಲೆಡೆ ಹುಡುಕಿ ಕಾಣಲಾರದೆ ಹೋದ. ಆಗ ನೀನು ನಿನ್ನ ಶರೀರದಂತಿರುವ ಕಮಲದೊಳಗೇ ಇದ್ದೆ. ಬೀಜದಿಂದ ಅಂಕುರ ಜನಿಸಿದ ಮೇಲೆ ಹಿಂದೆ ಬೀಜದಲ್ಲಿದ್ದ ನಿನ್ನನ್ನು ಈಗ ಅಂಕುರದಲ್ಲಿಯೇ ಕಾಣಬೇಕು ಹೊರತು ಬೇರೆ ಕಡೆ ಹೇಗೆ ಕಾಣಲಾದೀತು?

ಇಲ್ಲಿ ಮೇಲುನೋಟಕ್ಕೆ ಜಗತ್ತು ಪರಮಾತ್ಮನ ಶರೀರವೆಂದೂ ಜಗತ್ತೆಂಬ ವೃಕ್ಷಕ್ಕೆ ಬೀಜರೂಪ ಉಪಾದಾನ ಪರಮಾತ್ಮನೆಂದೂ ಹೇಳಿದಂತೆ ಕಾಣುತ್ತದೆ. ಹಾಗೇ ಬೇರೆ ವ್ಯಾಖ್ಯಾನಕಾರರು ವ್ಯಾಖ್ಯಾನ ಮಾಡಿದ್ದಾರೆ. ವಸ್ತುತಃ ಜಗತ್ತು ಶರೀರವೇ

ಅಲ್ಲ. ಮತ್ತು ಪರಮಾತ್ಮ ಜಗತ್ತಿಗೆ ವ್ಯಂಜಕನಾಗಿ ಬೀಜ ಎನಿಸುತ್ತಾನೆ ಹೊರತು ಉಪಾದಾನ ಕಾರಣವಲ್ಲ. ಇದು ಬ್ರಹ್ಮತರ್ಕದಲ್ಲಿ ಸ್ಪಷ್ಟವಾಗಿ ಉಕ್ತವಾಗಿದೆ.

ಜಗದಾತ್ಮಕಮಬ್ಜಮಪಿ ಭಗವದ್ವಶತ್ವಾತ್ ತದ್ವಪುಃ।
ಸ್ಥಾವರಾಣಾಂ ತು ಸರ್ವೇಷಾಂ ದೇವತಾ ಯಾऽಭಿಮಾನಿನೀ।
ವಿಶೇಷಾದ್ ವಟಬೀಜೇ ಚ ಸಾऽಶ್ವತ್ಥೇ ಚ ವ್ಯವಸ್ಥಿತಾ।
ಅದೃಶ್ಯಾ ಕಣಿಕಾ ನಾಮ ಸಾ ವೃಕ್ಷಾನ್ ವ್ಯಂಜಯತ್ಯಪಿ ।
ಅತೋ ಬೀಜಮಿತಿ ಪ್ರೋಕ್ತಾ ಸಾ ಜಾತೇऽಪ್ಯಂಕುರೇ ಸ್ಥಿತಾ।
ಏವಂ ಹರಿಃ ಕಾರಣೇಷು ಸ್ಥಿತಃ ಕಾರ್ಯಜನೇರನು।
ಕಾರ್ಯೇಷ್ವನುಪ್ರವಿಷ್ಟಃ ಸನ್ ಪ್ರಥಮಂ ತತ್ರ ದೃಶ್ಯತೇ। ಇತಿ ಚ ॥

ನಾಬಿಕಮಲ ಜಗದಾತ್ಮಕವಾಗಿದ್ದು ಜಡವಾಗಿರುವುದರಿಂದ, ಭಗವಂತನ ವಶವಾಗಿರುವುದರಿಂದ ಅವನ ಶರೀರವೆಂದು ವ್ಯವಹಾರ ಮಾತ್ರ ಹೊರತು ಅದು ಭಗವಂತನ ಶರೀರವಲ್ಲ.

ಬ್ರಹ್ಮತರ್ಕದಲ್ಲಿ ಹೀಗೆ ಹೇಳಿದೆ-

ಎಲ್ಲ ಸ್ಥಾವರಗಳಿಗೂ ಅಭಿಮಾನಿನಿಯಾದ ದೇವತೆ ಇದ್ದಾಳೆ. ಅವಳು ವಿಶೇಷವಾಗಿ ವಟಬೀಜದಲ್ಲಿಯೂ ಅಶ್ವತ್ಥಬೀಜದಲ್ಲಿಯೂ ಇರುತ್ತಾಳೆ. ಅದೃಶ್ಯಳಾಗಿ ಇರುತ್ತಾಳೆ. ಅವಳ ಹೆಸರು ಕಣಿಕಾ ಎಂದು. ಬೀಜವೆಂದೂ ಅವಳನ್ನು ಕರೆಯುತ್ತಾರೆ. ಏಕೆಂದರೆ ಅವಳು ಬೀಜದಿಂದ ವೃಕ್ಷಗಳನ್ನು ವ್ಯಕ್ತಮಾಡುತ್ತಾಳೆ. ಮೊದಲಿಗೆ ಬೀಜದಲ್ಲಿ ಅವಳಿರುವುದು ಲೋಕಕ್ಕೆ ತಿಳಿಯದಿದ್ದರೂ ಬೀಜ ಮೊಳೆತಾಗ ಆ ಮೊಳಕೆಯಲ್ಲಿ ಇದ್ದು ಅದರ ಬೆಳವಣಿಗೆಯಿಂದಾಗಿ ಅದಕ್ಕೆ ಕಾರಣಳಾಗಿರುವ ಅವಳು ಅನುಮಾನದಿಂದ ತಿಳಿದುಬರುತ್ತಾಳೆ. ಹಾಗೇ ಶ್ರೀಹರಿಯೂ ಮೊದಲಿಗೆ ಜಗತ್ಕಾರಣವಾದ ಪ್ರಕೃತಿಯಲ್ಲಿ ಇದ್ದು ಪ್ರಕೃತಿಯಿಂದ ಜಗತ್ತು ಜನಿಸುವಾಗ ಆ ಜಗತ್ತಿನಲ್ಲಿ ನಿಯಾಮಕನಾಗಿ ಪ್ರವೇಶಿಸಿರುತ್ತಾನೆ. ಜಗತ್ತಿನ ಬೆಳವಣಿಗೆ ಮುಂತಾದವುಗಳಿಂದ ಅದಕ್ಕೆ ಕಾರಣನಾಗಿರುವ ಹರಿ ಅನುಮಾನದಿಂದ ವಿಶೇಷವಾಗಿ ತಿಳಿದುಬರುತ್ತಾನೆ' ಎಂದು.

ಬೀಜದಲ್ಲಿ ಅಂತರ್ಗತಳಾದ ಕಣಿಕಾದೇವಿಯಿಂದ ಅಂಕುರ ಜನಿಸಿದ ಮಾತ್ರಕ್ಕೆ ದೇವಿ ಅಂಕುರಕ್ಕೆ ಉಪಾದಾನಳಲ್ಲ. ಹಾಗೇ ಭಗವಂತನ ನಾಭಿಯಿಂದ

ಪ್ರಕೃತಿಯ ಪರಿಣಾಮವಾಗಿ ಕಮಲ ಜನಿಸಿರುತ್ತದೆ. ಅದರಿಂದ ಹರಿ ನಾಭಿಕಮಲಕ್ಕೆ ಉಪಾದಾನವಲ್ಲ. ವೃಕ್ಷಕ್ಕೆ ಕಾಣಿಕಾದೇವಿಯಂತೆ ವ್ಯಂಜಕನಾದ್ದರಿಂದ ಜಗತ್ತಿಗೆ ಬೀಜನೆನಿಸುತ್ತಾನೆ.

ಭಾಗವತ ಶ್ಲೋಕದಲ್ಲಿ ಕಣಿಕ, ಬೀಜ ಶಬ್ದಗಳು ಬೀಜದಲ್ಲಿರುವ ವೃಕ್ಷಾಭಿಮಾನಿ ದೇವತೆಯ ಹೆಸರುಗಳೆಂಬುದನ್ನು ಗಮನಿಸಿದಾಗ ಬೇರೆ ವ್ಯಾಖ್ಯಾನಕಾರರು ನೀಡುವ ವಿವರಣೆಗಳು ಸರಿಯಲ್ಲವೆನ್ನುವುದು ಸ್ಪಷ್ಟವಾಗುವುದು.

❖ ❖ ❖

ಬ್ರಹ್ಮದೇವರು ಕಮಲದಲ್ಲಿ ಕುಳಿತು ತಪಸ್ಸು ಮಾಡಿ ತಮ್ಮೊಳಗೇ ಭಗವಂತನ ದರ್ಶನ ಪಡೆದರು. ಅವರು ತಮ್ಮೊಳಗೆ ಕಂಡ ಭಗವದ್ರೂಪವೇ ಜಗದ್ವ್ಯಾಪಿಯಾಗಿದ್ದಿತು. ಜ್ಞಾನಾನಂದ ಸ್ವರೂಪವಾಗಿದ್ದಿತು ಎಂದು ಪ್ರಹ್ಲಾದ ನರಸಿಂಹನನ್ನು ಸ್ತುತಿಸುತ್ತಾನೆ.

ಸ ತ್ವಾತ್ಮಯೋನಿರತಿವಿಸ್ಮಿತ ಆಶ್ರಿತೋಽಬ್ಜಂ
ಕಾಲೇನ ತೀವ್ರತಪಸಾ ಪರಿಶುದ್ಧಭಾವಃ ।
ತ್ವಾಮಾತ್ಮನೀಶ ಭುವಿ ಗಂಧಮಿವಾತಿಸೂಕ್ಷ್ಮಂ
ಭೂತೇಂದ್ರಿಯಾಶಯಮಯೇ ವಿತತಂ ದದರ್ಶ ॥ ೩೫ ॥

ಏವಂ ಸಹಸ್ರವದನಾಂಘ್ರಿಶಿರಃಕರೋರು
ನಾಸಾಸ್ಯಕರ್ಣನಯನಾಭರಣಾಯುಧಾಢ್ಯಮ್ ।
ಮಾಯಾಮಯಂ ಸದುಪಲಕ್ಷಣಸನ್ನಿವೇಶಂ
ದೃಷ್ಟ್ವಾ ಮಹಾಪುರುಷಮಾಪ ಮುದಂ ವಿರಿಂಚಃ ॥ ೩೬ ॥

ನೀನು ಏಕೆ ಕಾಣುತ್ತಿಲ್ಲವೆಂದು ಅತ್ಯಂತ ಆಶ್ಚರ್ಯದಿಂದ ಚಕಿತನಾದ ಆ ಬ್ರಹ್ಮ ಅದೇ ಕಮಲದಲ್ಲಿ ಕುಳಿತು ಬಹುಕಾಲ ತೀವ್ರ ತಪಗೈದು ಶುದ್ಧಾಂತಃಕರಣನಾಗಿ ನಿನಗೆ ದೇಹದಂತಿರುವ ಪಂಚಭೂತ ಇಂದ್ರಿಯ ಮನಸ್ತತ್ವಗಳಲ್ಲಿ ಪೃಥಿವಿಯಲ್ಲಿ ಗಂಧದಂತೆ ಅತಿಸೂಕ್ಷ್ಮರೂಪದಿಂದ ವ್ಯಾಪಿಸಿದ್ದ ನಿನ್ನನ್ನು ಕಂಡುಕೊಂಡ.

ನೀನು ಸಾವಿರಾರು ಮುಖ ಪಾದ ಶಿರಸ್ಸು ಕೈ ತೊಡೆ ಮೂಗು ಬಾಯಿ ಕಿವಿ ಕಣ್ಣು ಆಭರಣ ಆಯುಧಗಳಿಂದ ಕೂಡಿದವನು. ಜ್ಞಾನಸ್ವರೂಪಿ ಆನಂದ

ಓಜ ಬಲ ಮುಂತಾದ ಉತ್ತಮ ಲಕ್ಷಣಗಳ ಸಮೂಹರೂಪನಾಗಿರುವಿ. ಇಂಥ ಪರಮಪುರುಷನಾದ ನಿನ್ನನ್ನು ಕಂಡು ಬ್ರಹ್ಮ ಆನಂದಹೊಂದಿದ.

ಇಲ್ಲಿ 'ಭುವಿ ಗಂಧಮಿವಾತಿಸೂಕ್ಷ್ಮಂ' ಎಂದರೆ ಪೃಥಿವಿಯಲ್ಲಿ ಅದಕ್ಕೆ ಕಾರಣವಾದ ಗಂಧವೆಂಬ ಭೂತಸೂಕ್ಷ್ಮ ವ್ಯಾಪಿಸಿರುವಂತೆ ಪ್ರಪಂಚದಲ್ಲಿ ಅದರ ಆರೋಪಕ್ಕೆ ಅಧಿಷ್ಠಾನವಾದ ಸದ್ರೂಪಪರಬ್ರಹ್ಮ ವ್ಯಾಪಿಸಿರುತ್ತಾನೆ. 'ಮಾಯಾಮಯಂ ಸದುಪಲಕ್ಷಿತ ಸನ್ನಿವೇಶಂ' ಎಂದರೆ ಮಾಯೋಪಾಧಿಕ ಈಶ್ವರನಿಗೆ ಸತ್ತಾದ ಪ್ರಪಂಚವೇ ಅವಯವರೂಪದಿಂದ ಇದೆ ಎಂದೂ ಶ್ರೀಧರ ವ್ಯಾಖ್ಯಾನವಿದೆ.

ಬ್ರಹ್ಮತರ್ಕದಲ್ಲಿ ಬೇರೆಯೇ ವಿವರಣೆ ಇದೆ. ಗಂಧವೆಂದರೆ ಪೃಥಿವ್ಯಭಿಮಾನಿಯಾದ ಗಂಧ ಎಂಬ ದೇವತೆ. ಅವಳು ಪೃಥಿವಿಯಲ್ಲಿ ವ್ಯಾಪಿಸಿದ್ದಾಳೆ. ಹಾಗೇ ಪರಮಾತ್ಮ ನಿಯಾಮಕನಾಗಿ ಜಗತ್ತನ್ನು ವ್ಯಾಪಿಸಿದ್ದಾನೆ. ಅಂಥ ವ್ಯಾಪ್ತರೂಪವನ್ನು ಬ್ರಹ್ಮದೇವರು ತಪಸ್ಸಿನಿಂದ ಕಂಡುಕೊಂಡರು ಎಂದು. ಅದರಿಂದ ಪರಮಾತ್ಮ ಪ್ರಪಂಚಕ್ಕೆ ನಿಯಾಮಕನೇ ಹೊರತು ಉಪಾದಾನವಲ್ಲ.

'ಮಾಯಾಮಯಂ' ಎಂಬಲ್ಲಿ ಮಾಯೆ ಎಂದರೆ ಅವಿದ್ಯೆಯಲ್ಲ.

'ಮಾಯಾ ವಯುನಂ ಜ್ಞಾನಂ'

'ಮಾಯೇತ್ಯುಕ್ತಾ ಪ್ರಕೃಷ್ಟತ್ವಾತ್ ಪ್ರಕೃಷ್ಟಂ ಹಿ ಮಯಾಭಿಧಂ

ವಿಷ್ಣೋಃ ಪ್ರಜ್ಞಪ್ತಿರೇವೈಕಾ ।'

ಇತ್ಯಾದಿ ಪ್ರಮಾಣಗಳಿಂದ ವಿಷ್ಣುಸ್ವರೂಪವಾದ ಜ್ಞಾನ ವಿವಕ್ಷಿತವಾಗಿದೆ. ಮಾಯಾಮಯ ಎಂದರೆ ಜ್ಞಾನಸ್ವರೂಪ. ಸದುಪಲಕ್ಷಣ ಸನ್ನಿವೇಶಂ ಎಂಬಲ್ಲಿ ಸದ್ ಎಂದರೆ

ಅಥ ಕಸ್ಮಾದುಚ್ಯತೇ ಸದಿತಿ । ಸಂತೋ ಹ್ಯಸ್ಮಿನ್ ಆನಂದ ಓಜೋ ಬಲಂ ।

ಎಂದು ಶ್ರುತ್ಯನುಸಾರವಾಗಿ ಆನಂದ ಓಜ ಬಲ ಮುಂತಾದ ಸದ್ಗುಣಗಳೇ ಮುಖ್ಯ ಲಕ್ಷಣಸಮೂಹವಾಗಿ ಉಳ್ಳವನು ಎಂದು ವ್ಯಾಖ್ಯಾನಿಸಲು ಶಕ್ಯವಿದೆ.

ಹಿಂದಿನ ಶ್ಲೋಕದಲ್ಲಿ 'ವಿತತಂ ದದರ್ಶ' ಎಂದು ಹೇಳಿ ಈ ಶ್ಲೋಕದಲ್ಲಿ 'ದೃಷ್ಟ್ವಾಮುದಮಾಪ' ಎಂದು ಹಿಂದೆ ಹೇಳಿದ ರೂಪದ ದರ್ಶನವನ್ನೇ ತಿರುಗಿ ಅನುವಾದ ಮಾಡಿ ಅದು ಮುದ ನೀಡಿತೆಂದು ವರ್ಣಿಸುತ್ತಿರುವುದರಿಂದ ಹಿಂದೆ ಹೇಳಿದ ರೂಪ ಬ್ರಹ್ಮತರ್ಕದ ವ್ಯಾಖ್ಯಾನಾನುಸಾರ ವ್ಯಾಪ್ತರೂಪವೆಂದ ಮೇಲೆ ಈ

ಶ್ಲೋಕದಲ್ಲಿ ಹೇಳುವುದೂ ಅದೇ ರೂಪವನ್ನು. ಹೀಗಾಗಿ ಶ್ರೀಧರ ವ್ಯಾಖ್ಯಾನದಲ್ಲಿ ಹೇಳಿದಂತೆ ವ್ಯಾಖ್ಯಾನ ಮಾಡುವುದು ಸರಿಯಲ್ಲ. 'ಮಾಯೇತ್ಯುಕ್ತಾ ಪ್ರಕೃಷ್ಟತ್ವಾತ್' ಎಂದು ಮುಂತಾದ ಪ್ರಮಾಣಗಳಿಗೆ ಅನುಸಾರವಾಗಿಯೇ ವ್ಯಾಖ್ಯಾನ ಮಾಡಬೇಕು.

ಶ್ರೀಧರವ್ಯಾಖ್ಯಾನದಲ್ಲಿ ಬ್ರಹ್ಮದೇವರು ಸದ್ರೂಪ ಪರಬ್ರಹ್ಮನನ್ನೂ ಮಾಯೋಪಾಧಿಕನಾದ ಈಶ್ವರನನ್ನೂ ಕಂಡರೆಂದು ಹೇಳುವುದೂ ಕೂಡುವುದಿಲ್ಲ. ಏಕೆಂದರೆ ಕಮಲಕ್ಕೆ ಬೀಜ ಅಂದರೆ ಉಪಾದಾನನಾದ ಈಶ್ವರನನ್ನು ಕಾಣದೆ 'ತಪ' ಎಂದು ಎರಡಕ್ಷರ ಕೇಳಿ ತಪಗೈದು, ಕಮಲದ ಆರೋಪಾಧಿಷ್ಠಾನವನ್ನು ಕಂಡನೆಂದರೆ ಅಸಂಗತವಾಗುವುದು. ಈಶ್ವರನನ್ನು ಕಾಣುವುದೂ, ಇನ್ನೂ ಪ್ರಪಂಚ ಸೃಷ್ಟಿಯಾಗದಿರುವಾಗ, 'ಪಾತಾಲಮೇತಸ್ಯಹಿ ಪಾದಮೂಲಂ' ಎಂದು ಮುಂತಾಗಿ ವರ್ಣಿತವಾದ ವಿರಾಡ್ರೂಪ ಅಸ್ತಿತ್ವಕ್ಕೇ ಬಾರದಿರುವಾಗ, ಅಸಂಭವ. 'ಸತಾ ಪ್ರಪಂಚೇನ ಉಪಲಕ್ಷಿತಃ ಸನ್ನಿವೇಶಃ ಪಾದಾದಿರಚನಾ ಯಸ್ಯ' ಎಂದು ಶ್ರೀಧರ ವ್ಯಾಖ್ಯಾನ ಹೇಳಿದೆ. ನಮ್ಮ ವ್ಯಾಖ್ಯಾನದಲ್ಲಿ ಸಹಸ್ರವದನಾದಿ ಅವಯವಗಳು

ಸಚ್ಚಿದಾನಂದಮಯ ಸ್ವರೂಪಭೂತವೆ ಹೊರತು ಪ್ರಪಂಚರೂಪವಲ್ಲ.

ಗಂಧಾಖ್ಯಾ ದೇವತಾ ಯದ್ವತ್ ಪೃಥಿವೀಂ ವ್ಯಾಪ್ಯ ತಿಷ್ಠತಿ ।
ಏವಂ ವ್ಯಾಪ್ತಂ ಜಗದ್ ವಿಷ್ಣುಂ ಬ್ರಹ್ಮಾऽऽತ್ಮಸ್ಥಂ ದದರ್ಶ ಹ ।
ಇತಿ ಚ ॥

'ಗಂಧ ಎಂಬ ದೇವತೆ ಪೃಥಿವಿಯಲ್ಲಿ ವ್ಯಾಪಿಸಿರುವಂತೆ ಜಗತ್ತನ್ನು ವ್ಯಾಪಿಸಿದ ವಿಷ್ಣುವನ್ನು ಬ್ರಹ್ಮದೇವರು ತಮ್ಮ ಹೃದಯದೊಳಗೆ ಕಂಡರು' ಎಂದು ಬ್ರಹ್ಮತರ್ಕದಲ್ಲಿ ಉಕ್ತವಾಗಿದೆ.

ಮಾಯಾಮಯಂ ಜ್ಞಾನಸ್ವರೂಪಂ । ಸದುಪಲಕ್ಷಣಸನ್ನಿವೇಶಂ
ಆನಂದಾದಿ ಲಕ್ಷಣಸಮುದಾಯರೂಪಂ ।

'ಮಾಯಾಮಯ' ಎಂದರೆ ಜ್ಞಾನಸ್ವರೂಪ ಎಂದರ್ಥ. 'ಸದುಪಲಕ್ಷಣ ಸನ್ನಿವೇಶಂ' ಎಂದರೆ ಆನಂದಾದಿಲಕ್ಷಣ ಸಮುದಾಯರೂಪ ಎಂದರ್ಥ.

❖ ❖ ❖

ತನ್ನನ್ನು ನಂಬಿರುವ ದೈತ್ಯಬಾಲಕರನ್ನು ಬಿಟ್ಟು ತಾನು ಒಬ್ಬನೇ ಮೋಕ್ಷ ಹೊಂದಲು ಬಯಸಲಾರೆ ಎಂದು ಪ್ರಹ್ಲಾದ ನರಸಿಂಹನಲ್ಲಿ ಹೇಳಿಕೊಳ್ಳುತ್ತಾನೆ.

ಪ್ರಾಯೇಣ ದೇವಮುನಯಃ ಸ್ವವಿಮುಕ್ತಿಕಾಮಾ
ಮೌನಂ ಚರಂತಿ ವಿಜನೇ ನ ಪರಾರ್ಥನಿಷ್ಠಾಃ ।
ನೈತಾನ್ ವಿಹಾಯ ಕೃಪಣಾನ್ ವಿಮುಮುಕ್ಷ ಏಕೋ
ನಾನ್ಯಂ ತ್ವದಸ್ಯ ಶರಣಂ ಭ್ರಮತೋಽನುಪಶ್ಯೇ ॥ ೪೪ ॥

ತಾತ್ವಿಕ ದೇವತೆಗಳೂ ಮುನಿಗಳೂ ಹೆಚ್ಚಾಗಿ ತಮ್ಮನ್ನು ನಂಬಿದವರಿಗೆ ಮೋಕ್ಷವನ್ನು ಬಯಸಿಯೇ ಏಕಾಂತದಲ್ಲಿ ಮೌನವ್ರತವನ್ನು ಆಚರಿಸುತ್ತಾರೆ. ಇತರರ ಮೋಕ್ಷ ಸಾಧನೆಯಲ್ಲಿ ಅವರಿಗೆ ನಿಷ್ಠೆ ಇರುವುದಿಲ್ಲ. ನಾನೂ ನನ್ನನ್ನು ನಂಬಿದ ದೀನರಾದ ಈ ಅಸುರ ಬಾಲಕರನ್ನು ಬಿಟ್ಟು ಒಬ್ಬನೇ ಮೋಕ್ಷ ಹೊಂದಲು ಬಯಸುವುದಿಲ್ಲ. ಸಂಸಾರದ ಗೊಂಡಾರಣ್ಯದಲ್ಲಿ ಸುತ್ತುತ್ತಿರುವ ಅವರಿಗೂ ನೀನೇ ಗತಿ ಹೊರತು ಬೇರಾರನ್ನೂ ನಾ ಕಾಣೆ. ಅದರಿಂದ ನಿನ್ನನ್ನೇ ಬೇಡುತ್ತೇನೆ.

'ನಾರದಾದಿ ಕೆಲವು ಮುನಿಗಳನ್ನು ಹೊರತುಪಡಿಸಿದರೆ ಬೇರೆ ಎಲ್ಲ ಮುನಿಗಳೂ ಕೇವಲ ತಮ್ಮ ಮೋಕ್ಷಕ್ಕಾಗಿ ಏಕಾಂತದಲ್ಲಿ ಮೌನವ್ರತ ಮಾಡುತ್ತಾರೆ. ನಾನು ಹಾಗಲ್ಲ. ಅಸುರ ಬಾಲಕರನ್ನು ಬಿಟ್ಟು ನಾನು ಒಬ್ಬನೇ ಮೋಕ್ಷ ಹೊಂದಲು ಬಯಸಲಾರೆ' ಎಂದು ಪ್ರಹ್ಲಾದ ತಾನೇ ಮುನಿಗಳಿಗಿಂತ ಹೆಚ್ಚು ದಯಾಮಯನೆಂದು ಹೇಳಿಕೊಳ್ಳುತ್ತಾನೆ' ಎನ್ನುತ್ತಾರೆ ಬೇರೆ ವ್ಯಾಖ್ಯಾನಕಾರರು. ಅದು ತಪ್ಪು. ಎಲ್ಲ ಮುನಿಗಳೂ 'ಸರ್ವೇಭ್ಯೋ ಗೋಬ್ರಾಹ್ಮಣೇಭ್ಯಃ ಶುಭಂ ಭವತು. ಬ್ರಾಹ್ಮಣಾಃ ಸಂತು ನಿರ್ಭಯಾಃ' ಎಂದು ಮುಂತಾಗಿ ಎಲ್ಲರಿಗೂ ಮೋಕ್ಷವನ್ನು ಬಯಸುತ್ತಾರೆ. ನಾರದಾದಿ ಮುನಿಗಳೇ ತಮ್ಮನ್ನು ನಂಬಿದವರಿಗೆ ಮಾತ್ರ ಮೋಕ್ಷವನ್ನು ಬಯಸಿ ವ್ರತಾದ್ಯನುಷ್ಠಾನ ಮಾಡುತ್ತಾರೆ, ಇತರರ ಮೋಕ್ಷಸಾಧನೆಗೆ ಯತ್ನಿಸುವುದಿಲ್ಲ. ಏಕೆಂದರೆ ಅವರಿಗೆ ಹಾಗೇ ಪರಮಾತ್ಮನ ಆದೇಶವಿದೆ.

ಪ್ರಾಯೇಣ ದೇವಮುನಯಃ ।
ಆಶ್ರಿತೇಷು ಕೃಪಾ ಕಾರ್ಯಾ ವಿಶೇಷಾತ್ತಾತ್ವಿಕೈಃ ಸುರೈಃ ।
ಮುನಿಭಿಶ್ಚ ತಥಾ ಕೈಶ್ಚಿತ್ ಕೈಶ್ಚಿತ್ ಕಾರ್ಯಾಽಖಿಲೇಷ್ವಪಿ ।
ತಥಾಪಿ ತಾತ್ವಿಕಸುರಕೃಪಾವಿಷಯತಾಂ ಗತಾಃ ।
ಯೇ ತ ಏವ ವಿಮುಚ್ಯಂತೇ ತದನ್ಯೇ ನ ಕಥಂಚನ ।
ಇತಿ ಚ ॥

ತಾತ್ವಿಕದೇವತೆಗಳು ತಮ್ಮನ್ನು ನಂಬಿದವರಲ್ಲಿ ಮಾತ್ರ ವಿಶೇಷವಾಗಿ ದಯೆದೋರಬೇಕೆಂದು ಪರಮಾತ್ಮನ ಆಜ್ಞೆ. ಹಾಗೇ ನಾರದಾದಿ ಕೆಲವು ಮುನಿಗಳೂ ತಮ್ಮನ್ನು ನಂಬಿದವರಲ್ಲಿ ಮಾತ್ರ ವಿಶೇಷವಾಗಿ ದಯೆದೋರಬೇಕೆಂದು ವಿಧಿ ಇದೆ. (ತಾತ್ವಿಕ ದೇವತೆಗಳು ಇಂದ್ರಿಯ ಬಲವನ್ನೂ ನಾರದಾದಿ ಮುನಿಗಳು ಮಂತ್ರಬಲವನ್ನೂ ನೀಡಿ ಸಾಧನೆ ಮಾಡಿಸುತ್ತಾರೆ.) ಉಳಿದ ದೇವತೆಗಳೂ ಮುನಿಗಳೂ ಎಲ್ಲರಲ್ಲಿಯೂ ದಯೆದೋರಬೇಕು. ಹಾಗಿದ್ದರೂ ತಾತ್ವಿಕದೇವತೆಗಳ ಮತ್ತು ನಾರದಾದಿ ಮುನಿಗಳ ದಯೆಗೆ ಪಾತ್ರರಾದವರು ಮಾತ್ರ ಮುಕ್ತಿ ಹೊಂದುತ್ತಾರೆ. ಬೇರೆಯವರು ಸರ್ವಥಾ ಇಲ್ಲ ಎಂಬುದೂ ಬ್ರಹ್ಮತರ್ಕದಲ್ಲಿ ಉಕ್ತವಾಗಿದೆ.

'ಸರ್ವೇಭ್ಯೋ ಗೋಬ್ರಾಹ್ಮಣೇಭ್ಯಃ ಶುಭಂ ಭವತು'

ಎಂದು ಮುಂತಾಗಿ ನಾರದಾದಿ ಮುನಿಗಳೂ ಹಾರೈಸುತ್ತಾರೆ. ಆದರೂ ಅವರ ವಿಶೇಷಾನುಗ್ರಹ ಪಾತ್ರರಾದವರಿಗೆ ಮಾತ್ರ ಮೋಕ್ಷ ಎಂದು ನಿಯಮವಿದೆ. ಪ್ರಹ್ಲಾದನೂ ಕೂಡ ತಾತ್ವಿಕದೇವತೆಗಳ ನಾರದಾದಿ ಮುನಿಗಳ ವಿಶೇಷಾನುಗ್ರಹ ಪಾತ್ರರಾದ ಅಸುರ ಬಾಲಕರಿಗೇ ತಾನೂ ಅನುಗ್ರಹ ಮಾಡಲು ಬಯಸುತ್ತಾನೆ ಹೊರತು ಅನ್ಯಬಾಲಕರಿಗೆ ಅಲ್ಲ. ಮೋಕ್ಷಯೋಗ್ಯರಿಗೆ ಮಾತ್ರವೇ ತಾತ್ವಿಕ ದೇವಾದಿಗಳ ಅನುಗ್ರಹ ಕೊಡಿಸಿ ಇಂದ್ರಿಯ ಬಲ, ಮಂತ್ರ ಬಲಗಳಿಂದ ಸಾಧನೆ ಮಾಡಿಸಿ ಉದ್ಧಾರ ಮಾಡುತ್ತಾನೆ.

❖ ❖ ❖

ಜಡಪ್ರಪಂಚ ಪರಮಾತ್ಮನ ಶರೀರವಲ್ಲ. ಅವನ ಆರಾಧನೆಗೆ ಅದು ಪ್ರತಿಮೆ ಎನಿಸುತ್ತದೆ ಎಂದು ಪ್ರಹ್ಲಾದ ನರಸಿಂಹನನ್ನು ಸ್ತುತಿಸುತ್ತಾನೆ.

ರೂಪೇ ಇಮೇ ಸದಸತೀ ತವ ವೇದದೃಷ್ಟೇ
ಬೀಜಾಂಕುರಾವಿವ ನ ಚಾನ್ಯದರೂಪಕಸ್ಯ ।
ಯುಕ್ತಾಃ ಸಮಕ್ಷಮುಭಯತ್ರ ವಿಚಕ್ಷತೇ ತ್ವಾಂ
ಯೋಗೇನ ವಹ್ನಿಮಿವ ದಾರುಷು ನಾನ್ಯತಃ ಸ್ಯಾತ್ ॥ ೪೭ ॥

ಬೀಜ ಅಂಕುರಗಳಂತೆ ಕಾರಣಕಾರ್ಯಗಳೆನಿಸಿರುವ ವಸ್ತುಗಳೆಲ್ಲವೂ 'ದ್ವೇ ವಾವ ಬ್ರಹ್ಮಣೋ ರೂಪೇ ಮೂರ್ತಂ ಚೈವಾಮೂರ್ತಂ ಚ' ಎಂದು ವೇದ ಹೇಳುವಂತೆ ನಿನ್ನ ಆರಾಧನೆಗೆ ಪ್ರತಿಮೆಗಳಾಗಿವೆ. ಏಕೆಂದರೆ

ಅವೆಲ್ಲವೂ ನಿನ್ನ ಅಧೀನ. ಪ್ರಾಕೃತ ಶರೀರ ರಹಿತನಾದ ನಿನಗೆ ಅವು ಸ್ವರೂಪ ಶರೀರಗಳಲ್ಲ. ಸ್ವರೂಪಕ್ಕಿಂತ ಬೇರೆ ಪ್ರಾಕೃತ ಶರೀರ ನಿನಗೆ ಇಲ್ಲ. ಅರಣಿಕಾಷ್ಠಗಳಲ್ಲಿ ಬೆಂಕಿಯನ್ನು ಆವಿರ್ಭಾವಗೊಳಿಸುವಂತೆ ಕಾರಣ ಕಾರ್ಯವಸ್ತುಗಳಲ್ಲಿ ಧ್ಯಾನನಿರತರಾದ ಉಪಾಸಕರು ನಿನ್ನನ್ನು ಸಾಕ್ಷಾತ್ಕರಿಸಿ ಕೊಳ್ಳುತ್ತಾರೆ. ಅದರಿಂದ ಅವು ಪ್ರತಿಮೆ ಎನಿಸಿಕೊಳ್ಳುತ್ತವೆ.

ಇಲ್ಲಿ ಶ್ರೀಧರವ್ಯಾಖ್ಯಾನಪ್ರಕಾರ ಬೀಜಾಂಕುರಗಳಂತೆ ಪ್ರವಾಹ ರೂಪದಿಂದಿರುವ ಕಾರಣಕಾರ್ಯವಸ್ತುಗಳು ಭಗವಂತನಲ್ಲಿ ಆರೋಪಿತವಾಗಿವೆ. ಹೊರತು ವಾಸ್ತವವಾಗಿ ಅವನಲ್ಲಿ ಯಾವ ಧರ್ಮವೂ ಇಲ್ಲ. ಆದರೆ ಈ ಕಾರ್ಯಕಾರಣ ವಸ್ತುಗಳನ್ನೆ ವಿಚಾರಮಾಡಿ ಭಕ್ತಿಯೋಗದಿಂದ ಅವುಗಳೊಳಗೆ ಉಪಾದಾನಕಾರಣವಾಗಿ ವ್ಯಾಪಿಸಿರುವ ಭಗವಂತನನ್ನು ಭಕ್ತರು ಕಾಣುತ್ತಾರೆ. ಬೇರೆರೀತಿಯಿಂದ ಅವನ ಜ್ಞಾನ ಬರುವುದಿಲ್ಲ.

ವೀರರಾಘವ ವ್ಯಾಖ್ಯಾನ ಪ್ರಕಾರ ಸೂಕ್ಷ್ಮ ಚಿದಚಿತ್ತುಗಳೂ ಸ್ಥೂಲ ಚಿದಚಿತ್ತುಗಳೂ ಭಗವಂತನ ಶರೀರಗಳು ಹೊರತು ಅವನಿಗೆ ಬೇರೆ ಕರ್ಮಾಧೀನವಾದ ಶರೀರವಿಲ್ಲ. ಅವನಿಗೆ ಶರೀರವಾಗದಿರುವ ಬೇರೆ ಪದಾರ್ಥವೆ ಇಲ್ಲ. ಈ ಚಿದಚಿತ್ತುಗಳಲ್ಲಿಯೇ ಭಕ್ತಿಯಿಂದ ಉಪಾಸನೆ ಮಾಡಿ ಅವನನ್ನು ಕಾಣಬೇಕು.

ಶುಕದೇವ ವ್ಯಾಖ್ಯಾನ ಪ್ರಕಾರ ಕಾರಣ ಕಾರ್ಯರೂಪವಾದ ಅಚೇತನವಾದ ಪ್ರಕೃತಿ ಬ್ರಹ್ಮಾಂಡಗಳು ಭಗವಂತನ ಎರಡು ರೂಪಗಳು, ಸ್ವರೂಪಗಳು, ಅವನಿಗಿಂತ ಬೇರೆಯಲ್ಲ. ಅವನ ಅಚೇತನಶಕ್ತಿಮಯವಾಗಿವೆ. ಅವುಗಳಲ್ಲಿಯೆ ಅವನನ್ನು ಕಾಣಬೇಕು.

ಗಿರಿಧರ ವ್ಯಾಖ್ಯಾನ ಪ್ರಕಾರ ಕಾರ್ಯಕಾರಣಾತ್ಮಕವಾದ ಪ್ರಪಂಚವೆಲ್ಲ ಭಗವಂತನ ಶರೀರವಾಗಿದ್ದು ಅವನಿಗಿಂತ ಅಭಿನ್ನವೇ ಆಗಿವೆ. ಭಿನ್ನವಲ್ಲ. ಅದರಲ್ಲಿಯೇ ಭಕ್ತಿಯೋಗದಿಂದ ಅವನನ್ನು ಕಾಣಬೇಕು.

ಆದರೆ ಇವರು ಯಾರೂ ಪರಮಾತ್ಮನನ್ನು ಕಾಣುವ ಬಗೆ ಹೇಗೆ ಎನ್ನುವುದಕ್ಕೆ ಸರಿಯಾದ ವಿವರಣೆ ನೀಡುವುದಿಲ್ಲ. ಕಾಷ್ಠದಲ್ಲಿ ಬೆಂಕಿಯನ್ನು ಮಥನದಿಂದ ಕಾಣುವಂತೆ ಎಂದು ಭಾಗವತದಲ್ಲಿ ದೃಷ್ಟಾಂತ ನೀಡಲಾಗಿದೆ. ಕಾಷ್ಠ ಮತ್ತು ಬೆಂಕಿ ಒಂದೇ ಅಲ್ಲ. ಬೆಂಕಿಯ ಶರೀರ ಕಾಷ್ಠ ಎನ್ನಲೂ ಬರುವುದಿಲ್ಲ. ಕಾಷ್ಠದಲ್ಲಿ ಬೆಂಕಿ ಆರೋಪಿತವೂ ಅಲ್ಲ. ಕಾಷ್ಠದಲ್ಲಿ ಬೆಂಕಿ ಅವ್ಯಕ್ತವಾಗಿ ಇದೆ. ಬೆಂಕಿ ಉರಿದಾಗ ಕಾಷ್ಠ ಉರಿದು ಬೂದಿಯಾಗುವುದರಿಂದ ಬೆಂಕಿಗೆ ಅಧೀನವೂ ಆಗಿದೆ. ಅದರಿಂದ ಕಾಷ್ಠ

ಬೆಂಕಿಗೆ ಪ್ರತಿಮೆಯಂತೆ. ಹಾಗೇ ಜಗತ್ತು ಪರಮಾತ್ಮನಿಗೆ ಪ್ರತಿಮೆಯಂತೆ. ದೃಷ್ಟಾಂತವು ಹೀಗೆ ನಮ್ಮ ವ್ಯಾಖ್ಯಾನಕ್ಕೆ ಅನುಕೂಲವಾಗಿದೆ. ಪರಮಾತ್ಮನಿಗೆ ಅವನಿಗಿಂತ ಭಿನ್ನವಾದ ಅಥವಾ ಅಭಿನ್ನವಾದ ಜಡಶರೀರವಿದೆ ಎನ್ನುವುದೂ ಪ್ರಮಾಣಬಾಧಿತ. ಜಡವೆಲ್ಲವೂ ಪರಮಾತ್ಮನಲ್ಲಿ ಆರೋಪಿತವೆನ್ನುವುದೂ ಪ್ರಮಾಣವಿರುದ್ಧ.

ಕಾರ್ಯಕಾರಣರೂಪೇ ತದ್ವಶತ್ವಾಪೇಕ್ಷಯಾ ।
ಸಾಕ್ಷಾತ್‌ಸ್ವರೂಪಾಪೇಕ್ಷಯಾ ಸ್ವರೂಪಾದನ್ಯದ್ರೂಪಂ ನ ।

ಕಾರ್ಯಕಾರಣರೂಪವಾದ ಜಡಪದಾರ್ಥಗಳು ಭಗವಂತನಿಗೆ ಅಧೀನವಾದ್ದರಿಂದ ಆ ವಿವಕ್ಷೆಯಿಂದಲೆ ಅವುಗಳನ್ನು ಅವನ ಪ್ರತಿಮೆಗಳಂಥ ರೂಪಗಳೆಂದು ವೇದಗಳು ಹೇಳುತ್ತವೆ ಹೊರತು ಸಾಕ್ಷಾತ್ ಸ್ವರೂಪತ್ವ ವಿವಕ್ಷೆಯಲ್ಲಿ ಸ್ವರೂಪಭೂತವಾದ ಮತ್ಸ್ಯಾದಿಗಳಿಗಿಂತ ಬೇರೆ ಪ್ರಾಕೃತ ರೂಪ ಅವನಿಗೆ ಇಲ್ಲ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ಸಪ್ತಮಸ್ಕಂಧೇ
ನವಮೋಽಧ್ಯಾಯಃ

❖ ❖ ❖

ಅಧ್ಯಾಯ ೧೦

ಅಧ್ಯಾಯ ಸಾರಾಂಶ

ಪ್ರಹ್ಲಾದ ನುಡಿದ, ಸಹಜವಾಗಿ ವಿಷಯಗಳಲ್ಲಿ ಆಸಕ್ತನಾಗಿದ್ದು ಅದಕ್ಕೆ ಅಂಜಿ ವಿರಕ್ತನಾಗಿ ನಿನ್ನನ್ನು ಆಶ್ರಯಿಸಿದವನು ನಾನು. ಅಂಥ ನನಗೆ ತಿರುಗಿ ವರಗಳಿಂದ ವಿಷಯಗಳಲ್ಲಿ ಆಸೆ ಹುಟ್ಟಿಸಬೇಡ. ನನಗೆ ಗೊತ್ತು, ನೀನು ನನ್ನ ಭಕ್ತಿಯನ್ನು ಪರೀಕ್ಷೆ ಮಾಡುತ್ತಿರುವೆ. ಭಕ್ತ ಹೇಗಿರಬೇಕೆಂಬುದನ್ನು ಲೋಕಕ್ಕೆ ತಿಳಿಸಲು ಹೊರಟಿರುವೆ. ಏಕೆಂದರೆ ಭಕ್ತ ಭಕ್ತಿಗೆ ಪ್ರತಿಫಲವಾಗಿ ವರಗಳನ್ನು ಬಯಸುವುದಿಲ್ಲ. ಬಯಸಬಾರದು. ಬಯಸಿದರೆ ಆತ ವ್ಯಾಪಾರಿ ಎನಿಸುತ್ತಾನೆ. ಭಗವಂತನೂ ಭಕ್ತನ ಭಕ್ತಿಯೊಂದನ್ನೇ ಮೆಚ್ಚುತ್ತಾನೆ. ತಾನು ಭಗವಂತನೆಂದು ತೋರಿಕೊಳ್ಳಲು ವರ ನೀಡುವವನು ಭಗವಂತನೆನಿಸಲಾರ. ಆದರೂ ನೀನು ವರ ಕೊಡಲು ಸಂಕಲ್ಪಿಸಿದ್ದರೆ ಕೊಡು, ವರಗಳ ಬಯಕೆ ನನ್ನೆದೆಯಲ್ಲಿ ಉದಿಸದಿರಲಿ ಎಂದು ವರ ಕೊಡು. ಬಯಕೆಗಳನ್ನು ಪರಿತ್ಯಾಗ ಮಾಡಿದಾಗಲೆ ಭಕ್ತ ಮುಕ್ತಿಗೆ ಭಾಗಿಯಾಗುತ್ತಾನೆ.

ಹೇ ಪುಂಡರೀಕಾಕ್ಷ, ನಾರದರು ಉಪದೇಶಿಸಿರುವ ನಿನ್ನ ಈ ಮಂತ್ರವನ್ನು ನಾನು ಸದಾ ನೆನೆಯುತ್ತೇನೆ, 'ಅದ್ಭುತನಾದ ಹರಿಯೇ ಗುಣಪೂರ್ಣ ಷಡ್ಗುಣಶಾಲಿ ಪರಬ್ರಹ್ಮ ಪರಮಾತ್ಮನಾದ ನರಸಿಂಹನಾದ ನಿನಗೆ ನಮಸ್ಕಾರ' ಎಂದು.

ಶ್ರೀನರಸಿಂಹ ನುಡಿದ, 'ನಿನ್ನಂಥ ಏಕಾಂತಭಕ್ತರು ವಿಷಯಭೋಗಗಳನ್ನು ಎಂದೂ ನನ್ನಲ್ಲಿ ಬೇಡುವುದಿಲ್ಲ. ಆದರೂ ಈ ಮನ್ವಂತರಪೂರ್ತಿ ನೀನು ದೈತ್ಯಚಕ್ರವರ್ತಿ ಪದವಿಯಲ್ಲಿ ಸುಖಭೋಗಗಳನ್ನು ಅನುಭವಿಸುತ್ತಿರು. ನನ್ನ ಕಥಾಶ್ರವಣ ಮಾಡು. ಯಜ್ಞಗಳಿಂದ ನನ್ನನ್ನು ಆರಾಧಿಸು. ಅದರಿಂದ ಪ್ರಾರಬ್ಧ ಅನಿಷ್ಟ ಪುಣ್ಯವನ್ನು ಭೋಗದಿಂದ ತೀರಿಸಿಕೊಂಡು ಮುಕ್ತಿ ಹೊಂದುವಿ' ಎಂದು.

ಪ್ರಹ್ಲಾದ ಒಂದು ವರವನ್ನು ಬೇಡಿದ. 'ನನ್ನ ತಂದೆ ನಿನ್ನನ್ನು ನಿಂದಿಸಿದ್ದಾನೆ. ತನ್ನ ತಮ್ಮನನ್ನು ಕೊಂದ ಕೊಲೆಗಾರ ನೀನೆಂದು

ತಪ್ಪು ತಿಳಿದಿದ್ದಾನೆ. ನಿನ್ನ ಭಕ್ತನಾದ ನನಗೂ ಬಹಳ ಹಿಂಸೆ ಮಾಡಿದ್ದಾನೆ. ಆ ಪಾಪದಿಂದ ತಂದೆ ಮುಕ್ತನಾಗಲಿ' ಎಂದು. ಭಗವಂತನೆಂದ, 'ಕುಲಪಾವನನಾದ ನೀನು ಜನಿಸಿರುವುದರಿಂದ ನಿನ್ನ ತಂದೆಯೂ ನಿನ್ನ ಜನ್ಮಾಂತರಗಳ ಇಪ್ಪತ್ತೊಂದು ಮಂದಿ ಪಿತೃಗಳೂ ಪಾಪಮುಕ್ತರಾಗಿದ್ದಾರೆ. ಲೋಕದಲ್ಲಿ ಯಾರು ನನ್ನ ಭಕ್ತರೋ ಅವರು ನಿನ್ನ ಆದರ್ಶವನ್ನು ಅನುಸರಿಸಬೇಕು. ನನ್ನ ಭಕ್ತರೆಲ್ಲರಿಗೂ ನೀನು ಆದರ್ಶಪ್ರಾಯನಾಗಿರುವೆ. ನೀನು ತಂದೆಯ ಉತ್ತರಕ್ರಿಯೆ ಮಾಡು. ಏಕೆಂದರೆ ಅವನು ನನ್ನ ಮೈಯ ಸ್ಪರ್ಶದಿಂದ ಪೂರ್ತಿ ಪರಿಶುದ್ಧನಾಗಿದ್ದಾನೆ. ತಂದೆಯ ಸಿಂಹಾಸವನ್ನೇರು. ನಿಷ್ಕಂಟಕವಾಗಿ ರಾಜ್ಯವಾಳು'.

ಬ್ರಹ್ಮದೇವ ನುಡಿದ, 'ದೇವದೇವ, ಈ ಹಿರಣ್ಯಕಶಿಪು ನಾನು ಸೃಷ್ಟಿಸಿದ ಯಾವ ವ್ಯಕ್ತಿಯಿಂದಲೂ ತಾನು ಹತನಾಗಬಾರದೆಂದು ನನ್ನಿಂದ ವರ ಪಡೆದು ಮದೋನ್ಮತ್ತನಾಗಿ ವೈದಿಕಕರ್ಮಗಳಿಗೆ ಅಡ್ಡಿಯಾಗಿದ್ದ. ಅವನಿಂದ ಅವನ ಈ ಬಾಲಕನನ್ನು ನೀನು ಸುಖವಾಗಿ ಮುಕ್ತಗೊಳಿಸಿರುವಿ.'

ಭಗವಂತ ನುಡಿದ, 'ನೀನಿನ್ನು ಬೇರೆ ಅಸುರರಿಗೆ ಇಂಥ ವರ ನೀಡಬೇಡ. ಅದು ಕ್ರೂರಸ್ವಭಾವದ ಹಾವುಗಳಿಗೆ ಹಾಲೆರೆದಂತೇ ಆಗುವುದು.' ಹೀಗೆ ನುಡಿದು ಭಗವಂತ ಅದೃಶ್ಯನಾದ. ಬಳಿಕ ಪ್ರಹ್ಲಾದ ದಾನವ ಚಕ್ರವರ್ತಿಯಾಗಿ ಅಭಿಷಿಕ್ತನಾದ. ಹೀಗೆ ಜಯವಿಜಯರು ಮುನಿಶಾಪದಿಂದ ದಿತಿಪುತ್ರರಾಗಿ ಜನಿಸಿ ಹರಿಯಿಂದ ಹತರಾದರು. ಬಳಿಕ ರಾವಣ ಕುಂಭಕರ್ಣರಾಗಿ ಜನಿಸಿ ಹರಿಯಿಂದ ಹತರಾದರು. ಈಗ ಶಿಶುಪಾಲ ದಂತವಕ್ರರಾಗಿ ಜನಿಸಿ ಹತರಾಗಿ ಕೃಷ್ಣನ ಉದರವನ್ನು ಪ್ರವೇಶಿಸಿದ್ದಾರೆ. ಮೂರು ಜನ್ಮಗಳಲ್ಲಿ ಅವರು ಅಸುರಾವೇಶದಿಂದ ಹರಿಯಲ್ಲಿ ದ್ವೇಷಮಾಡಿ ಆ ಪಾಪವನ್ನು ಅಂತ್ಯಕಾಲದಲ್ಲಿ ಸ್ವಾಭಾವಿಕ ಭಕ್ತಿಯಿಂದ ನೀಗಿಕೊಂಡು ಹರಿಯ ಸಾರೂಪ್ಯವನ್ನು ಪಡೆದರು.

❖ ❖ ❖

ಪ್ರಹ್ಲಾದ, ನಿನ್ನಂಥ ಸತ್ಪುತ್ರನನ್ನು ಪಡೆದುದರಿಂದ ಹಿರಣ್ಯಕಶಿಪು ಜನ್ಮಾಂತರದ

ಇಪ್ಪತ್ತೊಂದು ಮಂದಿ ಪಿತೃಗಳೊಂದಿಗೆ ಪಾಪಮುಕ್ತನಾದನೆಂದು ಶ್ರೀನರಸಿಂಹ ಅನುಗ್ರಹಿಸುತ್ತಾನೆ.

ಶ್ರೀಭಗವಾನುವಾಚ

ತ್ರಿಃಸಪ್ತಭಿಃ ಪಿತಾ ಪೂತಃ ಪಿತೃಭಿಸ್ಸಹ ತೇಽನಘ ।
ಯತ್ಸಾಧೋಽಸ್ಯ ಕುಲೇ ಜಾತೋ ಭವಾನ್ ವೈ ಕುಲಪಾವನಃ ॥ ೧೮ ॥

ಶ್ರೀಭಗವಂತ ನುಡಿದ- ಪಾಪರಹಿತನೆ, ಇಪ್ಪತ್ತೊಂದು ಮಂದಿ ಜನ್ಮಾಂತರ ಪಿತೃಗಳೊಂದಿಗೆ ನಿನ್ನ ತಂದೆ ಪಾಪಮುಕ್ತನಾಗಿದ್ದಾನೆ, ಏಕೆಂದರೆ ಸಜ್ಜನನೆ, ಕುಲವನ್ನು ಪಾವನಗೊಳಿಸುವ ನೀನು ಅವನ ಕುಲದಲ್ಲಿ ಜನಿಸಿರುವೆ.

ಇಲ್ಲಿ 'ತ್ರಿಃ ಸಪ್ತಭಿಃ ಪಿತಾ ಪೂತಃ ಪಿತೃಭಿಃ ಸಹ' ಇಪ್ಪತ್ತೊಂದು ಮಂದಿ ಪಿತೃಗಳೊಂದಿಗೆ ಹಿರಣ್ಯಕಶಿಪು ಪಾಪಮುಕ್ತನಾದನೆಂದು ಹೇಳಿದ್ದು ಹೇಗೆ? ಎಂಬ ಪ್ರಶ್ನೆ ಬರುತ್ತದೆ. ಏಕೆಂದರೆ ಹಿರಣ್ಯಕಶಿಪುವಿಗೆ ಕಶ್ಯಪ ಮರೀಚಿ ಬ್ರಹ್ಮ ಮೂವರೇ ಪಿತೃಗಳು. ಇದಕ್ಕೆ ಸಮಾಧಾನ ಶ್ರೀಧರವ್ಯಾಖ್ಯಾನದಲ್ಲಿ 'ಪ್ರಾಕ್ಕಲ್ಪಗತ ಪಿತ್ರಭಿಪ್ರಾಯೇಣೋಕ್ತಂ' 'ಹಿಂದಿನ ಕಲ್ಪದ ಪಿತೃಗಳು ಸೇರಿ ಇಪ್ಪತ್ತೊಂದು ಮಂದಿ ಪಿತೃಗಳೆಂದು ಅಭಿಪ್ರಾಯ' ಎಂದು. ಜೀವಗೋಸ್ವಾಮಿವ್ಯಾಖ್ಯಾನ ಇದನ್ನು ಒಪ್ಪುವುದಿಲ್ಲ. ಹಿರಣ್ಯಕಶಿಪುವಿಗೆ ಪೂರ್ವಜನ್ಮವಿರಲಿಲ್ಲ ಮತ್ತು 'ಯತ್‌ಸಾಧೋಽಸ್ಯ ಗೃಹೇ ಜಾತಃ' ಎಂದು ಪ್ರಹ್ಲಾದನ ಜನ್ಮ ಪಿತೃಮುಕ್ತಿಗೆ ಸಾಧನವಾಯಿತೆಂದುದು ಕೂಡುವುದಿಲ್ಲ, ಅವನ ಜನ್ಮಕ್ಕೂ ಪಿತೃಗಳಿಗೂ ಸಂಬಂಧವಿಲ್ಲ ಎಂದು ಹೇಳುತ್ತಾರೆ.[೧]

ವಸ್ತುತಃ ಹಿರಣ್ಯಕಶಿಪುವಿಗೆ ಅದು ಮೊದಲನೆಯ ಜನ್ಮವಾದ್ದರಿಂದ ಪೂರ್ವಜನ್ಮವಿಲ್ಲದಿದ್ದರೂ ಅವನ ಮೂಲರೂಪನಾದ ಜಯನೊಬ್ಬ ಕರ್ಮಜ ದೇವತೆ, ಅನೇಕ ಮನುಷ್ಯ ಜನ್ಮಗಳಲ್ಲಿ ಸಾಧನೆ ಮಾಡಿ ದೇವಪದವಿ ಹೊಂದಿದ್ದಾನೆ. ಆದರಿಂದ ಪೂರ್ವಜನ್ಮವಿಲ್ಲ ಎಂದುದು ಸರಿಯಲ್ಲ. ಪ್ರಹ್ಲಾದನ ಜನ್ಮಕ್ಕೂ ಹಿರಣ್ಯಕಶಿಪುವಿಗೂ ಸಂಬಂಧವಿದೆ ಎಂದಮೇಲೆ ಹಿರಣ್ಯಕಶಿಪುವಿನ ದ್ವಾರಾ ಸರ್ವಪಿತೃಸಂಬಂಧ ಬರುತ್ತದೆ. ಆದರಿಂದ ಶ್ರೀಧರವ್ಯಾಖ್ಯಾನದಲ್ಲಿ ಹೇಳಿದ

---

೧. ತ್ರಿಃಸಪ್ತಭಿರಿತಿ। ಯದಿ ಸಪ್ತತ್ರಯ ಸಂಖ್ಯಾಸ್ತವ ಪಿತರಃ ಸಂಭವಂತಿ ತದಾ ತೈರಪಿ ಸಹ ಪೂತಃ ಸ್ಯಾದಿತ್ಯರ್ಥಃ। ಪ್ರಾಕ್ಕಲ್ಪಗತತ್ವೇ ಯದಿತಿ ಹೇತುವಾಕ್ಯಂ ನ ಸಂಗಚ್ಛತೇ । ಶ್ರೀಪ್ರಹ್ಲಾದಸ್ಯಾತ್ರ ಜನ್ಮನಾ ಸಹ ಸರ್ವಪಿತೃಣಾಮಸಂಬಂಧಾತ್। ಸ್ವತ ಏವ ಸಂಬಂಧಾಚ್ಚ ಹಿರಣ್ಯಕಶಿಪೋಶ್ಚ ಪೂರ್ವಜನ್ಮಾಭಾವಾತ್। -ಜೀವಗೋಸ್ವಾಮೀ

ಪೂರ್ವಕಲ್ಪ ಜನ್ಮವನ್ನು ಇಟ್ಟುಕೊಳ್ಳುವುದರಲ್ಲಿ ಬಾಧಕವೇನಿಲ್ಲ. ಆದರಿಂದ 'ಹಿರಣ್ಯಕಶಿಪುವಿಗೆ ಇಪ್ಪತ್ತೊಂದು ಮಂದಿ ಪಿತೃಗಳಿಲ್ಲ, ಇದ್ದರೂ ಅವರೊಂದಿಗೆ ಆತನಿಗೆ ಮುಕ್ತಿಯಾದೀತು' ಎಂದು ಜೀವಗೋಸ್ವಾಮಿ ಹೇಳಿದ್ದು ಸರಿಯಲ್ಲ.

ಆದರೂ ಶ್ರೀಧರವ್ಯಾಖ್ಯಾನದಲ್ಲಿ ಪೂರ್ವಕಲ್ಪ ಎಂದುದು ಸಮರ್ಪಕವಲ್ಲ. ಇದೇ ಕಲ್ಪದಲ್ಲಿ ಅನೇಕ ಜನ್ಮಗಳನ್ನೆತ್ತಿ ಸಾಧನೆ ಮಾಡಿ ದೇವಪದವಿಯನ್ನು ಸಾಧಿಸಿಕೊಳ್ಳಲು ಶಕ್ಯವಿದೆ. ಧ್ರುವ ಇದೇ ಕಲ್ಪದಲ್ಲಿ ಅನೇಕ ಜನ್ಮವೆತ್ತಿ ಸಾಧನೆ ಮಾಡಿದ್ದಾನೆ. ಮತ್ತು 'ಪೂರ್ವಮನ್ವಂತರ' ಎನ್ನಬಹುದಿತ್ತು. ಪ್ರಾಯಃ ಪ್ರತಿಮನ್ವಂತರದಲ್ಲಿ ಪ್ರಹ್ಲಾದಾದಿಗಳು ಹುಟ್ಟುತ್ತಾರೆ.

ಜನ್ಮಾಂತರ ಪಿತೃಭಿಸ್ತ್ರಿಸಪ್ತಭಿಃ ।

ಪೂರ್ವಜನ್ಮಗಳ ಪಿತೃಗಳನ್ನು ಸೇರಿಸಿ ಇಪ್ಪತ್ತೊಂದು ಮಂದಿ ಪಿತೃಗಳನ್ನು ಇಟ್ಟುಕೊಳ್ಳಬೇಕು.

ಯೇಽಬಾಂಧವಾ ಯೇ ಬಾಂಧವಾ ಅನ್ಯಜನ್ಮನಿ ಬಾಂಧವಾಃ

ತೇ ತೃಪ್ತಿಮಖಿಲಾಂ ಯಾಂತು ಮಯಾ ದತ್ತೇನ ವಾರಿಣಾ ।

ಎಂದು ಜನ್ಮಾಂತರ ಪಿತೃಗಳಿಗೂ ತರ್ಪಣ ನೀಡುವುದರಿಂದ 'ಜನ್ಮಾಂತರ ಪಿತೃಭಿಃ' ಎಂದುದು ಔಚಿತ್ಯಪೂರ್ಣವಾಗಿದೆ.

❖ ❖ ❖

ಭಕ್ತನೆಂದರೆ ಪ್ರಹ್ಲಾದನಂತಿರಬೇಕು ಎನ್ನುವಂತೆ ನೀನು ಎಲ್ಲ ಭಕ್ತರಿಗೂ ಆದರ್ಶಪ್ರಾಯನಾಗಿರುವಿ ಎಂದು ನರಸಿಂಹ ಪ್ರಹ್ಲಾದನನ್ನು ಪ್ರಶಂಸಿಸುತ್ತಾನೆ.

ಭವಂತಿ ಪುರುಷಾ ಲೋಕೇ ಮದ್ಭಕ್ತಾಸ್ತ್ವಾಮನುವ್ರತಾಃ ।
ಭವಾನ್ಮೇ ಖಲು ಭಕ್ತಾನಾಂ ಸರ್ವೇಷಾಂ ಪ್ರತಿರೂಪಧೃಕ್ ॥ ೨೨ ॥

ಲೋಕದಲ್ಲಿ ಯಾರು ನನ್ನ ಭಕ್ತರೋ ಅವರೆಲ್ಲರೂ ನಿನ್ನನ್ನು ಅನುಸರಿಸಬೇಕು. ಎಲ್ಲರಿಗೂ ನೀನು ಆದರ್ಶಪ್ರಾಯನಾಗಿರುವಿ.

ಇಲ್ಲಿ ಪ್ರಹ್ಲಾದ ವಿಷ್ಣುಭಕ್ತಿಯಲ್ಲಿ ಬ್ರಹ್ಮಾದಿದೇತೆಗಳಿಗಿಂತಲೂ ನಾರದಾದಿ ಮುನಿಗಳಿಗಿಂತಲೂ ಶ್ರೇಷ್ಠನೆಂದು ಹೇಳಿದಂತೆ ಕಾಣುತ್ತದೆ. ಬೇರೆ ವ್ಯಾಖ್ಯಾನಕಾರರು ಯೋಗ್ಯತಾ ತಾರತಮ್ಯವನ್ನು ಒಪ್ಪದಿರುವುದಿಂದ ಅವರಿಗೆ ಇದು ಸಮಸ್ಯೆಯಾಗುವುದಿಲ್ಲ. ಆದರೆ ಶ್ಲೋಕದಲ್ಲಿ 'ಖಲು' ಶಬ್ದದ ಸ್ವಾರಸ್ಯವನ್ನು

ಗಮನಿಸುವುದಾದರೆ ಅದು ನಿಷೇಧಾರ್ಥಕವಾಗಿದೆ. ಪ್ರಹ್ಲಾದನಿಗಿಂತ ಉತ್ತಮರಾದ ನಾರದಾದಿಗಳನ್ನೂ ಬ್ರಹ್ಮಾದಿಗಳನ್ನೂ ಹೊರತುಪಡಿಸಿ ಪ್ರಹ್ಲಾದನಿಗಿಂತ ಕಡಿಮೆಯವರಾದ ಎಲ್ಲ ಭಕ್ತರನ್ನೇ 'ಭಕ್ತಾನಾಂ ಸರ್ವೇಷಾಂ' ಎಂಬ ಶಬ್ದದಿಂದ ಗ್ರಹಿಸಬೇಕೆಂದು ಖಲುಶಬ್ದ ಸೂಚಿಸುತ್ತದೆ. ಏಕೆಂದರೆ ಸ್ಕಂದಪುರಾಣದಲ್ಲಿ ಈ ತಾರತಮ್ಯ ವಿವೇಚನೆ ಸ್ಪಷ್ಟ ಕಂಡುಬರುತ್ತದೆ.

ಋತೇ ತು ತಾತ್ವಿಕಾನ್ ದೇವಾನ್ ನಾರದಾದೀಂಸ್ತಥೈವ ಚ ।
ಪ್ರಹ್ಲಾದಾದುತ್ತಮಃ ಕೋ ನು ವಿಷ್ಣುಭಕ್ತೌ ಜಗತ್ರ್ಯಯೇ ।
ಇತಿ ಸ್ಕಾಂದೇ ॥

ಬ್ರಹ್ಮಾದಿತಾತ್ವಿಕ ದೇವತೆಗಳಿಗಿಂತಲೂ ನಾರದಾದಿ ಮುನಿಗಳಿಗಿಂತಲೂ ಬೇರೆ ವಿಷ್ಣುಭಕ್ತಿಯಲ್ಲಿ ಪ್ರಹ್ಲಾದನನ್ನು ಮೀರಿಸಿರುವವನು ಮೂಲೋಕ ದಲ್ಲಿ ಯಾರಿದ್ದಾನೆ? ಎಂದು ಸ್ಕಂದ ಪುರಾಣದಲ್ಲಿ ಹೇಳಿದೆ.

❖ ❖ ❖

ಹಿರಣ್ಯಕಶಿಪು ನನ್ನ ತೊಡೆಯ ಮೇಲೆ ಪ್ರಾಣ ಬಿಟ್ಟಿರುವುದರಿಂದ ನನ್ನ ಅಂಗಸಂಗ ಪ್ರಭಾವದಿಂದ ಶುದ್ಧನಾಗಿದ್ದಾನೆ. ಅದರಿಂದ ಅವನಿಗೆ ಉತ್ತರಕ್ರಿಯೆ ಮಾಡೆಂದು ಪ್ರಹ್ಲಾದನಿಗೆ ನರಸಿಂಹ ಆಜ್ಞೆ ಮಾಡುತ್ತಾನೆ.

ಕುರು ತೇ ಪ್ರೇತಕಾರ್ಯಾಣಿ ಪಿತುಃ ಪೂತಸ್ಯ ಸರ್ವಶಃ ।
ಮಂದಗಸ್ಪರ್ಶನೇನಾಂಗ ಲೋಕಾನ್ ಯಾಸ್ಯತಿ ಸುಪ್ರಜಾಃ ॥ ೨೩ ॥

ನೀನು ನಿನ್ನ ತಂದೆಗೆ ಉತ್ತರಕ್ರಿಯೆ ಮಾಡು. ಏಕೆಂದರೆ ಅವನು ನನ್ನ ಮೈಯ ಸ್ಪರ್ಶದಿಂದ ಪೂರ್ತಿಯಾಗಿ ಪರಿಶುದ್ಧನಾಗಿದ್ದಾನೆ. ನಿನ್ನಂಥ ಸತ್ಪುತ್ರನನ್ನು ಪಡೆದ ಪುಣ್ಯದಿಂದ ಅವನು ಮುಂದೆ ಉತ್ತಮ ಲೋಕವನ್ನು ಹೊಂದುತ್ತಾನೆ.

ಇಲ್ಲಿ ಪ್ರಶ್ನೆ ಬರುತ್ತದೆ. ಮಧುಕೈಟಭರೂ ಹರಿಯ ತೊಡೆಯಲ್ಲಿ ಶಿರಚ್ಛೇದ ಹೊಂದಿ ಸತ್ತರು. ಆದರೆ ತಮಸ್ಸಿನಲ್ಲಿ ಬಿದ್ದರು. ಹಿರಣ್ಯಕಶಿಪು ನರಸಿಂಹನ ತೊಡೆಯಲ್ಲಿ ಮರಣಹೊಂದಿದ ಮಾತ್ರಕ್ಕೆ ಉತ್ತಮಲೋಕವನ್ನು ಹೊಂದುವುದು ಹೇಗೆ ಕೂಡುತ್ತದೆ ಎಂದು. ಈ ಪ್ರಶ್ನೆಗೆ ಸಮಾಧಾನವನ್ನು ಸ್ಕಾಂದಪುರಾಣದ ಆಧಾರದಿಂದ ಹೀಗೆ ಹೇಳಬೇಕು-

ಮಧುಕೈಟಭೌ ಭಕ್ತ್ಯಭಾವಾದೂರೌ ಭಗವತೋ ಮೃತೌ ।
ತಮ ಏವ ಕ್ರಮಾದಾಪ್ತೌ ಭಕ್ತ್ಯಾ ಚೈದ್ಯೋ ಹರಿಂ ಯಯೌ ।

ಮಧುಕೈಟಭರು ಸ್ವಾಭಾವಿಕವಾಗಿ ದಾನವರಾಗಿದ್ದರು ಅವರಿಗೆ ಹರಿಯಲ್ಲಿ ಭಕ್ತಿ ಇರಲಿಲ್ಲ. ಅದರಿಂದ ಹರಿಯ ತೊಡೆಯಲ್ಲಿ ಮರಣ ಹೊಂದಿದರೂ ಕ್ರಮವಾಗಿ ತಮಸ್ಸನ್ನೇ ಹೊಂದಿದರು. ಶಿಶುಪಾಲ ಸ್ವಭಾವತಃ ಒಬ್ಬ ದೇವ. ಅವನಿಗೆ ಹರಿಯಲ್ಲಿ ಸ್ವಾಭಾವಿಕ ಭಕ್ತಿ ಇದ್ದಿತು. ಅದರಿಂದ ಹಿರಣ್ಯಕಶಿಪು ಜನ್ಮದಲ್ಲಿ ನರಸಿಂಹನ ತೊಡೆಯ ಸ್ಪರ್ಶವಾಗಿದ್ದರಿಂದ ಕ್ರಮವಾಗಿ ವಿಷ್ಣುಪ್ರಾಪ್ತಿ ಅವನಿಗೆ ಆಯಿತು.

ವಿಷ್ಣುಪ್ರಾಪ್ತಿಗೆ ವಿಷ್ಣುಭಕ್ತಿ ಮುಖ್ಯಕಾರಣ. ಅದರ ಜೊತೆಗೆ ಪ್ರಾಣೋತ್ಕ್ರಮಣ ಕಾಲದಲ್ಲಿ ವಿಷ್ಣುವಿನ ಅಂಗಸ್ಪರ್ಶ ದೊರಕಿದರೆ ಸುಧೆಗೆ ಪರಿಮಳವೂ ಬಂದಂತಾಗುವುದರಿಂದ ಹೆಚ್ಚಿನ ಫಲಕ್ಕೆ ಕಾರಣವಾಗುತ್ತದೆ. ಈ ಅಭಿಪ್ರಾಯದಿಂದ ಭಾಗವತದಲ್ಲಿ ವಿಷ್ಣುವಿನ ಅಂಗಸ್ಪರ್ಶವನ್ನು ಪ್ರಶಂಸಿಸಲಾಗಿದೆ.

❖ ❖ ❖

'ಇನ್ನು ಮುಂದೆ ನೀನು ಇಂಥ ದೊಡ್ಡ ವರವನ್ನು ದುಷ್ಟರಾದ ದಾನವರಿಗೆ ಕೊಡಬೇಡ' ಎಂದು ನರಸಿಂಹ ಬ್ರಹ್ಮನಿಗೆ ಆಜ್ಞೆ ಮಾಡುತ್ತಾನೆ-

ಶ್ರೀಭಗವಾನುವಾಚ

ಮೈವಂವಿಧೋಽಸುರಾಣಾಂ ತೇ ಪ್ರದೇಯಃ ಪದ್ಮಸಂಭವ ।
ವರಃ ಕ್ರೂರನಿಸರ್ಗಾಣಾಮಹೀನಾಮಮೃತಂ ಯಥಾ ॥ ೩೦ ॥

ಶ್ರೀಭಗವಂತ ನುಡಿದ- ಬ್ರಹ್ಮನೆ, ನೀನು ಅಸುರರಿಗೆ ಇನ್ನುಮುಂದೆ ಇಂಥ ವರವನ್ನು ನೀಡಬೇಡ. ಅದು ಕ್ರೂರಸ್ವಭಾವದ ಹಾವುಗಳಿಗೆ ಹಾಲೆರೆದಂತಾಗುವುದು.

ಇಲ್ಲಿ ಬ್ರಹ್ಮ ಏನೂ ವಿವೇಚನೆ ಇಲ್ಲದೆ ಹಿರಣ್ಯಕಶಿಪುವಿಗೆ ಅವನು ಕೇಳಿದ ವರವನ್ನು ಕೊಟ್ಟುಬಿಟ್ಟ. ಅಚಾತುರ್ಯವನ್ನೇ ತೋರಿದ. ಅದರ ಪರಿಣಾಮವಾಗಿ ಮೂಲೋಕವೆ ಹಿರಣ್ಯಕಶಿಪುವಿನ ಬಾಧೆಯಿಂದ ನಲುಗಿತು. ಬ್ರಹ್ಮ ಹೀಗೇಕೆ ಮಾಡಿದ ಎಂಬ ಪ್ರಶ್ನೆ ಬರುತ್ತದೆ. ಅವನನ್ನು 'ಪದ್ಮಸಂಭವ!' ಎಂದು ಸಂಬೋಧಿಸುತ್ತ ನರಸಿಂಹನೇ ಈ ಪ್ರಶ್ನೆ ಮಾಡಿದಂತಿದೆ. ಪದ್ಮ ಜಡ. ವಿವೇಚನ ಶಕ್ತಿ ಇಲ್ಲ ಮತ್ತು ಕೋಮಲ. ಅದರಲ್ಲಿ ಜನಿಸಿದ ಬ್ರಹ್ಮನೂ ಹಾಗೇ ವಿವೇಚನಶಕ್ತಿ ಇಲ್ಲದವನು, ಮೃದು ಹೃದಯದವನು. ಹಿರಣ್ಯಕಶಿಪು ಘೋರತಪಸ್ಸು ಮಾಡಿದ್ದನ್ನು ಕಂಡು ಮನಕರಗಿ ಏನೂ ವಿವೇಚನೆಯೇ ಇಲ್ಲದೆ ವರ ಕೊಟ್ಟುಬಿಟ್ಟ. ಹೀಗೆ ವಂಶೀಧರ

ವ್ಯಾಖ್ಯಾನ ಹೇಳುತ್ತದೆ. ಆದರೆ ಭಾಗವತದಲ್ಲಿಯೇ ಹಿಂದೆ ಬ್ರಹ್ಮ ನಾರದಮುನಿಗೆ 'ನ ಮೇ ಹೃಷೀಕಾಣಿ ಪತಂತ್ಯಸತ್ಪಥೇ' ಎಂದು ಮುಂತಾಗಿ ತನ್ನ ನಿರ್ದೋಷತ್ವವನ್ನು ಉಪದೇಶಿಸಿದ್ದಾನೆ.

ವಸ್ತುತಃ ಹಿರಣ್ಯಕಶಿಪುವಿಗೆ ವರ ಕೊಟ್ಟಿದ್ದನ್ನು ನರಸಿಂಹ ಇಲ್ಲಿ ಆಕ್ಷೇಪಿಸಲಿಲ್ಲ. ಆಕ್ಷೇಪಿಸಿದಂತೆ ತೋರಿಕೊಂಡಿದ್ದಾನಷ್ಟೆ. ಪರ್ಯಾಯವಾಗಿ ನೀನು ಎಷ್ಟು ದೊಡ್ಡ ವರವನ್ನು ಕೊಟ್ಟರೂ ಅದನ್ನು ನಾನು ಹೀಗೇ ನಿಭಾಯಿಸಬಲ್ಲೆ ಎಂದು ಹೇಳಿದ್ದಾನೆ. ವರ ಬಲು ದೊಡ್ಡದೆನ್ನುವುದರಲ್ಲಿ ತಾತ್ಪರ್ಯವೇ ಹೊರತು ಅದನ್ನು ಕೊಡಬೇಡ ಎನ್ನುವಲ್ಲಿ ತಾತ್ಪರ್ಯವಿಲ್ಲ. ಇರುತ್ತಿದ್ದರೆ ಮುಂದೆ ರಾವಣನಿಗೂ ಇಂಥದೇ ವರವನ್ನು ಬ್ರಹ್ಮ ನೀಡುತ್ತಿರಲಿಲ್ಲ. ಮೂಲೋಕವನ್ನು ರಾವಣನ ಆಕ್ರಮಣಕ್ಕೆ ಗುರಿ ಮಾಡುತ್ತಿರಲಿಲ್ಲ.

ನರಸಿಂಹ ಹಿರಣ್ಯಕಶಿಪುವಿನಂಥ ಅಸುರರಿಗೆ ವರ ನೀಡಬೇಡವೆಂದು ಹೇಳಿಲ್ಲ. 'ಕ್ರೂರನಿಸರ್ಗಾಣಾಮಸುರಾಣಾಂ' ಸ್ವಭಾವತಃ ಕ್ರೂರರಾದ ಅಸುರರಿಗೆ ಇಂಥ ವರ ನೀಡಬೇಡ ಎಂದಿದ್ದಾನೆ. ಹಿರಣ್ಯಕಶಿಪು ರಾವಣ ಮುಂತಾದವರು ಸ್ವಭಾವದಿಂದ ಕ್ರೂರರಲ್ಲ. ಅಸುರಾವೇಶದಿಂದ ಕ್ರೂರರಂತೆ ವರ್ತಿಸಿದರು. ಅದರಿಂದ ನರಸಿಂಹನ ಆಜ್ಞೆಯನ್ನು ಬ್ರಹ್ಮ ಎಲ್ಲಿಯೂ ಉಲ್ಲಂಘಿಸಲಿಲ್ಲ. ಹರಿಯ ಪ್ರೇರಣೆಯಿಂದಲೇ ಸ್ವಭಾವತಃ ಕ್ರೂರರಲ್ಲದ ಅಸುರರಿಗೆ ಮಾತ್ರ ದೊಡ್ಡದೊಡ್ಡ ವರಗಳನ್ನು ನೀಡಿದ್ದಾನೆ. ಇದೂ ಸ್ಕಾಂದಪುರಾಣದಲ್ಲಿ ಸ್ಪಷ್ಟವಿದೆ.

ಯಥಾ ಹಿರಣ್ಯಕಸ್ಯಾದಾದಂತಃಸ್ಥಿತಹರೀರಿತಃ ।
ತಥಾ ನಾದಾತ್ ತದನ್ಯಸ್ಯ ಬ್ರಹ್ಮಾ ದೈತ್ಯಸ್ಯ ಕಸ್ಯಚಿತ್ ॥ ಇತಿ ಚ ॥

ಒಳಗಿದ್ದು ಹರಿ ಪ್ರೇರಿಸಿದಂತೆ ಬ್ರಹ್ಮ ಹಿರಣ್ಯಕಶಿಪುವಿಗೆ ಎಂಥ ವರ ನೀಡಿದನೋ ಅಂಥ ವರವನ್ನು ಸ್ವಭಾವದಿಂದ ಅಸುರನಾದ ಯಾವ ಬೇರೆ ದೈತ್ಯನಿಗೂ ನೀಡಲಿಲ್ಲ ಎಂದೂ ಸ್ಕಂದಪುರಾಣದಲ್ಲಿ ಉಕ್ತವಾಗಿದೆ.

❖ ❖ ❖

ಹಿರಣ್ಯಕಶಿಪುವಿನಂತೆ ಪೌಂಡ್ರಕ ನರಕ ಮುಂತಾದವರೂ ಸ್ವಾಭಾವಿಕ ಭಕ್ತರಾಗಿದ್ದು ಹರಿಯಿಂದ ಹತರಾಗಿ ಹರಿಯನ್ನೇ ಹೊಂದಿದರೆಂದು ನಾರದರು ಧರ್ಮರಾಜನಿಗೆ ಹೇಳುತ್ತಾರೆ.

ಏನಃ ಪೂರ್ವಕೃತಂ ಯತ್ತದ್ರಾಜಾನಃ ಕೃಷ್ಣವೈರಿಣಃ ।
ಜಹುಸ್ತೇಽಂತೇ ತದಾತ್ಮಾನಃ ಕೀಟಾಃ ಪೇಶಸ್ಕೃತೋ ಯಥಾ ॥ ೪೦ ॥

ಪೌಂಡ್ರಕನಂಥ ರಾಜರು ಯಾರಾರು ಕೃಷ್ಣನ ವೈರಿಗಳಾಗಿದ್ದರೋ ಅವರೂ ಹೀಗೇ ವೈರಪೂರ್ವಕ ಭಕ್ತಿಯಿಂದ ಕೃಷ್ಣನನ್ನು ಧ್ಯಾನಿಸುತ್ತ ದೈತ್ಯಾವೇಶದಿಂದ ತಾವು ಹಿಂದೆ ಮಾಡಿದ್ದ ಪಾಪವನ್ನು ಅಂತ್ಯಕಾಲದಲ್ಲಿ ಕಳೆದುಕೊಂಡರು, ಕಣಜದ ಧ್ಯಾನದಿಂದ ಕೀಟಗಳು ಕೀಟತ್ವವನ್ನು ಕಳೆದುಕೊಳ್ಳುವಂತೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರ ಪ್ರಕಾರ ಕೃಷ್ಣವೈರಿಗಳಾದ ಎಲ್ಲ ರಾಜರೂ ಅಂತ್ಯಕಾಲದಲ್ಲಿ ಧ್ಯಾನದಿಂದ ಕೃಷ್ಣನ ಸಾರೂಪ್ಯವನ್ನು ಹೊಂದಿ ಹಿಂದೆ ಮಾಡಿದ್ದ ಪಾಪವನ್ನು ತೊಡೆದುಕೊಂಡರು. 'ತದಾತ್ಮಾನಃ' ಎಂದರೆ ಕೃಷ್ಣನ ಸಾದೃಶ್ಯವನ್ನು ಹೊಂದಿದವರು. ಏಕೆಂದರೆ ಭ್ರಮರಕೀಟದೃಷ್ಟಾಂತ ಇಲ್ಲಿ ಉಕ್ತವಾಗಿದೆ. ಕೀಟವು ಭ್ರಮರ ಧ್ಯಾನದಿಂದ ತಾನೂ ಬೇರೆ ಒಂದು ಭ್ರಮರವಾಗುತ್ತದೆ. ಭ್ರಮರ ಸಾದೃಶ್ಯ ಹೊಂದುತ್ತದೆ. ಮುಂದಿನ ಪದ್ಯದಲ್ಲಿ ಸ್ಪಷ್ಟವಾಗಿ 'ನೃಪಾಶ್ಚೈದ್ಯಾದಯಃ ಸಾಮ್ಯಂ' ಎಂದು ಸ್ಪಷ್ಟವಾಗಿಯೇ ಸಾಮ್ಯವನ್ನು ಹೇಳಿದೆ.

ಆದರೆ ಕೃಷ್ಣವೈರಿಗಳಾದ ರಾಜರ ಒಂದು ಶರೀರದಲ್ಲಿ ಜೀವರು ಇಬ್ಬರಿದ್ದಾರೆ. ಅವರಲ್ಲಿ ಒಬ್ಬ ಸ್ವಾಭಾವಿಕವಾಗಿ ಕೃಷ್ಣವೈರಿ. ಇನ್ನೊಬ್ಬ ಅವನಲ್ಲಿ ಅವಿಷ್ಟನಾಗಿ ಅವನಂತೆ ಕೃಷ್ಣನಲ್ಲಿ ವೈರ ಮಾಡುವವನು, ಸ್ವಾಭಾವಿಕವಾಗಿ ಆತ ಕೃಷ್ಣಭಕ್ತ. ಹೀಗೆ ಕೃಷ್ಣವೈರಿಯಲ್ಲಿ ಅವಿಷ್ಟನಾದ ಸ್ವಾಭಾವಿಕ ಕೃಷ್ಣಭಕ್ತನೆ ಹಿಂದೆ ಮಾಡಿದ ಪಾಪವನ್ನು ಧ್ಯಾನದಿಂದ ಕಳೆದುಕೊಳ್ಳುತ್ತಾನೆ. ಧ್ಯಾನವೂ ಕೇವಲ ವೈರದಿಂದಲ್ಲ, ವೈರವಿದ್ದರೂ ಅದು ಗೌಣ. ಏಕೆಂದರೆ ಅದು ಸ್ವಾಭಾವಿಕವಲ್ಲ, ಮಹಾಅನರ್ಥಫಲ ಉಂಟುಮಾಡುವುದೂ ಇಲ್ಲ. ಭಕ್ತಿಯೇ ಪ್ರಧಾನ. ಅದು ಸ್ವಾಭಾವಿಕವಾಗಿದ್ದು ಮಹಾ ಸತ್ಫಲ ಉಂಟುಮಾಡುವಂಥದ್ದು. ಹೀಗೆ ವೈರ ಉಪಸರ್ಜನ, ಗೌಣ. ಅನುಬಂಧ ಅಂದರೆ ಭಕ್ತಿ ಪ್ರಧಾನ. ವೈರೋಪಸರ್ಜನ ಅನುಬಂಧದಿಂದ ಧ್ಯಾನ ಮಾಡಿದಾಗ ಕೃಷ್ಣವೈರಿಯಲ್ಲಿ ಆವಿಷ್ಟನಾದ ಕೃಷ್ಣಭಕ್ತನಾದ ಸಜ್ಜೀವ ಹಿಂದೆ ಮಾಡಿದ ಪಾಪವನ್ನು ಕಳೆದುಕೊಳ್ಳುತ್ತಾನೆ. ಹೀಗೆ 'ತದಾತ್ಮಾನಃ' ಎಂದರೆ ಕೃಷ್ಣವೈರಿಯಲ್ಲಿ ಆವಿಷ್ಟರು, ಕೃಷ್ಣನಲ್ಲಿ ಭಕ್ತರು ಎಂದು ಎರಡೂ ಅರ್ಥ ವಿವಕ್ಷಿತವಾಗಿದೆ.

ಕೃಷ್ಣನ ಸಾದೃಶ್ಯವನ್ನು ಹೊಂದಿದವರೆಂದು ಅರ್ಥಮಾಡುವ ಪಕ್ಷದಲ್ಲಿ ತದಾತ್ಮಾನಃ ಶಬ್ದವೇ ವ್ಯರ್ಥವಾಗುತ್ತದೆ. ಏಕೆಂದರೆ ಹಿಂದಿನ ಪದ್ಯದಿಂದ 'ವೈರಾನುಬಂಧೇನ' ಎಂಬುದನ್ನು ಇಲ್ಲಿಯೂ ಅನ್ವಯಿಸಿಕೊಳ್ಳಲೇಬೇಕು. 'ವೈರಾನುಬಂಧದಿಂದ ಕೃಷ್ಣಸಾದೃಶ್ಯ ಹೊಂದಿದವರು ಪಾಪಮುಕ್ತರಾಗುತ್ತಾರೆ' ಎಂದು ಹೇಳಬೇಕು. ಆಗ ವೈರಾನುಬಂಧದಿಂದ ಪಾಪ ಮುಕ್ತರಾಗುತ್ತಾರೆ ಎಂದು ಹೇಳಿದರೆ ಸಾಕು. ಮುಂದಿನ ಪದ್ಯದಲ್ಲಿ ಹೇಗೂ ಸಾಮ್ಯ ಎಂದು ಫಲವನ್ನು

ಹೇಳುತ್ತಾರೆ. ಆದ್ದರಿಂದ 'ತದಾತ್ಮಾನಃ' ಎಂಬುದಕ್ಕೆ 'ತದಾವಿಷ್ಟಾಃ ತದ್ಭಕ್ತಾಃ' ಎಂದು ಎರಡು ಅರ್ಥವನ್ನಿಟ್ಟುಕೊಂಡರೆ ಆ ಪದಕ್ಕೆ ಸಾರ್ಥಕ್ಯವೂ ಬರುತ್ತದೆ, 'ಆವಿಷ್ಟಾಸ್ತು ಹರೇರ್ಭಕ್ತಾಃ' ಎಂದು ಹೇಳುವ ಸ್ಕಾಂದಪುರಾಣ ವಚನದ ಅಭಿಪ್ರಾಯವೂ ಈ ಪದದಲ್ಲಿ ಗರ್ಭಿತವಾಗುತ್ತದೆ.

ಪೌಂಡ್ರಕೇ ನರಕೇ ಚೈವ ಸಾಲ್ವೇ ಕಂಸೇ ಚ ರುಗ್ಮಿಣಿ ।
ಆವಿಷ್ಟಾಸ್ತು ಹರೇರ್ಭಕ್ತಾಸ್ತದ್ಭಕ್ತ್ಯಾ ಹರಿಮೀಯಿರೇ।
ಅಸುರಾಸ್ತು ಸ್ವಯಂ ತೇ ತು ಮಹಾತಮಸಿ ಪಾತಿತಾಃ ॥

ಇತಿ ಚ ॥

ತದಾತ್ಮಾನಸ್ತತ್ರಾವಿಷ್ಟಾಸ್ತದ್ಭಕ್ತಾಃ।
ವೈರೋಪಸರ್ಜನೇನಾನುಬಂಧೇನೇತ್ಯನ್ವಯಃ ॥

ಪೌಂಡ್ರಕವಾಸುದೇವ ನರಕಾಸುರ ಸಾಲ್ವ ಕಂಸ ರುಗ್ಮಿ ಇವರಲ್ಲಿ ಆವಿಷ್ಟರಾದ ಹರಿಭಕ್ತರು ಹರಿಭಕ್ತಿಯಿಂದ ಹರಿಯನ್ನೇ ಹೊಂದಿದರು. ಸ್ವಯಂ ಅಸುರರು ಮಾತ್ರ ತಾವು ಮಹಾತಮಸ್ಸಿನಲ್ಲಿ ಹಾಕಲ್ಪಟ್ಟರು ಎಂದೂ ಸ್ಕಾಂದಪುರಾಣ ಹೇಳಿದೆ.

'ತದಾತ್ಮಾನಃ' ಎಂದರೆ ಕೃಷ್ಣವೈರಿಗಳಲ್ಲಿ ಆವೇಶಉಳ್ಳವರು ಮತ್ತು ಕೃಷ್ಣನಲ್ಲಿ ಮನಸ್ಸುಳ್ಳವರು ಎಂದು ಎರಡೂ ಅರ್ಥ ವಿವಕ್ಷಿತವಾಗಿದೆ. 'ವೈರಾನುಬಂಧ' ಎಂದರೆ ವೈರಧ್ಯಾನವೆಂದರ್ಥವಲ್ಲ. ಅನುಬಂಧ ಎಂದರೆ ಭಕ್ತಿ. ವೈರವು ಉಪಸರ್ಜನವಾಗಿ ಗೌಣವಾಗಿ ಇರುವಾಗ ಜೊತೆಯಲ್ಲಿ ಪ್ರಧಾನವಾಗಿರುವ ಭಕ್ತಿ ಎಂದರ್ಥ. ಅಂಥ ಭಕ್ತಿಯಿಂದ ಪಾಪಮುಕ್ತರಾದರು ಎಂದು ಅನ್ವಯ ಹೇಳಬೇಕು.

❖ ❖ ❖

ಭಗವತ್ಪ್ರಾಪ್ತಿಗೆ ಭಗವಂತನಲ್ಲಿ ಭಕ್ತಿಯೇ ಸಾಧನ ಹೊರತು ದ್ವೇಷವಲ್ಲ ಎನ್ನುತ್ತ ಪ್ರಹ್ಲಾದ ಚರಿತ್ರೆಯನ್ನು ಉಪಸಂಹಾರ ಮಾಡುತ್ತಿದ್ದಾರೆ ನಾರದರು.

ಏಷಾ ಬ್ರಹ್ಮಣ್ಯದೇವಸ್ಯ ಕೃಷ್ಣಸ್ಯ ಚ ಮಹಾತ್ಮನಃ।
ಅವತಾರಕಥಾ ಪುಣ್ಯಾ ವಧೋ ಯತ್ರಾದಿದೈತ್ಯಯೋಃ ॥ ೪೩ ॥

ಪ್ರಹ್ಲಾದಸ್ಯಾನುಚರಿತಂ ಮಹಾಭಾಗವತಸ್ಯ ಚ।
ಭಕ್ತಿರ್ಜ್ಞಾನಂ ವಿರಕ್ತಿಶ್ಚ ಯಾಥಾತ್ಮ್ಯಂ ಚಾಸ್ಯ ವೈ ಹರೇಃ ॥ ೪೪ ॥

ಸರ್ಗಸ್ಥಿತ್ಯಪ್ಯಯೇಶಸ್ಯ ಗುಣಕರ್ಮಾನುವರ್ಣನಮ್ ।
ಪರಾವರೇಷಾಂ ಸ್ಥಾನಾನಾಂ ಕಾಲೇನಾವ್ಯತ್ಯಯೋ ಮಹಾನ್ ॥ ೪೫ ॥

ಧರ್ಮೋ ಭಾಗವತಾನಾಂ ಚ ಭಗವಾನ್ ಯೇನ ಗಮ್ಯತೇ ।
ಆಖ್ಯಾನೇಽಸ್ಮಿನ್ ಸಮಾಖ್ಯಾತಮಾಧ್ಯಾತ್ಮಿಕಮಶೇಷತಃ ॥ ೪೬ ॥

ಇದು ಆದಿದೈತ್ಯ ಹಿರಣ್ಯಕಶಿಪು ಹಿರಣ್ಯಾಕ್ಷರ ವಧೆಯನ್ನು ಒಳಗೊಂಡಿರುವ ಬ್ರಾಹ್ಮಣಪ್ರಿಯ ಮಹಾತ್ಮ ಶ್ರೀಕೃಷ್ಣನ ಪುಣ್ಯಕರವಾದ ನರಸಿಂಹಾವತಾರ ಕಥೆ.

ಈ ಕಥೆಯಲ್ಲಿ ಮಹಾಭಗವದ್ಭಕ್ತನಾದ ಪ್ರಹ್ಲಾದನ ಚರಿತ್ರೆ ಇದೆ. ಅವನ ಭಕ್ತಿಜ್ಞಾನ ವೈರಾಗ್ಯಗಳು ಮತ್ತು ಹರಿಯ ಯಥಾರ್ಥ ಸ್ವರೂಪ ವರ್ಣನೆಗಳಿವೆ.

ಸೃಷ್ಟಿಸ್ಥಿತಿಲಯಗಳಿಗೆ ಪ್ರಭುವಾದ ಹರಿಯ ಗುಣಕರ್ಮಗಳ ವರ್ಣನೆ ಇದೆ. ದೊಡ್ಡ ಹಾಗೂ ಸಣ್ಣ ಇಂದ್ರಾದಿಪದವಿಗಳು ಕಾಲವಶದಿಂದ ಹೇಗೆ ಮಹತ್ತಾದ ವ್ಯತ್ಯಾಸ ಹೊಂದುತ್ತವೆ ಎಂದೂ ಹೇಳುತ್ತದೆ.

ಮುಖ್ಯವಾಗಿ ಭಗವಂತನನ್ನು ಹೊಂದಲು ಸಾಧನ ಭಾಗವತರ ಧರ್ಮವಾದ ಭಕ್ತಿಯೇ ಹೊರತು ದ್ವೇಷವಲ್ಲ ಎಂದು ಈ ಆಖ್ಯಾನದಲ್ಲಿ ವರ್ಣಿಸಲಾಗಿದೆ. ಭಗವಂತನ ಯಥಾರ್ಥ ಜ್ಞಾನವೇನೆಂಬುದು ಇಲ್ಲಿ ಪೂರ್ತಿಯಾಗಿ ತಿಳಿದುಬರುತ್ತದೆ.

ಈ ಪ್ರಹ್ಲಾದ ಚರಿತ್ರೆಯಲ್ಲಿ ಪ್ರಹ್ಲಾದನ ಜ್ಞಾನಭಕ್ತಿ ವೈರಾಗ್ಯಗಳ ವರ್ಣನೆಯ ಜೊತೆಗೆ ಹಿರಣ್ಯಕಶಿಪುವಿನ ವೈರಪೂರ್ವಕ ಭಕ್ತಿಯ ವರ್ಣನೆಯಿದೆ. ಅವನು ತಾಯಿಗೆ ಉಪದೇಶ ಮಾಡುವಾಗ ಅವನು ಎಂಥ ಭಕ್ತನೆಂಬುದು ಸ್ಪಷ್ಟವಾಗುತ್ತದೆ. ಮುಂದೆ ಅಸುರಾವೇಶದಿಂದ ಹರಿಯಲ್ಲಿ ವೈರವನ್ನೂ ಮಾಡುತ್ತಾನೆ. ಈ ವೈರವನ್ನು ಹರಿ ತಾನು ಕ್ಷಮಿಸಿರುವುದನ್ನೂ ಪ್ರಹ್ಲಾದನ ಮುಂದೆ ಪ್ರೀತಿಯಿಂದ ಹೇಳುತ್ತಾನೆ.

ಬೇರೆ ವ್ಯಾಖ್ಯಾನಕಾರರ ಪ್ರಕಾರ ದ್ವೇಷವು ಭಗವಂತನ ಪ್ರಾಪ್ತಿಗೆ ಹೇಗೆ ಕಾರಣವಾಗುತ್ತದೆ ಎನ್ನುವುದಕ್ಕೆ ದೃಷ್ಟಾಂತವಾಗಿ ಹಿರಣ್ಯಕಶಿಪುವಿನ ಕಥೆ ಹೊರಟಿದೆ. ಆದರೆ ಉಪಕ್ರಮದಲ್ಲಿ ಮೇಲುನೋಟಕ್ಕೆ ಹಾಗೇ ಕಂಡರೂ ಉಪಸಂಹಾರದಲ್ಲಿ ಸ್ಪಷ್ಟವಾಗಿ-

ಧರ್ಮೋ ಭಾಗವತಾನಾಂ ಚ ಭಗವಾನ್ ಯೇನ ಗಮ್ಯತೇ ।

ಭಗವಂತನ ಪ್ರಾಪ್ತಿಗೆ ಸಾಧನವಾದ ಭಾಗವತಧರ್ಮ ಈ ಅಖ್ಯಾನದಲ್ಲಿ

ವರ್ಣಿತವಾಗಿದೆ ಎಂದೇ ಹೇಳಿದೆ. ಭಾಗವತಧರ್ಮವೆಂದರೆ ಭಕ್ತಿಯೇ ಹೊರತು ದ್ವೇಷವಲ್ಲ ಎಂಬುದು ಸರ್ವಸಮ್ಮತ. ಉಪಕ್ರಮಕ್ಕಿಂತ ಪ್ರಬಲವಾದ ಉಪಸಂಹಾರದಲ್ಲಿ ಭಕ್ತಿಯೇ ಭಗವತ್ಪ್ರಾಪ್ತಿ ಸಾಧನ, ದ್ವೇಷವಲ್ಲ ಎಂದಿರುವುದರಿಂದ ಬೇರೆ ವ್ಯಾಖ್ಯಾನಕಾರರ ಅಭಿಪ್ರಾಯ ಭಾಗವತದ್ದಲ್ಲ ಎನ್ನುವುದು ಸ್ಪಷ್ಟ. 'ಧರ್ಮೋ ಭಾಗವತಾನಾಂ ಚ' ಎಂಬಲ್ಲಿ ಚಕಾರ ಏವಕಾರದ ಅರ್ಥದಲ್ಲಿ ಇದೆ. ಇಲ್ಲದಿದ್ದರೆ ಅದು ವ್ಯರ್ಥ. ಏಕೆಂದರೆ ಭಕ್ತಿರ್ಜ್ಞಾನಂ ವಿರಕ್ತಿಶ್ಚ ಎಂದು ಮುಂತಾಗಿ ಹೇಳಿದ ಭಾಗವತ ಧರ್ಮವೇ ಭಗವತ್ಪ್ರಾಪ್ತಿಗೆ ಸಾಧನ, ಯೇನೈವ ಭಗವಾನ್ ಗಮ್ಯತೇ ಸ ಭಾಗವತಾನಾಂ ಧರ್ಮಃ

'ಭಗವಾನ್ ಯೇನ ಗಮ್ಯತೇ' ಇತ್ಯನೇನ ಭಾಗವತ ಧರ್ಮೇಣೈವ ಭಗವಾನ್ ಗಮ್ಯತೇ, ನ ದ್ವೇಷಾದಿನಾ ಇತ್ಯುಪಸಂಹ್ರಿಯತೇ। ವೃತ್ತಾನುಕಥನಂ ಚ ತದರ್ಥತ್ವೇನೈವ। ಜ್ಞಾನಸ್ಯ ವಿಶೇಷಾ ಯಾಥಾತ್ಮ್ಯಾದಯಃ।

ಭಕ್ತಿರ್ಜ್ಞಾನಂ ವಿರಕ್ತಿಶ್ಚ ನವಕಃ ಶ್ರವಣಾದಿಕಃ।
ಧರ್ಮೋ ಭಾಗವತಃ ಪ್ರೋಕ್ತಸ್ತದ್ಭಕ್ತೇಷು ತಥಾ ನವ ॥

ಇತಿ ತಂತ್ರಸಾರೇ॥

'ಭಗವಾನ್ ಯೇನ ಗಮ್ಯತೇ' ಎಂಬ ಮಾತಿನಿಂದ ಭಾಗವತ ಧರ್ಮವೆನಿಸಿದ ಭಕ್ತ್ಯಾದಿಗಳಿಂದಲೇ ಭಗವತ್ಪ್ರಾಪ್ತಿ ಹೊರತು ದ್ವೇಷಾದಿಗಳಿಂದಲ್ಲ ಎಂದು ಉಪಸಂಹಾರ ಮಾಡಲಾಗುತ್ತದೆ. (ಅದರಿಂದ ಇದೇ ಭಾಗವತದ ಅಭಿಪ್ರಾಯ ಹೊರತು ದ್ವೇಷದಿಂದಲೂ ಮುಕ್ತಿ ಎಂದು ಉಪಕ್ರಮದಲ್ಲಿ ಹೇಳಿದ್ದು ಭಾಗವತದ ಅಭಿಪ್ರಾಯವಲ್ಲ. ಗ್ರಂಥದ ತಾತ್ಪರ್ಯನಿರ್ಣಯದಲ್ಲಿ ಉಪಕ್ರಮಕ್ಕಿಂತ ಉಪಸಂಹಾರ ಪ್ರಬಲ)

('ಆಖ್ಯಾತಂ ಸರ್ವಮೇತತ್ತೇ' ಎಂಬುದೂ ಉಪಸಂಹಾರ. ಅದರಲ್ಲಿ 'ದ್ವಿಷಾಮಪಿ ಹರೇಃ ಸಾಮ್ಯಂ' ಎಂದು ದ್ವೇಷಕ್ಕೆ ಮುಕ್ತಿಸಾಧನತ್ವ ಉಕ್ತವಾಗಿದೆ ಎಂಬ ಪ್ರಶ್ನೆ ಬಂದರೆ ಹೀಗೆ ಸಮಾಧಾನ-) 'ಆಖ್ಯಾತಂ ಸರ್ವಮೇತತ್ತೇ' ಎಂಬುದು ಉಪಸಂಹಾರವಲ್ಲ. ಏಕೆಂದರೆ ಮುಂದೆ 'ಬ್ರಹ್ಮಣ್ಯದೇವಸ್ಯ ಕೃಷ್ಣಸ್ಯ ಚ ಮಹಾತ್ಮನಃ ಏಷಾ ಅವತಾರ ಕಥಾ' ಎಂದು ಹಿಂದೆ ಹೇಳಿದ ಇತಿವೃತ್ತವನ್ನು ಸಂಕ್ಷೇಪವಾಗಿ ತಿರುಗಿ ಹೇಳುತ್ತಿದ್ದಾರೆ. ಇದು ಮುಂದೆ 'ಧರ್ಮೋ ಭಾಗವತಾನಾಂ ಚ' ಎಂದು ಉಪಸಂಹಾರ ಮಾಡುವುದಕ್ಕಾಗಿ ಹೇಳಿದ್ದು.

ಭಾಗವತಧರ್ಮ ಯಾವುದೆಂದು ತಿಳಿಸಲು ಭಕ್ತಿರ್ಜ್ಞಾನಂ ವಿರಕ್ತಿಶ್ಚ ಎಂದು ಮುಂತಾಗಿ ಹೇಳಿದ್ದಾರೆ. ಅದರಲ್ಲಿ 'ಯಾಥಾತ್ಮ್ಯಂ ಚಾಸ್ಯ' ಎಂದು ಮುಂತಾಗಿ ಜ್ಞಾನ ಹೇಗಿರಬೇಕೆಂಬುದರ ವಿವರಣೆಯೇ ಹೊರತು ಅದು ಪ್ರತ್ಯೇಕವಾಗಿ ಭಾಗವತ ಧರ್ಮವಲ್ಲ.

ಭಕ್ತಿ ಜ್ಞಾನ ವಿರಕ್ತಿ ಇವು ಮೂರು ಮತ್ತು ಅವುಗಳಿಗೆ ಬಾಹ್ಯ ಚಿಹ್ನರೂಪಗಳಾದ ಶ್ರವಣಾದಿ ನವವಿಧವಾದ ಭಕ್ತರ ಆಚರಣೆಗಳು ಭಾಗವತ ಧರ್ಮವೆನಿಸುತ್ತವೆ. ಭಗವದ್ಭಕ್ತರ ಕುರಿತಾದ ಭಕ್ತಿ ಜ್ಞಾನ ವಿರಕ್ತಿಗಳು ಮತ್ತು ಶ್ರವಣಾದಿಗಳೂ ಭಾಗವತ ಧರ್ಮವೆನಿಸುತ್ತವೆ. ಇದು ತಂತ್ರಸಾರಗ್ರಂಥದಲ್ಲಿ ಸ್ಪಷ್ಟವಿದೆ.

❖❖❖

ಪ್ರಹ್ಲಾದನಿಗಿಂತಲೂ ನಿಮ್ಮ ಮೇಲೆಯೇ ಭಗವಂತನಿಗೆ ಹೆಚ್ಚು ಪ್ರೀತಿ ಎಂದು ನಾರದರು ಧರ್ಮರಾಜನಿಗೆ ಹೇಳುತ್ತಾರೆ.

ಸ ವಾ ಅಯಂ ಬ್ರಹ್ಮ ಮಹದ್ವಿಮೃಗ್ಯಂ
ಕೈವಲ್ಯನಿರ್ವಾಣಸುಖಾನುಭೂತಿಃ ।
ಪ್ರಿಯಃ ಸುಹೃದ್ವಃ ಖಲು ಮಾತುಲೇಯ
ಆತ್ಮಾರ್ಹಣೀಯೋ ವಿಧಿಕೃದ್ಗುರುಶ್ಚ ॥ ೫೦ ॥

ಪ್ರಹ್ಲಾದವರದ ನರಸಿಂಹನೇ ಈ ಕೃಷ್ಣ. ನಿಮ್ಮ ಪ್ರಿಯಮಿತ್ರ. ಸೋದರಮಾವನ ಮಗ. ನಿಮಗೆ ಪೂಜ್ಯನಾದ ಸ್ವಾಮಿಯಾಗಿದ್ದೂ ನಿಮ್ಮ ಆಜ್ಞೆಯನ್ನು ಪಾಲಿಸುತ್ತಾನೆ, ಹಿತವನ್ನು ಉಪದೇಶಿಸುತ್ತಾನೆ. ಮಹಾತ್ಮರಾದ ಬ್ರಹ್ಮಾದಿಗಳು ಅರಸುವುದು ಈ ಗುಣಪೂರ್ಣವಾದ ಪರವಸ್ತುವನ್ನೇ. ಸ್ವತಂತ್ರವಾಗಿ ಸ್ವರೂಪಸುಖಾನುಭವ ಉಳ್ಳವನು ಈತನೇ.

ಇಲ್ಲಿ 'ಕೈವಲ್ಯನಿರ್ವಾಣಸುಖಾನುಭೂತಿಃ' ಎಂದರೆ ಏನೆಂದು ಬೇರೆ ವ್ಯಾಖ್ಯಾನಕಾರರು ಸ್ಪಷ್ಟ ಹೇಳುವುದಿಲ್ಲ. 'ನಿರುಪಾಧಿಃ ಪರಮಾನಂದಃ' ನಿರುಪಾಧಿಕವಾದ ಪರಮಾನಂದವೇ ಕೈವಲ್ಯನಿರ್ವಾಣಸುಖ ಎನ್ನುತ್ತಾರೆ. 'ನಿರ್ವಾಣಸುಖ'ವೆಂದರೆ ಮೋಕ್ಷಸುಖವೆಂದು ಅರ್ಥ ಪ್ರಸಿದ್ಧ. ಇದು ಮುಕ್ತಿ ಹೊಂದುವ ಜೀವರಿಗೆ ಲಭ್ಯ. ನಿತ್ಯಮುಕ್ತನಾದ ಪರಮಾತ್ಮನಿಗೆ ಎಂದೂ ಜೀವರಿಗಿರುವಂತೆ ಬಾಹ್ಯ ಜಡಶರೀರದಿಂದ ಅನುಭವಕ್ಕೆ ಬರುವ ಸುಖವಿಲ್ಲ, ಅವನಿಗೆ ಎಂದೂ

ಬಾಹ್ಯಜಡಶರೀರವಿಲ್ಲ, ಅಶರೀರನೆನಿಸಿದ್ದಾನೆ. ಅದರಿಂದ 'ಬಾಹ್ಯಜಡಶರೀರದಿಂದ ಬಾರದ ಸ್ವರೂಪಸುಖವೇ ನಿರ್ವಾಣಸುಖ' ಎನ್ನಬೇಕು. ಅಂಥ ಸುಖದ ಅನುಭವ ಮಾತ್ರವೇ ಅವನಿಗಿದೆ ಎನ್ನಬೇಕು.

ನಿರ್ವಾಣಸುಖಂ ಅಶರೀರಸುಖಂ ।

ಏತದ್ ಬಾಣಮವಷ್ಟಭ್ಯೇತಿ ಶ್ರುತೇಃ ।

ನಿರ್ವಾಣಸುಖವೆಂದರೆ ಎಂದೂ ಬಾಹ್ಯಜಡಶರೀರದಿಂದ ಬಾರದಿದ್ದ ಸ್ವರೂಪಸುಖ. ಏಕೆಂದರೆ ವಾಣ ಅಥವಾ ಬಾಣ ಎಂದರೆ ಶರೀರ. 'ಏತದ್ ಬಾಣಮವಷ್ಟಭ್ಯ' 'ಈ ಶರೀರವನ್ನು ಆಶ್ರಯಿಸಿ' ಎಂದು ಶ್ರುತಿಯಲ್ಲಿ ಶರೀರ ಎಂಬ ಅರ್ಥದಲ್ಲಿ ಬಾಣಶಬ್ದವನ್ನು ಪ್ರಯೋಗಿಸಲಾಗಿದೆ.

ಜಡಶರೀರದಿಂದ ಬಾರದ, ಕೇವಲ ಸ್ವರೂಪ ಶರೀರದಲ್ಲಿಯೇ ವ್ಯಕ್ತವಾಗುವ ನಿರ್ವಾಣಸುಖ ಮುಕ್ತಜೀವರಿಗೂ ಇದೆಯಾದರೂ 'ಕೈವಲ್ಯ'ದಿಂದ ಸ್ವಾತಂತ್ರ್ಯದಿಂದ ಅವರಿಗೆ ಆ ಸುಖ ವ್ಯಕ್ತವಾಗುವುದಿಲ್ಲ. ಪರಮಾತ್ಮನ ಸುಖ ಸ್ವತಂತ್ರವಾಗಿ ಸದಾ ವ್ಯಕ್ತವಾಗುವಂಥದ್ದು ಎಂದು ಹೇಳಲು 'ಕೈವಲ್ಯ'ಪದವಿದೆ. ಬೇರೆ ವ್ಯಾಖ್ಯಾನಕಾರರಿಗೆ ಕೈವಲ್ಯವೆಂದರೂ ನಿರ್ವಾಣವೆಂದರೂ ಮೋಕ್ಷ ಎಂದೇ ಅರ್ಥ. ಅದರಿಂದ ಪುನರುಕ್ತಿ ದೋಷವಿದೆ.

'ಏತದ್ ಬಾಣಮವಷ್ಟಭ್ಯ' ಎಂದು ಉದಾಹೃತವಾದ ಶ್ರುತಿಯಲ್ಲಿ ಬಾಣ ಎಂದರೆ ಶರೀರ. ಆದರೆ 'ನಿರ್ವಾಣ' ಶಬ್ದದಲ್ಲಿರುವುದು 'ವಾಣ' ಎಂದು, 'ಬಾಣ' ಎಂದಲ್ಲ. ಆದರೂ

ರಲಯೋರ್ವಬಯೋಶ್ಚೈವ ಖಷಯೋರ್ಡಲಯೋಸ್ತಥಾ ।

ವದಂತಿ ಕೇಚಿತ್ ಸಾವರ್ಣ್ಯಂ ।

ಕೆಲವು ವೈಯಾಕರಣಿಗಳು ರ-ಲ, ವ-ಬ, ಖ-ಷ, ಡ-ಲ ಗಳಿಗೆ ಸಾವರ್ಣ್ಯವನ್ನು ಅಂದರೆ ಸಾಜಾತ್ಯವನ್ನು ಹೇಳುತ್ತಾರೆ. ಅದರಿಂದ 'ಬ'ದಲ್ಲಿ ಹೇಗೋ ಹಾಗೆ 'ವ'ದಲ್ಲಿಯೂ ಬತ್ವಜಾತಿ ಇದೆ. ಅದರಿಂದ ಬಾಣ ಶಬ್ದಾರ್ಥವನ್ನು ವಾಣ ಶಬ್ದವೂ ಹೇಳಬಹುದು.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ಸಪ್ತಮಸ್ಕಂಧೇ
ದಶಮೋಽಧ್ಯಾಯಃ

❖ ❖ ❖

ಅಧ್ಯಾಯ ೧೧

ಅಧ್ಯಾಯ ಸಾರಾಂಶ

ಪ್ರಹ್ಲಾದನ ಚರಿತ್ರೆಯನ್ನು ಹೇಳಿ ನಾರದರು ಮುಂದೆ ಶಿವ ತ್ರಿಪುರದಹನ ಮಾಡಿದ ಕಥೆಯನ್ನು ಧರ್ಮರಾಜನಿಗೆ ಹೇಳಿದರು. 'ಮಯಾಸುರ ಚಿನ್ನ ಬೆಳ್ಳಿ ಕಬ್ಬಿಣಗಳಿಂದ ಮೂರು ಪಟ್ಟಣಗಳನ್ನು ನಿರ್ಮಿಸಿ ಅಸುರರಿಗೆ ನೀಡಿದ. ಆ ಪಟ್ಟಣಗಳು ಆಕಾಶದಲ್ಲಿ ಸಂಚರಿಸುವಂಥವು. ಅವು ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗುವುದು ಬರುವುದು ಯಾರಿಗೂ ತಿಳಿಯುತ್ತಿರಲಿಲ್ಲ. ಅಪಾರ ಶಸ್ತ್ರಾಸ್ತ್ರಗಳಿಂದ ಅವು ತುಂಬಿದ್ದುವು. ಅಸುರರು ಆ ಪಟ್ಟಣಗಳ ಬಲದಿಂದ ಮೂಲೋಕಗಳನ್ನು ನಾಶ ಮಾಡಲು ತೊಡಗಿದರು.

ಲೋಕಪಾಲಕರು ರುದ್ರನನ್ನು ಮೊರೆಹೊಕ್ಕರು. ರುದ್ರ ಅವರಿಗೆ ಅಭಯನೀಡಿ ಪಟ್ಟಣಗಳ ಮೇಲೆ ಬಾಣಪ್ರಯೋಗ ಮಾಡಿ ಅಸುರರನ್ನು ವಧಿಸಿದ. ಆದರೆ ಮಯಾಸುರ ಸತ್ತ ಅಸುರರನ್ನೆಲ್ಲ ಸಿದ್ಧರಸದ ಬಾವಿಯಲ್ಲಿ ಹಾಕಿದ. ಆ ಸಿದ್ಧರಸ ಅಮೃತದಂತಿತ್ತು. ಅದರ ಸ್ಪರ್ಶದಿಂದ ಅಸುರರು ಪುನಃ ವಜ್ರಕಾಯರಾಗಿ ಮಹಾಪರಾಕ್ರಮಿಗಳಾಗಿ ಎದ್ದು ಬಂದರು. ಇದನ್ನು ನೋಡಿ ರುದ್ರ ಹತಾಶನಾದ, ದುಃಖಿತನಾದ.

ಅದಕ್ಕೆ ವಿಷ್ಣು ಉಪಾಯ ಹೂಡಿದ. ತಾನು ಗೋರೂಪ ಧರಿಸಿದ. ಕರುವಾದ ಬ್ರಹ್ಮನೊಂದಿಗೆ ಸಿದ್ಧರಸದ ಬಾವಿಯಲ್ಲಿ ಇಳಿದು ಎಲ್ಲ ರಸವನ್ನೂ ಕುಡಿದು ಬರಿದು ಮಾಡಿಬಿಟ್ಟ. ಅಸುರರು ಇದನ್ನು ನೋಡುತ್ತಿದ್ದರೂ ವಿಷ್ಣುಮಾಯೆಯಿಂದ ಮೋಹಿತರಾಗಿ ಸುಮ್ಮನಿದ್ದರು.

ಮಹಾಯೋಗಿಯಾದ ಮಯಾಸುರ ರಸವನ್ನು ಕಾಯುತ್ತಿದ್ದ ಅಸುರರಿಗೆ ಸಮಾಧಾನ ಮಾಡಿದ. 'ಹರಿಸಂಕಲ್ಪದಿಂದ ಆಗುವುದನ್ನು ನಿವಾರಿಸಲು ಯಾರೂ ಸಮರ್ಥರಲ್ಲ' ಎಂದು. ಬಳಿಕ ರುದ್ರನ ಪುಣ್ಯದಿಂದ ರಥವಾಗಿ ಬಂದ ಭೂಮಿ ಧನುಸ್ಸಾಗಿ ಬಂದ ಮೇರುಪರ್ವತ ಮುಂತಾದವುಗಳಲ್ಲಿ ವಿಷ್ಣು ಶಕ್ತಿತುಂಬಿ ಎಲ್ಲ ಯುದ್ಧಸಾಮಗ್ರಿಗಳನ್ನು ರುದ್ರನಿಗಿತ್ತ. ರುದ್ರ

ಅಭಿಜಿನ್ಮುಹೂರ್ತ ದಲ್ಲಿ ಭಗವಂತನ ತೇಜಸ್ಸಿನಿಂದ ರಕ್ಷಿತವಾದ ಬಾಣದಿಂದ ಮೂರು ಪಟ್ಟಣಗಳನ್ನು ಸುಟ್ಟುಬಿಟ್ಟ. ತ್ರಿಪುರಾರಿ ಎನಿಸಿದ. ಹೀಗೆ ಶ್ರೀಹರಿಯ ಲೀಲೆಗಳು ಅದ್ಭುತ, ಲೋಕಪಾವನ, ಋಷಿಗಳು ಕೊಂಡಾಡುವಂಥವು.

❖ ❖ ❖

ತ್ರಿಪುರ ದಹನ ಕಾಲದಲ್ಲಿ ರುದ್ರದೇವರಿಗೆ ಶ್ರೀಹರಿ ಅನುಗ್ರಹಿಸಿದ ಕಥೆಯನ್ನು ನಾರದರು ಧರ್ಮರಾಜನಿಗೆ ಹೇಳುತ್ತಾರೆ.

ಸ ಏಷ ಭಗವಾನ್ ರಾಜನ್ ವ್ಯತನೋದ್ವಿತತಂ ಯಶಃ ।
ಪುರಾ ರುದ್ರಸ್ಯ ದೇವಸ್ಯ ಮಯೇನಾನಂತಮಾಯಿನಾ ॥ ೧ ॥

ಹಿಂದೊಮ್ಮೆ ರುದ್ರನಿಗೆ ಸಂಶಯಬಂದಿತ್ತು, ಎಲ್ಲವೂ ಹರಿಯ ಅಧೀನ ಹೌದೆ ಅಲ್ಲವೆ ಎಂದು. ಬಹುಮಾಯಾವಿಯಾದ ಅಲ್ಪನಾದ ಮಯಾಸುರನಿಂದ ರುದ್ರನಿಗೆ ಪ್ರತಿಕ್ರಿಯೆ ಮಾಡಿಸುವ ಮೂಲಕ ಈ ಭಗವಾನ್ ಶ್ರೀಹರಿ ರುದ್ರನ ಆ ಸಂಶಯವನ್ನು ಪರಿಹರಿಸಿದ. ಅವನ ಕೀರ್ತಿಯನ್ನೂ ಹಬ್ಬಿಸಿದ.

ಶ್ರೀಹರಿ ಪ್ರಹ್ಲಾದನಿಗೆ ಬಂದಿದ್ದ ಆಪತ್ತನ್ನು ಕಳೆದು ಮಹಾಭಾಗವತನೆಂಬ ಕೀರ್ತಿಯನ್ನು ಅವನಿಗೆ ತಂದಿತ್ತ. ಅದೇರೀತಿ ರುದ್ರನಿಗೆ ಅಸುರಾವೇಶದಿಂದ ಬಂದಿದ್ದ ಸಂಶಯವನ್ನು ಪರಿಹರಿಸಿ ವೈಷ್ಣವಾಗ್ರೇಸರನೆಂಬ ಕೀರ್ತಿಯನ್ನು ಅವನಿಗೆ ತಂದಿತ್ತ. ಇದು ಭಾಗವತ ಶ್ಲೋಕದಲ್ಲಿ ಸ್ಪಷ್ಟ ಹೇಳಿಲ್ಲ. ಅದನ್ನು ಅಧ್ಯಾಹಾರ ಮಾಡಿಕೊಳ್ಳಬೇಕು. ಇಲ್ಲದಿದ್ದರೆ ವಾಕ್ಯ ಪೂರ್ಣವಾಗುವುದಿಲ್ಲ.

'ಈ ಭಗವಾನ್ ಶ್ರೀಹರಿ ರುದ್ರದೇವನ ಯಶಸ್ಸನ್ನು ಹಬ್ಬಿಸಿದ. ಬಹುಮಾಯಾವಿಯಾದ ಮಯಾಸುರನಿಂದ'. ಈ ಎರಡು ವಾಕ್ಯಗಳು ಅಪೂರ್ಣ. ಮೊದಲನೆ ವಾಕ್ಯದಲ್ಲಿ ಯಶಸ್ಸನ್ನು ಹಬ್ಬಿಸಿದ. ಹೇಗೆ ಎಂಬುದನ್ನು ಹೇಳಿಲ್ಲ. 'ವೈಷ್ಣವಾಗ್ರಣಿ' ಎಂಬ ಯಶಸ್ಸಿಗೆ ಘಾತಕವಾಗಿದ್ದ ಹರಿಯ ಸರ್ವೇಶ್ವರತ್ವದ ಬಗ್ಗೆ ಮೂಡಿದ್ದ ಸಂಶಯವನ್ನು ಕಳೆಯುವ ಮೂಲಕ ಎಂದು ಸೇರಿಸಿ ವಾಕ್ಯಪೂರ್ತಿ ಮಾಡಬೇಕು. ಎರಡನೇ ವಾಕ್ಯದಲ್ಲಿ 'ಬಹುಮಾಯಾವಿಯಾದ ಮಯಾಸುರನಿಂದ' ರುದ್ರದೇವನಿಗೆ ಏನು ಮಾಡಿಸಿದನೆಂಬುದನ್ನು ಹೇಳಿಲ್ಲ. ರುದ್ರನು ತ್ರಿಪುರಾಸುರರನ್ನು ಸಂಹರಿಸಿದರೆ ಆ ಕ್ರಿಯೆಗೆ ಪ್ರತಿಯಾಗಿ ಮಯಾಸುರ ಆ ಅಸುರರನ್ನು ಸಿದ್ಧರಸದ ಬಾವಿಯಲ್ಲಿ ಹಾಕಿ ತಿರುಗಿ ಬದುಕಿಸುವ ಕ್ರಿಯೆಯನ್ನು

ಮಾಡಿದ. ರುದ್ರದೇವನಿಗೆ ಪ್ರತಿಕ್ರಿಯೆಯನ್ನು ಮಯನಿಂದ ಹೀಗೆ ಹರಿ ಮಾಡಿಸಿ, ಆ ಮೂಲಕ ರುದ್ರನಿಗೆ ತಾನು ಸರ್ವೇಶ್ವರನಲ್ಲ, ಹರಿಯೇ ಸರ್ವೇಶ್ವರ, ಎಲ್ಲವೂ ಅವನ ಅಧೀನ ಎಂದು ಜ್ಞಾನೋದಯವಾಗುವಂತೆ ಮಾಡಿ ಆ ಬಗ್ಗೆ ಸಂಶಯ ಪರಿಹಾರ ಮಾಡಿ ಅನುಗ್ರಹಿಸಿದನೆಂದು ಹೇಳಿದರೆ ವಾಕ್ಯಪೂರ್ತಿಯಾಗುವುದು. ಹೇಳಿಲ್ಲ, ಅದರಿಂದ ಅಧ್ಯಾಹಾರ ಮಾಡಿಕೊಳ್ಳಬೇಕು.

ಬೇರೆ ವ್ಯಾಖ್ಯಾನಕಾರರಿಗೆ ಈ ಸಮಸ್ಯೆ ಬರಲಿಲ್ಲ. ಏಕೆಂದರೆ

'ಸ ಏಷ ಭಗವಾನ್ ರಾಜನ್ ವ್ಯತನೋದ್ ವಿಹತಂ ಯಶಃ।'

ಎಂದು ಪಾಠವಿಟ್ಟುಕೊಂಡು 'ಮಯೇನಾನಂತಮಾಯಿನಾ ವಿಹತಂ' ಎಂದು ಅನ್ವಯಿಸಿ 'ರುದ್ರನ ತ್ರಿಪುರಾರಿ ಎಂಬ ಕೀರ್ತಿಯನ್ನು ಮಯ ಕೆಡಿಸಿದ್ದ, ಅದನ್ನು ಶ್ರೀಹರಿ ಹಬ್ಬಿಸಿದ' ಎಂದು ವ್ಯಾಖ್ಯಾನಿಸಿದ್ದಾರೆ. 'ವಿತತಂ' ಎಂಬುದನ್ನು 'ವಿಹತಂ' ಎಂದು ಮಾರ್ಪಡಿಸಿದ್ದಾರೆ.

'ಏಕೋ ರುದ್ರೋ ನ ದ್ವಿತೀಯೋಽವತಸ್ಥೇ' ಇತ್ಯಾದಿ ಶ್ರುತಿಗಳನ್ನು ಕಂಡು ಅಜ್ಞಜನರು ರುದ್ರನೇ ಪರಮೇಶ್ವರನೆಂದುಕೊಂಡಿದ್ದಾರೆ. ಅಲ್ಪನಾದ ಮಯಾಸುರ ರುದ್ರನ ಕ್ರಿಯೆಗೆ ಪ್ರತಿಕ್ರಿಯೆ ಮಾಡಬಲ್ಲನೆಂದರೆ ಅದು ರುದ್ರನ ಪರಮೇಶ್ವರತ್ವಕ್ಕೆ ಕುಂದು ತರುವಂಥದ್ದು. ಹೀಗಾಗಿ ಮಯ ರುದ್ರನ ಯಶಸ್ಸನ್ನು ನಾಶಮಾಡಿದ್ದ ಎನ್ನಬೇಕು ಆದರೆ ಶ್ರೀಹರಿ, ಮಯನನ್ನು ನಿಗ್ರಹಿಸಿದ ಮಾತ್ರಕ್ಕೆ ಹರನಿಗೆ ಆ ಪರಮೇಶ್ವರತ್ವ ತಿರುಗಿ ಬರುವುದೆ? ಒಮ್ಮೆ ಹೋದ ಮಾನ ತಿರುಗಿ ಬಂದೀತೆ?

'ಪರಮೇಶ್ವರ ರುದ್ರ' ಎಂದು ರುದ್ರನಿಗೆ 'ಯಶಸ್ಸು' ಎಂದೂ ಇರಲಿಲ್ಲ. ಶ್ರುತಿಯನ್ನು ಕಂಡು ಅಜ್ಞರು ಹಾಗೆ ಭ್ರಮಿಸಿದ್ದರಷ್ಟೆ. ಅವರು ಹಾಗೆ ಪೂಜಿಸಿದ್ದರಿಂದ ಹರನಿಗೂ ಸಂಶಯ ಬಂದಿತು. ತಾನೇ ಪರಮೇಶ್ವರನಿರಬಹುದೆ? ಎಂದು. ಆ ಸಂಶಯವನ್ನು ಹರಿ ಪರಿಹಾರ ಮಾಡಿದ್ದಾನೆ. 'ಪರಮ ವೈಷ್ಣವಾಗ್ರೇಸರ'ನೆಂದು ಕೀರ್ತಿ ಹರನಿಗೆ ಮೊದಲೇ ಇತ್ತು, ಅದನ್ನು ಹರಿ ಈಗ ಇನ್ನೂ ಹೆಚ್ಚು ಹಬ್ಬಿಸಿದ ಎನ್ನಬೇಕು.

'ತ್ರಿಪುರಾರಿರುದ್ರ' ಎಂಬ ಕೀರ್ತಿಯನ್ನು ಮಯ ನಾಶಪಡಿಸಿದನೆನ್ನುವುದೂ ಕೂಡುವುದಿಲ್ಲ. ರುದ್ರನಿನ್ನೂ ತ್ರಿಪುರಗಳನ್ನು ಸುಟ್ಟಿಲ್ಲ, ಆ ಪ್ರಯತ್ನದಲ್ಲಿದ್ದಾನಷ್ಟೆ. ಆ ಕೀರ್ತಿಗೆ ಅಡ್ಡಿಯಾಗಿದ್ದ ಮಯನನ್ನು ನಿಗ್ರಹಿಸಿ ಶ್ರೀಹರಿ ಆ ಕೀರ್ತಿಯನ್ನು ತಂದಿತ್ತನೆನ್ನಬೇಕು. ಹೀಗಾಗಿ ಬೇರೆ ವ್ಯಾಖ್ಯಾನಕಾರರ ಪಾಠ ಯುಕ್ತವಲ್ಲ, ಅನನ್ವಿತವಾಗಿದೆ.

ತದಧೀನಂ ವಾ ಸರ್ವಂ, ನ ವೇತಿ ಸಂಶಯಂ ರುದ್ರಸ್ಯಾಹನತ್ ।
ಅಲ್ಪಕೇನೈವ ಮಯೇನ ರುದ್ರಸ್ಯ ಪ್ರತೀಕಾರಂ ಕೃತ್ವಾ॥

ಎಲ್ಲವೂ ಹರಿಯ ಅಧೀನವೆ ಅಥವಾ ಅಲ್ಲವೆ ಎಂಬ ಸಂಶಯವನ್ನು ರುದ್ರನಿಗೆ ಪರಿಹರಿಸಿದ, ಶ್ರೀಹರಿ. ಹೇಗೆಂದರೆ ಅಲ್ಪನಾದ ಮಯನಿಂದ ರುದ್ರನಿಗೆ ಪ್ರತೀಕಾರ ಮಾಡಿಸಿದ್ದಾನೆ.

'ಮಯೇನಾನಂತ ಮಾಯಿನಾ' ಎಂದು ಭಾಗವತದಲ್ಲಿ ಮಯನಲ್ಲಿ ಅನಂತ ಮಾಯೆಗಳಿದ್ದುವು ಎಂದಿದೆ. ಇಲ್ಲಿ ಅನಂತ ಎಂದರೆ ನೂರಾರು ಸಾವಿರಾರು ಮಾಯೆಗಳೆಂದರ್ಥ. ಏಕೆಂದರೆ ಅವನ ಎಲ್ಲ ಮಾಯೆಗಳೂ ಬರಿದಾದುದು ಕಂಡಿದೆ. ಈ ನೂರಾರು ಸಾವಿರಾರು ಮಾಯೆಗಳು ಅಶಕ್ತಿಯನ್ನು ತೋರಿಸುತ್ತವೆ. ಶಕ್ತಿ ಉಳ್ಳವರು ಮಾಯೆಯಿಂದ ಇದಿರಾಳಿಗಳನ್ನು ಮಣಿಸುವುದಿಲ್ಲ. ಅದರಿಂದ ಬಹಳ ಮಾಯೆಉಳ್ಳ ಮಯಾಸುರ ಅತ್ಯಂತ ಅಶಕ್ತ ಅಲ್ಪ ಎಂದು ಶ್ರೀಮದಾಚಾರ್ಯರು ಅದರ ತಾತ್ಪರ್ಯವನ್ನು ತಿಳಿಸಿದ್ದಾರೆ.

ಮತ್ತು 'ಮಯೇನ ಕೃತ್ವಾ' ಎಂದಿದೆ. 'ಮಯೇನ ಕಾರಯಿತ್ವಾ' ಎನ್ನ ಬೇಕಾಗಿತ್ತು. ಮಯನನ್ನು ನಿಮಿತ್ತ ಮಾತ್ರವಾಗಿ ಇಟ್ಟುಕೊಂಡು ಹರಿಯೇ ರುದ್ರನಿಗೆ ಪ್ರತಿಕ್ರಿಯೆ ಮಾಡಿದ್ದಾನೆ, ಅಲ್ಪನಾದ ಮಯನಿಗೆ ಮಾಯೆಯಿಂದಲಾದರೂ ರುದ್ರನಲ್ಲಿ ಪ್ರತೀಕಾರ ಮಾಡುವ ಶಕ್ತಿ ಎಲ್ಲಿಂದ ಎಂಬುದನ್ನು 'ಕೃತ್ವಾ' ಶಬ್ದದಿಂದ ಸೂಚಿಸಿದ್ದಾರೆ. ಅದರಿಂದ ಈ ಶಬ್ದಗಳನ್ನೇ ಮೂಲ ಶ್ಲೋಕದಲ್ಲಿ ಅಧ್ಯಾಹಾರ ಮಾಡುವುದು ಸೂಕ್ತ.

ನಮ್ಮ ಪಾಠದಲ್ಲಿ ಅಧ್ಯಾಹಾರ ದೋಷವಲ್ಲವೆ ಎಂದರೆ ಅಪ್ರಾಮಾಣಿಕ ಅಧ್ಯಾಹಾರ ದೋಷವಾಗುತ್ತದೆ ಹೊರತು ಪ್ರಾಮಾಣಿಕ ಅಧ್ಯಾಹಾರ ದೋಷವಲ್ಲ. 'ಅಥಾತೋ ಬ್ರಹ್ಮಜಿಜ್ಞಾಸಾ' 'ಬಳಿಕ ಬ್ರಹ್ಮವಿಚಾರ' ಎಂದು ವಾಕ್ಯವನ್ನು ಪೂರ್ತಿಮಾಡಲು 'ತದ್‌ವಿಜಿಜ್ಞಾಸಸ್ವ' ಎಂದು ಶ್ರುತಿಸಿದ್ಧವಾದ 'ಕರ್ತವ್ಯ' ಪದಾಧ್ಯಾಹಾರ ಮಾಡುವುದು ಹೇಗೆ ದೋಷವಲ್ಲವೋ ಹಾಗೆ. ಇದನ್ನು ಮುಂದೆ ಶ್ರೀಮದಾಚಾರ್ಯರು ಸ್ಪಷ್ಟಪಡಿಸುತ್ತಾರೆ. ಸೂತ್ರಭಾಷ್ಯದಲ್ಲಿಯೂ ಹೇಳಿದ್ದಾರೆ.

❖ ❖ ❖

ತ್ರಿಪುರ ದಹನಕಾಲದಲ್ಲಿ ರುದ್ರದೇವರಿಗೆ ಮಯಾಸುರನಿಂದಾದ ಅಡ್ಡಿ, ಅದನ್ನು ಶ್ರೀಹರಿ ಪರಿಹರಿಸಿದುದು ಇವನ್ನು ವಿವರವಾಗಿ ಹೇಳುವಂತೆ ಧರ್ಮರಾಜ ನಾರದರನ್ನು ಕೇಳಿಕೊಳ್ಳುತ್ತಾನೆ.

ರಾಜೋವಾಚ

ಕಸ್ಮಿನ್ ಕರ್ಮಣಿ ದೇವಸ್ಯ ಯಶೋಽಭೂಜ್ಜಗದೀಶಿತುಃ ।
ಯಥಾ ಚೋಪಚಿತಾ ಕೀರ್ತಿಃ ಕೃಷ್ಣೇನಾನೇನ ಕಥ್ಯತಾಮ್ ॥ ೨ ॥

ಧರ್ಮರಾಜ ನುಡಿದ- ಯಾವ ಕಾರ್ಯದಲ್ಲಿ ಮಯಾಸುರ ಜಗದೀಶನಾದ ರುದ್ರನಿಗೆ ವಿರೋಧವಾಗಿ ಪ್ರತಿಕ್ರಿಯೆ ಮಾಡಿದ? ಮತ್ತು ಕೊನೆಯಲ್ಲಿ ರುದ್ರನಿಗೆ ಯಶಸ್ಸು ಹೇಗೆ ಬಂದಿತು? ಈ ಕೃಷ್ಣ ರುದ್ರನ ಕೀರ್ತಿಯನ್ನು ಹೇಗೆ ಹೆಚ್ಚಿಸಿದನೆಂಬುದನ್ನು ಹೇಳಿರಿ.

ಇಲ್ಲಿಯೂ ಬೇರೆ ವ್ಯಾಖ್ಯಾನಕಾರರು,

'ಕಸ್ಮಿನ್ ಕರ್ಮಣಿ ದೇವಸ್ಯ ಮಯೋಽಹನ್ ಜಗದೀಶಿತುಃ'

ಎಂದು ಬೇರೆ ಪಾಠವಿಟ್ಟುಕೊಂಡಿದ್ದಾರೆ. 'ಯಾವ ಕಾರ್ಯದಲ್ಲಿ ಮಯಾಸುರ ರುದ್ರದೇವರ ಕೀರ್ತಿಯನ್ನು ಕೆಡಿಸಿದ?' ಎಂದು ವ್ಯಾಖ್ಯಾನಿಸಿದ್ದಾರೆ. ಆದರೆ ಕೀರ್ತಿ 'ತಾನು ಪರಮೇಶ್ವರ' ಎಂದೆನ್ನುವುದಾದರೆ ಅದನ್ನು ಯಾರೂ ಹೆಚ್ಚಿಸುವುದಾಗದು. 'ತಾನು ತ್ರಿಪುರಾರಿ' ಎನ್ನುವುದಾದರೆ ಆ ಕೀರ್ತಿ ಇನ್ನೂ ಬಂದಿಲ್ಲ, ಅದನ್ನು ಮಯ ಕೆಡಿಸುವಂತಿಲ್ಲ, ಅಡ್ಡಿಪಡಿಸಬಹುದು. ಆದರೆ ಅದೂ ಹಿಂದಿನ ಶ್ಲೋಕದಲ್ಲಿ ಉಕ್ತವಾಗಿರುವುದರಿಂದ ಇಲ್ಲಿ 'ಯಾವ ಕಾರ್ಯದಲ್ಲಿ?' ಎಂದಿಷ್ಟೇ ಪ್ರಶ್ನೆ ಇಟ್ಟುಕೊಂಡರೆ ಸಾಕು. 'ಯಾವ ಕಾರ್ಯದಲ್ಲಿ ಕೀರ್ತಿಗೆ ಅಡ್ಡಿಪಡಿಸಿದ?' ಎಂದು ಅಧ್ಯಾಹಾರದಿಂದ ಲಭ್ಯವಾಗುತ್ತದೆ. ತಿರುಗಿ ಹೇಳುವುದು ವ್ಯರ್ಥ.

'ಮಯಃ ಜಗದೀಶಿತುಃ ಅಹನ್' ಎಂಬಲ್ಲಿ 'ಯಶಃ' ಎಂಬ ಶಬ್ದ ಬೇಕು. ಅದನ್ನು ಹಿಂದಿನ ಶ್ಲೋಕದಲ್ಲಿ ಹೇಳಿದೆ ಎಂದು ಇಲ್ಲಿ ಅಧ್ಯಾಹಾರವೆಂದು ಅವರು ಹೇಳುತ್ತಾರೆ. ಹಾಗೇ ಇದು.

'ಮಯೋಽಹನ್' ಎಂಬ ಪಾಠ ಪ್ರಾಮಾಣಿಕವಾಗಿದ್ದಲ್ಲಿ ಅದನ್ನು ಸ್ಪಷ್ಟತೆಗಾಗಿ ಎಂದು ಸ್ವೀಕರಿಸಬಹುದಿತ್ತು. ಆದರೆ ಪ್ರಾಚೀನಕೋಶಗಳಲ್ಲಿ ಯಶೋಽಭೂತ್' ಎಂದೇ ಪಾಠ ಕಾಣುತ್ತದೆ ಹೊರತು 'ಮಯೋಽಹನ್' ಎಂದಲ್ಲ. ಸತ್ಯಧರ್ಮತೀರ್ಥರ ವ್ಯಾಖ್ಯಾನದಲ್ಲಿ ಅದನ್ನು ಸ್ವೀಕರಿಸಿದ್ದಾರೆ. ಆ ಪಕ್ಷದಲ್ಲಿ 'ಮಯ ರುದ್ರನ ಕೀರ್ತಿಯನ್ನು ಕೆಡಿಸಲು ಯತ್ನಿಸಿದನೆಂ'ದು ಅಭಿಪ್ರಾಯವಿಟ್ಟುಕೊಂಡು ಅದನ್ನೇ ತಾತ್ಪರ್ಯದಲ್ಲಿ 'ವಿಪರೀತಂ ಚಕಾರ' ಎನ್ನಲಾಗಿದೆ ಎಂದು ತಿಳಿಯಬೇಕು. ಅವರ ವ್ಯಾಖ್ಯಾನದಲ್ಲಿ 'ಅಹನ್ ನಾಶಯಾಮಾಸ' ಎಂದರೆ ನಾಶಮಾಡಲು, ಅಂದರೆ ಅಡ್ಡಿಪಡಿಸಲು ಯತ್ನಿಸಿದ ಎಂದು ಅಭಿಪ್ರಾಯ.

ಕಸ್ಮಿನ್ ಕರ್ಮಣಿ ಮಯೋ ವಿಪರೀತಂ ಚಕಾರ ।

'ಕಸ್ಮಿನ್ ಕರ್ಮಣಿ ದೇವಸ್ಯ' ಎಂದಾದ ಬಳಿಕ 'ಮಯೋ ವಿಪರೀತಂ ಚಕಾರ' ಎಂದು ಅಧ್ಯಾಹಾರ ಮಾಡಬೇಕು. ಯಾವ ಕಾರ್ಯದಲ್ಲಿ ರುದ್ರನಿಗೆ ಮಯಾಸುರ ವಿರೋಧವಾಗಿ ಪ್ರತಿಕ್ರಿಯೆ ಮಾಡಿದ ಎಂದರ್ಥ.

❖❖❖

ಶಿವನ ಬಾಣಗಳಿಗೆ ತುತ್ತಾಗಿ ಮಡಿದ ಅಸುರರನ್ನು ಸಿದ್ಧರಸದ ಬಾವಿಯಲ್ಲಿ ಹಾಕಿ ತಿರುಗಿ ಬದುಕಿಸುತ್ತಿದ್ದ ಮಯಾಸುರ. ಅದರಿಂದ ಶ್ರೀಹರಿ ಗೋರೂಪದಿಂದ ಬಂದು ಭಾವಿಯ ಅಮೃತರಸವನ್ನೆಲ್ಲ ಕುಡಿದು ಬರಿದು ಮಾಡಿದನೆಂದು ನಾರದರು ಧರ್ಮರಾಜನಿಗೆ ಹೇಳುತ್ತಾರೆ.

ವತ್ಸ ಆಸೀತ್ತದಾ ಬ್ರಹ್ಮಾ ಸ್ವಯಂ ವಿಷ್ಣುರಯಂ ಹಿ ಗೌಃ ।
ಪ್ರವಿಶ್ಯ ತ್ರಿಪುರಂ ಕಾಲೇ ರಸಕೂಪಾಮೃತಂ ಪಪೌ ।
ತೇऽಸುರಾ ಹ್ಯಪಿ ಪಶ್ಯಂತೋ ನ ನ್ಯಷೇಧನ್ ವಿಮೋಹಿತಾಃ ॥ ೧೨ ॥

ಆಗ ಬ್ರಹ್ಮ ಕರುವಾದ. ವಿಷ್ಣು ತಾನೇ ಗೋರೂಪ ತಾಳಿದ. ಮಧ್ಯಾಹ್ನಕಾಲದಲ್ಲಿ ತ್ರಿಪುರವನ್ನು ಹೊಕ್ಕು ಸಿದ್ಧರಸದ ಬಾವಿಯ ಎಲ್ಲ ಅಮೃತವನ್ನು ಕುಡಿದುಬಿಟ್ಟ.

ಇಲ್ಲಿ ವಿಷ್ಣು ಗೋರೂಪನಾಗಿ ಬಂದು ಸಿದ್ಧರಸದ ಬಾವಿಯ ಎಲ್ಲ ಅಮೃತವನ್ನು ಕುಡಿದು ಬರಿದು ಮಾಡುವಾಗ ಬ್ರಹ್ಮ ಕರುವಾಗಿ ಬಂದು ಅಮೃತಪಾನ ಕಾರ್ಯದಲ್ಲಿ ಏಕೆ ಸಹಾಯ ಮಾಡಬೇಕಾಗಿತ್ತು? ಶ್ರೀಹರಿಗೆ ಅವನ ಸಹಾಯ ಬೇಕಾಗಿತ್ತೆ? ಆತ ಸ್ವತಂತ್ರ ತಾನೆ? ಇತರರ ಸಹಾಯವನ್ನು ಆತ ತೆಗೆದುಕೊಳ್ಳುತ್ತಾನೆ ಎಂದರೆ ಅವನು ಸ್ವತಂತ್ರನೆನಿಸುವುದು ಹೇಗೆ? ಇತರರ ಸಹಾಯದಿಂದ ಕಾರ್ಯಸಾಧನೆ ಮಾಡಿದರೂ ಅದು ಸ್ವಾತಂತ್ರ್ಯಕ್ಕೆ ಭಂಗ ತರುವುದಿಲ್ಲವೆಂದರೆ ರುದ್ರನನ್ನು ಸ್ವತಂತ್ರ ಸರ್ವೇಶ್ವರನೆನ್ನುವರೂ ಹರಿಯ ಸಹಾಯದಿಂದ ತ್ರಿಪುರ ದಹನ ಕಾರ್ಯ ಮಾಡಿದ ಮಾತ್ರಕ್ಕೆ ರುದ್ರನ ಸ್ವಾತಂತ್ರ್ಯಕ್ಕೆ ಭಂಗ ಬರುವುದಿಲ್ಲವೆಂದೇಕೆ ಹೇಳಬಾರದು? ಎಂಬ ಪ್ರಶ್ನೆ ಬರುತ್ತದೆ. ಇದಕ್ಕೆ ಸಮಾಧಾನ ಹೀಗೆ- ಸ್ವತಂತ್ರನೆಂದರೆ ಏಕಾಂಗಿಯಾಗಿ ಯಾವುದೇ ವ್ಯಕ್ತಿಯ ಅಥವಾ ವಸ್ತುವಿನ ಸಹಾಯವಿಲ್ಲದೆ ಕಾರ್ಯ ಮಾಡಬೇಕೆಂದು ಅರ್ಥವಲ್ಲ. ತನಗೆ ಅಧೀನವಾಗಿರುವ ವ್ಯಕ್ತಿ ಅಥವಾ ವಸ್ತುವಿನ ಸಹಾಯವನ್ನು ಸ್ವೇಚ್ಛೆಯಿಂದ ಸ್ವೀಕರಿಸಬಹುದು. ಆ

ಸಹಾಯವನ್ನು ಸ್ವೀಕರಿಸದೆಯೂ ಕಾರ್ಯಸಾಧನೆ ಮಾಡುವ ಶಕ್ತಿ ಅವನಲ್ಲಿ ಇರಬೇಕು. ಶ್ರೀಹರಿ ಬ್ರಹ್ಮನ ಸಹಾಯವನ್ನು ಪಡೆದುದು ಹೀಗೇ. ಹರಿಯ ಸ್ವಾತಂತ್ರ್ಯಕ್ಕೆ ಭಂಗಕರವಲ್ಲ. ಏಕೆಂದರೆ ಬ್ರಹ್ಮ ಹರಿಯ ಅಧೀನವೆಂಬುದು ಪ್ರಮಾಣ ಸಿದ್ಧವಾಗಿದೆ. ರುದ್ರ ಹರಿಯ ಸಹಾಯವನ್ನು ಸ್ವೀಕರಿಸಿದ್ದು ಮಾತ್ರ ಅವನ ಸ್ವಾತಂತ್ರ್ಯಕ್ಕೆ ಭಂಗಕರವೆ. ಏಕೆಂದರೆ ಹರಿ ರುದ್ರನ ಅಧೀನನೆಂಬುದು ಪ್ರಮಾಣಸಿದ್ಧವಲ್ಲ.

ಸಾಪೇಕ್ಷ್ಯಂ ನ ತು ದೋಷಾಯ ಯತ್ರ ಸಿದ್ಧಮಪೇಕ್ಷಿತಂ ।
ಇತಿ ಶಬ್ದನಿರ್ಣಯೇ ॥

ತನಗೆ ಅಧೀನವೆಂದು ಪ್ರಮಾಣಸಿದ್ಧವಾದ ವಸ್ತು ಅಥವಾ ವ್ಯಕ್ತಿಯ ಸಹಾಯ ಪಡೆದರೆ ಅಂಥ ಸಹಾಯವನ್ನು ಪಡೆಯುವುದು ಭಗವಂತನ ಸ್ವಾತಂತ್ರ್ಯಕ್ಕೆ ಭಂಗ ತರುವುದಿಲ್ಲವೆಂದು ಶಬ್ದನಿರ್ಣಯದಲ್ಲಿ ಹೇಳಿದೆ.

'ಅಯಂ ಹಿ ಗೌಃ' ಎಂದು ಭಾಗವತದಲ್ಲಿ 'ಹಿ' ಶಬ್ದವಿದೆ. ಅದು ಹರೀಚ್ಛಾನುಸಾರವಾಗಿಯೇ ನಡೆಯುವವನು ಬ್ರಹ್ಮ, ಅವನ ಅಧೀನ ಎಂಬುದು ಪ್ರಮಾಣಸಿದ್ಧವೆಂದು ಸೂಚಿಸುತ್ತಿದೆ ಎಂದು ವಿಜಯಧ್ವಜೀಯದಲ್ಲಿ ಉಕ್ತವಾಗಿದೆ. ಛಲಾರೀಯದಲ್ಲಿಯೂ ಹಾಗೇ. ಬ್ರಹ್ಮ ಹರಿಯ ಅಧೀನನೆಂದು ಪ್ರಮಾಣ ಸಿದ್ಧನಾಗಿರುವುದರಿಂದ ಅವನು ಜೊತೆಗೆ ಇದ್ದುದು ಹರಿಯ ಸ್ವಾತಂತ್ರ್ಯಕ್ಕೆ ಭಂಗ ತರಲಿಲ್ಲ ಎಂದು ವ್ಯಾಖ್ಯಾನ ಮಾಡಲಾಗಿದೆ.

❖❖❖

ಸತ್ಯಧರ್ಮರ ಮತ್ತು ವ್ಯಾಸತತ್ವಜ್ಞರ ವ್ಯಾಖ್ಯಾನಗಳಲ್ಲಿ ಹಿಂದಿನ 'ಸ ಏಷ ಭಗವಾನ್‌ರಾಜನ್' 'ಕಸ್ಮಿನ್‌ಕರ್ಮಣಿ ದೇವಸ್ಯ' ಎಂಬ ಎರಡು ಶ್ಲೋಕಗಳಲ್ಲಿ ಅಧ್ಯಾಹಾರ ಮಾಡಿದ್ದಕ್ಕೆ ಸಮರ್ಥನೆ ಈ ತಾತ್ಪರ್ಯವಚನವೆಂದು ಸ್ವೀಕರಿಸಿದ್ದಾರೆ. 'ಅಧ್ಯಾಹಾರ ಮಾಡಬೇಕಾಗಿ ಬಂದರೆ ಅದು ವಾಕ್ಯದೋಷವಾಗುತ್ತದೆ. ನಮಗೆ ಬೇಕಾದಂತೆ ಅಧ್ಯಾಹಾರ ಮಾಡಿ ಯಾವುದೇ ಪ್ರಮಾಣ ವಾಕ್ಯವನ್ನು ನಮಗೆ ಬೇಕಾದಂತೆ ಅರ್ಥೈಸಲು ಬರುವುದರಿಂದ ಯಾವ ವಾಕ್ಯವೂ ನಿಃಸಂದಿಗ್ಧವಾಗಿ ಒಂದು ವಿಷಯವನ್ನು ಹೇಳಲು ಅಸಮರ್ಥವಾದೀತು. ವ್ಯರ್ಥವೆನಿಸೀತು' ಎಂಬ ಪ್ರಶ್ನೆಗೆ ಉತ್ತರವಾಗಿ ಶಬ್ದನಿರ್ಣಯದ ಈ ವಚನ ಹೊರಟಿದೆ.

ಸಾಪೇಕ್ಷ್ಯಂ ನ ತು ದೋಷಾಯ ಯತ್ರ ಸಿದ್ಧಮಪೇಕ್ಷಿತಂ ।
ಇತಿ ಶಬ್ದನಿರ್ಣಯೇ ॥

'ವಕ್ತೃವಿಗೆ ಇದು ಅಭಿಪ್ರೇತವಾಗಿದೆ' ಎಂದು ಸಿದ್ಧವಾದ್ದನ್ನು ಅಧ್ಯಾಹಾರ ಮಾಡಬೇಕಾಗಿ ಬಂದರೆ ಅಂಥ ಅಧ್ಯಾಹಾರದ ಆವಶ್ಯಕತೆ ವಾಕ್ಯಕ್ಕೆ ದೋಷವೆನಿಸುವುದಿಲ್ಲ ಎಂದು ಶಬ್ದನಿರ್ಣಯದಲ್ಲಿ ಉಕ್ತವಾಗಿದೆ.

'ಬಾಗಿಲು' ಎಂದಾಗ ಪ್ರಕರಣವಶದಿಂದ 'ಮುಚ್ಚು' ಎಂದೋ 'ತೆರೆ' ಎಂದೋ ಅಧ್ಯಾಹಾರ ವಕ್ತೃವಿಗೆ ಅಭಿಪ್ರೇತವೆಂದು ಸಿದ್ಧವಾಗಬಹುದು. ಆಗ ಅಧ್ಯಾಹಾರ ದೋಷವಲ್ಲ. ಪ್ರಕರಣಾದಿಗಳಿಗೆ ಅಥವಾ ಬೇರೆ ಪ್ರಮಾಣಗಳಿಗೆ ವಿರುದ್ಧವಾಗಿ ಅಧ್ಯಾಹಾರ ಮಾಡಿದರೆ ವಾಕ್ಯ ಅಪ್ರಮಾಣವೆನಿಸುತ್ತದೆ. ಯಾವುದೇ ವಿಧಿವಾಕ್ಯವನ್ನು ನಞಧ್ಯಾಹಾರ ಮಾಡಿ ವಿಪರೀತಾರ್ಥಗೊಳಿಸಲು ಅವಕಾಶ ನೀಡಿದಂತಾಗುತ್ತದೆ. ಅದರಿಂದ 'ಸಿದ್ಧಮಪೇಕ್ಷಿತಂ' ಪ್ರಮಾಣ ಸಿದ್ಧವಾದುದನ್ನೇ ಅಧ್ಯಾಹಾರ ಮಾಡಬೇಕು. ಅದು ವಾಕ್ಯದೋಷವೆನಿಸುವುದಿಲ್ಲ.

❖❖❖

ಹರಿಸಂಕಲ್ಪವನ್ನು ಮೀರುವುದು ಯಾರಿಂದಲೂ ಶಕ್ಯವಿಲ್ಲ. ಸಿದ್ಧರಸದ ಅಮೃತವನ್ನು ನೀವೆಲ್ಲರೂ ನೋಡುತ್ತಿದ್ದಂತೆಯೇ ಒಂದು ಹಸು ಕುಡಿದು ಬರಿದು ಮಾಡಿಬಿಟ್ಟಿದೆ ತಾನೆ? ಎಂದು ಮಯಾಸುರ ತ್ರಿಪುರದ ಅಸುರರಿಗೆ ಸಮಾಧಾನ ಹೇಳುತ್ತಾನೆ ಎಂದು ನಾರದರು ಧರ್ಮರಾಜನಿಗೆ ಹೇಳುತ್ತಾರೆ.

ದೇವೋಽಸುರೋ ನರೋಽನ್ಯೋ ವಾ ನೇಶ್ವರೋಽಸ್ತೀಹ ಕಶ್ಚನ ।
ಆತ್ಮನೋಽನ್ಯಸ್ಯ ವಾ ದಿಷ್ಟಂ ದೈವೇನಾಪೋಹಿತುಂ ದ್ವಯೋಃ ॥ ೧೪ ॥

ತನಗಾಗಲಿ ಇನ್ನೊಬ್ಬನಿಗಾಗಲಿ ಇಬ್ಬರಿಗೂ ಶ್ರೀಹರಿ ಏನು ಕಷ್ಟಸುಖಗಳನ್ನು ನೀಡುತ್ತಾನೋ ಅವನ್ನು ನಿವಾರಿಸಲು ದೇವನೋ ಅಸುರನೋ ಮಾನವನೋ ಅಥವಾ ಬೇರೆ ಯಾರೇ ಆಗಲಿ ಸಮರ್ಥನಾದವನು ಈ ಲೋಕದಲ್ಲಿ ಯಾರೂ ಇಲ್ಲ.

ಇಲ್ಲಿ 'ದಿಷ್ಟಂ ದೈವೇನಾಪೋಹಿತುಂ' ಎಂದರೆ ದಿಷ್ಟವೆಂದರೆ ಅದೃಷ್ಟ. ಅದನ್ನು ದೈವದಿಂದ ಅಂದರೆ ದೇವತೆಗಳ ಅಥವಾ ಪರಮಾತ್ಮನ ಅನುಗ್ರಹದಿಂದ ನಿವಾರಿಸಲು ಯಾರಿಗೂ ಸಾಧ್ಯವಿಲ್ಲ ಎಂದು ಹೇಳಿದಂತೆ ಕಾಣುತ್ತದೆ. ಮೀಮಾಂಸಕರ ಪ್ರಕಾರ ಅದೃಷ್ಟವೇ ಬ್ರಹ್ಮವಿಷ್ಣುಮಹೇಶ್ವರರನ್ನು ಅವರವರ ಕಾರ್ಯದಲ್ಲಿ ನಿಯಂತ್ರಿಸುತ್ತದೆ. ಅದರಿಂದ 'ತಸ್ಮೈ ನಮಃ ಕರ್ಮಣೇ' ಕರ್ಮಕ್ಕೇ ನಮಸ್ಕಾರ ಎನ್ನುತ್ತಾರೆ. ಆದರೆ ಅದೃಷ್ಟ ಜಡ. ಅದಕ್ಕೆ ಅನುಸಾರವಾಗಿ ಫಲ

ನೀಡುವವನು ಶ್ರೀಹರಿ. ಅದರಿಂದ 'ದೈವೇನ ದಿಷ್ಟಂ ಅಪೋಹಿತುಂ' ದೈವ ಎಂದರೆ ದೇವೋತ್ತಮನಾದ ವಿಷ್ಣು. ಅವನು ಕೊಡಲು ಸಂಕಲ್ಪಿಸಿದ ಕಷ್ಟಸುಖಗಳನ್ನು ನಿವಾರಿಸಲು ಯಾರಿಗೂ ಶಕ್ಯವಿಲ್ಲ ಎನ್ನುವುದು ಭಾಗವತದ ಅಭಿಪ್ರಾಯ.

ಬೇರೆ ವ್ಯಾಖ್ಯಾನಕಾರರು 'ದೈವೇನ ಈಶ್ವರೇಣ' ದೈವವೆಂದರೆ ಪರಮಾತ್ಮ ಎಂದು ಸಾಮಾನ್ಯವಾಗಿ ಈಶ್ವರ ಶಬ್ದವನ್ನು ಪ್ರಯೋಗಿಸಿದ್ದಾರೆ. ಅಸುರರು ಈಶ್ವರನೆಂದರೆ ರುದ್ರನೆಂದೇ ಗ್ರಹಿಸುತ್ತಾರೆ. ಆದರೆ ಮಯಾಸುರ 'ಮಹಾಯೋಗೀ ರಸಪಾಲಾನಿದಂ ಜಗೌ' ಎಂದು ಭಾಗವತ ಹೇಳುವಂತೆ ಮಹಾಯೋಗಿ, ವಿಷ್ಣುಭಕ್ತನಾದ ಅಸುರ. ಅದರಿಂದ ಅವನು 'ದೈವೇನ' ಎಂದು ದೈವ ಪದದಿಂದ ವಿಷ್ಣುವನ್ನೇ ಹೇಳುವುದು ಉಚಿತವಾಗುತ್ತದೆ. ಮತ್ತು ಬೇರೆಯವರನ್ನು ನಿವಾರಿಸಲು ವಿಷ್ಣು ಶಕ್ತನಾಗಿದ್ದಾನೆ.

ವಿಷ್ಣುನಾऽऽದಿಷ್ಟಂ ವ್ಯಪೋಹಿತುಂ ದೇವೋऽಸುರೋऽನ್ಯೋ ವಾ ನ ಸಮರ್ಥಃ ॥

'ವಿಷ್ಣುವಿನಿಂದ ಸಂಕಲ್ಪಿತವಾದ್ದನ್ನು ತಡೆಯಲು ದೇವನಾಗಲಿ ಅಸುರನಾಗಲಿ ಬೇರೆ ಯಾರೇ ಆಗಲಿ ಸಮರ್ಥನಾಗುವುದಿಲ್ಲ' ಎಂದು ಶ್ಲೋಕದ ಅರ್ಥ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ಸಪ್ತಮಸ್ಕಂಧೇ
ಏಕಾದಶೋऽಧ್ಯಾಯಃ

❖ ❖ ❖

ಅಧ್ಯಾಯ ೧೨

ಅಧ್ಯಾಯ ಸಾರಾಂಶ

ದಕ್ಷಕುಮಾರಿ ಮೂರ್ತಿದೇವಿಯಲ್ಲಿ ನಾರಾಯಣಮುನಿಯಾಗಿ ಅವತರಿಸಿದ ಶ್ರೀಮನ್ನಾರಾಯಣ ಬದರಿಕಾಶ್ರಮದಲ್ಲಿ ಮುನಿಗಳಿಗೆ ತಪಸ್ಸೆಂದರೆ ಹೀಗೆಂದು ಬೋಧಿಸುವುದಕ್ಕಾಗಿ ತಪಸ್ಸು ಮಾಡುತ್ತಾನೆ. ಅವನು ಉಪದೇಶಿಸಿದಂತೆ ಸನಾತನ ಧರ್ಮವನ್ನು ನಿನಗೆ ಹೇಳುತ್ತೇನೆ ಎಂದು ನಾರದರು ಧರ್ಮರಾಜನಿಗೆ ಹೇಳುತ್ತಾರೆ. ಧರ್ಮದ ವಿಷಯದಲ್ಲಿ ಮೂಲಪ್ರಮಾಣಗಳೆಂದರೆ ಸರ್ವವೇದೋಪದೇಶಕನಾದ ಶ್ರೀಹರಿ ಮತ್ತು ವೇದಗಳನ್ನೂ ಹರಿಯನ್ನೂ ಬಲ್ಲ ಮುನಿಗಳ ಉಪದೇಶ.

ಎಲ್ಲ ನಾಲ್ಕೂ ವರ್ಣಗಳಿಗೆ ನಾಲ್ಕೂ ಆಶ್ರಮಗಳಿಗೆ ಸಾಧಾರಣವಾದ ಧರ್ಮಗಳು ಇವು-ಸತ್ಯ ದಯೆ, ಏಕಾದಶ್ಯುಪವಾಸಾದಿ ತಪಸ್ಸು ಶೌಚ ದ್ವಂದ್ವಸಹಿಷ್ಣುತೆ ದೇವಪೂಜೆ ಶಮ ದಮ ಅಹಿಂಸೆ ಬ್ರಹ್ಮಚರ್ಯ (ಪರಸ್ತ್ರೀಸಂಗ ಮಾಡದಿರುವಂಥ ಬ್ರಹ್ಮಚರ್ಯನಿಯಮ ಗೃಹಸ್ಥರಿಗೂ ಇದೆ.) ನಿಷಿದ್ಧತ್ಯಾಗ ಅಧ್ಯಯನ (ಹರಿನಾಮ ಸಂಕೀರ್ತನ ರೂಪವಾದ ಅಧ್ಯಯನ ಶೂದ್ರರಿಗೂ ವಿಹಿತವಾಗಿದೆ) ವಂಚನೆ ಮಾಡದಿರುವುದು, ಹರಿ ಕೊಟ್ಟಿದ್ದರಲ್ಲಿ ತೃಪ್ತಿ ಎಲ್ಲೆಡೆ ಹರಿಯನ್ನು ಸಮಾನವಾಗಿ ಕಾಣುವುದು ಮಹಾತ್ಮರ ಸೇವೆ, ವಿಷಯಾಸೆ ಬಿಡುವುದು. ಪರರಿಗೆ ಕೇಡೆಣಿಸದಿರುವುದು ಕೆಟ್ಟ ಮಾತಾಡದಿರುವುದು ಪರಮಾತ್ಮ ವಿಚಾರ ಮಾಡುವುದು. ಅನ್ನವನ್ನು ಇತರರಿಗೆ ಉಣಿಸಿ ತಾನುಣುವುದು, ಗುರೂಪದೇಶ ಶ್ರವಣ ಹರಿನಾಮ ಸಂಕೀರ್ತನ ಹರಿಸ್ಮರಣೆ ಮಹಾತ್ಮರ ಸೇವೆ ಅರ್ಚನೆ ಪೂಜ್ಯ ಜನರಲ್ಲಿ ವಿನಯ ಸಖ್ಯ ಅವತಾರರೂಪಗಳ ದಾಸ್ಯ ಮತ್ತು ಬಿಂಬರೂಪನ ದಾಸ್ಯ. ಇವು ಮೂವತ್ತು ಎಲ್ಲರಿಗೂ ಇರುವ ಸಾಮಾನ್ಯ ಧರ್ಮಗಳು.

ದ್ವಿಜರಿಗೆ ಎಲ್ಲ ವೈದಿಕ ಸ್ಮಾರ್ತ ಸಂಸ್ಕಾರಗಳೂ ಬೇಕು. ದೇವಪೂಜೆ ಅಧ್ಯಯನ ದಾನಗಳು ಕರ್ತವ್ಯವಾಗಿವೆ. ಬ್ರಾಹ್ಮಣನಿಗೆ ಅಧ್ಯಯನಾದಿ ಷಟ್ಕರ್ಮಗಳಿವೆ. ಕ್ಷತ್ರಿಯರಿಗೆ

ಪ್ರತಿಗ್ರಹ ಅಧ್ಯಾಪನ ಯಾಜನ ಬಿಟ್ಟು ಉಳಿದ ತ್ರಿಕರ್ಮಗಳಿವೆ. ರಾಜ ಪ್ರಜಾರಕ್ಷಣೆ ಮಾಡಬೇಕು. ಕರವಸೂಲಿ ದಂಡಶುಲ್ಕಗಳು ಅವನಿಗೆ ಜೀವನವೃತ್ತಿ. ವೈಶ್ಯನಿಗೆ ಕೃಷಿವಾಣಿಜ್ಯಗಳು ಜೀವನವೃತ್ತಿ. ಬ್ರಾಹ್ಮಣಸೇವೆ ಮಾಡಬೇಕು. ಶೂದ್ರ ತ್ರೈವರ್ಣಿಕರ ಸೇವೆ ಮಾಡಬೇಕು. ಅವರು ನೀಡುವ ವೇತನ ಜೀವನವೃತ್ತಿ. ವಿಪ್ರರು ಜೀವನವೃತ್ತಿಗಾಗಿ ಯಾಜನ ಅಧ್ಯಾಪನ ಪ್ರತಿಗ್ರಹಗಳನ್ನು ಮಾಡಬಹುದು, ಭಿಕ್ಷೆ ಎತ್ತಬಹುದು, ಎಲ್ಲಕ್ಕಿಂತ ಶಿಲೋಂಛವೃತ್ತಿ ಉತ್ತಮ. ನೀಚವರ್ಗದವರ ಸೇವೆಯಿಂದ ಬದುಕುವುದು ಶ್ವವೃತ್ತಿ ಸರ್ವವೇದಜ್ಞನಾದ ವಿಪ್ರ, ಸರ್ವದೇವತಾಸನ್ನಿಧಾನ ಪಾತ್ರನಾದ ರಾಜ ಶ್ವವೃತ್ತಿಯನ್ನೆಂದೂ ಮಾಡಬಾರದು.

ಪಾತಿವ್ರತ್ಯ ಪತಿಯಲ್ಲಿ ಭಗವಂತನನ್ನು ಆರಾಧಿಸುವುದು, ಸತ್ಯವೂ ಪ್ರಿಯವೂ ಆದ ಮಾತು, ಪ್ರೀತಿ, ಇದ್ದುದರಲ್ಲಿ ತೃಪ್ತಿ ಮುಂತಾದುವು ಸ್ತ್ರೀಧರ್ಮಗಳು.

ಅಂತ್ಯಜರು ತಮ್ಮ ಕುಲಕಸುಬುಗಳನ್ನು ನಡೆಸಬೇಕು. ಬ್ರಾಹ್ಮಣೇತರನಲ್ಲಿ ವಿಷ್ಣುಭಕ್ತಿ ಇಂದ್ರಿಯನಿಗ್ರಹ ಜ್ಞಾನ ತಪಸ್ಸು ಮುಂತಾದ ಬ್ರಾಹ್ಮಣಲಕ್ಷಣಗಳು ಕಂಡುಬಂದರೆ ಅವನನ್ನು ಬ್ರಾಹ್ಮಣನಂತೆ ಸತ್ಕರಿಸಬೇಕು. ಕೇವಲ ಜನ್ಮದಿಂದಲೆ ವ್ಯಕ್ತಿ ಸತ್ಕಾರ ಯೋಗ್ಯನೆನಿಸುವುದಿಲ್ಲ.

❖ ❖ ❖

ಧರ್ಮರಾಜನ ಅಪೇಕ್ಷೆಯಂತೆ ನಾರದರು ಅವನಿಗೆ ಸನಾತನ ಧರ್ಮವನ್ನು ಉಪದೇಶಿಸುತ್ತಾರೆ.

ಶ್ರವಣಂ ಕೀರ್ತನಂ ಚಾಸ್ಯ ಸ್ಮರಣಂ ಮಹತಾಂ ಗತೇಃ ।
ಸೇವೇಜ್ಯಾಽವನತಿಃ ಸಖ್ಯಂ ದಾಸ್ಯಮಾತ್ಮಸಮರ್ಪಣಮ್ ॥ ೧೧ ॥

ಗುರುವಿನ ಉಪದೇಶವನ್ನು ಶ್ರವಣಮಾಡುವುದು, ಭಗವನ್ನಾಮ ಸಂಕೀರ್ತನೆ ಹರಿಸ್ಮರಣೆ ಮಹಾತ್ಮರ ಸೇವೆ, ಅರ್ಚನೆ ಪೂಜ್ಯವ್ಯಕ್ತಿಗಳಲ್ಲಿ ವಿನಯ, ಸಖ್ಯ, ರಾಮಕೃಷ್ಣಾದಿ ಅವತಾರ ರೂಪಗಳ ದಾಸ್ಯ ಹೃದಯದಲ್ಲಿರುವ ಬಿಂಬಮೂರ್ತಿಯ ದಾಸ್ಯ ಇವು ಎಲ್ಲ ವರ್ಣ ಆಶ್ರಮದವರಿಗೂ ವಿಹಿತವಾದ ಸಾಮಾನ್ಯ ಧರ್ಮಗಳು.

ಹಿಂದೆ ಪ್ರಹ್ಲಾದ ಹಿರಣ್ಯಕಶಿಪುವಿನ ಮುಂದೆ ನವವಿಧ ಭಕ್ತಿಯ ಬಗ್ಗೆ ಹೇಳುವಾಗ 'ಸಖ್ಯಮಾತ್ಮನಿವೇದನಂ' ಎಂದಿದ್ದಾನೆ. ಇದೀಗ ನಾರದರು ಅದೇ ನವವಿಧಭಕ್ತಿಯನ್ನು ಹೇಳುತ್ತ ದಾಸ್ಯಮಾತ್ಮಸಮರ್ಪಣಂ ಎಂದಿದ್ದಾರೆ. ನಿವೇದನ ಸಮರ್ಪಣಗಳೆಂದರೆ ಒಂದೇ. ತನ್ನನ್ನು ಪರಮಾತ್ಮನ ಅಧೀನನೆಂದು ತಿಳಿಯುವುದು ಎಂದರ್ಥ. ಹಿಂದೆ ಬ್ರಹ್ಮತರ್ಕವಚನವನ್ನು ಉದಾಹರಿಸಲಾಗಿತ್ತು, ಇದೀಗ ತಂತ್ರಮಾಲಾವಚನವನ್ನು ಉದಾಹರಿಸುತ್ತಿದ್ದಾರೆ. ಬ್ರಹ್ಮತರ್ಕವಚನದಲ್ಲಿ ದಾಸ್ಯವೆಂದರೆ ಏನೆಂದು ಹೇಳಿಲ್ಲ. ಅಂತರ್ಯಾಮಿಯ ದಾಸ್ಯವೇ ಆತ್ಮ ನಿವೇದನವೆಂದು ಅಲ್ಲಿ ಹೇಳಿರುವುದರಿಂದ ಅರ್ಥಾತ್ ಬಾಹ್ಯವಾದ ರಾಮಕೃಷ್ಣಾದಿ ರೂಪಗಳ ದಾಸ್ಯವನ್ನೇ ದಾಸ್ಯಪದದಿಂದ ವಿವಕ್ಷೆ ಮಾಡಲಾಗಿದೆ ಎಂದು ಊಹಿಸಬೇಕಾಗಿತ್ತು. ಈ ತಂತ್ರಮಾಲಾವಚನದಲ್ಲಿ ಸ್ಪಷ್ಟವಾಗಿ ಬಾಹ್ಯರೂಪದ ದಾಸ್ಯವೇ ದಾಸ್ಯಪದದಿಂದ ವಿವಕ್ಷಿತ ಎಂದು ಉಕ್ತವಾಗಿದೆ.

ಬೇರೆ ವ್ಯಾಖ್ಯಾನಕಾರರು ದಾಸ್ಯ ಆತ್ಮಸಮರ್ಪಣೆಗಳಿಗಿರುವ ಭೇದವನ್ನು ಹೇಳಲು ಯತ್ನಿಸಿ ವಿಫಲರಾಗುತ್ತಾರೆ. ಉದಾ:

'ದಾಸ್ಯಮತಿಪ್ರಹ್ವೀಭಾವೇನ ಅನುಕ್ಷಣಂ ವರ್ತನಂ। ಆತ್ಮಸಮರ್ಪಣಂ ಸ್ವಾತ್ಮನಸ್ತದನುಬಂಧಿನಶ್ಚ ತದಾಯತ್ತಸತ್ತಾದಿಮತ್ತ್ವಾನುಸಂಧಾನಂ।'

-ಭಗವತ್ಪ್ರಸಾದಃ

ದಾಸ್ಯವೆಂದರೆ ಪ್ರತಿಕ್ಷಣ ವಿನಯದಿಂದ ಬಾಗಿಕೊಂಡಿರುವುದು, ಆತ್ಮಸಮರ್ಪಣವೆಂದರೆ ತನಗೂ ತನ್ನ ಸಂಬಂಧಿಗಳಿಗೂ ಅಸ್ತಿತ್ವವಿರುವುದು ಭಗವಂತನಿಂದ ಎಂದು ತಿಳಿಯುವುದು ಎಂದು ಭಗವತ್ಪ್ರಸಾದ ವ್ಯಾಖ್ಯಾನ ಹೇಳುತ್ತದೆ. ಇಲ್ಲಿ ದಾಸ್ಯಸ್ವರೂಪ ಅಸ್ಪಷ್ಟವಾಗಿದೆ. ತಂತ್ರಮಾಲೋಕ್ತವಾದ ವ್ಯತ್ಯಾಸ ಬಲು ನಿಖರವಾಗಿದೆ, ಶಾಸ್ತ್ರೋಕ್ತವಾಗಿದೆ.

ಅನಾದ್ಯನಂತಕಾಲೇಷು ಮುಕ್ತೌ ಸಂಸಾರ ಏವ ಚ।
ಮಯಿಸ್ಥಶ್ಚೋದಯತ್ಯೇಕೋ ವಿಷ್ಣುರ್ಮಾಂ ಸರ್ವದೈವ ತು।
ಇತಿ ಸಂಪ್ರೀತಿಕಂ ಜ್ಞಾನಂ ವಿದ್ಯಾದಾತ್ಮಸಮರ್ಪಣಂ।
ಬಹಿಸ್ಥೇಶ್ವರದಾಸತ್ವಂ ದಾಸ್ಯಮಿತ್ಯುಚ್ಯತೇ ಬುಧೈಃ॥

ಇತಿ ತಂತ್ರಮಾಲಾಯಾಂ॥

ಅನಾದಿ ಅನಂತಕಾಲಗಳಲ್ಲಿ ಮುಕ್ತಿಯಲ್ಲಿಯೂ ಸಂಸಾರದಲ್ಲಿಯೂ ನನ್ನಲ್ಲಿ ಅಂತರ್ಯಾಮಿಯಾಗಿ ಒಬ್ಬನೇ ವಿಷ್ಣು ಸದಾ ನನ್ನನ್ನು ಪ್ರೇರಿಸುತ್ತಿದ್ದಾನೆ

ಎನ್ನುವ ಒಳ್ಳೆಯ ಪ್ರೀತಿಯುಕ್ತವಾದ ಜ್ಞಾನವು ಆತ್ಮಸಮರ್ಪಣವೆನಿಸುತ್ತದೆ. ಇದು ಭಗವಂತನ ಉತ್ತಮಪ್ರಸಾದಕ್ಕೆ ಸಾಧನ. ಹೊರಗೆ ಇರುವ ರಾಮಕೃಷ್ಣಾದಿ ಅವತಾರ ರೂಪಗಳ ದಾಸ್ಯವು ದಾಸ್ಯವೆನಿಸುತ್ತದೆ ಎಂದು ಬಲ್ಲವರು ಹೇಳುತ್ತಾರೆ ಎಂದು ತಂತ್ರಮಾಲಾಗ್ರಂಥದಲ್ಲಿ ಉಕ್ತವಾಗಿದೆ.

❖ ❖ ❖

ಸ್ತ್ರೀಧರ್ಮಗಳನ್ನು ಹೇಳುತ್ತ ಸತಿಯು ಪತಿಯಲ್ಲಿ ಪರಮಾತ್ಮನ ವಿಶೇಷ ಸನ್ನಿಧಾನವನ್ನು ಚಿಂತಿಸಿ ಅವನನ್ನು ಆರಾಧಿಸುವುದರಿಂದ ವಿಷ್ಣುಲೋಕವನ್ನು ಹೊಂದಿ ಪತಿಯೊಡನೆ ಸುಖಿಸುವಳು ಎಂದು ನಾರದರು ಧರ್ಮರಾಜನಿಗೆ ಹೇಳುತ್ತಾರೆ.

ಯಾ ಪತಿಂ ಹರಿಭಾವೇನ ಭಜೇಚ್ಛ್ರೀರಿವ ತತ್ಪರಾ ।
ಹರ್ಯಾತ್ಮನಾ ಹರೇರ್ಲೋಕೇ ಪತ್ಯಾ ಶ್ರೀರಿವ ಮೋದತೇ ॥ ೩೦ ॥

ಯಾವ ಸ್ತ್ರೀ ಪತಿಯಲ್ಲಿ ಹರಿ ಸನ್ನಿಹಿತನಾಗಿರುವನೆಂಬ ಭಾವನೆಯಿಂದ ಶ್ರೀದೇವಿ ಹರಿಯನ್ನು ಹೇಗೋ ಹಾಗೆ ಸೇವಿಸುವಳೋ ಅವಳು ಹರಿಲೋಕದಲ್ಲಿ ಹರಿಯ ವಿಶೇಷ ಸನ್ನಿಧಾನಯುಕ್ತನಾದ ಪತಿಯೊಂದಿಗೆ, ಹರಿಯೊಂದಿಗೆ ಶ್ರೀದೇವಿಯಂತೆ ಆನಂದಪಡುತ್ತಾಳೆ.

ಇಲ್ಲಿ 'ಪತಿಂ ಹರಿಭಾವೇನ ಭಜೇತ್' ಎಂದರೆ, ಪತಿಯನ್ನು ಸಾಕ್ಷಾತ್ ಭಗವಂತನೆಂದು ಉಪಾಸನ ಮಾಡಬೇಕೆಂದು ಹೇಳಿದಂತೆ ಕಾಣುತ್ತದೆ. ಬೇರೆ ವ್ಯಾಖ್ಯಾನಕಾರರು 'ಹರಿಭಾವ' ಎಂದರೇನೆಂದು ಹೇಳಿಲ್ಲ. ಆದರೂ ಸಾಕ್ಷಾತ್ ಹರಿ ಎಂಬ ಭಾವನೆಯೇ ಹರಿಭಾವ ಎಂದು ಅವರ ಅಭಿಪ್ರಾಯವಿರುತ್ತದೆ. ಗುರುರ್ಬ್ರಹ್ಮಾ ಗುರುರ್ವಿಷ್ಣುರ್ಗುರುರ್ದೇವೋ ಮಹೇಶ್ವರಃ ಎಂದು ಗುರುವನ್ನು ತ್ರಿಮೂರ್ತಿಗಳ ಐಕ್ಯಭಾವನೆಯಿಂದ ಅವರು ಉಪಾಸನೆ ಮಾಡುತ್ತಾರೆ. ಅಸದುಪಾಸನೆಗೂ ಫಲವಿರುವುದರಿಂದ ಅದೂ ವಿಹಿತವೇ ಎನ್ನುತ್ತಾರೆ. ಭಾರತದರ್ಶನ ಪ್ರಕಾಶನದಲ್ಲಿ ಕನ್ನಡಾನುವಾದ ಹೀಗಿದೆ- 'ಹೆಂಡತಿಯು ಲಕ್ಷ್ಮೀದೇವಿಯಂತೆ ಪತಿಪರಾಯಣೆಯಾಗಿ ಆತನನ್ನು ಸಾಕ್ಷಾತ್ ಶ್ರೀಭಗವತನೆಂದು ಭಾವಿಸಿ ಆತನ ಸೇವೆಯನ್ನು ಮಾಡುತ್ತಿದ್ದರೆ ಆಕೆಯ ಪತಿಯು ವೈಕುಂಠಲೋಕದಲ್ಲಿ ಶ್ರೀಭಗವಂತನ ಸಾರೂಪ್ಯವನ್ನು ಹೊಂದುವನು, ಮತ್ತು ಆಕೆಯು ನಾರಾಯಣನೊಡನೆ ಲಕ್ಷ್ಮೀದೇವಿಯು ಹೇಗೋ ಹಾಗೆ ಆತನೊಡನೆ

ಆನಂದವಾಗಿರುವಳು' ಆದರೆ ಅಸದುಪಾಸನೆ ಅನರ್ಥಫಲಕ, ನಿಷಿದ್ಧ. ತಂತ್ರಮಾಲಾಗ್ರಂಥದಲ್ಲಿ ಪತಿಯಲ್ಲಿ ಸ್ತ್ರೀ ಹರಿಯ ಸನ್ನಿಧಾನವನ್ನು ಚಿಂತಿಸುವುದೇ ಹರಿಭಾವ ಎಂದು ಸ್ಪಷ್ಟವಾಗಿ ಉಕ್ತವಾಗಿದೆ.

ಹರಿರಸ್ಮಿನ್ ಸ್ಥಿತ ಇತಿ ಸ್ತ್ರೀಣಾಂ ಭರ್ತರಿ ಭಾವನಾ ।
ಶಿಷ್ಯಾಣಾಂ ಚ ಗುರೌ ನಿತ್ಯಂ ಶೂದ್ರಾಣಾಂ ಬ್ರಾಹ್ಮಣಾದಿಷು ।
ಭೃತ್ಯಾನಾಂ ಸ್ವಾಮಿನಿ ತಥಾ ಹರಿಭಾವ ಉದೀರಿತಃ ।
ಇತಿ ಚ ॥

'ಹರಿ ಈತನಲ್ಲಿ ಸನ್ನಿಹಿತನಾಗಿದ್ದಾನೆ' ಎಂದು ಸ್ತ್ರೀಯರು ಪತಿಗಳಲ್ಲಿ, ಶಿಷ್ಯರು ಗುರುಗಳಲ್ಲಿ, ಶೂದ್ರರು ಬ್ರಾಹ್ಮಣ ಮುಂತಾದವರಲ್ಲಿ, ಭೃತ್ಯರು ಪ್ರಭುವಿನಲ್ಲಿ ಚಿಂತಿಸಬೇಕು. ಇದೇ ಹರಿಭಾವವೆನಿಸುತ್ತದೆ ಎಂದೂ ಉಕ್ತವಾಗಿದೆ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ಸಪ್ತಮಸ್ಕಂಧೇ
ದ್ವಾದಶೋಽಧ್ಯಾಯಃ

❖ ❖ ❖

ಅಧ್ಯಾಯ ೧೩

ಅಧ್ಯಾಯ ಸಾರಾಂಶ

ಬ್ರಹ್ಮಚಾರಿ ಗುರುಕುಲದಲ್ಲಿದ್ದು ಗುರುಸೇವೆ ಮಾಡಬೇಕು. ಸಂಧ್ಯಾವಂದನೆ ಗಾಯತ್ರೀಜಪ ವೇದಾಧ್ಯಯನ ಗುರುವಿಗಾಗಿ ಭಿಕ್ಷೆ ಎತ್ತುವುದು ಜಿತೇಂದ್ರಿಯನಾಗಿರುವುದು ಕರ್ತವ್ಯ. ಗುರು ಅಗ್ನಿ ಸೂರ್ಯ ದಿಕ್ಪಾಲಕರಲ್ಲಿ ವಿಷ್ಣುವನ್ನು ಆರಾಧಿಸಬೇಕು.

ಗೃಹಸ್ಥನಲ್ಲದವನು ಸ್ತ್ರೀಯರ ಜೊತೆಗೆ ಮಾತನಾಡುವುದನ್ನು ಅಥವಾ ಸ್ತ್ರೀಯರ ಬಗ್ಗೆ ಮಾತನಾಡುವುದನ್ನು ವರ್ಜಿಸಬೇಕು. ಗುರುವಿನ ಸ್ತ್ರೀ ಯುವತಿಯಾಗಿದ್ದರೆ ಅವಳಿಂದ ಅಭ್ಯಂಜನ ಸ್ನಾನಾದಿಗಳನ್ನು ಮಾಡಿಸಿಕೊಳ್ಳಬಾರದು. ಹೆಂಗಸು ಬೆಂಕಿಯಂತೆ, ಗಂಡಸು ತುಪ್ಪದ ಗಡಿಗೆಯಂತೆ. ಕರಗಿ ಹೋಗದಂತೆ ಜಾಗ್ರತೆ ವಹಿಸಬೇಕು.

ಗುರುಕುಲವಾಸ ಮುಗಿದಾಗ ಗುರುದಕ್ಷಿಣೆ ನೀಡಿ ಅವನ ಅನುಮತಿ ಪಡೆದು ಗೃಹಸ್ಥನೋ ವಾನಪ್ರಸ್ಥನೋ ಆಗಬಹುದು, ಅಥವಾ ನೈಷ್ಠಿಕ ಬ್ರಹ್ಮಚಾರಿಯಾಗಿ ಗುರುಕುಲದಲ್ಲಿಯೇ ವಾಸಮಾಡಬಹುದು.

ವಾನಪ್ರಸ್ಥನು ಕಾಡಿನ ಧಾನ್ಯಗಳು ಹಣ್ಣುಹಂಪಲುಗಳು ಗಡ್ಡೆಗೆಣಸುಗಳನ್ನು ಉಂಡು ಬದುಕಬೇಕು. ಯಾವುದನ್ನೂ ಪಾಕ ಮಾಡದೆ ಸೇವಿಸಬೇಕು. ಕಾಡಿನಲ್ಲಿ ವಾಸ ಮಾಡಬೇಕು. ಅಗ್ನಿರಕ್ಷಣೆಗಾಗಿ ಗುಡಿಸಲನ್ನು ಅಥವಾ ಪರ್ವತ ಗುಹೆಗಳನ್ನು ಆಶ್ರಯಿಸಬೇಕು. ತಾನು ಮಾತ್ರ ಹೊರಗೇ ಇದ್ದು ಚಳಿ ಮಳೆ ಬಿಸಿಲು ಗಾಳಿಗಳನ್ನು ಸಹಿಸಿಕೊಳ್ಳಬೇಕು. ಹನ್ನೆರಡು ಎಂಟು ನಾಲ್ಕು ಎರಡು ಅಥವಾ ಒಂದು ವರ್ಷವಾದರೂ ವಾನಪ್ರಸ್ಥಾಶ್ರಮ ನಿಯಮದಲ್ಲಿರಬೇಕು. ಶರೀರ ಕರ್ಮಾನುಷ್ಠಾನಕ್ಕೆ ಬ್ರಹ್ಮ ವಿಚಾರಕ್ಕೆ ಅಸಮರ್ಥವೆನಿಸಿದರೆ ಉಪವಾಸದಿಂದ ಶರೀರ ತ್ಯಾಗ ಮಾಡಬೇಕು. ತನ್ನ ಶರೀರ ಧಾತುಗಳನ್ನು ಹೊರಗಿನ ಪಂಚಭೂತಗಳಲ್ಲಿ ಲಯ ಹೊಂದುವುದೆಂದು ಧ್ಯಾನಿಸಬೇಕು.

ಇಂದ್ರಿಯ ಮನಸ್ಸುಗಳನ್ನು ಅವುಗಳ ಅಭಿಮಾನಿ ದೇವತೆಗಳಲ್ಲಿಯೂ ಆ ದೇವತೆಗಳನ್ನು ಭಗವಂತನಲ್ಲಿಯೂ ಲಯ ಹೊಂದುವುವೆಂದು ಚಿಂತಿಸಬೇಕು. ಪೃಥಿವ್ಯಾದಿ ತತ್ವಗಳನ್ನೂ ತಮ್ಮತಮ್ಮ ಕಾರಣಗಳಲ್ಲಿ ಲಯಹೊಂದುವುವೆಂದು ಚಿಂತಿಸಿ ಕೊನೆಯಲ್ಲಿ ಲಯರಹಿತನಾಗಿ ಹರಿಯೊಬ್ಬನೆ ಉಳಿಯುತ್ತಾನೆ ಎಂದು ಹರಿಸ್ಮರಣೆ ಮಾಡುತ್ತಿರಬೇಕು. ಬೇರೇನನ್ನೂ ಸ್ಮರಿಸ ಬಾರದು.

❖ ❖ ❖

ಸತ್ಯವಾದ ಸಂಸಾರದ ನಿವೃತ್ತಿಗಾಗಿ ಹರಿಯನುಗ್ರಹವನ್ನು ಸಂಪಾದಿಸಬೇಕು. ಅದಕ್ಕೆ ವರ್ಣಾಶ್ರಮ ಧರ್ಮಾಚರಣೆ ಆವಶ್ಯಕವೆಂದು ನಾರದರು ಧರ್ಮರಾಜನಿಗೆ ಹೇಳುತ್ತಾರೆ.

ಕಲ್ಪಯೇದಾತ್ಮನೋ ಯಾವದಾಭಾಸಮಿದಮೀಶ್ವರಃ।
ದ್ವೈತಂ ತಾವನ್ನ ವಿರಮೇತ್ತತೋ ಹ್ಯಸ್ಯ ವಿಪರ್ಯಯಃ ॥ ೧೦ ॥

ಸರ್ವಶಕ್ತನಾದ ಪರಮಾತ್ಮ ಜೀವನಿಗೆ ಎಂದಿನವರೆಗೆ ಸ್ವಾತಂತ್ರ್ಯ ಭ್ರಮವನ್ನು ಉಂಟುಮಾಡುತ್ತಾನೋ ಅಂದಿನವರೆಗೆ ಆ ಭ್ರಮನಿರಸನ ವಾಗುವುದೇ ಇಲ್ಲ. ಆ ಭ್ರಮದಿಂದಾಗಿಯೇ ಸತ್ಯವಾದ ಸಂಸಾರ ಮುಂದು ವರಿಯುತ್ತದೆ. ಅದರಿಂದ ಮೋಕ್ಷಸಾಧನವಾದ ಭಗವದನುಗ್ರಹಕ್ಕಾಗಿ ವರ್ಣಾಶ್ರಮಧರ್ಮವನ್ನು ಆಚರಿಸಲೇಬೇಕು.

[೧]ಇಲ್ಲಿ 'ಕಲ್ಪಯೇದಾತ್ಮನೋ ಯಾವತ್' ಎಂಬಲ್ಲಿ ಬೇರೆ ವ್ಯಾಖ್ಯಾನಕಾರರು 'ಕಲ್ಪಯಿತ್ವಾತ್ಮನಾ ಯಾವತ್' ಎಂದು ಪಾಠವಿಟ್ಟುಕೊಂಡಿದ್ದಾರೆ. ಶ್ರೀಧರೀಯದಲ್ಲಿ 'ಆತ್ಮಸಾಕ್ಷಾತ್ಕಾರದಿಂದ ಈ ದೇಹೇಂದ್ರಿಯಾದಿಗಳನ್ನು ಮಿಥ್ಯೆ ಎಂದು ನಿಶ್ಚಯಿಸಿ ಜೀವನು ಸ್ವತಂತ್ರನಾಗದ ತನಕ ಅವನಿಗೆ 'ಇವನು ಪುರುಷ ಇವಳು ಸ್ತ್ರೀ' ಎಂದು

---

೧. ಆತ್ಮನಾ ಸ್ವರೂಪಸಾಕ್ಷಾತ್ಕಾರೇಣೇದಂ ದೇಹೇಂದ್ರಿಯಾದ್ಯಾಭಾಸಮಾತ್ರಂ ಕಲ್ಪಯಿತ್ವಾ ನಿಶ್ಚಿತ್ಯ ಯಾವದಸೌ ಜೀವ ಈಶ್ವರಃ ಸ್ವತಂತ್ರೋ ನ ಭವೇತ್ ತಾವದ್ ದ್ವೈತಮಯಂ ಪುಮಾನಿಯಂ ಸ್ತ್ರೀತ್ಯಾದಿ ಭೇದೋ ನ ವಿರಮೇತ್ ತತಃಕಿಮತ ಆಹ ತತೋ ಹಿ ದ್ವೈತಾತ್ ವಿಪರ್ಯಯೋ ಗುಣಾಧ್ಯಾಸೇನ ಭೋಗ್ಯತಾಬುದ್ಧಿಃ। ಅತೋ ಜಹ್ಯಾದೇವೇತ್ಯರ್ಥಃ।
-ಶ್ರೀಧರಃ

ಮುಂತಾಗಿ ಭೇದ ನಿವೃತ್ತಿಹೊಂದುವುದಿಲ್ಲ. ಈ ಭೇದದಿಂದ ಪುರುಷನಿಗೆ ಸ್ತ್ರೀಯಲ್ಲಿ ಆಸಕ್ತಿ ಆಗಿಯೇ ತೀರುವುದು' ಎಂದು ವಿವರಣೆ ಇದೆ. ಇಲ್ಲಿ 'ಆತ್ಮನಾ' ಎಂದರೆ ಆತ್ಮ ಸಾಕ್ಷಾತ್ಕಾರದಿಂದ. 'ಕಲ್ಪಯಿತ್ವಾ' ಎಂದರೆ ನಿಶ್ಚಯಿಸಿ. 'ಈಶ್ವರಃ' ಎಂದರೆ ಸ್ವತಂತ್ರಜೀವ. 'ಯಾವತ್ ಈಶ್ವರೋ ನ ಭವೇತ್' ಎಂದು ನಞಧ್ಯಾಹಾರ. ಇದೆಲ್ಲವೂ ಅಸ್ವರಸ.

ಸ್ತ್ರೀಪುರುಷ ಭೇದವೆಂಬ ದ್ವೈತ ನಿವೃತ್ತಿಯಾಗದಿದ್ದರೆ ವಿಪರ್ಯಯ ಉಂಟಾಗುತ್ತದೆ, ಅಂದರೆ ಸ್ತ್ರೀ ಭೋಗ್ಯಳೆಂದು ಆಸಕ್ತಿ ಉಂಟಾಗುತ್ತದೆ ಎನ್ನುವುದು ಇನ್ನೂ ಹೆಚ್ಚು ಅಸ್ವರಸ. ಆಸಕ್ತಿಯೇ ವಿಪರ್ಯಯವಲ್ಲ. ಅದರಿಂದಾಗುವ ಪುಣ್ಯಪಾಪಗಳಿಂದ ಜನನ ಮರಣಾದಿ ದುಃಖಪ್ರಾಪ್ತಿಯೇ ಸುಖಸ್ವರೂಪನಾದ ಆತ್ಮನಿಗೆ ವಿಪರ್ಯಯ.

ವರ್ಣಾಶ್ರಮ ಧರ್ಮ ನಿರೂಪಣೆಯ ಪ್ರಸಂಗದಲ್ಲಿ ಪರಸ್ತ್ರೀಸಂಗದಿಂದ ದೂರವಿರಬೇಕೆನ್ನಲು ಹೊರಟಿದ್ದಾರೆ ನಾರದರು. ಅದ್ವೈತ ಸಾಕ್ಷಾತ್ಕಾರದಿಂದ ವೈರಾಗ್ಯ ಪಡೆಯಬೇಕೆಂದು ಉಪದೇಶಿಸುವುದು ಸಂಗತವಾಗುವುದಿಲ್ಲ. ಅದ್ವೈತ ಸಾಕ್ಷಾತ್ಕಾರವಾದಾಗ ವರ್ಣಾಶ್ರಮಧರ್ಮಾಚರಣೆಗೆ ಅರ್ಥವೇ ಇರುವುದಿಲ್ಲ. ಅದರಿಂದ 'ಇದಂ ಆಭಾಸಂ ಕಲ್ಪಯಿತ್ವಾ' 'ಪ್ರಪಂಚವನ್ನು ಮಿಥ್ಯೆ ಎಂದು ನಿಶ್ಚಯಿಸಿ' ಎನ್ನುವ ಅಂಶ ಇಲ್ಲಿ ಅನನ್ವಿತವಾಗುತ್ತದೆ.

ಮಿಥ್ಯಾಜ್ಞಾನವು ಯಥಾರ್ಥವೆಂಬಂತೆ ಭಾಸವಾಗುವುದರಿಂದ ಅದು ಆಭಾಸ. ಅದನ್ನು ಪರಮಾತ್ಮ 'ಕಲ್ಪಯೇತ್' ಉಂಟುಮಾಡುತ್ತಾನೆ. ಅದರಿಂದ ಅದನ್ನು ಕಳೆದುಕೊಳ್ಳುವುದು ನಮ್ಮ ಅಧೀನವಲ್ಲ. ಅದಕ್ಕೆ ಪರಮಾತ್ಮನ ಅನುಗ್ರಹ ಬೇಕು. ಅದಕ್ಕೆ ವರ್ಣಾಶ್ರಮಧರ್ಮಾನುಷ್ಠಾನ ಬೇಕು ಎನ್ನುವುದು ಸಂಗತವಾಗುತ್ತದೆ.

ದ್ವೈತವೆಂದರೆ ಅನ್ಯಥಾಜ್ಞಾನ. ಇದು ಅನಿಷ್ಟ ಹೊರತು ಸ್ತ್ರೀಪುರುಷ ಭೇದ ಇಲ್ಲಿ ದ್ವೈತವಲ್ಲ. ಅದು ಅನಿಷ್ಟವಲ್ಲ. ಸ್ತ್ರೀಪುರುಷ ಭೇದ ಮಾತ್ರವಲ್ಲದೆ ಸ್ವಸ್ತ್ರೀ ಪರಸ್ತ್ರೀ ಭೇದವೂ ಬೇಕು. ಅದರ ಯಥಾರ್ಥ ಜ್ಞಾನ ಬೇಕು. ಅದಿಲ್ಲದಿದ್ದರೇ ಅನಿಷ್ಟ. ವರ್ಣಾಶ್ರಮ ಧರ್ಮಾಚರಣೆ ಎಲ್ಲಕ್ಕೂ ತಿಲಾಂಜಲಿ ನೀಡುವ ಪ್ರಸಂಗ ಬರುತ್ತದೆ.

ಬಹುತ್ವೇನೈವ ವಸ್ತೂನಾಂ ಯಥಾರ್ಥಜ್ಞಾನಮುಚ್ಯತೇ ।
ಅದ್ವೈತಜ್ಞಾನಮಿತ್ಯೇತದ್ ದ್ವೈತಜ್ಞಾನಂ ತದನ್ಯಥಾ ।

ಯಥಾ ಜ್ಞಾನಂ ತಥಾ ವಸ್ತು ಯಥಾ ವಸ್ತು ತಥಾ ಮತಿಃ ।
ನೈವ ಜ್ಞಾನಾರ್ಥಯೋರ್ಭೇದಸ್ತತ ಏಕತ್ವವೇದನಂ । ಇತಿ ಚ ॥

ಬಹುವಸ್ತುಗಳನ್ನು ಬಹುವಸ್ತುಗಳೆಂದೇ ತಿಳಿಯುವುದು, ಒಂದು ವಸ್ತುವನ್ನು ಒಂದು ವಸ್ತುವೆಂದೇ ತಿಳಿಯುವುದು ಯಥಾರ್ಥಜ್ಞಾನ. ಇದು ಅದ್ವೈತವಾದ ಜ್ಞಾನ. ಇದಕ್ಕೆ ವಿಪರೀತವಾದ ಅಯಥಾರ್ಥಜ್ಞಾನವು ದ್ವೈತವಾದ ಜ್ಞಾನವೆನಿಸುತ್ತದೆ. ಜ್ಞಾನ ವಸ್ತುವನ್ನು ಹೇಗೆ ಗ್ರಹಿಸುವುದೋ ಹಾಗೇ ವಸ್ತು ಇರಬೇಕು. ವಸ್ತು ಹೇಗೆ ಇರುವುದೋ ಹಾಗೇ ಜ್ಞಾನವು ಗ್ರಹಿಸಬೇಕು. ಜ್ಞಾನಕ್ಕೂ ವಸ್ತುವಿಗೂ ವಿರೋಧವಿರಕೂಡದು. ವಿರೋಧ ವಿಲ್ಲದಿದ್ದಾಗಲೇ ಅದನ್ನು ಏಕತ್ವಜ್ಞಾನ ಅಥವಾ ಅದ್ವೈತವಾದ ಜ್ಞಾನವೆಂದು ಕರೆಯಬೇಕು ಎಂದು ತಂತ್ರಮಾಲಾಗ್ರಂಥದಲ್ಲಿ ಉಕ್ತವಾಗಿದೆ.

❖ ❖ ❖

ಗುರುಕುಲವಾಸವನ್ನು ಮುಗಿಸಿದ ಬ್ರಹ್ಮಚಾರಿ ಗುರುಗಳ ಅನುಮತಿ ದೊರೆತರೆ ಗೃಹಸ್ಥನಾಗಬಹುದು, ವಾನಪ್ರಸ್ಥನಾಗಬಹುದು, ಸನ್ಯಾಸಿಯಾಗಬಹುದು ಇಲ್ಲವೇ ನೈಷ್ಠಿಕ ಬ್ರಹ್ಮಚರ್ಯದಲ್ಲಿದ್ದು ಗುರುಕುಲವಾಸವನ್ನೇ ಮುಂದುವರಿಸಲೂ ಬಹುದು ಎಂದು ನಾರದರು ಆಶ್ರಮಧರ್ಮವನ್ನು ಧರ್ಮರಾಜನಿಗೆ ಹೇಳುತ್ತಾರೆ.

ದತ್ವಾ ವರಮನುಜ್ಞಾತೋ ಗುರೋಃ ಕಾಮಂ ಯದೀಶ್ವರಃ ।
ಗೃಹಂ ವನಂ ವಾ ಪ್ರವಿಶೇತ್ಪ್ರವ್ರಜೇತ್ತತ್ರ ವಾಽಽವಸೇತ್ ॥ ೧೪ ॥

ಗುರುಕುಲವಾಸವನ್ನು ಮುಗಿಸಿದ ಬ್ರಹ್ಮಚಾರಿ ಶಕ್ತನಾಗಿದ್ದರೆ ಗುರು ಬಯಸಿದಷ್ಟು ದಕ್ಷಿಣೆ ನೀಡಿ ಅವನ ಅನುಮತಿಯಿಂದ ಗೃಹಸ್ಥಾಶ್ರಮ ವನ್ನಾಗಲಿ ವಾನಪ್ರಸ್ಥವನ್ನಾಗಲಿ ಸನ್ಯಾಸವನ್ನಾಗಲಿ ಸ್ವೀಕರಿಸಬಹುದು, ನೈಷ್ಠಿಕ ಬ್ರಹ್ಮಚಾರಿಯಾಗಿ ಗುರುಕುಲದಲ್ಲಿಯೇ ವಾಸಮಾಡಬಹುದು.

ಇಲ್ಲಿ 'ಗುರೋರನುಜ್ಞಾತಃ' ಗುರುವಿನ ಅನುಮತಿ ಪಡೆದ ಬ್ರಹ್ಮಚಾರಿಯು ಗೃಹಸ್ಥಾಶ್ರಮವನ್ನಾಗಲಿ ವಾನಪ್ರಸ್ಥವನ್ನಾಗಲಿ ಸನ್ಯಾಸವನ್ನಾಗಲಿ ಸ್ವೀಕರಿಸಬಹುದು ಎಂದು ಭಾಗವತ ಹೇಳುತ್ತಿದೆ. ಗುರುವಿನ ಅನುಮತಿ ಬೇರೆ ಆಶ್ರಮಸ್ವೀಕಾರದ ವಿಷಯದಲ್ಲಿ ಬೇಕು. ಆದರೆ ಆ ಬೇರೆ ಆಶ್ರಮ ಗೃಹಸ್ಥವೋ ವಾನಪ್ರಸ್ಥವೋ ಸನ್ಯಾಸವೋ ಎಂದು ನಿರ್ಧರಿಸುವಲ್ಲಿ ಬ್ರಹ್ಮಚಾರಿಗೆ ಸ್ವಾತಂತ್ರ್ಯವಿದೆ ಎಂಬ ತಪ್ಪು ಕಲ್ಪನೆಗೆ ಅವಕಾಶವಿದೆ. ಬೇರೆ ವ್ಯಾಖ್ಯಾನಕಾರರು ಈ ಬಗ್ಗೆ ವಿಚಾರ ಮಾಡುವುದಿಲ್ಲ

'ಗುರೋರಾಜ್ಞಾನುರೋಧೇನ' ಗುರುವಿನ ಆಜ್ಞೆಗೆ ಅನುಸಾರವಾಗಿ ಗೃಹಸ್ಥ ವಾನಪ್ರಸ್ಥ ಅಥವಾ ಸನ್ಯಾಸಾಶ್ರಮವನ್ನು ಸ್ವೀಕರಿಸಬೇಕು ಎಂದು ಶ್ರೀಮದಾಚಾರ್ಯರು ಹೇಳುತ್ತಾರೆ. ಬೇರೆ ಆಶ್ರಮ ಯಾವುದೆಂಬುದನ್ನೂ ಗುರುವಿನ ಆಜ್ಞಾನುಸಾರ ನಿರ್ಧರಿಸಬೇಕು, ಹೊರತು ಅದು ಶಿಷ್ಯನ ಆಯ್ಕೆಗೆ ಬಿಟ್ಟಿದ್ದಲ್ಲ ಎಂದು ಸ್ಪಷ್ಟಪಡಿಸುತ್ತಾರೆ.

ಗುರೋರಾಜ್ಞಾನುರೋಧೇನ ದೂರಸ್ಥೋ ವಾ ಗೃಹೀ ಭವೇತ್ ।
ಇತಿ ಚ ॥

ಗುರುವಿನ ಆಜ್ಞಾನುಸಾರವಾಗಿಯೇ ಶಿಷ್ಯನು ವಾನಪ್ರಸ್ಥಾದಿ ಆಶ್ರಮವನ್ನಾಗಲಿ ಗೃಹಸ್ಥಾಶ್ರಮವನ್ನಾಗಲಿ ಸ್ವೀಕರಿಸಬೇಕು ಎಂದೂ ತಂತ್ರಮಾಲಾ ಗ್ರಂಥದಲ್ಲಿ ಉಕ್ತವಾಗಿದೆ.

'ದೂರಸ್ಥಃ' ಎಂದರೆ 'ಗೃಹೀ' ಎಂಬಲ್ಲಿ ಹೇಳುವ 'ಗೃಹ'ಕ್ಕಿಂತ ದೂರ, ಅಂದರೆ ವಾನಪ್ರಸ್ಥ ಅಥವಾ ಸನ್ಯಾಸ, ಅಥವಾ ನೈಷ್ಠಿಕ ಬ್ರಹ್ಮಚರ್ಯ ವಿವಕ್ಷಿತವಾಗಿದೆ. ಗುರುವಿನ ಆಜ್ಞೆಯಂತೆ ನೈಷ್ಠಿಕ ಬ್ರಹ್ಮಚರ್ಯವನ್ನು ಸ್ವೀಕರಿಸಿ ಗುರುಕುಲವಾಸವನ್ನೇ ಮುಂದುವರಿಸಲು ಅವಕಾಶವಿದೆ. ಅದೂ 'ಗೃಹ'ಕ್ಕಿಂತ ದೂರವೇ. ಗೃಹಸ್ಥನ 'ಗೃಹ'ಕ್ಕಿಂತ ದೂರವಾದ ಗುರುವಿನ ಗೃಹ.

❖ ❖ ❖

'ಸಾಯಂ ಪ್ರಾತರುಪಾಸೀತ ಗುರ್ವಗ್ನ್ಯರ್ಕಸುರೋತ್ತಮಾನ್' ಎಂದು ಹಿಂದೆ (೭.೧೩.೨) ಹೇಳಿದ ಗುರು ಅಗ್ನಿ ಮುಂತಾದವರ ಉಪಾಸನೆಯನ್ನು ಹೇಗೆ ಮಾಡಬೇಕೆಂಬುದನ್ನು ನಾರದರು ಧರ್ಮರಾಜನಿಗೆ ಹೇಳುತ್ತಾರೆ.

ಅಗ್ನೌ ಗುರಾವಾತ್ಮನಿ ಚ ಸರ್ವಭೂತೇಷ್ವಧೋಕ್ಷಜಮ್ ।
ಭೂತೈಃ ಸ್ವಧಾಮಭಿಃ ಪಶ್ಯೇದಪ್ರವಿಷ್ಟಂ ಪ್ರವಿಷ್ಟವತ್ ॥ ೧೫ ॥

ಅಧೋಕ್ಷಜನು ಅಗ್ನಿಯಲ್ಲಿ ಗುರುವಿನಲ್ಲಿ ತನ್ನಲ್ಲಿ ಎಲ್ಲ ಪ್ರಾಣಿಗಳಲ್ಲಿ ಪೂರ್ಣವಾದ ಸ್ವಸಾಮರ್ಥ್ಯದಿಂದ ಆಯಾ ರೂಪಗಳಿಂದ ಪ್ರವಿಷ್ಟನೂ ಆಗಿದ್ದಾನೆ ಮತ್ತು ಸರ್ವವ್ಯಾಪ್ತವಾದ ರೂಪದಿಂದ ಅಪ್ರವಿಷ್ಟನೂ ಆಗಿದ್ದಾನೆ ಎಂದು ತಿಳಿಯಬೇಕು.

ಇಲ್ಲಿ 'ಅಪ್ರವಿಷ್ಟಂ ಪ್ರವಿಷ್ಟವತ್' ಹರಿ ಪ್ರವಿಷ್ಟನಾಗಿರದಿದ್ದರೂ ಪ್ರವಿಷ್ಟನಂತೆ ಇದ್ದಾನೆ ಎನ್ನುವುದಕ್ಕೆ ವಿವರಣೆ ಬೇಕು. ಸರ್ವಗತವಾದ ಭಗವದ್ರೂಪದಿಂದ

ಭಗವಂತ ಅಪ್ರವಿಷ್ಟ, ಆಯಾ ವಸ್ತುಗಳಲ್ಲಿ ಅವುಗಳಿಗೆ ಅನುರೂಪವಾಗಿರುವ ಅಂತರ್ಯಾಮಿರೂಪಗಳಿಂದ ಪ್ರವಿಷ್ಟನೇ ಆಗಿದ್ದಾನೆ. 'ಪ್ರವಿಷ್ಟವತ್' ಎಂಬಲ್ಲಿ ನಿತ್ಯವತ್‌ಶ್ರವಣಂ ಎಂದು ಮುಂತಾದ ಕಡೆಗಳಂತೆ ಸ್ವಾರ್ಥೇ ವತಿ ಪ್ರತ್ಯಯ ವಿರುವುದರಿಂದ ಪ್ರವಿಷ್ಟ ಎಂದೇ ಅರ್ಥ ವಿವಕ್ಷಿತ. ಇದು ಶ್ರೀಮದಾಚಾರ್ಯರು ತಂತ್ರಮಾಲಾವಚನದ ಆಧಾರದೊಂದಿಗೆ ನೀಡಿರುವ ವಿವರಣೆ.

[೧]ಬೇರೆ ವ್ಯಾಖ್ಯಾನಕಾರರು ಪರಮಾತ್ಮನಲ್ಲಿ ಅಂತರ್ಯಾಮಿರೂಪ ವ್ಯಾಪ್ತರೂಪವೆಂದು ವಿಶೇಷವನ್ನು ಅಂಗೀಕರಿಸದಿರುವುದರಿಂದ ಇಲ್ಲಿ ಸರಿಯಾದ ವಿವರಣೆ ನೀಡುತ್ತಿಲ್ಲ. ಸರ್ವೋಪಾದಾನವಾಗಿ ಮೊದಲೇ ಇರುವ ಭಗವಂತ ಅಗ್ನ್ಯಾದಿಗಳಲ್ಲಿ ಪ್ರವೇಶ ಮಾಡುವುದು ಶಕ್ಯವಿಲ್ಲ. ಆದರಿಂದ ಅಪ್ರವಿಷ್ಟ. ಆದರೂ ಉಪಾಸನೆ ಮಾಡುವಾಗ ನಿಯಾಮಕನಾಗಿ ಪ್ರವಿಷ್ಟನಾಗಿದ್ದಾನೆ ಎಂದು ತಿಳಿಯಬೇಕು ಎಂದು ಶ್ರೀಧರವ್ಯಾಖ್ಯಾನ, ಗಂಗಾಸಹಾಯ, ವಿಶ್ವನಾಥ, ಗಿರಿಧರ, ಶುಕದೇವ ವ್ಯಾಖ್ಯಾನಗಳು ಹೇಳುತ್ತವೆ.

'ಸ್ವಧಾಮಭಿಃ ಅಪ್ರವಿಷ್ಟಂ' ತನ್ನನ್ನು ಆಶ್ರಯಿಸಿರುವ ಪ್ರಾಣಿಗಳಿಂದ ಭಗವಂತ ಪ್ರವಿಷ್ಟನಾಗಿಲ್ಲ. ಅಂದರೆ, ಪ್ರಾಣಿಗಳ ಪ್ರವೇಶದಿಂದ ತನ್ನಲ್ಲಿ ಅವುಗಳ ದೋಷ ಅಂಟಿಕೊಳ್ಳುವುದಿಲ್ಲ. ಒಳಗೆ ಹೊರಗೆ ವ್ಯಾಪ್ತನಾದ್ದರಿಂದ ತಾನು ಅವುಗಳಲ್ಲಿ ಪ್ರವಿಷ್ಟನಾದಂತೆಯೇ ಎಂದೂ ತಿಳಿಯಬೇಕು ಎಂದು ವೀರರಾಘವ ಭಗವತ್ಪ್ರಸಾದ ವ್ಯಾಖ್ಯಾನಗಳು ಹೇಳುತ್ತವೆ. ಎಲ್ಲ ವ್ಯಾಖ್ಯಾನಗಳೂ ಭಗವಂತ ಎಲ್ಲ ವಸ್ತುಗಳನ್ನು ಪ್ರವೇಶಿಸಿಲ್ಲ, ಪ್ರವಿಷ್ಟನಂತೆ ಇದ್ದಾನೆ, ಅಥವಾ ಪ್ರವಿಷ್ಟನಂತೆ ಉಪಾಸನೆ ಮಾಡಬೇಕೆಂದೇ ಹೇಳುತ್ತವೆ. ಶುಕದೇವ ವ್ಯಾಖ್ಯಾನ ಅಭೇದೋಪಾಸನೆಯನ್ನೂ ಹೇಳುತ್ತದೆ.

ಅಪ್ರವಿಷ್ಟಃ ಸರ್ವಗತಃ ಪ್ರವಿಷ್ಟಸ್ತ್ವನುರೂಪವಾನ್ ।
ಏವಂ ದ್ವಿರೂಪೋ ಭಗವಾನ್ ಹರಿರೇಕೋ ಜನಾರ್ದನಃ ॥ ಇತಿ ಚ

---

೧. ಸರ್ವೋಪಾದಾನತಯಾ ಪೂರ್ವಮೇವ ವಿದ್ಯಮಾನತ್ವಾತ್ ಅಗ್ನ್ಯಾದಿಷು ವಸ್ತುತಃ ಅಪ್ರವಿಷ್ಟಮಪ್ಯುಪಾಸನಾರೀತ್ಯಾ / ತೇಷು ಪಂಚಮಹಾಭೂತೈಃ ಸ್ವಧಾಮಭಿಃ ಸ್ವಾಶ್ರಯೈರ್ಜೀವೈಶ್ಚ ಸಹ ತನ್ನಿಯಂತೃತಯಾ ಪ್ರವಿಷ್ಟವದಧೋಕ್ಷಜಂ ಭಗವಂತಂ ಪಶ್ಯೇತ್ ।
-ಗಂಗಾಸಹಾಯಃ

ಅಧೋಕ್ಷಜೋ ಧಾಮಾಧಾರೋ ಯೇಷಾಂ ತೈರ್ಭೂತೈರಪ್ರವಿಷ್ಟಂ ಪಶ್ಯೇತ್ ವ್ಯಾಪ್ಯವಸ್ತುಗತ ದೋಷಾಸಂಸ್ಪೃಷ್ಟಂ ಪಶ್ಯೇತ್ । ಪ್ರವಿಷ್ಟವಚ್ಚ ಪಶ್ಯೇತ್ ಅಂತರ್ಬಹಿಶ್ಚ ವ್ಯಾಪ್ಯ ಸ್ಥಿತತ್ವಾತ್ ಇತಿ ಭಾವಃ । -ವೀರರಾಘವಃ

ಸರ್ವವ್ಯಾಪ್ತವಾದ ರೂಪದಿಂದ ವಸ್ತುಗಳಲ್ಲಿ ಹರಿ ಪ್ರವಿಷ್ಟನಾಗಿಲ್ಲ, ಆಯಾ ವಸ್ತುಗಳಿಗೆ ಸದೃಶವಾದ ಅಂತರ್ಯಾಮಿ ರೂಪಗಳಿಂದ ಪ್ರವೇಶಿಸಿದ್ದಾನೆ. ಹೀಗೆ ಒಬ್ಬನೇ ಭಗವಾನ್ ಜನಾರ್ದನ ವಿಶೇಷ ಬಲದಿಂದ ಎರಡು ಬಗೆಯ ರೂಪ ಉಳ್ಳವನಾಗಿದ್ದಾನೆ ಎಂದೂ ಹೇಳಿದೆ.

❖ ❖ ❖

ಕರ್ಮಾನುಷ್ಠಾನ ಬ್ರಹ್ಮವಿಚಾರಗಳಲ್ಲಿ ಶರೀರ ಅಶಕ್ತವೆನಿಸಿದಾಗ ವಾನಪ್ರಸ್ಥನು ಅನಶನವ್ರತಾದಿಗಳಿಂದ ಶರೀರ ತ್ಯಾಗ ಮಾಡಬೇಕು. ಆದಕ್ಕೆ ಪೂರ್ವಭಾವಿಯಾಗಿ ಲಯ ಚಿಂತನೆ ಮಾಡಬೇಕೆಂದು ನಾರದರು ಧರ್ಮರಾಜನಿಗೆ ಹೇಳುತ್ತಾರೆ.

ಆತ್ಮನ್ಯಗ್ನೀನ್ ಸಮಾರೋಪ್ಯ ಸಂನ್ಯಸ್ಯಾಹಂಮಮಾತ್ಮತಾಮ್ ।
ಕಾರಣೇಷು ನ್ಯಸೇತ್‌ಸಮ್ಯಕ್ ಸಂಘಾತಂ ತು ಯಥಾರ್ಹತಃ ॥ ೨೪ ॥

ಹೋಮಾಗ್ನಿಗಳನ್ನು ತನ್ನ ಶರೀರದಲ್ಲಿ ಆರೋಪಿಸಿಕೊಂಡು ಅಹಂಕಾರ ಮಮಕಾರಗಳನ್ನು ಪರಿತ್ಯಜಿಸಿ ಎಲ್ಲ ಕಾರ್ಯವಸ್ತುಗಳನ್ನೂ ಯಥಾ ಯೋಗ್ಯವಾಗಿ ಅವುಗಳ ಕಾರಣಗಳಲ್ಲಿ ಕೊನೆಗೆ ಲೀನವಾಗುವವುಗಳೆಂದು ಧ್ಯಾನಮಾಡಬೇಕು.

ಇಲ್ಲಿ 'ಕಾರಣೇಷು ನ್ಯಸೇತ್' ಎಂದರೆ ಕಾರ್ಯಗಳನ್ನು ಕಾರಣಗಳಲ್ಲಿ ಸೇರಿಸಲು ಯೋಗಿ ಶಕ್ತನಲ್ಲ. ಅವನ ಮರಣ ಕಾಲದಲ್ಲಿ ಕಾರ್ಯ ಕಾರಣದಲ್ಲಿ ಲಯಹೊಂದುವುದೂ ಇಲ್ಲ. ಮುಂದೆ ಪ್ರಳಯಕಾಲದಲ್ಲಿ ಲಯ ಹೊಂದುತ್ತದೆ ಎಂದು ಧ್ಯಾನಮಾಡುವುದೇ 'ನ್ಯಸೇತ್' ಎಂದು ಹೇಳಿದ ನ್ಯಾಸ. ಬೇರೆ ವ್ಯಾಖ್ಯಾನಕಾರರು 'ಲೀನಮನುಸಂದಧೀತ' ಲೀನವಾಯಿತೆಂದು ಚಿಂತಿಸಬೇಕು ಎಂದು ವ್ಯಾಖ್ಯಾನಿಸಿದ್ದಾರೆ. ಆದರೆ ಲೀನವಾಗಿಲ್ಲ, ಆಯಿತೆಂದು ಚಿಂತಿಸುವುದು ಅನ್ಯಥೋಪಾಸನೆಯಾಗುವುದು.

ಕಾರ್ಯಸ್ಯ ಕಾರಣಲಯಜ್ಞಾನಮಾತ್ರಂ ವಿಲಾಪನಂ ॥ ಇತಿ ಚ ।

ಲಯಕಾಲದಲ್ಲಿ ಕಾರ್ಯವು ಕಾರಣದಲ್ಲಿ ಲಯ ಹೊಂದುವುದೆಂದು ಚಿಂತಿಸುವುದು ಮಾತ್ರವೇ ಇಲ್ಲಿ 'ನ್ಯಸೇತ್' ಎಂದು ಹೇಳಿದ ಲಯಕ್ರಿಯೆ ಎಂದೂ ತಂತ್ರಮಾಲಾದಲ್ಲಿ ಉಕ್ತವಾಗಿದೆ.

❖ ❖ ❖

ವಾನಪ್ರಸ್ಥನು ಉಪವಾಸದಿಂದ ಶರೀರ ತ್ಯಾಗ ಮಾಡುವುದಕ್ಕೆ ಮೊದಲಿಗೆ ಲಯಚಿಂತನೆ ಮಾಡಬೇಕು. ಮನಸ್ಸಿನ ಐದು ಪ್ರಭೇದಗಳಲ್ಲಿ ಮನಸ್ಸನ್ನು ಚಂದ್ರನಲ್ಲಿಯೂ ಬುದ್ಧಿಯನ್ನು ಬೃಹಸ್ಪತಿಯಲ್ಲಿಯೂ ಲಯ ಹೊಂದುವುದೆಂದು ಚಿಂತಿಸಬೇಕು ಎಂದು ನಾರದರು ಧರ್ಮರಾಜನಿಗೆ ಹೇಳುತ್ತಾರೆ.

ಮನೋ ಮನೋರಥೈಶ್ಚಂದ್ರೇ ಬುದ್ಧಿಂ ಬೋಧ್ಯೈಃ ಕವೌ ಪರೇ ॥ ೨೮ ॥

ಮನಸ್ಸು ಬುದ್ಧಿ ಅಹಂಕಾರ ಚಿತ್ತ ಚೇತನಾ ಎಂಬ ಐದು ಬಗೆಯ ಮನಸ್ಸುಗಳಿಗೂ ಅವುಗಳ ವಿಷಯಗಳೊಂದಿಗೆ ಅವುಗಳ ಅಭಿಮಾನಿ ದೇವತೆಗಳಲ್ಲಿ ಲಯಚಿಂತನೆ ಮಾಡಬೇಕು. ಅದು ಹೀಗೆ- ಮನಸ್ಸನ್ನೂ ಮನೋರಥಗಳನ್ನೂ ಚಂದ್ರನಲ್ಲಿ, ಬುದ್ಧಿಯನ್ನೂ ಅದರ ವಿಷಯಗಳನ್ನೂ ಬೃಹಸ್ಪತಿಯಲ್ಲಿ ಇತ್ಯಾದಿ.

ಇಲ್ಲಿ 'ಕವೌ ಪರೇ' ಎಂದರೆ ಮಹಾಜ್ಞಾನಿಯಾದ ಚತುರ್ಮುಖಬ್ರಹ್ಮನಲ್ಲಿ ಬುದ್ಧಿಗೆ ಲಯ ಎಂದು ಬೇರೆ ವ್ಯಾಖ್ಯಾನಕಾರರೆಲ್ಲರೂ ಹೇಳುತ್ತಾರೆ. ಆದರೆ ತಂತ್ರಮಾಲಾಗ್ರಂಥ ದಲ್ಲಿ ಚತುರ್ಮುಖನಲ್ಲಿ ಚಿತ್ತಾಭಿಮಾನಿ ರುದ್ರನಿಗೆ ಲಯವನ್ನು ಹೇಳಿದ್ದಾರೆ ಹೊರತು ಬುದ್ಧಿಗೆ ಅಲ್ಲ.

ಪರಃ ಕವಿ ರ್ಬೃಹಸ್ಪತಿಃ ।

'ಪರೇ ಕವೌ' ಎಂಬಲ್ಲಿ ಹೇಳಿದ ಪರ ಕವಿ ಎಂದರೆ ಬೃಹಸ್ಪತಿಯೇ ಹೊರತು ಚತುರ್ಮುಖ ಬ್ರಹ್ಮನಲ್ಲ.

'ಕವಿ' ಎಂದರೆ ಶುಕ್ರಾಚಾರ್ಯರೆಂದು ಪ್ರಸಿದ್ಧ. ಆದರೆ 'ಪರ' ಇನ್ನೊಬ್ಬ 'ಕವಿ' ಎಂದರೆ ಶುಕ್ರಾಚಾರ್ಯರು ಹೇಗೆ ದೈತ್ಯರಿಗೆ ಗುರುವೋ ಹಾಗೇ ಬೃಹಸ್ಪತ್ಯಾಚಾರ್ಯರು ದೇವತೆಗಳಿಗೆ ಗುರು. ಹೀಗಾಗಿ ಶುಕ್ರಾಚಾರ್ಯರಿಗೆ ಸದೃಶರಾದ್ದರಿಂದ ಶುಕ್ರಾಚಾರ್ಯರನ್ನು ಹೇಳುವ ಕವಿ ಶಬ್ದದಿಂದ ಶುಕ್ರಸದೃಶರಾದ ಬೃಹಸ್ಪತ್ಯಾಚಾರ್ಯರು ವಿವಕ್ಷಿತರು. ಅದರಿಂದಲೆ ಪರಃ ಕವಿಃ ಇನ್ನೊಬ್ಬ ಕವಿ ಎಂದಿದೆ.

❖❖❖

ವಾನಪ್ರಸ್ಥನು ಶರೀರತ್ಯಾಗ ಮಾಡುವ ಮುನ್ನ ಮಾಡಬೇಕಾದ ಲಯಚಿಂತನವನ್ನು ನಾರದರು ಧರ್ಮರಾಜನಿಗೆ ಹೇಳುತ್ತಾರೆ-

ಸತ್ತ್ವೇನ ಚಿತ್ತಂ ಕ್ಷೇತ್ರಜ್ಞೇ ಗುಣೈರ್ವೈಕಾರಿಕಂ ಪರೇ ॥ ೨೯ ॥

ಸದ್ಗುಣಗಳೊಂದಿಗೆ ಚಿತ್ತಾಭಿಮಾನಿ ರುದ್ರನನ್ನು ಬ್ರಹ್ಮ ಲಕ್ಷ್ಮೀ ದ್ವಾರಾ ಕ್ಷೇತ್ರಜ್ಞ ಪರಮಾತ್ಮನಲ್ಲಿ, ಚೇತನಾಭಿಮಾನಿಯಾದ ವೈಕಾರಿಕ ಚತುರ್ಮುಖನನ್ನು ಲಕ್ಷ್ಮೀದ್ವಾರಾ ಪರಮಾತ್ಮನಲ್ಲಿ ಲಯ ಮಾಡಬೇಕು.

ಇಲ್ಲಿ ಬೇರೆ ವ್ಯಾಖ್ಯಾನಕಾರರು ಚಿತ್ತವನ್ನು ಕ್ಷೇತ್ರಜ್ಞನೆನಿಸಿದ ಜೀವನಲ್ಲಿ, ಜೀವನನ್ನು ಪರಬ್ರಹ್ಮನಲ್ಲಿ ಲಯ ಮಾಡಬೇಕೆಂದು ಹೇಳುತ್ತಾರೆ. ವಸ್ತುತಃ ಚಿತ್ತಾಭಿಮಾನಿ ರುದ್ರನನ್ನು ಅವನಿಗೆ ಕಾರಣನಾದ ಬ್ರಹ್ಮನಲ್ಲಿ ಲಯಗೊಳಿಸಿ ಬ್ರಹ್ಮನನ್ನು ಲಕ್ಷ್ಮೀದ್ವಾರಾ ಪರಬ್ರಹ್ಮ ಪರಮಾತ್ಮನಲ್ಲಿ ಲಯಗೊಳಿಸಬೇಕು. ಕ್ಷೇತ್ರಜ್ಞೇ ಎಂದರೆ ಜೀವನಲ್ಲಿ ಎಂದರ್ಥವಲ್ಲ. ಕ್ಷೇತ್ರಜ್ಞನಾಮಕನು ಪರಮಾತ್ಮ.

ಚಿತ್ತಂ ಹಿರಣ್ಯಗರ್ಭೇ ತು ವಿಲಾಪ್ಯ ಪರಮಾತ್ಮನಿ ।
ಕ್ಷೇತ್ರಜ್ಞಾಖ್ಯೇ ಲಾಪಯೇಚ್ಚ ತತೋ ನಾನ್ಯತ್ ಸ್ಮರೇದ್ ಬುಧಃ ।
ಇತಿ ಚ ॥

ಚಿತ್ತಾಭಿಮಾನಿ ರುದ್ರನನ್ನು ಚಿತ್ತಕಾರಣ ಮಹತತ್ತ್ವಾಭಿಮಾನಿಯಾದ ಬ್ರಹ್ಮನಲ್ಲಿ ಲಯಮಾಡಿ ಬ್ರಹ್ಮನ ದ್ವಾರಾ ಕ್ಷೇತ್ರಜ್ಞನೆನಿಸಿದ ಪರಮಾತ್ಮನಲ್ಲಿ ಲಯಗೊಳಿಸಬೇಕು ಎಂದೂ ತಂತ್ರಮಾಲಾದಲ್ಲಿ ಹೇಳಿದೆ.

❖ ❖ ❖

ಪ್ರಪಂಚವೆಲ್ಲವೂ ಪರಮಾತ್ಮನಲ್ಲಿ ಲಯಹೊಂದುವುದೆಂದು ಚಿಂತಿಸಿದ ಬಳಿಕ ಕೊನೆಗೆ ಉಳಿಯುವ ಪರಮಾತ್ಮನನ್ನೇ ಚಿಂತಿಸಬೇಕು. ಬೇರೇನೂ ಕೃತ್ಯವಿರುವುದಿಲ್ಲ ಎಂದು ನಾರದರು ಧರ್ಮರಾಜನಿಗೆ ಹೇಳುತ್ತಾರೆ.

ಇತ್ಯಕ್ಷರತಯಾಽಽತ್ಮಾನಂ ಚಿನ್ಮಾತ್ರಮವಶೇಷಿತಮ್ ।
ಜ್ಞಾತ್ವಾಽದ್ವಯೋಽಥ ವಿರಮೇದ್‌ದಗ್ಧಯೋನಿರಿವಾನಲಃ ॥ ೩೦ ॥

ಲಯರಹಿತನಾದ್ದರಿಂದ ಚಿನ್ಮಾತ್ರನಾದ ಹರಿಯೊಬ್ಬನೇ ಕೊನೆಯಲ್ಲಿ ಉಳಿಯುತ್ತಾನೆ ಎಂದು ಧ್ಯಾನಿಸಬೇಕು. ಬೇರೇನನ್ನೂ ಸ್ಮರಿಸಲು ಉಳಿದಿರುವುದಿಲ್ಲ. ಕಟ್ಟಿಗೆ ಉರಿದು ಹೋದಮೇಲೆ ಬೆಂಕಿಗೆ ಸುಡಲು ಏನೂ ಇಲ್ಲದಂತಾಗಿ ಆರಿಹೋಗುವಂತೆ ಹರಿಧ್ಯಾನಕ್ಕಿಂತ ಬೇರೆ ಕೃತ್ಯವೇ ಯೋಗಿಗೆ ಇಲ್ಲವಾಗುತ್ತದೆ.

[೧]ಇಲ್ಲಿ 'ಆತ್ಮ' 'ಅದ್ವಯ' ಶಬ್ದಗಳಿಂದ ಎಲ್ಲ ಉಪಾಧಿಗಳು ಲಯಹೊಂದಿದ ಬಳಿಕ ಉಳಿಯುವ ಅದ್ವಿತೀಯವಾದ ಆತ್ಮನನ್ನು 'ಅ-ಕ್ಷರ' ನಾಶವಿಲ್ಲದವನೆಂದು ತಿಳಿಯಬೇಕು. ಬಳಿಕ ಯೋಗಿಗೆ ಯಾವ ಕೃತ್ಯವೂ ಉಳಿಯುವುದಿಲ್ಲ. ಕಟ್ಟಿಗೆ ಎಲ್ಲ ಉರಿದು ಬೂದಿಯಾದ ಬಳಿಕ ಬೆಂಕಿಗೆ ಇನ್ನು ಸುಡಲು ಏನೂ ಇಲ್ಲದಿರುವುದರಿಂದ ಅದು ಆರಿಹೋಗುವಂತೆ ಜೀವಾತ್ಮ ಎಲ್ಲ ಕೃತ್ಯವನ್ನೂ ತ್ಯಜಿಸಬೇಕು ಎಂದು ಹೇಳಿದಂತೆ ಕಾಣುತ್ತದೆ. ಶ್ರೀಧರ ವ್ಯಾಖ್ಯಾನದಲ್ಲಿ ಹಾಗೇ ಹೇಳಿದೆ.

ಆದರೆ ಆತ್ಮಶಬ್ದಕ್ಕೆ ಜೀವಾತ್ಮ ಮುಖ್ಯವಾದ ಅರ್ಥವಲ್ಲ. ಇಲ್ಲಿ ಕ್ಷೇತ್ರಜ್ಞನಲ್ಲಿ ಎಲ್ಲವನ್ನೂ ಲಯಗೊಳಿಸಿದರೂ 'ಕ್ಷೇತ್ರಜ್ಞ' ಜೀವಾತ್ಮನಲ್ಲ, ಪರಮಾತ್ಮನೆ. ಅದರಿಂದ ಸರ್ವಲಯಕಾಲದಲ್ಲಿ ಉಳಿಯುವವನು ಪರಮಾತ್ಮನೆಂದು ಧ್ಯಾನಿಸಬೇಕು. ಹೀಗಾಗಿ ಜೀವಾತ್ಮಪರಮಾತ್ಮರಿಬ್ಬರು ಉಳಿಯುವುದರಿಂದ ಜೀವಾತ್ಮ ಅದ್ವಿತೀಯನಲ್ಲ. 'ಅದ್ವಯ' ಎಂದರೆ ಪರಮಾತ್ಮನಿಗಿಂತ ಬೇರೆ ಇನ್ನೊಂದು ಧ್ಯೇಯವಾದ ವಸ್ತು ಯೋಗಿಗೆ ಇರುವುದಿಲ್ಲ ಎಂದು ಅರ್ಥ. ತನ್ನ ಹೆಂಡತಿ ಮಕ್ಕಳು ಮುಂತಾದವರನ್ನು ನೆನೆಯಬಾರದು, 'ವಿರಮೇತ್' ಎಂದು ಭಾಗವತ ಹೇಳುತ್ತದೆ ಹೊರತು ಹರಿಸ್ಮರಣೆಯನ್ನೂ ಬಿಡಬೇಕೆನ್ನುವುದಿಲ್ಲ. ಕಟ್ಟಿಗೆ ಉರಿದು ಹೋದ ಬಳಿಕ ಬೆಂಕಿ ಆರುವ ದೃಷ್ಟಾಂತ ಹರಿಸ್ಮರಣೆಗಿಂತ ಬೇರೆ ಏನೂ ಕೃತ್ಯವಿಲ್ಲ ಎನ್ನುವ ಅಭಿಪ್ರಾಯದಿಂದ ಕೂಡುತ್ತದೆ.

ಆತ್ಮಾನಂ ಪರಮಾತ್ಮಾನಂ। ಅದ್ವಯಃ ತತೋಽನ್ಯಸ್ಮೃವರ್ಜಿತಃ ।
ದಗ್ಧಯೋನಿರ್ಯಥಾಽ ನಲ ಇತಿ ಕೃತ್ಯಾಭಾವಮಾತ್ರಂ।
ನ ಹರಿಂ ಸ್ಮರತಃ ಕೃತ್ಯಂ ದಗ್ಧೇಂಧನಹುತಾಶವತ್ । ಇತಿ ಚ ॥

'ಆತ್ಮಾನಂ' ಎಂದರೆ, ಪರಮಾತ್ಮನನ್ನು ಎಂದರ್ಥ ಹೊರತು ಜೀವಾತ್ಮನನ್ನು ಎಂದಲ್ಲ. 'ಅದ್ವಯಃ' ಎಂದರೆ ಹರಿಸ್ಮರಣೆಗಿಂತ ಬೇರೆ ಸ್ಮರಣೆ ಇಲ್ಲದವನು ಎಂದರ್ಥ. 'ದಗ್ಧಯೋನಿರ್ಯಥಾಽನಲಃ' ಎಂದು ಉದಾಹರಣೆ ಕೊಟ್ಟಿರುವುದಕ್ಕೆ ಬೇರೆ ಸ್ಮರಣೆ ಮಾಡಬೇಕಾಗಿರುವುದಿಲ್ಲ ಎಂದು ಮಾತ್ರ ಅಭಿಪ್ರಾಯ.

ಏಕೆಂದರೆ ತಂತ್ರಮಾಲಾದಲ್ಲಿ ಹಾಗೇ ಹೇಳಿದೆ. 'ಹರಿಸ್ಮರಣೆ

---

೧. ಸರ್ವೋಪಾಧಿವಿಲಯಾದ್ಧೇತೋಃ ಅವಶೇಷಿತಂ ಚಿನ್ಮಾತ್ರಮಾತ್ಮಾನಂ ಕ್ಷೇತ್ರಜ್ಞಮಕ್ಷರತಯಾ ಜ್ಞಾತ್ವಾ ಅಥ ಅದ್ವಯಃ ಸನ್ ವಾನಪ್ರಸ್ಥಃ ಕೃತ್ಯಾದ್ ವಿರಮೇತ್ । -ಗಂಗಾಸಹಾಯಃ

ಮಾಡುತ್ತಿರುವವನಿಗೆ ಬೇರೆ ಸ್ಮರಣೆ ಯಾವುದೂ ಮಾಡಬೇಕಾಗಿರುವುದಿಲ್ಲ. ಕಟ್ಟಿಗೆ ಪೂರ್ತಿ ಉರಿದು ಬೂದಿಯಾದ ಬಳಿಕ ಬೆಂಕಿಗೆ ಇನ್ನು ಸುಡಬೇಕಾಗಿರುವುದು ಏನೂ ಉಳಿದಿರುವುದಿಲ್ಲ ಹೇಗೋ ಹಾಗೆ ಎಂದು.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ಸಪ್ತಮಸ್ಕಂಧೇ
ತ್ರಯೋದಶೋऽಧ್ಯಾಯಃ

❖ ❖ ❖

ಅಧ್ಯಾಯ ೧೪

ಅಧ್ಯಾಯ ಸಾರಾಂಶ

ಬ್ರಹ್ಮವಿಚಾರದಲ್ಲಿ ಸಮರ್ಥನಾದ ವಾನಪ್ರಸ್ಥನು ಪ್ರಾಣತ್ಯಾಗ ಮಾಡದೆ ದೇಹಕ್ಕಿಂತ ಬೇರೆ ಎಲ್ಲವನ್ನೂ ತ್ಯಾಗ ಮಾಡಿ ಸಂನ್ಯಾಸಾಶ್ರಮ ಸ್ವೀಕರಿಸಬೇಕು. ಧನಾದಿಗಳ ಅಪೇಕ್ಷೆಯಿಲ್ಲದೆ ಧ್ಯಾನ ಪ್ರವಚನಗಳನ್ನು ನಡೆಸುತ್ತ ಎಲ್ಲೆಡೆ ಸಂಚರಿಸಬೇಕು. ಒಂದು ಊರಿನಲ್ಲಿ ಒಂದೇ ದಿನ ಇರುವ ನಿಯಮವನ್ನು ಹಿಡಿಯಬೇಕು. ಸಂಚಾರದಲ್ಲಿ ಅಸಮರ್ಥನಾದರೆ ಪುಣ್ಯಕ್ಷೇತ್ರದಲ್ಲಿ ಧ್ಯಾನಪ್ರವಚನಗಳನ್ನು ನಡೆಸುತ್ತ ವಾಸ ಮಾಡಬಹುದು. ಕಾಮಾದಿ ಸಹಜ ಶತ್ರುನಿಗ್ರಹಸಮರ್ಥನು ಬ್ರಹ್ಮಚಾರಿ ಗೃಹಸ್ಥ ವಾನಪ್ರಸ್ಥ ಯಾರೇ ಇರಲಿ ವಿರಕ್ತನಾದರೆ ಯತಿಯಾಗಬಹುದು.

ಕುಟೀಚ ಬಹೂದ ಹಂಸ ಪರಮಹಂಸ ಎಂದು ಯತಿಗಳು ನಾಲ್ಕು ಬಗೆ. ಪರಮಹಂಸ ಬಟ್ಟೆ ಉಡದಿರುವುದು ಉತ್ತಮ. ಉಡುವುದಾದರೆ ಕೌಪೀನದೊಂದಿಗೇ ಉಡಬೇಕು. ದಂಡ ಕಮಂಡಲು ಧರಿಸಬೇಕು. ಸದಾ ಪರಮಾತ್ಮ ವಿಚಾರ ಮಾಡುತ್ತಿರಬೇಕು. ಸಂಸಾರವನ್ನು ಪರಿತ್ಯಜಿಸಿ ಏಕಾಕಿಯಾಗಿ ಭಿಕ್ಷೆ ಎತ್ತಬೇಕು. ಜೀವನಕ್ಕಾಗಲಿ ಮರಣಕ್ಕಾಗಲಿ ಆಸೆ ಪಡಬಾರದು. ಎಲ್ಲವೂ ಕಾಲನಿಯಾಮಕ ಪರಮಾತ್ಮನ ಅಧೀನವೆಂದು ತಿಳಿಯಬೇಕು.

ದುಷ್ಟಶಾಸ್ತ್ರಗಳ ಅಧ್ಯಯನ, ಜ್ಞಾನಕಾರ್ಯವಿಲ್ಲದೆ ಶಿಷ್ಯರನ್ನು ಕಟ್ಟಿಕೊಳ್ಳುವುದು ಪ್ರವಚನವನ್ನಾಗಲಿ ಕೃಷಿ ಮುಂತಾದುವನ್ನಾಗಲಿ ಜೀವನವೃತ್ತಿಯಾಗಿ ಕೈಗೊಳ್ಳುವುದು ಅನ್ನದಾನಾದಿ ಧರ್ಮಕಾರ್ಯಗಳು ಇವು ಪರಮಹಂಸರಿಗೆ ನಿಷಿದ್ಧ. ಜ್ಞಾನಿಯಾದರೂ ಮುಗ್ಧನಂತೆ ವಾಗ್ಮಿಯಾದರೂ ಮೂಕನಂತೆ ಲೋಕಕ್ಕೆ ತೋರಿಕೊಳ್ಳಬೇಕು.

ಪ್ರಹ್ಲಾದನೊಮ್ಮೆ ಅವಧೂತ ಮುನಿಯನ್ನು ಕಂಡು ಅವನ ಆತ್ಮವೃತ್ತಾಂತವನ್ನು ಕೇಳಿ ತಿಳಿದ. ಆ ಮುನಿ ನುಡಿದ: ಸುಖಕ್ಕಾಗಿ

ಕರ್ಮಮಾಡುವ ಗೃಹಸ್ಥರು ಯಾರೂ ಸುಖವಾಗಿಲ್ಲದಿರುವುದನ್ನು ಕಂಡು ನಾನು ಕಾಮ್ಯಕರ್ಮಗಳನ್ನೂ ತ್ಯಜಿಸಿದ್ದೇನೆ. ಸ್ವರೂಪ ಸುಖವನ್ನು ಬಿಟ್ಟು ಮರುಮರೀಚಿಕೆಯಂತಿರುವ ವಿಷಯಸುಖದ ಕಡೆಗೆ ನಾನು ಧಾವಿಸುವುದಿಲ್ಲ. ಜಿಪುಣರಾದ ಶ್ರೀಮಂತರಿಗೆ ಎಲ್ಲರ ಮೇಲೂ ಸಂದೇಹ ಭಯವಿರುತ್ತವೆ. ರಾತ್ರಿ ನಿದ್ದೆ ಬರುವುದಿಲ್ಲ. ಜೇನುನೊಣ ಕಷ್ಟದಿಂದ ಸಂಪಾದಿಸಿದ ಜೇನಿನಂತೆ ಶ್ರೀಮಂತರು ಕಷ್ಟದಿಂದ ಸಂಪಾದಿಸಿದ ಹಣ ಅನ್ಯರ ಪಾಲಾಗುತ್ತದೆ. ಆದರಿಂದ ಹರೀಚ್ಛೆಯಿಂದ ದೊರಕಿದ್ದರಲ್ಲಿಯೇ ತೃಪ್ತಿ ಪಡುತ್ತೇನೆ, ಏನೂ ಸಿಗದಿದ್ದರೆ ಬಹುದಿನಕಾಲವೂ ಹೆಬ್ಬಾವಿನಂತೆ ಒಂದುಕಡೆ ಬಿದ್ದಿರುತ್ತೇನೆ. ಹುಟ್ಟಿಸಿದ ದೇವರು ಆಯುಷ್ಯವಿರುವಷ್ಟುಕಾಲ ನನ್ನನ್ನು ಈ ಲೋಕದಿಂದ ಸೆಳೆದೊಯ್ಯುವುದಿಲ್ಲ ಎಂಬ ಧೈರ್ಯ ನನಗಿದೆ. ಆದರಿಂದಲೆ ನಾನು ಪುಷ್ಟನಾಗಿದ್ದೇನೆ. ಬಲಶಾಲಿಯಾಗಿ ದ್ದೇನೆ. ಕೆಲವು ವೇಳೆ ಸಿಕ್ಕಿದರೆ ಹೊಟ್ಟೆ ತುಂಬುವಷ್ಟು ಉಣುತ್ತೇನೆ. ಇಲ್ಲದಿದ್ದರೆ ಉಪವಾಸವಿರುತ್ತೇನೆ. ಸಜ್ಜನರನ್ನು ನಾನು ನಿಂದಿಸುವುದಿಲ್ಲ. ದುರ್ಜನರನ್ನು ಹೊಗಳುವುದಿಲ್ಲ. ಒಳ್ಳೆಯವರಿ ಗೆಲ್ಲರಿಗೂ ಒಳ್ಳೆಯದಾಗಲಿ ದೇವರು ಅವರನ್ನು ಕಾಪಾಡಲೆಂದು ಹಾರೈಸುತ್ತೇನೆ.

ಎಲ್ಲ ದೇವತೆಗಳೂ ಅಗ್ನಿಯ ಅಧೀನ. ಅಗ್ನಿ ಇಂದ್ರನಿಗೆ ಅಧೀನ ಇಂದ್ರ ರುದ್ರನಿಗೆ. ರುದ್ರ ಬ್ರಹ್ಮನಿಗೆ, ಬ್ರಹ್ಮ ಲಕ್ಷ್ಮಿಗೆ, ಲಕ್ಷ್ಮಿ ಪರಮಾತ್ಮನಿಗೆ ಅಧೀನರೆಂದು ಚಿಂತಿಸಿ ಪರಮಾತ್ಮನಲ್ಲಿ ಮನಸ್ಸಿಡುತ್ತೇನೆ.

❖ ❖ ❖

ಸನ್ಯಾಸಿಯು ಎಲ್ಲ ಪ್ರಪಂಚ ಪರಮಾತ್ಮನಲ್ಲಿ ಇದೆ, ಪರಮಾತ್ಮ ಎಲ್ಲ ಪ್ರಪಂಚದಲ್ಲಿ ವ್ಯಾಪಿಸಿದ್ದಾನೆ ಎಂದು ತಿಳಿಯಬೇಕು ಎಂದು ನಾರದರು ಧರ್ಮರಾಜನಿಗೆ ಹೇಳುತ್ತಾರೆ.

ಪಶ್ಯೇದಾತ್ಮನ್ಯದೋ ವಿಶ್ವಂ ಪರೇ ಸದಸತೋಽವ್ಯಯೇ ।
ಆತ್ಮಾನಂ ಚ ಪರಂ ಬ್ರಹ್ಮ ಸರ್ವತ್ರ ಸದಸನ್ಮಯೇ ॥ ೪ ॥

ಮೂರ್ತ ಅಮೂರ್ತ ಪ್ರಪಂಚಕ್ಕಿಂತ ಉತ್ತಮನೂ ಅಸದೃಶನೂ ಆದ

ಪರಮಾತ್ಮನಲ್ಲಿ ಈ ಪ್ರಪಂಚ ನಿಂತಿದೆ. ಮೂರ್ತಾಮೂರ್ತಾತ್ಮಕವಾದ ಈ ಎಲ್ಲ ಪ್ರಪಂಚದಲ್ಲಿ ಗುಣಪೂರ್ಣನಾದ ಆ ಸರ್ವೋತ್ತಮನಾದ ಪರಮಾತ್ಮನೇ ವ್ಯಾಪಿಸಿದ್ದಾನೆ ಎಂದು ಕಾಣಬೇಕು.

ಇಲ್ಲಿ ಆತ್ಮಶಬ್ದ ಜೀವಾತ್ಮಪರವೆಂದು ಶ್ರೀಧರವ್ಯಾಖ್ಯಾನದಿಂದ ತಿಳಿದುಬರುತ್ತದೆ. 'ಆತ್ಮಾನಂ ಚ ಪರಂ ಬ್ರಹ್ಮ' ಎಂದು ಅಭೇದಾನ್ವಯ ಹೇಗೆ ಕೂಡುತ್ತದೆ, ಬದ್ಧನಾದ ಆತ್ಮನಿಗೂ ಮುಕ್ತನಾದ ಪರಬ್ರಹ್ಮನಿಗೂ ಅಭೇದ ಹೇಗೆ ಎಂದು ಪ್ರಶ್ನೆ ಮಾಡಿಕೊಂಡು ಬಂಧಮೋಕ್ಷಗಳು ವಾಸ್ತವವಲ್ಲ, ಮಾಯಾ ಮಾತ್ರ ಎಂದು ಮುಂದಿನ ಶ್ಲೋಕದಲ್ಲಿ ಹೇಳಿದೆ ಎಂದು ಶ್ರೀಧರ ವ್ಯಾಖ್ಯಾನ ಹೇಳಿದೆ. ಆದರೆ ಇದರ ಹಿಂದಿನ ಶ್ಲೋಕದಲ್ಲಿ 'ನಾರಾಯಣ ಪರಾಯಣಃ' ಎಂದು ಹೇಳಿ, ಒಡನೆ, ಈ ಶ್ಲೋಕದಲ್ಲಿ ಪ್ರಪಂಚದಲ್ಲೆಲ್ಲ ತಾನೇ, ತನ್ನಲ್ಲಿಯೇ ಎಲ್ಲ ಪ್ರಪಂಚ ಎನ್ನಲು ಸಾಧ್ಯವೆ? ಅದ್ವೈತಿಗಳಿಗೆ ಉಪಸಂಹಾರಕ್ಕಿಂತ ಉಪಕ್ರಮ ಪ್ರಬಲ.

ಈ ಶ್ಲೋಕದಲ್ಲಿಯೂ 'ಸದಸತೋಃ ಪರೇ' ಮೂರ್ತಾಮೂರ್ತ ಪ್ರಪಂಚಕ್ಕಿಂತ ಉತ್ತಮ ಎಂದಿದೆ. ಮೂರ್ತಾಮೂರ್ತ ಪ್ರಪಂಚ ಸತ್ಯವಾಗಿ ಇದ್ದರೆ ತಾನೆ ಅದಕ್ಕಿಂತ ಉತ್ತಮ ಎನ್ನಲು ಸಾಧ್ಯ? ಪರಶಬ್ದಕ್ಕೆ ಅನ್ಯ ವಿಲಕ್ಷಣ ಎಂದು ಅರ್ಥಗ್ರಹಿಸುತ್ತೇವೆ ಎಂದರೆ ಆ ಅರ್ಥದಲ್ಲಿ ಪರಶಬ್ದ ಸರ್ವನಾಮವಾಗುತ್ತದೆ. ಆಗ ಪರಸ್ಮಿನ್ ಎಂದಾಗಬೇಕು, ಪರೇ ಎಂದಲ್ಲ. ಹೀಗಾಗಿ ಇಲ್ಲಿ ಆತ್ಮ ಎಂದರೆ ಜೀವಾತ್ಮನಲ್ಲ, ಪರಮಾತ್ಮ ಎಂದರ್ಥ.

[೧]ಈ ಶ್ಲೋಕದಲ್ಲಿ ಬರುವ ಎಲ್ಲ ಆತ್ಮವಿಶೇಷಣಗಳೂ ಜೀವಾತ್ಮನಲ್ಲಿ ಕೂಡುವುದಿಲ್ಲ, ಪರಮಾತ್ಮನಲ್ಲಿಯೇ ಕೂಡುತ್ತವೆ ಎಂದು ಗಿರಿಧರ ವ್ಯಾಖ್ಯಾನದಲ್ಲಿ ಉಕ್ತವಾಗಿದೆ.

ಆತ್ಮನಿ ಪರಮಾತ್ಮನಿ ।

'ಆತ್ಮನಿ' ಎಂದರೆ ಪರಮಾತ್ಮನಲ್ಲಿ ಎಂದರ್ಥ ಹೊರತು ಜೀವಾತ್ಮನಲ್ಲಿ ಎಂದರ್ಥವಲ್ಲ. ಜೀವಾತ್ಮನಲ್ಲಿ ಎಲ್ಲ ಪ್ರಪಂಚವಿರುವುದಿಲ್ಲ.

❖ ❖ ❖

---

೧. ನಾರಾಯಣ ಪರತ್ವಮೇವ ವಿಶದಯತಿ ಪಶ್ಯೇದಿತಿ। ಆತ್ಮನಿ ಪರಮಾತ್ಮನಿ ಶ್ರೀನಾರಾಯಣೇ ಅದೋ ವಿಶ್ವಂ ಪಶ್ಯೇತ್। ಜೀವಾತ್ಮವ್ಯಾವೃತ್ತ್ಯರ್ಥಮಾಹ ಸದಸತಃ ಪರೇ ಇತಿ। ಕಾರ್ಯಕಾರಣಾತ್ಮಕ ಪ್ರಪಂಚಾತೀತೇ। ಅವ್ಯಯ ಇತಿ ಗುಣತಃ ಸ್ವರೂಪತಶ್ಚ ಕ್ಷಯಶೂನ್ಯೇ। ತಥಾ ಸದಸನ್ಮಯೇ ಪ್ರಪಂಚೇ ಚ ಸರ್ವತ್ರ ಆತ್ಮಾನಂ ನಾರಾಯಣಂ ಪಶ್ಯೇತ್। ಅತ್ರಾಪಿ ಜೀವಾತ್ಮ ವ್ಯಾವೃತ್ತ್ಯರ್ಥಮಾಹ ಪರಂಬ್ರಹ್ಮೇತಿ। -ಗಿರಿಧರಃ ।

ಸನ್ಯಾಸಿಯ ಶಾಸ್ತ್ರಾಭ್ಯಾಸಕ್ರಮವನ್ನು ನಾರದರು ಧರ್ಮರಾಜನಿಗೆ ಹೇಳುತ್ತಾರೆ.

ನಾಸಚ್ಛಾಸ್ತ್ರೇಷು ಸಜ್ಜೇತ ನೋಪಜೀವೇತ ಜೀವಿಕಾಮ್ ।
ಅತಿವಾದಾಂಸ್ತ್ಯಜೇತ್‌ತರ್ಕಾನ್ ಪಕ್ಷಂ ಕಂಚಿನ್ನ ಸಂಶ್ರಯೇತ್ ॥ ೭ ॥

ನ ಶಿಷ್ಯಾನನುಬಧ್ನೀತ ಗ್ರಂಥಾನ್ನೈವಾಭ್ಯಸೇದ್ಬಹೂನ್ ।
ನ ವ್ಯಾಖ್ಯಾಮುಪಜೀವೇತ ನಾರಂಭಾನಾರಭೇತ್ ಕ್ವಚಿತ್ ॥ ೮ ॥

ಸನ್ಯಾಸಿಯು ದುಷ್ಟಶಾಸ್ತ್ರಗಳಲ್ಲಿ ಆಸಕ್ತನಾಗಬಾರದು. ಜೀವನ ವೃತ್ತಿಯನ್ನು ಅವಲಂಬಿಸಬಾರದು. ವೇದವಿರೋಧಿಯಾದ ಶುಷ್ಕತರ್ಕಗಳನ್ನು ತ್ಯಜಿಸಬೇಕು. ವೈಷ್ಣವ ಪಕ್ಷವನ್ನು ಹೊರತು ಅಪ್ರಯೋಜಕವಾದ ಬೇರೆ ಯಾವುದೇ ಪಕ್ಷವನ್ನು ಹಿಡಿಯಬಾರದು.

ಜ್ಞಾನಕಾರ್ಯವಿಲ್ಲದೆ ವ್ಯರ್ಥವಾಗಿ ಶಿಷ್ಯರನ್ನು ಕಟ್ಟಿಕೊಳ್ಳಬಾರದು. ಮೋಕ್ಷವಿಚಾರವಿಲ್ಲದ ಅಥವಾ ಅದಕ್ಕೆ ಪ್ರತಿಕೂಲವಾಗಿರುವ ಅರ್ಥಶಾಸ್ತ್ರ ಕಾಮಶಾಸ್ತ್ರ ಮುಂತಾದುವನ್ನು ಬಹುವಾಗಿ ಅಭ್ಯಾಸ ಮಾಡಬಾರದು. ಪ್ರವಚನವನ್ನು ಜೀವನೋಪಾಯವನ್ನಾಗಿ ಮಾಡಿಕೊಳ್ಳಬಾರದು. ನಿಷಿದ್ಧವಾದ ಕೃಷಿ ಮುಂತಾದುವನ್ನು ಎಂದೂ ಮಾಡಬಾರದು.

ಇಲ್ಲಿ 'ಪಕ್ಷಂ ಕಂಚಿನ್ನ ಸಂಶ್ರಯೇತ್' ಎಂದರೆ ಸನ್ಯಾಸಿ ಯಾವ ಪಕ್ಷವನ್ನೂ ಆಗ್ರಹದಿಂದ ಹಿಡಿಯಬಾರದು ಎಂದು ಹೇಳಿದಂತೆ ಕಾಣುತ್ತದೆ. ಹಾಗೇ ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ. ಗಿರಿಧರ ವ್ಯಾಖ್ಯಾನ ಮಾತ್ರ ಭಗವದ್ವಿರೋಧಿಯಾದ ಯಾವ ಪಕ್ಷವನ್ನೂ ಹಿಡಿಯಬಾರದು ಎಂದಿದೆ. ವಸ್ತುತಃ 'ಕಂಚಿತ್' ಎಂದರೆ ಯಾವುದೇ ಪಕ್ಷವನ್ನು ಎಂದು ಅರ್ಥವಲ್ಲ. ಹಾಗೆ ಅರ್ಥವಿಟ್ಟುಕೊಂಡು ಭಗವದ್ವಿರೋಧಿಯಾದ ಎಂದು ವಿಶೇಷಣ ಕೊಡುವುದು ಸರಿಯಲ್ಲ. 'ಕಂಚಿತ್' ಎಂದರೆ ಕೆಟ್ಟದಾದ ಎಂದರ್ಥ. ಕಿಂಶಬ್ದಕ್ಕೆ ಕುತ್ಸಿತ ಎಂಬ ಅರ್ಥವಿದೆ. ಕೆಟ್ಟದಾದ ಪಕ್ಷವೆಂದರೆ ಅದು 'ಅಪ್ರಯೋಜಕ'ವಾಗಿರುತ್ತದೆ. ಅಂದರೆ ಅದರಿಂದ ಏನೂ ಪ್ರಯೋಜನವಿಲ್ಲ, ಪ್ರಯೋಜನವನ್ನು ಹಾಳುಮಾಡುತ್ತದೆ. ಅಥವಾ ಅದಕ್ಕೆ ಪ್ರಯೋಜಕನೊಬ್ಬನಿಲ್ಲದಿರಬಹುದು, ಅಂದರೆ ಸಂಪ್ರದಾಯ ಪ್ರವರ್ತಕನಿಲ್ಲದ ಪಕ್ಷ, ತಾನೇ ಹೊಸದಾಗಿ ಕಲ್ಪಿಸಿಕೊಂಡಿರುವ ಪಕ್ಷವಿರಬಹುದು. ಅದರಿಂದ ಪ್ರಯೋಜನವಿಲ್ಲ. 'ನಾಪ್ರಯೋಜನಪಕ್ಷೀ ಸ್ಯಾತ್' ಎಂಬ ಸಮಾಚಾರ ಗ್ರಂಥ

ವಚನದಲ್ಲಿ 'ಪ್ರಯೋಜನ' ಶಬ್ದವೂ ಪ್ರಯೋಜನ, ಪ್ರಯೋಜಕ ಎಂದು ಎರಡೂ ಅರ್ಥ ಕೊಡಬಲ್ಲುದು. ಮತ್ತು 'ಪಕ್ಷೀ' ಎಂಬ ಇನಿಪ್ರತ್ಯಯವನ್ನು 'ಭೂಮನಿಂದಾ ಪ್ರಶಂಸಾಸು ಭವಂತಿ ಮತುಬಾದಯಃ' ಎಂಬಂತೆ ನಿಂದಾರ್ಥದಲ್ಲಿ ಇಟ್ಟುಕೊಂಡರೆ 'ಕಂಚಿತ್' ಎಂಬ ಭಾಗವತದ ಮಾತನ್ನೇ ಭಂಗ್ಯಂತರದಿಂದ ಹೇಳಿದಂತಾಗುತ್ತದೆ.

'ಗ್ರಂಥಾನ್ ನೈವಾಭ್ಯಸೇದ್ ಬಹೂನ್' ಹೆಚ್ಚು ಗ್ರಂಥಗಳನ್ನು ಅಭ್ಯಾಸ ಮಾಡಬಾರದೆಂದು ಏಕೆ ಹೇಳಿದೆ ಎಂಬ ಪ್ರಶ್ನೆ ಬರುತ್ತದೆ. ನಾರಾಯಣಪರತ್ವ ವಿರೋಧಿತ್ವಾತ್, ಪರಮಾತ್ಮ ಪರತ್ವ ವಿರೋಧಿತ್ವಾತ್ ಎಂದು ಗಿರಿಧರ ಗಂಗಾಸಹಾಯ ವ್ಯಾಖ್ಯಾನಗಳು ಹೇಳುತ್ತವೆ. ಆದರೆ 'ನಾಸಚ್ಛಾಸ್ತ್ರೇಷು ಸಜ್ಜೇತ' ಎಂದು ನಾರಾಯಣವಿರೋಧಿಶಾಸ್ತ್ರದ ಅಧ್ಯಯನವನ್ನು ಮೊದಲೇ ನಿಷೇಧಿಸಿಯಾಗಿದೆ. ಅದರಿಂದ ಪುನರುಕ್ತಿ. ಅದರಿಂದ ಬಹುಶಾಸ್ತ್ರಗಳೆಂದರೆ ಜ್ಯೋತಿಷ್ಯ ಕಾಮಶಾಸ್ತ್ರ ಮುಂತಾದ ಉದಾಸೀನಶಾಸ್ತ್ರಗಳು. ಅವೇ ಬಹುಸಂಖ್ಯೆ ಯಲ್ಲಿರುತ್ತವೆ. ಅವನ್ನು ಅಧ್ಯಯನ ಮಾಡಬಾರದು. ಅದು ಮೋಕ್ಷಕ್ಕೆ ವಿರೋಧಿಯಾಗುತ್ತದೆ.

ಅಪ್ರಯೋಜಕಪಕ್ಷಂ ನ ಸಂಶ್ರಯೇತ್ ।
ನಾಪ್ರಯೋಜನಪಕ್ಷೀ ಸ್ಯಾನ್ನ ವೃಥಾ ಶಿಷ್ಯಬಂಧಕೃತ್।
ನಚೋದಾಸೀನ ಶಾಸ್ತ್ರಾಣಿ ನ ವಿರುದ್ಧಾನಿ ಚಾಭ್ಯಸೇತ್।
ನ ವ್ಯಾಖ್ಯಯೋಪಜೀವೇತ ನ ನಿಷಿದ್ಧಾನ್ ಸಮಾಚರೇತ್ ।
ಏವಂಭೂತೋ ಯತಿರ್ಯಾತಿ ತದೇಕಶರಣೋ ಹರಿಂ ॥

ಇತಿ ಸಮಾಚಾರೇ ॥

ಅಪ್ರಯೋಜಕ ಪಕ್ಷವನ್ನು ಹಿಡಿಯಬಾರದು.

ಸಮಾಚಾರ ಎಂಬ ಗ್ರಂಥದಲ್ಲಿ ಹೀಗೆ ಹೇಳಿದೆ- 'ಅಪ್ರಯೋಜಕವಾದ ಪಕ್ಷವನ್ನು ಹಿಡಿಯಬಾರದು. ಜ್ಞಾನಕಾರ್ಯವಿಲ್ಲದೆ ವ್ಯರ್ಥವಾಗಿ ಅಂದರೆ ಕೇವಲ ತನ್ನ ಸೇವೆ ಮಾಡಿಸಿಕೊಳ್ಳುವುದಕ್ಕಾಗಿ ಶಿಷ್ಯರನ್ನು ಕಟ್ಟಿಕೊಳ್ಳ ಬಾರದು. ಜ್ಯೋತಿಷ್ಯ ಕಾಮಶಾಸ್ತ್ರಗಳಂಥ ಪರಮಾತ್ಮ ವಿಚಾರವಿಲ್ಲದ ಶಾಸ್ತ್ರಗಳನ್ನೂ ಪರಮಾತ್ಮನಿಗೆ ವಿರುದ್ಧವಾದ ಶಾಸ್ತ್ರಗಳನ್ನೂ ಅಭ್ಯಾಸ ಮಾಡಬಾರದು. ಪ್ರವಚನವನ್ನು ಜೀವನ ವೃತ್ತಿಯನ್ನಾಗಿ ಮಾಡಿಕೊಳ್ಳ ಬಾರದು ನಿಷಿದ್ಧವಾದ ಕೃಷಿವಾಣಿಜ್ಯಾದಿಗಳನ್ನು ಕೈಗೊಳ್ಳಬಾರದು, ಇಂಥ ಯತಿ ಹರಿಯೊಬ್ಬನನ್ನೇ ಶರಣು ಹೊಂದಿ ಹರಿಯನ್ನು ಹೊಂದುತ್ತಾನೆ' ಎಂದು.

❖ ❖ ❖

ಅವಧೂತ ಬ್ರಾಹ್ಮಣ ತಾನು ಮಾಡುತ್ತಿದ್ದ ಲಯಚಿಂತನ ಕ್ರಮವನ್ನು ಪ್ರಹ್ಲಾದನಿಗೆ ಹೇಳುತ್ತಾನೆ ಎಂದು ನಾರದರು ಧರ್ಮರಾಜನಿಗೆ ಹೇಳುತ್ತಾರೆ.

ವಿಕಲ್ಪಂ ಜುಹುಯಾಚ್ಚಿತ್ತೌ ತನ್ಮನಸ್ಯರ್ಥವಿಭ್ರಮೇ ।
ಮನೋ ವೈಕಾರಿಕೇ ಹುತ್ವಾ ಮಾಯಾಯಾಂ ವೈ ಜುಹೋತ್ಯಮುಮ್ ॥೪॥

> **ನಾನಾ ಬಗೆಯಾದ ಈ ಸಾತ್ವಿಕ ಚೇತನ ಪ್ರಪಂಚವು ಚಿತ್ತವೆಂಬ ಮನೋವೃತ್ತಿಯ ಅಭಿಮಾನಿಯಾದ ಅಗ್ನಿದೇವನಲ್ಲಿ ಲಯ ಹೊಂದುವು ದೆಂದು, ಅಗ್ನಿದೇವ ವಿಷಯಪದಾರ್ಥಗಳಲ್ಲಿ ಸುತ್ತುವ ಮನಸಿನ ಅಭಿಮಾನಿ ಇಂದ್ರನಲ್ಲಿ ಲಯಹೊಂದುವನೆಂದು, ಮನೋಭಿಮಾನಿಯು ವೈಕಾರಿಕಾಹಂಕಾರಾಭಿಮಾನಿ ರುದ್ರನಲ್ಲಿ ಲಯಹೊಂದುವನೆಂದು ಆ ರುದ್ರನೂ ಜಡಪ್ರಕೃತಿ ಜನ್ಯ ಮಹತತ್ತ್ವಾಭಿಮಾನಿ ಬ್ರಹ್ಮನಲ್ಲಿ ಲಯ ಹೊಂದುವನೆಂದು ಚಿಂತಿಸಬೇಕು.**

ಇಲ್ಲಿ ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ. ಭೇದ ಪ್ರಪಂಚಕ್ಕೆ ಚಿತ್ತವೃತ್ತಿಯಲ್ಲಿ ಅಭೇದ ಚಿಂತನೆ ಮಾಡಬೇಕು. ಚಿತ್ತವೃತ್ತಿಗೆ ಮನಸ್ಸಿನಲ್ಲಿ, ಮನಸ್ಸಿಗೆ ಅಹಂಕಾರದಲ್ಲಿ, ಅಹಂಕಾರಕ್ಕೆ ಮಹತ್ತತ್ತ್ವದಲ್ಲಿ ಲಯಚಿಂತನ ಮಾಡಬೇಕೆನ್ನುತ್ತಾರೆ. ಅಭಿಮಾನಿ ಚೇತನರ ಲಯಚಿಂತನೆಯನ್ನು ಹೇಳುವುದಿಲ್ಲ. ವಸ್ತುತಃ ಚೇತನರ ಲಯಚಿಂತನೆ ಯಿಂದಲೇ ಅವರ ಅನುಗ್ರಹ ಯೋಗಿಗೆ ಲಭಿಸುತ್ತದೆ. ಜಡಗಳ ಲಯಚಿಂತನೆಯೂ ಅವುಗಳ ಅಭಿಮಾನಿಗಳ ಅನುಗ್ರಹದೃಷ್ಟಿಯಿಂದಲೇ ಆವಶ್ಯಕವೆನಿಸಿದೆ.

ಅದರಿಂದ ಚಿತ್ತ ಎಂಬ ಶಬ್ದದಿಂದ ಚಿತ್ತಾಭಿಮಾನಿಯಾದ ಅಗ್ನಿ ವಿವಕ್ಷಿತ. ಅಗ್ನಿ ವಾಗಭಿಮಾನಿ ಎಂದು ಪ್ರಸಿದ್ಧನಾಗಿರುವುದರಿಂದ ಇಲ್ಲಿ ಚಿತ್ತವೆಂದು ಚಿತ್ತಾಧೀನ ವಾದ ವಾಗಿಂದ್ರಿಯವೇ ಉಕ್ತವಾಗಿದೆ. 'ಯನ್ಮನಸಾ ಧ್ಯಾಯತಿ ತದ್ ವಾಚಾ ವದತಿ' ಮನಸಿನಿಂದ ಆಲೋಚಿಸಿದ್ದನ್ನೇ ವಾಗಿಂದ್ರಿಯ ನುಡಿಯುತ್ತದೆ' ಎಂಬ ಶ್ರುತಿ ವಾಗಿಂದ್ರಿಯವನ್ನು ಚಿತ್ತಾಧೀನವೆಂದು ವರ್ಣಿಸಿದೆ. 'ಅಗ್ನೌ ಸರ್ವೇ ದೇವಾ ವಿಲೀಯಂತೇ' ಎಂಬ ಶ್ರುತಿಗನುಗುಣವಾಗಿ ಅಗ್ನಿಯಲ್ಲಿ ದೇವತೆಗಳ ಲಯ ಉಕ್ತವಾಗಿದೆ. ಆ ಅಗ್ನಿಗೆ ಮನೋಭಿಮಾನಿ ಇಂದ್ರನಲ್ಲಿ ಲಯವೆಂದು ಸಮಾಚಾರ ಎಂಬ ಗ್ರಂಥದಲ್ಲಿ ಹೇಳಿರುವುದರಿಂದ ಭಾಗವತದಲ್ಲಿ 'ಅರ್ಥವಿಭ್ರಮ' ಶಬ್ದದಿಂದ ವಿಷಯ ಪದಾರ್ಥಗಳಲ್ಲಿ ಭ್ರಮಣ ಮಾಡುವ ಮನಸ್ಸಿನ ಅಭಿಮಾನಿಯಾದ ಇಂದ್ರನಲ್ಲಿ ಲಯ ಉಕ್ತವಾಗಿದೆ. ಇಂದ್ರನೊಂದಿಗೆ ಕಾಮನನ್ನೂ ಇಟ್ಟುಕೊಳ್ಳಬೇಕು. ಕೆಲವು ದೇವತೆಗಳು ಇಂದ್ರನಲ್ಲಿ ಇನ್ನು ಕೆಲವರು ಕಾಮನಲ್ಲಿ ಲಯಹೊಂದುತ್ತಾರೆ.

ಇಂದ್ರ ಗರುಡನಲ್ಲಿ, ಕಾಮ ಶೇಷನಲ್ಲಿ. ಗರುಡ ಶೇಷರಿಬ್ಬರೂ ಅಹಂಕಾರಾಭಿಮಾನಿಗಳು. ಅವರು ಮಹತ್ತತ್ವಾಭಿಮಾನಿ ಬ್ರಹ್ಮನಲ್ಲಿ ಲಯಹೊಂದುತ್ತಾರೆ.

ಚಿತ್ತೇ ಮನೋವೃತ್ತ್ಯಭಿಮಾನಿನಿ । ಅರ್ಥವಿಭ್ರಮೇ ಅರ್ಥೇಷು ಭ್ರಮಮಾಣೇ ।

ಚಿತ್ತಾಖ್ಯಾಗ್ನೇರಧೀನಂ ಹಿ ಜಗದೇತದ್ ವಿಚಿಂತಯೇತ್
ಮನೋ ನಾಮೇಂದ್ರವಶಗಮಗ್ನಿಂ ಚ ಪ್ರವಿಚಿಂತಯೇತ್ ॥
ಇತ್ಯಾದಿ ಚ ॥

ಚಿತ್ತದಲ್ಲಿ ಎಂದರೆ ಮನೋವೃತ್ತಿಯ ಅಭಿಮಾನಿಯಲ್ಲಿ ಎಂದರ್ಥ. 'ಅರ್ಥವಿಭ್ರಮೇ' ಎಂದರೆ ವಿಷಯ ಪದಾರ್ಥಗಳಲ್ಲಿ ಸುತ್ತುವ ಮನಸ್ಸಿನಲ್ಲಿ ಎಂದರ್ಥ.

ಚಿತ್ತವೆನಿಸಿದ ಅಗ್ನಿಯ ಅಧೀನ ಈ ಜಗತ್ತೆಂದು ಚಿಂತಿಸಬೇಕು. ಅಗ್ನಿಯನ್ನು ಮನೋನಾಮಕ ಇಂದ್ರನ ಅಧೀನನೆಂದು ಚಿಂತಿಸಬೇಕು ಎಂದು ಮುಂತಾಗಿಯೂ ಸಮಾಚಾರ ಗ್ರಂಥದಲ್ಲಿ ಹೇಳಿದೆ.

❖ ❖ ❖

ಅವಧೂತಮುನಿ ತನ್ನ ವೃತ್ತಾಂತವನ್ನು ಪ್ರಹ್ಲಾದನಿಗೆ ಹೇಳಿ ಕೊನೆಯಲ್ಲಿ ತನ್ನ ಚರ್ಯೆ ಮೇಲುನೋಟಕ್ಕೆ ಲೋಕಶಾಸ್ತ್ರಗಳಿಗೆ ವಿರುದ್ಧವಾದಂತೆ ಕಂಡರೂ ವಿಚಾರ ಮಾಡಿದರೆ ಅನುಕೂಲವೆ ಎನ್ನುತ್ತಾನೆ ಎಂದು ನಾರದರು ಧರ್ಮರಾಜನಿಗೆ ಹೇಳುತ್ತಾರೆ.

ಸ್ವಾತ್ಮವೃತ್ತಂ ಮಯೇತ್ಥಂ ತೇ ಸುಗುಪ್ತಮನುವರ್ಣಿತಮ್ ।
ವ್ಯಪೇತಂ ಲೋಕಶಾಸ್ತ್ರಾಭ್ಯಾಂ ಭವಾನ್ ಹಿ ಭಗವತ್ಪರಃ ॥ ೪೬ ॥

ಅತ್ಯಂತ ಗೋಪ್ಯವಾದ ನನ್ನ ಈ ಆತ್ಮಚರಿತ್ರೆಯನ್ನು ನಿನಗೆ ಹೀಗೆ ವರ್ಣಿಸಿದ್ದೇನೆ. ಇದು ಮೇಲುನೋಟಕ್ಕೆ ಮಾತ್ರ ಲೋಕಶಾಸ್ತ್ರ ಮರ್ಯಾದೆಯನ್ನು ಮೀರಿರುವಂತಿದೆ. ನೀನು ಭಗವಂತನಿಗೆ ಪ್ರಿಯನಾದ್ದರಿಂದ ನಿನಗೆ ವರ್ಣಿಸಿದ್ದೇನೆ.

ಇಲ್ಲಿ 'ವ್ಯಪೇತಂ ಲೋಕಶಾಸ್ತ್ರಾಭ್ಯಾಂ' ಎಂದರೆ ಮೇಲುನೋಟಕ್ಕೆ ಲೋಕಮರ್ಯಾದೆ ಶಾಸ್ತ್ರಮರ್ಯಾದೆಗಳನ್ನು ಮೀರಿರುವುದು, ವಿಚಾರ

ಮಾಡಿದರೆ ಹಾಗಿಲ್ಲ ಎಂದು ಅರ್ಥ ವಿವಕ್ಷಿತವಾಗಿದೆ. ಎಲ್ಲ ಬೇರೆ ವ್ಯಾಖ್ಯಾನಕಾರರೂ ಹಾಗೇ ಅಭಿಪ್ರಾಯಪಡುತ್ತಾರೆ. ಆದರೆ ಔಚಿತ್ಯದೃಷ್ಟಿಯಿಂದ ಅವರು ಹಾಗೆ ಹೇಳಿದ್ದಾರೆ ಹೊರತು ಅದಕ್ಕೆ ಪ್ರಮಾಣದ ಆಧಾರವನ್ನು ತೋರಿಸಿಲ್ಲ. ಪ್ರಮಾಣದ ಆಧಾರವಿಲ್ಲದೆ ಹೇಳುವುದಾದರೆ ಬೇರೆ ರೀತಿಯೂ ಹೇಳಬಹುದು. ಅದರಿಂದಲೇ [೧]ಶುಕದೇವ ವ್ಯಾಖ್ಯಾನದಲ್ಲಿ ಬೇರೆ ರೀತಿ ಹೇಳಿದೆ- 'ಲೋಕವೆಂದರೆ ಲೋಕದಲ್ಲಿರುವ ಭೋಗಸಾಮಗ್ರಿ ಸಂಪಾದನಕ್ರಮ. ಶಾಸ್ತ್ರವೆಂದರೆ ಅದಕ್ಕೆ ಅನುಗುಣವಾಗಿ ಕಾಮ್ಯಕರ್ಮಗಳನ್ನು ಪ್ರತಿಪಾದಿಸುವ ಶಾಸ್ತ್ರ ಇವೆರಡನ್ನೂ ದೂರವಿಟ್ಟಿರುವ ಚರ್ಯೆ ನನ್ನದೆಂದು ಅವಧೂತ ಹೇಳುತ್ತಾನೆ' ಎಂದು. ಅದರಿಂದ ಶ್ರೀಮದಾಚಾರ್ಯರು ಸಮಾಚಾರ ಗ್ರಂಥವಚನದ ಆಧಾರ ತೋರಿಸುತ್ತಾರೆ.

ಅಶಾಸ್ತ್ರೀಯತ್ವಾನ್ಮುಖತಃ ಶಾಸ್ತ್ರಾಪೇತಮಿದಂ ವಿದುಃ ।
ಶಾಸ್ತ್ರನಿರ್ಣಯಗಮ್ಯತ್ವಾತ್ ಶಾಸ್ತ್ರೀಯಮಭಿಧೀಯತೇ ॥

ಇತಿ ಚ ॥

ಮೇಲುನೋಟಕ್ಕೆ ಶಾಸ್ತ್ರ ವಿರುದ್ಧವಾದಂತಿರುವುದರಿಂದ ಶಾಸ್ತ್ರಾಪೇತವೆನಿಸಿದುದು, ಶಾಸ್ತ್ರವಿಚಾರದಿಂದ ತಿಳಿದು ಬರುವುದರಿಂದ ಶಾಸ್ತ್ರೀಯವೆಂದೂ ಹೇಳಲ್ಪಡುತ್ತದೆ ಎಂದೂ ಸಮಾಚಾರ ಗ್ರಂಥದಲ್ಲಿ ಉಕ್ತವಾಗಿದೆ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ಸಪ್ತಮಸ್ಕಂಧೇ
ಚತುರ್ದಶೋಽಧ್ಯಾಯಃ

❖ ❖ ❖

೧. ಲೋಕಶಾಸ್ತ್ರಾಭ್ಯಾಂ ಲೋಕೇ ಪ್ರಸಿದ್ಧಂ ಶಿಶ್ನೋದರತೃಟ್ಶಾಸ್ತ್ರಂ ತದನುರೂಪಂ ಕರ್ಮಾದಿಪ್ರತಿಪಾದಕಂ ಭಗವಚ್ಛಾಸ್ತ್ರವಿರುದ್ಧಂ ತಾಭ್ಯಾಂ ವ್ಯಪೇತಂ ದೂರೀಭೂತಂ ।
-ಶುಕದೇವಃ

ಅಧ್ಯಾಯ ೧೫

ಅಧ್ಯಾಯ ಸಾರಾಂಶ

ಪರಮಹಂಸರಿಗೆ ಲಭ್ಯವಾಗುವ ಉತ್ತಮ ಲೋಕವನ್ನು ಅಂದರೆ ಮೋಕ್ಷವನ್ನು ಗೃಹಸ್ಥನು ಹೇಗೆ ಪಡೆಯಬಲ್ಲನೆಂಬುದನ್ನು ಹೇಳುತ್ತೇನೆ ಎನ್ನುತ್ತಾರೆ ನಾರದರು.

ಗೃಹಸ್ಥ ಎಲ್ಲ ಕರ್ಮಾನುಷ್ಠಾನವನ್ನು ನಿಷ್ಕಾಮನೆಯಿಂದ ಮಾಡಿ ವಾಸುದೇವನಿಗೇ ಅರ್ಪಿಸಬೇಕು. ಅಪರೋಕ್ಷ ಜ್ಞಾನಿಗಳ ಸೇವೆ ಮಾಡುತ್ತಿರಬೇಕು. ಹರಿಕಥೆಗಳನ್ನಾಲಿಸಬೇಕು. ಸ್ವಪ್ನದಲ್ಲಿ ಕಂಡ ಭೋಗಭಾಗ್ಯಗಳ ಬಗ್ಗೆ ಎಚ್ಚೆತ್ತವನು ಆಸಕ್ತಿ ಇಟ್ಟುಕೊಳ್ಳುವುದಿಲ್ಲ. ಹಾಗೇ ಸಂಸಾರದಲ್ಲಿ ನಿಧಾನವಾಗಿ ಆಸಕ್ತಿಯನ್ನು ಬಿಡಬೇಕು. ತಾನು ಅವರನ್ನು ಬಿಡದಿದ್ದರೂ ಒಂದಲ್ಲ ಒಂದುದಿನ ಅವರು ತನ್ನನ್ನು ಬಿಟ್ಟುಹೋಗುತ್ತಾರೆ ಎಂದು ಆಲೋಚಿಸಬೇಕು. ಪರಲೋಕ ಸಾಧನೆಗಾಗಿ ಶರೀರ, ಜ್ಞಾನಿಗಳ ಸೇವೆಗಾಗಿ ಮನೆ ಎಂದುಕೊಂಡು ಅಂತರಂಗದಲ್ಲಿ ವಿರಕ್ತನಾಗಿ ಹೊರಗೆ ಆಸಕ್ತನಂತೆ ತೋರಿಕೊಳ್ಳಬೇಕು. ಬಂಧುಗಳಲ್ಲಿ ಮಮತೆ ಇಟ್ಟುಕೊಳ್ಳದೆ ಭಗವತ್ಪ್ರೀತಿಗಾಗಿ ಅವರನ್ನು ಒಲಿಸಿಕೊಳ್ಳಬೇಕು.

ಪ್ರಕೃತಿಯಲ್ಲಿ ದೊರಕುವ ಗಾಳಿ ಬೆಳಕು ಆಹಾರವೆಲ್ಲವೂ ಭಗವಂತ ನಿರ್ಮಿಸಿದ್ದು ಅದೆಲ್ಲವನ್ನೂ ಎಲ್ಲರೂ ಅನುಭವಿಸಲಿ ಎನ್ನಬೇಕು. ಎಲ್ಲವೂ ತನಗಾಗಿ ಎಂದುಕೊಳ್ಳಬಾರದು. ಎಲ್ಲ ಪ್ರಾಣಿಗಳಲ್ಲಿ ಭಗವಂತನನ್ನು ಕಂಡು ಸಂತೋಷಪಡಿಸಬೇಕು. ವರ್ಣಾಶ್ರಮೋಚಿತ ವೃತ್ತಿಯಿಂದ ಲಭಿಸುವ ಸಂಪತ್ತಿನಿಂದ ದೇವ ಋಷಿ ಪಿತೃ ಮನುಷ್ಯರಿಗೆ ಅವರೊಳಗಿರುವ ಪರಮಾತ್ಮನಿಗೆ ಯಜ್ಞ ತರ್ಪಣ ಅನ್ನದಾನಾದಿಗಳಿಂದ ಪೂಜೆ ಸಲ್ಲಿಸಬೇಕು. ಸಾಮರ್ಥ್ಯವಿರುವಾಗ ಯಾಗಾದಿ ಕರ್ಮ ಮಾಡಬೇಕು.

ಮಹಾಲಯ ಸಂಕ್ರಾಂತಿ ಮುಂತಾದ ದಿನಗಳಲ್ಲಿ ಸ್ನಾನ ಜಪ ಹೋಮ ವ್ರತ ದೇವಪೂಜೆ, ಬ್ರಾಹ್ಮಣಾರಾಧನೆ, ಪಿತೃದೇವ ಮನುಷ್ಯಭೂತಗಳಿಗೆ ತೃಪ್ತಿ ಉಂಟುಮಾಡುವುದು ಇವೆಲ್ಲವೂ

ಅಕ್ಷಯ ಫಲ ನೀಡಬಲ್ಲುವು. ಪತ್ನಿಗೆ ಮಾಡುವ ಸೀಮಂತಾದಿಗಳು ಮಗುವಿಗೆ ಮಾಡುವ ನಾಮಕರಣಾದಿಗಳು ತನಗೆ ಮಾಡಿಕೊಳ್ಳುವ ಅಗ್ನ್ಯಾಧಾನ ಮುಂತಾದವುಗಳು ಪ್ರೇತಕರ್ಮ ಸಾಂವತ್ಸರಿಕ ಶ್ರಾದ್ಧ ವೃದ್ಧಿಶ್ರಾದ್ಧ ಮುಂತಾದವು ಇವುಗಳಲ್ಲಿ ಪಿತೃದೇವ ಮನುಷ್ಯಭೂತಗಳಿಗೆ ಆರಾಧನೆ ಮಾಡಬೇಕು.

ದಾನ ಫಲಿಸುವುದಕ್ಕೆ ದೇಶಕ್ಕಿಂತ ಪಾತ್ರ ಮುಖ್ಯ. ಸತ್ಪಾತ್ರರು ಭಗವದ್ಭಕ್ತರು, ತಪಸ್ಸು ವಿದ್ಯೆ ದಯಾಗುಣಗಳುಳ್ಳ ಬ್ರಾಹ್ಮಣರು. ಅವರಿರುವ ಪ್ರದೇಶವೇ ಭಗವಂತನ ಕ್ಷೇತ್ರ. ಅಲ್ಲಿಯೇ ಸಕಲ ಪುಣ್ಯಕ್ಷೇತ್ರಗಳಿವೆ. ಭಗವಂತನ ವಿಗ್ರಹಗಳಿರುವಲ್ಲಿ, ಗಂಗಾದಿ ನದಿಗಳು ಹರಿಯುವಲ್ಲಿ, ಯೋಗಿಗಳು ವಾಸಮಾಡುವ ಕುರುಕ್ಷೇತ್ರ ಗಯಾ ಪ್ರಯಾಗಾದಿಗಳಲ್ಲಿ ಆಚರಿಸುವ ಪುಣ್ಯಕರ್ಮ ಸಾವಿರಪಟ್ಟು ಹೆಚ್ಚು ಫಲ ನೀಡುತ್ತದೆ.

ಜೀವರಲ್ಲಿ ತಾರತಮ್ಯವಿರುವುದರಿಂದ ಅವರಲ್ಲಿ ಭಗವಂತನ ಸನ್ನಿಧಾನವೂ ತಾರತಮ್ಯದಿಂದಲೆ ಇರುತ್ತದೆ. ಅದಕ್ಕೆ ಅನುಸಾರ ವಾಗಿ ಪಾತ್ರತ್ವವಿರುತ್ತದೆ. ಭಗವಂತನ ಚಲಪ್ರತಿಮೆಗಳಾಗಿರುವ ಈ ಸತ್ಪಾತ್ರರನ್ನು ದ್ವೇಷಿಸುವವರಿಗೆ ಅಚಲ ಪ್ರತಿಮೆಗಳ ಉಪಾಸನೆ ಫಲಿಸುವುದಿಲ್ಲ. ಜಡವಾದ ಕಲ್ಲಿನಲ್ಲಿ ಪ್ರಾಣ ಪ್ರತಿಷ್ಠೆಯಿಂದ ಭಗವಂತನ ಸನ್ನಿಧಾನ ಹೆಚ್ಚುವಂತೆ ಬ್ರಾಹ್ಮಣನೂ ತಪಸ್ಸಿನಿಂದ ವಿದ್ಯೆಯಿಂದ ಭಗವಂತನ ಹೆಚ್ಚಿನ ಸನ್ನಿಧಾನಯುಕ್ತನಾಗಿ ಪಾದಧೂಳಿಯಿಂದ ಲೋಕವನ್ನು ಪವಿತ್ರೀಕರಿಸುತ್ತಾನೆ. ಲೋಕಕ್ಕೆ ದೊಡ್ಡದೇವತೆ ಎನಿಸುತ್ತಾನೆ.

❖ ❖ ❖

ಗೃಹಸ್ಥನೂ ಕೂಡ ಸನ್ಯಾಸಿಗಳಿಗೆ ಲಭ್ಯವಾಗುವ ಲೋಕವನ್ನು ಹೇಗೆ ಪಡೆಯಬಲ್ಲ ಎಂಬುದನ್ನು ನಾರದರು ಧರ್ಮರಾಜನಿಗೆ ಹೇಳುತ್ತಾರೆ.

ಕೃಮಿವಿಡ್ಭಸ್ಮನಿಷ್ಠಾಂತಂ ಕ್ವೇದಂ ತುಚ್ಛಂ ಕಲೇವರಮ್ ।
ಕ್ವ ತದೀಯರತಿರ್ಭಾರ್ಯಾ ಕ್ವಾಯಮಾತ್ಮಾ ನಭಶ್ಛದಿಃ ॥ ೧೪ ॥

ಈ ಶರೀರವೆಂಬುದು ಕಟ್ಟಕಡೆಗೆ ಕೃಮಿಯೋ ಮಲವೋ ಅಥವಾ ಬೂದಿಯೋ ಆಗುವುದು. ಅಂಥ ತುಚ್ಛವಾದ ಶರೀರವೆಲ್ಲಿ, ಅದಕ್ಕೆ

ರತಿಸುಖ ನೀಡುವ ಮಡದಿ ಎಲ್ಲಿ, ಆಕಾಶವನ್ನೆಲ್ಲ ವ್ಯಾಪಿಸಿರುವ ಪರಮಸುಖದಾಯಕನಾದ ಆ ಪರಮಾತ್ಮನೆಲ್ಲಿ?

ಇಲ್ಲಿ 'ಕ್ವಾಯಮಾತ್ಮಾ' ಎಂದರೆ 'ಈ ಜೀವಾತ್ಮನೆಲ್ಲಿ' ಎಂದು ಬೇರೆ ವ್ಯಾಖ್ಯಾನಕಾರರು ವ್ಯಾಖ್ಯಾನಿಸುತ್ತಾರೆ. ಅದರೆ 'ನಭಶ್ಛದಿಃ' ಆಕಾಶವನ್ನು ಆವರಿಸುವವನು ಅಣುವಾದ ಜೀವಾತ್ಮನಲ್ಲ. 'ಆಕಾಶಶರೀರಂ ಬ್ರಹ್ಮ' ಆಕಾಶ ಶರೀರಿಯಾದ ಪರಬ್ರಹ್ಮನೇ ಎನ್ನುವುದು ಸ್ಪಷ್ಟವಿದೆ. ಆದರೂ,

ಸ್ವಮಹಿಮ್ನಾ ನಭೋಽಪಿ ಛಾದಯತಿ ।
ಸ್ವಾನಂದೇನ ನಭೋಽಪಿ ಛಾದಯತಿ ।
ಸ್ವವೈಭವೇನ ನಭೋಽಪಿ ಛಾದಯತಿ ।

'ತನ್ನ ಮಹಿಮೆಯಿಂದ, ತನ್ನ ಆನಂದದಿಂದ ತನ್ನ ವೈಭವದಿಂದ ಆಕಾಶವನ್ನು ಮೀರಿಸುತ್ತಾನೆ' ಎಂದು ಶ್ರೀಧರ, ಗಂಗಾಸಹಾಯ, ಶುಕದೇವ ವ್ಯಾಖ್ಯಾನಗಳಲ್ಲಿ ಜೀವಾತ್ಮನಲ್ಲಿ ನಭಶ್ಛದಿತ್ವವನ್ನು ಕೂಡಿಸಲು ಯತ್ನಿಸಿದ್ದಾರೆ. ಅದು ಸಮರ್ಪಕವಾಗಿಲ್ಲ ಎಂದುಕೊಂಡು ವೀರರಾಘವ ವ್ಯಾಖ್ಯಾನದಲ್ಲಿ 'ನಭಶ್ಛದಿ' ಆಕಾಶವನ್ನೂ ಆವರಿಸುವವನೆಂದರೆ 'ನಿರ್ಲೇಪ' ಎಂದರ್ಥ ಎಂದಿದ್ದಾರೆ.

ಈ ಯಾವ ವ್ಯಾಖ್ಯಾನಗಳೂ ಸರಿಯಲ್ಲ ಎಂದು ವಿಶ್ವನಾಥ ಗಿರಿಧರ ವ್ಯಾಖ್ಯಾನಗಳು ಆತ್ಮ ಎಂದರ ಪರಮೇಶ್ವರ, ಪರಮಾತ್ಮ ಎಂದೇ ಅರ್ಥೈಸಿದ್ದಾರೆ.

ಈ ಎಲ್ಲ ಗೊಂದಲಕ್ಕೆ ಕಾರಣ 'ಅಯಮಾತ್ಮಾ' ಎಂದು ಅಯಂ ಶಬ್ದ. 'ಈ ಆತ್ಮ' ಎಂದರೆ ಜೀವಾತ್ಮ ಎಂದು ಭ್ರಮೆಗೆ ಅವಕಾಶವಿದೆ. ಆದರೆ 'ಅಯಮ ಆತ್ಮಾ' ಎಂದು ಪದವಿಭಾಗ ಮಾಡಿದರೆ 'ಅಯಮ' ಅಸದೃಶ ಅದ್ವಿತೀಯ ಆತ್ಮನೆಂದರೆ ಪರಮಾತ್ಮನೆ. ಈ ಪದವಿಭಾಗಕ್ಕೆ ಸೂಚಕವಾಗಿ 'ನಭಶ್ಛದಿಃ' ಎಂಬ ಶಬ್ದವಿದೆ. 'ಗಗನಂ ಗಗನಾಕಾರಂ' ಎಂಬಂತೆ ಆಕಾಶಕ್ಕೆ ಉಪಮಾನವಿಲ್ಲ ಅಸದೃಶ ಎಂದು ಪ್ರಸಿದ್ಧಿ ಇದೆ. ಆಕಾಶದಲ್ಲೆಲ್ಲ ವ್ಯಾಪಿಸಿರುವ ಪರಮಾತ್ಮನೂ ಹಾಗೇ ಆಸದೃಶ.

ನಭಶ್ಛದಿಃ ನಭೋ ವ್ಯಾಪ್ಯ ಸ್ಥಿತಃ ಪರಮಾತ್ಮಾ ॥

'ನಭಶ್ಛದಿಃ' ಎಂದರೆ ಆಕಾಶವನ್ನು ವ್ಯಾಪಿಸಿರುವ ಪರಮಾತ್ಮನೆ ಹೊರತು ಜೀವಾತ್ಮನಲ್ಲ.

❖ ❖ ❖

ಶ್ರಾದ್ಧಕ್ಕೆ ವಿಹಿತವಾದ ತಿಥಿಗಳನ್ನು ನಾರದರು ಧರ್ಮರಾಜನಿಗೆ ಹೇಳುತ್ತಾರೆ.

ತೃತೀಯಾಯಾಂ ಶುಕ್ಲಪಕ್ಷೇ ನವಮ್ಯಾಮಥ ಕಾರ್ತಿಕೇ ।
ಚತಸೃಷ್ವಪ್ಯಷ್ಟಕಾಸು ಹೇಮಂತೇ ಶಿಶಿರೇ ತಥಾ ॥ ೨೨ ॥

ವೈಶಾಖಶುದ್ಧ ತೃತೀಯೆ, ಕಾರ್ತಿಕ ಶುದ್ಧ ನವಮಿ, ಮಾರ್ಗಶಿರ ಪುಷ್ಯ ಮಾಘ ಫಾಲ್ಗುನ ಮಾಸಗಳ ಕೃಷ್ಣಪಕ್ಷಗಳಲ್ಲಿ ಬರುವ ಸಪ್ತಮೀ ಅಷ್ಟಮೀ ನವಮೀ ತ್ರಯೋದಶೀ ತಿಥಿಗಳು ಮತ್ತು ಆ ನಾಲ್ಕು ತಿಂಗಳುಗಳ ಎಲ್ಲ ತಿಥಿಗಳು ಇವುಗಳಲ್ಲಿ ಶ್ರಾದ್ಧ ಮಾಡಬೇಕು.

ವೈಶಾಖ ಶುದ್ಧ ತೃತೀಯೆ ಅಕ್ಷಯತೃತೀಯೆ ತ್ರೇತಾಯುಗಾದಿ. ಕಾರ್ತಿಕಶುದ್ಧ ನವಮಿ ಅಕ್ಷಯನವಮಿ ಕೃತಯುಗಾದಿ. ಮಾರ್ಗಶಿರ ಮುಂತಾದ ನಾಲ್ಕು ತಿಂಗಳುಗಳ ಕೃಷ್ಣಪಕ್ಷದ ಸಪ್ತಮಿ ಅಷ್ಟಮಿ ನವಮಿ ಮತ್ತು ತ್ರಯೋದಶಿಗಳು ಅಷ್ಟಕಾ ತಿಥಿಗಳು. ಇವೆಲ್ಲವೂ ನೈಮಿತ್ತಿಕ ಶ್ರಾದ್ಧ ದಿನಗಳು. ಮಾರ್ಗಶಿರ ಮುಂತಾದ ನಾಲ್ಕು ತಿಂಗಳುಗಳ ಎಲ್ಲ ತಿಥಿಗಳೂ ನಿತ್ಯಶ್ರಾದ್ಧದಿನಗಳು. ಬೇರೆ ತಿಥಿಗಳಿಗಿಂತ ಈ ತಿಥಿಗಳಲ್ಲಿ ಮಾಡುವ ನಿತ್ಯಶ್ರಾದ್ಧಕ್ಕೆ ಹೆಚ್ಚಿನ ಫಲವೂ ಲಭ್ಯವಿದೆ. ವ್ಯಾಸಸ್ಮೃತಿಯಲ್ಲಿ ಹಾಗೆ ಹೇಳಿದೆ.

ಬೇರೆ ವ್ಯಾಖ್ಯಾನಕಾರರು ಎಲ್ಲರೂ ಅಷ್ಟಕಾ ಎಂದರೆ ಮಾರ್ಗಶಿರ ಮುಂತಾದ ನಾಲ್ಕು ಮಾಸಗಳ ಕೃಷ್ಣಪಕ್ಷದ ಅಷ್ಟಮೀತಿಥಿ ಮಾತ್ರ ಎಂದು ಗ್ರಹಿಸಿದ್ದಾರೆ.

ಹೇಮಂತ ಶಿಶಿರಯೋಶ್ಚತುರ್ಣಾಂ
ಅಪರಪಕ್ಷಾಣಾಮಷ್ಟಮ್ಯಷ್ಟಕಾ॥

ಎಂಬ ಆಶ್ವಲಾಯನ ಸೂತ್ರ ಹಾಗೇ ಹೇಳಿದೆ. ಆದರೆ ಭಾಗವತಕ್ಕೆ ಇದನ್ನು ಹೇಳುವ ಅಭಿಪ್ರಾಯವಿಲ್ಲ.

ಹೇಮಂತ ಶಿಶಿರ ಋತುಗಳಲ್ಲಿ ಅಂದರೆ ಮಾರ್ಗಶೀರ್ಷ ಮುಂತಾದ ನಾಲ್ಕು ತಿಂಗಳುಗಳಲ್ಲಿ ಪ್ರತಿ ತಿಂಗಳಿಗೆ ಒಂದರಂತೆ ಬರುವ ಒಟ್ಟು ನಾಲ್ಕು ಅಷ್ಟಕಾತಿಥಿಗಳಲ್ಲಿ ಶ್ರಾದ್ಧಮಾಡಬೇಕು ಎಂದು ಶ್ರೀಧರ ಮುಂತಾದ ಎಲ್ಲ ವ್ಯಾಖ್ಯಾನಗಳೂ ಹೇಳುತ್ತವೆ. ಆದರೆ

'ಚತಸೃಷ್ವಪ್ಯಷ್ಟಕಾಸು ಹೇಮಂತೇ ಶಿಶಿರೇ ತಥಾ'

ಎಂಬಲ್ಲಿ ಅಷ್ಟಕಾಸು ಎಂದಿಷ್ಟೇ ಹೇಳಿದ್ದರೂ ಸಾಕಾಗಿತ್ತು. ಉಳಿತ 'ಚತಸೃಷ್ವಪಿ' 'ಹೇಮಂತ ಶಿಶಿರಯೋಃ' ಶಬ್ದಗಳು ವ್ಯರ್ಥ. ಅಷ್ಟಕಾತಿಥಿಗಳೆಂದರೇ ಹೇಮಂತ

ಶಿಶಿರಋತುಗಳ ಕೃಷ್ಣಪಕ್ಷಾಷ್ಟಮೀತಿಥಿಗಳೆಂಬುದು ಪ್ರಸಿದ್ಧ. ಪುನಃ ಹೇಮಂತಶಿಶಿರಗಳಲ್ಲಿ ಎನ್ನಬೇಕಾಗಿರಲಿಲ್ಲ. ಸ್ಪಷ್ಟತೆಗಾಗಿ ಅದನ್ನು ಹೇಳುವುದಾದಲ್ಲಿ 'ಕೃಷ್ಣಪಕ್ಷಗಳಲ್ಲಿ' ಎಂದೂ ಸೇರಿಸಬೇಕಾಗಿತ್ತು. ಆಗ ಹೇಮಂತ ಶಿಶಿರಗಳ ಶುಕ್ಲಪಕ್ಷದ ಅಷ್ಟಮಿಗಳಲ್ಲ, ಕೃಷ್ಣಪಕ್ಷದ ಅಷ್ಟಮಿಗಳೆಂದು ಸ್ಪಷ್ಟಪಡಿಸಿದಂತಾಗುತ್ತಿತ್ತು. ತೃತೀಯಾಯಾಂ ಶುಕ್ಲಪಕ್ಷೇ ನವಮ್ಯಾಂ ಶುಕ್ಲಪಕ್ಷೇ ಎಂದು ಈ ಶ್ಲೋಕದಲ್ಲಿ ಮತ್ತು ಮಾಘೇ ಚ ಸಿತ ಸಪ್ತಮ್ಯಾಂ ಎಂದು ಮುಂದೆ ಆ ರೀತಿ ವಿಶೇಷಣಗಳನ್ನು ಭಾಗವತ ನೀಡುತ್ತಿದೆ.

ಚತುಸ್ಸೃಷು ಎಂಬ ವಿಶೇಷಣವೂ ವ್ಯರ್ಥ. ಅಷ್ಟಕಾತಿಥಿಗಳು ಮಾರ್ಗಶೀರ್ಷಾದಿ ನಾಲ್ಕು ತಿಂಗಳುಗಳಲ್ಲಿ ಒಟ್ಟು ನಾಲ್ಕೇ ಬರುತ್ತವೆ ತಾನೆ? ತಿರುಗಿ ನಾಲ್ಕು ಎನ್ನಬೇಕಾಗಿರಲಿಲ್ಲ.

ಅಮಾವಾಸ್ಯಾऽಷ್ಟಕಾಸ್ತಿಸ್ರಃ ಪೌಷಮಾಸಾದಿಷು ತ್ರಿಷು ।

'ಪುಷ್ಯ ಮಾಘ ಫಾಲ್ಗುನ' ಈ ಮೂರು ತಿಂಗಳುಗಳ ಕೃಷ್ಣಪಕ್ಷದ ಮೂರು ಅಷ್ಟಮಿ ತಿಥಿಗಳು ತಿಸ್ರಾಷ್ಟಕವೆಂದೂ ಪ್ರಸಿದ್ಧಿ ಇರುವುದರಿಂದ 'ಅಷ್ಟಕಾ ತಿಥಿಗಳಲ್ಲಿ ಶ್ರಾದ್ಧ ಮಾಡಬೇಕು' ಎಂದಿಷ್ಟೇ ಹೇಳಿದರೆ ತಿಸ್ರಾಷ್ಟಕ ತಿಥಿಗಳಲ್ಲಿ ಶ್ರಾದ್ಧ ಮಾಡಬೇಕೆಂದು ಹೇಳಿದಂತಾಗಿ ಮಾರ್ಗಶೀರ್ಷ ಕೃಷ್ಣಾಷ್ಟಮಿ ಶ್ರಾದ್ಧತ್ಯಾಗ ಮಾಡುವ ಪ್ರಸಂಗವಿದೆ, ಇದು ಅನುಚಿತ. ಅದರಿಂದ 'ನಾಲ್ಕು ಅಷ್ಟಕಾತಿಥಿಗಳಲ್ಲಿ ಶ್ರಾದ್ಧ'ವೆಂದು ಸ್ಪಷ್ಟ ಹೇಳಬೇಕು. ಅದಕ್ಕೆ 'ಚತುಸ್ಸೃಷ್ವಪಿ' ಶಬ್ದ ಸಾರ್ಥಕ ಎಂದು ಇಲ್ಲಿ ಸಮಾಧಾನ ಹೇಳಬಹುದು. ಆದರೆ,

ಅಷ್ಟಕಾ ತು ಸಮಾಖ್ಯಾತಾ ಸಪ್ತಮ್ಯಾದಿದಿನತ್ರಯಂ ।

ಎಂಬ ವಚನದಂತೆ ಸಪ್ತಮೀ ಅಷ್ಟಮೀ ನವಮೀ ಇವು ಮೂರೂ ಅಷ್ಟಕಾತಿಥಿಗಳು. ಇವು ನಾಲ್ಕೂ ತಿಂಗಳುಗಳಲ್ಲಿ ಬರುತ್ತವೆ. ಭಾಗವತದಲ್ಲಿ 'ನಾಲ್ಕು ಅಷ್ಟಕಾ ತಿಥಿಗಳಲ್ಲಿ' ಎಂದು ಹೇಳಿದ್ದರಿಂದ ಪ್ರತಿ ತಿಂಗಳ ಒಂದೊಂದು ಅಷ್ಟಮೀ ತಿಥಿಯನ್ನೇ ತೆಗೆದುಕೊಂಡು ಒಟ್ಟು ನಾಲ್ಕು ಅಷ್ಟಕಾ ತಿಥಿಗಳಲ್ಲಿ ಶ್ರಾದ್ಧವೆಂದು ಹೇಳಿದರೆ ಉಳಿದ ಸಪ್ತಮೀ ನವಮೀ ಶ್ರಾದ್ಧಗಳನ್ನು ಬಿಟ್ಟಂತಾಗುತ್ತದೆ. ಇದೂ ಅನುಚಿತವೆ. ಹೀಗಾಗಿ 'ಚತಸೃಷ್ವಪಿ' ಶಬ್ದ ಅನಿಷ್ಟವಾಗುತ್ತದೆ.

ನಮ್ಮ ವ್ಯಾಖ್ಯಾನದಲ್ಲಿ ಚತಸೃಷ್ವಪಿ ಶಬ್ದವೂ, ಹೇಮಂತ ಶಿಶಿರಯೋಃ ಎಂಬ ಶಬ್ದವೂ ಸಾರ್ಥಕವಾಗುತ್ತವೆ. ಪುಷ್ಯಾದಿ ಮೂರು ತಿಂಗಳುಗಳ ಕೃಷ್ಣಾಷ್ಟಮಿಗಳು ಮಾತ್ರವಲ್ಲದೆ ಮಾರ್ಗಶೀರ್ಷ ಕೃಷ್ಣಾಷ್ಟಮಿಯೂ ಗ್ರಾಹ್ಯವೆಂದು ಸೂಚಿಸುವುದಕ್ಕೆ ಹೇಮಂತ ಶಿಶಿರ ಶಬ್ದಗಳು ಬೇಕು. ಹೇಮಂತವೆಂದರೆ ಮಾರ್ಗಶೀರ್ಷ

ಪುಷ್ಯಮಾಸಗಳು. ಈ ಸಮಾಧಾನ ಬೇರೆ ವ್ಯಾಖ್ಯಾನಕಾರರಿಗೆ ಹೇಳಲು ಬರುವುದಿಲ್ಲ. ಏಕೆಂದರೆ 'ಚತುಸ್ವಷ್ಟಪಿ' ನಾಲ್ಕು ಅಷ್ಟಮೀ ತಿಥಿಗಳೆಂದರೆ ಮಾರ್ಗಶೀರ್ಷಮಾಸವೂ ಸೇರಿದಂತೆ ನಾಲ್ಕು ತಿಂಗಳುಗಳ ಅಷ್ಟಮೀ ತಿಥಿಗಳೆಂದೇ ಇಟ್ಟುಕೊಳ್ಳಬೇಕಾಗುತ್ತದೆ. ನಮ್ಮ ವ್ಯಾಖ್ಯಾನದಲ್ಲಿ ನಾಲ್ಕು ಅಷ್ಟಕಾತಿಥಿಗಳೆಂದರೆ ಒಟ್ಟು ನಾಲ್ಕು ಅಷ್ಟಕಾತಿಥಿಗಳಲ್ಲ. ಪ್ರತಿಯೊಂದು ತಿಂಗಳಲ್ಲಿ ನಾಲ್ಕು ನಾಲ್ಕು ಅಷ್ಟಕಾತಿಥಿಗಳೆಂದರ್ಥ. ಅದರಿಂದ ಅಷ್ಟಮಿಯೊಂದೇ ಅಷ್ಟಕಾತಿಥಿ ಎನ್ನುವ ಪಕ್ಷವನ್ನೂ ಸಪ್ತಮ್ಯಷ್ಟಮಿ ನವಮಿ ಮೂರು ಅಷ್ಟಕಾತಿಥಿಗಳೆನ್ನುವ ಪಕ್ಷವನ್ನೂ ಬಿಟ್ಟು ಸಪ್ತಮ್ಯಷ್ಟಮಿ ನವಮಿ ತ್ರಯೋದಶಿ ಈ ನಾಲ್ಕು ಅಷ್ಟಕಾತಿಥಿಗಳೆನ್ನುವ ಪಕ್ಷವನ್ನು ಭಾಗವತ ಸ್ವೀಕರಿಸಿದೆ ಎಂದು ತಿಳಿದು ಬರುತ್ತದೆ. ಈ ಪಕ್ಷ ಹೆಚ್ಚು ಪ್ರಸಿದ್ಧವಾಗಿಲ್ಲ. ವ್ಯಾಸಸ್ಮೃತಿಯಲ್ಲಿ ಇದೆ. ಇದನ್ನು ತಿಳಿಸುವುದಕ್ಕಾಗಿ ಹೇಮಂತಶಿಶಿರಯೋಃ ಚತುಸ್ವಷ್ಟಪಿ ಶಬ್ದಗಳಿವೆ. ಕೃಷ್ಣಪಕ್ಷದ ತಿಥಿಗಳೆನ್ನುವುದು ಪ್ರಸಿದ್ಧವಾದ್ದರಿಂದ ಅದನ್ನು ಹೇಳಿಲ್ಲ.

ನಮ್ಮ ವ್ಯಾಖ್ಯಾನದಲ್ಲಿ 'ಹೇಮಂತ ಶಿಶಿರಯೋಃ' ಎಂಬ ಶಬ್ದಕ್ಕೆ ಬೇರೆಯೂ ಪ್ರಯೋಜನವಿದೆ. ಏಕಾದಶಿ ಮುಂತಾದ ಉಪವಾಸ ತಿಥಿಗಳನ್ನು ಹೊರತುಪಡಿಸಿ ಎಲ್ಲ ತಿಂಗಳುಗಳ ಎಲ್ಲ ತಿಥಿಗಳೂ ನಿತ್ಯ ಶ್ರಾದ್ಧ ತಿಥಿಗಳೇ. ಆದರೂ ಹೇಮಂತ ಶಿಶಿರಗಳ ಎಲ್ಲ ತಿಥಿಗಳು ನಿತ್ಯಶ್ರಾದ್ಧಕ್ಕೆ ವಿಶೇಷ ಫಲಪ್ರದವಾಗಿವೆ ಎಂದು ವ್ಯಾಸಸ್ಮೃತಿ ಹೇಳುತ್ತದೆ.

ಹೀಗಾಗಿ 'ಅಷ್ಟಕಾಸು' ಎಂಬುದರಿಂದಲೇ ಹೇಮಂತ ಶಿಶಿರಗಳಲ್ಲಿ ಎಂಬುದು ಲಭ್ಯವಾಗುತ್ತಿದ್ದರೂ ನಿತ್ಯ ಶ್ರಾದ್ಧದ ಬಗ್ಗೆ ಹೇಳುವುದಕ್ಕಾಗಿ ಅದನ್ನು ಪುನಃ ಹೇಳಿದೆ. ಇದನ್ನು ಬೇರೆ ವ್ಯಾಖ್ಯಾನಕಾರರು ಗಮನಿಸುವುದಿಲ್ಲ.

ವ್ಯಾಸಸ್ಮೃತಿ ವಚನವನ್ನು ಗಿರಿಧರ ವ್ಯಾಖ್ಯಾನ ಮಾತ್ರ ಹೀಗೆ ಉದ್ಧರಿಸಿದೆ-

ಸಪ್ತಮ್ಯಾದಿ ತ್ರಯಂ ಚೈವ ತಥಾ ಚೈವ ತ್ರಯೋದಶೀ ।
ಚತಸ್ರಸ್ತ್ವಷ್ಟಕಾಃ ಪ್ರೋಕ್ತಾಃ ಸರ್ವಯಜ್ಞಾದ್ ವಿಶೇಷತಃ ॥

ಇಲ್ಲಿ 'ಸರ್ವಪಕ್ಷಾತ್' ಎಂಬುದರ ಬದಲಿಗೆ 'ಸರ್ವಯಜ್ಞಾತ್' ಎಂದು ಪಾಠವಿದೆ. ಎಲ್ಲ ಪಿತೃಯಜ್ಞಗಳಿಗಿಂತ ವಿಶೇಷ ಫಲವಿದೆ ಎಂದು ಅಭಿಪ್ರಾಯ ಹೇಳಬೇಕು. ಸರ್ವಪಕ್ಷಾತ್ ಎಂಬ ನಮ್ಮ ಪಾಠದಲ್ಲಿ ಬೇರೆ ಎಲ್ಲ ಕೃಷ್ಣ ಪಕ್ಷಗಳಲ್ಲಿ ಬರುವ ಈ ನಾಲ್ಕು ತಿಥಿಗಳಿಗಿಂತ ಈ ತಿಂಗಳುಗಳ ಕೃಷ್ಣಪಕ್ಷಗಳಲ್ಲಿ ಬರುವ ನಾಲ್ಕು ತಿಥಿಗಳೇ ವಿಶೇಷ ಫಲಪ್ರದ ಎಂದರ್ಥ.

'ಅಷ್ಟಕಾಸು ಚತುರ್ದಶ್ಯಾಂ ಪ್ರತಿಪತ್‌ಪರ್ವಣೋರಪಿ ।
ನಾಧೀಯೀತ ದ್ವಿಜಃ ಕಶ್ಚಿತ್'

ಎಂಬ ನಾರದ ಸ್ಮೃತಿಯಲ್ಲಿ ಅಷ್ಟಕಾತಿಥಿಗಳನ್ನು ಅನಧ್ಯಯನ ತಿಥಿಗಳೆಂದು ಪರಿಗಣಿಸಲಾಗಿದೆ. ತ್ರಯೋದಶಿಯೂ ಅಷ್ಟಕಾತಿಥಿ ಎನ್ನುವುದಾದರೆ ಅದೂ ಅನಧ್ಯಯನ ತಿಥಿ ಎನಿಸಬೇಕಾದೀತು ಎಂಬ ಸಮಸ್ಯೆಗೆ-

ಅಪರೇಷು ಚ ಪಕ್ಷೇಷು ಹ್ಯಷ್ಟಕಾಸು ತಿಸೃಷ್ವಪಿ
ಹೇಮಂತ ಶಿಶಿರಯೋಶ್ಚೈವ ನಾಧ್ಯೇಯಾ ವೇದಸಂಹಿತಾ ।

ಎಂಬ ವಸಿಷ್ಠಸ್ಮೃತಿ ಪರಿಹಾರ ನೀಡುತ್ತದೆ. ತ್ರಯೋದಶಿ ಹೊರತು ಉಳಿದ ಮೂರು ಅಷ್ಟಕಾತಿಥಿಗಳಲ್ಲಿ ಮಾತ್ರ ಅನಧ್ಯಯನ. ತ್ರಯೋದಶಿಯಲ್ಲಿ ಅಧ್ಯಯನ ಮಾಡಬಹುದು ಎಂದು ಅದು ಸ್ಪಷ್ಟ ಹೇಳುತ್ತಿದೆ. ಮತ್ತು ಶ್ರಾದ್ಧ ಪ್ರಕರಣದಲ್ಲಿ ತ್ರಯೋದಶಿಯನ್ನು ಹೇಳಿದ ಮಾತ್ರಕ್ಕೆ ಅನಧ್ಯಯನ ಪ್ರಕರಣದಲ್ಲಿಯೂ ಅದನ್ನು ಇಟ್ಟುಕೊಳ್ಳಲು ಏನೂ ಪ್ರಮಾಣದ ಆಧಾರವಿಲ್ಲ. ಅಥವಾ ತಿಸ್ರಾಷ್ಟಕಾಪಕ್ಷವಿಟ್ಟು ಕೊಂಡು ನಾರದಸ್ಮೃತಿ ಹೊರಟಿದೆ.

ಸಪ್ತಮ್ಯಾದಿತ್ರಯಂ ಚೈವ ತಥಾ ಚೈವ ತ್ರಯೋದಶೀ ।
ಚತಸ್ರಸ್ತ್ವಷ್ಟಕಾಃ ಪ್ರೋಕ್ತಾಃ ಸರ್ವಪಕ್ಷಾದ್ ವಿಶೇಷತಃ ॥
ಇತಿ ಚ ವ್ಯಾಸಸ್ಮೃತೌ ॥
ಹೇಮಂತೇ ಶಿಶಿರೇ ಚೈವ ನಿತ್ಯಶ್ರಾದ್ಧಂ ಗುಣೋತ್ತರಂ ॥
ಇತಿ ಚ ॥

ಸಪ್ತಮೀ ಮುಂತಾದುವು ಮೂರು ಮತ್ತು ತ್ರಯೋದಶಿ ಎಂದು ನಾಲ್ಕು ಅಷ್ಟಕಾ ತಿಥಿಗಳು ಬೇರೆ ಎಲ್ಲ ಕೃಷ್ಣಪಕ್ಷ ತಿಥಿಗಳಿಗಿಂತ ವಿಶೇಷ ಫಲಪ್ರದವೆನಿಸಿವೆ ಎಂದು ವ್ಯಾಸಸ್ಮೃತಿಯಲ್ಲಿ ಉಕ್ತವಾಗಿದೆ.

ಹೇಮಂತ ಶಿಶಿರಋತುಗಳಲ್ಲಿ ನಿತ್ಯಶ್ರಾದ್ಧಕ್ಕೆ ಹೆಚ್ಚು ಫಲವಿದೆ ಎಂದೂ ಅಲ್ಲಿ ಹೇಳಿದೆ.

❖❖❖

ಜೀವರು ಭಗವಂತನ ಆರಾಧನಗೆ ಚಲಪ್ರತಿಮೆಗಳು ಏಕೆಂದರೆ ಎಲ್ಲರೊಳಗೂ ಭಗವಂತ ನಿಯಾಮಕನಾಗಿ ನೆಲೆಸಿದ್ದಾನೆ ಎಂದು ನಾರದರು ಧರ್ಮರಾಜನಿಗೆ ಹೇಳುತ್ತಾರೆ.

ಪುರಾಣ್ಯನೇನ ಸೃಷ್ಟಾನಿ ನೃತಿರ್ಯಗೃಷಿದೇವತಾಃ ।
ಶೇತೇ ಜೀವೇನ ರೂಪೇಣ ಪುರೇಷು ಪುರುಷೋ ಹ್ಯಸೌ ॥ ೩೮ ॥

ಮನುಷ್ಯರು ಪಶುಗಳು ಋಷಿಗಳು ದೇವತೆಗಳು ಮುಂತಾದವರ ಶರೀರಗಳನ್ನು ಹರಿಯೇ ಸೃಷ್ಟಿ ಮಾಡಿದ್ದಾನೆ. ಪ್ರತಿಬಿಂಬನಾದ ಜೀವನೊಂದಿಗೆ ಬಿಂಬರೂಪಿ ಹರಿ ತಾನು ಈ ಶರೀರಗಳಲ್ಲಿ ವಾಸ ಮಾಡುವುದರಿಂದ ಪುರುಷನೆನಿಸಿದ್ದಾನೆ.

[೧]ಇಲ್ಲಿ 'ಶೇತೇ ಜೀವೇನ ರೂಪೇಣ' ಎಂದರೆ ಭಗವಂತ ಅಂತರ್ಯಾಮಿರೂಪದಿಂದಲೂ ಜೀವ ಎಂಬ ಅಂಶದಿಂದಲೂ ಜೀವರ ಶರೀರಗಳಲ್ಲಿ ನೆಲೆಸಿದ್ದಾನೆ ಎಂದು ಶ್ರೀಧರ ವ್ಯಾಖ್ಯಾನ. ಆದರೆ ಭಗವಂತ ಉಪಾಸನೆಗೆ ಎಲ್ಲಿ ಯಾವ ರೂಪದಿಂದ ಲಭ್ಯನಾಗಿದ್ದಾನೆ ಎಂದು ಹೇಳುವ ಪ್ರಸಂಗದಲ್ಲಿ ಅಂತರ್ಯಾಮಿರೂಪದಿಂದ ಶರೀರದಲ್ಲಿದ್ದಾನೆ ಎಂದರೆ ಸಾಕು. ಜೀವ ಎಂಬ ಅಂಶದಿಂದ ಇದ್ದಾನೆ ಎನ್ನುವುದು ವ್ಯರ್ಥ

'ಜೀವೇನ ರೂಪೇಣ' ಎಂಬುದಕ್ಕೆ ಜೀವಯಿತ್ರಾ ಅಂತರ್ಯಾಮಿರೂಪೇಣ ಎಂದು ಅರ್ಥಮಾಡಬೇಕಾಗುತ್ತದೆ. ಬೇರೆ 'ಅಂತರ್ಯಾಮಿ' ಶಬ್ದ ಶ್ಲೋಕದಲ್ಲಿ ಇಲ್ಲ. ಹಾಗೇ ಜೀವಗೋಸ್ವಾಮಿ ವ್ಯಾಖ್ಯಾನವಿದೆ. ಆಗ ಜೀವನೆಂಬ ಅಂಶದಿಂದ ಎಂಬ ಅರ್ಥ ಸಿಗಲಾರದು. ಅದಕ್ಕೆ ಆವೃತ್ತಿ ಮಾಡಿಕೊಳ್ಳಬೇಕಾಗುತ್ತದೆ. ಆವೃತ್ತಿಯಿಂದ ಕಷ್ಟಪಟ್ಟು ಏಕೆ ಜೀವ ಎಂಬ ಅಂಶದಿಂದ ಎಂದು ಅರ್ಥೈಸಬೇಕು?

ವೀರರಾಘವ ವ್ಯಾಖ್ಯಾನದಲ್ಲಿ ಜೀವೇನ ರೂಪೇಣ ಎಂದರೆ ಜೀವಶರೀರಿಯಾಗಿ ಜೀವಶರೀರದಲ್ಲಿ ಭಗವಂತನಿದ್ದಾನೆ ಎಂದು ವ್ಯಾಖ್ಯಾನ ನೀಡಿದ್ದಾರೆ. ಆದರೆ ಜೀವಶರೀರಿಯಾಗಿ ಜೀವನಲ್ಲಿದ್ದಾನೆ ಎನ್ನಬೇಕು ಹೊರತು ಜೀವಶರೀರದಲ್ಲಿ ಅಲ್ಲ. ಜೀವಶರೀರದಲ್ಲಿ ಇರುವ ಭಗವಂತನಿಗೆ ಜೀವಶರೀರವೇ ಶರೀರ, ಎಂದು ಅವರ ವಾದ. ವಸ್ತುತಃ ಜೀವಶರೀರ ಭಗವಂತನಿಗೆ ಶರೀರವಲ್ಲ.

---

೧. ಅಂತರ್ಯಾಮಿರೂಪೇಣ ಪ್ರತ್ಯಗಂಶೇನ ಚ ಯತಃಶೇತೇऽತಃ ಪುರುಷಃ । -ಶ್ರೀಧರಃ

ಜೀವರೂಪೇಣಾಂತರ್ಯಾಮಿರೂಪೇಣ ಚ ಸ್ವಯಮೇವ ಶೇತೇ । -ಗಂಗಾಸಹಾಯಃ

ಪುರೇಷು ಯತೋ ಭಗವಾನ್ ಜೀವೇನ ರೂಪೇಣ ಜೀವಾಖ್ಯೇನ ಶರೀರೇಣ ಯಸ್ಯಾತ್ಮಾ ಶರೀರಮಿತಿ ಶ್ರುತೇಃ ಶೇತೇ । -ವೀರರಾಘವಃ

ಜೀವೇನ ಜೀವಯಿತ್ರಾ ಜೀವಾಂತರ್ಯಾಮಿ ರೂಪೇಣ । -ಜೀವಗೋಸ್ವಾಮೀ

ಮನೆಯಂತೆ ವಾಸಸ್ಥಾನವಾಗಿದೆ, ಅಲ್ಲಿ ಜೀವನೊಂದಿಗೆ ಅವನಿದ್ದಾನೆ. ಒಂದು ಮರದಲ್ಲಿ ಎರಡು ಹಕ್ಕಿಗಳಂತೆ ಒಂದು ಶರೀರದಲ್ಲಿ ಜೀವಪರಮಾತ್ಮರಿದ್ದಾರೆ ಎನ್ನಬೇಕು.

ಜೀವೇನ ರೂಪೇಣ ಎಂಬಲ್ಲಿ ರೂಪ ಎಂದರೆ ಅವರು ಶರೀರ ಎಂದು ಗ್ರಹಿಸಿದ್ದಾರೆ. ನಮ್ಮ ವ್ಯಾಖ್ಯಾನದಲ್ಲಿ ರೂಪ ಎಂದರೆ ಪ್ರತಿಬಿಂಬ. 'ರೂಪಂ ರೂಪಂ ಪ್ರತಿರೂಪೋ ಬಭೂವ' ಎಂದು ಉಪನಿಷತ್ತಿನಲ್ಲಿ ಪ್ರತಿಬಿಂಬ ಎಂಬ ಅರ್ಥದಲ್ಲಿ ರೂಪಶಬ್ದ ಪ್ರಯೋಗವಿದೆ. ಆದರಿಂದ 'ರೂಪೇಣ ಜೀವೇನ ಸಹ' 'ಪ್ರತಿಬಿಂಬನಾದ ಜೀವನೊಂದಿಗೆ' ಬಿಂಬನಾದ ಭಗವಂತ ಶರೀರದಲ್ಲಿ ನೆಲೆಸಿದ್ದಾನೆ, ಆದರಿಂದ ಎಲ್ಲರೂ ಭಗವಂತನ ಚಲಪ್ರತಿಮೆಗಳು ಎಂದರ್ಥ.

ಅಂತರ್ಯಾಮಿರೂಪದಿಂದ ಇದ್ದಾನೆ ಎಂದು ಜೀವಗೋಸ್ವಾಮಿ ಮುಂತಾದ ವ್ಯಾಖ್ಯಾನಕಾರರು ಹೇಳುತ್ತಾರೆ. ಅವರಿಗೆ ಸಹಶಬ್ದ ಬೇಡ. ನಿಜ. ಆದರೆ ಭಗವಂತ ಯಾವ ರೂಪದಿಂದ ಇದ್ದಾನೆ ಎನ್ನುವುದರ ಮೇಲೆ ಜೀವರ ಪೂಜ್ಯತ್ವ ತಾರತಮ್ಯ ನಿರ್ಧಾರವಾಗುವುದಿಲ್ಲ. ಅವನ ಎಲ್ಲ ರೂಪಗಳೂ ಸಮಾನ. ಯಾವುದೇ ರೂಪದಿಂದ ಇದ್ದರೂ ತನ್ನ ಸನ್ನಿಧಾನವನ್ನು ಎಷ್ಟು ವ್ಯಕ್ತ ಮಾಡುವನೋ ಅಷ್ಟು ಪೂಜ್ಯತ್ವವೆಂದು ನಿಯಮ.

ಹೀಗಾಗಿ 'ಜೀವೇನ' 'ಜೀವಯಿತ್ರಾ' ಎಂದು ಕಷ್ಟದಿಂದ ಅಂತರ್ಯಾಮಿ ರೂಪವೆಂಬ ಅರ್ಥವನ್ನು ವ್ಯರ್ಥವಾಗಿ ಗ್ರಹಿಸಬೇಕಾಗಿಲ್ಲ.

ಜೀವೇನ ರೂಪೇಣ ಸಹ ।

> **'ಶೇತೇ ಜೀವೇನ ರೂಪೇಣ' ಎಂಬಲ್ಲಿ ಸಹಶಬ್ದಯೋಗದಿಂದ ತೃತೀಯಾ ಎಂದಿಟ್ಟುಕೊಂಡು ಸಹಶಬ್ದವನ್ನು ಅಧ್ಯಾಹಾರ ಮಾಡಬೇಕು. 'ಪ್ರತಿಬಿಂಬ ನಾದ ಜೀವನೊಂದಿಗೆ' ಎಂದರ್ಥ.**

❖ ❖ ❖

ಜೀವತಾರತಮ್ಯಾನುಗುಣವಾಗಿ ಅವರ ಶರೀರಗಳಲ್ಲಿ ಭಗವಂತನ ಸನ್ನಿಧಾನವೂ ತಾರತಮ್ಯದಿಂದಲೇ ಇರುತ್ತದೆ. ಆದರಿಂದ ಪೂಜೆಗೆ ಅವರು ತಾರತಮ್ಯ ದಿಂದಲೇ ಪಾತ್ರರೆನಿಸುತ್ತಾರೆ ಎಂದು ನಾರದರು ಧರ್ಮರಾಜನಿಗೆ ಹೇಳುತ್ತಾರೆ.

ತೇಷ್ವೀಶೋ ಭಗವಾನ್ ರಾಜಂಸ್ತಾರತಮ್ಯೇನ ವರ್ತತೇ ।
ತಸ್ಮಾತ್ಪಾತ್ರಂ ಹಿ ಪುರುಷೋ ಯಾವಾನಾತ್ಮಾ ಯಥೇಯತೇ ॥ ೩೯ ॥

ರಾಜನೆ, ಮನುಷ್ಯರು ಮುಂತಾದವರಲ್ಲಿ ತಾರತಮ್ಯವಿರುವುದರಿಂದ ಭಗವಂತನೂ ಅವರಲ್ಲಿ ತಾರತಮ್ಯದಿಂದಲೇ ಸನ್ನಿಹಿತನಾಗಿದ್ದಾನೆ. ಅದರಿಂದ ಪರಮಾತ್ಮ ಯಾವ ರೀತಿ ಎಷ್ಟು ಸನ್ನಿಧಾನವಿಟ್ಟಿರುತ್ತಾನೋ ಆ ರೀತಿ ಅಷ್ಟು ಪಾತ್ರತ್ವವನ್ನು ಜೀವ ಹೊಂದುತ್ತಾನೆ.

[೧]ಇಲ್ಲಿ 'ಭಗವಾನ್ ತಾರತಮ್ಯೇನ ವರ್ತತೇ' ಎಂದರೆ ಭಗವಂತನಲ್ಲಿ ತಾರತಮ್ಯವಿದೆ ಎಂದು ಹೇಳಿದಂತೆ ಕಾಣುತ್ತದೆ. ಬೇರೆ ವ್ಯಾಖ್ಯಾನಕಾರರು ಹಾಗೇ ಹೇಳುತ್ತಾರೆ. ಆದರೆ ಭಗವಂತನಲ್ಲಿ ಸ್ವಗತ ಭೇದವೆ ಇಲ್ಲ, ಭಗವಂತ ಒಬ್ಬನೆ. ಅವನಲ್ಲಿ ತಾರತಮ್ಯಕ್ಕೆ ಅವಕಾಶವಿಲ್ಲ. ವೀರರಾಘವ ವ್ಯಾಖ್ಯಾನದಲ್ಲಿ ಭಗವಂತನಲ್ಲಿ ಜ್ಞಾನಶಕ್ತ್ಯಾದಿಗುಣಾವಿರ್ಭಾವ ತಾರತಮ್ಯವಿದೆ ಎಂದಿದ್ದಾರೆ. ಆದರೆ 'ನಿತ್ಯವ್ಯಕ್ತಾ ಹರೇರ್ಗುಣಾಃ' ಭಗವಂತನಲ್ಲಿ ಎಲ್ಲ ಗುಣಗಳೂ ಪೂರ್ಣಪ್ರಮಾಣದಲ್ಲಿ ವ್ಯಕ್ತವೇ ಆಗಿರುತ್ತದೆ. ಜೀವನಲ್ಲಿ ಜ್ಞಾನಾನಂದಾದಿ ಗುಣಗಳು ಸಂಸಾರದಲ್ಲಿ ಅವ್ಯಕ್ತವಾಗಿರುವಂತೆ ಭಗವಂತನಲ್ಲಿ ಅವನ ಗುಣಗಳು ಅವ್ಯಕ್ತವಾಗಿ ಎಂದೂ ಇರುವುದಿಲ್ಲ.

ಭಗವಂತ ತಾರತಮ್ಯದಿಂದ ಇರುವುದಾಗಲಿ ಅವನ ಜ್ಞಾನಶಕ್ತ್ಯಾದಿ ಆವಿರ್ಭಾವದಲ್ಲಿ ತಾರತಮ್ಯವಿರುವುದಾಗಲಿ ಜೀವರ ಪೂಜಾ ಪಾತ್ರತ್ವ ತಾರತಮ್ಯಕ್ಕೆ ಹೇಗೆ ಪ್ರಯೋಜಕವಾಗುತ್ತದೆ ಎನ್ನುವುದು ಬೇರೆ ವ್ಯಾಖ್ಯಾನಕಾರರಲ್ಲಿ ಉಕ್ತವಾಗಿಲ್ಲ. ನಮ್ಮ ವ್ಯಾಖ್ಯಾನದಲ್ಲಿ ಜೀವರ ತಾರತಮ್ಯಾನುಗುಣವಾಗಿ ಅವರಲ್ಲಿ ಭಗವಂತನ ಅಭಿವ್ಯಕ್ತಿ ತಾರತಮ್ಯವಿದೆ. ಅಂದರೆ ಭಗವಂತ ಜೀವರಲ್ಲಿ ತನ್ನ ಶಕ್ತಿ ಸಾಮರ್ಥ್ಯಗಳನ್ನು ಎಲ್ಲ ಕಡೆ ಒಂದೇ ರೀತಿ ಪ್ರಕಟಮಾಡದೆ ಜೀವತಾರತಮ್ಯಾನುಗುಣವಾಗಿಯೇ ಪ್ರಕಟಪಡಿಸುತ್ತಾನೆ. ಅದರಿಂದ ಜೀವರ ಶಕ್ತಿ ಸಾಮರ್ಥ್ಯಗಳೆಷ್ಟೆಂಬುದರ ಅರಿವಾಗುತ್ತದೆ. ಅದರಿಂದ ಅವರು ಪೂಜೆಗೆ ಎಷ್ಟು ಪಾತ್ರರೆಂಬುದೂ ತಿಳಿದುಬರುತ್ತದೆ.

ಬ್ರಹ್ಮಾದಿ ಸ್ಥಾವರಾಂತೇಷು ನ ವಿಶೇಷೋ ಹರೇಃ ಕ್ವಚಿತ್।
ವ್ಯಕ್ತಿಮಾತ್ರ ವಿಶೇಷೇಣ ತಾರತಮ್ಯಂ ವದಂತಿ ಚ ॥ ಇತಿ ಚ ॥

---

೧. ತಾರತಮ್ಯೇನ ತಿರ್ಯಗಾದಿಭ್ಯಃ ಪುರುಷೇ ಯಸ್ಮಾದಾಧಿಕ್ಯೇನ ವರ್ತತೇ ತಸ್ಮಾತ್ ಪುರುಷಃ ಪಾತ್ರಂ। ತತ್ರಾಪಿ ಯಾವಾನಾತ್ಮಾ ಜ್ಞಾನಾಂಶೋ ಯಥಾಯಥಾ ಈಯತೇ ತಪಆದಿಯೋಗೇನ ಯತ್ರಯತ್ರ ಪ್ರತೀಯತೇ ತಥಾತಥಾಸೌ ಪಾತ್ರಮಿತ್ಯರ್ಥಃ। -ಶ್ರೀಧರಃ

ತಿರ್ಯಗಾದಿಭ್ಯಸ್ತೇಷು ಪುರುಷೇಷು ತಾರತಮ್ಯೇನ ಸ್ವಕೀಯ ಜ್ಞಾನಶಕ್ತ್ಯಾದಿ ಗುಣಾವಿರ್ಭಾವ ತಾರತಮ್ಯೇನ ವರ್ತತೇ ಭಗವಾನ್। -ವೀರರಾಘವಃ

ಬ್ರಹ್ಮಾದಿ ಸ್ಥಾವರ ಪರ್ಯಂತ ಸರ್ವತ್ರ ಇರುವ ಹರಿಯ ರೂಪಗಳಲ್ಲಿ ಯಾವ ತಾರತಮ್ಯವೂ ಇಲ್ಲ. ಅವನು ತನ್ನ ಸಾಮರ್ಥ್ಯವನ್ನು ಜೀವರಲ್ಲಿ ಪ್ರಕಟಮಾಡುವುದರಲ್ಲಿರುವ ತಾರತಮ್ಯದಿಂದ ಅವನಲ್ಲಿ ತಾರತಮ್ಯವನ್ನು ವ್ಯವಹರಿಸುತ್ತಾರೆ ಎಂದೂ ಸಮಾಚಾರ ಗ್ರಂಥದಲ್ಲಿ ಹೇಳಿದೆ.

❖ ❖ ❖

ತಪಸ್ವಿಯಾದ ಬ್ರಾಹ್ಮಣ ಶ್ರೀಹರಿಯ ಉತ್ತಮವಾದ ಚಲಪ್ರತಿಮೆ ಎಂದು ನಾರದರು ಧರ್ಮರಾಜನಿಗೆ ಹೇಳುತ್ತಾರೆ.

ಪುರುಷೇಷ್ವಪಿ ರಾಜೇಂದ್ರ ಸುಪಾತ್ರಂ ಬ್ರಾಹ್ಮಣಂ ವಿದುಃ ।
ತಪಸಾ ವಿದ್ಯಯಾ ತುಷ್ಟ್ಯಾ ಧತ್ತೇ ಚೇದಂ ಹರೇಸ್ತನುಮ್ ॥ ೪೨ ॥

ತನ್ನೋಽಸ್ಯ ಬ್ರಾಹ್ಮಣಾ ರಾಜನ್ ಕೃಷ್ಣಸ್ಯ ಜಗದಾತ್ಮನಃ ।
ಪುನಂತಃ ಪಾದರಜಸಾ ತ್ರಿಲೋಕೀಂ ದೈವತಂ ಮಹತ್ ॥ ೪೩ ॥

ರಾಜೇಂದ್ರ, ಜಡವಾದ ಕಲ್ಲಿನಲ್ಲಿ ಪ್ರಾಣಪ್ರತಿಷ್ಠೆಯಿಂದ ಭಗವಂತನ ಸನ್ನಿಧಾನ ಹೆಚ್ಚುವಂತೆ ಜೀವರಲ್ಲಿಯೂ ಬ್ರಾಹ್ಮಣನು ತಪಸ್ಸಿನಿಂದ ವಿದ್ಯೆಯಿಂದ ಯದೃಚ್ಛಾಲಾಭಸಂತೃಪ್ತಿಯಿಂದ ಹರಿಯ ಉತ್ತಮ ಸನ್ನಿಧಾನ ಪಾತ್ರವಾದ ಪ್ರತಿಮೆಯೆನಿಸುವ ಶರೀರವನ್ನು ಧರಿಸುತ್ತಾನೆ. ಅದರಿಂದ ಅಂಥ ಬ್ರಾಹ್ಮಣನನ್ನು ಹೆಚ್ಚು ಸತ್ಪಾತ್ರನೆಂದು ಜ್ಞಾನಿಗಳು ತಿಳಿಯುತ್ತಾರೆ.

ರಾಜನೆ, ತಮ್ಮ ಪಾದಧೂಳಿಯಿಂದ ಮೂಲೋಕವನ್ನು ಪವಿತ್ರಗೊಳಿಸುವ ಬ್ರಾಹ್ಮಣರು ಜಗತ್ಪತಿಯಾದ ಈ ಶ್ರೀಕೃಷ್ಣನಿಗೆ ಚಲ ಪ್ರತಿಮೆಗಳಾಗಿದ್ದು ಲೋಕಕ್ಕೆ ದೊಡ್ಡ ದೇವತೆಯೆನಿಸಿದ್ದಾರೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರು 'ನನ್ವಸ್ಯ ಬ್ರಾಹ್ಮಣಾ ರಾಜನ್' ಎಂದು ಪಾಠವನ್ನಿಟ್ಟುಕೊಂಡಿದ್ದಾರೆ.

'ಮನುಷ್ಯರಲ್ಲಿಯೂ ಬ್ರಾಹ್ಮಣನು ಹೆಚ್ಚು ಸತ್ಪಾತ್ರ. ಏಕೆಂದರೆ ಆತ ತಪಸ್ಸು ವಿದ್ಯೆ ಸಂತೋಷಗಳಿಂದ ಕೃಷ್ಣನ ವೇದರೂಪವಾದ ಶರೀರವನ್ನು ಧರಿಸಿದ್ದಾರೆ. ಕೃಷ್ಣನಿಗೂ ಅವರು ದೊಡ್ಡ ದೇವತೆಗಳೆನಿಸಿದ್ದಾರೆ ಎಂದಮೇಲೆ ಇತರರಿಗೆ ಅವರು ಪೂಜ್ಯರೆಂದು ಬೇರೆ ಏನು ಹೇಳಬೇಕು?' ಎಂದು ಬೇರೆ ವ್ಯಾಖ್ಯಾನಕಾರರು

ವಿವರಣೆ ನೀಡುತ್ತಾರೆ.[೧] ಆದರೆ ವೇದರೂಪವಾದ ಹರಿಯ ಶರೀರವನ್ನು ಬ್ರಾಹ್ಮಣರು ಮಾತ್ರವಲ್ಲದೆ ಕ್ಷತ್ರಿಯರೂ ವೈಶ್ಯರೂ ಧರಿಸುತ್ತಾರೆ. ಅವರಿಗೂ ದಾನ ಪಾತ್ರತ್ವ ಬರಬೇಕಾದೀತು. ಅದರಿಂದ 'ಹರೇಸ್ತನುಂ' ಎಂಬುದನ್ನು ವೇದಕ್ಕೆ ಅನ್ವಯಿಸಿ ಪ್ರಯೋಜನವಿಲ್ಲ. ಬ್ರಾಹ್ಮಣರಿಗೇ ಅನ್ವಯಿಸಬೇಕು. ಬ್ರಾಹ್ಮಣ ಹರಿಯ ಶರೀರ, ಉತ್ತಮಪಾತ್ರ ಎನ್ನಬೇಕು.

ಕೈಮುತ್ಯನ್ಯಾಯವೂ ಸರಿಯಲ್ಲ. ಶ್ರೀಕೃಷ್ಣನಿಗೆ ಬ್ರಾಹ್ಮಣರು ದೇವತೆಗಳಲ್ಲ, ಬ್ರಾಹ್ಮಣರಿಗೆ ಕೃಷ್ಣ ಪರದೇವತೆ.

ಜೀವಗೋಸ್ವಾಮಿ ವ್ಯಾಖ್ಯಾನದಲ್ಲಿ 'ಕೃಷ್ಣ ಲೀಲೆ ಯಿಂದ ಬ್ರಾಹ್ಮಣರನ್ನು ತನ್ನ ದೇವತೆ ಎಂದು ಪ್ರದರ್ಶಿಸಿದ್ದಾನೆ' ಎಂದಿದೆ. ವಿಶ್ವನಾಥ ವ್ಯಾಖ್ಯಾನದಲ್ಲಿ ಬ್ರಾಹ್ಮಣರು ಕೃಷ್ಣನಿಗೆ ವಾಸ್ತವದಲ್ಲಿ ದೇವತೆಗಳೆಂದು ಸಿದ್ಧಾಂತ ಮಾಡಲಾಗದು ಏಕೆಂದರೆ ರಾಜಸೂಯ ಯಾಗದಲ್ಲಿ ಲೆಕ್ಕವಿಲ್ಲದಷ್ಟು ಬ್ರಾಹ್ಮಣರಿದ್ದರೂ ಎಲ್ಲರನ್ನೂ ಬಿಟ್ಟು ಕೃಷ್ಣನಿಗೆ ಅಗ್ರಪೂಜೆ ನೀಡಿದ್ದಾನೆ, ಧರ್ಮರಾಜ' ಎಂದಿದೆ. ಆದ್ದರಿಂದ ಬ್ರಾಹ್ಮಣರು ತನ್ನನ್ನು ಪರದೇವತೆ ಎಂದು ಪರಮಭಕ್ತಿಯಿಂದ ಪೂಜಿಸುತ್ತಾರೆ ಎಂಬುದನ್ನು ತಾನೇ ಅವರನ್ನು ಪೂಜಿಸುವ ಮೂಲಕ ತೋರಿಸುತ್ತಾನೆ ಕೃಷ್ಣ. ಭಕ್ತಿಯೇ ತನಗೆ ಹೆಚ್ಚು ಪ್ರೀತಿಕರ ಎಂದು ತಿಳಿಸುತ್ತಿದ್ದಾನೆ. ಭಕ್ತಿ ಕೇವಲ ಬ್ರಾಹ್ಮಣರ ಸೊತ್ತಲ್ಲ. ಭಕ್ತಿಗೆ ಜಾತಿ ಲಿಂಗ ವಯಸ್ಸುಗಳ ನಿರ್ಬಂಧವಿಲ್ಲ. ಅದರಿಂದ 'ನನ್ವಸ್ಯ ಬ್ರಾಹ್ಮಣಾ ರಾಜನ್' ಎಂಬ ಪಾಠಕ್ಕಿಂತ 'ತನ್ವೋಽಸ್ಯ ಬ್ರಾಹ್ಮಣಾ ರಾಜನ್' ಎಂಬ ಪಾಠವೇ ಉತ್ತಮ. ಬ್ರಾಹ್ಮಣನು ಜಾತಿಯಿಂದಲೇ ಭಗವಂತನ ಶರೀರವೆನಿಸುತ್ತಾನೆ. ತಪಸ್ಸು ವಿದ್ಯೆಗಳಿದ್ದರೆ ಬೇರೇನು ಹೇಳಬೇಕು? ತಪಸ್ವಿ ಜ್ಞಾನಿಯಾದ ಬ್ರಾಹ್ಮಣ ಮೂಲೋಕವನ್ನೂ ಪವಿತ್ರಗೊಳಿಸುತ್ತಾನೆ, ಅವನು ದೊಡ್ಡ ದೇವತೆ, ಎಂದರೆ ಎಲ್ಲ ದೇವತೆಗಳ ವಾಸಸ್ಥಾನ ಎಂದು ಉಪಸಂಹಾರದಲ್ಲಿ ಹೇಳುತ್ತಿದ್ದಾರೆ ನಾರದರು.

ಆದರೆ ಇಲ್ಲಿ ಬ್ರಾಹ್ಮಣ ಹರಿಯ ಶರೀರವೆನಿಸುವುದು ಹೇಗೆ ಎಂಬ ಪ್ರಶ್ನೆ

---

೧. ಯಃ ಹರೇಸ್ತನುಂ ವೇದಂ ಧತ್ತೇ ತಂ ಬ್ರಾಹ್ಮಣಂ ಸುಪಾತ್ರಂ ವಿದುಃ । ನನು ನಿಶ್ಚಯೇನ। ಬ್ರಾಹ್ಮಣಾಃ । ಶ್ರೀಕೃಷ್ಣಸ್ಯಾಪಿ ಮಹದ್ದೈವತಂ ಕಿಮುತಾನ್ಯೇಷಾಮಸ್ಮದ್ವಿಧಾನಾಂ ।
-ಗಂಗಾಸಹಾಯಃ

ದೈವತಂ ಲೀಲಯಾ ಪೂಜ್ಯತ್ವೇನ ದರ್ಶಿತಂ । -ಜೀವಗೋಸ್ವಾಮೀ

ನಚ ತದ್ದೈವತತ್ವಾತ್ ಬ್ರಾಹ್ಮಣಾಸ್ತಸ್ಮಾತ್ ಸಕಾಶಾದಪಿ ವಸ್ತುತ ಏವ ಪೂಜ್ಯಾ ಇತಿ ಸಿದ್ಧಾಂತ ಏವೇತಿ ವಾಚ್ಯಂ। ರಾಜಸೂಯೇ ಬಹುಷ್ವಪಿ ಬ್ರಾಹ್ಮಣೇಷು ವಿದ್ಯಮಾನೇಷು ಕೃಷ್ಣಸ್ಯೈವಾಗ್ರಪೂಜನಾತ್ । -ವಿಶ್ವನಾಥಃ

ಬರುತ್ತದೆ. ಹರಿಗೆ ತನಗೆ ತಾನೇ ಶರೀರ ಹೊರತು ಅವನಿಗೆ ಬೇರೆ ಶರೀರವಿಲ್ಲ. ಬೇರೆ ಚೇತನ ಅಚೇತನಗಳು ಅವನ ಶರೀರವೆನಿಸಲು ಶಕ್ಯವಿಲ್ಲ. ಅದರಿಂದ ಬ್ರಾಹ್ಮಣರು ಹರಿಯ ಶರೀರಗಳೆಂದರೆ ಚಲಪ್ರತಿಮೆಗಳೆಂದರ್ಥ. ಕಲ್ಲಿನ ವಿಗ್ರಹಗಳು ಅಚಲಪ್ರತಿಮೆಗಳು. ಅವುಗಳಲ್ಲಿ ವಿಧ್ಯುಕ್ತವಾಗಿ ಪ್ರಾಣಪ್ರತಿಷ್ಠೆ ಮಾಡಿದರೆ ಎಲ್ಲ ಪೂಜೆಗಳಿಗೂ ಅವು ಅರ್ಹವೆನಿಸುತ್ತವೆ. ಹಾಗೇ ಬ್ರಾಹ್ಮಣ ತಪಸ್ಸು ವಿದ್ಯೆಗಳನ್ನು ಸಂಪಾದಿಸಿದರೆ ಎಲ್ಲ ದಾನ ಪೂಜೆ ಸತ್ಕಾರಗಳಿಗೂ ಉತ್ತಮ ಪಾತ್ರನೆನಿಸುತ್ತಾನೆ ಎಂದು ಅಭಿಪ್ರಾಯ ಹೇಳಬೇಕು.

ಶಿಲಾವತ್ ಪ್ರತಿಮಾಃ ಸಂತೋ ವಿಪ್ರಾದ್ಯಾಶ್ಚ ಹರೇಃ ಸ್ಮೃತಾಃ ।
ಇತಿ ಚ ॥

ತಪಸ್ಸು ವಿದ್ಯೆ ಮುಂತಾದ ಸದ್ಗುಣಭರಿತರಾದ ಬ್ರಾಹ್ಮಣರು ಕ್ಷತ್ರಿಯರು ಮುಂತಾದವರು ಶಾಲಗ್ರಾಮಾದಿ ಶಿಲೆಯಂತೆ ಹರಿಯ ಆರಾಧನೆಗೆ ಪ್ರತಿಮೆಗಳಾಗಿದ್ದಾರೆ ಎಂದೂ ಹೇಳಿದೆ.

ಕ್ಷತ್ರಿಯರು ಮುಂತಾದವರೂ ತಮಗಿಂತ ಕೆಳಗಿನ ವರ್ಣದವರಿಗೆ ಪೂಜ್ಯರು. ಅವರು ಸಂತರಾಗಿದ್ದರೆ ಇನ್ನೂ ಹೆಚ್ಚು ಪೂಜ್ಯರು. ಕೆಳಗಿನ ವರ್ಣದವರೂ ಸಂತರಾಗಿದ್ದರೆ ಮೇಲಿನ ವರ್ಣದವರಿಗೆ ಮನಸ್ಸು ಮಾತುಗಳಿಂದ ಪೂಜ್ಯರೇ. ಶರೀರದಿಂದ ಅಲ್ಲ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ಸಪ್ತಮಸ್ಕಂಧೇ
ಪಂಚದಶೋಽಧ್ಯಾಯಃ

❖ ❖ ❖

ಅಧ್ಯಾಯ ೧೬

ಅಧ್ಯಾಯ ಸಾರಾಂಶ

ಹವ್ಯಕವ್ಯಗಳಿಗೆ ಮುಖ್ಯಪಾತ್ರರು ಪರಮಹಂಸರು. ಅವರು ಸಿಗದಿದ್ದಲ್ಲಿ ಬೇರೆಯವರಿಗೆ ನೀಡಬೇಕು. ಎಷ್ಟು ಶ್ರೀಮಂತನಾದರೂ ಶ್ರಾದ್ಧದಲ್ಲಿ ಹೆಚ್ಚು ವಿಸ್ತಾರ ಮಾಡಬಾರದು. ನೆಂಟರಿಷ್ಟರೆಲ್ಲರನ್ನೂ ಕರೆದರೆ ಮನಸ್ಸಿನ ಏಕಾಗ್ರತೆಗೆ ಭಂಗ ಪ್ರಸಂಗವಿದೆ. ಆಗ ಕರ್ಮ ಸರಿಯಾಗಿ ಆಗುವುದಿಲ್ಲ.

ಶ್ರಾದ್ಧದಲ್ಲಿ ಪರಮಹಂಸರಿಗೆ ಮಾಂಸವನ್ನು ಬಡಿಸಬಾರದು. ಯಾಗದಲ್ಲಿ ದೇವತೆಗಳಿಗಾಗಲಿ ಶ್ರಾದ್ಧದಲ್ಲಿ ಪಿತೃಗಳಿಗಾಗಲಿ ಪಶುಹಿಂಸೆಯಿಂದ ಸಂತೋಷವಿಲ್ಲ. ಪರಮಹಂಸರು ಉಂಡರೇ ಅವರಿಗೆ ತೃಪ್ತಿ. ಅಹಿಂಸೆಯೆ ಉತ್ತಮವಾದ ಧರ್ಮ. ಮಾನಸ ಯಜ್ಞವೇ ಉತ್ತಮಯಜ್ಞ. ಪರಮಾತ್ಮನ ಅನುಗ್ರಹದಿಂದ ಲಭಿಸುವ ಮುನಿಗಳಿಗೆ ಯೋಗ್ಯವಾದ ಅನ್ನದಿಂದಲೇ ತೃಪ್ತನಾಗಿ ನಿತ್ಯ ನೈಮಿತ್ತಿಕ ಕರ್ಮಗಳನ್ನು ಫಲದಾಸೆ ಇಲ್ಲದೆ ಭಗವಂತನ ಪ್ರೀತಿಗಾಗಿ ಆಚರಿಸಬೇಕು.

ಧರ್ಮಾಚರಣೆಗಾಗಲಿ ಜೀವನನಿರ್ವಾಹಕ್ಕಾಗಲಿ ಹಣವಿಲ್ಲದವನು ಹಣವನ್ನು ಬೇಡಬಾರದು. ಬೇಡದೆ ಪರಮಾತ್ಮ ವಿಚಾರದಲ್ಲಿಯೇ ಸುಖ ಕಾಣುವವನಿಗೆ ಸಿಗುವ ಸುಖ ಹಣದಾಸೆಯಿಂದ ದಿಕ್ಕುದಿಕ್ಕುಗಳಲ್ಲಿ ಅಲೆಯುವವನಿಗೆ ಸರ್ವಥಾ ಸಿಗದು. ಪಾದರಕ್ಷೆ ಹಾಕಿಕೊಂಡವನಿಗೆ ದಾರಿಯಲ್ಲಿ ಎಲ್ಲಿಯೂ ಕಲ್ಲುಮುಳ್ಳುಗಳಿರುವುದಿಲ್ಲ. ಎಲ್ಲ ಕಡೆ ಮೆತ್ತನೆ ಸುಖಾನುಭವವೆ. ಇದ್ದುದರಲ್ಲಿ ತೃಪ್ತಿ ಕಾಣದ ಬ್ರಾಹ್ಮಣನ ತಪಸ್ಸು ವಿದ್ಯೆ ಎಲ್ಲವೂ ಸೋರಿಹೋಗುತ್ತದೆ. ಭಗವಂತನೂ ಸಿಗುವುದಿಲ್ಲ. ಭಗವಂತನ ಪ್ರಾಪ್ತಿಗಾಗಿಯೆ ಎಲ್ಲ ಶಾಸ್ತ್ರೋಕ್ತ ಕರ್ಮಾನುಷ್ಠಾನ ವಿಹಿತವಾಗಿದೆ. ಭಗವದ್ಭಕ್ತಿಯನ್ನು ಉಂಟುಮಾಡದಿದ್ದರೆ ಅದು ನಿರರ್ಥಕ ಶ್ರಮವೆನಿಸುತ್ತದೆ. ಭಗವದ್‌ದ್ವೇಷಿಯಾದ ಮನುಷ್ಯನಿಗೆ ಅದು ತಮಸ್ಸಿಗೇ ಸಾಧನವಾಗುತ್ತದೆ.

ಭಗವಂತನನ್ನು ಹೊಂದಬೇಕಾದರೆ ನಿಷಿದ್ಧ ವಿಷಯಗಳಲ್ಲಿ

ಆಸಕ್ತಿಯನ್ನು ಬಿಡಬೇಕು. ಲೌಕಿಕ ಜನರೊಂದಿಗೆ ಬೆರೆಯಬಾರದು. ಯತಿಯಾಗಿ ಭಿಕ್ಷೆ ಬೇಡಿ ಉಣಬೇಕು. ಆಸನ ಪ್ರಾಣಾಯಾಮಾದಿಗಳಿಂದ ಮನಸ್ಸನ್ನು ಭಗವಂತನಲ್ಲಿ ನಿಲ್ಲಿಸಬೇಕು. ಆಗ ಯೋಗಿಗೆ ಸ್ವರೂಪಸುಖ ವ್ಯಕ್ತವಾಗುತ್ತದೆ.

ಆಶ್ರಮಧರ್ಮಗಳಿಗೆ ವ್ಯತಿರಿಕ್ತವಾಗಿ ನಡೆಯುವವರು ಮೂಢರು. ಅವರು ಅನುಕಂಪೆಗೆ ಅರ್ಹರಲ್ಲ.

ಶರೀರ ಇಂದ್ರಿಯಗಳು ರಥ ಕುದುರೆಗಳಂತೆ. ಅವುಗಳನ್ನು ನಿಯಂತ್ರಣದಲ್ಲಿಟ್ಟುಕೊಂಡರೆ ಯೋಗಿ ಓಂಕಾರವೆಂಬ ಧನುಸ್ಸಿಗೆ ತನ್ನನ್ನೇ ಬಾಣವಾಗಿ ಹೂಡಿ ಪರಬ್ರಹ್ಮನೆಂಬ ಗುರಿಯನ್ನು ತಲುಪಬಲ್ಲ. ಹೀಗೆ ಮಾಡದೆ ಎಚ್ಚರದಪ್ಪಿದರೆ ಇಂದ್ರಿಯಗಳೆಂಬ ಕುದುರೆಗಳು ಶರೀರರಥವನ್ನು ವಿಷಯಪದಾರ್ಥಗಳೆಂಬ ದರೋಡೆಕೋರರ ಬಳಿಗೆ ಒಯ್ಯುತ್ತವೆ. ಆ ದರೋಡೆಕೋರರು ಎಲ್ಲ ಪುಣ್ಯಗಳನ್ನು ಕಸಿದು ಆತನನ್ನು ಅಂಧಂತಮಸ್ಸಿನಲ್ಲೋ ನಿತ್ಯ ಸಂಸಾರಕೂಪದಲ್ಲೋ ತಳ್ಳಿಬಿಡುತ್ತಾರೆ.

ಫಲದಾಸೆಯಿಂದ ಮಾಡುವ ಕರ್ಮವೂ ವೇದೋಕ್ತವೆ ಆದರೂ ಅದರಿಂದ ಮೋಕ್ಷ ಸಿಗುವುದಿಲ್ಲ. ಧೂಮ ರಾತ್ರಿ ಕೃಷ್ಣ ಪಕ್ಷ ಮುಂತಾದ ಪಿತೃಯಾನ ಮಾರ್ಗದಿಂದ ಪುಣ್ಯಲೋಕಕ್ಕೆ ಹೋಗಿ ಪುಣ್ಯ ತೀರಿದಾಗ ತಿರುಗಿ ಭೂಮಿಯಲ್ಲಿ ಜನಿಸಬೇಕಾಗುತ್ತದೆ. ನಿಷ್ಕಾಮಕರ್ಮದಿಂದ ಮೋಕ್ಷ ಸಿಗುತ್ತದೆ. ಅವನು ಅರ್ಚಿರಾದಿ ಮಾರ್ಗದಿಂದ ಪ್ರಯಾಣ ಮಾಡುತ್ತಾನೆ. ಅದಕ್ಕೆ ಪ್ರಾಣೋತ್ಕ್ರಮಣಕಾಲದಲ್ಲಿ ಇಂದ್ರಿಯ ಮನಸ್ಸುಗಳ ಅಭಿಮಾನಿಗಳಿಗೆ ಲಯ ಚಿಂತನೆ ಮಾಡಬೇಕು. ಬಳಿಕ ಅರ್ಚಿರಾದಿ ಮಾರ್ಗವನ್ನು ಸ್ಮರಿಸಬೇಕು. ಅಗ್ನಿ ಜ್ಯೋತಿ ವಾಯು ಹಗಲು ಶುಕ್ಲಪಕ್ಷ ಮುಂತಾಗಿ ದೇವತಾಲೋಕಗಳಲ್ಲಿ ಮುಂದೆ ಮುಂದೆ ಹೋದಂತೆ ಹೆಚ್ಚು ಹೆಚ್ಚು ಸುಖ ಅನುಭವಿಸುತ್ತ ಜ್ಞಾನಿ ಮುಖ್ಯಪ್ರಾಣನ ಮೂಲಕ ಪರಮಾತ್ಮನ ಲೋಕಕ್ಕೆ ಹೋಗುತ್ತಾನೆ. ಬಳಿಕ ಬ್ರಹ್ಮಾಂಡಲಯಕಾಲದಲ್ಲಿ ಬ್ರಹ್ಮನೊಂದಿಗೆ ಬ್ರಹ್ಮಾಂಡದ ಹೊರಗಿನ ನವಾವರಣಗಳನ್ನು ದಾಟಿ ಸರ್ವವ್ಯಾಪ್ತನಾದ ನಾರಾಯಣನನ್ನು ಹೊಂದುತ್ತಾನೆ.

ಭಗವಂತನ ಅಚಿಂತ್ಯಶಕ್ತಿಯಿಂದ ಪ್ರಪಂಚ ಸತ್ಯವಾಗಿ ನಿರ್ಮಿತವಾಗಿದೆ. ಅವನಿಲ್ಲದೆ ಸತ್ಯವಾದ ಈ ಸೃಷ್ಟಿ ಕೂಡಲಾದು. 'ಅದ್ಭ್ಯಃ ಪೃಥಿವೀ' ಎಂದು ಹೇಳಿದಂತೆ ನೀರಿನಿಂದ ಮಣ್ಣು ಸೃಷ್ಟಿಯಾಗದು, ಲೋಕದಲ್ಲಿ ಅದು ಕಂಡಿಲ್ಲ. ಭೂತಸೂಕ್ಷ್ಮಗಳೆಂಬ ಅವಯವಗಳಿಂದ ಪಂಚಭೂತಗಳೆಂಬ ಅವಯವಿಗಳು ಹುಟ್ಟುವುದೂ ಶಕ್ಯವಿಲ್ಲ. ಏಕೆಂದರೆ ಅವಯವ ಅವಯವಿಗಳಿಗೆ ಭೇದವೇ ಅನುಭವಸಿದ್ಧವಲ್ಲ. ಅಭಿನ್ನವಾದ ಅವಯವ ಅವಯವಿಗಳಿಗೆ ಕಾರ್ಯ ಕಾರಣಭಾವವನ್ನು ಭಗವಂತನ ಅಚಿಂತ್ಯಶಕ್ತಿಯೇ ಕೂಡಿಸಬೇಕಷ್ಟೆ.

ಜ್ಞಾನಿ ಭಾವಾದ್ವೈತ ದ್ರವ್ಯಾದ್ವೈತ ಕ್ರಿಯಾದ್ವೈತಗಳನ್ನೂ ಸದಾ ಚಿಂತಿಸಬೇಕು. ಕಾರಣಕಾರ್ಯ ದ್ರವ್ಯಗಳಲ್ಲಿ ಒಬ್ಬನೇ ಭಗವಂತನಿದ್ದಾನೆ ಎನ್ನುವುದು ಭಾವಾದ್ವೈತ. ಎಲ್ಲ ಕರ್ಮಗಳನ್ನೂ ಒಬ್ಬನೇ ಭಗವಂತನಲ್ಲಿ ಅರ್ಪಿಸುವುದು ಕ್ರಿಯಾದ್ವೈತ. ಎಲ್ಲರ ಭೋಗ ಪದಾರ್ಥಗಳಲ್ಲಿಯೂ ಒಬ್ಬನೇ ಭಗವಂತ ಬೇರೆಬೇರೆ ರೂಪಗಳಿಂದ ಇರುವನೆನ್ನುವುದು ದ್ರವ್ಯಾದ್ವೈತ.

ಈ ಎಲ್ಲ ಗೃಹಸ್ಥಧರ್ಮಾನುಷ್ಠಾನವನ್ನು ಭಕ್ತಿಯಿಂದ ನಡೆಸುವವರು ಮೋಕ್ಷ ಭಾಗಿಗಳಾಗುತ್ತಾರೆ. ಇದಕ್ಕೆ ಉದಾಹರಣೆ ನೀವೇ ಪಾಂಡವರು.

ನಾನು ಹಿಂದಿನ ಮಹಾಕಲ್ಪದಲ್ಲಿ ಉಪಬರ್ಹಣನೆಂಬ ಗಂಧರ್ವನಾಗಿದ್ದೆ. ಆಗ ಒಮ್ಮೆ ದೇವತೆಗಳ ಸತ್ರದಲ್ಲಿ ಸ್ತ್ರೀಯರಿಂದೊಡಗೂಡಿ ಅಶ್ಲೀಲಗಾನವನ್ನು ಮಾಡಿದ್ದಕ್ಕೆ ಪ್ರಜಾಪತಿಗಳು ದಾಸೀಪುತ್ರನಾಗಿ ಜನಿಸೆಂದು ಶಾಪವಿತ್ತರು. ಆದರೂ ದಾಸೀಪುತ್ರನಾಗಿದ್ದ ನಾನು ಬ್ರಹ್ಮಜ್ಞಾನಿಗಳ ಸೇವೆಯ ಬಲದಿಂದ ಈ ಮಹಾಕಲ್ಪದಲ್ಲಿ ಬ್ರಹ್ಮಪುತ್ರನಾಗಿ ಜನಿಸಿದ್ದೇನೆ. ನೀವು ಪಾಂಡವರು ಪರಮಧನ್ಯರು. ಸಾಕ್ಷಾತ್ ಪರಬ್ರಹ್ಮನಾದ ಈ ಶ್ರೀಕೃಷ್ಣ ಮನುಷ್ಯಾಕಾರದಲ್ಲಿ ನಿಗೂಢವಾಗಿ ನಿಮ್ಮ ಮನೆಯಲ್ಲಿ ವಾಸ ಮಾಡುತ್ತಿದ್ದಾನೆ. ಬ್ರಹ್ಮಾದಿಗಳು ಅರಸುವ ಆ ಪರತತ್ತ್ವವೇ ನಿಮ್ಮ ಬಳಿ ಬಂಧುವಾಗಿ ನಿಮ್ಮಾಜ್ಞೆಯನ್ನು ಪಾಲಿಸುವವನಾಗಿ ಗುರುವಾಗಿ ಪೂಜ್ಯನಾಗಿ ನೆಲೆಸಿದ್ದಾನೆ. ಹೀಗೆ ಹೇಳಿ ನಾರದರು ಹೊರಟು ಹೋದರು.

ನಿವೃತ್ತಕರ್ಮಿಗಳು ಅರ್ಚಿರಾದಿ ಮಾರ್ಗದಿಂದ ವೈಕುಂಠವನ್ನು ಹೋಗಿ ಸೇರುವುದಕ್ಕೆ ಮೊದಲಿಗೆ ಪ್ರಾಣೋತ್ಕ್ರಮಣಕಾಲದಲ್ಲಿ ಲಯಚಿಂತನೆ ಮಾಡುವ ಕ್ರಮವನ್ನು ನಾರದರು ಧರ್ಮರಾಜನಿಗೆ ತಿಳಿಸುತ್ತಾರೆ.

ಇಂದ್ರಿಯೇಷು ಕ್ರಿಯಾಯಜ್ಞಾನ್ ಜ್ಞಾನದೀಪೇಷು ಜುಹ್ವತಿ ॥ ೫೨ ॥

ಇಂದ್ರಿಯಾಣಿ ಮನಸ್ಯೇವಂ ವಾಚಿ ವೈಕಾರಿಕಂ ಮನಃ ।
ತಾಂ ತು ವರ್ಣಸಮಾಮ್ನಾಯೇ ತಮೋಂಕಾರೇ ಸ್ವರೇ ನ್ಯಸೇತ್ ॥ ೫೩ ॥

ಓಂಕಾರಂ ಬಿಂದುನಾದೇ ತು ತಂ ತು ಪ್ರಾಣೇ ಮಹತ್ಯಮುಮ್ ।

ಕ್ರಿಯಾತ್ಮಕ ಯಜ್ಞಾಭಿಮಾನಿಗಳಾದ ಶತಸ್ಥ ದೇವತೆಗಳನ್ನು ಜ್ಞಾನೇಂದ್ರಿಯಾಭಿಮಾನಿ ದೇವತೆಗಳಲ್ಲಿ, ಇಂದ್ರಿಯಾಭಿಮಾನಿಗಳನ್ನು ಮನೋಭಿಮಾನಿ ಇಂದ್ರನಲ್ಲಿ, ಮನೋಭಿಮಾನಿ ಇಂದ್ರನನ್ನು ವೇದಾಭಿಮಾನಿನಿ ಪಾರ್ವತಿಯಲ್ಲಿ, ಅವಳನ್ನು ಅಕಾರ ಉಕಾರ ಮಕಾರಗಳೆಂಬ ಓಂಕಾರಾವಯವಗಳ ಅಭಿಮಾನಿಯಾದ ರುದ್ರನಲ್ಲಿ, ರುದ್ರನನ್ನು ಆ ಮೂರು ಅವಯವಗಳಿಂದಾದ ಓಂಕಾರದ ಅಭಿಮಾನಿ ಶೇಷನಲ್ಲಿ, ಶೇಷನನ್ನು ಬಿಂದುವೆಂಬ ಓಂಕಾರಾವಯವಕ್ಕೆ ಅಭಿಮಾನಿಯಾದ ಸರಸ್ವತಿಯ ಒಂದು ಅಂಶದಲ್ಲಿ, ಅದನ್ನು ನಾದಾಭಿಮಾನಿ ಸರಸ್ವತಿಯ ಮೂಲರೂಪದಲ್ಲಿ, ಸರಸ್ವತಿಯನ್ನು ಬ್ರಹ್ಮನಲ್ಲಿ, ಬ್ರಹ್ಮನನ್ನು ಪರಮಾತ್ಮನಲ್ಲಿ ಹೋಮಿಸಬೇಕು, ಅಂದರೆ ಅವರ ಅಧೀನರೆಂದು ಚಿಂತಿಸಬೇಕು. ಬಿಂದುನಾದಾಭಿಮಾನಿ ಭಾರತಿಯನ್ನು ಮುಖ್ಯಪ್ರಾಣನಲ್ಲಿ, ಮುಖ್ಯಪ್ರಾಣನನ್ನು ಪ್ರಕೃತ್ಯಭಿಮಾನಿನಿ ಜಯಾರೂಪ ಲಕ್ಷ್ಮಿಯ ದ್ವಾರಾ ಸಂಕರ್ಷಣರೂಪಿ ಪರಮಾತ್ಮನಲ್ಲಿ ಹೋಮಿಸಬೇಕು.

[೧]ಇಲ್ಲಿ ಬೇರೆ ವ್ಯಾಖ್ಯಾನಕಾರರು ಹೀಗೆ ಹೇಳುತ್ತಾರೆ- ಇಂದ್ರಿಯ ವ್ಯಾಪಾರಗಳಾದ ಇಷ್ಟಾಪೂರ್ತಾದಿಗಳನ್ನು ಇಂದ್ರಿಯಾಭಿನ್ನವೆಂದು ಚಿಂತಿಸಬೇಕು. ಇಂದ್ರಿಯಗಳನ್ನು ಮನಸ್ಸಿಗೆ ಅಧೀನವಾಗಿ ಪ್ರವೃತ್ತಿ ಮಾಡುವುದರಿಂದ ಮನಸ್ಸಿಗೆ

---

೧. ಜ್ಞಾನೇಂದ್ರಿಯೇಷು ಕ್ರಿಯಾಯಜ್ಞಾನ್ ಇಂದ್ರಿಯವ್ಯಾಪಾರಾನ್ ಇಷ್ಟಾಪೂರ್ತಾದೀನ್ ಜುಹ್ವತಿ ತನ್ಮಾತ್ರತಯಾ ಭಾವಯಂತೀತ್ಯರ್ಥಃ। ಮನಸಿ ಇಂದ್ರಿಯಾಣಿ ಜುಹ್ವತಿ। ಇಂದ್ರಿಯಾಣಾಂ ಮನೋಧೀನಪ್ರವೃತ್ತಿಕತ್ವಾತ್ ತನ್ಮಾತ್ರತಯಾ ಭಾವಯಂತೀತ್ಯರ್ಥಃ। ಮನೋ ವಾಚಿ ಜುಹ್ವತಿ। ವಿಧ್ಯಾದಿಲಕ್ಷಣಯಾ ವಾಚಾ ಹಿ ಮನಃ ಕರ್ತೃತ್ವಾದಿವಿಕಾರಂ ಭಜತಿ। ನಾನ್ಯಥೇತಿ

ಅಭಿನ್ನವೆಂದು ಚಿಂತಿಸಬೇಕು. ವಿಧಿನಿಷೇಧಾತ್ಮಕವಾದ ವೇದವಾಕ್ಯದಿಂದ ಮನಸ್ಸಿನಲ್ಲಿ ಕರ್ತೃತ್ವಾದಿ ವಿಕಾರ ಉಂಟಾಗುವುದರಿಂದ ಮನಸ್ಸನ್ನು ವಾಗಭಿನ್ನವೆಂದು ಚಿಂತಿಸಬೇಕು. ವಾಙ್ಮಯವೆಲ್ಲವೂ ವರ್ಣಸಮಾಮ್ನಾಯದ ಪ್ರಕಾರಗಳಾದ್ದರಿಂದ ಅಭೇದ ಚಿಂತನೆ ಮಾಡಬೇಕು. ವರ್ಣಸಮಾಮ್ನಾಯವನ್ನು ಓಂಕಾರ ಮೂಲಕವಾದ್ದರಿಂದ ಅದಕ್ಕೆ ಅಭಿನ್ನವೆಂದು ಚಿಂತಿಸಬೇಕು. ಓಂಕಾರವನ್ನು ಬಿಂದುವಿಗೆ, ಬಿಂದುವನ್ನು ನಾದಕ್ಕೆ ನಾದವನ್ನು ಜೀವಕ್ಕೆ ಜೀವವನ್ನು ಬ್ರಹ್ಮನಿಗೆ ಅಭಿನ್ನವೆಂದೂ ಭಾವಿಸಬೇಕು' ಎಂದು.

ವೀರರಾಘವ ವ್ಯಾಖ್ಯಾನದಲ್ಲಿ- 'ಕರ್ಮೇಂದ್ರಿಯಗಳನ್ನು ಜ್ಞಾನೇಂದ್ರಿಯ ಗಳಿಂದ ನಿಯಂತ್ರಿಸಬೇಕು. ಜ್ಞಾನೇಂದ್ರಿಯಗಳನ್ನು ಮನಸ್ಸಿನಿಂದ ಮತ್ತು ಮನಸ್ಸನ್ನು ಅದು ದುರ್ಮಾರ್ಗದಲ್ಲಿ ತಿರುಗದಂತೆ ಶಾಸ್ತ್ರವಾಙ್ಮಯದಿಂದ ನಿಯಂತ್ರಿಸಬೇಕು. ಶಾಸ್ತ್ರವಾಙ್ಮಯವೆಲ್ಲವೂ ವರ್ಣಸಮಾಮ್ನಾಯದಲ್ಲಿ ಮತ್ತು ವರ್ಣಸಮಾಮ್ನಾಯ ಓಂಕಾರದಲ್ಲಿ ಅಂತರ್ಭೂತವೆಂದು ಚಿಂತಿಸಬೇಕು. ಓಂಕಾರವನ್ನು ಬಿಂದುನಾದವೆಂಬ ನಾಲ್ಕನೇ ಮಾತ್ರೆಯಲ್ಲಿ, ಬಿಂದುನಾದವನ್ನು ಪ್ರಾಣಯುಕ್ತನಾದ ಮಕಾರ ವಾಚ್ಯನಾದ ಜೀವನಲ್ಲಿ ವಾಚಕವೆಂದು ಅಂತರ್ಭಾವಗೊಳಿಸಬೇಕು. ಜೀವನನ್ನು ಪರಬ್ರಹ್ಮನಲ್ಲಿ ಸಮರ್ಪಿಸಬೇಕು' ಎಂದಿದ್ದಾರೆ.

ಇಲ್ಲಿ ಕರ್ಮೇಂದ್ರಿಯಗಳು ಜ್ಞಾನೇಂದ್ರಿಯಗಳ ಅಧೀನವಾಗಿ ಪ್ರವೃತ್ತಿ ಮಾಡುವುದರಿಂದ ಅವುಗಳಿಗೆ ಅಭೇದೋಪಾಸನೆ ಮಾಡಬೇಕು ಎನ್ನುತ್ತಾರೆ.

ಮನೋ ವಾಗಾತ್ಮತಯಾ ಭಾವಯಂತಿ। ವಾಚಂ ವರ್ಣಾನಾಂ ಸಮಾಮ್ನಾಯೇ ಸಮುದಾಯೇ ಜುಹ್ವತಿ ತದ್ವಿಶೇಷರೂಪತ್ವಾತ್ ತನ್ಮಾತ್ರತಯಾ ಭಾವಯಂತಿ। ತಂಚ ವರ್ಣಸಮುದಾಯಂ ಸ್ವರೇ ಅಕಾರಾದಿ ಸ್ವರತ್ರಯಾತ್ಮಕೇ ಓಂಕಾರೇ ಜುಹ್ವತಿ ತನ್ಮೂಲಕತಯಾ ತನ್ಮಾತ್ರತಯಾ ಭಾವಯಂತಿ। ಓಂಕಾರಂ ಬಿಂದೌ ಜುಹ್ವತಿ। ತಂ ಬಿಂದುಂ ನಾದೇ ಜುಹ್ವತಿ। ತಂ ತು ನಾದಂ ಪ್ರಾಣೇ ಸೂತ್ರಾತ್ಮನಿ, ಪ್ರಾಣಸಹಚಾರಿಣಿ ಜೀವೇ ವಾ ಜುಹ್ವತಿ। ಅಮುಂ ಜೀವಂ ಮಹತಿ ಬ್ರಹ್ಮಣಿ ಜುಹ್ವತಿ ॥ -ಗಂಗಾಸಹಾಯಃ

ಚಕ್ಷುರಾದಿಭಿರ್ಜ್ಞಾನೇಂದ್ರಿಯೈಃ ಪಾಣಿಪಾದಾದಿಕರ್ಮೇಂದ್ರಿಯಾಣಿ ನಿಯಚ್ಛೇಯು-ರಿತ್ಯರ್ಥಃ। ಇಂದ್ರಿಯಾಣಿ ಚಕ್ಷುರಾದೀನಿ ಜ್ಞಾನೇಂದ್ರಿಯಾಣಿ ಮನಸಿ ಜುಹ್ವತಿ। ಮನಸಾ ತಾನಿ ನಿಯಚ್ಛೇಯುರಿತ್ಯರ್ಥಃ। ವಾಚಿ ಶಾಸ್ತ್ರಾತ್ಮಿಕಾಯಾಂ ಮನಃ ಮನಸ ಉಚ್ಛಾಸ್ತ್ರಪ್ರವೃತ್ತಿಂ ನಿರುಂಧ್ಯಾದಿತ್ಯರ್ಥಃ। ವಾಚಂ ವರ್ಣಸಮಾಮ್ನಾಯೇ। ಪಂಚಾಶದಕ್ಷರಾತ್ಮಿಕಾಂ ಅನುಸಂದಧೀರನ್। ವರ್ಣಸಮಾಮ್ನಾಯಂ ಓಂಕಾರೇಽಂತರ್ಗತಂ ವಿದುಃ। ತಮೋಂಕಾರಂ ಬಿಂದುನಾದೇ ಚತುರ್ಥ್ಯಾಂ ಮಾತ್ರಾಯಾಂ, ಬಿಂದುನಾದಂ ಚ ಪ್ರಾಣೇ ಪ್ರಾಣಸಹಚಾರಿಣಿ ಮಕಾರವಾಚ್ಯೇ ಜೀವೇ ವಾಚಕತ್ವೇನಾಂತರ್ಭಾವಯೇಯುಃ। ಅಮುಂ ಜೀವಂ ಮಹತಿ ಮಹದಾತ್ಮನಿ ಪರಬ್ರಹ್ಮಣಿ ಸಮರ್ಪಯೇಯುರಿತಿ। -ವೀರರಾಘವಃ

ಒಂದಕ್ಕೆ ಇನ್ನೊಂದು ಅಧೀನವಾಗಿರುವಾಗ ಭೇದವೇ ಆವಶ್ಯಕ. ಆದರೂ ಅಭೇದವ್ಯವಹಾರವಿದೆ. ಅದು ವ್ಯವಹಾರ, ಶಬ್ದಪ್ರಯೋಗಮಾತ್ರ. ಶಬ್ದಕ್ಕೆ ಅಭೇದ ಅರ್ಥವಲ್ಲ. ಇಲ್ಲಿ ಮುಮುಕ್ಷು ಪ್ರಾಣೋತ್ಕ್ರಮಣಕಾಲದಲ್ಲಿ ಪರಸ್ಪರ ಭಿನ್ನವಾದ ಪದಾರ್ಥಗಳಿಗೆ ಅಭೇದವನ್ನು ಚಿಂತಿಸಬೇಕೆಂದು ವಿಧಿಸುವುದು ಸರ್ವಥಾ ಅನುಚಿತ. ಅಸದುಪಾಸನೆ ಅನರ್ಥಕರ.

ವೀರರಾಘವ ವ್ಯಾಖ್ಯಾನದಲ್ಲಿ ಕರ್ಮೇಂದ್ರಿಯದಿಂದ ತೊಡಗಿ ವಾಕ್ಕಿನ ವರೆಗೂ ಉಪಾಸನೆಯೇ ಇಲ್ಲ, ಇಂದ್ರಿಯ ಮನಸ್ಸುಗಳನ್ನು ಶಾಸ್ತ್ರವಚನಗಳಿಂದ ನಿಯಂತ್ರಿಸಬೇಕು. ಇದು ಪ್ರಾಣೋತ್ಕ್ರಮಣ ಕಾಲದಲ್ಲಿ ಮಾಡಬಹುದಾದ ಕಾರ್ಯವಲ್ಲ. ಮೊದಲೇ ಮಾಡಿರಬೇಕು. ಮತ್ತು ಕ್ರಿಯಾಯಜ್ಞ ಜ್ಞಾನದೀಪಗಳನ್ನು ನಿಯಂತ್ರಿಸುವುದೂ ಉಚಿತವಲ್ಲ. ಶಾಸ್ತ್ರವಚನ ವರ್ಣಸಮಾಮ್ನಾಯ ಓಂಕಾರ ಬಿಂದುನಾದಗಳನ್ನು ಕ್ರಮವಾಗಿ ಅಂತರ್ಭಾವ ಮಾಡುತ್ತ ಬಿಂದುನಾದವನ್ನು ಜೀವನಲ್ಲಿ ನ್ಯಾಸ ಮಾಡಬೇಕು, ಹೇಗೆ ಎಂಬುದು ಸ್ಪಷ್ಟವಿಲ್ಲ. ವಾಚಕತ್ವೇನ ಅಂತರ್ಭಾವ ಮಾಡಬೇಕೆಂದಿದ್ದಾರೆ.

ಈ ಎರಡೂ ವ್ಯಾಖ್ಯಾನಗಳಲ್ಲಿ ಜಡವಾದ ತತ್ವಗಳ ಚಿಂತನೆ ಇದೆ. ಅಭಿಮಾನಿ ದೇವತೆಗಳ ಚಿಂತನೆ ಇಲ್ಲ. ಜಡಪದಾರ್ಥಗಳ ಈ ಉಪಾಸನೆಯೂ ಅನರ್ಥಕರವೆ.

ಅಚೇತನಾಸತ್ಯಾಯೋಗ್ಯಾನ್ಯನುಪಾಸ್ಯಾನಿ
ಅಫಲತ್ವವಿಪರ್ಯಯಾಭ್ಯಾಂ ||

ಎಂದು ಸಂಕರ್ಷಣ ಸೂತ್ರದಲ್ಲಿ ನಿಷಿದ್ಧವಾಗಿದೆ. ಮತ್ತು ಭಾಗವತದಲ್ಲಿ ಹೇಳಿದ ಲಯಚಿಂತನೆಯನ್ನು ಸ್ಪಷ್ಟವಾಗಿ ಬ್ರಹ್ಮತರ್ಕವಚನವೊಂದು ವ್ಯಾಖ್ಯಾನಿಸಿದೆ. ಅದನ್ನು ಅಲಕ್ಷ್ಯ ಮಾಡಿ ತಮಗೆ ತೋಚಿದಂತೆ ವ್ಯಾಖ್ಯಾನಿಸುವುದು ಭಾಗವತಕ್ಕೆ ಅಪಚಾರವಾಗುತ್ತದೆ.

ಯಜ್ಞಾಭಿಮಾನಿನೋ ದೇವಾನ್ ಸ್ಮರಂತೀಂದ್ರಿಯಮಾನಿನಾಂ ।
ವಶಗಾಂಸ್ತಾನ್ ಮನೋಮಾನಿಸುರೇಂದ್ರಸ್ಯ ವಶೇ ಸ್ಥಿತಾನ್ ।
ವೇದಾತ್ಮಿಕಾಯಾಃ ಪಾರ್ವತ್ಯಾಸ್ತಂ ತಾಂ ರುದ್ರವಶೇ ಸ್ಥಿತಾಂ ।
ವರ್ಣತ್ರಯಾತ್ಮಕಂ ರುದ್ರಂ ಶೇಷೇ ತು ಪ್ರಣವಾತ್ಮಕೇ ।
ಬಿಂದುರೂಪಸರಸ್ವತ್ಯಾಂ ತಂ ತಾಂ ತಸ್ಯಾಂ ಪುನರ್ನ್ಯಸೇತ್ ।
ಮೂಲಸ್ಥನಾದರೂಪಾಯಾಂ ತಾಂ ವಾಯೌ ತಂ ಜನಾರ್ದನೇ ।
ಪ್ರಕೃತಾವಥ ವಾ ಪ್ರಾಣಂ ತಾಮೇವ ಪುರುಷೋತ್ತಮೇ ।

ಇತಿ ಬ್ರಹ್ಮತರ್ಕೇ ॥

ಯಜ್ಞಾಭಿಮಾನಿ ದೇವತೆಗಳನ್ನು ಇಂದ್ರಿಯಾಭಿಮಾನಿಗಳ ವಶದಲ್ಲಿರುವವರೆಂದೂ ಅವರನ್ನು ಮನೋಭಿಮಾನಿ ಇಂದ್ರನ ಅಧೀನರೆಂದೂ ಇಂದ್ರನನ್ನು ವೇದಾಭಿಮಾನಿ ಪಾರ್ವತಿಯ ಅಧೀನನೆಂದೂ ಪಾರ್ವತಿಯನ್ನೂ ರುದ್ರವಶದಲ್ಲಿರುವವಳೆಂದೂ ಅಕಾರ ಉಕಾರ ಮಕಾರ ರೂಪ ವರ್ಣತ್ರಯಾಭಿಮಾನಿಯಾದ ಆ ರುದ್ರನನ್ನು ಓಂಕಾರಾಭಿಮಾನಿ ಶೇಷನ ಅಧೀನನೆಂದೂ ಶೇಷನನ್ನು ಬಿಂದು ಅಭಿಮಾನಿಯಾದ ಸರಸ್ವತಿಯ ಒಂದು ರೂಪದ ಅಧೀನನೆಂದೂ ಆ ರೂಪವನ್ನು ಮೂಲರೂಪದಿಂದಿರುವ ನಾದಾಭಿಮಾನಿ ಸರಸ್ವತಿಯ ಅಧೀನವೆಂದೂ ಸರಸ್ವತಿಯನ್ನು ಬ್ರಹ್ಮನ ಅಧೀನಳೆಂದೂ ಬ್ರಹ್ಮನನ್ನು ಜನಾರ್ದನನ ಅಧೀನನೆಂದೂ ಚಿಂತಿಸಬೇಕು. ಅಥವಾ ನಾದಾಭಿಮಾನಿ ಭಾರತಿಯನ್ನು ವಾಯುವಿನ ಅಧೀನಳೆಂದೂ ವಾಯುವನ್ನು ಜಯಾರೂಪ ಲಕ್ಷ್ಮಿಯ ಅಧೀನನೆಂದೂ, ಆ ಲಕ್ಷ್ಮಿಯನ್ನು ಸಂಕರ್ಷಣರೂಪಿ ಹರಿಯ ಅಧೀನಳೆಂದೂ ಚಿಂತಿಸಬೇಕು ಎಂದು

ಬ್ರಹ್ಮತರ್ಕದಲ್ಲಿ ಉಕ್ತವಾಗಿದೆ.

❖ ❖ ❖

ಅರ್ಚಿರಾದಿ ಮಾರ್ಗಾಭಿಮಾನಿ ದೇವತೆಗಳನ್ನು ನಾರದರು ಧರ್ಮರಾಜನಿಗೆ ಹೇಳುತ್ತಾರೆ.

ಅಗ್ನಿಃ ಸೂರ್ಯೋ ದಿವಾ ವಾಯುಃ ಶುಕ್ಲೋ ರಾಕೋತ್ತರಃ ಸ್ವರಾಟ್ ॥೫೪॥

ವಿಶ್ವೋಽಥ ತೈಜಸಃ ಪ್ರಾಜ್ಞಸ್ತುರ್ಯ ಆತ್ಮಾ ಸಮನ್ವಯಃ ।
ದೇವಯಾನಮಿದಂ ಪ್ರಾಹುರ್ಭೂತ್ವಾಭೂತ್ವಾನುಪೂರ್ವ್ಯಶಃ ।
ಆತ್ಮಯಾಜ್ಯುಪಶಾಂತಾತ್ಮಾ ಹ್ಯಾತ್ಮಸ್ಥೋ ನ ನಿವರ್ತತೇ ॥ ೫೫ ॥

ಅರ್ಚಿರ್ಲೋಕದಲ್ಲಿ ಅಗ್ನಿ ಮತ್ತು ಜ್ಯೋತಿ ಎಂಬ ಎರಡು ರೂಪಗಳಿಂದಿರುವ ಅಗ್ನಿ ಕ್ರಮವಾಗಿ ಜ್ಞಾನಿಗೆ ಲಭ್ಯನಾಗುತ್ತಾನೆ. ಬಳಿಕ ಆತಿವಾಹಿಕ ವಾಯು, ಅಭಿಜಿತ್, ದಿವಾ, ಶುಕ್ಲಪಕ್ಷ, ರಾಕಾ, ಉತ್ತರಾಯಣ, ಸಂವತ್ಸರ, ತಟಿತ್, ವರುಣ ಪ್ರಜಾಪತಿಗಳ ದ್ವಾರಾ ಸೂರ್ಯ, ಸೋಮ ವೈಶ್ವಾನರದ್ವಾರಾ ಇಂದ್ರಲೋಕ.

ಬಳಿಕ ಧ್ರುವಲೋಕದಾಚೆ ವಿಶ್ವ ತೈಜಸ ಪ್ರಾಜ್ಞರೆಂಬ ಮೂವರು ಭಾರತೀಪುತ್ರರು. ಬಳಿಕ ಅನಿರುದ್ಧ ಪ್ರದ್ಯುಮ್ನ ಸಂಕರ್ಷಣರೆಂಬ

ಮೂವರು ಭಾರತೀ ಪುತ್ರರು, ಬಳಿಕ ಜ್ಞಾನಿ ಭಾರತಿಯ ಸಮೀಪಕ್ಕೆ ಹೋಗಿ ಮುಖ್ಯಪ್ರಾಣನ ಬಳಿ ಸೇರುತ್ತಾನೆ. ಅಲ್ಲಿಂದ ವೈಕುಂಠದಲ್ಲಿ ಆತ್ಮನ ಅಂದರೆ ಪರಮಾತ್ಮನ ಬಳಿಗೆ ಹೋಗಿ ಬ್ರಹ್ಮನೊಂದಿಗೆ ಬ್ರಹ್ಮಾಂಡದಿಂದ ಹೊರಗೆ ನವಾವರಣಗಳನ್ನು ದಾಟಿದಾಗ ಕ್ರಮವಾಗಿ ವಿಶ್ವತೈಜಸ ಪ್ರಾಜ್ಞ ತುರೀಯ ಎಂಬ ನಾಲ್ಕು ಭಗವದ್ರೂಪಪ್ರಾಪ್ತಿ. ಬಳಿಕ ಅನಿರುದ್ಧ ಪ್ರದ್ಯುಮ್ನ ಸಂಕರ್ಷಣ ವಾಸುದೇವ ಎಂಬ ನಾಲ್ಕು ಭಗವದ್ರೂಪ ಪ್ರಾಪ್ತಿ ಬಳಿಕ ಸಮನ್ವಯ ಆತ್ಮನೆಂದರೆ ಎಲ್ಲ ಅವತಾರಗಳೂ ಒಂದಾಗಿ ಬಂದು ಸೇರುವ ಸರ್ವವ್ಯಾಪ್ತವಾದ ನಾರಾಯಣ ಎಂಬ ಭಗವದ್ರೂಪ ಪ್ರಾಪ್ತಿ. ಇದನ್ನು ದೇವಯಾನ ಎನ್ನುತ್ತಾರೆ. ಇಲ್ಲಿ ಕ್ರಮವಾಗಿ ಒಂದಕ್ಕಿಂತ ಇನ್ನೊಂದು ಅಧಿಕ ಸುಖ ಉಳ್ಳಲೋಕ. ಅದರಿಂದ ಪುನಃ ಪುನಃ ಅಧಿಕ ಸುಖಿಯಾಗಿ ಜ್ಞಾನಿ ಪರಮಾತ್ಮನನ್ನು ಆರಾಧಿಸುತ್ತ ವಿಷಯವಾಸನಾರಹಿತವಾದ ಮನಸಿನಿಂದ ಭಗವಂತನಲ್ಲಿಯೇ ನೆಲೆಸುತ್ತಾನೆ. ಸಂಸಾರಕ್ಕೆ ಹಿಂದಿರುಗಿ ಬರುವುದಿಲ್ಲ.

[೧]ಇಲ್ಲಿ ಬೇರೆ ವ್ಯಾಖ್ಯಾನಕಾರರ ಪ್ರಕಾರ ಅರ್ಚಿರಾದಿ ಮಾರ್ಗ 'ಸ್ವರಾಟ್' ಎಂಬಲ್ಲಿಯೇ ಮುಗಿದು ಹೋಗುತ್ತದೆ. ಮುಂದೆ ಹೇಳುವುದು ಆ ಮಾರ್ಗದಿಂದ

---

೧. ಸ್ವರಾಟ್ ಬ್ರಹ್ಮಾ। ಏವಂ ಬ್ರಹ್ಮಲೋಕಂ ಗತಸ್ಯ ಭೋಗಾವಸಾನೇ ಮೋಕ್ಷ ಪ್ರಕಾರಮಾಹ ವಿಶ್ವಇತಿ। ವಿಶ್ವಃ ಸ್ಥೂಲೋಪಾಧಿಃ। ಸ ಸ್ಥೂಲಂ ಸೂಕ್ಷ್ಮೇ ವಿಲಾಪ್ಯ ಸೂಕ್ಷೋಪಾಧಿಸ್ತೈಜಸೋ ಭವತಿ। ಸೂಕ್ಷ್ಮಂ ಕಾರಣೇ ವಿಲಾಪ್ಯ ಕಾರಣೋಪಾಧಿಃ ಪ್ರಾಜ್ಞೋ ಭವತಿ। ಕಾರಣಂ ಚ ಸರ್ವಸಾಕ್ಷಿತ್ವೇನಾನ್ವಯಾತ್ ಸಾಕ್ಷಿಸ್ವರೂಪೇ ವಿಲಾಪ್ಯ ತುರ್ಯೋ ಭವತಿ। ತೇಷಾಂ ಚ ವ್ಯಭಿಚಾರಿಣಾಂ ಸಾಕ್ಷ್ಯಾಣಾಂ ಲಯೇ ಶುದ್ಧ ಆತ್ಮಾ ಭವತಿ ಮುಚ್ಯತ ಇತ್ಯರ್ಥಃ। -ಶ್ರೀಧರಃ

ಏವಂ ಮುಕ್ತಪ್ರಾಪ್ಯ ಭಗವಲ್ಲೋಕ ಮಾರ್ಗೋ ದರ್ಶಿತಃ। ತತ್ರ ಪ್ರಾಪ್ಯಸ್ಯ ಭಗವತಶ್ಚತುರ್ವ್ಯೂಹವಿಶಿಷ್ಟತಾಮಾಹ ವಿಶ್ವಇತಿ। ಸೃಷ್ಟ್ಯಧಿಷ್ಠಾತಾ ಜಾಗ್ರದವಸ್ಥಾ-ನಿರ್ವಾಹಕೋಽನಿರುದ್ಧೋ ವಿಶ್ವಃ। ಸ್ಥಿತ್ಯಧಿಷ್ಠಾತಾ ಸ್ವಪ್ನನಿರ್ವಾಹಕಃ ಪ್ರದ್ಯುಮ್ನಸ್ತೈಜಸಃ। ಸಂಹೃತಿಶಕ್ತ್ಯಧಿಷ್ಠಾತಾ ಸುಷುಪ್ತಿನಿರ್ವಾಹಕಃ ಸಂಕರ್ಷಣಃ ಪ್ರಾಜ್ಞಃ। ಏತೇ ಚಾಕಾರೋಕಾರ ಮಕಾರವಾಚ್ಯಾಃ। ಸರ್ವಕಾರಣಭೂತಃ ಸರ್ವಶಕ್ತಿ ಮೋಕ್ಷಪ್ರದಃ ಪ್ರಣವಾರ್ಧಮಾತ್ರಾವಾಚ್ಯೋ ವಾಸುದೇವಸ್ತುರ್ಯಃ। ಇದಂ ಪ್ರದರ್ಶನಾರ್ಥಮುಕ್ತಂ। ಪರ ವ್ಯೂಹ ವಿಭವಾದಿ ಸರ್ವಾವಸ್ಥಾವಿಶಿಷ್ಟೋ ಭಗವಾನ್ ಮುಕ್ತಪ್ರಾಪ್ಯ ಇತ್ಯರ್ಥಃ। -ವೀರರಾಘವಃ

ಸ್ವರಾಟ್ ಪ್ರಜಾಪತಿಃ। ಏವಂ ಮಾರ್ಗಂ ಸೂಚಯಿತ್ವಾ ಗಂತುಃ ಸ್ವರೂಪಂ ಸರ್ವಾವಸ್ಥಾಸಾಕ್ಷಿತ್ವೇನ ದರ್ಶಯತಿ– ವಿಶ್ವಇತ್ಯರ್ಧೇನ। ವಿಶ್ವೋ ಜಾಗ್ರದವಸ್ಥಾಸಾಕ್ಷೀ। ಸ ಏವ ತೈಜಸಃ ಸ್ವಪ್ನಾವಸ್ಥಾಸಾಕ್ಷೀ। ಸ ಏವ ಪ್ರಾಜ್ಞಃ ಸುಷುಪ್ತ್ಯವಸ್ಥಾಸಾಕ್ಷೀ। ಅತ ಏವ ತಿಸೃಷ್ವವಸ್ಥಾಸು ಸಮನ್ವಯಾತ್ ಅನುಗತತ್ವಾತ್ ತುರ್ಯಃ ಅವಸ್ಥಾತ್ರಯಭಿನ್ನ ಆತ್ಮಾ ಜೀವಾತ್ಮೇತ್ಯನ್ವಯಃ। -ಶುಕದೇವಃ

ಪ್ರಾಪ್ಯವಾದ ಜೀವಸ್ವರೂಪ ಅಥವಾ ಭಗವದ್ರೂಪ. ಏಕೆಂದರೆ ವಿಶ್ವ ತೈಜಸ ಪ್ರಾಜ್ಞ ತುರ್ಯ ಎಂದರೆ ಶ್ರೀಧರವ್ಯಾಖ್ಯಾನದ ಅಭಿಪ್ರಾಯದಲ್ಲಿ ಜೀವಾತ್ಮನೆ. ಸ್ಥೂಲಶರೀರಿ ಯಾದ ಜೀವಾತ್ಮನಿಗೆ ವಿಶ್ವ ಎಂದು ಹೆಸರು. ಅವನು ಸ್ಥೂಲಶರೀರಾಭಿಮಾನವನ್ನು ತೊರೆದು ಸೂಕ್ಷ್ಮಶರೀರಾಭಿಮಾನಿಯಾಗಿ ಉಳಿದಾಗ ತೈಜಸನೆನಿಸುತ್ತಾನೆ. ಮುಂದೆ ಸೂಕ್ಷ್ಮ ಶರೀರಾಭಿಮಾನವನ್ನು ತೊರೆದು ಅದಕ್ಕೂ ಕಾರಣವಾದ ಅವಿದ್ಯೆಯಿಂದ ಮಾತ್ರ ಯುಕ್ತನಾದರೆ ಆಗ ಪ್ರಾಜ್ಞನೆನಿಸುತ್ತಾನೆ. ಅವಿದ್ಯೆಯನ್ನು ತೊರೆದಾಗ ತುರ್ಯನಾಗಿ ಬ್ರಹ್ಮೈಕ್ಯ ಹೊಂದುತ್ತಾನೆ.

ಆದರೆ ಭಾಗವತದಲ್ಲಿ 'ದೇವಯಾನಮಿದಂ ಪ್ರಾಹುಃ' ದೇವತೆಗಳಿಂದ ಅಭಿಮನ್ಯಮಾನವಾದ ಮಾರ್ಗವಿದು ಎಂದು ಹೇಳಿದೆ. ಈ ಮಾರ್ಗವನ್ನು 'ಸ್ವರಾಟ್' ಎಂದರೆ ಬ್ರಹ್ಮನ ಲೋಕ ಎಂದು ಹೇಳಿ ಅಲ್ಲಿಗೇ ಮೊಟಕುಗೊಳಿಸಿ ಮುಂದೆ ಪ್ರಾಪ್ಯ ಜೀವಸ್ವರೂಪ ವರ್ಣನೆ ಎಂದೆನ್ನುವುದು ಸ್ವರಸವಲ್ಲ. ಅದರಿಂದ 'ಸ್ವರಾಟ್' ಎಂದರೆ ಚತುರ್ಮುಖ ಬ್ರಹ್ಮನೆಂದು ಇವರು ವ್ಯಾಖ್ಯಾನಿಸುವುದು ಸರಿಯಲ್ಲ.

ಶುಕದೇವ ವ್ಯಾಖ್ಯಾನದಲ್ಲಿಯೂ 'ಸ್ವರಾಟ್' ಚತುರ್ಮುಖಬ್ರಹ್ಮನೆ. ಮುಂದೆ ಹೇಳುವುದು ವಿಶ್ವಾದಿ ನಾಮಗಳಿಂದ ಜೀವ ಸ್ವರೂಪವನ್ನೆ. ಜಾಗ್ರದವಸ್ಥೆಯಲ್ಲಿರುವ ಜೀವ ವಿಶ್ವ. ಸ್ವಪ್ನಾವಸ್ಥೆಯಲ್ಲಿ ಅವನೇ ತೈಜಸ. ಸುಷುಪ್ತ್ಯವಸ್ಥೆಯಲ್ಲಿ ಅವನೆ ಪ್ರಾಜ್ಞ. ಅವಸ್ಥಾತ್ರಯಾತೀತನಾದ ಅವನೇ ತುರ್ಯ.

ವೀರರಾಘವ ವ್ಯಾಖ್ಯಾನದಲ್ಲಿಯೂ 'ಸ್ವರಾಟ್' ಚತುರ್ಮುಖ ಬ್ರಹ್ಮನೆ. ಆದರೆ ವಿಶ್ವಾದಿಗಳು ಭಗವದ್ರೂಪಗಳು. ಸೃಷ್ಟಿಕರ್ತ ಅನಿರುದ್ಧ ಜಾಗ್ರದವಸ್ಥಾ ನಿಯಾಮಕನಾಗಿ ವಿಶ್ವನೆನಿಸುತ್ತಾನೆ. ಸ್ಥಿತಿಕರ್ತ ಪ್ರದ್ಯುಮ್ನ ಸ್ವಪ್ನಾವಸ್ಥಾ ನಿಯಾಮಕ ನಾಗಿ ತೈಜಸನೆನಿಸುತ್ತಾನೆ. ಲಯಕರ್ತಸಂಕರ್ಷಣ ಸುಷುಪ್ತ್ಯವಸ್ಥಾ ನಿಯಾಮಕನಾಗಿ ಪ್ರಾಜ್ಞನೆನಿಸುತ್ತಾನೆ. ಸರ್ವಕರ್ತ ಮೋಕ್ಷದಾಯಕನಾದ ವಾಸುದೇವ ತುರ್ಯ ನೆನಿಸುತ್ತಾನೆ. ಇದು ಕೇವಲ ದಿಕ್ಪ್ರದರ್ಶನ. ಸರ್ವಾವಸ್ಥಾ ವಿಶಿಷ್ಟವಾದ ಅಂದರೆ ಪರ, ವ್ಯೂಹ, ವಿಭವ ಮುಂತಾದ ಎಲ್ಲ ಅವಸ್ಥೆಗಳಲ್ಲಿರುವ ಭಗವಂತ ಮೋಕ್ಷದಲ್ಲಿ ಲಭ್ಯನಾಗುತ್ತಾನೆ ಎನ್ನುತ್ತಾರೆ.

ಈ ವ್ಯಾಖ್ಯಾನಕಾರರು ಯಾರೂ ವಿಶ್ವ ತೈಜಸ ಪ್ರಾಜ್ಞರೆಂದು ಮೂವರು ಅರ್ಚಿರಾದಿ ಮಾರ್ಗದೇವತೆಗಳು ಬೇರೆ ಇರುವುದನ್ನು ಗಮನಿಸಿಲ್ಲ. ಬ್ರಹ್ಮತರ್ಕದಲ್ಲಿ ಅದು ಸ್ಪಷ್ಟವಿದೆ. ಅದರಿಂದ 'ಸ್ವರಾಟ್' ಎಂಬಲ್ಲಿಯೇ ಅರ್ಚಿರಾದಿ ಮಾರ್ಗ ನಿರೂಪಣೆ ಮುಕ್ತಾಯವಾಗಿಲ್ಲ. 'ಸ್ವರಾಟ್' ಎಂದರೆ ಚತುರ್ಮುಖ

ಬ್ರಹ್ಮಲೋಕವಲ್ಲ, ಇಂದ್ರಲೋಕ ಎನ್ನಬೇಕು. ಇಂದ್ರಲೋಕದಿಂದ ಮುಂದೆ ಮಾರ್ಗದಲ್ಲಿ ವಿಶ್ವಾದಿಗಳ ಲೋಕಗಳನ್ನು ದಾಟಿಯೇ ಕೊನೆಯಲ್ಲಿ ಬ್ರಹ್ಮಲೋಕಕ್ಕೆ ಹೋಗಬೇಕು. ಅಲ್ಲಿಂದ ಮುಂದೆ ವಿಶ್ವಾದಿ ಭಗವದ್ರೂಪ ಪ್ರಾಪ್ತಿಯೂ ಇದೆ. ಅದೂ ಮಾರ್ಗವೆ. ಕೊನೆಯಲ್ಲಿ ಸರ್ವಾವತಾರಗಳ ಮೂಲವಾದ, ವ್ಯಾಪ್ತವಾದ ನಾರಾಯಣರೂಪ ಪ್ರಾಪ್ತಿ ಇದೆ.

'ಸ್ವರಾಟ್' ಎಂದರೆ 'ಸ್ವರ್ ರಾಟ್' ಸ್ವರ್ಗಲೋಕದ ರಾಜ ಇಂದ್ರ ಎಂದು ವಿವರಣೆ ನೀಡಿದರೆ ಒಂದು ಸಮಸ್ಯೆ ಇದಿರಾಗುತ್ತದೆ. 'ಸ್ವರ್‌ರಾಟ್' ಎಂಬಲ್ಲಿ ರೇಫ ಲೋಪದಿಂದ ದೀರ್ಘ ಬಂದರೆ 'ಸ್ವಾರಾಟ್' ಎಂದಾಗುತ್ತದೆ. ಸ್ವರಾಟ್ ಎಂದಲ್ಲ. ಅದಕ್ಕೆ 'ಸ್ವರ್ ಆ ಅಟ್' ಸ್ವರ್ಗದಲ್ಲಿ ಚೆನ್ನಾಗಿ, ಅಂದರೆ ಅಧಿಪತಿಯಾಗಿ ಓಡಾಡುವವನು ಎಂದು ವ್ಯುತ್ಪತ್ತಿ ಹೇಳಬೇಕು. ರಾಜ್ ದೀಪ್ತೌ ಧಾತುವಲ್ಲ. ಆಙ ಉಪಸರ್ಗಪೂರ್ವಕ ಅಟ ಗತೌ ಧಾತು. ಎಂದು ಸತ್ಯಧರ್ಮತೀರ್ಥರು ಹೇಳುತ್ತಾರೆ.

ಸ್ವರಾಡಿಂದ್ರಃ ।

ಅರ್ಚಿರಾದಿಮಾರ್ಗ ದೇವತೆಯಾಗಿ ಭಾಗವತದಲ್ಲಿ ಉಕ್ತನಾದ ಸ್ವರಾಟ್ ಎಂದರೆ ದೇವೇಂದ್ರ.

ವಿಶ್ವಾದ್ಯಾ ಅನಿರುದ್ಧಾದ್ಯಾಸ್ತೇ ದ್ವಿಧಾ ಸಂಪ್ರಕೀರ್ತಿತಾಃ ।

ವಿಷ್ಣುರೂಪಾಸ್ತದನ್ಯೇ ಚ ತಾನ್ ಸರ್ವಾನ್ ಯಾತಿ ಮೋಕ್ಷಗಃ

ತದನ್ಯೇ ಚ ದಿವಸ್ಪುತ್ರಾ ಸರ್ವೇ ಚ ದ್ಯುಸಮೀಪಗಾಃ

ತೇ ದಿವಂ ಪ್ರಾಪಯಂತ್ಯೇನಂ ಸಾ ವಾಯುಂ ಸೆ ಹರಿಂ ಪೃಥಕ್

ವಿಶ್ವಾದಿರೂಪಂ ತುರ್ಯಶ್ಚ ವಾಸುದೇವಶ್ಚ ನಾಪರಃ॥ ಇತಿ ಚ ॥

ಅಧಿಕೋ ಭೂತ್ವಾ ಸುಖಾದಿಭಿಃ ।

ವಿಶ್ವ ತೈಜಸ ಪ್ರಾಜ್ಞರೆಂದೂ ಅನಿರುದ್ಧ ಪ್ರದ್ಯುಮ್ನ ಸಂಕರ್ಷಣರೆಂದೂ ಇವರೆಲ್ಲರೂ ವಿಷ್ಣುರೂಪರು ಮತ್ತು ಬೇರೆಯವರೆಂದು ಎರಡು ಬಗೆಯವರಿದ್ದಾರೆ. ಮೋಕ್ಷಕ್ಕೆ ಹೋಗುವ ಜ್ಞಾನಿಯು ಮಾರ್ಗ ಮಧ್ಯದಲ್ಲಿ ಇವರನ್ನು ಎಲ್ಲರನ್ನೂ ಹೊಂದುತ್ತಾನೆ. ವಿಷ್ಣುರೂಪರಲ್ಲದ ಬೇರೆ ವಿಶ್ವಾದಿ ಮತ್ತು ಅನಿರುದ್ಧಾದಿ ಎಂದು ಆರು ಮಂದಿ ದೇವತೆಗಳು ದ್ಯುನಾಮಕಳಾದ ಭಾರತೀದೇವಿಯ ಪುತ್ರರು. ಅವಳ ಲೋಕಕ್ಕೆ ಸಮೀಪದಲ್ಲಿಯೇ ಇವರಿರುತ್ತಾರೆ. ಇವರು ಅವಳ ಲೋಕಕ್ಕೆ ಜ್ಞಾನಿಯನ್ನು ಕಳಿಸುತ್ತಾರೆ. ಅವಳು ವಾಯುಲೋಕಕ್ಕೆ ಕಳಿಸುತ್ತಾಳೆ, ವಾಯು ವಿಶ್ವಾದಿರೂಪನಾದ

ಹರಿಯ ಬಳಿಗೆ ಕಳಿಸುತ್ತಾನೆ. ಮುಂದೆ ವಿಶ್ವ ತೈಜಸ ಪ್ರಾಜ್ಞ ಅನಿರುದ್ಧ ಪ್ರದ್ಯುಮ್ನ ಸಂಕರ್ಷಣ ತುರ್ಯ ವಾಸುದೇವ ಎಂದು ಕ್ರಮವಾಗಿ ಜ್ಞಾನಿಗೆ ಭಗವದ್ರೂಪಗಳ ಪ್ರಾಪ್ತಿಯಾಗುತ್ತದೆ. ತುರ್ಯ ಮತ್ತು ವಾಸುದೇವ ಎಂದು ಎರಡೂ ಭಗವದ್ರೂಪಗಳೇ ಹೊರತು ಬೇರೆ ದೇವತೆಗಳು ಈ ಹೆಸರಿನವರಿಲ್ಲ ಎಂದು ಬ್ರಹ್ಮತರ್ಕದಲ್ಲಿ ಹೇಳಿದೆ.

'ಭೂತ್ವಾಭೂತ್ವಾ' ಎಂದರೆ ಅರ್ಚಿರಾದಿ ಮಾರ್ಗದಲ್ಲಿ ಜ್ಞಾನಿಯು ಮುಂದೆ ಮುಂದೆ ಹೋಗುತ್ತಿದ್ದಂತೆ ಕ್ರಮವಾಗಿ ಹೆಚ್ಚು ಹೆಚ್ಚು ಸುಖಾದ್ಯನುಭವ ಹೊಂದುತ್ತ ಮುಂದುವರಿಯುತ್ತಾನೆ ಎಂದರ್ಥ.

❖ ❖ ❖

ಪಿತೃಯಾನ ದೇವಯಾನ ಮಾರ್ಗಗಳನ್ನು ಶಾಸ್ತ್ರದಿಂದ ಸರಿಯಾಗಿ ತಿಳಿದವನು ಅಜರ ನಡುವೆ ಇದ್ದರೂ ಮೋಹಕ್ಕೊಳಗಾಗಿ ಅಧಃಪತನ ಹೊಂದುವುದಿಲ್ಲ ಎಂದು ನಾರದರು ಧರ್ಮರಾಜನಿಗೆ ಹೇಳುತ್ತಾರೆ.

ಯ ಏತೇ ಪಿತೃದೇವಾನಾಮಯನೇ ದೇವನಿರ್ಮಿತೇ ॥
ಶಾಸ್ತ್ರೇಣ ಚಕ್ಷುಷಾ ವೇದ ಜನಸ್ಥೋಽಪಿ ನ ಮುಹ್ಯತಿ ॥ ೫೬ ॥

ಈ ಪಿತೃಯಾನ ದೇವಯಾನಗಳು ಭಗವಂತನಿಂದ ನಿರ್ಮಿತವಾಗಿವೆ. ಇವುಗಳನ್ನು ಶಾಸ್ತ್ರವೆಂಬ ಕಣ್ಣಿಂದ ನೋಡುವವನು ಅಜ್ಞಜನ ಸಮೂಹದ ನಡುವೆ ಇದ್ದರೂ ಮೋಹಕ್ಕೊಳಗಾಗಿ ಅಧಃಪತನ ಹೊಂದುವುದಿಲ್ಲ, ಮುಕ್ತಿಯನ್ನೇ ಪಡೆಯುತ್ತಾನೆ.

ಈ ಮಾರ್ಗಗಳನ್ನು ಸರಿಯಾಗಿ ತಿಳಿದವನು ಭಗವದ್ಭಕ್ತನಾಗಿದ್ದರೆ ಅವನು ಅಜಜನರ ನಡುವೆ ವಾಸವಾಗಿದ್ದರೂ ಮರಣಕಾಲದಲ್ಲಿ ಮೋಹಗೊಳ್ಳದೆ ಅರ್ಚಿರಾದಿ ಮಾರ್ಗವನ್ನು ಪ್ರತ್ಯಕ್ಷ ಕಾಣುತ್ತಾನೆ. ಪರಮಾತ್ಮ ತನ್ನ ಪ್ರಕಾಶದಿಂದ ಈ ಮಾರ್ಗವನ್ನು ಆತನಿಗೆ ತೋರಿಸುತ್ತಾನೆ. ಅದರಿಂದ ಆತ ಪ್ರಯಾಣ ಮಾಡಿ ಮುಕ್ತಿ ಪಡೆಯುತ್ತಾನೆ.

ಬೇರೆ ವ್ಯಾಖ್ಯಾನಕಾರರು 'ಎರಡೂ ಮಾರ್ಗಗಳನ್ನು ಶಾಸ್ತ್ರಗಳಲ್ಲಿ ಬೇರೆ ಬೇರೆಯಾಗಿ ಸ್ಪಷ್ಟವಾಗಿ ನಿರೂಪಿಸಿರುವುದರಿಂದ ಅದರ ಬಗ್ಗೆ ಮೋಹ ಹೊಂದಲು ಅವಕಾಶವಿಲ್ಲ' ಎನ್ನುತ್ತಾರೆ. ಆದರೆ ಶಾಸ್ತ್ರದಿಂದ ಮಾರ್ಗಗಳನ್ನು ಚೆನ್ನಾಗಿ ತಿಳಿದರೂ ಕೂಡ ಮರಣಕಾಲದಲ್ಲಿ ತನಗೆ ಬೇಕಾದ ಅರ್ಚಿರಾದಿ ಮಾರ್ಗವನ್ನೆ ಪ್ರತ್ಯಕ್ಷ

ಕಾಣಬೇಕೆಂದರೆ ಭಗವಂತನ ಭಕ್ತಿ ಬೇಕು. ಇಲ್ಲದಿದ್ದರೆ ಮಾರ್ಗಗಳನ್ನು ತಿಳಿದವರೆಲ್ಲರೂ ಮೋಕ್ಷಕ್ಕೆ ಹೋಗುವ ಪ್ರಸಂಗವಿದೆ.

ಭಕ್ತಿಮಾನ್ ಮಾರ್ಗವಿನ್ನೈವ ನೀಚಾಂ ಗತಿಮವಾಪ್ನುಯಾತ್।
ಇತಿ ಚ ॥

ಮಾರ್ಗಗಳನ್ನು ತಿಳಿದವನು ಭಕ್ತಿ ಉಳ್ಳವನಾದರೆ ದುರ್ಗತಿ ಹೊಂದುವುದಿಲ್ಲ ಎಂದೂ ಉಕ್ತವಾಗಿದೆ.

❖ ❖ ❖

ಶ್ರೀಹರಿ ಅಣು ಮಹತ್ತು, ಜ್ಞಾನ ಜ್ಞೇಯ, ಅಜ್ಞಾನಪ್ರದ ಜ್ಞಾನಪ್ರದ ಎಲ್ಲವೂ ಆಗಬಲ್ಲವನು ಸ್ವತಂತ್ರ. ಅದರಿಂದ ಅವನು ಜೀವರಿಗೆ ಮೋಕ್ಷದಾಯಕ ನೆನಿಸುವುದು ಅಸಂಭವವಲ್ಲ ಎಂದು ನಾರದರು ಧರ್ಮರಾಜನಿಗೆ ಹೇಳುತ್ತಾರೆ.

ಆದಾವಂತೇಽ ಜನಾನಾಶಂ ಬಹಿರಂತಃ ಪರಾವರಮ್ ।
ಜ್ಞಾನಂ ಜ್ಞೇಯಂ ವಚೋ ವಾಚ್ಯಂ ತಮೋ ಜ್ಯೋತಿಶ್ಚ ಯತ್ಸ್ವಯಮ್ ॥೭

ಭಗವಂತ ಪ್ರಪಂಚದ ಸೃಷ್ಟಿಪ್ರಲಯಕಾಲಗಳಲ್ಲಿ ಉತ್ಪತ್ತಿ ನಾಶಗಳಿಲ್ಲದವನು ಬ್ರಹ್ಮಾಂಡದ ಹೊರಗೂ ಒಳಗೂ ಇದ್ದು ಮಹತ್ತೂ ಅಣುವೂ ಆಗಿದ್ದಾನೆ. ಜ್ಞಾನಸ್ವರೂಪನೂ ಜ್ಞೇಯನೂ ಆಗಿದ್ದಾನೆ. ವಾಗ್ರೂಪನೂ ವಾಚ್ಯನೂ ಆಗಿದ್ದಾನೆ. ದೈತ್ಯರಿಗೆ ಅಜ್ಞಾನಪ್ರದ, ಸಜ್ಜನರಿಗೆ ಜ್ಞಾನಪ್ರದನೂ ಆಗಿದ್ದಾನೆ. ಸ್ವತಂತ್ರನಾಗಿದ್ದಾನೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರು ಅದ್ವೈತಾನುಸಾರವಾಗಿ ತಮಸ್ಸೂ ಜ್ಯೋತಿಯೂ ಭಗವಂತನೆ ಎನ್ನುತ್ತಾರೆ. ವಿಶಿಷ್ಟಾದ್ವೈತಾನುಸಾರವಾಗಿ ಎರಡೂ ಭಗವಂತನ ಶರೀರಗಳಾದ್ದರಿಂದ ಎರಡೂ ಅವನೇ ಎನ್ನುತ್ತಾರೆ. ಆದರೆ ಎಲ್ಲವೂ ಬ್ರಹ್ಮ ಎನ್ನುವ ಮತವೂ ಎಲ್ಲವೂ ಭಗವಂತನ ಶರೀರ ಎನ್ನುವ ಮತವೂ ಅಶಾಸ್ತ್ರೀಯವಾದ್ದರಿಂದ ಭಾಗವತಕ್ಕೆ ಸಮ್ಮತವಲ್ಲ.

ಎಲ್ಲವೂ ಭಗವಂತನ ಅಧೀನವಾದ್ದರಿಂದ ಎಲ್ಲವೂ ಭಗವಂತನೇ ಎನ್ನಬಹುದು. ಎಲ್ಲ ವಸ್ತುಗಳ ಶಕ್ತಿಗೆ ಪ್ರೇರಕನಾದ್ದರಿಂದ ಮುಖ್ಯವಾಗಿ ಎಲ್ಲ ವಸ್ತುಗಳ ನಾಮಗಳೂ ಅವನಿಗೇ ಸಲ್ಲುತ್ತವೆ ಎನ್ನಬಹುದು. ಅದರಿಂದ ತಮಸ್ಸೆಂದರೆ ಅಜ್ಞಾನ ನೀಡುವ ಪ್ರಕೃತಿ. 'ತಮು ಗ್ಲಾನೌ' ಧಾತುವಿನಿಂದ ಆ ಶಬ್ದ ನಿಷ್ಪನ್ನವಾಗಿದೆ.

ಪ್ರಕೃತಿಯ ಈ ಅಜ್ಞಾನ ಪ್ರದತ್ವ ಭಗವಂತನ ಅಧೀನ. ಅದರಿಂದ ಮುಖ್ಯವಾಗಿ ಅವನೆ ಅಜ್ಞಾನಪ್ರದ, ತಮೋನಾಮಕ. ದೈತ್ಯರಿಗೆ ತಮಸ್ಸನ್ನು ಅಜ್ಞಾನವನ್ನು ನೀಡುತ್ತಾನೆ, ಅವನೆ ಸಜ್ಜನರಿಗೆ ಜ್ಯೋತಿಯಾಗಿ ಜ್ಞಾನಪ್ರದನೂ ಆಗುತ್ತಾನೆ.

ಗ್ಲಾಪಕತ್ವಾತ್ ತಮಃ।

ಪ್ರಕೃತಿಯಲ್ಲಿದ್ದು ತಾಮಸರಿಗೆ ಅಜ್ಞಾನ ದುಃಖಗಳನ್ನು ಕೊಡಿಸುವುದರಿಂದ ಭಗವಂತ ತಮಸ್ಸು ಎನಿಸುತ್ತಾನೆ.

❖ ❖ ❖

ಜಡ ಪ್ರಪಂಚ ಭಗವಂತನಿಲ್ಲದೆ ಕೂಡದಿರುವುದರಿಂದ ಭಗವಂತನಿಂದಲೆ ಸತ್ಯವಾಗಿ ನಿರ್ಮಿತವಾಗಿದೆ ಎನ್ನಬೇಕು ಎಂದು ನಾರದರು ಧರ್ಮರಾಜನಿಗೆ ಹೇಳುತ್ತಾರೆ.

ಅಬಾಧಿತೋಽಪಿ ಹ್ಯಾಭಾಸೋ ಯಥಾ ವಸ್ತುತಯಾ ಸ್ಮೃತಃ।
ದುರ್ಘಟತ್ವಾದೈಂದ್ರಿಯಕಂ ತದ್ವದರ್ಥವಿಕಲ್ಪಿತಮ್ ॥ ೫೮ ॥

ಅಬಾಧಿತನಾದ ಜೀವನು ಭಗವಂತನ ಪ್ರತಿಬಿಂಬನಾದರೂ ಭಗವಂತನ ಸಾಮರ್ಥ್ಯದಿಂದ ನಿತ್ಯನೇ ಆಗಿದ್ದಾನೆ. ಹಾಗೆಯೇ ಇಂದ್ರಿಯಗೋಚರ ವಾದ ಈ ಜಡಪ್ರಪಂಚವೂ ಭಗವಂತನಿಲ್ಲದೆ ಕೂಡದಿರುವುದರಿಂದ ಭಗವಂತನಿಂದಲೇ ಸತ್ಯವಾಗಿ ನಿರ್ಮಿತವಾಗಿದೆ.

ಜಡಪ್ರಪಂಚ ಸೃಷ್ಟಿ ಭಗವಂತನ ಅಚಿಂತ್ಯಶಕ್ತಿಯಿಂದಲ್ಲದೆ ಸರ್ವಥಾ ಕೂಡುವುದಿಲ್ಲ ಎಂಬುದು ಮುಂದಿನ ಮೂರು ಶ್ಲೋಕದಲ್ಲಿ ಸ್ಪಷ್ಟವಾಗುತ್ತದೆ. ಕೂಡದಿರುವುದನ್ನು ಕೂಡುವಂತೆ ಮಾಡುವ ಶಕ್ತಿಯೇ ಅಚಿಂತ್ಯಶಕ್ತಿ. ಪರಮಾತ್ಮನ ಅಚಿಂತ್ಯ ಶಕ್ತಿಯಿಂದಲೆ ಜೀವನಿತ್ಯತ್ವ ಕೂಡುತ್ತದೆ. ಇಲ್ಲದಿದ್ದರೆ ಜೀವ ಪರಮಾತ್ಮನ ಪ್ರತಿಬಿಂಬವಾಗಿರುವುದರಿಂದ, ಪ್ರತಿಬಿಂಬ ಎಲ್ಲಕಡೆ ಅನಿತ್ಯವೇ ಆಗಿರುವುದರಿಂದ ಜೀವ ನಿತ್ಯನಾಗಿರಲಾರ. ಜೀವ ನಿತ್ಯತ್ವ ದೃಷ್ಟಾಂತದಿಂದ ಜಡಸತ್ಯತ್ವವೂ ಭಗವಂತನ ಅಚಿಂತ್ಯ ಶಕ್ತಿಯಿಂದಲೇ ಕೂಡುತ್ತದೆ ಎನ್ನಬೇಕು. ಇಲ್ಲದಿದ್ದರೆ ಕೂಡಲಾರದು. ಅದರಿಂದ ಜಡಪದಾರ್ಥವು 'ಅರ್ಥವಿಕಲ್ಪಿತ' ಅರ್ಥ ಎಂದರೆ ವಾಸ್ತವ ಸತ್ಯ, 'ವಿ' ಎಂದರೆ ಪರಮಾತ್ಮ, ಕಲ್ಪಿತ ಎಂದರೆ ನಿರ್ಮಿತ. ಸತ್ಯವಾಗಿ ಪರಮಾತ್ಮನಿಂದಲೇ ನಿರ್ಮಿತವಾಗಿದೆ. 'ಕಲ್ಪಿತ'ವೆಂದರೆ ಆರೋಪಿತ ಎಂದು ಅರ್ಥವಿಟ್ಟುಕೊಂಡರೆ 'ವಿ' ಶಬ್ದ ವ್ಯರ್ಥವಾಗುವುದು, ಅಪಾರ್ಥವೂ ಆಗುವುದು.

[೧]ಇಲ್ಲಿ ಶ್ರೀಧರವ್ಯಾಖ್ಯಾನದಲ್ಲಿ 'ಆಬಾಧಿತೋಽಪಿ' ಎಂದು ಪಾಠ. 'ಪ್ರತಿಬಿಂಬವು ತರ್ಕ ವಿರೋಧದಿಂದ ಸರ್ವಥಾ ಬಾಧಿತವಾಗಿದ್ದರೂ ಅದು 'ವಸ್ತುತಯಾ' ವಾಸ್ತವವೆಂದು 'ಸ್ಮೃತಃ' ಅಜ್ಞರಿಗೆ ಕಂಡಿದೆ. ಚಂದ್ರನ ಪ್ರತಿಬಿಂಬವನ್ನು ಮಕ್ಕಳು ಚಂದ್ರ ಎಂದೇ ತಿಳಿಯುತ್ತಾರೆ. ಹಾಗೇ ಜಡಪ್ರಪಂಚವು ಅರ್ಥವಿಕಲ್ಪಿತಂ' ವಾಸ್ತವವೆಂದು ಕಲ್ಪಿತವಾಗಿದೆ' ಎಂದಿದ್ದಾರೆ. ಆದರೆ 'ವಸ್ತು ತಯಾ ಸ್ಮೃತಃ' ಎಂಬುದಕ್ಕೆ ಬಲಾತ್ಕಾರದಿಂದ ಅರ್ಥ ಮಾಡಿದ್ದಾರೆ. 'ಅಬಾಧಿ ತೋಽಪಿ' ಎಂಬ ಪಾಠ ವೀರರಾಘವ ಭಗವತ್ಪ್ರಸಾದ ವ್ಯಾಖ್ಯಾನಗಳಿಗೆ ಸಮ್ಮತವಾದ ಪ್ರಾಚೀನ ಪಾಠ. ಅದನ್ನು ವ್ಯತ್ಯಾಸಗೊಳಿಸಿದ್ದಾರೆ.

ವೀರರಾಘವ ಮತ್ತು ಭಗವತ್ಪ್ರಸಾದರ ವ್ಯಾಖ್ಯಾನದಲ್ಲಿ 'ಆಭಾಸ' ಎಂದರೆ ದೃಶ್ಯವಾದ ದೇಹ. ಅದು ಅಬಾಧಿತವಾದರೂ 'ಅವಸ್ತುತಯಾ ಸ್ಮೃತಃ' ಪುರುಷಾರ್ಥವಲ್ಲದ್ದು. ಹಾಗೇ 'ಅರ್ಥವಿಕಲ್ಪಿತಂ' ವಿಷಯಪದಾರ್ಥವಾಗಿ ಕಲ್ಪಿತವಾದ ಇಂದ್ರಿಯಗೋಚರ ವಸ್ತುವೂ 'ಅವಸ್ತು' ಪುರುಷಾರ್ಥವಲ್ಲದ್ದು ಎಂದು ಅಧ್ಯಾಹಾರ ಮಾಡಬೇಕು. ಏಕೆ ಪುರುಷಾರ್ಥವಲ್ಲ ಎಂದರೆ 'ದುರ್ಘಟತ್ವಾತ್' 'ಅಪುರುಷಾರ್ಥವನ್ನು ಪುರುಷಾರ್ಥವೆಂದು ಕಲ್ಪಿಸುವುದು ಕೂಡಲಾರದು' ಎನ್ನುತ್ತಾರೆ. ಆದರೆ ಅಪುರುಷಾರ್ಥವನ್ನು ಪುರುಷಾರ್ಥವೆಂದು ಕಲ್ಪಿಸುವುದು ಅಜ್ಞಾನದಿಂದ ಕೂಡುತ್ತದೆ. ದುರ್ಘಟವಲ್ಲ. ಅಜ್ಞಾನದಿಂದಲೂ ದುರ್ಘಟವೆನ್ನುವುದಾದರೆ ಯಾರಿಗೂ ಯಾವ ಭ್ರಾಂತಿಯೂ ಬಾರದೆ ಹೋದೀತು.

ದುರ್ಘಟತ್ವಾದರ್ಥತ್ವೇನ ಪರಮೇಶ್ವರೇಣೈವ ಕಲ್ಪಿತಂ।

ಭಗವಂತನ ಅಚಿಂತ್ಯಶಕ್ತಿಯಿಂದಲ್ಲದೆ ಬೇರೆ ರೀತಿಯಿಂದ ಕೂಡದಿರುವುದರಿಂದ ಪ್ರಪಂಚವು ಸತ್ಯವಾಗಿ ಪರಮಾತ್ಮನಿಂದಲೇ ನಿರ್ಮಿತವಾಗಿದೆ.

❖❖❖

೧. ಆಬಾದಿತಸ್ತರ್ಕವಿರೋಧೇನ ಸರ್ವತೋ ಬಾಧಿತೋಽಪ್ಯಾಭಾಸಃ ಪ್ರತಿಬಿಂಬಾದಿರ್ವಸ್ತುತಯಾ ಯಥಾ ಸ್ಮೃತಃ ತದ್ವದೈಂದ್ರಿಯಕಂ ಸರ್ವಮರ್ಥತ್ವೇನ ವಿಕಲ್ಪಿತಂ। ನತು ಪರಮಾರ್ಥತಃ। ದುರ್ಘಟತ್ವಾತ್। -ಶ್ರೀಧರಃ
ಆಭಾಸೋ ದೃಶ್ಯೋ ದೇಹಃ ಅಬಾಧಿತಃ ಅವಿನಷ್ಟೋಽಪಿ, ಅನುವರ್ತಮಾನಃ ಸನ್ನಪೀತ್ಯರ್ಥಃ। ಯಥಾ ಅವಸ್ತುತಯಾ ಅಪುರುಷಾರ್ಥತಯಾ ಸ್ಮೃತಃ ತದ್ವತ್ ಏವಂ ಅರ್ಥವಿಕಲ್ಪಿತಂ ಶಬ್ದಾದ್ಯರ್ಥರೂಪೇಣ ವಿಕಲ್ಪನಭಾವೋಪೇತಂ ಐಂದ್ರಿಯಕಂ ಇಂದ್ರಿಯಗ್ರಾಹ್ಯಂ ವಸ್ತುಜಾತಮಪಿ, ಅವಸ್ತ್ವಿತಿ ಶೇಷಃ। ಅಪುರುಷಾರ್ಥಮಿತ್ಯರ್ಥಃ। ಕುತಃ। ದುರ್ಘಟತ್ವಾತ್ ಅಪುರುಷಾರ್ಥಸ್ಯ ಪುರುಷಾರ್ಥತ್ವೇನ ಕಲ್ಪನಾಯಾ ಅಘಟಿತತ್ವಾದಿತ್ಯರ್ಥಃ॥ -ಭಗವತ್ಪ್ರಸಾದಃ

'ಅದ್ಭ್ಯಃ ಪೃಥಿವೀ' ಎಂಬ ಶ್ರುತಿಯಿರುವುದರಿಂದ ಪೃಥಿವಿತತ್ವ ಜಲತತ್ವದಿಂದ ಹುಟ್ಟಿದೆ. ಅದು ಹೇಗೆ ಎಂಬುದು ಭಗವಂತನ ಅಚಿಂತ್ಯಶಕ್ತಿಯಿಂದ ಎನ್ನಬೇಕು ಹೊರತು ಬೇರೆ ರೀತಿಯಿಂದ ಸರ್ವಥಾ ಕೂಡಲಾರದು ಎಂದು ನಾರದರು ಧರ್ಮರಾಜನಿಗೆ ಹೇಳುತ್ತಾರೆ.

ಕ್ಷಿತ್ಯಾದೀನಾಮಿಹಾರ್ಥಾನಾಂ ಛಾಯಾ ನ ಕತಮಾಽಪಿ ಹಿ ।
ನ ಸಂಘಾತೋ ವಿಕಾರೋಽಪಿ ನ ಪೃಥಙ್‌ನಾನ್ವಿತೋಽಪಿ ವಾ ॥ ೫೯ ॥

ಭಗವಂತನಿಲ್ಲದೆಯೇ ಸತ್ಯಪ್ರಪಂಚ ಕೂಡುತ್ತದೆ ಎನ್ನುವ ಪಕ್ಷದಲ್ಲಿ ಪೃಥಿವೀ ಮುಂತಾದ ಪದಾರ್ಥಸೃಷ್ಟಿಯಲ್ಲಿ ಯಾವುದೇ ಪ್ರಕಾರವು ಕೂಡುವುದಿಲ್ಲ. ಏಕೆಂದರೆ ಪೃಥಿವಿ ನೀರಿನ ರಾಶಿಯಲ್ಲ. ನೀರಿನ ಪರಿಣಾಮವೂ ಅಲ್ಲ. ನೀರಿಲ್ಲದೆ ಪ್ರತ್ಯೇಕವಾಗಿ ಪೃಥಿವಿ ಇರುವುದಿಲ್ಲ. ನೀರಿನ ಜೊತೆಗಿರುವ ವಸ್ತುವೂ ಅಲ್ಲ.

ಜಲದಿಂದ ಪೃಥಿವಿಯ ಉತ್ಪತ್ತಿಯನ್ನು ಈ ನಾಲ್ಕು ಬಗೆಗಳಲ್ಲಿ ಯಾವುದಾದರೊಂದು ಬಗೆಯಿಂದ ಸಮರ್ಥಿಸಬೇಕು. ಜಲಕಣಗಳು ಸೇರಿ ರಾಶಿಯಾದಾಗ ಅದೇ ಪೃಥಿವಿ ಎನಿಸುತ್ತದೆ ಎನ್ನುವುದು ಒಂದು ಬಗೆ. ಆದರೆ ಜಲರಾಶಿ ಪೃಥಿವಿ ಎನಿಸುವುದು ಎಲ್ಲೂ ಕಂಡಿಲ್ಲ. ಜಲವು ಪೃಥಿವಿಯಾಗಿ ಪರಿಣಮಿಸುವುದು ಎರಡನೇ ಬಗೆ. ಇದೂ ಎಲ್ಲೂ ಕಂಡಿಲ್ಲ. ಜಲ ಪೃಥಿವಿಗಳು ಬೇರೆಬೇರೆಯಾಗಿ ಇದ್ದರಂತೂ ಒಂದರಿಂದ ಇನ್ನೊಂದು ಹುಟ್ಟಲು ಸಾಧ್ಯವಿಲ್ಲ. ಬೆರೆತರೂ ಬೆರೆತ ಮಾತ್ರಕ್ಕೆ ಒಂದು ಇನ್ನೊಂದರಿಂದ ಹುಟ್ಟಿದೆ ಎನ್ನುವಂತಿಲ್ಲ. ಹೀಗೆ 'ಜಲದಿಂದ ಪೃಥಿವಿಯ ಉತ್ಪತ್ತಿ ಕೂಡುವುದಿಲ್ಲ. ದುರ್ಘಟ. ಆದರೆ ಶ್ರುತಿಯಲ್ಲಿ ಅದು ಉಕ್ತವಾಗಿದೆ. ಅದಕ್ಕೆ ಭಗವಂತ ಪೃಥಿವೀತನ್ಮಾತ್ರೆಯಿಂದ ಸೂಕ್ಷ್ಮಪೃಥಿವಿಯನ್ನು ಉತ್ಪಾದಿಸಿ, ಅದಕ್ಕೆ ಆಕಾಶ ವಾಯು ಅಗ್ನಿ ಜಲ ಭಾಗಗಳಿಂದ ಉಪಚಯಗೊಳಿಸಿ ಸ್ಥೂಲಪೃಥಿವಿಯನ್ನು ಹುಟ್ಟಿಸುತ್ತಾನೆ ಎನ್ನಬೇಕು. ಇದು ಭಗವಂತನಿಲ್ಲದೆ ಆಗುವುದಿಲ್ಲ.

ಇಲ್ಲಿ 'ಕ್ಷಿತ್ಯಾದೀನಾಂ ಪದಾರ್ಥಾನಾಂ ಛಾಯಾ' ಎಂದು ಛಾಯಾಶಬ್ದವಿದೆ. ಛಾಯೆ ಎಂದರೆ ನೆರಳೆಂದು ಪ್ರಸಿದ್ಧ. ವೀರರಾಘವೀಯ ವ್ಯಾಖ್ಯಾನದಲ್ಲಿ ಮರದ ನೆರಳೆಂದೇ ಅರ್ಥೈಸಿದ್ದಾರೆ. ಮರದ ನೆರಳು ಮರಗಳ ಸಮೂಹರೂಪವಲ್ಲ. ಮರದ ಪರಿಣಾಮವೂ ಅಲ್ಲ. ಮರವಿರುವಷ್ಟೂ ಕಾಲ ನೆರಳಿರುವುದಿಲ್ಲ. ಮರವನ್ನು ಬಿಟ್ಟು ಪ್ರತ್ಯೇಕವಾಗಿ ಅದು ಇರುವುದೂ ಇಲ್ಲ. ಹೀಗಾಗಿ ನೆರಳು ಮರಕ್ಕಿಂತ

ಬೇರೆಯಾಗಿದ್ದು ಅನಿತ್ಯವಾಗಿದೆ. ಹಾಗೇ ಆತ್ಮನ ನೆರಳಿನಂತಿರುವ ಶರೀರವೂ ಆತ್ಮ ಸಮೂಹರೂಪವೂ ಅಲ್ಲ, ಆತ್ಮವಿಕಾರವೂ ಅಲ್ಲ, ಆತ್ಮನನ್ನು ಬಿಟ್ಟು ಇರುವುದೂ ಇಲ್ಲ, ಆತ್ಮವಿರುವಷ್ಟು ಕಾಲ ಇರುವುದೂ ಇಲ್ಲ. ಹೀಗೆ ಶರೀರ ಆತ್ಮನಿಗಿಂತ ಬೇರೆಯಾಗಿದ್ದು ಅನಿತ್ಯವಾಗಿದೆ. ಶರೀರವನ್ನೇ ಆತ್ಮ ಎಂದು ತಿಳಿಯುವುದು ಭ್ರಮೆ' ಎಂದು ಹೇಳಿದ್ದಾರೆ. ಆದರೆ ನೆರಳು ಮರವಿರುವಷ್ಟು ಕಾಲ ಇರುವುದಿಲ್ಲ ಎಂದಮಾತ್ರಕ್ಕೆ ಮರದ ಪರಿಣಾಮವಲ್ಲ ಎನ್ನುವಂತಿಲ್ಲ. ಮಣ್ಣಿನ ಪರಿಣಾಮವಾದ ಗಡಿಗೆ ಮಣ್ಣಿರುವಷ್ಟು ಕಾಲ ಇರುವುದಿಲ್ಲ. ಆದರೂ ಗಡಿಗೆ ಮಣ್ಣಿನ ಪರಿಣಾಮವಲ್ಲ ಎನ್ನುವುದಿಲ್ಲ.

'ನಾನ್ವಿತೋಽಪಿವಾ' ಎಂದು ಪುಲ್ಲಿಂಗವಿದೆ. 'ಛಾಯಾ ನ ಅನ್ವಿತೋಽಪಿ' ಎಂದು ಅನ್ವಯ ಕೂಡುವುದಿಲ್ಲ.

ಶರೀರದ ಅನಿತ್ಯತ್ವಕ್ಕೆ ದೃಷ್ಟಾಂತವಾಗಿ ಛಾಯೆಯ ಅನಿತ್ಯತ್ವವನ್ನು ಇಲ್ಲಿ ಹೇಳಿದೆ ಎನ್ನಲು ಯಥಾಶಬ್ದವಿಲ್ಲ.

ಅದರಿಂದ 'ಛಾಯಾ' ನೆರಳು 'ನ ಕತಮಾಪಿ' 'ಸಮೂಹರೂಪವಾಗಲಿ ಪೃಥಕ್‌ಸ್ಥಿತವಾಗಲಿ ಯಾವದ್ದ್ರವ್ಯ ಭಾವಿಯಾಗಲಿ ಯಾವುದೇ ಒಂದು ಬಗೆ ಯಾಗಿಲ್ಲ' ಎಂದು ವೀರರಾಘವೀಯ ಭಗವತ್ಪ್ರಸಾದವ್ಯಾಖ್ಯಾನಗಳು ಹೇಳುವುದು ಭಾಗವತಕ್ಕೆ ಸಮ್ಮತವಲ್ಲ. ಛಾಯೆ ಎಂದರೆ ಇಲ್ಲಿ ನೆರಳಲ್ಲ.

ಶ್ರೀಧರೀಯ ಮುಂತಾದ ವ್ಯಾಖ್ಯಾನಗಳಲ್ಲಿ ಛಾಯೆ ಎಂದರೆ 'ಐಕ್ಯ ಬುದ್ಧ್ಯಾಲಂಬನ' ಒಂದು ಎಂದು ಗೋಚರಿಸುವಂಥದ್ದು. ಪೃಥಿವೀ ಮುಂತಾದ ಪಂಚಭೂತಗಳ ಛಾಯೆ ಎಂದರೆ ಪಂಚಭೂತಗಳು ಸೇರಿ ಒಂದಾಗಿರುವ ಶರೀರ ಮುಂತಾದುದು. ಇದು ಪಂಚಭೂತಗಳ ಸಮುದಾಯವಲ್ಲ, ಅವುಗಳ ಪರಿಣಾಮವೂ ಅಲ್ಲ, ಅವುಗಳು ಅದಕ್ಕೆ ಅವಯವವೆನ್ನಲು ಬರುವುದಿಲ್ಲ. ಅವಯವವೆನ್ನುವುದಾದರೆ ಅದರಲ್ಲಿ ಅವಯವಿ ಪೂರ್ತಿಯಾಗಿ ನೆಲೆಸಿದೆಯೆ ಅಥವಾ ಒಂದು ಅವಯವದಿಂದ ನೆಲೆಸಿದೆಯೆ? ಪೂರ್ತಿಯಾಗಿ ನೆಲೆಸಿದೆ ಎಂದರೆ ಶರೀರದ ಅವಯವವಾದ ಒಂದು ಬೆರಳಿನಲ್ಲಿ ಇಡೀ ಶರೀರ ನೆಲೆಸಿದೆ, ಬೆರಳೇ ಶರೀರ ಎನ್ನಬೇಕಾದೀತು. ಒಂದು ಅವಯವದಲ್ಲಿ ಅವಯವಿ ಇನ್ನೊಂದು ಅವಯವದಿಂದ ಇದೆ ಎಂದರೆ ಆ ಇನ್ನೊಂದು ಅವಯವದಲ್ಲಿ ಶರೀರ ಇನ್ನೊಂದು ಅವಯವದಿಂದ ಇದೆ ಎಂದು ಹೇಳಬೇಕಾಗುತ್ತದೆ. ಇದಕ್ಕೆ ಪರ್ಯವಸಾನ ವಿಲ್ಲವಾಗುತ್ತದೆ. ಅವಯವಕ್ಕಿಂತ ಪ್ರತ್ಯೇಕವಾಗಿ ಅವಯವಿ ಇರುವುದಂತೂ

ಕಾಣುವುದಿಲ್ಲ. ಹೀಗಾಗಿ ಶರೀರ ಸತ್ಯವೆನ್ನುವ ಪಕ್ಷದಲ್ಲಿ ಅದು ಅವಯವ ಸಮೂಹರೂಪವೆ ಪರಿಣಾಮವೆ ಎಂದು ಯಾವ ರೀತಿಯಲ್ಲಿಯೂ ವಿವರಣೆ ನೀಡಲಾಗದಿರುವುದರಿಂದ ಅದು ಮಿಥ್ಯೆ ಎನ್ನುತ್ತಾರೆ.

ಆದರೆ ಇದೂ ಸರಿಯಲ್ಲ. 'ಛಾಯೆ' ಎಂದರೆ ಐಕ್ಯಬುದ್ಧ್ಯಾಲಂಬನ ಎನ್ನುವಲ್ಲಿ ಯಾವ ಕೋಶ ವ್ಯಾಕರಣಾದಿ ಆಧಾರವೂ ಇಲ್ಲ. ಮತ್ತು 'ಛಾಯಾ ನಾನ್ವಿತೋಽಪಿ' ಎಂದು ಲಿಂಗವ್ಯತ್ಯಾಸವೂ ಅನುಚಿತ ಮತ್ತು ಒಂದು ಅವಯವದಲ್ಲಿಯೇ ಅದರ ಅವಯವಿ ಇರುವುದಿಲ್ಲ. ಅವಯವಸಮೂಹದಲ್ಲಿ ಅವಯವಿ ಇದೆ. ಸಮುದಾಯದಲ್ಲಿ ಸಮುದಾಯತ್ವವಿರುತ್ತದೆ. ಆದರ ಒಂದು ಅವಯವದಲ್ಲಿ ಅಲ್ಲ. ಕಾರಣ ಸಾಮಗ್ರಿಗೆ ಫಲೋಪಧಾನ ಶಕ್ತಿ ಇದೆ, ಪ್ರತ್ಯೇಕ ಕಾರಣಕ್ಕೆ ಇಲ್ಲ. ಹಾಗೇ ಇದು. ಆದರಿಂದ ಮಿಥ್ಯಾತ್ವವನ್ನು ಹೇಳುವ ಪ್ರಸಕ್ತಿ ಇಲ್ಲ. ಶ್ಲೋಕದಲ್ಲಿ ಮಿಥ್ಯಾತ್ವವನ್ನು ಹೇಳುವ ಶಬ್ದವೂ ಇಲ್ಲ. 'ನ ಪೃಥಙ್ ನಾನ್ವಿತೋ ಮೃಷಾ' ಎಂದು ಪಾಠವಿಟ್ಟುಕೊಳ್ಳುತ್ತಾರೆ. ಅದು ಅಪಪಾಠ. 'ನಾನ್ವಿತೋಽಪಿ ವಾ' ಎಂದು ಪಾಠ.[೧]

೧. ಕ್ಷಿತ್ಯಾದೀನಾಂ ಪೃಥಿವ್ಯಾದಿಪರಿಣಾಮರೂಪಾಣಾಂ ವೃಕ್ಷಾಣಾಂ ಛಾಯಾ ಸಂಘಾತಾದಿಷ್ವರ್ಥೇಷು ನ ಕತಮೋಽಪಿ । ಸಂಘಾತ ವಿಕಾರ ಪೃಥಗ್‌ಭೂತ ಯಾವದ್ದ್ರವ್ಯಭಾವಿಷು ನ ಕಶ್ಚಿದಪೀತ್ಯರ್ಥಃ । ವೃಕ್ಷಸಂಘಾತೋ ನ ಛಾಯಾ, ನಾಪಿ ವೃಕ್ಷವಿಕಾರಃ । ನಾಪಿ ವೃಕ್ಷಾತ್ ಪೃಥಕ್ ವೃಕ್ಷಂ ಹಿತ್ವಾ ಸ್ಥಾತುಂ ನ ಯೋಗ್ಯಃ । ನಾನ್ವಿತಃ ನಾವಿನಾಭೂತಃ । ಯಾವದ್ ವೃಕ್ಷಸತ್ತಾಕಂ ನಾನ್ವಿತೋಽಪ್ಯರ್ಥಾಭಿಪ್ರಾಯಃ ಪುಲ್ಲಿಂಗ ನಿರ್ದೇಶಃ । ಮೃಷಾ ಅನಿತ್ಯಾ । ಏವಂ ಶರೀರಸ್ಯಾಪ್ಯಾತ್ಮನಾ ವಿನಾ ಸ್ಥಿತ್ಯಭಾವಾತ್ ಪ್ರತಿಚ್ಛಾಯಾಸದೃಶಂ । ನ ಚಾತ್ಮಸಂಘಾತಃ ಶರೀರಂ । ನ ಚಾತ್ಮವಿಕಾರಃ । ನ ಚಾತ್ಮಾನಂ ಹಿತ್ವಾ ತಿಷ್ಠತಿ। ನ ಯಾವದಾತ್ಮಭಾವೀ । ಅನಿತ್ಯತ್ವಾತ್ । ಅತೋ ನಾತ್ಮಾ ಶರೀರಮಿತ್ಯರ್ಥಃ ।

-ವೀರರಾಘವಃ

ಕ್ಷಿತ್ಯಾದೀನಾಂ ಪಂಚಭೂತಾನಾಂ ಛಾಯಾ ಐಕ್ಯಬುದ್ಧ್ಯಾಲಂಬನರೂಪಂ ದೇಹಾದಿ ಸಂಘಾತಾರಂಭ ಪರಿಮಾಣಾನಾಂ ಮಧ್ಯೇ ಕತಮಾಪ್ಯನ್ಯತಮಾಽಪಿ ನ ಭವತಿ । ನ ತಾವತ್ ತೇಷಾಂ ಸಂಘಾತೋ ವೃಕ್ಷಾಣಾಮಿವ ವನಂ। ಏಕದೇಶಾಕರ್ಷಣೇ ಸರ್ವಾಕರ್ಷಣಾನುಪಪತ್ತೇಃ । ನ ಹ್ಯೇಕಸ್ಮಿನ್ ವೃಕ್ಷ ಆಕೃಷ್ಟೇ ಸರ್ವವನಮಾಕೃಷ್ಯತೇ । ನ ಚ ವಿಕಾರ ಆರಬ್ಧೋಽವಯವೀ । ಅಪಿ ಶಬ್ದಾನ್ನ ಪರಿಣಾಮೋಽಪಿ। ಕುತಃ । ಸ ಕಿಂ ಸ್ವಾವಯವೇಭ್ಯಃ ಪರಿಣತೇಭ್ಯೋ ವಾ ಪೃಥಕ್ ತದನ್ವಿತೋ ವಾ। ನ ತಾವದತ್ಯಂತಂ ಪೃಥಕ್ । ತಥಾಽಪ್ರತೀತೇಃ । ನಚಾನ್ವಿತಃ । ಸ ಕಿಂ ಪ್ರತ್ಯವಯವಂ ಸರ್ವೋಽಪ್ಯನ್ವೇತ್ಯಂಶೇನ ವಾ । ಆದ್ಯೇ ಅಂಗುಲಿಮಾತ್ರೇಽಪಿ ದೇಹಬುದ್ಧಿಃ ಸ್ಯಾತ್ । ದ್ವಿತೀಯೇ ತಸ್ಯಾಪ್ಯಂಶಾಂಗೀಕಾರೇ ಸತ್ಯನವಸ್ಥಾ ಸ್ಯಾದತೋ ಮೃಷೈವೇತ್ಯರ್ಥಃ ॥ -ಶ್ರೀಧರಃ

'ಛಾಯಾ ಎಂದರೆ ಪ್ರಕಾರ ಎಂದು ಕೋಶವಿದೆ. ಪೃಥಿವ್ಯಾದಿ ಪದಾರ್ಥಗಳಿಗೆ ಜಲಾದಿ ಪದಾರ್ಥಗಳಿಂದ ಉತ್ಪತ್ತಿಯನ್ನು ಶ್ರುತಿ ಹೇಳುತ್ತಿದ್ದರೂ ಪೃಥಿವ್ಯಾದಿಗಳು ಜಲಾದಿ ಸಮೂಹರೂಪವೇ ಪರಿಣಾಮವೆ? ಎಂದು ಮುಂತಾಗಿ ಯಾವ ಪ್ರಕಾರವೂ ಪೃಥಿವ್ಯಾದಿಗಳಿಗೆ ಕೂಡುವುದಿಲ್ಲ ಎಂದರ್ಥ.

ಛಾಯಾ ರೀತಿಃ ಪ್ರಕಾರಶ್ಚ ಭಾವಶ್ಚೇತ್ಯಭಿಧೀಯತೇ ।
-ಇತಿ ಶಬ್ದನಿರ್ಣಯೇ ॥

ಕ್ಷಿತ್ಯಾದೀನಾಂ ಪದಾರ್ಥಾನಾಂ ಕತಮೋಽಪಿ ಪ್ರಕಾರೋ ನ ಘಟತೇ । ಪರಮೇಶ್ವರ ಕಲ್ಪಿತತ್ವಾತ್ ಕಾರ್ಯಮಿತ್ಯೇವ ವಕ್ತುಂ ಯುಕ್ತಂ । ನಹಿ ಬಹ್ವಪಾಂ ಸಂಘಾತಮಾತ್ರಂ ಪೃಥಿವೀ । ನ ಚ ವಿಕಾರಮಾತ್ರಂ । ನಹಿ ಕಾಲುಷ್ಯಾದಿವಿಕಾರ ಮಾತ್ರೇಣ ಪೃಥಿವೀ ಭವತಿ । ನ ಚಾದ್ಭ್ಯಃ ಪೃಥಕ್ ಸ್ಥಿತಿಃ । ನಚ ವಸ್ತುದ್ವಯವತ್ ಸಹಾವಸ್ಥಾನ ಮಾತ್ರಂ ॥

ಪ್ರಕಾರವು ಛಾಯಾ ಎಂದೂ ರೀತಿ ಎಂದೂ ಭಾವ ಎಂದೂ ಕರೆಯಲ್ಪಡುತ್ತದೆ ಎಂದು ಶಬ್ದನಿರ್ಣಯದಲ್ಲಿ ಉಕ್ತವಾಗಿದೆ.

ಪೃಥಿವಿ ಮುಂತಾದ ಪದಾರ್ಥಗಳಿಗೆ ಯಾವುದೇ ಪ್ರಕಾರವೂ ಕೂಡುವುದಿಲ್ಲ. ಪರಮಾತ್ಮನಿಂದ ನಿರ್ಮಿತವಾದ್ದರಿಂದ ಸತ್ಯಸೃಷ್ಟಿ ಎನ್ನುವುದೇ ಯುಕ್ತ. ಏಕೆಂದರೆ, ಪೃಥಿವಿಯು ಜಲಸಮುದಾಯವೇ ಎನ್ನಲಾಗುವುದಿಲ್ಲ. ಜಲಪರಿಣಾಮ ಮಾತ್ರವೂ ಅಲ್ಲ. ನೀರು ರಾಡಿಯಾಗಿ ನೊರೆಗುಳ್ಳೆಗಳಾಗಿ ಪರಿಣಮಿಸಿದ ಮಾತ್ರಕ್ಕೆ ಅದು ಪೃಥಿವಿ ಎನಿಸುವುದಿಲ್ಲ ತಾನೆ? ನೀರಿನಿಂದ ಬೇರೆಯಾಗಿ ಪೃಥಿವಿ ಇರುವುದೂ ಇಲ್ಲ. ಎರಡು ವಸ್ತುಗಳಂತೆ ಜಲ ಪೃಥಿವಿಗಳು ಜೊತೆಗಿರುವುದೂ ಅಲ್ಲ.

❖ ❖ ❖

ಪಂಚತನ್ಮಾತ್ರೆಗಳಿಂದ ಪಂಚಭೂತಗಳ ಉತ್ಪತ್ತಿಯೂ ಪರಮಾತ್ಮನ ಅಚಿಂತ್ಯಶಕ್ತಿ ಇಲ್ಲದೆ ಕೂಡುವುದಿಲ್ಲ ಎಂದು ನಾರದರು ಧರ್ಮರಾಜನಿಗೆ ಹೇಳುತ್ತಾರೆ.

ಧಾತವೋಽವಯವಿತ್ವಾಚ್ಚ ತನ್ಮಾತ್ರಾವಯವೈರ್ವಿನಾ ।
ನ ಸ್ಯುರ್ಹ್ಯಸತ್ಯವಯವಿನ್ಯಾಸನ್ನಾವಯವಾ ಇವ ॥ ೬೦ ॥

ಪೃಥಿವ್ಯಾದಿ ಧಾತುಗಳು ಅವಯವಿಗಳಾಗಿರುವುದರಿಂದಲೇ ಅವು

ಅವುಗಳಿಂದ ಅಭಿನ್ನವಾದ ತನ್ಮಾತ್ರರೂಪವಾದ ಅವಯವಗಳಿಲ್ಲದೆ ಇಲ್ಲ. ಅವಯವಿ ಇಲ್ಲದಿದ್ದಾಗ ಅವಯವಗಳು ಜೊತೆಗೆ ಸೇರಿಕೊಂಡಿರುವುದಿಲ್ಲ ಹೇಗೋ ಹಾಗೆ.

ಗಂಧಾದಿ ಪಂಚತನ್ಮಾತ್ರೆಗಳು ಅವಯವಗಳು. ಅವುಗಳಿಗೆ ಜಲಾದಿಗಳಿಂದ ಉಪಚಯ ಉಂಟಾದಾಗ ಪೃಥಿವ್ಯಾದಿ ಅವಯವಿಗಳುಂಟಾಗುತ್ತವೆ. ಇದು ನಮ್ಮಿಂದಾಗುವುದಿಲ್ಲ. ಭಗವಂತನ ಅಚಿಂತ್ಯಶಕ್ತಿಯಿಂದ ಮಾತ್ರ ಸಾಧ್ಯ. ಏಕೆಂದರೆ ಅವಯವ ಅವಯವಿಗಳು ಪರಸ್ಪರ ಬಿಟ್ಟಿಲ್ಲ. ಅವಯವವಿಲ್ಲದೆ ಅವಯವಿ ಇಲ್ಲ. ಅವಯವಿ ಇಲ್ಲದಿರುವಾಗ ಅವಯವಗಳು ಜೊತೆ ಸೇರಿಕೊಂಡಿರುವುದಿಲ್ಲ. ಹೀಗಾಗಿ ಅವಯವ ಅವಯವಿಗಳಿಗೆ ಭೇದವಿಲ್ಲ. ಭೇದ ಕಣ್ಣಿಗೆ ಕಾಣುವುದೂ ಇಲ್ಲ. ಅಭಿನ್ನವಾದ ಅವಯವ ಅವಯವಿಗಳಿಗೆ ಕಾರ್ಯ ಕಾರಣಭಾವ ಹೇಗೆ ಕೂಡುತ್ತದೆ? ಭಗವಂತನ ಶಕ್ತಿಯಿಂದ ಎನ್ನಬೇಕು.

[೧]ಇಲ್ಲಿ ಶ್ರೀಧರ ವ್ಯಾಖ್ಯಾನವೂ ಅವಯವವಿಲ್ಲದೆ ಅವಯವಿ ಇಲ್ಲ, ಅವಯವಿ ಇಲ್ಲದೆ ಅವಯವವೂ ಇಲ್ಲ ಎನ್ನುತ್ತದೆ. ಆದರೆ ಎರಡೂ ಮಿಥ್ಯಾ ಎನ್ನುತ್ತದೆ. ಅವಯವದಲ್ಲಿ ಅವಯವಿ ಪೂರ್ತಿಯಾಗಿಯೂ ನೆಲೆಸಿಲ್ಲ, ಅವಯವದಿಂದಲೂ ನೆಲೆಸಿಲ್ಲ, ಅದರಿಂದ ಅವಯವಿ ಯಾವ ಪ್ರಕಾರದಿಂದಲೂ ಇಲ್ಲವೆಂದರೆ ಅದು ಮಿಥ್ಯಾ. ಅವಯವವೂ, ಅದರಲ್ಲಿ ಅವಯವಿ ಇಲ್ಲವೆಂದ ಮೇಲೆ, ಅವಯವ ಎನಿಸುವುದೂ ಶಕ್ಯವಿಲ್ಲ, ಅದರಿಂದ ಸತ್ಯವಾಗಿ ಅವಯವವಾಗಿದೆ ಎನ್ನುವುದು ಕೂಡುವುದಿಲ್ಲ, ಮಿಥ್ಯಾ ಎನ್ನುತ್ತಾರೆ. ಆದರೆ ಮಿಥ್ಯಾ

೧. ಧಾರಯಂತೀತಿ ಧಾತವೋ ಮಹಾಭೂತಾನಿ ತನ್ಮಾತ್ರೈಃ ಸೂಕ್ಷ್ಮೈ ರವಯವೈರ್ವಿನಾ ನ ಸ್ಯುಃ। ಅವಯವಿತ್ವಾತ್ ತೇಷಾಮಪಿ । ತರ್ಹ್ಯವಯವಃ ಸತ್ಯ ಇತಿ ಚೇತ್ ತತ್ರಾಹ। ಉಕ್ತಪ್ರಕಾರೇಣಾವಯವಿನ್ಯಸತ್ಯವಯವೋಽಪ್ಯಂತತೋಽಸನ್ನೇವ ಸ್ಯಾತ್। ಅವಯವಿ ಪ್ರತೀತ್ಯನ್ಯಥಾನುಪಪತ್ತಿಂ ವಿನಾ ತತ್‌ಸದ್ಭಾವೇ ಪ್ರಮಾಣಾಭಾವಾದಿತ್ಯರ್ಥಃ । -ಶ್ರೀಧರಃ

ಶರೀರಸ್ಯಾನಿತ್ಯತ್ವಾದಾತ್ಮಪ್ರತಿಪತ್ತ್ಯರ್ಥಂ ತತ್ತುಲ್ಯನ್ಯಾಯೇಷು ಪೃಥಿವ್ಯಾದಿಷ್ವ ನಿತ್ಯತ್ವಮುಪಪಾದಯತಿ ಧಾತವ ಇತಿ । ಪೃಥಿವ್ಯಾದಯೋ ಧಾತವಃ ಅವಯವಿತ್ವಾತ್ ಸಂಘಾತರೂಪತ್ವಾತ್ ತನ್ಮಾತ್ರಾವಯವೈರ್ವಿನಾ ನ ಸ್ಯುರವಯವನಾಶೇ ಸಂಘಾತೋ ನಶ್ಯತೀತ್ಯರ್ಥಃ । ಸಂಘಾತರೂಪತ್ವಮೇವ ಪ್ರತಿಪಾದಯತಿ ಅಸತೀತಿ । ಯತೋಽವಯವ ಸಂಘಾತರೂಪೋಽವಯವೀ ಅತ ಏವಾವಯವಿನ್ಯಸತಿ ವಿನಷ್ಟೇ ಅಂತತೋಽವಯವೋಽಸನ್ನೇವ ಅವಯವಿನ್ಯನುಪಲಭ್ಯಮಾನೇ ಅವಯವಾ ಏವ ಧಾತವೋ ನ ಹ್ಯುಪಲಭ್ಯಂತೇ । ಏವಮವಯವಿತ್ವಾದನಿತ್ಯಂ ಶರೀರಂ ನಿತ್ಯ ಆತ್ಮಾ ನ ಭವತೀತ್ಯರ್ಥಃ । -ವೀರರಾಘವಃ

ಆದರೆ ಏಕೆ ಕೂಡುತ್ತದೆ? ಎಂಬ ಪ್ರಶ್ನೆ ಬರುತ್ತದೆ. ಅದು ಅವಿದ್ಯಾಬಲದಿಂದ ಕೂಡುತ್ತದೆ. ಅದು ಅಘಟಿತ ಘಟನಾಸಮರ್ಥ ಎಂದು ಸಮಾಧಾನ. ತುಚ್ಛವಾದ ಅವಿದ್ಯೆಗೆ ಈ ಸಾಮರ್ಥ್ಯವನ್ನು ಹೇಳುವುದಕ್ಕಿಂತ ಸರ್ವಶಕ್ತನಾದ ಭಗವಂತನಿಗೇ ಏಕೆ ಹೇಳಬಾರದು? ಅವನು ಸತ್ಯವಾದ ಪದಾರ್ಥಗಳಲ್ಲಿಯೇ ಇಂಥ ಅಘಟಿತಘಟನೆಗಳಿಗೆ ಸಮರ್ಥನಾಗಿದ್ದಾನೆ ಎನ್ನುತ್ತಿದೆ ಭಾಗವತ.

ವೀರರಾಘವ ವ್ಯಾಖ್ಯಾನದಲ್ಲಿ ಪೃಥಿವ್ಯಾದಿಗಳೆಲ್ಲವೂ ಅನಿತ್ಯ ಎನ್ನಲು ಈ ಶ್ಲೋಕ ಹೊರಟಿದೆ. ಅವಯವ ನಾಶವಾದರೆ ಅವಯವಿ ನಾಶವಾಗುತ್ತದೆ. ಹಾಗೇ ಅವಯವಿ ನಾಶವಾದರೂ ಅವಯವ ಉಪಲಬ್ಧಿ ಇಲ್ಲ, ಅವಯವಿ ಉಪಲಬ್ಧವಾದರೆ ಮಾತ್ರ ಅವಯವ ಗೋಚರವಾಗುತ್ತದೆ. ಅದರಿಂದ ಅವಯವಿ ರೂಪವಾದ ಪೃಥಿವ್ಯಾದಿಗಳೆಲ್ಲವೂ ಅನಿತ್ಯ. ಅವಯವಿಯಾದ ಶರೀರವೂ ಅನಿತ್ಯ. ಆತ್ಮ ನಿತ್ಯ. ಅನಿತ್ಯವಾದ ಶರೀರವನ್ನು ಆತ್ಮವೆಂದು ಭ್ರಮಿಸಬಾರದು ಎನ್ನುತ್ತಾರೆ. ಆದರೆ ಈ ಶ್ಲೋಕದಲ್ಲಿ ನೇರವಾಗಿ ಶರೀರವು ಅವಯವಿಯಾಗಿ ಕಂಡಿದ್ದರಿಂದ ಅವಯವ ನಾಶವಾದಾಗ ಅವಯವಿ ನಾಶವಾಗಲೇ ಬೇಕೆಂದು ಅನಿತ್ಯತ್ವವನ್ನು ಹೇಳಿದರೆ ಸಾಕು. ಅವಯವಿಯಾಗಿದೆ ಎಂದು ಉಪಪಾದಿಸಬೇಕಾಗಿಲ್ಲ, ಹೀಗಾಗಿ 'ಅವಯವಿ ನಾಶವಾದಾಗ ಅವಯವ ಉಪಲಬ್ಧವಾಗುವುದಿಲ್ಲ' ಎಂಬ ಅಂಶ ವ್ಯರ್ಥ. ಪ್ರಕೃತಕ್ಕೆ ಅನುಪಯುಕ್ತ.

ಏವಮವಯವಾವಯವಿನೋರಪಿ ॥

ಈಶ್ವರನಿಲ್ಲದೆ ಜಲ ಪೃಥಿವ್ಯಾದಿಗಳಿಗೆ ಕಾರ್ಯಕಾರಣಭಾವ ಹೇಗೆ ಕೂಡುವುದಿಲ್ಲವೋ ಹಾಗೇ ಅವಯವ ಅವಯವಿಗಳಿಗೂ ಅಭೇದವಿರುವುದರಿಂದ ಅವಯವ ಅವಯವಿಭಾವ, ಕಾರಣ ಕಾರ್ಯಭಾವಗಳೂ ಕೂಡುವುದಿಲ್ಲ.

❖ ❖ ❖

ಅವಯವ ಅವಯವಿಗಳಿಗೆ ಅಭೇದವಿದ್ದರೂ ಸಾದೃಶ್ಯದಿಂದ ಅವಯವ ಅವಯವಿಭಾವ ಕೂಡುತ್ತದೆ ಎನ್ನುವುದೂ ಸರಿಯಲ್ಲವೆಂದು ನಾರದರು ಧರ್ಮರಾಜನಿಗೆ ಹೇಳುತ್ತಾರೆ.

ಸ್ಯಾತ್ಸಾದೃಶ್ಯಭ್ರಮಸ್ತಾವದ್ ವಿಕಲ್ಪೇ ಸತಿ ವಸ್ತುನಃ ।
ಜಾಗ್ರತ್ಸ್ವಾಪೌ ಯಥಾ ಸ್ವಪ್ನೇ ತಥಾ ವಿಧಿನಿಷೇಧತಾ ॥ ೬೧ ॥

ಅವಯವ ಅವಯವಿಗಳಿಗೆ ಅಭೇದವಿದ್ದರೂ ಸಾದೃಶ್ಯವಿದೆ ಎನ್ನುವುದೂ ಯುಕ್ತವಲ್ಲ. ಭೇದವು ಅವಯವ ಅವಯವಿಗಳಿಗೆ ಕಂಡಿದ್ದರೆ ಮಾತ್ರ ಹಾಗೆ ಹೇಳಬಹುದಿತ್ತು. ಭೇದವಿಲ್ಲದೆ ಸಾದೃಶ್ಯಭ್ರಮವೂ ಕೂಡ ಬರಲಾರದು. ಅದರಿಂದ ಸ್ವಪ್ನದಲ್ಲಿ ಕಾಣುವ ಜಾಗರ ಮತ್ತು ಸ್ವಪ್ನಗಳಂತೆ ಅಭಿನ್ನವಾದ ಅವಯವ ಅವಯವಿಗಳಲ್ಲಿ ಜಲತ್ವವಿಧಿ ಜಲತ್ವ ನಿಷೇಧ, ಪೃಥಿವೀತ್ವ ವಿಧಿ ಪೃಥಿವೀತ್ವನಿಷೇಧ ಮುಂತಾದವು ಕೂಡ ಭಗವಂತನಿಲ್ಲದೆ ಕೂಡಲಾರದು.

ಇಲ್ಲಿ ಬೇರೆ ವ್ಯಾಖ್ಯಾನಕಾರರು ಕೊಡುವ ವಿವರಣೆಗಳು ಹೀಗಿವೆ. ಅವಯವಿ ಎನ್ನುವುದು ಮಿಥ್ಯೆಯಾದರೆ 'ಅವನೇ ಈತ ದೇವದತ್ತ' ಎಂದು ಗುರುತು ಹಿಡಿಯುವುದು ಹೇಗೆ ಸಾಧ್ಯ? ಎಂಬ ಪ್ರಶ್ನೆಗೆ ಈ ಶ್ಲೋಕದಲ್ಲಿ 'ಪಾರಮಾರ್ಥಿಕ ಭೇದವಿಲ್ಲದಿದ್ದರೂ ಆವಿದ್ಯಕ ಭೇದವಿರುವುದರಿಂದ ಹಿಂದು ಹಿಂದಿನ ಆರೋಪದ ಸಾದೃಶ್ಯದಿಂದ ಮುಂದು ಮುಂದಿನ ಆರೋಪಗಳು ಉಂಟಾಗುತ್ತವೆ. ಇದು ಅವಿದ್ಯಾನಿವೃತ್ತಿಯಾಗುವವರೆಗೆ ಮಾತ್ರ. ಎಲ್ಲವೂ ಮಿಥ್ಯೆಯಾದರೆ ಶಾಸ್ತ್ರದ ವಿಧಿ ನಿಷೇಧ ವ್ಯವಸ್ಥೆ ಹೇಗೆ ಎಂದರೆ ಸ್ವಪ್ನದಲ್ಲಿ ಜಾಗರಸುಪ್ತಿಗಳ ವ್ಯವಸ್ಥೆ ಹೇಗೋ ಹಾಗೆ' ಎಂದು ಉತ್ತರ ನೀಡಿದೆ ಎಂದು ಶ್ರೀಧರ ವ್ಯಾಖ್ಯಾನ ಹೇಳುತ್ತದೆ.

ಇಲ್ಲಿ 'ವಸ್ತುನಃ ವಿಕಲ್ಪಃ' ಎಂದು ಪಂಚಮೀ ವಿಭಕ್ತಿಯಿಂದ 'ಪರಮಾತ್ಮವಸ್ತುವಿನಿಂದ ಪ್ರಪಂಚದಲ್ಲಿ ಭೇದವಿಲ್ಲ'ವೆಂದುದು ಸರಿಯಲ್ಲ. ಪ್ರಪಂಚದಿಂದ ಪರಮಾತ್ಮನಲ್ಲಿ ಭೇದವಿಲ್ಲ. ಆದರೆ ಪ್ರಪಂಚದಲ್ಲಿ ಪರಮಾತ್ಮನಿಂದ ಭೇದವಿದೆ, ಅದರಿಂದಲೇ ಬ್ರಹ್ಮ ಸತ್ಯಂ ಜಗನ್ಮಿಥ್ಯಾ ಎಂಬ ಸತ್ಯಾನೃತವಿವೇಕ ಕೂಡುತ್ತದೆ. ಶ್ರೀಧರವ್ಯಾಖ್ಯಾನದಲ್ಲಿ 'ವಸ್ತುನಃ ಪರಮಾತ್ಮನೋ ವಿಕಲ್ಪೋ ಭೇದೋಽಸತಿ' ಎಂದಿದೆ. ಬಳಿಕ ಇದು ಅಸ್ವರಸವೆಂದುಕೊಂಡು 'ಯದ್ವಾ ವಸ್ತುನೋಽವಿದ್ಯಯಾ ವಿಕಲ್ಪೇ ಸತಿ' ಎಂದು ಇನ್ನೊಂದು ವಿವರಣೆ ನೀಡಿದೆ. ಈ ವಿವರಣೆಯಲ್ಲಿ ಅವಿದ್ಯಯಾ ಎಂದು ಅಧ್ಯಾಹಾರ ಮಾಡಬೇಕಾಗುತ್ತದೆ. ಮತ್ತು ಪೂರ್ವಪೂರ್ವಾರೋಪ ಸಾದೃಶ್ಯ ಮೂಲಕವಾಗಿ ಉತ್ತರೋತ್ತರ ಆರೋಪ ಮಾಡಲು ಆವಿದ್ಯಕ ಭೇದವೇಕೆ ಬೇಕು? ಅವಿದ್ಯೆ ಸಾಕು. ಶಾಸ್ತ್ರದ ವಿಧಿ ನಿಷೇಧಗಳಿಗೆ ಸ್ವಪ್ನದಲ್ಲಿ ಕಾಣುವ ಜಾಗರ ಸುಪ್ತಿಗಳ ದೃಷ್ಟಾಂತ ಕೊಟ್ಟಿರುವುದೂ 'ವೈಧರ್ಮ್ಯಾಚ್ಚ ನ ಸ್ವಪ್ನಾದಿವತ್' ಎಂಬ ಬ್ರಹ್ಮಸೂತ್ರಕ್ಕೆ ವಿರುದ್ಧವಾಗಿದೆ.

ವೀರರಾಘವವ್ಯಾಖ್ಯಾನ ಶ್ಲೋಕದ ಎಲ್ಲ ಶಬ್ದಗಳಿಗೂ ಅನೇಕ ಅಧ್ಯಾಹಾರ ಮಾಡಿ ಕ್ಲೇಶದಿಂದ ವಿವರಣೆ ನೀಡಿದೆ.

ನ ಚ ಸಾದೃಶ್ಯಮಾತ್ರಂ । ವಸ್ತುಭೇದೇ ಹಿ ತದ್ ಯುಜ್ಯತೇ । ತಸ್ಮಾತ್ ಸ್ವಪ್ನ ಏವ ಜಾಗ್ರತ್ಸ್ವಪ್ನೌ ಯಥಾ ವಿಶೇಷತೋ ದೃಶ್ಯೇತೇ ತಥಾ ಪೃಥಿವ್ಯಬಾದಿವಿಶೇಷೋ ದುರ್ಘಟೋಽಪೀಶ್ವರಕಲ್ಪನಯೈವಾಸೌ ದೃಶ್ಯತೇ ।

ಕಾರ್ಯಕಾರಣವಸ್ತೂನಾಂ ವಿಶೇಷೋ ನ ನಿರೂಪಿತಃ ।
ತಥಾಪೀಶೇಚ್ಛಯೈವಾಸೌ ದೃಶ್ಯತೇ ನಿಯತೋಽಪಿ ಚ ॥
ಇತಿ ಚ ॥

ಭೇದವಿಲ್ಲದಿದ್ದರೂ ಅವಯವ ಅವಯವಿ ಭಾವವನ್ನು ಕೂಡಿಸಲು ಸಾದೃಶ್ಯ ಮಾತ್ರ ಸಾಕು ಎನ್ನಬಾರದು. ಏಕೆಂದರೆ ವಸ್ತುವಿಗೆ ಭೇದವಿದ್ದರೆ ಮಾತ್ರ ಸಾದೃಶ್ಯ ಕೂಡುತ್ತದೆ. ಅವಯವ ಅವಯವಿಗಳಿಗೆ ಭೇದ ಕಂಡಿಲ್ಲವಾದ್ದರಿಂದ, ಸಾದೃಶ್ಯವನ್ನು ಹೇಳಲಾಗುವುದಿಲ್ಲ. ಭೇದವಿಲ್ಲದಿದ್ದಲ್ಲಿ ಸಾದೃಶ್ಯ ಭ್ರಮವೂ ಕೂಡ ಬರುವುದಿಲ್ಲ. ಭೇದವಿಲ್ಲದಿದ್ದರೂ ಅವಯವ ಅವಯವಿ ಭಾವವನ್ನು ಕೂಡಿಸಬಲ್ಲವನು ಭಗವಂತ ಹೊರತು ಬೇರೆ ಇಲ್ಲದ್ದರಿಂದ, ಸ್ವಪ್ನದಲ್ಲಿಯೇ ಜಾಗರ ಸ್ವಪ್ನತ್ವ ರೂಪವಾದ ವಿಶೇಷ ಭಗವಂತನಿಂದ ನಿರ್ಮಿತವಾಗಿ ತೋರುವಂತೆ, ಪೃಥಿವಿಯಲ್ಲಿ ಪೃಥಿವೀತ್ವವಿಧಿ ಅದರಿಂದ ಅಭಿನ್ನವಾದ ಅದರ ಅವಯವವಾದ ಭೂತಸೂಕ್ಷ್ಮದಲ್ಲಿ ಪೃಥಿವೀತ್ವನಿಷೇಧ, ಜಲದಲ್ಲಿ ಜಲತ್ವವಿಧಿ, ಅದರಿಂದ ಅಭಿನ್ನವಾದ ಅದರ ಅವಯವವಾದ ಭೂತಸೂಕ್ಷ್ಮದಲ್ಲಿ ಜಲತ್ವ ನಿಷೇಧ ಎಂದು ಮುಂತಾಗಿ ವಿಶೇಷವು ದುರ್ಘಟವಾಗಿದ್ದರೂ ಪರಮಾತ್ಮನಿಂದ ನಿರ್ಮಿತವಾಗಿ ತೋರುತ್ತದೆ ಎಂದು ಶ್ಲೋಕಕ್ಕೆ ವಿವರಣೆ ನೀಡಬೇಕು. ಏಕೆಂದರೆ,

ಕಾರ್ಯ-ಕಾರಣ ವಸ್ತುಗಳಲ್ಲಿ ಕಾರ್ಯತ್ವ-ಕಾರಣತ್ವರೂಪ ವಿಶೇಷವು ಭಗವಂತನಿಂದ ಹೊರತು ಬೇರೆಯವರಿಂದ ನಿರ್ಮಿತವಾಗುವುದಿಲ್ಲ. ಭಗವಂತನ ಇಚ್ಛೆಯಿಂದಲೇ ಅದು ನಿರ್ಮಿತವಾಗಿ ತೋರುತ್ತದೆ ಎಂದು ಬ್ರಹ್ಮತರ್ಕದಲ್ಲಿ ಉಕ್ತವಾಗಿದೆ.

❖❖❖

ಹಿಂದಿನ ಮಹಾಕಲ್ಪದಲ್ಲಿ ನಾರದರು ತಾನು ಉಪಬರ್ಹಣನೆಂಬ

ಗಂಧರ್ವನಾಗಿದ್ದೆ ಎಂದು ಧರ್ಮರಾಜನಿಗೆ ಹೇಳುತ್ತಾರೆ.

ಅಹಂ ಪುರಾಽಭವಂ ಕಶ್ಚಿದ್‌ಗಂಧರ್ವ ಉಪಬರ್ಹಣಃ ।
ನಾಮ್ನಾಽತೀತೇ ಮಹಾಕಲ್ಪೇ ಗಂಧರ್ವಾಣಾಂ ಸುಸಮ್ಮತಃ ॥ ೬೯ ॥

ನಾನು ಹಿಂದಿನ ಮಹಾಕಲ್ಪದಲ್ಲಿ ಉಪಬರ್ಹಣನೆಂಬ ಒಬ್ಬ ಗಂಧರ್ವನಾಗಿದ್ದೆ. ಗಂಧರ್ವವಿದ್ಯೆಯಲ್ಲಿ ನನ್ನನ್ನು ಗಂಧರ್ವರು ಬಹಳ ಗೌರವದಿಂದ ಕಾಣುತ್ತಿದ್ದರು.

ಇಲ್ಲಿ 'ಅತೀತ ಮಹಾಕಲ್ಪ' ಎಂದರೆ ಈಗಿನ ಶ್ವೇತವರಾಹಕಲ್ಪಕ್ಕಿಂತ ಹಿಂದಿನ ಪಾದ್ಮಕಲ್ಪ ಎಂದರ್ಥವಲ್ಲ. ಪಾದ್ಮಕಲ್ಪದಲ್ಲಿ ನಾರದರು ನಾರದರಾಗಿಯೇ ಜನಿಸಿದ್ದಾರೆ. ಆದರಿಂದ ಹಿಂದಿನ ಬ್ರಹ್ಮಕಾಲದಲ್ಲಿ ನಾರದರು ಗಂಧರ್ವರಾಗಿದ್ದರು ಎನ್ನಬೇಕು. ಬ್ರಹ್ಮಕಾಲವೆಂದರೆ ಬ್ರಹ್ಮನ ನೂರುವರ್ಷಗಳ ಪರನಾಮಕವಾದ ಕಾಲ. ಈಗ ನಡೆಯುತ್ತಿರುವ ಬ್ರಹ್ಮಕಾಲಕ್ಕಿಂತ ಹಿಂದಿನ ಬ್ರಹ್ಮಕಾಲವನ್ನೇ 'ಅತೀತ ಮಹಾಕಲ್ಪ' ಎಂದು ಭಾಗವತ ಹೇಳಿದೆ. ಮಹಾಕಲ್ಪವೆಂದೂ ಪರ ಎಂದೂ ಬ್ರಹ್ಮಕಾಲಕ್ಕೇ ಹೆಸರುಗಳು. ಬೇರೆ ವ್ಯಾಖ್ಯಾನಕಾರರು ಮಹಾಕಲ್ಪ ಶಬ್ದಕ್ಕೆ ವಿವರಣೆ ನೀಡುವುದಿಲ್ಲ. ವೀರರಾಘವ ಭಗವತ್ಪ್ರಸಾದ ವ್ಯಾಖ್ಯಾನಗಳು ಮಾತ್ರ ಬ್ರಹ್ಮಕಲ್ಪವೆಂದು ವಿವರಣೆ ನೀಡಿವೆ.

ಅತೀತೇ ಮಹಾಕಲ್ಪೇ ಅತೀತ ಬ್ರಹ್ಮಕಾಲೇ।
ಬ್ರಹ್ಮಕಾಲಃ ಪರಶ್ಚೇತಿ ಮಹಾಕಲ್ಪಶ್ಚ ಕೀರ್ತಿತಃ ।
ಇತಿ ಚ ॥

'ಅತೀತೇ ಮಹಾಕಲ್ಪೇ' ಎಂದರೆ ಹಿಂದಿನ ಬ್ರಹ್ಮಕಾಲದಲ್ಲಿ ಎಂದರ್ಥ.

ಪರ ಎಂದೂ ಮಹಾಕಲ್ಪವೆಂದೂ ಬ್ರಹ್ಮಕಾಲಕ್ಕೇ ಹೆಸರುಗಳು ಎಂದೂ ಉಕ್ತವಾಗಿದೆ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ಸಪ್ತಮಸ್ಕಂಧೇ
ಷೋಡಶೋಽಧ್ಯಾಯಃ

ಸಪ್ತಮಃ ಸ್ಕಂಧಃ ಸಮಾಪ್ತ

❖

॥ ಶ್ರೀಗುರುಭ್ಯೋ ನಮಃ ಹರಿಃ ಓಂ ॥

ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತಃ

ಶ್ರೀಮದ್ ಭಾಗವತತಾತ್ಪರ್ಯನಿರ್ಣಯಃ

ಅಷ್ಟಮಃ ಸ್ಕಂಧಃ

ಅಧ್ಯಾಯ - ೧

ಅಧ್ಯಾಯ ಸಾರಾಂಶ

॥ ಓಂ ನಮೋ ಭಗವತೇ ವಾಸುದೇವಾಯ ಓಂ ॥

ಸ್ವಾಯಂಭುವ ಮನುವಿನ ಪುತ್ರಿಯಾದ ಆಕೂತಿಯಲ್ಲಿ ಯಜ್ಞನಾಮಕನಾಗಿ ಹರಿ ಅವತರಿಸಿದ. ಮನು ವಿಷಯಭೋಗದಲ್ಲಿ ವಿರಕ್ತನಾಗಿ ಕಾಡಿನಲ್ಲಿ ತಪಸ್ಸು ಮಾಡಿದ. ಭಗವಂತನನ್ನು ಈಶಾವಾಸ್ಯೋಪನಿಷನ್ಮಂತ್ರದಿಂದ ಸ್ತುತಿಸಿದ. 'ಓ ಮನಸ್ಸೆ ಈ ಪ್ರಪಂಚ ಅದರೊಳಗೆ ನಿಂತು ನಿಯಮನ ಮಾಡುವ ಶ್ರೀಹರಿಯ ಅಧೀನವಾಗಿದೆ. ಆದರಿಂದ ಅವನು ಕೊಟ್ಟಿದ್ದನ್ನೇ ಉಂಡು ತೃಪ್ತನಾಗು ಇನ್ನೊಬ್ಬರ ಹಣಕ್ಕೆ ಕೈ ಒಡ್ಡಬೇಡ. ವಿಹಿತ ಕರ್ಮವನ್ನು ಜೀವ ಮಾಡುತ್ತಿದ್ದರೆ ಕರ್ಮಬಂಧನದಿಂದ ಮುಕ್ತನಾಗುತ್ತಾನೆ. ಭಗವಂತನೂ ರಾಮಕೃಷ್ಣಾದಿ ಅವತಾರಗಳಲ್ಲಿ ಫಲದಾಸೆ ಇಲ್ಲದೆ ಕರ್ಮಮಾಡುತ್ತಾನೆ. ಅವನಂತೆ ನಿಷ್ಕಾಮಕರ್ಮ ಮಾಡುವವರು ಪರಮಾತ್ಮನನ್ನು ಹೊಂದಿ ಕೃತಾರ್ಥರಾಗುತ್ತಾರೆ. ಎಲ್ಲರಿಂದಲೂ

ಕರ್ಮ ಮಾಡಿಸುವ ಪ್ರಭುವಾದ ಯಜ್ಞಮೂರ್ತಿ ಪರಮಾತ್ಮನನ್ನು ಶರಣುಹೊಂದುತ್ತೇನೆ' ಎನ್ನುತ್ತ ಸ್ತೋತ್ರ ಮಾಡಿದ. ಆಗ ರಾಕ್ಷಸರು ಅಸಹನೆಯಿಂದ ಅವನನ್ನು ತಿನ್ನಲು ಧಾವಿಸಿ ಬಂದರು. ಒಡನೆ ಸರ್ವವ್ಯಾಪ್ತನಾದ ಯಜ್ಞಮೂರ್ತಿ ಶ್ರೀಹರಿ ಅವರನ್ನು ವಧಿಸಿದ.

ಸ್ವಾಯಂಭುವ ಮನ್ವಂತರದಲ್ಲಿ ಯಜ್ಞಮೂರ್ತಿ ಹರಿಯೆ ಇಂದ್ರಪದವಿಯನ್ನು ಆಳಿದ. ಬಳಿಕ ಅಗ್ನಿಪುತ್ರನಾದ ಸ್ವಾರೋಚಿಷನು ಮನುವಾದ. ಆ ಮನ್ವಂತರದಲ್ಲಿ ವಾಯುವಿನ ಅವತಾರನಾದ ರೋಚನ ಇಂದ್ರ. ವೇದಶಿರನೆಂಬ ಮುನಿಯಿಂದ ತುಷಿತಾ ಎಂಬ ಪತ್ನಿಯಲ್ಲಿ ಶ್ರೀಹರಿ ವಿಭು ಎಂಬ ಅವತಾರ ಮಾಡಿದ.

ಉತ್ತಮನೆಂಬ ಪ್ರಿಯವ್ರತ ಪುತ್ರ ಮೂರನೆ ಮನು. ಅವನ ಮನ್ವಂತರದಲ್ಲಿ ಸತ್ಯಜಿತ್ ಇಂದ್ರ. ಧರ್ಮನ ಪತ್ನಿಯಾದ ಸೂನೃತಾದೇವಿಯಲ್ಲಿ ಹರಿ ಸತ್ಯಸೇನ ಎಂಬ ಹೆಸರಿನಿಂದ ಅವತರಿಸಿದ. ಅವನು ಸತ್ಯಜಿತನ ಪ್ರಾರ್ಥನೆಯಂತೆ ಸುಳ್ಳುಹೇಳುವ ವ್ರತದವರಾದ ದುಷ್ಟ ಯಕ್ಷರಾಕ್ಷಸರನ್ನೂ ಹಿಂಸಾಪರರಾದ ಭೂತಗಳನ್ನೂ ಸಂಹರಿಸಿದ.

ಉತ್ತಮನ ತಮ್ಮನಾದ ತಾಪಸಮನು ನಾಲ್ಕನೆಯವನು. ಇವನು ಸಾಕ್ಷಾತ್ ಹರಿಯ ಅವತಾರ. ಇವನೇ ಗಜೇಂದ್ರನನ್ನು ಮೊಸಳೆಯ ಬಾಯಿಂದ ಮುಕ್ತಗೊಳಿಸಿದ.

❖ ❖ ❖

ಅಧ್ಯಾಯ - ೨

ಅಧ್ಯಾಯ ಸಾರಾಂಶ

ಹತ್ತು ಸಾವಿರ ಯೋಜನ ಎತ್ತರದ ತ್ರಿಕೂಟ ಎಂಬ ಸುಂದರವಾದ ಪರ್ವತ ಕ್ಷೀರಸಮುದ್ರದ ಮಧ್ಯದಲ್ಲಿದೆ. ಅದಕ್ಕೆ ಬೆಳ್ಳಿ ಕಬ್ಬಿಣ ಬಂಗಾರಗಳ ಮೂರು ಶಿಖರಗಳಿವೆ. ಆ ಪರ್ವತದ ಗುಹೆಗಳಲ್ಲಿ ಸಿದ್ಧ ಚಾರಣ ಗಂಧರ್ವ ವಿದ್ಯಾಧರ ಮುಂತಾದವರು ವಿಹರಿಸುತ್ತಾರೆ. ಪರ್ವತದ ತಪ್ಪಲಿನಲ್ಲಿ ವರುಣನ ಋತುಮಂತ ಎಂಬ ಸುಂದರ ಉದ್ಯಾನವಿದೆ. ಅಲ್ಲಿಗೆ ಆ ಬೆಟ್ಟದ ಕಾಡಿನಲ್ಲಿ ವಾಸಮಾಡುತ್ತಿದ್ದ ಗಜೇಂದ್ರ ಹೆಣ್ಣಾನೆಗಳೊಂದಿಗೆ ವಿಹಾರ ಮಾಡುತ್ತ ಬಂದ. ಬೇಸಗೆಯ ಬಿಸಿಲ ಬೇಗೆಯಿಂದ ಬಾಯಾರಿದ. ಆನೆಗಳ ಹಿಂಡೊಂದಿಗೆ ಒಂದು ಸರೋವರವನ್ನು ಹೊಕ್ಕು ನೀರು ಕುಡಿದು ಹೆಣ್ಣಾನೆಗಳೊಂದಿಗೆ ನೀರಾಟವಾಡಿದ. ಆಗ ಒಂದು ಬಲಿಷ್ಠವಾದ ಮೊಸಳೆ ಗಜೇಂದ್ರನ ಕಾಲನ್ನು ಹಿಡಿಯಿತು. ಮಹಾಬಲಶಾಲಿಯಾದ ಗಜೇಂದ್ರ ತನಗೆ ಶಕ್ತಿ ಇದ್ದಷ್ಟು ಮೊಸಳೆಯೊಂದಿಗೆ ಹೋರಾಡಿದ. ಹಿಂದಿನಿಂದ ಹೆಣ್ಣಾನೆಗಳೂ ಬೇರೆ ಆನೆಗಳೂ ಅವನನ್ನು ಈಚೆಗೆ ಎಳೆದು ತರಲು ಯತ್ನಿಸಿದರೂ ಅದು ಸಫಲವಾಗಲಿಲ್ಲ. ಗಜೇಂದ್ರ ಮೊಸಳೆಗಳ ದ್ವಂದ್ವ ಯುದ್ಧ ಒಂದು ಸಾವಿರ ವರ್ಷ ಕಾಲ ನಡೆಯಿತು. ದೇವತೆಗಳು ಈ ಹೋರಾಟವನ್ನು ಕಂಡು ಅಚ್ಚರಿಗೊಂಡರು.

ಮೊಸಳೆ ಗಜೇಂದ್ರನನ್ನು ನೀರೊಳಗೆ ಸೆಳೆಯುತ್ತಲೇ ಇದ್ದುದರಿಂದ ಗಜೇಂದ್ರನ ಶಕ್ತಿ ಹ್ರಾಸ ಹೊಂದಿತು. ಮೊಸಳೆಗೆ ಶಕ್ತಿ ಹೆಚ್ಚಿತು. ದೀರ್ಘಕಾಲ ಕಳೆದಮೇಲೆ ಗಜೇಂದ್ರನಿಗೆ ಒಂದು ಆಲೋಚನೆ ಹೊಳೆಯಿತು. ಈ ಆನೆಗಳು ಯಾರೂ ನನ್ನನ್ನು ರಕ್ಷಿಸಲು ಶಕ್ತರಾಗುತ್ತಿಲ್ಲ. ಭಗವಂತನ ಇಚ್ಛೆಯಿಂದ ಮೊಸಳೆಯ ಬಾಯಿಯಲ್ಲಿ ಸಿಕ್ಕಿಕೊಂಡಿದ್ದೇನೆ. ಅದರಿಂದ ಭಗವಂತನನ್ನೇ ಮೊರೆಹೋಗುತ್ತೇನೆ. ಅವನು ನನ್ನನ್ನು ಕಾಪಾಡುತ್ತಾನೆ. ಮೃತ್ಯುವೂ ಅವನಿಗೆ ಭಯಪಡುತ್ತದೆ.

❖ ❖ ❖

ಅಧ್ಯಾಯ - ೩

ಅಧ್ಯಾಯ ಸಾರಾಂಶ

ಗಜೇಂದ್ರನಿಗೆ ಪೂರ್ವಜನ್ಮ ಸ್ಮರಣೆ ಬಂದಿತ್ತು. ಅದರಿಂದ ಹಿಂದೆ ಉಪದೇಶ ಪಡೆದಿದ್ದ ಸ್ತೋತ್ರವನ್ನು ಜಪಿಸಿದ.

ಪ್ರಪಂಚಕ್ಕೆ ಮೂಲಕಾರಣನಾದ ಷಡ್ಗುಣಪೂರ್ಣನಾದ ಮೋಕ್ಷದಾಯಕನಾದ ನಾರಾಯಣ ನನ್ನನ್ನು ಕಾಪಾಡಲಿ ನಾರಾಯಣನೆ ಪ್ರಳಯಕಾಲದಲ್ಲಿ ಈ ಜಗತ್ತನ್ನು ತನ್ನ ಉದರದಲ್ಲಿ ಸೇರಿಸಿಕೊಂಡು ಒಬ್ಬನೆ ಇರುತ್ತಾನೆ. ಸ್ವಪ್ರಕಾಶನಾಗಿದ್ದು ಸ್ವತಂತ್ರನಾಗಿ ಎಲ್ಲವನ್ನೂ ನೋಡುತ್ತಾನೆ. ಅವನನ್ನು ಯಾರೂ ತಿಳಿಯಲಾರರು. ನಿಷ್ಕಾಮ ಕರ್ಮದಿಂದ ಲಭ್ಯವಾಗುವ ಜ್ಞಾನಕ್ಕೆ ಮಾತ್ರ ಗೋಚರನಾಗುತ್ತಾನೆ. ಧರ್ಮಾದಿ ಸಕಲ ಪುರುಷಾರ್ಥಗಳನ್ನು ಕೊಡುವವನು ಅವನೆ. ಬೇರೆ ಯಾರೂ ಏನೂ ಕೊಡಲು ಶಕ್ತರಲ್ಲ. ನಾನು ಅಲ್ಪಭಕ್ತನಾದರಿಂದ ಅವನಲ್ಲಿ ಇಷ್ಟಾರ್ಥವನ್ನು ಬೇಡುತ್ತೇನೆ. ಏಕಾಂತಭಕ್ತರಿಗೆ ಅವನೇ ಇಷ್ಟಾರ್ಥ. ನಾನು ಬದುಕಿ ಉಳಿಯಲು ಬಯಸುವುದಿಲ್ಲ. ನನ್ನ ಈ ಆನೆಯ ಜನ್ಮ ಅಜ್ಞಾನಮಯ ಮತ್ತು ಎಂದಾದರೂ ನಾಶವಾಗುವಂಥದ್ದು. ಅಪರೋಕ್ಷವಾಗದೆ ಎಂದೂ ನಾಶಹೊಂದದ ಲಿಂಗಶರೀರದಿಂದ ನನಗೆ ಬಿಡುಗಡೆಯಾಗಲಿ. 'ನಾನೇ ಸ್ವತಂತ್ರನೆಂ'ಬ ಬುದ್ಧಿ ನನಗೆ ಯಾರ ಶಕ್ತಿಯಿಂದ ಉಂಟಾಗುತ್ತಿದೆಯೋ ಆ ಪರಮಾತ್ಮನ ಶಕ್ತಿಯನ್ನು ಯಾರೂ ಮೀರಲಾರರು. ಅಂಥ ಪರಮಾತ್ಮನನ್ನು ನಮಿಸುತ್ತೇನೆ.'

ಗಜೇಂದ್ರ ಪರಮಾತ್ಮನನ್ನು ವರ್ಣಿಸುವಾಗ ಆದಿಕಾರಣತ್ವ ಮೋಕ್ಷದಾಯಕತ್ವ ಮುಂತಾದ ಪರಮಾತ್ಮಲಕ್ಷಣಗಳನ್ನು ಹೇಳಿದ್ದರಿಂದ ಆ ಲಕ್ಷಣ ಉಳ್ಳವರು ನಾವಲ್ಲ ಎಂದುಕೊಂಡು ಬ್ರಹ್ಮಾದಿ ದೇವತೆಗಳು ಯಾರೂ ಅವನ ರಕ್ಷಣೆಗೆ ಬರಲಿಲ್ಲ. ತಾಪಸನಾಮಕ ಹರಿ ಗರುಡಾರೂಢನಾಗಿ ಬಂದ. ಚಕ್ರಧಾರಿ ಯಾಗಿ ಆಕಾಶದಲ್ಲಿ ಪ್ರಕಟನಾದ ಹರಿಯನ್ನು ಕಂಡು ಸೊಂಡಿಲಿನಿಂದ ಒಂದು ಕಮಲದ ಹೂವನ್ನು ಎತ್ತಿ ಹಿಡಿದು ಕಷ್ಟದಿಂದ ಸರ್ವೇಶ್ವರನಾದ ಭಗವಾನ್ ನಾರಾಯಣನೆ, ನಿನಗಿದೋ ನಮಸ್ಕಾರ' ಎಂದ. ಆಗ

ಶ್ರೀಹರಿ ಗರುಡನ ವೇಗವೂ ಸಾಲದೆಂದು ಅವನ ಹೆಗಲಿನಿಂದ ಇಳಿದು ವೇಗದಿಂದ ಬಂದು ಮೊಸಳೆ ಸಹಿತವಾಗಿ ಗಜೇಂದ್ರನನ್ನು ಮೇಲೆತ್ತಿದ. ಚಕ್ರದಿಂದ ಮೊಸಳೆಯ ಬಾಯಿಯನ್ನು ಕತ್ತರಿಸಿ ಆತನನ್ನು ಬಿಡುಗಡೆ ಮಾಡಿದ.

❖❖❖

ಗಜೇಂದ್ರ ಶ್ರೀಹರಿಯನ್ನು ಸರ್ವೇಶ್ವರನೆಂದು ಸ್ತುತಿಸುತ್ತಾನೆ.

ಯಸ್ಮಿನ್ನಿದಂ ಯತಶ್ಚೇದಂ ಯೇನೇದಂ ಯ ಇದಂ ಸ್ವಯಮ್ ।
ಯೋಽಸ್ಮಾತ್ ಪರಸ್ಮಾಚ್ಚ ಪರಸ್ತಂ ಪ್ರಪದ್ಯೇ ಸ್ವಯಂಭುವಮ್ ॥ ೩ ॥

ಜಗತ್ತು ಯಾರಲ್ಲಿ ಲಯ ಹೊಂದುವುದೋ ಯಾರಿಂದ ಜನಿಸುವುದೋ, ಯಾರ ಪ್ರೇರಣೆಯಿಂದ ಎಲ್ಲ ಪ್ರವೃತ್ತಿಗಳನ್ನು ಮಾಡುವುದೋ, ಯಾರು ಈ ಪ್ರಪಂಚಕ್ಕೆ ಅಸ್ತಿತ್ವವನ್ನು ಕೊಡುವನೋ ಯಾರು ಸ್ವತಂತ್ರನೋ ಈ ಅಮುಕ್ತ ಪ್ರಪಂಚಕ್ಕಿಂತಲೂ ಆ ಮುಕ್ತಪ್ರಪಂಚಕ್ಕಿಂತಲೂ ಯಾರು ಉತ್ತಮನೋ ಸ್ವಯಂಭುವಾದ ಆ ಪರಮಾತ್ಮನನ್ನು ಶರಣು ಹೊಂದುತ್ತೇನೆ.

ಇಲ್ಲಿ 'ಯತಃ ಯೇನ' ಎಂದು ಬೇರೆ ಬೇರೆಯಾಗಿ ಹೇಳಿರುವುದರಿಂದ 'ಯತಃ' ಎಂದು ಪಂಚಮೀ ವಿಭಕ್ತಿಯಿಂದ ಬ್ರಹ್ಮನಿಗೆ ಜಗದುಪಾದಾನತ್ವವನ್ನೂ 'ಯೇನ' ಎಂದು ತೃತೀಯಾ ವಿಭಕ್ತಿಯಿಂದ ಜಗನ್ನಿಮಿತ್ತಕಾರಣತ್ವವನ್ನು ಅಂದರೆ ಕರ್ತೃತ್ವವನ್ನೂ ಹೇಳಿದಂತೆ ಕಾಣುತ್ತದೆ. ಅಭಿನ್ನ ನಿಮಿತ್ತೋಪಾದನತ್ವವೇ ಅದ್ವೈತ ವಿಶಿಷ್ಟಾದ್ವೈತ ಮುಂತಾದ ವಾದಗಳಿಗೆ ಅಭಿಮತವಾಗಿದೆ. ಅದನ್ನೇ ಭಾಗವತ ಹೇಳಿದಂತೆ ಕಾಣುತ್ತದೆ. 'ಯ ಇದಂ' ಎಂದು ಸ್ಪಷ್ಟವಾಗಿ ಉಪಾದಾನತ್ವ ಪ್ರಯುಕ್ತವಾದ ಅಭೇದವನ್ನೂ ಹೇಳಿದಂತೆ ಕಾಣುತ್ತದೆ. ಬೇರೆ ವ್ಯಾಖ್ಯಾನಕಾರರೆಲ್ಲರೂ ಹಾಗೇ ವ್ಯಾಖ್ಯಾನಿಸಿದ್ದಾರೆ.

ಆದರೆ 'ಮೃದ್ ಘಟಃ' ಮಣ್ಣೇ ಗಡಿಗೆ ಎಂದು ಉಪಾದಾನತ್ವ ಪ್ರಯುಕ್ತವಾದ ಅಭೇದವನ್ನು ಹೇಳಿದ ಮೇಲೆ ತಿರುಗಿ 'ಮಣ್ಣಿನಿಂದ ಘಟ' ಎಂದು ಉಪಾದಾನತ್ವವನ್ನು ಬೇರೆ ಹೇಳಬೇಕಾಗಿಲ್ಲ. ಹಾಗೇ ಇಲ್ಲಿ 'ಯ ಇದಂ' ಎಂದು ಅಭೇದವನ್ನು ಹೇಳಿದರೆ ಸಾಕು. 'ಯತಃ ಇದಂ' ಎಂದು ಬೇರೆ ಉಪಾದಾನತ್ವವನ್ನು ಹೇಳುವುದು ಅನಾವಶ್ಯಕ. 'ಯತಃ ಇದಂ' ಎಂದು ಉಪಾದಾನತ್ವವನ್ನು ಹೇಳಿದ ಮೇಲೆ ಉಪಾದಾನತ್ವ ಪ್ರಯುಕ್ತ ಅಭೇದವನ್ನು ಹೇಳುವುದೂ ಅನಾವಶ್ಯಕ.

ಪಂಚಮಿಯು ಉಪಾದಾನತ್ವವನ್ನು ಹೇಳದೆ ಉಪಾದಾನ ಸಂಸೃಷ್ಟ ಪದಾರ್ಥವನ್ನೇ ಹೇಳುತ್ತದೆ ಎಂದು ವ್ಯಾಕರಣ ಭಾಷ್ಯದಲ್ಲಿ ಸ್ಪಷ್ಟವಿರುವುದರಿಂದ 'ಯತಃ' ಎಂದು ಉಪಾದಾನತ್ವ ಉಕ್ತವಾಗಿಲ್ಲ, ಕರ್ತೃತ್ವ ಉಕ್ತವಾಗಿದೆ. 'ಯೇನ' ಎಂದು ಪ್ರವರ್ತಕತ್ವ ಉಕ್ತವಾಗಿದೆ. ಕರ್ತೃತ್ವ ಪ್ರವರ್ತಕತ್ವಗಳು ಒಂದೇ ಅಲ್ಲ. ಕರ್ತೃತ್ವವೆಂದರೆ ಸೃಷ್ಟಿಕರ್ತೃತ್ವ ವಿವಕ್ಷಿತವಾಗಿದೆ. ಪ್ರವರ್ತಕತ್ವವೆಂದರೆ ನಿಯಮನ ಕರ್ತೃತ್ವ. ಸೃಷ್ಟಿಕರ್ತೃತ್ವ ಸ್ಥಿತಿಕರ್ತೃತ್ವ, ಲಯಕರ್ತೃತ್ವ ನಿಯಮನ ಕರ್ತೃತ್ವಗಳೆಲ್ಲವೂ ಬೇರೆಬೇರೆಯೇ ಆಗಿರುವುದರಿಂದ ಪುನರುಕ್ತಿ ಇಲ್ಲ.

ಉಪಾದಾನತ್ವವಿಲ್ಲದಿದ್ದರೆ, ಕೇವಲ ಕರ್ತೃತ್ವ ಮಾತ್ರವಿದ್ದರೆ, 'ಯ ಇದಂ' ಎಂದು ಅಭೇದ ಹೇಗೆಂದರೆ ಸತ್ತಾಪ್ರದತ್ವವಿರುವುದರಿಂದ ಎಂದು ಬ್ರಹ್ಮತರ್ಕ ಹೇಳುತ್ತದೆ. ಪ್ರಪಂಚದ ಸತ್ತೆ, ಅಸ್ತಿತ್ವ ಭಗವಂತನ ಅಧೀನ.

ದ್ರವ್ಯಂ ಕರ್ಮ ಚ ಕಾಲಶ್ಚ ಸ್ವಭಾವೋ ಜೀವ ಏವ ಚ ।
ಯದನುಗ್ರಹತಃ ಸಂತಿ, ನ ಸಂತಿ ಯದುಪೇಕ್ಷಯಾ ॥

'ದ್ರವ್ಯ ಕರ್ಮ ಕಾಲ ಸ್ವಭಾವ ಜೀವ ಇವೆಲ್ಲವೂ ಹರಿಯ ಅನುಗ್ರಹದಿಂದ ಅಸ್ತಿತ್ವ ಪಡೆದಿವೆ. ಅವನು ಅನುಗ್ರಹ ಮಾಡದೆ ಉಪೇಕ್ಷೆಯಿಂದ ಬಿಟ್ಟುಬಿಟ್ಟರೆ ಅಸ್ತಿತ್ವವೇ ಕ್ಷಣದಲ್ಲಿ ಇಲ್ಲದಂತಾದೀತು' ಎಂದು ಹೇಳಿರುವುದರಿಂದ ಹರಿಯ ಈ ವಿಶೇಷಗುಣವನ್ನು ಭಾಗವತ ಇಲ್ಲಿ ಹೇಳಿದೆ. ಅದರಿಂದ 'ಯ ಇದಂ' ಎನ್ನುವುದು ಸಾರ್ಥಕ.

ಯತ ಇತಿ ಸ್ರಷ್ಟೃತ್ವಂ। ಯೇನೇತಿ ಪ್ರವರ್ತಕತ್ವಂ । ಯ ಇತಿ ಸತ್ತಾಪ್ರದತ್ವಂ, ನ ಸಂತಿ ಯದುಪೇಕ್ಷಯೇತ್ಯುಕ್ತತ್ವಾತ್ ।

ಉತ್ಪನ್ನಸ್ಯಾಪಿ ಯತ್ ಸತ್ತಾ ಹರೇಸ್ತತ್ ಸ ಇತೀರ್ಯತೇ ।
ಹರೇರ್ವಿಶ್ವಂ ಭಿನ್ನಮಪಿ ಪರಮೋಽಸೌ ಯತೋ ವಿಭುಃ ।
ಇತಿ ಬ್ರಹ್ಮತರ್ಕೇ ॥

'ಯತಃ ಇದಂ' ಎಂದು ಹರಿಗೆ ಪ್ರಪಂಚ ಸೃಷ್ಟಿಕರ್ತೃತ್ವ ಉಕ್ತವಾಗಿದೆ. 'ಯೇನೇದಂ' ಎಂದು ಹರಿಯು ಪ್ರಪಂಚಕ್ಕೆ ಪ್ರವರ್ತಕ ಎಂಬುದನ್ನು ಹೇಳಿದೆ. 'ಯ ಇದಂ' ಎಂದು ಅಭೇದೋಕ್ತಿಯಿಂದ ಪ್ರಪಂಚಕ್ಕೆ ಹರಿ ಸತ್ತಾಪ್ರದನೆಂಬುದನ್ನು ಹೇಳಿದೆ. 'ನ ಸಂತಿ ಯದುಪೇಕ್ಷಯಾ' ಎಂಬ ವಚನದಿಂದ ಹರಿಗೆ ಪ್ರಪಂಚಸತ್ತಾಪ್ರದತ್ವ ಸಿದ್ಧವಾಗುತ್ತದೆ.

ಉತ್ಪನ್ನವಾದ ಪದಾರ್ಥವೂ ಕೂಡ ಇರಬೇಕಾದರೆ ಆ ಅಸ್ತಿತ್ವ ಹರಿಯ ಅಧೀನ. ಅದರಿಂದ ಆ ಪದಾರ್ಥ ಅವನೇ ಎಂದು ಅಭೇದ ವ್ಯವಹಾರ ಇದೆ. ಅಭೇದವಿರುವುದರಿಂದ ಅಭೇದ ವ್ಯವಹಾರ ಎನ್ನಬಾರದು. ಹರಿಗಿಂತ ಪ್ರಪಂಚ ಭಿನ್ನವೆ. ಏಕೆಂದರೆ ಅವನು ಸರ್ವೋತ್ತಮ, ಸರ್ವಶಕ್ತ ಎಂದು ಬ್ರಹ್ಮತರ್ಕದಲ್ಲಿ ಉಕ್ತವಾಗಿದೆ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ಅಷ್ಟಮಸ್ಕಂಧೇ
ತೃತೀಯೋಽಧ್ಯಾಯಃ

❖ ❖ ❖

ಅಧ್ಯಾಯ - ೪

ಅಧ್ಯಾಯ ಸಾರಾಂಶ

ಆಗ ಬ್ರಹ್ಮರುದ್ರಾದಿ ದೇವತೆಗಳು ಋಷಿಗಳು ಗಂಧರ್ವರು ಹರಿಯ ಗಜೇಂದ್ರಮೋಕ್ಷ ಲೀಲೆಯನ್ನು ಹಾಡಿ ಹೊಗಳಿ ಹೂಮಳೆಗರೆದರು. ಮೊಸಳೆ ಹಿಂದೆ ಹೂಹೂ ಎಂಬ ಗಂಧರ್ವ. ದೇವಲ ಮುನಿಯ ಶಾಪದಿಂದ ಮೊಸಳೆಯಾಗಿದ್ದ. ಈಗ ಶಾಪಮುಕ್ತನಾಗಿ ಹರಿಗೆ ತಲೆಬಾಗಿ ನಮಿಸಿ ಗುಣಗಾನ ಮಾಡಿ ಪ್ರದಕ್ಷಿಣೆಗೈದು ತನ್ನ ಲೋಕಕ್ಕೆ ಹೊರಟುಹೋದ.

ಗಜೇಂದ್ರ ಭಗವಂತನ ಕರಸ್ಪರ್ಶದಿಂದ ಅಜ್ಞಾನಮಯವಾದ ಗಜಯೋನಿಯಿಂದ ಮುಕ್ತನಾಗಿ ಭಗವಂತನ ಸಾರೂಪ್ಯ ಹೊಂದಿದ. ಅವನು ಪೂರ್ವಜನ್ಮದಲ್ಲಿ ಪಾಂಡ್ಯದೇಶದ ದ್ರವಿಡ ರಾಜ ಇಂದ್ರದ್ಯುಮ್ನ. ವೈಷ್ಣವ ವ್ರತಗಳ ಅನುಷ್ಠಾನದಲ್ಲಿ ಬಹಳ ನಿಷ್ಠೆಉಳ್ಳವ. ಒಮ್ಮೆ ಮಲಯ ಪರ್ವತದಲ್ಲಿ ಹರಿಯನ್ನು ಆರಾಧಿಸುವಾಗ ಅಗಸ್ತ್ಯಮುನಿ ಬಂದರು. ರಾಜ ಅವರನ್ನು ನೋಡಿಯೂ ಎದ್ದು ಸತ್ಕಾರ ಮಾಡದೆ ಹರಿಯ ಆರಾಧನೆಯಲ್ಲಿಯೇ ನಿರತನಾದ. ಮುನಿ ಕುಪಿತರಾಗಿ ಶಾಪವಿತ್ತರು. 'ಆನೆಯಂತೆ ಮದಿಸಿರುವೆ, ಆನೆಯಾಗಿಯೇ ಜನಿಸು' ಎಂದು. ಪ್ರಾರಬ್ಧಕರ್ಮವೆಂದು ರಾಜ ಮುನಿಶಾಪವನ್ನು ಸ್ವೀಕರಿಸಿದ. ಹರಿಯ ಆರಾಧನೆಯ ಪ್ರಭಾವದಿಂದ ಅವನಿಗೆ ಗಜಜನ್ಮದಲ್ಲಿ ಪೂರ್ವಜನ್ಮ ಸ್ಮರಣೆ ಇದ್ದಿತು.

ದ್ವಿಜರು ಬೆಳಿಗ್ಗೆ ಎದ್ದು ಶೌಚಾಚಮನಗಳನ್ನು ಮಾಡಿ ದುಃಸ್ವಪ್ನಾದಿ ಸೂಚಿತವಾದ ಅರಿಷ್ಟಗಳ ಶಾಂತಿಗಾಗಿ ಈ ಗಜೇಂದ್ರಮೋಕ್ಷವನ್ನು ಪಠಿಸುತ್ತಾರೆ.

❖❖❖

ಅಧ್ಯಾಯ - ೫

ಅಧ್ಯಾಯ ಸಾರಾಂಶ

ತಾಪಸನ ಸೋದರನಾದ ರೈವತ ಐದನೆ ಮನು. ಅಶ್ವಿಗಳಲ್ಲಿ ಒಬ್ಬನಾದ ದಸ್ರ ವಿಭುನಾಮಕ ಇಂದ್ರನಾಗಿದ್ದ. ಶುಭ್ರ ಎಂಬ ಮುನಿಯ ಪತ್ನಿ ವಿಕುಂಠಾದೇವಿಯಲ್ಲಿ ವೈಕುಂಠನಾಮಕನಾಗಿ ಭಗವಂತ ಅವತರಿಸಿದ. ರಮಾದೇವಿಗೆ ಪ್ರಿಯವಾದ ವೈಕುಂಠ ಲೋಕವನ್ನು ನಿರ್ಮಿಸಿದ.

ಚಕ್ಷುಮುನಿಯ ಪುತ್ರ ಚಾಕ್ಷುಷ ಆರನೇ ಮನು. ಮಂದ್ರದ್ಯುಮ್ನನಾಮಕ ಪುರಂದರ ಇಂದ್ರ. ವೈರಾಜನೆಂಬ ಮುನಿಯ ಪುತ್ರನಾಗಿ ಸಂಭೂತಿ ದೇವಿಯಲ್ಲಿ ಅಜಿತನಾಮಕನಾಗಿ ಹರಿ ಅವತರಿಸಿದ. ಅವನೇ ಕ್ಷೀರಸಾಗರವನ್ನು ಮಥಿಸಿ ದೇವತೆಗಳಿಗೆ ಅಮೃತ ಉಣಿಸಿದ.

ಏಕೆಂದರೆ ದುರ್ವಾಸಮುನಿಯ ಶಾಪದಿಂದ ಮೂಲೋಕಗಳ ಐಶ್ವರ್ಯವೆಲ್ಲ ಕಣ್ಮರೆಯಾಯಿತು. ಯಜ್ಞಾದಿ ಕ್ರಿಯೆಗಳು ನಿಂತುಹೋದುವು. ಅಸುರರ ಪ್ರಾಬಲ್ಯ ಹೆಚ್ಚಿತು. ದೇವತೆಗಳು ಅಸುರರಿಂದ ಹೊಡೆಸಿಕೊಂಡು ಮೃತಪ್ರಾಯರಾಗಿ ಬೀಳ ತೊಡಗಿದರು. ಬ್ರಹ್ಮದೇವರಲ್ಲಿ ತಮ್ಮ ದುರವಸ್ಥೆಯನ್ನು ಹೇಳಿಕೊಂಡರು. ಬ್ರಹ್ಮದೇವರು ಅವರೊಂದಿಗೆ ಕ್ಷೀರಸಾಗರದ ಬಳಿಗೆ ಹೋಗಿ ಅಜಿತನ ಸ್ತೋತ್ರ ಮಾಡಿದರು-

ಅವಿದ್ಯೆ ಮತ್ತು ಜನ್ಯಜ್ಞಾನಗಳು ವಿಷಯಸುಖಾಕಾಂಕ್ಷಿಯಾದ ಜೀವನಿಗೆ ಅಧೋಗತಿ ಊರ್ಧ್ವಗತಿಗಳಿಗೆ ಕಾರಣವಾಗುವ ಎರಡು ರೆಕ್ಕೆಗಳಂತೆ. ಅವೆರಡೂ ಪರಮಾತ್ಮಪಕ್ಷಿಗೆ ಇಲ್ಲ. ಅಂಥ ಪರಮಾತ್ಮನನ್ನು ಶರಣು ಹೊಂದುವೆವು. ಜಗತ್ತಿನ ಪ್ರವಾಹ ಹರಿಯಲ್ಲಿ ಚಕ್ರದಂತೆ ಸದಾ ಸುತ್ತುತ್ತದೆ. ಹರಿಯೆ ಈ ಜಗಚ್ಚಕ್ರಕ್ಕೆ ಅಕ್ಷದಂತೆ ಆಧಾರ. ದಶೇಂದ್ರಿಯಗಳು ಮತ್ತು ಐದು ವಿಷಯಗಳೆಂದು ಹದಿನೈದು ಅರೆಕಾಲುಗಳು. ಈ ಚಕ್ರ ಉರುಳಲು ಶಕ್ತಿ ನೀಡುವವನೂ ಪರಮಾತ್ಮನೆ. ಅವನನ್ನು ಶರಣುಹೊಂದುವೆವು.

ಶ್ರೀಹರಿ, ವಿರಾಡ್ರೂಪಿಯಾದ ನಿನ್ನ ಪಾದಕ್ಕೆ ಭೂಮಿ ಪ್ರತಿಮೆ. ವರುಣ ರೇತಸ್ಸಿಗೆ ಪ್ರತಿಮೆ, ಮೂಲೋಕಕ್ಕೆ ಬದುಕನ್ನು ನೀಡುತ್ತಾನೆ. ಚಂದ್ರ ನಿನ್ನ ಮನಸ್ಸಿಗೆ ಪ್ರತಿಮೆ. ವನಸ್ಪತಿಗಳ ರಾಜ. ಲೋಕಕ್ಕೆ ಅನ್ನ ಬಲ ಆಯುಷ್ಯ ಆಹ್ಲಾದಗಳನ್ನು ನೀಡುವವನು. ಅಗ್ನಿ ಮುಖಕ್ಕೆ ಪ್ರತಿಮೆ. ವೈಶ್ವಾನರರೂಪದಿಂದ ಜಠರದಲ್ಲಿ ಅನ್ನಪಾಕ ಮಾಡುತ್ತಾನೆ. ಸೂರ್ಯ ಕಣ್ಣಿಂದ ಜನಿಸಿದವನು, ಅರ್ಚಿರಾದಿ ಮಾರ್ಗದೇವತೆ. ಮುಕ್ತಿಗೆ ದ್ವಾರ. ಸವಿತೃ ನಾಮಕನಾದ ನಿನ್ನ ಉಪಾಸನೆಗೆ ಅಧಿಷ್ಠಾನ. ಮುಖ್ಯಪ್ರಾಣ ನಿನ್ನ ಪ್ರಾಣದಿಂದ ಜನಿಸಿ ಚರಾಚರಗಳಿಗೆ ಜೀವಧಾರಣೆ ಸಹನಶಕ್ತಿ ಬಲ ಪರಾಕ್ರಮಗಳನ್ನು ನೀಡುತ್ತಾನೆ. ಜೀವಶರೀರದಲ್ಲಿ ಇಂದ್ರಿಯ ದೇವತೆಗಳಿಗೆ ಈತ ಸಾಮ್ರಾಟ್. ಬ್ರಾಹ್ಮಣಾದಿ ಚತುರ್ವರ್ಣಗಳು ನಿನ್ನ ಮುಖ ಬಾಹು ಊರು ಪಾದಗಳಿಂದ ಜನಿಸಿವೆ. ಹೀಗೆ ಸೃಷ್ಟಿ ಮಾಡಿದ ಪರಮಾತ್ಮನೆ ನಮ್ಮಲ್ಲಿ ಪ್ರಸನ್ನನಾಗು.

ಕಾಮ್ಯಕರ್ಮವನ್ನು ಬಲುಕಷ್ಟದಿಂದ ಸಾಂಗವಾಗಿ ಮಾಡಿದರೂ ಅಲ್ಪಸುಖವೆ ಫಲ. ನಿನ್ನ ಆರಾಧನೆಗಾಗಿ ಮಾಡುವ ಕರ್ಮದಲ್ಲಿ ಎಷ್ಟೋ ನ್ಯೂನತೆ ಬಂದರೂ ವಿಫಲವಾಗದು. ಏಕೆಂದರೆ ನಿನಗೆ ಜೀವಾತ್ಮರಲ್ಲಿ ಪ್ರೀತಿ ಇದೆ. ಮರದ ಬೇರು ನೀರುಂಡರೆ ರೆಂಬೆಗಳು ಸೊಂಪಾಗಿ ಬೆಳೆಯುತ್ತವೆ. ಹಾಗೇ ನೀನು ಸಂತುಷ್ಟನಾದರೆ ನಮಗೆ ದೇವತೆಗಳಿಗೆ ಎಲ್ಲರಿಗೂ ತೃಪ್ತಿಯಾಗುವುದು. ಅಂಥ ನಿನಗಿದೋ ನಮಸ್ಕಾರ.

❖ ❖ ❖

ದುರ್ವಾಸಶಾಪದಿಂದ ಮೂಲೋಕಗಳು ಐಶ್ವರ್ಯಭ್ರಷ್ಟವಾಗಿ ಅಸುರರ ಆಕ್ರಮಣಕ್ಕೊಳಗಾದಾಗ ಬ್ರಹ್ಮದೇವರು ದೇವತೆಗಳನ್ನು ಸಂತೈಸುತ್ತ ಶ್ರೀಹರಿಗೆ ಜೀವರಲ್ಲಿ ತನ್ನವರು ಬೇರೆಯವರೆಂದು ಭೇದವಿಲ್ಲ ಎನ್ನುತ್ತಾರೆ.

ನ ಯಸ್ಯ ವಧ್ಯೋ ನ ಚ ರಕ್ಷಣೀಯೋ
ನೋಪೇಕ್ಷಣೀಯಾದರಣೀಯಪಕ್ಷಃ ।
ಅಥಾಪಿ ಸರ್ಗಸ್ಥಿತಿಸಂಯಮಾರ್ಥಂ
ಧತ್ತೇ ರಜಃಸತ್ತ್ವತಮಾಂಸಿ ಕಾಲೇ ॥ ೨೨ ॥

ತನ್ನ ಪ್ರಯೋಜನ ಉದ್ದೇಶದಿಂದ ಹರಿಗೆ ಯಾರೂ ವಧ್ಯರಿಲ್ಲ, ಯಾರೂ ರಕ್ಷಣೆಗೆ ಯೋಗ್ಯರೂ ಇಲ್ಲ, ಯಾರೂ ಉಪೇಕ್ಷ್ಯರೂ ಇಲ್ಲ, ಯಾರೂ ಆದರಣೀಯರೂ ಇಲ್ಲ. ಆದರೂ ಭಕ್ತರನ್ನು ಅನುಗ್ರಹಿಸುವುದಕ್ಕಾಗಿ ಆಯಾ ಕಾಲದಲ್ಲಿ ಸೃಷ್ಟಿ ಸ್ಥಿತಿ ಲಯಗಳನ್ನು ಮಾಡುವ ಉದ್ದೇಶದಿಂದ ರಜಸ್ಸುಸತ್ವತಮೋಗುಣಗಳನ್ನು ವೃದ್ಧಿಪಡಿಸುತ್ತಾನೆ.

ಇಲ್ಲಿ ಪರಮಾತ್ಮ ಎಲ್ಲರನ್ನೂ ಒಂದೇ ದೃಷ್ಟಿಯಿಂದ ಕಾಣುವವನು ಎನ್ನುವುದಾದರೆ ಅವನನ್ನು ದೇವತೆಗಳು ಮೊರೆಹೋಗುವುದರಿಂದೇನು ಪ್ರಯೋಜನ? ಎಂಬ ಪ್ರಶ್ನೆ ಬರುತ್ತದೆ. ಅದಕ್ಕೆ ಶ್ರೀಧರ ವ್ಯಾಖ್ಯಾನದಲ್ಲಿ 'ದೇವತೆಗಳು ಹರಿಯನ್ನು ಮೊರೆಹೊಕ್ಕರೆ ಹರಿ ಅವರ ಪಕ್ಷಪಾತಿಯಾಗುತ್ತಾನೆ, ಎರಡು ಶ್ಲೋಕಗಳಲ್ಲಿ ಇದು ಸ್ಪಷ್ಟವಿದೆ' ಎಂದಿದೆ. ಮುಂದಿನ ಶ್ಲೋಕದಲ್ಲಿ 'ಸುರಪ್ರಿಯಃ' ಎಂದಿದೆ. ಅದಕ್ಕೆ 'ಸುರಪ್ರಿಯನಾಗಿದ್ದಾನೆ' ಎಂದರ್ಥವಲ್ಲ, ಸುರಪ್ರಿಯನಾಗುತ್ತಾನೆ, 'ಸುರರ ಪಕ್ಷಪಾತಿಯಾಗುತ್ತಾನೆ' ಎಂದರ್ಥ ಎಂದು ಇವರು ವ್ಯಾಖ್ಯಾನಿಸುತ್ತಾರೆ.

ವಸ್ತುತಃ ಹರಿ ಅನಾದಿಕಾಲದಿಂದ ಸುರಪ್ರಿಯನೆ. ಅದರಿಂದಲೇ ಸುರರಿಗೆ ತನ್ನನ್ನು ಮೊರೆ ಹೋಗಲು ಪ್ರೇರಿಸಿ ಬಳಿಕ ಅವರನ್ನು ಕಷ್ಟದಿಂದ ಪಾರುಮಾಡುತ್ತಾನೆ. ಇಲ್ಲದಿದ್ದರೆ ಸುರರು ಮಾತ್ರ ಕಷ್ಟಕಾಲದಲ್ಲಿ ಹರಿಯನ್ನು ಮೊರೆ ಹೋಗುತ್ತಾರೆ ಏಕೆ ? ದೈತ್ಯರು ಏಕೆ ಹಾಗೆ ಮಾಡುವುದಿಲ್ಲ? ಅದರಿಂದ ಹರಿ ಸುರರ ಪಕ್ಷಪಾತಿಯೆ. ಯಾರ ಪಕ್ಷಪಾತಿಯೂ ಅಲ್ಲ ಎನ್ನುವ ಮಾತಿಗೆ 'ತನ್ನ ಸ್ವಾರ್ಥ ಸಾಧನೆಯ ಉದ್ದೇಶದಿಂದ ಅವನು ಯಾರ ಪಕ್ಷವನ್ನೂ ವಹಿಸುವುದಿಲ್ಲ' ಎಂದರ್ಥ. ಇದೂ ಬ್ರಹ್ಮತರ್ಕ ವಚನದಿಂದ ಸಿದ್ಧವಾಗುತ್ತದೆ.

ಅನುಗ್ರಾಹ್ಯತಯಾ ಪಕ್ಷಾ ದೇವಾ ನಾತ್ಮಾರ್ಥತೋ ಹರೇಃ।
ಇತಿ ಚ ।

ದೇವತೆಗಳು ಭಕ್ತರಾದ್ದರಿಂದ ಅನುಗ್ರಹಯೋಗ್ಯರೆಂದೇ ಹರಿ ಅವರ ಪಕ್ಷಪಾತಿ ಹೊರತು ತನ್ನ ಸ್ವಾರ್ಥಕ್ಕಾಗಿ ಯಾರ ಪಕ್ಷದಲ್ಲಿಯೂ ಇರುವುದಿಲ್ಲ ಎಂದೂ ಬ್ರಹ್ಮತರ್ಕ ಹೇಳಿದೆ.

❖ ❖ ❖

ದುರ್ವಾಸಶಾಪದಿಂದ ಮೂಲೋಕವು ಅಸುರರ ದಾಳಿಗೊಳಗಾದಾಗ ಎಲ್ಲ ದೇವತೆಗಳೊಡನೆ ಬ್ರಹ್ಮದೇವರು ಕ್ಷೀರಸಾಗರದ ಬಳಿಗೆ ಹೋಗಿ ಹರಿಯನ್ನು ಸ್ತೋತ್ರ ಮಾಡುತ್ತಾರೆ.

ವಿಪಶ್ಚಿತಂ ಪ್ರಾಣಮನೋಧಿಯಾತ್ಮನಾಂ
ಅರ್ಥೇಂದ್ರಿಯಾಭಾಸಮನಿದ್ರಮವ್ರಣಮ್ ।
ಛಾಯಾತಪೌ ಯತ್ರ ನ ಗೃಧ್ರಪಕ್ಷೌ
ತಮಕ್ಷರಂ ಖಂ ತ್ರಿಯುಗಂ ವ್ರಜಾಮಹೇ ॥ ೨೭ ॥

ಪರಮಾತ್ಮ ಪ್ರಾಣ ಮನಸ್ಸು ಬುದ್ಧಿ ಜೀವಾತ್ಮರನ್ನು ಬಲ್ಲವನು. ಜೀವರಿಗೆ ವಿಷಯಪದಾರ್ಥಗಳ ಜ್ಞಾನವನ್ನು ಇಂದ್ರಿಯಗಳಿಂದ ಉಂಟುಮಾಡುವವನು, ನಿದ್ರೆ ಇಲ್ಲದವನು, ಶರೀರದಲ್ಲಿ ಎಂದೂ ಗಾಯವಿಲ್ಲದವನು. ಅವಿದ್ಯೆ ಮತ್ತು ಶಾಸ್ತ್ರಜನ್ಯಜ್ಞಾನಗಳು ವಿಷಯಾಕಾಂಕ್ಷಿಯಾದ ಜೀವನಿಗೆ ಅಧೋಗತಿ ಮತ್ತು ಊರ್ಧ್ವಗತಿಗಳಿಗೆ ಕಾರಣವಾದ ಎರಡು ರೆಕ್ಕೆಗಳಂತೆ. ಅವೆರಡೂ ಜೀವಪಕ್ಷಿಗೆ ಇವೆ, ಪರಮಾತ್ಮಪಕ್ಷಿಗೆ ಇಲ್ಲ. ಅವನು ನಾಶರಹಿತ ಜ್ಞಾನರೂಪ, ಕೃತ ತ್ರೇತಾ ದ್ವಾಪರವೆಂಬ ಮೂರು ಯುಗಗಳಲ್ಲಿ ಮಾತ್ರ ಅವತರಿಸುವವನು. ಅಂಥ ಪರಮಾತ್ಮನನ್ನು ಶರಣು ಹೊಂದುವೆವು.

ಇಲ್ಲಿ ಛಾಯಾ ಎಂದರೆ ಅಜ್ಞಾನ, ಆತಪ ಎಂದರೆ ಜ್ಞಾನ. ಭಗವಂತನಲ್ಲಿ ಜ್ಞಾನ ಅಜ್ಞಾನಗಳು ಎರಡೂ ಇಲ್ಲ ಎಂದು ಭಾಗವತ ಹೇಳಿದಂತೆ ಕಾಣುತ್ತದೆ. ಬೇರೆ ವ್ಯಾಖ್ಯಾನಕಾರರು ಹಾಗೇ ಹೇಳುತ್ತಾರೆ. ಆದರೆ ಭಗವಂತನಲ್ಲಿ ಅಜ್ಞಾನವಿಲ್ಲ ನಿಜ. ಜ್ಞಾನವೂ ಇಲ್ಲವೆಂದರೆ ಹೇಗೆ? ಅವನು ಕಲ್ಲಿನಂತೆ ಜಡವೆ? ಎಂಬ ಪ್ರಶ್ನೆ ಬರುತ್ತದೆ. ಅದರಿಂದ ಜ್ಞಾನವನ್ನು ಒಪ್ಪಬೇಕು.

ಆತಪವೆಂದರೆ ಅಜ್ಞಾನನಿವರ್ತಕವಾದ ಜ್ಞಾನ. ಅದು ಭಗವಂತನಲ್ಲಿಲ್ಲ ಎಂದು ಶ್ರೀಧರ ವ್ಯಾಖ್ಯಾನ ಹೇಳುತ್ತದೆ. ಏಕೆಂದರೆ ಅದ್ವೈತ ಮತದಲ್ಲಿ ಭಗವಂತನ ಸ್ವರೂಪಭೂತವಾದ ಜ್ಞಾನ ಅಜ್ಞಾನನಿವರ್ತಕವಲ್ಲ, ಅಜ್ಞಾನಕ್ಕೆ ಭಾಸಕ. ಜೀವನಲ್ಲಿಯೂ ಅಜ್ಞಾನನಿವರ್ತಕವಲ್ಲದೆ ಅದೇ ಸ್ವರೂಪಜ್ಞಾನವಿದೆ. ಆದರೆ ಅಜ್ಞಾನನಿವರ್ತಕವಾದ ವೃತ್ತಿಜ್ಞಾನವೂ ಅವನಲ್ಲಿ ಇದೆ. ಅದರಿಂದ ಜ್ಞಾನ ಅಜ್ಞಾನಗಳೆರಡೂ ಜೀವನಲ್ಲಿವೆ. ಎರಡೂ ಭಗವಂತನಲ್ಲಿಲ್ಲ ಎಂದು ಶ್ರೀಧರವ್ಯಾಖ್ಯಾನದ ಅಭಿಪ್ರಾಯ.

ಆದರೆ ಭಗವಂತನ ಸ್ವರೂಪಭೂತವಾದ ಜ್ಞಾನವು ಅಜ್ಞಾನಕ್ಕೆ ವಿರೋಧಿಯಲ್ಲದಿದ್ದರೆ ಭಗವಂತನಲ್ಲಿ ಎಂದೂ ಅಜ್ಞಾನವಿಲ್ಲದಿರಲು ಕಾರಣವೇನು? ಸೂರ್ಯನಲ್ಲಿ ತಮೋವಿರೋಧಿಯಾದ ಪ್ರಕಾಶವಿರುವುದರಿಂದ ಅವನಲ್ಲಿ ತಮಸ್ಸು ಇಲ್ಲ ಎನ್ನಬೇಕು ಹೊರತು ತಮಸ್ಸಿಲ್ಲದಿರುವುದರಿಂದ ಅವನ ಪ್ರಕಾಶ ತಮೋವಿರೋಧಿಯಲ್ಲ ಎನ್ನಲಾಗದು.

ಅದ್ವೈತಿಗಳು ಜೀವಬ್ರಹ್ಮರಿಗೆ ಅದ್ವೈತವನ್ನು ಹೇಳಿರುವುದರಿಂದ ಜೀವನಲ್ಲಿ ಅಜ್ಞಾನಾನಿವರ್ತಕವಾಗಿರುವ ಸ್ವರೂಪಭೂತ ಜ್ಞಾನವೇ ಭಗವಂತನಲ್ಲಿಯೂ ಇದೆ. ಅದು ಅಜ್ಞಾನನಿರ್ವತಕವಲ್ಲ, ಅಜ್ಞಾನ ವಿರೋಧಿಯಲ್ಲ ಎನ್ನಬೇಕಾಯಿತು. ದ್ವೈತಿಗಳಿಗೆ ಈ ಸಮಸ್ಯೆಯಿಲ್ಲ. ಜೀವರಲ್ಲಿಯೂ ಸ್ವರೂಪಭೂತ ಜ್ಞಾನ ಅಜ್ಞಾನನಿವರ್ತಕವೇ. ಆದರೂ ಭಗವಂತನ ಶಕ್ತಿಯಿಂದ ಅವರಲ್ಲಿ ಈ ಜ್ಞಾನದೊಂದಿಗೆ ಅಜ್ಞಾನವೂ ಕೂಡಿಕೊಂಡಿದೆ. ಕೊನೆಗೆ ಭಗವಂತನ ಶಕ್ತಿಯಿಂದಲೆ ಜನ್ಯಜ್ಞಾನದೊಂದಿಗೆ ಸ್ವರೂಪಭೂತಜ್ಞಾನ ಸೇರಿಕೊಂಡು ಅಜ್ಞಾನವನ್ನು ನಾಶಪಡಿಸುತ್ತದೆ. ಈ ಜನ್ಯಜ್ಞಾನವು ಜೀವನಿಗಿದೆ, ಪರಮಾತ್ಮನಿಗೆ ಇಲ್ಲ. ಈ ಅಭಿಪ್ರಾಯದಿಂದ ಪರಮಾತ್ಮನಿಗೆ ಅಜ್ಞಾನ ಜ್ಞಾನ ಎರಡೂ ಇಲ್ಲ ಎಂದು ಭಾಗವತ ಹೇಳುತ್ತಿದೆ. ಸ್ವರೂಪಜ್ಞಾನಶಕ್ತಿಯಿಂದ ಎಂದೂ ಅಜ್ಞಾನವಿಲ್ಲದವನಿಗೆ ಅದನ್ನು ಓಡಿಸಲು ಜನ್ಯಜ್ಞಾನವೇಕೆ ಬೇಕು ಎಂದು.

ವೀರರಾಘವ ಭಗವತ್‌ಪ್ರಸಾದ ವ್ಯಾಖ್ಯಾನಗಳಲ್ಲಿ ಮಾತ್ರ ಭಗವಂತನಲ್ಲಿ ಅಜ್ಞಾನ ಮತ್ತು ಅಜ್ಞಾನಮಿಶ್ರವಾದ ಜ್ಞಾನ ಎರಡೂ ಇಲ್ಲ ಎಂದಿದೆ. ಆದರೆ ಅಜ್ಞಾನವಿಲ್ಲ ಎಂದರೆ ಸಾಕು. ಅಜ್ಞಾನ ಮಿಶ್ರವಾದ ಜ್ಞಾನವಿಲ್ಲ ಎಂದೇಕೆ ಹೇಳಬೇಕು? ಜ್ಞಾನವಿದೆ, ಅಜ್ಞಾನವಿಲ್ಲ ಎಂದರೆ ಅಜ್ಞಾನಮಿಶ್ರವಾದ ಜ್ಞಾನವಿಲ್ಲ ಎಂದೇ ಅರ್ಥ.

ಛಾಯಾ ತ್ವವಿದ್ಯಾ ಸಂಪ್ರೋಕ್ತಾ ಜನ್ಯವಿದ್ಯಾऽऽ ತಪಃ ಸ್ಮೃತಃ ।
ಜೀವಗೃಧ್ರಸ್ಯ ತೌ ಪಕ್ಷಾವಧಊರ್ಧ್ವಪಥೋಃ ಪೃಥಕ್ ।
ತೌ ವಿಷ್ಣೋಸ್ತು ನ ವಿದ್ಯೇತೇ ನಿತ್ಯವಿದ್ಯಾಸ್ವರೂಪಿಣಃ । ಇತಿ ಚ ।

ಛಾಯೆ ಎಂದರೆ ಅವಿದ್ಯೆ. ಆತಪ ಎಂದರೆ ಶಾಸ್ತ್ರಜನ್ಯವಾದ ವಿದ್ಯೆ. ಜೀವ ಗೃಧ್ರಪಕ್ಷಿಯಂತೆ. ಗೃಧು ಅಭಿಕಾಂಕ್ಷಾಯಾಂ ಧಾತುವಿನಿಂದ ವಿಷಯ ಸುಖಾಕಾಂಕ್ಷಿಯಾದ್ದರಿಂದ ಗೃಧ್ರ ಎನಿಸುತ್ತಾನ. ಈ ಪಕ್ಷಿ ಅವಿದ್ಯೆ ಎಂಬ ರೆಕ್ಕೆಯಿಂದ ಅಧೋಲೋಕಕ್ಕೂ ಶಾಸ್ತ್ರಜನ್ಯಜ್ಞಾನವೆಂಬ ರೆಕ್ಕೆಯಿಂದ ಊರ್ಧ್ವಲೋಕಕ್ಕೂ ಹೋಗುತ್ತಾನೆ. ಪರಮಾತ್ಮನಿಗೆ ಹೀಗೆ ಎರಡು ರೆಕ್ಕೆಗಳಿಲ್ಲ. ಏಕೆಂದರೆ ಅವನು ನಿತ್ಯಜ್ಞಾನಸ್ವರೂಪಿ. ಅಜ್ಞಾನವೂ ಇಲ್ಲ, ಜನ್ಯಜ್ಞಾನವೂ ಅವನಿಗೆ ಇಲ್ಲ ಎಂದೂ ಉಕ್ತವಾಗಿದೆ.

❖ ❖ ❖

ದುರ್ವಾಸರ ಶಾಪದಿಂದ ಮೂಲೋಕವು ಅಸುರರ ಆಕ್ರಮಣಕ್ಕೊಳ

ಗಾದಾಗ ಬ್ರಹ್ಮದೇವರು ಎಲ್ಲ ದೇವತೆಗಳೊಂದಿಗೆ ಕ್ಷೀರಸಾಗರದ ಬಳಿಯಲ್ಲಿ ಶ್ರೀಹರಿಯನ್ನು ಸ್ತೋತ್ರ ಮಾಡುತ್ತಾರೆ.

ಅಜಸ್ಯ ಚಕ್ರಂ ತ್ವಜಯೇರ್ಯಮಾಣಂ
ಮನೋಮಯಂ ಪಂಚದಶಾರಮಾಶು ।
ತ್ರಿಣಾಭಿ ವಿದ್ಯುದ್ಬಲಮಷ್ಟನೇಮಿ
ಯದಕ್ಷಮಾಹುಸ್ತಮೃತಂ ಪ್ರಪದ್ಯೇ ॥ ೨೮ ॥

ಜಗತ್ತು ಪ್ರವಾಹರೂಪದಿಂದ ಹರಿಯಲ್ಲಿ ಸದಾ ಸುತ್ತುತ್ತಿರುತ್ತದೆ, ಹರಿಯೆ ಈ ಜಗಚ್ಚಕ್ರಕ್ಕೆ ಅಕ್ಷದಂತೆ ಆಧಾರ. ಪ್ರಕೃತಿಯ ಪ್ರೇರಣೆಯಿಂದ ಚಕ್ರ ಸುತ್ತುತ್ತದೆ. ಅದಕ್ಕೆ ಮನಸ್ಸು ಪ್ರಧಾನ ಕಾರಣ. ಹತ್ತು ಇಂದ್ರಿಯಗಳು ಮತ್ತು ಐದು ವಿಷಯಗಳೆಂದು ಒಟ್ಟು ಹದಿನೈದು ಅರೆಕಾಲುಗಳು. ತ್ರಿಗುಣಗಳು ನಾಭಿ. ದೇವ ದಾನವ ಗಂಧರ್ವ ಪಶು ನರ ಪಿಶಾಚ ರಾಕ್ಷಸ ಸ್ಥಾವರಗಳೆಂದು ಎಂಟು ಪಟ್ಟಿಗಳು. ಜೀವನ ಈ ಸಂಸಾರ ಚಕ್ರ ಉರುಳಲು ಶಕ್ತಿ ನೀಡುವವನೂ ಪರಮಾತ್ಮನೆ. ಅವನನ್ನು ಶರಣು ಹೊಂದುವವು.

ಇಲ್ಲಿ 'ವಿದ್ಯುದ್‌ಬಲಂ' ಎಂದರೆ ಮಿಂಚಿನಂತೆ ಹೊಳೆಯುವ ಪರಮಾತ್ಮನೆ ಜೀವನ ಸಂಸಾರಚಕ್ರಕ್ಕೆ ಉರುಳುವ ಶಕ್ತಿ ನೀಡುವವನು ಎಂದರ್ಥ. ಬೇರೆ ವ್ಯಾಖ್ಯಾನಕಾರರು ವಿದ್ಯುಚ್ಚಲಂ ಎಂದು ಪಾಠವಿಟ್ಟುಕೊಂಡಿದ್ದಾರೆ. ಮಿಂಚಿನಂತೆ ವೇಗದಿಂದ ಉರುಳುತ್ತದೆ ಎಂದು ವ್ಯಾಖ್ಯಾನಿಸಿದ್ದಾರೆ. ಆದರೆ 'ಆಶು' ಎಂಬ ಶಬ್ದಕ್ಕೂ ವೇಗದಿಂದ ಉರುಳುವಂಥದ್ದೆಂದು ಅರ್ಥ. ಅದು ವ್ಯರ್ಥವಾಗುತ್ತದೆ. ಆದರಿಂದ 'ವಿದ್ಯುದ್‌ಬಲಂ' ಎಂಬ ಪಾಠವೆ ಉತ್ತಮ. ಮತ್ತು 'ಜಗಚ್ಚಕ್ರಕ್ಕೆ ಅಕ್ಷರೂಪನೂ ಬಲರೂಪನೂ ಕೇಶವನೆ' ಎನ್ನುವ ಬ್ರಹ್ಮತರ್ಕವಚನದಿಂದ ಮತ್ತು 'ವಿದ್ಯುದ್ ಬ್ರಹ್ಮೇತ್ಯುಪಾಸೀತ' ಎಂಬ ಶ್ರುತಿಯಿಂದ 'ವಿದ್ಯುತ್' ಎನಿಸಿದ ಕೇಶವನೆ ಜಗಚ್ಚಕ್ರಕ್ಕೆ ಬಲಪ್ರದ ಎಂದು ಹೇಳಿದಂತಾಗಿರುವುದರಿಂದ ಭಾಗವತ ಪಾಠವು 'ವಿದ್ಯುದ್‌ಬಲಂ' ಎಂದೇ ಹೊರತು 'ವಿದ್ಯುಚ್ಚಲಂ' ಎಂದಲ್ಲ ಎಂದೂ ಸಿದ್ಧವಾಗುತ್ತದೆ.

'ತ್ರಿನಾಭಿ' ಎಂದರೆ ಈ ಸಂಸಾರಚಕ್ರಕ್ಕೆ ಮೂರು ನಾಭಿಗಳು ಎಂದು ಹೇಳಿದಂತೆ ಕಾಣುತ್ತದೆ. ಹಾಗೇ ಭಗವತ್ಪ್ರಸಾದ ವ್ಯಾಖ್ಯಾನದಲ್ಲಿ ಹೇಳಿದೆ. 'ತ್ರಯಃ ಸತ್ವಾದಯೋ ಗುಣಾ ಏವ ನಾಭಯೋ ಯಸ್ಯ ತತ್' ಸತ್ವಾದಿ ಮೂರುಗುಣಗಳು

ಈ ಚಕ್ರಕ್ಕೆ ನಾಭಿಗಳು ಎಂದು ವಿವರಣೆ ನೀಡಿದ್ದಾರೆ. ವಸ್ತುತಃ ನಾಭಿ ಒಂದೇ. ಮೂರು ಗುಣಗಳು ನಾಭಿಸ್ಥಾನದಲ್ಲಿ ಇವೆ ಎಂದಿಷ್ಟೇ ಅರ್ಥ.

ಗುಣತ್ರಯನಾಭಿ । ವಿದ್ಯುದ್ ಬ್ರಹ್ಮ ।
ವಿದ್ಯುದ್ ಬ್ರಹ್ಮೇ ತ್ಯುಪಾಸೀತೇತಿ ಶ್ರುತೇಃ ।
ಜಗಚ್ಚಕ್ರಸ್ಯಾಕ್ಷಭೂತೋ ಬಲರೂಪಶ್ಚ ಕೇಶವಃ । ಇತಿ ಚ ॥

ಗುಣತ್ರಯವು ಈ ಚಕ್ರದ ನಾಭಿಪ್ರದೇಶದಲ್ಲಿದೆ ಎಂದು ತ್ರಿನಾಭಿ ಶಬ್ದದ ಅರ್ಥ. 'ವಿದ್ಯುದ್‌ಬಲಂ' ಎಂಬಲ್ಲಿ 'ವಿದ್ಯುತ್' ಎಂದರೆ ಪರಮಾತ್ಮ. ಸ್ವತಂತ್ರವಾಗಿ ಮಿಂಚಿನಂತೆ ಹೊಳೆಯುತ್ತಾನೆ ಎಂದರ್ಥ. ಇದಕ್ಕೆ 'ವಿದ್ಯುದ್‌ಬ್ರಹ್ಮೇತ್ಯುಪಾಸೀತ' ಬ್ರಹ್ಮನನ್ನು ವಿದ್ಯುತ್ತೆಂದು ಉಪಾಸನೆ ಮಾಡಬೇಕು' ಎಂಬ ಶ್ರುತಿಯು ಪ್ರಮಾಣ.

'ಜಗಚ್ಚಕ್ರಕ್ಕೆ ಅಕ್ಷದಂತೆ ಆಧಾರನೂ ಅದಕ್ಕೆ ಉರುಳುವ ಬಲ ನೀಡುವವನೂ ಕೇಶವನೇ' ಎಂದೂ ಬ್ರಹ್ಮತರ್ಕ ಹೇಳಿದೆ.

❖❖❖

ದುರ್ವಾಸರ ಶಾಪದಿಂದ ಮೂಲೋಕವು ಅಸುರರ ಆಕ್ರಮಣಕ್ಕೊಳಗಾದಾಗ ಬ್ರಹ್ಮದೇವರು ಶ್ರೀಹರಿಯನ್ನು ಸ್ತೋತ್ರ ಮಾಡುತ್ತಾರೆ.

ನ ಯಸ್ಯ ಕಶ್ಚಾತಿಪಿಪರ್ತಿ ಮಾಯಾಂ
ಯಯಾ ಜನೋ ಮುಹ್ಯತಿ ವೇದ ನಾರ್ಥಮ್ ।
ತಂ ನಿರ್ಜಿತಾತ್ಮಾತ್ಮಗುಣಂ ಪರೇಶಂ
ನಮಾಮಿ ಭೂತೇಷು ಸಮಂ ಚರಂತಮ್ ॥ ೩೦ ॥

ಯಾರ ಸಂಕಲ್ಪವನ್ನು ಯಾರೂ ಅತಿಕ್ರಮಿಸಲಾರರೋ ಯಾರ ಇಚ್ಛೆಯಿಂದ ಜೀವರು ಮೋಹಿತರಾಗುವರೋ ಮತ್ತು ಅದರಿಂದ ಅವರು ತಮ್ಮ ಸ್ವರೂಪವನ್ನೇ ತಾವು ಅರಿಯಲಾರರೋ ಆ ಪರಮಾತ್ಮ ಎಲ್ಲ ಆತ್ಮರನ್ನೂ ಆತ್ಮರ ಗುಣಗಳನ್ನೂ ಗೆದ್ದು ತನ್ನ ಅಧೀನದಲ್ಲಿರಿಸಿಕೊಂಡಿದ್ದಾನೆ. ಪಕ್ಷಪಾತ ಮಾಡದೆ ಸಮಾನವಾಗಿ ಯೋಗ್ಯತಾನುಸಾರ ಎಲ್ಲ ಪ್ರಾಣಿಗಳನ್ನೂ ನೋಡಿಕೊಳ್ಳುತ್ತಾನೆ. ಅಂಥ ಪರಮೇಶ್ವರನನ್ನು ನಮಿಸುತ್ತೇನೆ.

ಇಲ್ಲಿ 'ನಿರ್ಜಿತಾತ್ಮಾತ್ಮಗುಣಂ' ಎಂಬುದಕ್ಕೆ ಆತ್ಮ ಮತ್ತು ಆತ್ಮಗುಣ ಎಂದು ದ್ವಂದ್ವಸಮಾಸ ಮಾಡಿ ಆತ್ಮಾತ್ಮಗುಣಗಳನ್ನು ಗೆದ್ದುಕೊಂಡವನೆಂದು ಬಹುವ್ರೀಹಿ ಸಮಾಸದಿಂದ ಅರ್ಥ ಹೇಳಬೇಕು. ಆದರೆ ಆತ್ಮಶಬ್ದಕ್ಕೆ ಅನೇಕ ಅರ್ಥಗಳಿರುವುದರಿಂದ ಜೀವ ಮತ್ತು ಶರೀರ ಎಂದೋ ಶರೀರ ಮತ್ತು ಮನಸ್ಸೆಂದೋ ಪ್ರಕೃತಿ ಮತ್ತು ಜೀವ ಎಂದೋ ಬೇರೆ ಬೇರೆ ಅರ್ಥವಿಟ್ಟುಕೊಂಡು ಆತ್ಮ ಮತ್ತು ಆತ್ಮ ಎಂದು ದ್ವಂದ್ವ ಸಮಾಸ ಮಾಡಬಹುದೇ ಎಂಬ ಸಂಶಯ ಉಂಟಾಗುವ ಸಾಧ್ಯತೆ ಇದೆ. ಒಂದೇ ರೀತಿಯ ಎರಡು ಶಬ್ದಗಳಿಗೆ ದ್ವಂದ್ವ ಸಮಾಸವಿಲ್ಲ, ಅದಕ್ಕೆ ಅಪವಾದವಾಗಿ ಏಕಶೇಷ ಬರುತ್ತದೆ. ಅದರಿಂದ ಈ ಸಂಶಯಕ್ಕೆ ಆಸ್ಪದವಿಲ್ಲ, ನಿಜ. ಆದರೂ ಶಬ್ದಗಳು ಒಂದೇ ರೀತಿ ಇದ್ದರೂ ಅರ್ಥ ಬೇರೆಯಾದರೆ ದ್ವಂದ್ವಸಮಾಸ ಮಾಡಬಹುದೆಂದು ತಿಳಿಯುವ ಸಂಭವವಿದೆ. ಬೇರೆ ವ್ಯಾಖ್ಯಾನಕಾರರು ಹಾಗೆ ತಿಳಿದುದೂ ಉಂಟು.

[೧]ಪರಮಾತ್ಮನು ಜೀವರಲ್ಲಿಯೂ ಅವರ ಶರೀರದಲ್ಲಿಯೂ ನೆಲೆಸಿದ್ದಾನೆ. ಆದರೆ ಜೀವರ ಮತ್ತು ಅವರ ಶರೀರಗಳ ದೋಷಗಳು ಅವನಿಗೆ ಲೇಪವಾಗುವುದಿಲ್ಲ ಎಂಬ ಮಹಿಮೆಯನ್ನು ಹೇಳುತ್ತ ವೀರರಾಘವ ವ್ಯಾಖ್ಯಾನದಲ್ಲಿ ಆತ್ಮ-ಶರೀರ, ಆತ್ಮ-ಜೀವ ಇವರ ದೋಷಗಳು ಪರಮಾತ್ಮನಿಗೆ ಹತ್ತುವುದಿಲ್ಲ ಎಂದಿದೆ. ಸಮಾಸ ಹೇಗೆಂದು ಹೇಳಿಲ್ಲ. ಆತ್ಮಸಹಿತನಾದ ಆತ್ಮ ಆತ್ಮಾತ್ಮ ಎಂದು ಮಧ್ಯಮಪದಲೋಪಿ ಕರ್ಮಧಾರಯಸಮಾಸ ಮಾಡಬಹುದು. ಆತ್ಮಾತ್ಮನಃ ಗುಣಾಃ ಎಂದು ತತ್ಪುರುಷ, ನಿರ್ಜಿತವಾದ ಆತ್ಮಾತ್ಮಗುಣ ಉಳ್ಳವನು ಅಂದರೆ ಅದರಿಂದ ಲೇಪಹೊಂದದವನು ಎಂದು ಬಹುವ್ರೀಹಿ. ಹೀಗೆ ಮಾಡಿದರೆ ಯಾವ ಅನುಪಪತ್ತಿಯೂ ಇಲ್ಲ.

ಆದರೆ ಭಗವತ್ಪಾದ ವ್ಯಾಖ್ಯಾನದಲ್ಲಿ ಆತ್ಮಾ ಚ ಆತ್ಮಾ ಚ ಆತ್ಮಾತ್ಮಾನೌ ತಯೋರ್ಗುಣಾಃ ಎಂದು ದ್ವಂದ್ವಸಮಾಸವನ್ನೇ ತೋರಿಸಿದ್ದಾರೆ. 'ಆತ್ಮಾ ದೇಹಶ್ಚ ಆತ್ಮಾ ಜೀವಶ್ಚ' ಎಂದು ಅರ್ಥಭೇದವನ್ನು ತೋರಿಸಿದ್ದಾರೆ. ಆದರೆ ಅರ್ಥ ಬೇರೆಯಾದ ಮಾತ್ರಕ್ಕೆ ಒಂದೇ ರೀತಿಯ ಎರಡು ಶಬ್ದಗಳಿಗೆ ದ್ವಂದ್ವಸಮಾಸವಿಲ್ಲ. ಏಕಶೇಷವೇ ಬರುತ್ತದೆ. ಉದಾ: ಸರೂಪಾಣಾಮೇಕಶೇಷ ಏಕವಿಭಕ್ತೌ ಎಂದು

೧. ತಂ ಭೂತೇಷು ಸಂಚರಂತಮಪಿ ನಿರ್ಜಿತಾತ್ಮಾತ್ಮಗುಣಂ। ಏಕ ಆತ್ಮಶಬ್ದೋ ದೇಹಪರಃ ಅಪರಸ್ತು ಜೀವಪರಃ। ಚಿದಚಿದ್ದೋಷಾಸ್ಪೃಷ್ಟಮಿತ್ಯರ್ಥಃ। -ವೀರರಾಘವಃ

ಆತ್ಮಾ ದೇಹಶ್ಚ ಆತ್ಮಾ ಜೀವಶ್ಚ ಆತ್ಮಾತ್ಮಾನೌ। ತಯೋರ್ಗುಣಾಃ। ನಿರ್ಜಿತಾ ಆತ್ಮಾತ್ಮಗುಣಾ ಯೇನ ತಂ ಚಿದಚಿದ್‌ದೋಷಾಸ್ಪೃಷ್ಟಮಿತ್ಯರ್ಥಃ। -ಭಗವತ್ಪಾದಃ

ಏಕಶೇಷ ವಿಧಾಯಕಸೂತ್ರ. ಒಂದೇ ರೀತಿಯ ಶಬ್ದಗಳಿಗೆ ಏಕಶೇಷ ಎಂದರ್ಥ. ವಾರ್ತಿಕ ಹೇಳುತ್ತದೆ 'ವಿರೂಪಾಣಾಮಪಿ ಸಮಾನಾರ್ಥಾನಾಂ' ಶಬ್ದ ಒಂದೇ ರೀತಿ ಇಲ್ಲದಿದ್ದರೂ ಅರ್ಥ ಒಂದೇ ಇದ್ದರೆ ಆಗಲೂ ಏಕಶೇಷವೇ ಎಂದು. ತತ್ವಬೋಧಿನೀಕಾರ ಹೇಳುತ್ತಾನೆ, ಈ ವಾರ್ತಿಕ ಬೇಕಾಗಿಲ್ಲ, ಸೂತ್ರದಲ್ಲಿಯೇ ಈ ವಾರ್ತಿಕದ ಅಭಿಪ್ರಾಯವೂ ಗರ್ಭಿತವಾಗಿದೆ. ಹೇಗೆಂದರೆ ಸರೂಪಾಣಾಂ ಎಂಬಲ್ಲಿ 'ಸರೂಪಾಶ್ಚ ಸರೂಪಾಶ್ಚ' ಎಂದು ಏಕಶೇಷ. ಒಂದು ರೂಪಶಬ್ದ ಶಬ್ದದ ಆಕಾರವನ್ನು ಹೇಳುತ್ತದೆ. ಇನ್ನೊಂದು ರೂಪಶಬ್ದ ಶಬ್ದದ ಅರ್ಥವನ್ನು ಹೇಳುತ್ತದೆ. ಒಂದೇ ರೀತಿಯ ಶಬ್ದಗಳು ಮತ್ತು ಒಂದೇ ಅರ್ಥದ ಶಬ್ದಗಳು ಸೇರಿದಾಗ ಏಕಶೇಷವನ್ನು ಹೊಂದುತ್ತವೆ ಎಂದು ಸೂತ್ರದಲ್ಲಿಯೇ ಹೇಳಿರುವಾಗ ವಾರ್ತಿಕ ಸ್ಪಷ್ಟತೆಗಾಗಿ ಇದೆ ಎನ್ನಬೇಕು ಎಂದು. ಹೀಗಾಗಿ 'ಆತ್ಮಾತ್ಮ' ಶಬ್ದ ದ್ವಂದ್ವ ಸಮಾಸದಿಂದ ಸಿಗಲು ಶಕ್ಯವಿಲ್ಲ. ಅದಕ್ಕೆ ಆತ್ಮ ಮತ್ತು ಆತ್ಮಗುಣ ಶಬ್ದಗಳಿಗೆ ದ್ವಂದ್ವ ಸಮಾಸ ಮಾಡಬೇಕೆಂದು ಶ್ರೀಮದಾಚಾರ್ಯರು ಹೇಳುತ್ತಾರೆ.

ಆತ್ಮಾ ಚ ಆತ್ಮಗುಣಾಶ್ಚ ನಿರ್ಜಿತಾ ಯೇನ ।

'ನಿರ್ಜಿತಾತ್ಮಾತ್ಮಗುಣಂ' ಎಂಬಲ್ಲಿ ಆತ್ಮರನ್ನೂ ಆತ್ಮಗುಣಗಳನ್ನೂ ಗೆದ್ದುಕೊಂಡವನೆಂದು ದ್ವಂದ್ವಗರ್ಭ ಬಹುವ್ರೀಹಿ ಸಮಾಸ ಮಾಡಬೇಕು.

❖ ❖ ❖

ದುರ್ವಾಸರ ಶಾಪದಿಂದ ಮೂಲೋಕವು ಅಸುರರ ಆಕ್ರಮಣಕ್ಕೊಳಗಾದಾಗ ಬ್ರಹ್ಮದೇವರು ಶ್ರೀಹರಿಯನ್ನು ಸ್ತೋತ್ರ ಮಾಡುತ್ತಾರೆ.

ಅಂಭಸ್ತು ಯದ್ರೇತ ಉದಾರವೀರ್ಯಂ
ಸಿಧ್ಯಂತಿ ಜೀವಂತ್ಯುತ ವರ್ಧಮಾನಾಃ ।
ಲೋಕಾಸ್ತ್ರಯೋಽಥಾಖಿಲಲೋಕಪಾಲಾಃ
ಪ್ರಸೀದತಾಂ ಬ್ರಹ್ಮ ಮಹಾವಿಭೂತಿಃ ॥ ೩೩ ॥

ಸೋಮಂ ಮನೋ ಯಸ್ಯ ಸಮಾಮನಂತಿ
ದಿವೌಕಸಾಂ ವೈ ಬಲಮಂಧ ಆಯುಃ ।
ಈಶೋ ನಗಾನಾಂ ಪ್ರಜನಃ ಪ್ರಜಾನಾಂ
ಪ್ರಸೀದತಾಂ ನಃ ಸ ಮಹಾವಿಭೂತಿಃ ॥ ೩೪ ॥

ಮಹಾಸಾಮರ್ಥ್ಯಉಳ್ಳ ಜಲವು ವಿರಾಡ್ರೂಪಿಯಾದ ಪರಮಾತ್ಮನ ರೇತಸ್ಸಿನಿಂದ ಹುಟ್ಟಿ ರೇತಸ್ಸಿಗೆ ಪ್ರತಿಮೆಯಾಗಿದೆ. ಅದನ್ನು ಆಶ್ರಯಿಸಿಯೇ ಮೂರುಲೋಕಗಳೂ ಎಲ್ಲ ಲೋಕಪಾಲಕರೂ ಹುಟ್ಟುತ್ತಾರೆ, ಬದುಕುತ್ತಾರೆ ಬೆಳೆಯುತ್ತಾರೆ. ಅಪರಿಮಿತ ಐಶ್ವರ್ಯಶಾಲಿ ಗುಣಪೂರ್ಣನಾದ ಆತ ನಮ್ಮಲ್ಲಿ ಪ್ರಸನ್ನನಾಗಲಿ.

ಚಂದ್ರ ಅಮೃತಕಿರಣಗಳಿಂದ ಸಸ್ಯವೃದ್ಧಿ ಉಂಟುಮಾಡಿ ಆ ಮೂಲಕ ದೇವತೆಗಳಿಗೆ ಬಲ ಅನ್ನ ಆಯುಷ್ಯ ಉಂಟುಮಾಡುತ್ತಾನೆ, ವನಸ್ಪತಿಗಳ ರಾಜ, ಜನರಿಗೆ ರತಿಸುಖೋದ್ದೀಪನದ ಮೂಲಕ ಸಂತಾನವೃದ್ಧಿ ಮಾಡುತ್ತಾನೆ. ಇವನು ಪರಮಾತ್ಮನ ಮನಸ್ಸಿನಿಂದ ಹುಟ್ಟಿ ಆ ಮನಸ್ಸಿಗೆ ಪ್ರತಿಮೆಯಾಗಿದ್ದಾನೆ. ಅಪರಿಮಿತ ಐಶ್ವರ್ಯಶಾಲಿಯಾದ ಆ ಪರಮಾತ್ಮ ನಮ್ಮಲ್ಲಿ ಪ್ರಸನ್ನನಾಗಲಿ.

ಇಲ್ಲಿ ಜಲ ಎಂದರೆ ಜಲಾಭಿಮಾನಿ ವರುಣದೇವ. ಸೋಮ ಎಂದರೆ ಚಂದ್ರದೇವ. ಲೋಕಪಾಲಕರಾದ ಇಂದ್ರಾದಿ ದೇವತೆಗಳಿಗೆ ಎಲ್ಲರಿಗೂ ವರುಣ ಬದುಕಿಗೆ ಆಧಾರನಾಗುತ್ತಾನೆ, ಚಂದ್ರ ಬಲ ಅನ್ನ ಆಯುಷ್ಯಗಳನ್ನು ನೀಡುತ್ತಾನೆ ಎಂದು ಹೇಳಿದೆ. ಆದರೆ ವರುಣನಾಗಲಿ ಚಂದ್ರನಾಗಲಿ ಇಂದ್ರಾದಿ ದೇವತೆಗಳಿಗಿಂತ ಉತ್ತಮರಲ್ಲ. ಅದರಿಂದ ಅವರಿಗೆ ಬದುಕು ಬಲ ಮುಂತಾದುವನ್ನು ಕೊಡಲು ಶಕ್ತರಲ್ಲ. ಭಾಗವತದಲ್ಲಿ 'ಅಖಿಲ ಲೋಕಪಾಲಾಃ' ಎಂದು 'ದಿವೌಕಸಾಂ' ಎಂದು ಎಲ್ಲ ದೇವತೆಗಳಿಗೂ ಇವರಿಬ್ಬರೂ ಆಶ್ರಯರೆಂದು ಹೇಳಿದಂತೆ ಕಾಣುತ್ತದೆ. ಬೇರೆ ವ್ಯಾಖ್ಯಾನಕಾರರು ದೇವತಾತಾರತಮ್ಯವನ್ನು ಒಪ್ಪದಿರುವುದರಿಂದ ಅವರಿಗೆ ಈ ಸಮಸ್ಯೆ ಇಲ್ಲ. ಆದರೆ ಬ್ರಹ್ಮತರ್ಕದಲ್ಲಿ ವರುಣ ಚಂದ್ರರ ಆಶ್ರಯದಲ್ಲಿರುವ ದೇವತೆಗಳು ಯಾರೆಂಬುದನ್ನು ಸ್ಪಷ್ಟಪಡಿಸಲಾಗಿದೆ.

ಸೂರ್ಯಸೋಮಯಮೇಂದ್ರಾದೀನ್‌ಋತೇಽನ್ಯೇ ಲೋಕಪಾ ಅಪಿ।
ಅದ್ಭಿರ್ಜೀವಂತಿ, ಸೋಮಾಚ್ಚ ಮಹೇಂದ್ರಾದೀನ್ ಋತೇಽಖಿಲಾಃ।
ಅಪಾಂ ಸೋಮಸ್ಯ ಚೇಂದ್ರಾದ್ಯಾಃ ಸರ್ವೇ ವೈ ಜೀವನಪ್ರದಾಃ।
ಇತಿ ಚ ॥

ಸೂರ್ಯ ಚಂದ್ರ ಯಮ ಇಂದ್ರ ಮುಂತಾದ ಸ್ವೋತ್ತಮ ದೇವತೆಗಳು ಹೊರತು ಬೇರೆ ಎಲ್ಲ ಲೋಕಪಾಲಕರೂ ಜಲಾಭಿಮಾನಿ ವರುಣನಿಂದ ಬದುಕಿರುತ್ತಾರೆ. ಇಂದ್ರಾದಿ ಸ್ವೋತ್ತಮರು ಮತ್ತು ಸಮಾನಿಕರು ಹೊರತು

ಬೇರೆ ವರುಣ ಮುಂತಾದವರು ಚಂದ್ರನಿಂದ ಬಲ ಅನ್ನಾದಿಗಳನ್ನು ಪಡೆಯುತ್ತಾರೆ. .ವರುಣನಿಗೂ ಚಂದ್ರನಿಗೂ ಇಂದ್ರಾದಿ ದೇವತೆಗಳೆಲ್ಲರೂ ಜೀವನ ಪ್ರದರಾಗಿರುತ್ತಾರೆ ಎಂದೂ ಹೇಳಿದೆ.

❖ ❖ ❖

ದುರ್ವಾಸರ ಶಾಪದಿಂದ ಮೂಲೋಕ ಅಸುರರ ಆಕ್ರಮಣಕ್ಕೊಳಗಾದಾಗ ಬ್ರಹ್ಮದೇವರು ಶ್ರೀಹರಿಯನ್ನು ಸ್ತೋತ್ರ ಮಾಡುತ್ತಾರೆ.

ಅಗ್ನಿರ್ಮುಖಂ ಯಸ್ಯ ತು ಜಾತವೇದಾ
ಜಾತಃ ಕ್ರಿಯಾಕಾಂಡನಿಮಿತ್ತಜನ್ಮಾ ।
ಅಂತಃ ಸಮುದ್ರೇ ಪಚತಃ ಸ್ವಧಾತೂನ್
ಪ್ರಸೀದತಾಂ ನಃ ಸ ಮಹಾವಿಭೂತಿಃ ॥ ೩೫ ॥

ಹುಟ್ಟಿದ ಎಲ್ಲ ಪದಾರ್ಥಗಳನ್ನು ತಿಳಿಯುವವನು, ಯಾಗಾದಿಕರ್ಮ ಸಮೂಹಕ್ಕೆ ನಿಮಿತ್ತವಾಗಿ ಅರಣಿಯಿಂದ ಜನಿಸುವವನು ಅಗ್ನಿ. ಸಮುದ್ರಗರ್ಭದಲ್ಲಿ ಬಡಬಾನಲ ರೂಪದಿಂದಲೂ ಶರೀರದಲ್ಲಿ ಉದರದೊಳಗೆ ವೈಶ್ವಾನರ ರೂಪದಿಂದಲೂ ಜಲ ಅನ್ನ ರೂಪವಾದ ಧಾತುಗಳನ್ನು ಪಚನ ಮಾಡುವವನು. ಪರಮಾತ್ಮನ ಮುಖದಿಂದ ಈ ಅಗ್ನಿಯ ಉತ್ಪತ್ತಿಯಾಯಿತು. ಅಪರಿಮಿತೈಶ್ವರ್ಯ ಶಾಲಿಯಾದ ಆ ಪರಮಾತ್ಮ ನಮ್ಮಲ್ಲಿ ಪ್ರಸನ್ನನಾಗಲಿ.

ಇಲ್ಲಿ 'ಅಂತಃ ಸಮುದ್ರೇ' ಎಂದರೆ ಸಮುದ್ರಗರ್ಭದಲ್ಲಿ ಜಲವನ್ನು ಪಚನ ಮಾಡುವ ಬಡಬಾನಲ ಪರಮಾತ್ಮನ ಒಂದು ರೂಪವಾದ ನರಸಿಂಹ. ಆದರೆ ಇಷ್ಟೇ ಅರ್ಥವಲ್ಲ. ಪ್ರಾಣಿಗಳ ಉದರದಲ್ಲಿ ಅನ್ನವನ್ನು ಪಚನ ಮಾಡುವ ವೈಶ್ವಾನರಾಗ್ನಿ ಎಂಬ ಭಗವಂತನ ಒಂದು ರೂಪವೂ ಇದೆ. ಅಗ್ನಿದೇವನ ಒಂದು ರೂಪಕ್ಕೂ ಆ ಹೆಸರು ಇದೆ. ಅದನ್ನು ಹೇಳುವಾಗ ಪ್ರಾಣಿಗಳ ಉದರವೇ ಸಮುದ್ರದ ಸ್ಥಾನದಲ್ಲಿ ವಿವಕ್ಷಿತವಾಗಿದೆ. ಸಮುದ್ರ ಶಬ್ದದಿಂದ ಉದರ ಎಂಬ ಅರ್ಥವನ್ನೂ ಗ್ರಹಿಸಬೇಕೆಂದು ಶ್ರೀಮದಾಚಾರ್ಯರು ಹೇಳುತ್ತಾರೆ. ಬೇರೆ ವ್ಯಾಖ್ಯಾನಕಾರರಿಗೂ ಇದು ಸಮ್ಮತ.

ಸಮುದ್ರೇ ಉದರೇ

ಸಮುದ್ರೇ ಎಂದರೆ ಉದರದಲ್ಲಿ ಎಂದರ್ಥ.

ಸಮುದ್ರ ಶಬ್ದದಿಂದ ಉದರ ಎಂಬ ಅರ್ಥ ಹೇಗೆ ಲಭ್ಯವಾಗುತ್ತದೆ ಎಂದರೆ 'ಸಂ-ಉದ್ರ'ವೆ ಸಮುದ್ರ. ಉದ್ರ ಉದರಗಳು ಒಂದೇ. ಅಥವಾ ಸಮುದ್ರದಲ್ಲಿ ನೀರು ಅಧಿಕ. ಹಾಗೇ ಶರೀರದಲ್ಲಿ 'ತ್ರ್ಯಾತ್ಮಕತ್ವಾತ್ತು ಭೂಯಸ್ತ್ವಾತ್' ಎಂಬಂತೆ ಜಲಾಂಶ ಅಧಿಕ. ಅದರಿಂದ ಶರೀರ ಸಮುದ್ರದ ಸ್ಥಾನದಲ್ಲಿದೆ. ಶರೀರದೊಳಗೆ ಅಂದರೆ ಉದರದಲ್ಲಿ ಎಂದರ್ಥ. ಅಥವಾ ವಿರಾಡ್ರೂಪಿ ಪರಮಾತ್ಮನ ಉದರದಿಂದ ಸಮುದ್ರ ಜನಿಸಿದೆ. 'ಬ್ರಾಹ್ಮಣೋಽಸ್ಯ ಮುಖಂ' ಪರಮಾತ್ಮನ ಮುಖದಿಂದ ಜನಿಸಿದ ಬ್ರಾಹ್ಮಣನನ್ನು ಮುಖವೆಂದೇ ಶ್ರುತಿಯಲ್ಲಿ ಹೇಳಿರುವುದರಿಂದ ಅದೇ ರೀತಿ ಸಮುದ್ರವನ್ನು ಪರಮಾತ್ಮನ ಉದರವೆನ್ನಬಹುದು. ಪ್ರಾಣಿಗಳ ಉದರವೂ ಸಮುದ್ರ ಶಬ್ದದಿಂದ ಲಭ್ಯವಾಗಬಹುದು.

❖❖❖

ದುರ್ವಾಸರ ಶಾಪದಿಂದ ಮೂಲೋಕ ಅಸುರರ ಆಕ್ರಮಣಕ್ಕೆ ತುತ್ತಾದಾಗ ಬ್ರಹ್ಮದೇವರು ಶ್ರೀಹರಿಯನ್ನು ಸ್ತೋತ್ರ ಮಾಡುತ್ತಾರೆ.

ಯಚ್ಚಕ್ಷುರಾಸೀತ್ತರಣಿರ್ದೇವಯಾನಂ
ತ್ರಯೀಮಯೋ ಬ್ರಹ್ಮಣ ಏಷ ಧಿಷ್ಣ್ಯಮ್ ।
ದ್ವಾರಂ ಚ ಮುಕ್ತೇರಮೃತಸ್ಯ ಮೃತ್ಯೋಃ
ಪ್ರಸೀದತಾಂ ನಃ ಸ ಮಹಾವಿಭೂತಿಃ ॥ ೩೬ ॥

ದೇವಯಾನ ಮಾರ್ಗದೇವತೆಗಳಲ್ಲಿ ಒಬ್ಬನೆನಿಸಿದವನು, ವೇದಪ್ರತಿಪಾದ್ಯ, ಸವಿತೃನಾಮಕ ಪರಬ್ರಹ್ಮನ ಉಪಾಸನೆಗೆ ಸ್ಥಾನವೆನಿಸಿದವನು ಅರ್ಚಿರಾದಿಮಾರ್ಗ ದೇವತೆಯಾದ್ದರಿಂದ ಸುಖಮಯವಾದ ಸಂಸಾರ ಮುಕ್ತಿಗೆ ದ್ವಾರವೆನಿಸಿದವನು ಸೂರ್ಯ. ಅವನು ಯಾರ ಕಣ್ಣಿಂದ ಹುಟ್ಟಿರುವನೋ ಪರಮೈಶ್ವರ್ಯಶಾಲಿಯಾದ ಆ ಪರಮಾತ್ಮ ನಮ್ಮಲ್ಲಿ ಪ್ರಸನ್ನನಾಗಲಿ.

ಇಲ್ಲಿ 'ದ್ವಾರಂ ಚ ಮುಕ್ತೇರಮೃತಸ್ಯ ಮೃತ್ಯೋಃ' ಎಂಬಲ್ಲಿ ಮುಕ್ತಿ ಎಂದರೂ ಅಮೃತ ಎಂದರೂ ಒಂದೇ ಆಗಿರುವುದರಿಂದ ಪುನರುಕ್ತಿಯಾದಂತೆ ಕಾಣುವುದು. ಅದಕ್ಕೆ ಬೇರೆ ವ್ಯಾಖ್ಯಾನಕಾರರು 'ದ್ವಾರಂ ಚ ಮುಕ್ತೇರಮೃತಂ ಚ ಮೃತ್ಯುಃ' ಎಂದು ಪಾಠವಿಟ್ಟುಕೊಂಡಿದ್ದಾರೆ. ಆದರೆ ಸೂರ್ಯ ಮುಕ್ತಿಗೆ ದ್ವಾರ ಎಂದಮೇಲೆ ಅವನೆ ಅಮೃತ ಅಂದರೆ ಮುಕ್ತಿ ಎನಿಸಲು ಸಾಧ್ಯವಿಲ್ಲ. ಅದರಿಂದ 'ಅಮೃತಂ' ಎಂಬುದು ಅನನ್ವಿತವೆನಿಸುತ್ತದೆ. ಇದಕ್ಕಿಂತ ಪೌನರುಕ್ತ್ಯ ಬಂದರೆ ಬರಲಿ ಎನ್ನಬಹುದು.

ಆದಿತ್ಯಲೋಕ ಒಂದು ಪುಣ್ಯಲೋಕವಾದ್ದರಿಂದ 'ಅಮೃತ'ವೆನಿಸುತ್ತದೆ ಎಂದು ಶ್ರೀಧರ ವ್ಯಾಖ್ಯಾನ ಹೇಳುತ್ತದೆ. ಆದರೆ ಪುಣ್ಯಲೋಕವನ್ನು 'ಸ್ವರ್ಗ' ಎನ್ನಬಹುದು ಮೋಕ್ಷ ಎಂದಲ್ಲ.

ಮೋಕ್ಷಕ್ಕೆ ದ್ವಾರವಾದ್ದರಿಂದ ಮೋಕ್ಷ, ಅಮೃತ ಎಂದು ಶುಕದೇವ ವ್ಯಾಖ್ಯಾನ ಹೇಳುತ್ತದೆ. ಆದರೆ 'ದ್ವಾರಂ ಚ ಮುಕ್ತೇಃ' ಎಂದು ಸ್ಪಷ್ಟವಾಗಿ ಮೋಕ್ಷದ್ವಾರತ್ವವನ್ನು ಹೇಳಿ ಜೊತೆಗೆಯೇ ಅಮೃತಶಬ್ದದಿಂದ ಗೌಣವಾಗಿ ಅದೇ ಮೋಕ್ಷದ್ವಾರತ್ವವನ್ನು ಹೇಳುವುದು ವ್ಯರ್ಥ. ಪುಣ್ಯಕರ್ಮಾನುಷ್ಠಾನ ಕಾಲವನ್ನು ತಿಳಿಸಿ ಮೋಕ್ಷಸಾಧನೆ ಮಾಡಿಸುವುದರಿಂದ ಸೂರ್ಯನನ್ನು ಅಮೃತ, ಮೋಕ್ಷ ಎಂದು ಹೇಳಲಾಗಿದೆ ಎನ್ನುತ್ತದೆ ವೀರರಾಘವ ಮುಂತಾದ ವ್ಯಾಖ್ಯಾನಗಳು. ಆದರೆ ಹೀಗೆ ಅಮೃತ ಶಬ್ದಕ್ಕೆ ಗೌಣಾರ್ಥ ಮಾಡುವುದಾದರೆ ಮುಖ್ಯಾರ್ಥ ವಿವಕ್ಷೆಯಿಂದಲೇ 'ಅಮೃತಸ್ಯ' ಎಂದೇ ಏಕೆ ಪಾಠವಿಟ್ಟುಕೊಳ್ಳಬಾರದು?

'ಮುಕ್ತಿ' ಎಂಬ ಶಬ್ದ ಮೋಕ್ಷ ಎಂಬ ಅರ್ಥದಲ್ಲಿ ಯೋಗರೂಢವಾಗಿದೆ. ಅಮೃತಶಬ್ದವೂ ಹಾಗೇ ಯೋಗರೂಢವಾಗಿದೆ. ಒಂದಕ್ಕೆ ರೂಢಿಯನ್ನೂ ಇನ್ನೊಂದಕ್ಕೆ ಯೋಗವನ್ನೂ ಇಟ್ಟುಕೊಂಡು ಮರಣಾದಿದುಃಖರಹಿತವಾದ ಮೋಕ್ಷಕ್ಕೆ ದ್ವಾರ ಎಂದು ಅನ್ವಯವನ್ನು ಹೇಳಬಹುದು. ಮರಣಾದಿ ದುಃಖಕ್ಕೆ ವಿರುದ್ಧವಾದ ಸುಖವೇ ಇರುವಂಥ ಮುಕ್ತಿಲೋಕ ಎಂದೂ ಅರ್ಥವಿಟ್ಟುಕೊಂಡು ಅನ್ವಯಮಾಡಬಹುದು. ಯೋಗರೂಢವಾದ್ದರಿಂದ ನಿತ್ಯನಪುಂಸಕ ಅಮೃತಶಬ್ದ, ಸ್ತ್ರೀಲಿಂಗದ ಮುಕ್ತಿಶಬ್ದದಿಂದ ಅನ್ವಯ ಹೊಂದಬಹುದು. 'ನ ಮೃತಂ ಅಮೃತಂ' ದುಃಖವಿರುದ್ಧ ಸುಖರೂಪವಾದ ಮೋಕ್ಷ ಎಂದು ತತ್ಪುರುಷಸಮಾಸ ಮಾಡಿಯೂ ನಿತ್ಯ ನಪುಂಸಕತ್ವವನ್ನು ಹೇಳಬಹುದು. ಬಹುವ್ರೀಹಿ ಪಕ್ಷದಲ್ಲಿ ಯೌಗಿಕ ಶಬ್ದವೆಂದಿಟ್ಟುಕೊಂಡರೂ 'ಮುಖನಾಸಿಕಾವಚನೋಽನುನಾಸಿಕಃ' ಎಂಬಲ್ಲಿ 'ಮುಖಸಹಿತನಾಸಿಕಾ ವಚನಂ ಯಸ್ಯ' ಎಂದು ಲಿಂಗ ವ್ಯತ್ಯಾಸವಿದ್ದರೂ ಅಭೇದಾನ್ವಯ ಮಾಡಿದಂತೆ ಇಲ್ಲಿಯೂ ಮಾಡಬಹುದು.

ವಸ್ತುತಃ 'ಅಮೃತಸ್ಯ ಎಂದು ಮುಕ್ತಿಗೆ ವಿಶೇಷಣ'ವೆಂದು ತಾತ್ಪರ್ಯದಲ್ಲಿ ಹೇಳಿದ್ದರೂ ಯಾವ ಸಂಬಂಧದಿಂದ ವಿಶೇಷಣ ಎಂದು ಹೇಳಿಲ್ಲ, ಹೇಳುವ ವಿವಕ್ಷೆಯೂ ಇದ್ದಂತಿಲ್ಲ. ಅದರಿಂದ ಅಭೇದಸಂಬಂಧದ ವಿಶೇಷಣವಾಗಿ ಅನ್ವಯ ಮಾಡುವುದು ಕಷ್ಟವೆನಿಸಿದರೆ ಭೇದಸಂಬಂಧದಿಂದಲೇ ವಿಶೇಷಣವಾಗಿ ಅನ್ವಯಿಸಬಹುದು. 'ಅಮೃತಸ್ಯ' ಜೀವನ್ಮುಕ್ತನ ಮುಕ್ತಿಗೆ ದ್ವಾರ. ಇಲ್ಲಿ ಮುಕ್ತಿಗೆ ಜೀವನ್ಮುಕ್ತ ಭೇದ ಸಂಬಂಧದಿಂದ ವಿಶೇಷಣ. 'ಅಮೃತ' ಎಂದರೆ ದುಃಖವಿರುದ್ಧ

ಸ್ವರೂಪಸುಖ ಉಳ್ಳ ಸಾತ್ವಿಕವರ್ಗ. ಅದರ ಮುಕ್ತಿಗೆ ದ್ವಾರ ಎಂದೂ ಹೇಳಬಹುದು.

ಅಮೃತಸ್ಯೇತಿ ಮುಕ್ತೇರ್ವಿಶೇಷಣಂ ।

'ಅಮೃತಸ್ಯ' ಎಂದು ಮುಕ್ತಿಗೆ ವಿಶೇಷಣ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ಅಷ್ಟಮಸ್ಕಂಧೇ
ಪಂಚಮೋऽಧ್ಯಾಯಃ

❖ ❖ ❖

ಅಧ್ಯಾಯ – ೬

ಅಧ್ಯಾಯ ಸಾರಾಂಶ

ದೇವತೆಗಳ ಸ್ತೋತ್ರವನ್ನು ಕೇಳಿ ಭಗವಾನ್ ಶ್ರೀಹರಿ ಸಾವಿರ ಸೂರ್ಯರ ಪ್ರಕಾಶದಿಂದ ಬೆಳಗುತ್ತ ಆವಿರ್ಭವಿಸಿದ. ಆ ಬೆಳಕಿಗೆ ದೇವತೆಗಳಿಗೆ ಎಲ್ಲರಿಗೂ ಕಣ್ಣು ಕುರುಡಾದುವು. ಬ್ರಹ್ಮ ರುದ್ರರು ಮಾತ್ರ ಕಂಡರು. ಎಲ್ಲ ದೇವತೆಗಳೂ ದಂಡಪ್ರಣಾಮಗೈದರು. ಸ್ತೋತ್ರಮಾಡಿ ಹೇಳಿದರು.

'ನೀನು ನಮ್ಮ ಮುಂದೆ ಆವಿರ್ಭವಿಸಿದ್ದನ್ನು ಕಂಡಾಗ ಕಾಳ್ಗಿಚ್ಚಿನಿಂದ ಬೇಯುವ ಆನೆಗೆ ಗಂಗಾಜಲ ದೊರೆತಂತಾಯಿತು. ನಾವು ಯಾವ ಉದ್ದೇಶದಿಂದ ನಿನ್ನ ಪಾದಮೂಲಕ್ಕೆ ಬಂದಿರುವೆವೋ ಅದನ್ನು ನೀನು ನಡೆಸಿಕೊಡು. ಎಲ್ಲವನ್ನೂ ಪ್ರತ್ಯಕ್ಷ ಕಾಣುವ ನಿನಗೆ ನಾವು ಹೇಳಬೇಕಾದುದೇನಿದೆ? ನೀನು ದೊಡ್ಡ ಬೆಂಕಿಯಂತೆ, ನಾವೆಲ್ಲ ಸಣ್ಣ ಕಿಡಿಗಳಂತೆ, ಅಲ್ಪಶಕ್ತರು. ನಮ್ಮ ಹಿತವನ್ನು ನೀನೇ ಸಾಧಿಸಿಕೊಡಬೇಕು.'

ಶ್ರೀಹರಿ ದೇವತೆಗಳ ಇಷ್ಟಾರ್ಥ ಪೂರೈಸಲು ತಾನೊಬ್ಬನೆ ಸಮರ್ಥ. ಆದರೂ ಸಮುದ್ರಮಥನ ಲೀಲೆಯನ್ನು ತೋರಲು ಬಯಸಿ ದೇವತೆಗಳಿಗೆ ಹೇಳಿದ, 'ದೇವತೆಗಳೆ, ನಮ್ಮ ಕಾರ್ಯದ ಉದ್ದೇಶ ಘನವಾಗಿರುವಾಗ ಶತ್ರುಗಳೊಂದಿಗೂ ಸಂಧಾನ ಮಾಡಿಕೊಳ್ಳಬೇಕಾಗುತ್ತದೆ. ಹಾವು ಇಲಿಯೊಡನೆ ಸಂಧಾನ ಮಾಡಿದಂತೆ. ಅದರಿಂದ ದೇವಾಸುರರು ಸೇರಿ ಸಮುದ್ರಮಥನ ಮಾಡಿರಿ. ಇದಕ್ಕೆ ನಿಮಗೆ ನನ್ನ ಸಹಾಯವಿದೆ. ನೀವು ಫಲಭಾಗಿಗಳು. ದೈತ್ಯರು ಕೇವಲ ಶ್ರಮಭಾಗಿಗಳಾಗುವರು.'

ದೇವತೆಗಳು ದೈತ್ಯರಾಜನಾದ ಬಲಿಯ ಬಳಿಗೆ ಹೋಗಿ ಸಂಧಾನ ಮಾಡಿಕೊಂಡರು. ಶ್ರೀಹರಿ ಮಂದರಪರ್ವತವನ್ನು ಕಿತ್ತು ಗರುಡನ ಹೆಗಲ ಮೇಲೆ ಹೊರಿಸಿ ಕ್ಷೀರಸಮುದ್ರದಲ್ಲಿ ಇಳಿಸಿದ. ಮಾರ್ಗಮಧ್ಯದಲ್ಲಿ ದೇವತೆಗಳು ಬೆಟ್ಟದ ಭಾರವನ್ನು ಪರೀಕ್ಷಿಸಲೆಂದು ಗರುಡನ ಹೆಗಲಿಂದ ಅದನ್ನು ಎತ್ತಿಕೊಂಡರು.

ಆದರೆ ಒಡನೆ ಅವರು ಆ ಭಾರವನ್ನು ಹೊರಲಾರದೆ ಮೈಮೇಲೆ ಹಾಕಿಕೊಂಡು ಪುಡಿಯಾದರು. ಶ್ರೀಹರಿ ಬಂದು ಬೆಟ್ಟವನ್ನೆತ್ತಿ ತಿರುಗಿ ಗರುಡನ ಹೆಗಲ ಮೇಲಿರಿಸಿದ. ನೆಲದಲ್ಲಿ ಬಿದ್ದಿದ್ದ ದೇವದಾನವರನ್ನು ತನ್ನ ಅಮೃತಕಟಾಕ್ಷದಿಂದ ಬದುಕಿಸಿದ.

❖❖❖

ಕ್ಷೀರಸಮುದ್ರ ಮಥನ ಸಂದರ್ಭದಲ್ಲಿ ಮಂದರ ಪರ್ವತವನ್ನು ಹೊತ್ತು ತಂದವನು ಗರುಡ ಎಂದು ಶುಕಮುನಿ ಪರೀಕ್ಷಿತನಿಗೆ ಹೇಳುತ್ತಾರೆ.

ಅವರೋಪ್ಯ ಗಿರಿಂ ಸ್ಕಂಧಾತ್ಸುಪರ್ಣಃ ಪತತಾಂ ವರಃ ।
ಯಯೌ ಜಲಾಂತ ಉತ್ಸೃಜ್ಯ ಹರಿಣಾ ಸ ವಿಸರ್ಜಿತಃ ॥ ೩೯ ॥

ಗರುಡ ಮಂದರಪರ್ವತವನ್ನು ಹೆಗಲ ಮೇಲಿಂದ ಕೆಳಗೆ ಇಳಿಸಿ ಸಮುದ್ರ ಜಲ ಮಧ್ಯದಲ್ಲಿ ಇಟ್ಟಬಳಿಕ ಶ್ರೀಹರಿ ಅವನನ್ನು ಹಿಂದೆ ಕಳಿಸಿದ. ಆತ ಹೊರಟು ಹೋದ.

ಇಲ್ಲಿ ಗರುಡ ಮಂದರವನ್ನು ಹೊತ್ತನೆಂದಿದೆ. ಮಹಾಭಾರತದಲ್ಲಿ ಅನಂತ ಅಂದರೆ ಶೇಷ ಮಂದರವನ್ನು ಹೊತ್ತು ತರುತ್ತಾನೆ. ಇದರ ವಿರೋಧವನ್ನು ಮಹಾಭಾರತ ತಾತ್ಪರ್ಯನಿರ್ಣಯದಲ್ಲಿ ಶ್ರೀಮದಾಚಾರ್ಯರು ಹೀಗೆ ಪರಿಹರಿಸುತ್ತಾರೆ-

ತದಾ ತ್ವಯಾ ನಿತ್ಯಬಲತ್ವ ಹೇತುತೋ
ಯೋಽನಂತನಾಮಾ ಗರುಡಸ್ತದಂಸಕೇ
ಉತ್ಪಾಟ್ಯ ಚೈಕೇನ ಕರೇಣ ಮಂದರೋ
ನಿಧಾಪಿತಸ್ತಂ ಸ ಸಹ ತ್ವಯಾಽವಹತ್ ॥ (೧೦-೬)

ಮಹಾಭಾರತದಲ್ಲಿ ಅನಂತನೆಂದರೆ ಭಾಗವತಾನುಸಾರವಾಗಿ ಗರುಡನೆಂದಿಟ್ಟುಕೊಳ್ಳಬೇಕು. ಗರುಡನಿಗೆ ಇನ್ನೊಂದು ಹೆಸರು ಅನಂತ. ಹರಿಯ ಆವೇಶ ಬಲದಿಂದ ಅನಂತಶಕ್ತಿ ಬಂದುದರಿಂದ ಗರುಡ ಅನಂತನೆನಿಸಿದ. ಆದರೂ ಮಹಾಭಾರತದಲ್ಲಿ

ಅಚೋದಯದಮೇಯಾತ್ಮಾ ಫಣೀಂದ್ರಂ ಪದ್ಮಲೋಚನಃ ।

(ಆದಿ.ಆಸ್ತೀಕ. ೧೮.೭)

'ಹರಿ ಫಣೀಂದ್ರನನ್ನು ಮಂದರ ಹೊರಲು ಆಜ್ಞಾಪಿಸಿದನೆಂ' ದಿದೆ. ಇಲ್ಲಿ ಫಣೀಂದ್ರ ಶಬ್ದದಿಂದ ಆದಿಶೇಷನೆ ಉಕ್ತನಾಗುತ್ತಿದ್ದಾನೆ. ಗರುಡನನ್ನು ಗ್ರಹಿಸುವುದು ಹೇಗೆ? ಎಂಬ ಪ್ರಶ್ನೆ ಬರುತ್ತದೆ. ಅದಕ್ಕೆ ಶ್ರೀವಾದಿರಾಜರು ಲಕ್ಷಾಲಂಕಾರದಲ್ಲಿ,

'ಫಣಿನಾಂ ಈಂ ಐಶ್ವರ್ಯಂ ದ್ರಾವಯತಿ'

ಹಾವುಗಳ ಬಲೈಶ್ವರ್ಯವನ್ನು ಕಳೆಯುತ್ತಾನೆ. 'ಫಣಿ-ಈಂ-ದ್ರ' ಎಂದು ಬಿಡಿಸಿದರೆ ಗರುಡನೆಂಬ ಅರ್ಥ ಲಭ್ಯವಾಗುತ್ತದೆ ಎಂದಿದ್ದಾರೆ.

'ಯೋಽನಂತನಾಮಾ ಗರುಡಃ' ಎಂದು ಶ್ರೀಮದಾಚಾರ್ಯರು ತಾವು ಹೇಳಿದ್ದಕ್ಕೆ ಇಲ್ಲಿ ತಾತ್ಪರ್ಯದಲ್ಲಿ ಬ್ರಹ್ಮಪುರಾಣವಚನವನ್ನು ಪ್ರಮಾಣವಾಗಿ ಉದಾಹರಿಸುತ್ತಾರೆ. ಮತ್ತು ಭಾಗವತದಲ್ಲಿ

ಅವರೋಪ್ಯ ಗಿರಿಂ ಸ್ಕಂಧಾತ್ ಸುಪರ್ಣಃ ಪತತಾಂವರಃ ।

ಎಂದು ಗರುಡನನ್ನು ಸುಪರ್ಣ ನಾಮದಿಂದ ಕರೆದುದರಲ್ಲಿ ಒಂದು ಸೂಚನೆಯೂ ಇದೆ. ಸಮುದ್ರ ಮಥನ ಚಾಕ್ಷುಷ ಮನ್ವಂತರದಲ್ಲಿ ಒಮ್ಮೆ, ವೈವಸ್ವತ ಮನ್ವಂತರದಲ್ಲಿ ಇನ್ನೊಮ್ಮೆ ಹೀಗೆ ಎರಡು ಬಾರಿ ನಡೆಯಿತು. ಚಾಕ್ಷುಷ ಮನ್ವಂತರದಲ್ಲಿ 'ಸುಪರ್ಣ' ನಾಮದಿಂದ, ವೈವಸ್ವತ ಮನ್ವಂತರದಲ್ಲಿ 'ಅನಂತ'ನಾಮದಿಂದ ಗರುಡ ಪ್ರಸಿದ್ಧನಾಗಿದ್ದಾನೆ. 'ಅನಂತನಾಮಾ ಗರುಡಃ' ಎಂದು ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ಹೇಳಿದ್ದು ವೈವಸ್ವತ ಮನ್ವಂತರಾನುಸಾರಿಯಾಗಿ, ಅದೂ ಮಹಾಭಾರತದಲ್ಲಿ ವೈವಸ್ವತ ಮನ್ವಂತರದ ಕಥೆಯನ್ನು ಹೇಳಿದ್ದರಿಂದ. ಬ್ರಹ್ಮಪುರಾಣ ವಚನ ಇದನ್ನೂ ಸ್ಪಷ್ಟಪಡಿಸುತ್ತದೆ.

ಅನಂತೋಢೋ ಮಂದರಸ್ತು ಯದಾ ವೈವಸ್ವತಾಂತರಂ ।
ಅಮೃತಾರ್ಥಂ ಸುಪರ್ಣೋಢೋ ರೈವತಸ್ಯಾಂತರೇ ಮನೋಃ ।
ಇತಿ ಬ್ರಾಹ್ಮೇ ॥

ಅಮೃತಕ್ಕಾಗಿ ವೈವಸ್ವತ ಮನ್ವಂತರದಲ್ಲಿ ಅನಂತನಾಮಕನಾಗಿ ಗರುಡ ಮಂದರವನ್ನು ಹೊತ್ತ, ರೈವತ ಮನ್ವಂತರದಲ್ಲಿ ಸುಪರ್ಣ ನಾಮಕನಾಗಿ ಅವನೇ ಹೊತ್ತ ಎಂದು ಬ್ರಹ್ಮಪುರಾಣದಲ್ಲಿ ಹೇಳಿದೆ.

ಭಾಗವತ ಛಲಾರೀಯ ವ್ಯಾಖ್ಯಾನದಲ್ಲಿ ಹೀಗೆ ಹೇಳಿದೆ- 'ವೈವಸ್ವತ ಮನ್ವಂತರದಲ್ಲಿ ಅನಂತನಾಮಕ ಗರುಡ ಮಂದರವನ್ನು ಹೊತ್ತ ಚಾಕ್ಷುಷಮನ್ವಂತರದಲ್ಲಿ ಸುಪರ್ಣನಾಮಕ ಗರುಡ ಮಂದರವನ್ನು ಹೊತ್ತ' ಎಂದು.

ಇದು ಸರಿ. ಭಾಗವತದಲ್ಲಿ ರೈವತ ಮನ್ವಂತರದ ಕಥೆಯಾಗಿ ಸಮುದ್ರಮಥನ ಕಥೆ ಉಕ್ತವಾಗಿಲ್ಲ. ಚಾಕ್ಷುಷ ಮನ್ವಂತರದಲ್ಲಿ ವೈರಾಜ ಹರಿಮದ್ ವೀರಕ ಮುಂತಾದವರು ಸಪ್ತರ್ಷಿಗಳು, ವೈರಾಜನಿಂದ ಸಂಭೂತಿಯಲ್ಲಿ ಹರಿಯ ಅಜಿತಾವತಾರ. ಈ ಅಜಿತನೆ ಸಮುದ್ರಮಥನವನ್ನು ನಡೆಸಿದ ಎಂದು ವರ್ಣನೆ ಬರುತ್ತದೆ. (೮-೫-೮,೯,೧೦) ಅದರಿಂದ ತಾತ್ಪರ್ಯೋದಾಹೃತವಾದ ಬ್ರಹ್ಮಪುರಾಣ ವಚನದಲ್ಲಿ,

ಅಮೃತಾರ್ಥಂ ಸುಪರ್ಣೋಢಶ್ಚಾಕ್ಷುಷಸ್ಯಾಂತರೇ ಮನೋಃ ।

ಎಂದು ಪಾಠವಿರಬಹುದು. ತಾತ್ಪರ್ಯದೀಪಿಕಾಕಾರರು 'ರೈವತಸ್ಯಾಂತರೇ ಮನೋಃ' ಎಂದರೆ ರೈವತ ಮನ್ವಂತರದ ಅನಂತರ ಬರುವ ಚಾಕ್ಷುಷ ಮನ್ವಂತರದಲ್ಲಿ ಎಂದು ವ್ಯಾಖ್ಯಾನಿಸಿದ್ದಾರೆ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ಅಷ್ಟಮಸ್ಕಂಧೇ
ಷಷ್ಠೋಽಧ್ಯಾಯಃ

❖ ❖ ❖

ಅಧ್ಯಾಯ - ೭

ಅಧ್ಯಾಯ ಸಾರಾಂಶ

ಅಮೃತದಲ್ಲಿ ನಿನಗೂ ಒಂದು ಭಾಗ ನೀಡುವುದಾಗಿ ಹೇಳಿ ದೇವದಾನವರು ವಾಸುಕಿಯನ್ನು ಆಹ್ವಾನಿಸಿ ಅವನನ್ನು ನೇಣನ್ನಾಗಿ ಮಾಡಿ ಮಂದರಪರ್ವತವನ್ನು ಕಡೆಗೋಲನ್ನಾಗಿ ಮಾಡಿ ಕ್ಷೀರಸಮುದ್ರಮಥನಕ್ಕೆ ತೊಡಗಿದರು. ಶ್ರೀಹರಿ ವಾಸುಕಿಯ ಹೆಡೆಯ ಭಾಗವನ್ನು ಹಿಡಿದ. ದೇವತೆಗಳೂ ಹಾಗೇ ಮಾಡಿದರು. ಆದರೆ ಅಸುರರು ಹಾವಿನ ಬಾಲವನ್ನು ಹಿಡಿಯಲು ಒಪ್ಪಲಿಲ್ಲ. 'ಅದು ಅಮಂಗಳಕರ. ನಾವು ಉತ್ತಮ ಕುಲದವರು, ಶಾಸ್ತ್ರಾಧ್ಯಯನ ಸಂಪನ್ನರು' ಎಂದರು. ಶ್ರೀಹರಿ ನಸುನಕ್ಕು ದೇವತೆಗಳೊಂದಿಗೆ ಬಾಲದ ಭಾಗವನ್ನೇ ಹಿಡಿದ. ಅಸುರರು ಹೆಡೆಯ ಭಾಗವನ್ನು ಹಿಡಿದರು.

ಬೆಟ್ಟ ಸಮುದ್ರದಾಳಕ್ಕೆ ಇಳಿಯಲು ತೊಡಗಿದಾಗ ಹರಿ ಕೂರ್ಮರೂಪದಿಂದ ಅದನ್ನೆತ್ತಿ ಹಿಡಿದ. ಅದು ಬೆನ್ನಮೇಲೆ ತಿರುಗುತ್ತಿದ್ದರೆ ಬೆನ್ನಿನ ನವೆಗೆ ಸುಖವಾಗಿ ಕೆರೆದಂತೆ ಅನುಭವವಾಯಿತು. ಬಳಿಕ ಆಯಾಸಗೊಂಡ ದೇವಾಸುರರಲ್ಲಿಯೂ ವಾಸುಕಿಯಲ್ಲಿಯೂ ಶ್ರೀಹರಿ ಆವೇಶಗೊಂಡು ಬಲವನ್ನು ಹೆಚ್ಚಿಸಿದ. ಬೆಟ್ಟ ಮೇಲೆ ಹಾರಲು ತೊಡಗಿದಾಗ ಅಜಿತ ಇನ್ನೊಂದು ಬೆಟ್ಟದಂತೆ ಬೆಳೆದು ಸಾವಿರ ಬಾಹುಗಳ ಮಹಾರೂಪ ತಳೆದು ಒಂದು ಕೈಯಿಂದ ಬೆಟ್ಟವನ್ನು ಒತ್ತಿಹಿಡಿದು ನಿಂತ. ಬೆಟ್ಟದೊಳಗೂ ಆವೇಶಗೊಂಡು ಅದರ ಶಕ್ತಿಯನ್ನೂ ಹೆಚ್ಚಿಸಿದ.

ಮಥನಕಾರ್ಯ ಭರದಿಂದ ಸಾಗಿತು. ವಾಸುಕಿಯ ಸಾವಿರ ಹೆಡೆಗಳಿಂದ ವಿಷನಿಶ್ವಾಸದ ಬೆಂಕಿ ಹೊಗೆಯಾಡಿತು. ದೇವಾಸುರರ ಮೈಕಾಂತಿ ಅದರಿಂದ ಕೆಟ್ಟು ಬೂದುಬಣ್ಣಕ್ಕೆ ತಿರುಗಿತು. ಆಗ ಮೋಡಗಳು ಹರೀಚ್ಛೆಯಿಂದ ಚೆನ್ನಾಗಿ ಮಳೆಗರೆದುದರಿಂದ, ಸಮುದ್ರದ ಮೇಲಿಂದ ತಂಗಾಳಿ ಬೀಸಿದ್ದರಿಂದ ಮಥನ ಕಾರ್ಯ ಮುಂದುವರಿಯಿತು. ಎಷ್ಟು ಕಡೆದರೂ ಅಮೃತ ಬಾರದಿದ್ದಾಗ ಹರಿ ತಾನೇ ವಾಸುಕಿಯನ್ನು

ಹಿಡಿದು ಕಡೆಯಲು ತೊಡಗಿದ. ಆಗ ಹಾಲಾಹಲ ವಿಷ ಉದ್ಭವಿಸಿತು. ಅದು ಲೋಕವನ್ನೆಲ್ಲ ದಹಿಸಲು ತೊಡಗಿದಾಗ ಎಲ್ಲರೂ ಕೈಲಾಸದಲ್ಲಿ ಶಿವನ ಬಳಿಗೆ ಧಾವಿಸಿ ಮೊರೆಹೊಕ್ಕರು. ಅವನೊಳಗೆ ಅಂತರ್ಯಾಮಿಯಾಗಿ ನೆಲೆಸಿರುವ ಹರಿಯನ್ನು ಸ್ತೋತ್ರಮಾಡಿದರು.

ಬ್ರಹ್ಮ ರುದ್ರಾದಿ ಸಕಲ ಜೀವರಿಗೆ ಬಂಧ ಮೋಕ್ಷಗಳನ್ನು ನೀಡುವವ ಗುಣಪೂರ್ಣ ಸ್ವತಂತ್ರ ವಿಚಿತ್ರಶಕ್ತಿ ಉಳ್ಳವ, ಪ್ರಣವವಾಚ್ಯ ಸಕಲವೇದವೇದ್ಯ, ಸರ್ವಾಂಗಗಳಲ್ಲಿ ಸರ್ವದೇವತೆಗಳಿಗೆ ಆಶ್ರಯ ನೀಡಿದ ವಿರಾಡ್ರೂಪಿ ಎಂದು ಸ್ತುತಿಸಿದರು. ಶಿವನನ್ನೂ ಐದುಮುಖಗಳಿಂದ 'ಸದ್ಯೋಜಾತಂ ಪ್ರಪದ್ಯಾಮಿ' ಎಂದು ಮುಂತಾದ ಐದು ಅನುವಾಕಗಳಿಂದ ತನ್ನೊಳಗಿರುವ ಹರಿಯನ್ನು ಕೊಂಡಾಡುವವ ನೆಂದೂ ಪರಮ ಮಂಗಳಕರನಾಗಿದ್ದೂ ಸ್ಮಶಾನವಾಸಿ ಎಂದೂ ವಿರಕ್ತನಾಗಿದ್ದೂ ಉಮೆಯೊಂದಿಗೆ ಇರುವವನೆಂದೂ ಸ್ತುತಿಸಿದರು. ಶಿವ ಹಾಲಾಹಲವನ್ನುಂಡು ವಿಷಕಂಠನಾದ. ಲೋಕ ಅವನನ್ನು ಕೊಂಡಾಡಿತು. ಶಿವನ ಕೈಯಿಂದ ಕೆಳಗೆಬಿದ್ದ ವಿಷ ಬಿಂದುಗಳನ್ನೇ ಚೇಳು, ಹಾವು, ವಿಷವೃಕ್ಷಗಳು ಮುಂತಾದುವು ಸ್ವೀಕರಿಸಿದುವು.

❖ ❖ ❖

ಸಮುದ್ರಮಥನದಲ್ಲಿ ಹಾಲಾಹಲವಿಷ ಉದ್ಭವಿಸಿದಾಗ ಎಲ್ಲ ಜೀವಿಗಳೂ ಸದಾಶಿವನನ್ನು ಮೊರೆಹೊಕ್ಕರೆಂದು ಶುಕಮುನಿ ಪರೀಕ್ಷಿತನಿಗೆ ಹೇಳುತ್ತಾರೆ.

ತದುಗ್ರವೇಗಂ ದಿಶಿ ದಿಶ್ಯುಪರ್ಯಧೋ
ವಿಸರ್ಪದುತ್ಸರ್ಪದಸಹ್ಯವೀರ್ಯಮ್ ।
ಭೀತಾಃ ಪ್ರಜಾ ದುದ್ರುವುರಂಗ ಸೇಶ್ವರಾ
ಅರಕ್ಷ್ಯಮಾಣಾಃ ಶರಣಂ ಸದಾಶಿವಮ್ ॥ ೧೯ ॥

ಆ ಹಾಲಾಹಲವಿಷ ಅಸಹನೀಯ ಶಕ್ತಿಶಾಲಿ ದಿಕ್ಕುದಿಕ್ಕುಗಳಲ್ಲಿ ಮೇಲೆ ಕೆಳಗೆ ಮಹಾವೇಗದಿಂದ ಸುತ್ತಲೂ ಹರಡಿತು. ಮೇಲೆಯೂ ಏರಿತು. ರಾಜನೆ, ಅದನ್ನು ಕಂಡು ಹೆದರಿ ಜೀವಿಗಳು ತಮ್ಮ ತಮ್ಮ

ನೇತಾರರೊಂದಿಗೆ, ಅನ್ಯರ ರಕ್ಷಣೆ ಕಾಣದೆ ಸದಾಶಿವನನ್ನು ಮೊರೆ ಹೊಕ್ಕರು.

[೧]ಇಲ್ಲಿ ಪ್ರಶ್ನೆ ಬರುತ್ತದೆ, ಸಮುದ್ರ ಮಥನವನ್ನು ನಡೆಸುತ್ತಿರುವ ಅಜಿತನಾಮಕ ಭಗವಂತನೆ ಇರುವಾಗ ರಕ್ಷಣೆಗಾಗಿ ಯಾರನ್ನೂ ಕಾಣದೆ ಶಿವನ ಬಳಿಗೆ ಓಡಿದುದೇಕೆ? ಎಂದು. ಅದಕ್ಕೆ ವಿಶ್ವನಾಥ ವ್ಯಾಖ್ಯಾನ ಜೀವಗೋಸ್ವಾಮಿ ವ್ಯಾಖ್ಯಾನಗಳಲ್ಲಿ ಸಮಾಧಾನ ಉಕ್ತವಾಗಿದೆ- ತನ್ನ ಭಕ್ತೋತ್ತಮನಾದ ಶಿವನಿಗೆ ಕೀರ್ತಿ ತರಲೆಂದು ಭಗವಂತ ತಾನು ಸುಮ್ಮನಿದ್ದ' ಎಂದು. ಆದರೂ ಪ್ರಶ್ನೆ ಬರುತ್ತದೆ, ಶಿವನಿಗಿಂತಲೂ ಉತ್ತಮರಾದ ಬ್ರಹ್ಮವಾಯುಗಳಿದ್ದರು. ಅವರೂ ಸುಮ್ಮನಿದ್ದರೆ? ಎಂದು.

ಆದರಿಂದ ಹೀಗೆ ಸಮಾಧಾನ ಹೇಳಬೇಕು. ಭಗವಂತ ವಾಯುವಿಗೂ ಶಿವನಿಗೂ ಕೀರ್ತಿಬರಲೆಂದು ಅವರ ಬಳಿಗೇ ದೇವಾಸುರರನ್ನು ಕಳಿಸುತ್ತಾನೆ. ವಾಯುಶಿವರಿಗೂ ಆಜ್ಞೆ ಮಾಡುತ್ತಾನೆ. ಇದು ಬ್ರಹ್ಮಪುರಾಣದಲ್ಲಿ ಉಕ್ತವಾಗಿದೆ-

ರುದ್ರಸ್ಯ ಯಶಸೋಽರ್ಥಾಯ ಸ್ವಯಂ ವಿಷ್ಣುರ್ವಿಷಂ ವಿಭುಃ ।
ನ ಸಂಜಹ್ರೇ ಸಮರ್ಥೋಽಪಿ ವಾಯುಂ ಚೋಚೇ ಪ್ರಶಾಂತಯೇ ।
ಇತಿ ಚ ॥

ರುದ್ರನಿಗೆ ನಂಜುಂಡನೆಂಬ ಕೀರ್ತಿ ಬರುವುದಕ್ಕಾಗಿಯೇ ವಿಷ್ಣು ತಾನು ಸಮರ್ಥನಾದರೂ ವಿಷವನ್ನು ಪರಿಹರಿಸಲಿಲ್ಲ. ವಿಷದ ತೀಕ್ಷ್ಣತೆಯನ್ನು ಕಡಿಮೆ ಮಾಡಿ ಕೊಡಲು ವಾಯುವಿಗೆ ಆಜ್ಞೆ ಮಾಡಿದ ಎಂದೂ ಬ್ರಹ್ಮಪುರಾಣದಲ್ಲಿ ಹೇಳಿದೆ.

ಇಲ್ಲಿ 'ವಾಯುಂ ಚೋಚೇ ಪ್ರಶಾಂತಯೇ' ಎನ್ನುವ ಅಂಶ ಶ್ರುತಿ ಮೂಲಕವಾಗಿದೆ-

ವಾಯುರಸ್ಮಾ ಉಪಾಮಂಥತ್ ಪಿನಷ್ಟಿ ಸ್ಮಾಕುನನ್ನಮಾ'।

❖ ❖ ❖

ಹಾಲಾಹಲ ವಿಷದಿಂದ ಭೀತರಾಗಿ ಶರಣು ಹೊಂದಿದ ದೇವಾದಿಗಳು ಶಿವನನ್ನು ಸ್ತುತಿಸುತ್ತಾರೆ ಎಂದು ಶುಕಮುನಿ ಪರೀಕ್ಷಿತನಿಗೆ ಹೇಳುತ್ತಾರೆ-

---

೧. ಅರಕ್ಷ್ಯಮಾಣಾ ಇತಿ । ತದಾನೀಂ ಭಗವತಾ ತದುಪೇಕ್ಷಣಂ ಸ್ವಭಕ್ತ ಶ್ರೇಷ್ಠಾಯ ಚಂದ್ರಾರ್ಧಮೌಲಯೇ ತಾದೃಶಕೀರ್ತಿಪ್ರದಾನಾರ್ಥಮಿತಿ ಜ್ಞೇಯಂ। -ವಿಶ್ವನಾಥಃ

ತ್ವಮೇವ ಸರ್ವಜಗತಾಮೀಶ್ವರೋ ಬಂಧಮೋಕ್ಷಯೋಃ ।
ತಂ ತ್ವಾಮರ್ಚಂತಿ ಕುಶಲಾಃ ಪ್ರಪನ್ನಾರ್ತಿಹರಂ ಗುರುಮ್ ॥ ೨೨ ॥

ಬ್ರಹ್ಮಾದಿ ಸಕಲ ಜಗತ್ತಿಗೂ ಬಂಧಮೋಕ್ಷಗಳನ್ನು ಕೊಡಲು ನೀನೊಬ್ಬನೇ ಶಕ್ತ. ಶರಣಾಗತರ ದುಃಖ ಪರಿಹಾರಕನಾದ ಜ್ಞಾನಪ್ರದನಾದ ನಿನ್ನನ್ನೇ ಉತ್ತಮ ಜ್ಞಾನಿಗಳು ಆರಾಧಿಸುತ್ತಾರೆ.

ಇಲ್ಲಿ ಶಿವನನ್ನು ಬಂಧಮೋಕ್ಷಪ್ರದನೆಂದು ಪ್ರಜೆಗಳು ಸ್ತುತಿಸುತ್ತಾರೆ. ಇಲ್ಲಿಯೇ ಹಿಂದೆ ೨೦ನೇ ಪದ್ಯದಲ್ಲಿ

ಅಪವರ್ಗಹೇತೋಸ್ತಪೋ ಜುಷಾಣಂ ।

ಮುಕ್ತಿಗಾಗಿ ತಪಸ್ಸು ಮಾಡುತ್ತಿದ್ದ ಶಿವನ ಬಳಿಗೆ ಪ್ರಜೆಗಳು ಬಂದರು ಎಂದಿದೆ. ಈ ವಿರೋಧವನ್ನು ಪರಿಹಾರ ಮಾಡಲು ಬೇರೆ ವ್ಯಾಖ್ಯಾನಕಾರರು 'ಮುನಿಗಳ ಮುಕ್ತಿಗಾಗಿ ಶಿವ ತಪಸ್ಸು ಮಾಡುತ್ತಾನೆ' ಎನ್ನುತ್ತಾರೆ. ಹಾಗಾದರೆ ಮುಂದೆ ೪೦ನೇ ಪದ್ಯದಲ್ಲಿ-

---

ಪುಂಸಃ ಕೃಪಯತೋ ಭದ್ರೇ ಸರ್ವಾತ್ಮಾ ಪ್ರೀಯತೇ ಹರಿಃ ।
ಪ್ರೀತೇ ಹರೌ ಭಗವತಿ ಪ್ರಿಯೇಽಹಂ ಸಚರಾಚರಃ ॥

'ಪ್ರಿಯೆ ನೊಂದವರಿಗೆ ಕರುಣೆ ದೋರಿದರೆ ಸರ್ವಸ್ವಾಮಿ ಹರಿ ಪ್ರೀತನಾಗುತ್ತಾನೆ. ಭಗವಾನ್ ಹರಿ ಪ್ರೀತನಾದನೆಂದರೆ ನಾನೂ ಚರಾಚರವೆಲ್ಲವೂ ಪ್ರೀತರಾಗುತ್ತೇವೆ' ಎಂದು ಹೇಳುವುದು ಕೂಡಲಾರದು.

ಸೃಜಾಮಿ ತನ್ನಿಯುಕ್ತೋಽಹಂ ಹರೋ ಹರತಿ ತದ್ವಶಃ

ಹರಿಯಾಜ್ಞೆಯಂತೆ ನಾನು ಸೃಷ್ಟಿಕಾರ್ಯ ನಡೆಸುತ್ತೇನೆ, ಶಿವನೂ ಅವನ ವಶನಾಗಿಯೇ ಲಯಕಾರ್ಯ ಮಾಡುತ್ತಾನೆ ಎಂದು ನವಮಸ್ಕಂಧದಲ್ಲಿ ಬ್ರಹ್ಮ ಹೇಳುವುದೂ ಕೂಡಲಾರದು.

ಶ್ರೀಧರ ವ್ಯಾಖ್ಯಾನದಲ್ಲಿ 'ನಿರ್ಗುಣನೂ ಸಗುಣನೂ ಆಗಿರುವ ಶಿವನನ್ನು ಹರಿಯ ಮಾಹಾತ್ಮ್ಯಗಳಿಂದ ದೇವತೆಗಳು ಸ್ತುತಿಸುತ್ತಾರೆ, ಅವರು ಹರಿಹರರಲ್ಲಿ ಭೇದವನ್ನು ಕಾಣುವುದಿಲ್ಲ' ಎಂದಿದೆ. ವಿಶ್ವನಾಥ ವ್ಯಾಖ್ಯಾನದಲ್ಲಿಯೂ ಶಿವನನ್ನು ವಿಷ್ಣುವಿನಿಂದ ಅಭಿನ್ನನೆಂದೇ ಹೇಳಿದ್ದಾರೆ. 'ಸೃಷ್ಟಿಕರ್ತ ವಿಷ್ಣುವೆ. ಅವನನ್ನೆ ಶರಣು ಹೊಂದಿರಿ' ಎಂದು ಶಿವ ಹೇಳಿದರೆ ದೇವತೆಗಳು ಹೇಳುತ್ತಾರೆ. 'ನೀನು ಒಬ್ಬನೆ, ಅಂದರೆ ಭಗವಂತರು ಅನೇಕರಿಲ್ಲದ್ದರಿಂದ ನೀನೂ ವಿಷ್ಣುವೂ ಒಬ್ಬನೆ. ನಿನ್ನಲ್ಲಿ

ಮಾಯಾಗುಣ ಸ್ಪರ್ಶವಿದೆ. ಅವನಲ್ಲಿ ಇಲ್ಲ ಇಷ್ಟೇ ವ್ಯತ್ಯಾಸ' ಎಂದು. ಹೀಗೆ ಹೇಳಿ ದೇವತೆಗಳು ಶಿವನನ್ನು ನಿರ್ಗುಣನೆಂದೂ ಪುರುಷನೆಂದೂ ಬ್ರಹ್ಮನೆಂದೂ ವಿಷ್ಣುವೆಂದೂ ಸರ್ವಶಬ್ದವಾಚ್ಯನೆಂದೂ ಸಮಷ್ಟಿರೂಪನೆಂದೂ ಸ್ತುತಿಸುತ್ತಾರೆ, ಎಂದು.[೧]

ಆದರೆ ವಿಶ್ವನಾಥ ವ್ಯಾಖ್ಯಾನದಲ್ಲಿಯೇ ಹಿಂದೆ ೧೯ನೇ ಶ್ಲೋಕದಲ್ಲಿ ಹಾಲಾಹಲ ವಿಷದಿಂದ ಜನರು ಸಂಕಟಪಡುವಾಗ ತನ್ನ ಭಕ್ತೋತ್ತಮನಾದ ಶಿವನಿಗೆ ಕೀರ್ತಿ ಬರಲಿ ಎಂದೇ ಹರಿ ಸುಮ್ಮನಾಗಿದ್ದ' ಎಂದಿದೆ. ಇವೆಲ್ಲ ಪರಸ್ಪರ ವಿರುದ್ಧ, ಸಗುಣ ನಿರ್ಗುಣಗಳೂ ಅಪ್ರಾಮಾಣಿಕ.

ತತ್ರತತ್ರ ಸ್ತುತಿಪದ್ಯೈರ್ಹರಿರೇವ ತು ತದ್ಗತಃ ।
ಸ್ತೂಯತೇಽತೋ ಯುಕ್ತಮೇವ ಗುಣಾಧಿಕ್ಯವಚೋಽಪಿತು ।
ಇತಿ ಚ ॥

ಅಲ್ಲಲ್ಲಿ ಶಿವ ಮುಂತಾದವರಲ್ಲಿ ಅಸಂಭಾವಿತವಾದ ಸ್ತುತಿಶಬ್ದಗಳಿಂದ ಅವರೊಳಗಿರುವ ಹರಿಯನ್ನೆ ಸ್ತುತಿಸುವುದುಂಟು. ಹೀಗಾಗಿ ಶಿವಾದಿಗಳಲ್ಲಿ ಅಸಂಭಾವಿತವಾದ ಅತಿಯಾದ ಪ್ರಶಂಸೆಯೂ ಯುಕ್ತವೆ ಎಂದೂ ಉಕ್ತವಾಗಿದೆ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ಅಷ್ಟಮಸ್ಕಂಧೇ
ಸಪ್ತಮೋಽಧ್ಯಾಯಃ

❖ ❖ ❖

---

೧. ನಿರ್ಗುಣಂ ಸಗುಣಂ ಚೈವ ಶಿವಂ ಹರಿಪರಾಕ್ರಮೈಃ ।
ಸ್ತುವಂತಸ್ತು ಪ್ರಜೇಶಾನಾ ನಾಮನ್ಯಂತಾಂತರಂ ತಯೋಃ ॥ -ಶ್ರೀಧರಃ ।

ನನು ಭೂತಭಾವನೋ ವಿಷ್ಣುರೇವ। ತಂ ಶರಣಂ ಯಾತೇತಿ ತತ್ರಾಹುಃ ತ್ವಮೇಕಃ ನ ಹೀಶ್ವರಾ ಬಹವೋ ಭವಂತ್ಯತಸ್ತ್ವಂ ವಿಷ್ಣುಶ್ಚೈಕ ಏವ ಮಾಯಾ ಗುಣ ಸ್ಪರ್ಶಾಸ್ಪರ್ಶಾಭ್ಯಾಮೇವ ಭೇದ ಇತಿ ಭಾವಃ। ಪುರುಷರೂಪತ್ವೇನ ಸ್ತುವಂತಿ... ನಿರ್ವಿಶೇಷ ಸ್ವರೂಪತ್ವೇನ ಸ್ತುವಂತಿ... ಬ್ರಹ್ಮತ್ವೇನ ಸ್ತುವಂತಿ... ವಿಷ್ಣುತ್ವೇನ ಸ್ತುವಂತಿ... ಸರ್ವವಾಚಕವಾಚ್ಯತ್ವೇ ನ ಸ್ತುವಂತಿ... ಸಮಷ್ಟಿರೂಪತ್ವೇನ ಸ್ತುವಂತಿ । -ವಿಶ್ವನಾಥಃ

ಅಧ್ಯಾಯ - ೮

ಅಧ್ಯಾಯ ಸಾರಾಂಶ

ಸಮುದ್ರಮಥನದಿಂದ ಮುಂದೆ ಕಾಮಧೇನು ಉಚ್ಚೈಃಶ್ರವಸ್ಸು ಐರಾವತ ಪಾರಿಜಾತ ಅಪ್ಸರೆಯರು ಉದಿಸಿದರು.

ಸಾಕ್ಷಾತ್ ಶ್ರೀರಮೆ ಆವಿರ್ಭವಿಸಿದಳು. ಸಮುದ್ರರಾಜನ ಕುಮಾರಿಯಾದ ಅವಳಿಗೆ ಸ್ವಯಂವರ ಪೂರ್ವಭಾವಿಯಾಗಿ ಅಭಿಷೇಕ ಮಹೋತ್ಸವವನ್ನು ದೇವತೆಗಳೂ ಋಷಿಗಳೂ ನಡೆಸಿದರು. ನದ್ಯಭಿಮಾನಿಗಳು ಮೂರ್ತಿಮತ್ತಾಗಿ ಬಂದು ಬಂಗಾರದ ಕಲಶಗಳಲ್ಲಿ ಶುಚಿಯಾದ ಜಲವನ್ನು ಗೋವುಗಳು ಪಂಚಗವ್ಯವನ್ನು ವಸಂತ ಜೇನನ್ನೂ ಭೂದೇವಿ ಧಾನ್ಯಗಳನ್ನೂ ಅಭಿಷೇಕಕ್ಕೆ ತಂದಿತ್ತರು. ದೇವೇಂದ್ರ ಆಸನವನ್ನಿತ್ತ. ಋಷಿಗಳು ಅಭಿಷೇಕವನ್ನು ನಡೆಸಿದರು. ಗಂಧರ್ವರು ಅಪ್ಸರೆಯರು ಹಾಡಿದರು ಕುಣಿದರು. ಮೇಘ ದೇವತೆಗಳು ಮಂಗಳ ವಾದ್ಯ ಮೊಳಗಿಸಿದರು. ಬಳಿಕ ಮುನಿಗಳು ಅಭಿಷೇಕ ಸೂಕ್ತಗಳನ್ನು ಪಠಿಸುತ್ತಿದ್ದಂತೆ ದಿಗ್ಗಜಗಳು ಬಂಗಾರದ ಪೂರ್ಣಕಲಶಗಳಿಂದ ಅಭಿಷೇಕ ಗೈದುವು. ಸಮುದ್ರರಾಜ ಹಳದಿ ಬಣ್ಣದ ಎರಡು ರೇಶಿಮೆ ಸೀರೆಗಳನ್ನು ದೇವಿಗೆ ಇತ್ತ. ವೈಜಯಂತೀಮಾಲೆಯನ್ನೂ ಇತ್ತ. ವಿಶ್ವಕರ್ಮ ಆಭರಣಗಳನ್ನಿತ್ತ. ಸರಸ್ವತಿ ಮುತ್ತಿನ ಹಾರವನ್ನೂ ಬ್ರಹ್ಮ ಪದ್ಮವನ್ನೂ ನಾಗರು ಕರ್ಣಕುಂಡಲಗಳನ್ನೂ ನೀಡಿದರು.

ಬಳಿಕ ದೇವಿ ಪುಣ್ಯಾಹವಾಚನ ಮಾಡಿಸಿಕೊಂಡು ಸ್ವಯಂವರ ಮಾಲೆಯನ್ನು ಹಿಡಿದು ಸಭೆಯಲ್ಲಿ ಸಾಲಾಗಿ ಕುಳಿತಿದ್ದ ದೇವತೆಗಳನ್ನೂ ಮುನಿಗಳನ್ನೂ ಪರೀಕ್ಷಿಸಿದಳು. ಎಲ್ಲರಲ್ಲಿಯೂ ಕಾಮಾದಿ ದೋಷಗಳಿವೆ ಎಂದೂ ಶ್ರೀಹರಿಯೊಬ್ಬನೆ ನಿರ್ದೋಷ ಗುಣಪೂರ್ಣನೆಂದೂ ವಿಚಾರ ಮಾಡಿದಂತೆ ತೋರಿಕೊಂಡು ತನ್ನ ಅನಾದಿನಿತ್ಯಾವಿಯೋಗಿ ನಿಯತಪತಿಯಾದ ಶ್ರೀಅಜಿತನಾಮಕ ಹರಿಯ ಕೊರಳಿಗೆ ಮಾಲೆ ಹಾಕಿದಳು.

ಜಗದ ತಂದೆಯಾದ ಹರಿ ತಾಯಿಯಾದ ದೇವಿಗೆ

ತನ್ನೆದೆಯಲ್ಲಿ ಸ್ಥಾನವನ್ನಿತ್ತ. ದೇವಿ ಅಲ್ಲಿ ಏರಿ ಕುಳಿತು ಮೂಲೋಕವನ್ನೂ ಲೋಕಪಾಲಕರನ್ನೂ ಮಕ್ಕಳೆಂದು ಪ್ರೀತಿಯಿಂದ ಕರುಣಾಕಟಾಕ್ಷದಿಂದ ಕಂಡು ಐಶ್ವರ್ಯ ಸಮೃದ್ಧಿಯುಕ್ತರನ್ನಾಗಿ ಮಾಡಿದಳು. ದೇವತೆಗಳೂ ಮುನಿಗಳೂ ಶ್ರೀಸೂಕ್ತ ಮುಂತಾದ ಮಂತ್ರಗಳಿಂದ ಹೊಗಳಿ ಹೂಮಳೆಗರೆದರು.

ಬಳಿಕ ಸಮುದ್ರದಿಂದ ಮದ್ಯ ಉದ್ಭವಿಸಿತು. ಅದನ್ನು ಅಸುರರು ಸ್ವೀಕರಿಸಿದರು. ಬಳಿಕ ಭಗವಾನ್ ಧನ್ವಂತರಿ ಅಮೃತ ಕಲಶವನ್ನು ಹಿಡಿದು ಸಮುದ್ರದಿಂದ ಪ್ರಾದುರ್ಭವಿಸಿದ.

ಅಸುರರು ಒಡನೆ ಅಮೃತಕಲಶವನ್ನು ಬಲಾತ್ಕಾರದಿಂದ ಕಿತ್ತುಕೊಂಡರು. ಶ್ರೀಹರಿ ದೇವತೆಗಳನ್ನು ಸಮಾಧಾನಪಡಿಸಿದ, ನಾನು ಅಸುರರಲ್ಲಿ ಪರಸ್ಪರ ಜಗಳ ತಂದಿಟ್ಟು ನಿಮ್ಮ ಆಸೆಯನ್ನು ನೆರವೇರಿಸುತ್ತೇನೆ ಎಂದ. ಅಸುರರು ಪರಸ್ಪರ ಜಗಳ ಮಾಡಿದರು. ದುರ್ಬಲರು ಬಲಿಷ್ಠರನ್ನು ಆಕ್ಷೇಪಿಸಿದರು. 'ದೇವತೆಗಳೂ ಮಥನ ಕಾರ್ಯದಲ್ಲಿ ಭಾಗವಹಿಸಿದ್ದಾರೆ. ಅವರಿಗೂ ಅಮೃತದಲ್ಲಿ ಪಾಲು ಕೊಡುವುದು ನ್ಯಾಯ' ಎಂದರು. ಅಷ್ಟರಲ್ಲಿ ಶ್ರೀಹರಿ ಮೋಹಿನೀ ಅವತಾರ ತಾಳಿ ಅಸುರರ ಮುಂದೆ ಓಡಾಡಿದ. ಮೋಹಿನಿಯ ಅಂದಚಂದಗಳನ್ನು ಕಂಡು ಮೈಮರೆತ ಅಸುರರು ಅಮೃತಕ್ಕಾಗಿ ಜಗಳಾಡುವ ತಮ್ಮಲ್ಲಿ ಮಧ್ಯಸ್ಥಿಕೆ ಮಾಡಲು ಅವಳನ್ನೇ ಕೇಳಿಕೊಂಡರು. ಅಮೃತಕಲಶವನ್ನು ಅವಳ ಕೈಗೇ ಇತ್ತರು. ಅವರಿಗೆ ಅವಳಲ್ಲಿ ಪೂರ್ಣವಿಶ್ವಾಸವಿತ್ತು.

'ನಾನು ಸರಿಯೋ ತಪ್ಪೋ ಏನೇ ಮಾಡಿದರೂ ನೀವು ಒಪ್ಪಿಕೊಳ್ಳಬೇಕು' ಎಂದು ಅವಳು ಹೇಳಿದಾಗ 'ನೀ ಮಾಡಿದ್ದೆಲ್ಲ ನಮಗೆ ಒಪ್ಪಿಗೆ' ಎಂದು ಒಪ್ಪಿದರು. ಬಳಿಕ ದೇವದಾನವರು ಉಪವಾಸ ಮಾಡಿ ಮಿಂದು ಹೊಸಬಟ್ಟೆಯುಟ್ಟು ಅಗ್ನಿಯಲ್ಲಿ ಹೋಮ, ಗೋಬ್ರಾಹ್ಮಣರಿಗೆ ದಾನಗಳನ್ನು ಮಾಡಿ ಪುಣ್ಯಾಹವಾಚನ ಮಾಡಿಸಿ ಅಲಂಕೃತರಾಗಿ ಪೂರ್ವಾಭಿಮುಖವಾಗಿ ಹಾಸಿದ ದರ್ಭೆಯ ಮೇಲೆ ಕುಳಿತರು.

ಮೋಹಿನಿ ಅಮೃತಕಲಶವನ್ನು ಹಿಡಿದು ಮಂಟಪದೊಳಗೆ ಪ್ರವೇಶಿಸಿದಳು. ಅಸುರರ ಕಡೆಗೆ ಮೋಹಕವಾಗಿ ನಸುನಗುತ್ತ

ಸ್ವಭಾವತಃ ಕ್ರೂರರಾದ ಅಸುರರಿಗೆ ಅಮೃತ ಉಣಿಸಿದರೆ ಹಾವಿಗೆ ಹಾಲೆರೆದಂತಾಗುವುದೆಂದು ಬಗೆದು ದೂರದಲ್ಲಿ ಕುಳಿತಿದ್ದ ದೇವತೆಗಳಿಗೇ ಮೊದಲು ಬಡಿಸಲು ತೊಡಗಿದಳು. ಆಗಾಗ ದೈತ್ಯರ ಬಳಿಗೆ ಬಂದು ಸಿಹಿ ಮಾತುಗಳಿಂದ ವಂಚಿಸಿದಳು. ಮೊದಲಿಗೆ ತಮಗೇ ಬಡಿಸಬೇಕೆಂದು ಅವರು ಬಯಸಿದ್ದರೂ ಜಗಳಕ್ಕೆ ಬರಲಿಲ್ಲ. ಅವಳೊಂದಿಗೆ ತಮ್ಮ ಪ್ರೀತಿಯ ಸಂಬಂಧ ಎಲ್ಲಿ ಹಾಳಾಗುವುದೋ ಎಂದು ಅವರಿಗೆ ಭಯ. ಮತ್ತು ಅವಳು ತಮ್ಮೊಡನೆಯೇ ಮೊದಲಿಗೆ ಆದರದಿಂದ ಮಾತನಾಡಿಸಿ ಗೌರವಿಸಿದ್ದಳು. ತಾವು ಗೌರವಾನ್ವಿತರು. ತಮ್ಮ ಗೌರವಕ್ಕೆ ಧಕ್ಕೆ ಬರಬಾರದೆಂದು ಸಹನೆಯಿಂದ ಇದ್ದರು.

ರಾಹುದೈತ್ಯನೊಬ್ಬ ಮಾತ್ರ ದೇವತೆಗಳಂತೆ ವೇಷ ತೊಟ್ಟು ದೇವತೆಗಳ ಸಾಲಿನಲ್ಲಿ ಕುಳಿತು ಅಮೃತವನ್ನು ಕುಡಿಯತೊಡಗಿದ. ಇದನ್ನು ಚಂದ್ರಸೂರ್ಯರು ಮೋಹಿನಿಗೆ ಸೂಚಿಸಿದರು. ಒಡನೆ ಶ್ರೀಹರಿ ಚಕ್ರದಿಂದ ರಾಹುವಿನ ಶಿರಚ್ಛೇದ ಮಾಡಿಬಿಟ್ಟ. ಶಿರಸ್ಸು ರಾಹುಕೇತುಗಳೆಂದು ಎರಡು ಗ್ರಹಗಳಿಗೆ ಅಧಿಷ್ಠಾನವಾಯಿತು. ಅದರಲ್ಲಿ ನೂರುಮಂದಿ ಕೇತುದೇವತೆಗಳೂ ಸತ್ತುಹೋದ ರಾಹುವೂ ಪ್ರವೇಶಿಸಿದರು. ಮುಂಡಭಾಗ ಶುದ್ಧೋದ ಸಮುದ್ರದಲ್ಲಿ ಬಿದ್ದಿತು. ಅದು ಅಮೃತಸ್ಪರ್ಶದಿಂದಾಗಿ ಹಾಳಾಗದೆ ಉಳಿದಿದೆ. ರಾಹು ಸೂರ್ಯಚಂದ್ರರನ್ನು ವೈರಭಾವದಿಂದ ಅಮಾವಾಸ್ಯೆ ಹುಣ್ಣಿಮೆಗಳಲ್ಲಿ ಗ್ರಹಣ ಮಾಡುತ್ತಿದ್ದಾನೆ.

ದೇವತೆಗಳಿಗೆ ಅಮೃತವನ್ನು ಉಣಿಸಿ ಶ್ರೀಹರಿ ಪುರುಷರೂಪ ತಳೆದು ಗರುಡಾರೂಢನಾಗಿ ಹೊರಟುಹೋದ.

❖❖❖

ಸಮುದ್ರ ಮಥನದಿಂದ ಉದಿಸಿ ಬಂದ ಮಹಾಲಕ್ಷ್ಮಿ ಸ್ವಯಂವರ ಮಾಲೆಯನ್ನು ಹಿಡಿದುಕೊಂಡು ಎಲ್ಲ ದೇವತೆಗಳಲ್ಲಿ ಮುನಿಗಳಲ್ಲಿ ದೋಷಗಳಿವೆ ಎನ್ನುತ್ತ ನಿರ್ದೋಷನಾದ ಹರಿಯನ್ನೇ ವರಿಸಿದಳು ಎಂದು ಶುಕಮುನಿ ಪರೀಕ್ಷಿತನಿಗೆ ಹೇಳುತ್ತಾರೆ.

ನೂನಂ ತಪೋ ಯಸ್ಯ ನ ಮನ್ಯುನಿರ್ಜಯೋ
ಜ್ಞಾನಂ ಕ್ವಚಿತ್ತಚ್ಚ ನ ಸಂಗವರ್ಜಿತಮ್ ।
ಕಶ್ಚಿನ್ಮಹಾಂಸ್ತಸ್ಯ ನ ಕಾಮನಿರ್ಜಯಃ
ಸ ಈಶ್ವರಃ ಕಿಂ ಪರತೋಽವ್ಯಪಾಶ್ರಯಃ ॥ ೧೯ ॥

ಧರ್ಮಃ ಕ್ವಚಿತ್ತಸ್ಯ ನ ಭೂತಸೌಹೃದಂ
ತ್ಯಾಗಃ ಕ್ವಚಿತ್ತಚ್ಚ ನ ಮುಕ್ತಿಕಾರಣಮ್ ।
ವೀರ್ಯಂ ನ ಪುಂಸೋಽಸ್ತ್ಯಜವೇಗನಿಷ್ಕೃತಂ
ನಹಿ ದ್ವಿತೀಯೋ ಗುಣಸಂಗವರ್ಜಿತಃ ॥ ೨೦ ॥

ಕ್ವಚಿಚ್ಚಿರಾಯುರ್ನಹಿ ಶೀಲಮಂಗಲಂ
ಕ್ವಚಿತ್ತದಪ್ಯಸ್ತಿ ನ ವೇದ್ಯಮಾಯುಷಃ ।
ಯತ್ರೋಭಯಂ ಕುತ್ರ ಚ ಸೋಽಪ್ಯಮಂಗಲಃ
ಸುಮಂಗಲಃ ಕಶ್ಚನ ಕಾಂಕ್ಷತೇ ಹಿ ಮಾಮ್ ॥ ೨೧ ॥

ಏವಂ ವಿಮೃಶ್ಯಾವ್ಯಭಿಚಾರಿಸದ್ಗುಣಂ
ಪದಂ ನಿಜೈಕಾಶ್ರಯಿಸದ್ಗುಣಾಶ್ರಯಮ್ ।
ವವ್ರೇ ವರಂ ಸರ್ವಗುಣೈರಪೇಕ್ಷಿತಂ
ರಮಾ ಮುಕುಂದಂ ನಿರಪೇಕ್ಷಮೀಪ್ಸಿತಮ್ ॥ ೨೨ ॥

ವಿಶ್ವಾಮಿತ್ರಾದಿ ಮುನಿಗಳಲ್ಲಿ ತಪಸ್ಸಿದೆ. ಆದರೆ ಕೋಪನಿಗ್ರಹವಿಲ್ಲ. ಗುರು ಶುಕ್ರ ಮುಂತಾದವರಲ್ಲಿ ಜ್ಞಾನವಿದೆ, ಹಣದಾಸೆ ಅವರನ್ನು ಬಿಟ್ಟಿಲ್ಲ. ಬ್ರಹ್ಮ ಮಹಾಪುರುಷನಾದರೂ ಕಾಮನಿಗ್ರಹವಿಲ್ಲ. ರುದ್ರ ಪರರನ್ನಾಶ್ರಯಿಸಿದವನೆಂದರೆ ಅವನೆಂಥ ಈಶ್ವರ?

ಯಮನಲ್ಲಿ ಧರ್ಮನಿಷ್ಠೆ ಇದೆ, ಜೀವಿಗಳಲ್ಲಿ ಅವನಿಗೆ ಸೌಹಾರ್ದವಿಲ್ಲ. ಬಲಿಯಲ್ಲಿ ದಾನನಿಷ್ಠೆ ಇದೆ ಅದು ಮೋಕ್ಷಕಾರಣವಾಗಲಿಲ್ಲ. ಕಾಲವೇಗವನ್ನು ಇದಿರಿಸಬಲ್ಲ ಸಾಮರ್ಥ್ಯ ಯಾವ ದೇವತೆಗಳಿಗೂ ಇಲ್ಲ. ಗುಣತ್ರಯಜನ್ಯವಾದ ಕಾಮಕ್ರೋಧಾದಿ ದೋಷಗಳಿಂದ ಮುಕ್ತನೂ ಭಗವಂತನಿಗಿಂತ ಬೇರೆ ಯಾರೂ ಇಲ್ಲ.

ಮೃತ್ಯುದೇವನಲ್ಲಿ ಚಿರಂಜೀವಿತ್ವವಿದೆ. ಪರೋಪಕಾರ ದಯೆ ಮುಂತಾದ

ಶೀಲವಿಲ್ಲ, ಬಂಧುಜನರನ್ನು ಜೊತೆ ಸೇರಿಸುವ ಮಂಗಳ ಕಾರ್ಯಪರತೆಯೂ ಇಲ್ಲ. ಮನ್ಮಥನಲ್ಲಿ ಸಂತಾನವೃದ್ಧಿ ಎಂಬ ಮಂಗಳಕಾರ್ಯ ನಿಷ್ಠೆ ಇದೆ. ಆದರೆ ದೇವತೆಗಳಿಗೆ ನಿರ್ದಿಷ್ಟವಾದ ಮನ್ವಂತರಾಯುಷ್ಯವಿಲ್ಲ. ಚಂದ್ರನಲ್ಲಿ ಆಯುಷ್ಯ, ಆಹ್ಲಾದದಾಯಕತ್ವ ವೆಂಬ ಮಂಗಳಕಾರ್ಯ ಎರಡೂ ಇವೆ, ಆದರೆ ಅವನೂ ಗುರುತಲ್ಪ ಗಮನದಂಥ ಅಮಂಗಳಕಾರ್ಯ ಮಾಡಿದ್ದಾನೆ. ದೇವೇಂದ್ರ ಶತಕ್ರತುವಾದ್ದರಿಂದ ಸಕಲಪಾಪರಹಿತ, ಮಂಗಲಕರ. ಆದರೂ ಐಶ್ವರ್ಯಪ್ರಾಪ್ತಿಗಾಗಿ ಲಕ್ಷ್ಮಿಯ ಅನುಗ್ರಹವನ್ನು ಬಯಸುತ್ತಾನೆ.

ತನ್ನೊಬ್ಬನನ್ನೇ ಆಶ್ರಯಿಸಿರುವ ಗುಣಗಳಿಗೆ ತಾನು ಆಶ್ರಯನಾಗಿದ್ದಾನೆ ಶ್ರೀಹರಿ. ಸರ್ವಗುಣಗಳೂ ಸ್ವರೂಪಭೂತವಾಗಿದ್ದು ಚೇತನವಾಗಿರುವುದರಿಂದ ಆಶ್ರಯಕ್ಕಾಗಿ ಅವನನ್ನೇ ಅಪೇಕ್ಷಿಸುತ್ತಿವೆ. ಗುಣಗಳು ತನ್ನೊಬ್ಬನನ್ನೇ ಆಶ್ರಯಿಸದೆ ಬೇರೆಯವರಲ್ಲಿಯೂ ಇದ್ದರೆ ಅದೊಂದು ಬಗೆಯ ವ್ಯಭಿಚಾರ. ಒಂದು ಗುಣವಿದ್ದರೂ ಅದರ ಜೊತೆಗೇ ಇರಬೇಕಾಗಿರುವ ಇನ್ನೊಂದು ಗುಣವಿಲ್ಲದಿದ್ದರೆ ಅದು ಇನ್ನೊಂದು ಬಗೆಯ ವ್ಯಭಿಚಾರ. ಈ ಎರಡೂ ಬಗೆಯ ವ್ಯಭಿಚಾರವಿಲ್ಲದ ಸದ್ಗುಣಗಳುಳ್ಳವನು ಹರಿಯೊಬ್ಬನೆ ಎಂದು ಲಕ್ಷ್ಮಿ ವಿಚಾರ ಮಾಡಿದ್ದಾಳೆ. ಹರಿ ತನ್ನೊಬ್ಬನನ್ನೇ ಆಶ್ರಯಿಸಿದ ಗುಣವುಳ್ಳವನಾದ್ದರಿಂದ ಮೊದಲನೇ ವ್ಯಭಿಚಾರವಿಲ್ಲ. ಎಲ್ಲ ಗುಣಗಳೂ ತನ್ನಲ್ಲಿ ಇರುವುದರಿಂದ ಎರಡನೇ ಬಗೆಯ ವ್ಯಭಿಚಾರವೂ ಇಲ್ಲ. ಹರಿ ಸ್ವರಮಣನಾದ್ದರಿಂದ ಅವನು ಲಕ್ಷ್ಮಿಯನ್ನು ತನ್ನ ಸುಖಕ್ಕಾಗಿ ಬಯಸುವುದಿಲ್ಲ, ನಿರಪೇಕ್ಷ, ಆದರೆ ಲಕ್ಷ್ಮಿಗೆ ಆತ ಅಪೇಕ್ಷಿತ, ಈಪ್ಸಿತ. ಇಂಥ ವೇದವೇದ್ಯನಾದ ಮೋಕ್ಷದಾಯಕನಾದ ಹರಿಯನ್ನೇ ಲಕ್ಷ್ಮಿ ವರಿಸಿದಳು.

ಇಲ್ಲಿ ಪ್ರಶ್ನೆ ಬರುತ್ತದೆ.

ಸ್ವಸ್ಯಾಃ ಸ್ತ್ರಿಯಸ್ತ್ರಿಜಗತೋ ಜನಕೋ ಜನನ್ಯಾಃ ।
ವಕ್ಷೋ ನಿವಾಸಮಕರೋತ್ ಪರಮಂ ವಿಭೂತೇಃ ॥ (೮.೮.೨೪)

ಎಂದು ಮುಂದೆ ಲಕ್ಷ್ಮೀದೇವಿ ಮೂಲೋಕಕ್ಕೆ ಜನನಿ, ಶ್ರೀಹರಿ ಮೂಲೋಕಕ್ಕೆ ಜನಕ ಎಂದು ಹೇಳುತ್ತ ಲಕ್ಷ್ಮಿ ಹರಿಯ ನಿಯತಭಾರ್ಯೆ ಅನಾದಿಕಾಲದಿಂದ ನಿತ್ಯಾವಿಯೋಗಿನಿ ಎಂದು ಹೇಳಿದಮೇಲೆ ಅಂಥ ಲಕ್ಷ್ಮಿ ಇನ್ನೊಬ್ಬ ಪುರುಷನನ್ನು ವರಿಸಲು ಅನ್ವೇಷಣ ಮಾಡುವುದು, ಅದರಲ್ಲಿಯೂ ತನ್ನ ಮಕ್ಕಳೇ ಆದ

ಬ್ರಹ್ಮಾದಿಜೀವರಲ್ಲಿ ಒಬ್ಬನನ್ನು ಆರಿಸಿಕೊಳ್ಳಲು ಸ್ವಯಂವರ ಮಾಲೆಯನ್ನು ಕೈಯಲ್ಲಿ ಹಿಡಿದು ನಿಲ್ಲುವುದು ಅಸಂಗತವೆನಿಸುತ್ತದೆ. ಶೂರ್ಪಣಖಿ ಪತಿಯ ಅನ್ವೇಷಣ ಮಾಡಿದ್ದಕ್ಕೆ ಶ್ರೀರಾಮ ಅವಳ ಕಿವಿಮೂಗು ಕತ್ತರಿಸಿದ. ಲಕ್ಷ್ಮಿ ಅದೇ ಕೆಲಸ ಮಾಡಿಯಾಳೆ! ಮಾಡಿದರೆ ಹರಿ ಕ್ಷಮಿಸಿಯಾನೆ?

೧ಈ ಪ್ರಶ್ನೆಗೆ ವಿಶ್ವನಾಥ ಶುಕದೇವ ಜೀವಗೋಸ್ವಾಮಿ ವ್ಯಾಖ್ಯಾನಗಳಲ್ಲಿ ಇಬ್ಬರು ಲಕ್ಷ್ಮಿಯರೆಂದು ಕಲ್ಪಿಸಿ ಸಮಾಧಾನ ನೀಡಿದ್ದಾರೆ-

ತತಶ್ಚಾವಿರಭೂತ್ ಸಾಕ್ಷಾತ್ ಶ್ರೀ ರಮಾ ಭಗವತ್ಪ್ರಿಯಾ ।

'ಬಳಿಕ ಭಗವಂತನ ಪ್ರೇಯಸಿಯಾದ ಸಾಕ್ಷಾತ್ ಶ್ರೀರಮೆ ಆವಿರ್ಭವಿಸಿದಳು' ಎಂಬಲ್ಲಿ ಶ್ರೀ ಎಂದೂ ರಮಾ ಎಂದೂ ಇಬ್ಬರು ಲಕ್ಷ್ಮಿಯರ ಉಲ್ಲೇಖವಿದೆ. ಲಕ್ಷ್ಮಿ ಒಬ್ಬಳೇ ಆಗಿದ್ದರೆ ಪುನರುಕ್ತಿಯಾಗುತ್ತಿತ್ತು. ಈ ಇಬ್ಬರು ಲಕ್ಷ್ಮೀದೇವಿಯರಲ್ಲಿ ಒಬ್ಬಳು ರಮೆ ಚಿನ್ಮಯಿ, ಭಗವಂತನನ್ನು ರಮಿಸುವ ಪತ್ನಿ. ಇನ್ನೊಬ್ಬಳು ಶ್ರೀ, ಅಂದರೆ ಸಂಪತ್ತೇ ಮೂರ್ತಿಮತ್ತಾಗಿ ಬಂದವಳು ಗುಣಮಯಿ. ರಮೆಯ ವಿಭೂತಿ ರೂಪಳು. ಇವಳು ಸರ್ವಕಾಲದಲ್ಲಿ ಹರಿಯನ್ನೇ ಆಶ್ರಯಿಸಿದ್ದರೂ ಆಗಾಗ ಬ್ರಹ್ಮಾದಿಗಳಲ್ಲಿಯೂ ಇರುತ್ತಾಳೆ. ಇವಳೇ ಬ್ರಹ್ಮಾದಿಗಳಲ್ಲಿ ಯಾರನ್ನೂ ಒಲ್ಲದೆ ಹರಿಯ ಎದೆಯಲ್ಲಿ ಶ್ರೀವತ್ಸದಲ್ಲಿ ಶಾಶ್ವತವಾಗಿ ನೆಲೆಸಿ ಬಳಿಕ ಬ್ರಹ್ಮಾದಿಗಳನ್ನೂ ತನ್ನ

---

೧. ಭಗವತ್ಪರಾ ಸಾಕ್ಷಾದ್ ರಮಾ ಆವಿರಭೂತ್। ತಸ್ಯಾ ವಿಭೂತಿಭೂತಾ, ಯಸ್ಯಾಂ ಸರ್ವೇಷಾಂ ಭಾರ್ಯಾಬುದ್ಧ್ಯಾ ಸ್ಪೃಹಾ ಜಾತಾ ಸಾ ಶ್ರೀಃ ಸಂಪತ್ತಿಃ ರಮಾಶ್ರಯಾ ಜಾತಾ । ಭಗವದುಪಾಸಕಾನ್ ಭಗವದವತಾರಾನುರೂಪ ಸ್ವತನು ಪ್ರಕಾಶನೇನ, ನಿಃಶ್ರೀಕಾನ್ ದೇವಾನ್ ಸ್ವವಿಭೂತಿರೂಪ ಶ್ರೀಪ್ರಕಾಶೇನ ಚ ತೋಷಯಂತೀತಿ ಪ್ರಯೋಜನದ್ವಯಚಿಕೀರ್ಷಯಾ ಲಕ್ಷ್ಮೀರ್ಜಾತೇತಿ ಭಾವಃ। ಅನ್ಯಥಾ ರಮಾ ಶ್ರೀರಿತಿ ಪುನರುಕ್ತಿಃ ಸ್ಯಾತ್। 'ತಸ್ಯಾಂ ಚಕ್ರುಃ ಸ್ಪೃಹಾಂ ಸರ್ವೇ' ಇತ್ಯನಂತರ ಶ್ಲೋಕೋಕ್ತ್ಯಾ ಸರ್ವೇಷಾಂ ದೋಷಭಾಗಿತ್ವಮೂರ್ಖತ್ವ ಪ್ರಸಂಗಶ್ಚ ಸ್ಯಾತ್। ತಸ್ಮಾತ್ ಸಂಪತ್ತಿ ದೃಷ್ಟ್ವಾ ಸರ್ವೇಷಾಂ ಸ್ಪೃಹಾ ಜಾತಾ। ಸಾಕ್ಷಾದ್ ರಮಾ ತು ತಾನ್ ಪುತ್ರಾನ್ ಜ್ಞಾತ್ವಾ ಭಗವಂತಂ ಶರಣಂ ಗತೇತಿ ಸಿದ್ಧಾಂತಃ ॥ -ಶುಕದೇವಃ

ದ್ವಿವಿಧಾಯಾ ಲಕ್ಷ್ಮ್ಯಾ ಸ್ತತ್ರ ವಾಸಂ ವ್ಯವಸ್ಥಯೈವಾಹ ತಸ್ಯಾಃ ಪ್ರಸಿದ್ಧಾಯಾ ಹರಿಪ್ರೇಯಸೀರೂಪಾಯಾಃ ತ್ರಿಜಗತೋ ಜನನ್ಯಾಃ ವಕ್ಷ ಏವ ನಿವಾಸಮಕರೋತ್। ತಥೈವ ವಿಭೂತೇಃ ಸಂಪದ್ರೂಪಾಯಾ ಅಪಿ ವಕ್ಷಃ ಪರಮಂ ಶ್ರೇಷ್ಠಂ ಸಾರ್ವಕಾಲಿಕಂ ಚ ನಿವಾಸಮಕರೋತ್। ತೇನ ಬ್ರಹ್ಮೇಂದ್ರಾದ್ಯಾಃ ಖಲು ವಿಭೂತಿರೂಪಾಯಾಃ ಅಸಾರ್ವದಿಕಾಃ ಗೌಣಾಶ್ಚ ನಿವಾಸಾಃ ಸ್ಯುರಿತಿ ಧ್ವನಿತಂ। ...ಸ್ವಯಂ ಗುಣಾತೀತಾ ಚಿನ್ಮಯಸಂಪದ್ರೂಪಾ

ಪ್ರಕಾಶದಿಂದ ಸಂತೋಷಗೊಳಿಸಿದಳು. ದೇವತೆಗಳು ಅವಳನ್ನು ಭಾರ್ಯೆಯಾಗಿ ಪಡೆಯಲು ಬಯಸಿದುದು ಸರಿಯೆ. ಅವಳು ಅವರನ್ನು ಪರೀಕ್ಷಿಸಿದ್ದೂ ಸರಿಯೆ. ಅವಳ ಪ್ರಿಯಕರನು ಹರಿಯೆ. ಅವನೆ ಸರ್ವೋತ್ತಮ ಎನ್ನುವುದನ್ನು ತೋರಿಸುವುದಕ್ಕಾಗಿ ಬೇರೆ ದೇವತೆಗಳ ಗುಣದೋಷಗಳನ್ನು ಪರೀಕ್ಷಿಸಿದಳು. ಅವರಲ್ಲಿ ದೋಷಗಳು ಸ್ವತಃ ಅಮಂಗಳಕರಗಳೆ. ಗುಣಗಳೂ ಪ್ರಾಕೃತ, ನಶ್ವರವಾಗಿದ್ದು ಅಮಂಗಳವೇ ಆಗಿವೆ. ಮಂಗಳವಲ್ಲ. ಮಂಗಳ ಗುಣಉಳ್ಳ ಶ್ರೀಹರಿಯೊಬ್ಬನೇ ಸುಮಂಗಲ. ವಿಷ್ಣು ಮತ್ತು ಸದಾಶಿವರು ನಿರ್ಗುಣರು, ಭಗವಂತರೆ. ಆದರೆ ಸದಾಶಿವನ ಅಂಶಭೂತನಾದ ರುದ್ರ ಗುಣಾವತಾರ. ವಿಷ್ಣುವಿನ ಅಂಶಭೂತರಾದ ಮತ್ಸ್ಯಾದಿಗಳು ಗುಣಾವತಾರರಲ್ಲ. ಹಾಗೆಯೇ ಚಿನ್ಮಯಿ ಲಕ್ಷ್ಮಿ ಮತ್ತು ಅವಳ ವಿಭೂತಿರೂಪಳಾದ ಲಕ್ಷ್ಮಿ ಇಬ್ಬರೂ ಹರಿಯ ಪ್ರೇಯಸಿಯರೆ. ಆದರೆ ವಿಭೂತಿರೂಪ ಲಕ್ಷ್ಮಿ ಬ್ರಹ್ಮಾದಿಗಳಿಗೆ ಸಂಪತ್ತನ್ನು ನೀಡುವವಳು ಗುಣಮಯಿ. ಚಿನ್ಮಯಿ ಲಕ್ಷ್ಮಿ ಮುಕ್ತಲೋಕದಲ್ಲಿ ಭಕ್ತರಿಗೆ ಸಂಪತ್ತನ್ನು ನೀಡುವವಳು, ಗುಣಮಯಿಯಲ್ಲ. ಇಬ್ಬರು ಲಕ್ಷ್ಮಿಯರೂ ಸಮುದ್ರ ಮಥನದಿಂದ ಪ್ರಾದುರ್ಭವಿಸಿದರು. ಇಬ್ಬರೂ ಏಕೀಭೂತರಾದರು. ಅವರಲ್ಲಿ ಗುಣಮಯಿ ಲಕ್ಷ್ಮಿ ನಾರಾಯಣನನ್ನು ವರಿಸಲು ಮೊದಲಿಗೆ ದೇವತೆಗಳ ಗುಣದೋಷಗಳನ್ನು ಪರೀಕ್ಷಿಸಿದಳು.'

ಲಕ್ಷ್ಮೀಃ ಶ್ರೀಃ ನಾರಾಯಣಮೇಕಮೇವಾಶ್ರಿತ್ಯ ಸದಾ ವರ್ತತೇ। ತಥೈವಾನಾದಿತ ಏವ ಕಮಪಿ ಗುಣಂ ನೋಪಾಧೀಕೃತ್ಯ ಸ್ವಭಾವತ ಏವ ತಸ್ಮಿನ್ ಪ್ರೇಮವತೀ ತತ್ಸರ್ವೇಂದ್ರಿಯಸುಖಸಂಪಾದಯಿತ್ರೀ ಪ್ರೇಯಸೀರೂಪಾಪಿ ವರ್ತತೇ। ದ್ವಿವಿಧೈವ ಲಕ್ಷ್ಮೀಃ ಸಮುದ್ರಂ ಜನಕೀಕೃತ್ಯ ಪ್ರಾದುರ್ಭೂತಾ ಪುನರೇಕೀಭೂತಾ ಸತೀ ಸ್ವನಿತ್ಯಪ್ರಿಯಂ ಶ್ರೀನಾರಾಯಣಂ ಸ್ವಯಂ ವರೀತುಂ ಚಚಾಲ। ತಯೋರೇಕೀಭೂತಯೋರ್ಲಕ್ಷ್ಮ್ಯೋರ್ಮಧ್ಯೇ ಯಾ ಸಂಪದ್ರೂಪಾ ಸಾ ಲೋಕೇ ಸ್ವಪ್ರೇಯಸೋ ಭಗವತಃ ಸರ್ವತ ಏವೋತ್ಕರ್ಷಂ ಖ್ಯಾಪಯಿತುಂ ತತ್ರ ನಿತ್ಯನಿರುಪಾಧಿ ಪ್ರೇಮವತ್ಯಪಿ ಅನ್ಯತ್ರ ಗುಣದೋಷ ವಿವೇಚನಪೂರ್ವಕಂ ಅನ್ಯಾಸ್ಯಾಃ ಸ್ವಯಂವರಾಯಾ ಇವ ಸ್ವಸ್ಯಾಅಪಿ ತತ್ರೈವ ಗುಣೋತ್ಕರ್ಷೋಪಾಧಿಕಂ ಸ್ವಯಂವರಣಂ ದರ್ಶಯಾಮಾಸ। ...ವಿಷ್ಣು ಸದಾಶಿವಯೋಃ ನಿರ್ಗುಣತ್ವೇಶ್ವರತ್ವಾಭ್ಯಾಂ ಸಾಮ್ಯೇಽಪಿ ಯಥಾ ಸದಾಶಿವಾಂಶಭೂತಸ್ಯ ರುದ್ರಸ್ಯ ಗುಣಾವತಾರತ್ವಂ ನತು ವಿಷ್ಣೋರಂಶಭೂತಸ್ಯ ಮತ್ಸ್ಯಕೂರ್ಮಾದೇಃ ತಥಾ ಲಕ್ಷ್ಮೀತದ್ವಿಭೂತಿರೂಪಲಕ್ಷ್ಮ್ಯೋರ್ಭಗವತ್ ಪ್ರೇಯಸೀತ್ವಾದಿನಾ ಸಾಮ್ಯೇಽಪಿ ವಿಭೂತಿರೂಪಲಕ್ಷ್ಮ್ಯಾ ಏವ ಬ್ರಹ್ಮಾದಿಭ್ಯೋ ದತ್ತಸಂಪತ್ತೇರ್ಗುಣಮಯತ್ವಂ। ನ ಲಕ್ಷ್ಮ್ಯಾಃ ಲಕ್ಷ್ಮ್ಯಾಸ್ತು ನಿತ್ಯಸಿದ್ಧ ಧಾಮಸ್ಥ ಸಿದ್ಧಭಕ್ತೇಭ್ಯೋ ದತ್ತ ಸಂಪತ್ತೇಶ್ಚಿನ್ಮಯತ್ವಂ। -ವಿಶ್ವನಾಥಃ

ವಸ್ತುತಃ ಹರಿಯ ಪ್ರೇಯಸಿಯೇ ಆಗಿದ್ದು ಅವನ ಎದೆಯಲ್ಲಿಯೇ ನೆಲೆಸುವ ಚಿನ್ಮಯಿ ಲಕ್ಷ್ಮಿ ಕೇವಲ ಮುಕ್ತಲೋಕಕ್ಕೆ ಮಾತ್ರ ಸಂಪತ್ತನ್ನು ನೀಡುತ್ತಾಳೆ ಎನ್ನುವುದು ಅನುಚಿತ. ಮೂಲೋಕಕ್ಕೆ ಜನನಿ ಅವಳು ಪ್ರೀತಿಯ ಮಕ್ಕಳಾದ ಬ್ರಹ್ಮಾದಿಗಳಿಗೆ ಸಂಪತ್ತನ್ನು ಕೊಡಲಾರಳೆ? ಬ್ರಹ್ಮಾದಿಗಳು ತಾಯಿಯನ್ನು ಬಿಟ್ಟು ಅನ್ಯರನ್ನು ಸಂಪತ್ತಿಗಾಗಿ ಆಶ್ರಯಿಸುವರೆ? ಅದರಿಂದ ತಾಯಿ ಲಕ್ಷ್ಮಿ ಒಬ್ಬಳು, ಸಂಪತ್ತನ್ನು ನೀಡಿ ಉಣಿಸುವವಳು ದಾದಿ ಲಕ್ಷ್ಮಿ ಇನ್ನೊಬ್ಬಳು ಎಂದು ಭೇದವೇಕೆ? ಈ ದಾದಿ ಲಕ್ಷ್ಮಿ ಹರಿಯ ಪ್ರೇಯಸಿಯಾಗಿದ್ದರೂ ಕೂಡ ಬ್ರಹ್ಮಾದಿಗಳು ದಾದಿಯಾದ ಆ ಲಕ್ಷ್ಮಿಯನ್ನು ಭಾರ್ಯೆ ಎಂಬ ದೃಷ್ಟಿಯಿಂದ ಬಯಸುವುದು ಬಹಳ ಅನುಚಿತ.

ಸ್ವರ್ಗಾಭಿಮಾನಿ ಶ್ರೀದೇವಿಯೊಬ್ಬಳು ಬೇರೇ ಇದ್ದರೂ ಅವಳು ದೇವೇಂದ್ರನ ಪ್ರೇಯಸಿಯೇ ಹೊರತು ಈಗ ಲಕ್ಷ್ಮಿಯಂತೆ ಸಮುದ್ರದಿಂದ ಉದಿಸಿ ಬಂದವಳಲ್ಲ, ಸ್ವಯಂವರ ಮಂಟಪಕ್ಕೆ ಬಂದವಳಲ್ಲ. ಬಂದವಳು ಸಾಕ್ಷಾತ್ ಶ್ರೀದೇವಿ, ಮಹಾಲಕ್ಷ್ಮಿ, ವಿಷ್ಣುಪತ್ನಿ. ಹಾಗಾದರೆ ಲಕ್ಷ್ಮಿ ಸ್ವಯಂವರ ಮಂಟಪಕ್ಕೆ ಬಂದುದಾದರೂ ಏಕೆ? ಹರಿಯ ಕೊರಳಿಗೇ ನೇರವಾಗಿ ಮಾಲೆ ಅರ್ಪಿಸ ಬಹುದಿತ್ತಲ್ಲವೆ? ಬ್ರಹ್ಮಾದಿಗಳಾದರೂ ಅವಳನ್ನು ಬಯಸಿದರು ಏಕೆ?

'ತಸ್ಯಾಂ ಚಕ್ರುಃ ಸ್ಪೃಹಾಂ ಸರ್ವೇ'

ಎಂದುದು, ಲಕ್ಷ್ಮಿ ಅವರ ಗುಣದೋಷಗಳನ್ನು ಪರೀಕ್ಷಿಸಿದುದು ಇದೆಲ್ಲ ಏಕೆ? ಎಂದರೆ ಇದೊಂದು ಲಕ್ಷ್ಮೀನಾರಾಯಣರ ಕಲ್ಯಾಣೋತ್ಸವ.

ತಾಯಿ ತಂದೆಗಳ ಕಲ್ಯಾಣೋತ್ಸವ ನೋಡಿ ಆನಂದಿಸಲು ಮಕ್ಕಳು ಬ್ರಹ್ಮಾದಿಗಳು ನೆರೆದಿದ್ದರು. ತಾಯಿಯೆಂದೇ ಸ್ಪೃಹೆ ಮಾಡಿದರು, ಭಾರ್ಯೆ ಎಂದಲ್ಲ. ದೇವಿಯೂ ಮಕ್ಕಳ ಗುಣದೋಷಗಳನ್ನು ಲೋಕಕ್ಕೆ ತಿಳಿಸಿದಳಷ್ಟೆ, ಪರೀಕ್ಷೆ ಮಾಡಲಿಲ್ಲ. ಹರಿಯೇ ನಿರ್ದೋಷನೆಂಬುದನ್ನು ಮನಗಾಣಿಸಲು ಈ ತಂತ್ರವನ್ನು ಬಳಸಿಕೊಂಡಳು ಹೊರತು ಮಕ್ಕಳನ್ನು ವರಿಸಲು ಅವಳು ಸ್ವಯಂವರ ಮಂಟಪಕ್ಕೆ ಬರಲೇ ಇಲ್ಲ. ಅಸುರರಿಗೆ ಮೋಹನಕ್ಕಾಗಿ ಸ್ವಯಂವರ ನಟನೆಯಷ್ಟೇ ಮಾಡಿದ್ದಾಳೆ. ಆ ನಾಟಕದಲ್ಲಿ ಬ್ರಹ್ಮಾದಿಗಳೂ ಕನ್ಯಾರ್ಥಿಗಳ ಪಾತ್ರ ವಹಿಸಿದರು. ಅದನ್ನೇ 'ತಸ್ಯಾಂ ಚಕ್ರುಃ ಸ್ಪೃಹಾಂ ಸರ್ವೇ' ಎನ್ನಲಾಗಿದೆ.

ಅನಾದ್ಯನಂತಕಾಲೇಽಪಿ ವಿಷ್ಣುಮೇವಾಶ್ರಿತಾ ರಮಾ ।
ಅನ್ಯೇಷಾಂ ಜ್ಞಾಪನಾರ್ಥಾಯ ದೋಷಾನುಕ್ತ್ವೇತರಾನ್ ಜಹೌ ॥
ಇತಿ ಚ ॥

ಅನಾದಿ ಅನಂತ ಕಾಲದಲ್ಲಿಯೂ ರಮೆ ನಿಯತ ಭಾರ್ಯೆಯಾಗಿ ವಿಷ್ಣುವನ್ನೇ ಆಶ್ರಯಿಸಿದವಳು. ಆದರೂ ಸಜ್ಜನರಿಗೆ ವಿಷ್ಣು ಒಬ್ಬನೇ ನಿರ್ದೋಷಿ, ಬೇರೆ ಎಲ್ಲರಲ್ಲಿಯೂ ದೋಷಗಳಿರುತ್ತವೆ ಎಂಬುದನ್ನು ತಿಳಿಸುವುದಕ್ಕಾಗಿಯೇ ದೇವತೆಗಳ ದೋಷಗಳನ್ನು ಹೇಳಿ ಅವರನ್ನು ನಿರಾಕರಿಸಿ ಹರಿಯನ್ನು ವರಿಸಿದಂತೆ ತೋರಿಕೊಂಡಳು, ಎಂದೂ ಹೇಳಿದೆ.

❖ ❖ ❖

ಸಮುದ್ರ ಮಥನದಿಂದ ಪ್ರಾದುರ್ಭವಿಸಿದ ಭಗವಾನ್ ಧನ್ವಂತರಿಯ ಕೈಯಿಂದ ಅಮೃತಕಲಶವನ್ನು ಅಸುರರು ಅಪಹರಿಸಿದರು ಎಂದು ಶುಕಮುನಿ ಪರೀಕ್ಷಿತನಿಗೆ ಹೇಳುತ್ತಾರೆ.

ಅಮೃತಸ್ಯ ಪೂರ್ಣಕಲಶಂ ಬಿಭ್ರದ್ ವಲಯಭೂಷಿತಃ ।
ಸ ವೈ ಭಗವತಃ ಸಾಕ್ಷಾದ್‌ವಿಷ್ಣೋರಂಶಾಂಶಸಂಭವಃ ॥ ೩೩ ॥

ಧನ್ವಂತರಿರಿತಿ ಖ್ಯಾತ ಆಯುರ್ವೇದದೃಗಿಜ್ಯಭಾಕ್ ।
ತಮಾಲೋಕ್ಯಾಸುರಾಃ ಸರ್ವೇ ಕಲಶಂ ಚಾಮೃತಾಹೃತಮ್ ॥ ೩೪ ॥

ಲಿಪ್ಸಂತಃ ಸರ್ವವಸ್ತೂನಿ ಕಲಶಂ ತರಸಾಽಹರನ್ ॥ ೩೫ ॥

ಆ ಪರಮಾದ್ಭುತನಾದ ಪುರುಷ ಕೈಗಳಲ್ಲಿ ಕಡಗಗಳನ್ನು ತೊಟ್ಟಿದ್ದಾನೆ. ಅಮೃತದಿಂದ ಪೂರ್ತಿಯಾಗಿ ತುಂಬಿದ್ದ ಕಲಶವನ್ನು ಹೊತ್ತಿದ್ದಾನೆ. ಸಾಕ್ಷಾತ್ ಭಗವಾನ್ ವಿಷ್ಣುವಿನ ಅಂಶನಾದ ಪದ್ಮನಾಭನ ಅಂಶದಿಂದ ಪ್ರಾದುರ್ಭೂತ ನಾಗಿದ್ದಾನೆ.

ಅವನು ಧನ್ವಂತರಿ ಎಂದು ಪ್ರಖ್ಯಾತನಾದ ಆಯುರ್ವೇದ ದ್ರಷ್ಟಾರ. ಯಜ್ಞಗಳಲ್ಲಿ ಹವಿರ್ಭಾಗ ಉಳ್ಳವನು. ಎಲ್ಲ ಅಸುರರೂ ಅವನನ್ನು ನೋಡಿದರು. ಅಮೃತದಿಂದ ತುಂಬಿದ ಕಲಶವನ್ನೂ ನೋಡಿದರು.

ಅಮೃತಪಾನ ಮಾಡಿ ಬಲಿಷ್ಠರಾದರೆ ಸಮುದ್ರದಿಂದ ಉದಿಸಿದ ಕಾಮಧೇನು ಮುಂತಾದ ಎಲ್ಲ ವಸ್ತುಗಳನ್ನೂ ತಾವೇ ವಶಪಡಿಸಿಕೊಳ್ಳಲು ಸಾಧ್ಯವಾಗುವುದೆಂಬ ಅಭಿಪ್ರಾಯದಿಂದ ಎಲ್ಲ ವಸ್ತುಗಳನ್ನು ಪಡೆಯಲು ಬಯಸಿ ಅಸುರರು ಅಮೃತಕಲಶವನ್ನು ಬಲಾತ್ಕಾರದಿಂದ ಕಿತ್ತುಕೊಂಡರು.

ಇಲ್ಲಿ ಪ್ರಶ್ನೆ ಬರುತ್ತದೆ, ಸರ್ವಶಕ್ತನಾದ ಭಗವಾನ್ ಧನ್ವಂತರಿಯ ಕೈಯಿಂದ

ಅಸುರರು ಅಮೃತವನ್ನು ಅಪಹರಿಸಿದರೆಂದರೆ ಇದನ್ನು ಹೇಗೆ ನಂಬಬೇಕು? ಎಂದು. ಆದರೆ ಉತ್ತರ ಸುಲಭ. ಭಗವಂತ ಸರ್ವಶಕ್ತನಾದರೂ ಸುಮ್ಮನಿದ್ದ ಎಂದು. ಏಕೆ ಸುಮ್ಮನಿದ್ದನೆಂದರೆ ಅಮೃತ ಅಸುರರ ಪಾಲಾಗದಂತೆ ನೋಡಿಕೊಂಡರೆ ಮುಂದೆ ಅಸುರರಿಗೂ ತಾನೇ ಅಮೃತವನ್ನು ಉಣಿಸಬೇಕಾಗುತ್ತದೆ. ಅದು ಸರಿಯಲ್ಲ.

ಅಸುರಾಣಾಂ ಸುಧಾಪಾನಂ ಸರ್ಪಾಣಾಮಿವ ದುರ್ನಯಂ
ಮತ್ವಾ ಜಾತಿನೃಶಂಸಾನಾಂ ನ ತಾನ್ ವ್ಯಭಜದಚ್ಯುತಃ । (೮.೮.೬೪)

ಎಂದು ಮುಂದೆ ಹೇಳುವಂತೆ ಹಾವಿಗೆ ಹಾಲೆರೆದಂತೆ ಅನರ್ಥಕಾರಿಯಾದೀತು. ಹಾಗೆಂದು ಅಸುರರನ್ನು ಬಲಾತ್ಕಾರದಿಂದ ಓಡಿಸಿಬಿಟ್ಟರೆ ದೇವದಾನವರು ಜೊತೆ ಸೇರಿ ಮಾಡಿಕೊಂಡ ಒಪ್ಪಂದವನ್ನು ದೇವತೆಗಳೇ ಮುರಿದಂತಾಗುವುದು. 'ಜೊತೆ ಸೇರಿ ಮಥನ ಮಾಡೋಣ ಜೊತಗೇ ಅಮೃತ ಸವಿಯೋಣ' ಎಂದು ಒಪ್ಪಂದವಾಗಿತ್ತು. ಇದಕ್ಕೆ ಶ್ರೀಹರಿ ಉಪಾಯ ಹೂಡಿದ. ಅದರಂತೆ, ದಾನವರು ಅಮೃತವನ್ನು ಕಸಿದುಕೊಳ್ಳುವಾಗ, 'ಕಸಿದುಕೊಳ್ಳಲಿ, ಒಪ್ಪಂದವನ್ನು ಅವರು ಮುರಿಯಲಿ. ಅವರು ಮೋಸಗಾರರೆನಿಸಲಿ. ಆಗ ಮೋಸದಿಂದಲೆ ಅವರಿಗೆ ಅಮೃತ ಸಿಗದಂತೆ ಮಾಡೋಣ. ಮೋಸಗಾರರನ್ನು ಮೋಸದಿಂದಲೇ ಮಣಿಸಬೇಕು' ಎಂದು ಭಗವಂತ ಸುಮ್ಮನಿದ್ದ. ದೇವಾಸುರರು ಮೊದಲೇ ಒಪ್ಪಂದ ಮಾಡಿಕೊಂಡಿದ್ದು ಭಾಗವತದಲ್ಲಿ ಹಿಂದೆ ಬಂದಿದೆ-

ತತೋ ದೇವಾಸುರಾಃ ಕೃತ್ವಾ ಸಂವಿದಂ ಕೃತಸೌಹೃದಾಃ ।
ಉದ್ಯಮಂ ಪರಮಂ ಚಕ್ರುರಮೃತಾರ್ಥೇ ಪರಂತಪ ॥ (೮.೬.೩೨)

ಇಲ್ಲಿ 'ಸಂವಿದಂ' ಒಪ್ಪಂದ ಮಾಡಿಕೊಂಡರೆಂದಿದೆ. ಏನು ಒಪ್ಪಂದವೆನ್ನುವುದು ಸ್ಪಷ್ಟವಿಲ್ಲ. ಆದರೂ ಅದನ್ನು ತಿಳಿಯುವುದು ಕಷ್ಟವೇನಲ್ಲ ಎಂದೇ ಹೇಳಿಲ್ಲ.

ತೇಷಾಂ ಸತ್ಯಾಚ್ಚಾಲನಾರ್ಥಂ ಹರಿರ್ಧನ್ವಂತರಿರ್ವಿಭುಃ ।
ಸಮರ್ಥೋಽಪ್ಯಸುರಾಣಾಂ ತು ಸ್ವಹಸ್ತಾದಮುಚತ್ ಸುಧಾಂ ।
ಇತಿ ಚ ॥

'ಅಸುರರು ತಾವು ಮಾಡಿಕೊಂಡಿದ್ದ ಒಪ್ಪಂದವನ್ನು ತಾವೇ ಮುರಿಯಲಿ ಎಂದೇ ಸರ್ವಶಕ್ತನಾದ ಧ್ವನಂತರಿರೂಪನಾದ ಹರಿ ತಾನು

ಸಮರ್ಥನಾದರೂ ಅಸುರರಿಗೆ ತನ್ನ ಕೈಯಿಂದ ಅಮೃತವನ್ನು ಬಿಟ್ಟುಕೊಟ್ಟ'
ಎಂದೂ ಬ್ರಹ್ಮಪುರಾಣದಲ್ಲಿ ಹೇಳಿದೆ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ಅಷ್ಟಮಸ್ಕಂಧೇ
ಅಷ್ಟಮೋಽಧ್ಯಾಯಃ

❖ ❖ ❖

ಅಧ್ಯಾಯ - ೯

ಅಧ್ಯಾಯ ಸಾರಾಂಶ

ದೇವತೆಗಳು ಅಮೃತವನ್ನು ಉಂಡು ಬಲಿಷ್ಠರಾದುದನ್ನು ಕಂಡು ಅಸಹನೆಯಿಂದ ಅಸುರರು ಅವರ ಮೇಲೆ ಆಕ್ರಮಣ ಗೈದರು. ಆ ಯುದ್ಧದಲ್ಲಿ ವಿರೋಚನನ ಪುತ್ರ ಬಲಿ ಅಸುರರ ಸೇನಾಧಿಪತಿ. ಬೇಕಾದಲ್ಲಿಗೆ ಹಾರಬಲ್ಲ ಮಯನಿರ್ಮಿತವಾದ ವಿಮಾನವನ್ನೇರಿ ನಮುಚಿ ಶಂಬರ ಬಾಣ ವಿಪ್ರಚಿತ್ತಿ ಮುಂತಾದವರೊಂದಿಗೆ ದೇವೇಂದ್ರನನ್ನು ಇದಿರಿಸಿದ. ಬೇರೆ ದೇವತೆಗಳೂ ಅಸುರರೂ ಮುಖಾಮುಖಿಯಾಗಿ ಸೇರಿ ದ್ವಂದ್ವ ಯುದ್ಧವನ್ನು ನಡೆಸಿದರು.

ಬಲಿ ಇಂದ್ರನ ಮೇಲೆ ಏನೇ ಶಸ್ತ್ರವನ್ನೆತ್ತಿದರೂ ಅವು ಅವನ ಕೈಯಲ್ಲಿರುವಾಗಲೇ ಇಂದ್ರ ಕತ್ತರಿಸಿ ಹಾಕಿದ. ಅದರಿಂದ ಬಲಿ ಅಂತರ್ಧಾನ ಹೊಂದಿ ಆಸುರೀ ಮಾಯೆಯನ್ನು ನಿರ್ಮಿಸಿದ. ಮಾಯೆಯಿಂದ ದೇವಸೈನ್ಯದ ಮೇಲೆ ಬಂಡೆಗಲ್ಲುಗಳು ಬೆಟ್ಟಗಳು, ವಿಷಸರ್ಪಗಳು ಸಿಂಹಹುಲಿ ಹಂದಿಗಳು ಬೀಳತೊಡಗಿದುವು. ರಾಕ್ಷಸ ರಾಕ್ಷಸಿಯರು ನಗ್ನರಾಗಿ ಶೂಲಗಳನ್ನು ಹಿಡಿದು ಆಕ್ರಮಣಗೈದರು. ಆಕಾಶದಿಂದ ಬೆಂಕಿಯ ಮಳೆ ಸುರಿಯಿತು. ಚಂಡ ಮಾರುತಗಳಿಂದ ಅಲೆಯೆದ್ದು ಭಯಂಕರವಾಗಿ ಕಾಣುವ ಸಮುದ್ರ ಮೇರೆ ಮೀರಿ ಬರ ತೊಡಗಿತು. ದೇವತೆಗಳು ಶ್ರೀಹರಿಯನ್ನು ಧ್ಯಾನಿಸಿದರು. ಗರುಡಾ ರೂಢನಾಗಿ ಶ್ರೀಹರಿ ಮೈದೋರಿದ. ಅಸುರರ ಮಾಯೆ ಕರಗಿತು.

ಗರುಡವಾಹನನಾದ ಹರಿಯ ಮುಂದೆ ಸಿಂಹವಾಸನನಾಗಿ ಕಾಲನೇಮಿ ಬಂದ. ಶೂಲವನ್ನೆಸೆದ. ಹರಿ ಆ ಶೂಲವನ್ನು ಅನಾಯಾಸವಾಗಿ ಹಿಡಿದು ಅದರಿಂದಲೆ ವಾಹನ ಸಮೇತವಾಗಿ ಅವನನ್ನು ವಧಿಸಿದ. ಮಾಲಿ ಸುಮಾಲಿ ಮಾಲ್ಯವಂತರ ಶಿರಗಳನ್ನು ಚಕ್ರದಿಂದ ಕತ್ತರಿಸಿದ.

❖❖❖

ದಾನವರು ತಮಗೆ ಅಮೃತ ಸಿಗಲಿಲ್ಲವೆಂದು ಅಸಹನೆಯಿಂದ ದೇವತೆಗಳ ಮೇಲೆ ಆಕ್ರಮಣ ಮಾಡಿದರು. ಆಗ ಶ್ರೀಹರಿ ಕಾಲನೇಮಿ ಮುಂತಾದ ಅಸುರರನ್ನು ಸಂಹರಿಸಿದನೆಂದು ಶುಕಮುನಿ ಪರೀಕ್ಷಿತನಿಗೆ ಹೇಳುತ್ತಾರೆ-

ದೃಷ್ಟ್ವಾ ಮೃಧೇ ಗರುಡವಾಹಮಿಭಾರಿವಾಹ
ಆವಿಧ್ಯ ಶೂಲಮಹಿನೋದಥ ಕಾಲನೇಮಿಃ ।
ತಲ್ಲೀಲಯಾ ಗರುಡಮೂರ್ಧ್ನಿ ಪತದ್‌ಗೃಹೀತ್ವಾ
ತೇನಾಹನನ್ನೃಪ ಸವಾಹಮರಿಂ ತ್ರ್ಯಧೀಶಃ ॥ ೫೬ ॥

ಮಾಲೀ ಸುಮಾಲ್ಯತಿಬಲೌ ಯುಧಿ ಪೇತತುರ್ಯ-
ಚ್ಚಕ್ರೇಣ ಕೃತ್ತಶಿರಸಾವಥ ಮಾಲ್ಯವಾಂಸ್ತಮ್ ।
ಆಹತ್ಯ ತಿಗ್ಮಗದಯಾಽಹನದಂಡಜೇಂದ್ರಂ
ತಾವಚ್ಛಿರೋಽಚ್ಛಿನದರೇರ್ನದತೋಽರಿಣಾಽಽದ್ಯಃ ॥ ೫೭ ॥

ರಣರಂಗದಲ್ಲಿ ಗರುಡವಾಹನನಾದ ನಾರಾಯಣನನ್ನು ಕಂಡು ಸಿಂಹವಾಹನನಾದ ಕಾಲನೇಮಿ ಶೂಲವನ್ನು ತಿರುಗಿಸಿ ಎಸೆದ. ಗರುಡನ ತಲೆಯ ಮೇಲೆ ಅದು ಬೀಳುವಷ್ಟರಲ್ಲಿ ಮೂಲೋಕದೊಡೆಯ ಅದನ್ನು ಅನಾಯಾಸವಾಗಿ ಹಿಡಿದು ಅದರಿಂದಲೆ ವಾಹನ ಸಮೇತವಾಗಿ ಶತ್ರುವನ್ನು ಸಂಹರಿಸಿದ.

ಬಳಿಕ ಅತಿ ಬಲಿಷ್ಠರಾದ ಮಾಲಿ ಸುಮಾಲಿ ಇಬ್ಬರೂ ವಿಷ್ಣುಚಕ್ರದಿಂದ ಶಿರಶ್ಛೇದ ಹೊಂದಿ ರಣರಂಗದಲ್ಲಿ ಬಿದ್ದರು. ಮಾಲ್ಯವಂತ ಭಗವಂತನನ್ನು ಇದಿರಿಸಿ ನಿಂತು ತೀಕ್ಷ್ಣವಾದ ಗದೆಯಿಂದ ಗರುಡನನ್ನು ಹೊಡೆಯುವಷ್ಟರಲ್ಲಿ ಆದಿಪುರುಷನಾದ ಶ್ರೀಹರಿ ಸಿಂಹನಾದ ಮಾಡುತ್ತಿದ್ದ ಶತ್ರುವಿನ ಶಿರವನ್ನು ಚಕ್ರದಿಂದ ತರಿದ.

ಇಲ್ಲಿ ಪ್ರಶ್ನೆ ಬರುತ್ತದೆ. ಈ ದೇವಾಸುರ ಸಂಗ್ರಾಮಕ್ಕಿಂತ ಬಹಳ ಹಿಂದೊಮ್ಮೆಯೂ ಇದೇ ರೀತಿ ಸಂಗ್ರಾಮ ನಡೆದಿತ್ತು. ಮಹಾಭಾರತ ತಾತ್ಪರ್ಯ ನಿರ್ಣಯ (೧೧-೧೮೨)ದಲ್ಲಿ ಇದರ ವರ್ಣನೆ ಬರುತ್ತದೆ. ಅದರಲ್ಲಿ ದೇವೇಂದ್ರ ಆದಿ ಶಂಬರಾಸುರನನ್ನು ವಜ್ರಾಯುಧದಿಂದ ವಧಿಸಿದ್ದ. ವಿಪ್ರಚಿತ್ತಿಯನ್ನು ಮುಖ್ಯಪ್ರಾಣನೂ ಕಾಲನೇಮಿಯನ್ನು ಶ್ರೀಹರಿಯೂ ಸಂಹರಿಸಿದ್ದರು. ಇದೀಗ ದೇವೇಂದ್ರ ಬಲಿ ನಮುಚಿ ಮುಂತಾದವರನ್ನು ವಧಿಸುತ್ತಿದ್ದಾನೆ. ಶ್ರೀಹರಿ

ಕಾಲನೇಮಿಯನ್ನು ವಧಿಸುತ್ತಾನೆ. ಇದು ಹೇಗೆ ಸಾಧ್ಯ. ಕಾಲನೇಮಿ ಹಿಂದೆಯೆ ಹತನಾಗಿದ್ದಾನೆ ತಾನೆ? ಎಂಬ ಪ್ರಶ್ನೆ ಬರುತ್ತದೆ. ಇದಕ್ಕೆ ಉತ್ತರ ಶುಕ್ರಾಚಾರ್ಯರು ಮೃತಸಂಜೀವನೀ ಮಂತ್ರದಿಂದ ಸತ್ತ ಅಸುರರನ್ನು ಬದುಕಿಸುತ್ತಾರೆ. ಹೀಗೆ ಬದುಕಿಬಂದ ಕಾಲನೇಮಿ ಈಗ ಯುದ್ಧಕ್ಕೆ ನಿಂತಿದ್ದಾನೆ. ಅವನನ್ನು ಇದೀಗ ಎರಡನೆ ಬಾರಿ ಹರಿ ವಧಿಸುತ್ತಿದ್ದಾನೆ. ಈ ಯುದ್ಧ ನಿಂತ ಬಳಿಕ ಶುಕ್ರಾಚಾರ್ಯರು ತಿರುಗಿ ಹಿಂದಿನಂತೆಯೆ ಬಲಿ ಮುಂತಾದವರನ್ನು ಬದುಕಿಸಿದರೆಂದು ಇಲ್ಲಿಯೇ ಮುಂದೆ ಭಾಗವತ ಹೇಳುತ್ತದೆ. ಅದರಿಂದ ಯಾವ ಪ್ರಶ್ನೆಗೂ ಅವಕಾಶವಿಲ್ಲ.

ಕಾಲನೇಮ್ಯಾದಯಃ ಸರ್ವೇ ಹರಿಣಾ ನಿಹತಾ ಅಪಿ ।
ಶುಕ್ರೇಣೋಜ್ಜೀವಿತಾಃ ಸಂತಃ ಪುನಸ್ತೇನೈವ ಪಾತಿತಾಃ ॥ ಇತಿ ಚ ॥

ಕಾಲನೇಮಿ ಮಾಲಿ ಸುಮಾಲಿ ಮುಂತಾದವರೆಲ್ಲರೂ ಹರಿಯಿಂದ ಹಿಂದೆಯೇ ಹತರಾಗಿದ್ದರೂ ಅವರನ್ನು ಶುಕ್ರಾಚಾರ್ಯರು ಬದುಕಿಸಿದ್ದರು. ಪುನಃ ಅವರನ್ನು ಈಗ ಹರಿ ಸಂಹರಿಸಿದ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ಅಷ್ಟಮಸ್ಕಂಧೇ
ನವಮೋಽಧ್ಯಾಯಃ

❖ ❖ ❖

ಅಧ್ಯಾಯ - ೧೦

ಅಧ್ಯಾಯ ಸಾರಾಂಶ

ದೇವಾಸುರರ ದ್ವಂದ್ವಯುದ್ಧಗಳಲ್ಲಿ ದೇವೇಂದ್ರ ಬಲಿಯನ್ನು ಇದಿರಿಸುತ್ತ 'ನೀನು ಮಾಯೆಯಿಂದ ಶತ್ರುವನ್ನು ಗೆಲ್ಲಲು ಬಯಸುವ ಕಪಟಿ' ಎಂದು ನಿಂದಿಸಿದ. ಮಾಯೆಯಿಂದ ಮೇಲೇರಲು ಬಯಸುವವರನ್ನು ನಾನು ಇನ್ನೂ ಕೆಳಗೆ ತಳ್ಳುತ್ತೇನೆ ಎಂದ. 'ಎಲ್ಲವೂ ಕಾಲನಾಮಕ ಪರಮಾತ್ಮನ ಅಧೀನ. ಅವನ ಸಂಕಲ್ಪದಂತೆ ಜಯಾಪಜಯಗಳು ಬರುತ್ತವೆ. ಅದಕ್ಕೆ ನಾನು ಹಿಗ್ಗುವುದೂ ಇಲ್ಲ ಕುಗ್ಗುವುದೂ ಇಲ್ಲ' ಎಂದು ಪ್ರತಿಯಾಗಿ ನುಡಿದ ಬಲಿಗೆ ಇಂದ್ರ ವಜ್ರಾಯುಧವನ್ನೆಸೆದ. ಬಲಿ ತನ್ನ ವಿಮಾನದೊಂದಿಗೆ ರೆಕ್ಕೆ ಕಡಿದ ಬೆಟ್ಟದಂತೆ ನೆಲದ ಮೇಲೆ ಬಿದ್ದ.

ಬಲಿ ಬಿದ್ದುದನ್ನು ಕಂಡು ಅವನ ಗೆಳೆಯ ಜಂಭಾಸುರ ಬಂದು ಗದೆಯನ್ನೆತ್ತಿ ಹೊಡೆದ. ಗದೆಯ ಏಟಿಗೆ ಐರಾವತ ಮೂರ್ಛೆ ಹೊಂದಿತು. ಮಾತಲಿ ಸಾವಿರ ಕುದುರೆಗಳನ್ನು ಹೂಡಿದ ರಥವನ್ನು ತಂದ. ಇಂದ್ರ ಅದನ್ನೇರಿ ವಜ್ರಾಯುಧದಿಂದ ಜಂಭಾಸುರನ ಶಿರಚ್ಛೇದ ಮಾಡಿದ.

ಬಳಿಕ ನಮುಚಿ ಬಲ ಪಾಕ ಎಂಬ ಮೂವರು ಜಂಭನ ಬಂಧುಗಳು ಬಂದರು. ಇಂದ್ರ ಬಲ ಮತ್ತು ಪಾಕರ ಶಿರಗಳನ್ನು ವಜ್ರಾಯುಧದಿಂದ ತರಿದ. ಆದರೆ ನಮುಚಿಯ ಮೇಲೆ ವಜ್ರಾಯುಧಪ್ರಯೋಗ ಏನೂ ಫಲಿಸಲಿಲ್ಲ. ಕುತ್ತಿಗೆಯ ಚರ್ಮದ ಮೇಲೆ ಒಂದಿಷ್ಟು ಗಾಯವೂ ಆಗಲಿಲ್ಲ. ಏಕೆ ಹೀಗೆ ಎಂದು ಇಂದ್ರ ಚಿಂತಿಸುತ್ತಿದ್ದಾಗ ವಾಯು ಅಶರೀರವಾಣಿಯಿಂದ ನುಡಿದ. ನಾನು ಈತನಿಗೆ ವರ ಕೊಟ್ಟಿದ್ದೇನೆ, ಹಸಿಯಾದ ಅಥವಾ ಒಣಗಿದ ಯಾವುದೇ ವಸ್ತುವಿನಿಂದ ನಿನಗೆ ಮರಣ ಬಾರದಿರಲಿ ಎಂದು. ಇಂದ್ರ ಆಲೋಚನೆ ಮಾಡಿ ಒಣಗಿದ್ದೂ ಅಲ್ಲದ ಹಸಿಯೂ ಅಲ್ಲದ ಸಮುದ್ರದ ನೊರೆಯಿಂದ ನಮುಚಿಯ ಶಿರವನ್ನು ತರಿದ.

ದಾನವರು ನಾಶವಾಗುತ್ತಿರುವುದನ್ನು ಕಂಡು ಬ್ರಹ್ಮದೇವರು ನಾರದರನ್ನು ಕಳಿಸಿದರು. ನಾರದರೆಂದರು, ದೇವತೆಗಳೆ ನೀವು

ಅಮೃತ ಉಂಡಿದ್ದಾಯಿತು. ಐಶ್ವರ್ಯ ಸಮೃದ್ಧರೂ ಆದಿರಿ. ಇನ್ನು ವ್ಯರ್ಥವಾಗಿ ದಾನವರೊಡನೆ ಕಲಹ ಮಾಡುವುದನ್ನು ನಿಲ್ಲಿಸಿರಿ.' ಯುದ್ಧ ನಿಂತಿತು. ಶುಕ್ರಾಚಾರ್ಯರು ಸ್ಪರ್ಶಮಾತ್ರದಿಂದ ಬಲಿಯನ್ನು ಎಬ್ಬಿಸಿದರು. ಜಯಾಪಜಯಗಳು ಪರಮಾತ್ಮನ ಅಧೀನವೆಂದು ಆತ ತಿಳಿದವನಾದ್ದರಿಂದ ಖಿನ್ನನಾಗಲಿಲ್ಲ.

❖ ❖ ❖

ಅಧ್ಯಾಯ - ೧೧

ಅಧ್ಯಾಯ ಸಾರಾಂಶ

ಮೋಹಿನೀರೂಪದಿಂದ ಶ್ರೀಹರಿ ದಾನವರನ್ನು ಮರುಳು ಮಾಡಿ ದೇವತೆಗಳಿಗ ಅಮೃತ ಕುಡಿಸಿದನೆಂಬುದನ್ನು ಕೇಳಿ ಶಿವ ಆ ರೂಪವನ್ನು ನೋಡಲು ಬಯಸಿದ. ಉಮೆಯೊಂದಿಗೆ ಭೂತಗಣಗಳಿಂದಲೂ ಕೂಡಿಕೊಂಡು ಶ್ರೀಹರಿಯ ಬಳಿಗೆ ಬಂದು 'ಶ್ರೀಹರಿ, ನೀನೇ ಪ್ರಪಂಚದ ಉತ್ಪತ್ತಿ ಸ್ಥಿತಿಲಯಗಳನ್ನು ಮಾಡುವವನು, ಕಾರ್ಯಕಾರಣಗಳಲ್ಲಿ ಅಂತರ್ಯಾಮಿಯಾಗಿದ್ದು ಅದ್ವಿತೀಯನಾಗಿರುವ ನಿನ್ನ ಲೀಲೆಯನ್ನು ನಾನು ಬ್ರಹ್ಮ ಮರೀಚಿ ಮುಂತಾದ ಮುನಿಗಳು ಯಾರೂ ಅರಿಯಲಾರೆವು. ನಿನ್ನ ಬಂಧಕಶಕ್ತಿ ಎಲ್ಲರಿಗೂ ಮೋಹ ಉಂಟುಮಾಡುತ್ತದೆ. ನಿನ್ನ ಬೇರೆ ಅವತಾರಗಳನ್ನು ನಾನು ಕಂಡಿದ್ದೇನೆ. ನೀನು ಧರಿಸಿದ ಸ್ತ್ರೀರೂಪವನ್ನು ಕಾಣಲು ಬಯಸುತ್ತೇನೆ' ಎಂದ.'ಆ ರೂಪ ವಿರಕ್ತರಿಗೂ ಕಾಮವನ್ನು ಕೆರಳಿಸುವಂಥದ್ದು' ಎಂದು ಹೇಳಿ ಶ್ರೀಹರಿ ಅದೃಶ್ಯನಾದ.

ಸುತ್ತಲೂ ಕಣ್ಣು ಹೊರಳಿಸುತ್ತ ಶಿವ ಉಮೆಯೊಂದಿಗೆ ಕುಳಿತ. ಉಪವನದಲ್ಲಿ ಸುಂದರಿಯೋರ್ವಳು ಚೆಂಡಾಟವಾಡು ತ್ತಿದ್ದುದನ್ನು ಕಂಡ. ಚೆಂಡು ಕೆಳಗೆ ಮೇಲೆ ಚಲಿಸುತ್ತಿದ್ದಂತೆ ಅವಳು ಬಗ್ಗುವುದು ಮೇಲೇಳುವುದನ್ನು ಆಗ ಅವಳ ಸ್ತನಗಳು ಕುಲುಕಾಡುವುದನ್ನು ಉಟ್ಟ ಸೀರೆ ಜಾರುವುದನ್ನು ಕಟ್ಟಿದ ಕೂದಲು ಬಿಚ್ಚಿಹೋಗುವುದನ್ನು ಶಿವ ನೆಟ್ಟ ದೃಷ್ಟಿಯಿಂದ ಕಂಡ. ಅವಳೂ ಶಿವನೆಡೆಗೆ ಓರೆನೋಟವನ್ನು ಬೀರಿದಳು. ಆಗ ಶಿವ ಪೂರ್ತಿ ಮೈಮರೆತ. ಬಳಿಯಲ್ಲಿ ಉಮೆ ಕುಳಿತಿದ್ದುದನ್ನೂ ಸುತ್ತಲೂ ಭೂತಗಣಗಳಿದ್ದುದನ್ನೂ ಮರೆತುಬಿಟ್ಟ.

ಅಷ್ಟರಲ್ಲಿ ಚೆಂಡು ದೂರಕ್ಕೆ ಹಾರಿತು. ಅವಳೂ ಧಾವಿಸಿದಳು. ಅವಳುಟ್ಟಿದ್ದ ಸೀರೆಯನ್ನು ಕಟಿ ಸೂತ್ರದೊಂದಿಗೆ ಗಾಳಿ ಹಾರಿಸಿಬಿಟ್ಟಿತು. ಅವಳು ನಾಚಿ ಓರೆಗಣ್ಣಿಂದ ಶಿವನನ್ನು ನೋಡಿದಳು. ಶಿವ ವಿಹ್ವಲನಾಗಿ ನಾಚಿಕೆ ಬಿಟ್ಟು ಉಮೆ

ನೋಡುತ್ತಿದ್ದಂತೆಯೇ ಅವಳ ಹಿಂದೆ ಹಿಂದೆ ಧಾವಿಸಿದ. ಅವನ ಇಂದ್ರಿಯಗಳು ಉದ್ರಿಕ್ತವಾದುವು. ಅವಳನ್ನು ವೇಗವಾಗಿ ಬೆನ್ನಟ್ಟಿ ಹಿಡಿದು ತಬ್ಬಿಕೊಂಡ. ಅವಳು ಆಚೆ ಈಚೆ ಕೊಸರಾಡಿ ಅವನ ತೋಳತೆಕ್ಕೆಯಿಂದ ಬಿಡಿಸಿಕೊಂಡು ಓಡಿದಳು. ಅವನಿಗೆ ವೀರ್ಯಸ್ಖಲನವಾಯಿತು.

ಆಗ ತಾನು ಶ್ರೀಹರಿಯ ಮೋಹಕಶಕ್ತಿಯಿಂದ ಮರುಳಾದೆನೆಂದು ಅರಿತು ಎಚ್ಚೆತ್ತು ಕೊಂಡ. ಅಸ್ವತಂತ್ರನಾದ ತಾನು ಹೀಗೆ ಮಾಡಿದ್ದು ಸಹಜವೆ ಎಂದುಕೊಂಡ. ಲಜ್ಜಿತನಾಗ ಲಿಲ್ಲ. ಶ್ರೀಹರಿ ಪುರುಷರೂಪ ಧರಿಸಿ ನಿಂತು ನುಡಿದ. 'ಸ್ವಲ್ಪಕಾಲ ನನ್ನ ಬಂಧಕಶಕ್ತಿಗೊಳಗಾಗಿ ಮೋಹಿತನಾದರೂ ಎಚ್ಚೆತ್ತು ಕೊಂಡಿರುವೆ. ಏಕೆಂದರೆ ನಾನು ಕಾಲನಾಮಕನಾದ ಒಂದು ಅಂಶದಿಂದ ನಿನ್ನೊಳಗಿದ್ದೇನೆ. ತ್ರಿಗುಣಾತ್ಮಕವಾದ ಪ್ರಕೃತಿ ನನ್ನ ಅನುಗ್ರಹದಿಂದ ನಿನ್ನನ್ನು ಬಂಧಿಸುವುದಿಲ್ಲ' ಎಂದ.

ಶಿವ ಶ್ರೀಹರಿಗೆ ಪ್ರದಕ್ಷಿಣೆ ಬಂದು ಕೈಲಾಸಕ್ಕೆ ಹಿಂದಿರುಗಿದ. ಪಾರ್ವತಿಯ ಮುಂದೆ ಪರಮಾತ್ಮನ ಆ ಮೋಹಿನೀರೂಪವನ್ನು ಹೊಗಳಿದ. 'ಪರಮಾತ್ಮನ ವಿಭೂತಿರೂಪಗಳಲ್ಲಿ ಶ್ರೇಷ್ಠನಾದ ನಾನೂ ಕೂಡ ಕಂಡು ಪರವಶನಾದೆನೆಂದರೆ ಉಳಿದವರ ಪಾಡೇನು? ಅಂಥ ಪರಮಾತ್ಮನನ್ನೇ ನಾನು ಸದಾ ಧ್ಯಾನಿಸುತ್ತೇನೆ' ಎಂದ.

❖ ❖ ❖

ಅಧ್ಯಾಯ - ೧೨

ಅಧ್ಯಾಯ ಸಾರಾಂಶ

ಸೂರ್ಯಪುತ್ರನಾದ ವೈವಸ್ವತ ಮನು ಈಗ ನಡೆಯುತ್ತಿರುವ ಏಳನೇ ಮನ್ವಂತರಕ್ಕೆ ಪ್ರವರ್ತಕ. ಇಕ್ಷ್ವಾಕು ನಭ ಧೃಷ್ಟ ಶರ್ಯಾತಿ ನರಿಷ್ಯಂತ ನಾಭಾಗ ದಿಷ್ಟ ಕರೂಷ ವೃಷಧ್ರ ವಸುಮಾನ್ ಎಂದು ಹತ್ತುಮಂದಿ ಈತನ ಪುತ್ರರು. ವಸು ರುದ್ರ ಆದಿತ್ಯರು ವಿಶ್ವೇದೇವ ಮರುತ್ ಅಶ್ವಿನಿ ಋಭುಗಳು ದೇವತೆಗಳು. ಪುರಂದರ ಇಂದ್ರ. ಕಶ್ಯಪ ಅತ್ರಿ ವಸಿಷ್ಠ ವಿಶ್ವಾಮಿತ್ರ ಗೌತಮ ಜಮದಗ್ನಿ ಭರದ್ವಾಜ ಇವರು ಸಪ್ತರ್ಷಿಗಳು. ಕಶ್ಯಪನಿಂದ ಅದಿತಿಯಲ್ಲಿ ಆದಿತ್ಯರಲ್ಲಿ ಕೊನೆಯವನಾಗಿ ವಾಮನರೂಪದಿಂದ ಶ್ರೀಹರಿ ಅವತರಿಸಿದ.

ವಿವಸ್ವಾನ್ ಎಂಬ ಸೂರ್ಯನಿಗೆ ಸಂಜ್ಞಾ ಛಾಯಾ ವಡವಾ ಎಂದು ಮೂವರು ಪತ್ನಿಯರು. ಯಮ ಯಮಿ ಮತ್ತು ಶ್ರಾದ್ಧ ದೇವನೆಂಬ ವೈವಸ್ವತಮನು ಮೂವರು ಸಂಜ್ಞೆಯ ಮಕ್ಕಳು. ಸಾವರ್ಣಿ, ಸಂವರಣಮುನಿಪತ್ನಿಯಾದ ತಪತಿ ಎಂಬ ಕನ್ಯೆ ಮತ್ತು ಶನೈಶ್ಚರ ಇವರು ಮೂವರು ಛಾಯೆಯ ಮಕ್ಕಳು. ಅಶ್ವಿಗಳು ವಡವಾಪುತ್ರರು.

ಎಂಟನೇ ಮನ್ವಂತರಕ್ಕೆ ಸಾವರ್ಣಿ ಮನು, ವಿರೋಚನ ಪುತ್ರನಾದ ಬಲಿ ಇಂದ್ರ. ಶ್ರೀಹರಿ ವಾಮನನಾಗಿ ಈತನಲ್ಲಿ ಮೂರಡಿ ಭೂಮಿ ದಾನವನ್ನು ಬೇಡಿ ಮೂಲೋಕವನ್ನು ಅಳೆದು ವಶಪಡಿಸಿಕೊಂಡು ಬಂಧಿಸಿದ. ಬಳಿಕ ಪ್ರಸನ್ನನಾಗಿ ಅವನನ್ನು ಸುತಲಲೋಕದಲ್ಲಿ ಸುಖವಾಗಿ ಇರಿಸಿದ. ಆ ಲೋಕ ಸ್ವರ್ಗಕ್ಕಿಂತಲೂ ಹೆಚ್ಚು. ಅಲ್ಲಿ ಇಂದ್ರನಂತೆ ಇದ್ದಾನೆ, ಬಲಿ. ಈ ಮನ್ವಂತರದ ಸಪ್ತರ್ಷಿಗಳು ಗಾಲವ ದೀಪ್ತಿಮಂತ ಪರಶುರಾಮ ಅಶ್ವತ್ಥಾಮ ಕೃಪ ಋಷ್ಯಶೃಂಗ ಮತ್ತು ಬಾದರಾಯಣರು. ದೇವಗುಹ್ಯ ಮುನಿಯ ಪತ್ನಿಯಾದ ಸರಸ್ವತಿಯಲ್ಲಿ ಪ್ರಭುನಾಮಕನಾಗಿ ಶ್ರೀಹರಿ ಅವತರಿಸಿ ಸಾರ್ವಭೌಮರಿಗೂ ಸಾರ್ವಭೌಮ

ನಾಗಿ ಪುರಂದರನಿಂದ ಇಂದ್ರಸಿಂಹಾಸನವನ್ನು ಅಪಹರಿಸಿ ಬಲಿಗೆ ನೀಡುತ್ತಾನೆ.

ಒಂಬತ್ತನೇ ಮನು ವರುಣಪುತ್ರ ದಕ್ಷಸಾವರ್ಣಿ. ಆ ಮನ್ವಂತರದಲ್ಲಿ ಅದ್ಭುತನು ಇಂದ್ರ. ಆಯುಷ್ಮಂತನಿಂದ ಅಂಬುಧಾರೆಯಲ್ಲಿ ಋಷಭನಾಗಿ ಶ್ರೀಹರಿ ಅವತರಿಸುತ್ತಾನೆ. ಅವನ ರಕ್ಷಣೆಯಲ್ಲಿದ್ದು ಅದ್ಭುತ ಮೂಲೋಕವನ್ನು ಆಳುತ್ತಾನೆ.

ಹತ್ತನೇ ಮನು ಉಪಶ್ಲೋಕನ ಪುತ್ರ ಬ್ರಹ್ಮಸಾವರ್ಣಿ. ವಿಶ್ವಸೃಜರ ಪತ್ನಿ ವಿಷೂಚಿಯಲ್ಲಿ ಶ್ರೀಮೂರ್ತಿ ಎಂಬ ಅವತಾರ ಮಾಡಿ ಶ್ರೀಹರಿ ಪ್ರಸಿದ್ಧನಾಗುತ್ತಾನೆ. ಶಂಭು ಇಂದ್ರ.

ಹನ್ನೊಂದನೆ ಮನು ಧರ್ಮಸಾವರ್ಣಿ. ವೈಧೃತನು ಇಂದ್ರ. ಆರ್ಯಕನಿಂದ ವೈಧೃತಾದೇವಿಯಲ್ಲಿ ಧರ್ಮಸೇತು ನಾಮಕನಾಗಿ ಶ್ರೀಹರಿ ಅವತರಿಸುತ್ತಾನೆ.

ಹನ್ನೆರಡನೇ ಮನು ರುದ್ರಸಾವರ್ಣಿ. ಋತಧಾಮ ಇಂದ್ರ. ಸತ್ಯಸಹನಿಂದ ಸೂನೃತಾದೇವಿಯಲ್ಲಿ ಸ್ವಧಾಮನಾಮದಿಂದ ಹರಿ ಅವತರಿಸುತ್ತಾನೆ.

ಹದಿಮೂರನೆ ಮನು ದೇವಸಾವರ್ಣಿ. ದಿವಸ್ಪತಿ ಇಂದ್ರ. ದೇವಹೋತ್ರನಿಂದ ಬೃಹತೀದೇವಿಯಲ್ಲಿ ಯೋಗೇಶ್ವರ ರೂಪದಿಂದ ಹರಿ ಅವತರಿಸುತ್ತಾನೆ.

ಹದಿನಾಲ್ಕನೆ ಮನು ಇಂದ್ರಸಾವರ್ಣಿ. ಶುಚಿ ಇಂದ್ರ. ಸತ್ರಾಯಣನಿಂದ ವಿತಾನಾದೇವಿಯಲ್ಲಿ ಬೃಹದ್ಭಾನುನಾಮದಿಂದ ಹರಿ ಅವತರಿಸುತ್ತಾನೆ.

ಈ ಹದಿನಾಲ್ಕು ಮನ್ವಂತರಗಳಿಂದಾಗುವ ಬ್ರಹ್ಮನ ಒಂದು ಹಗಲಿನಲ್ಲಿ ಒಂದು ಸಾವಿರ ಬಾರಿ ಚತುರ್ಯುಗಗಳು ಉರುಳುತ್ತವೆ.

❖❖❖

ಅಧ್ಯಾಯ - ೧೩

ಅಧ್ಯಾಯ ಸಾರಾಂಶ

ಯಜ್ಞ ವಿಭು ಸತ್ಯಸೇನ ಮುಂತಾದ ಹರಿಯ ಅವತಾರಗಳ ಆಜ್ಞೆಗೆ ತಲೆಬಾಗಿಯೇ ಆಯಾ ಮನ್ವಂತರಗಳ ಮನು ಮುಂತಾದವರು ಜಗತ್ತನ್ನು ರಕ್ಷಿಸುತ್ತಾರೆ. ಸಪ್ತರ್ಷಿಗಳು ಪ್ರಳಯಕಾಲದಲ್ಲಿ ಮರೆಯಾಗುವ ವೇದಗಳನ್ನು ತಪಸ್ಸಿನಿಂದ ಕಂಡುಕೊಂಡು ಜನರಿಗೆ ಉಪದೇಶಿಸುತ್ತಾರೆ. ಅದರಿಂದ ತಪಸ್ಸು ಶೌಚ ದಯೆ ಸತ್ಯ ಎಂಬ ನಾಲ್ಕು ಪಾದಉಳ್ಳ ಧರ್ಮವನ್ನು ರಾಜರಾದ ಮನುಗಳು ಪ್ರಸಾರ ಮಾಡುತ್ತಾರೆ. ಅವರ ಬಳಿಕ ಅವರ ಸಂತತಿಯವರು ಆ ಕೆಲಸವನ್ನು ಮುಂದುವರಿಸುತ್ತಾರೆ. ಆಯಾ ಮನ್ವಂತರದ ದೇವತೆಗಳು ಆ ಮನ್ವಂತರದಲ್ಲಿ ಯಜ್ಞಗಳಲ್ಲಿ ಹವಿರ್ಭಾಗವನ್ನು ಪಡೆಯುತ್ತಾರೆ.

ಪ್ರತಿಯುಗದಲ್ಲಿಯೂ ಶ್ರೀಹರಿ ಕಪಿಲಾದಿ ಸಿದ್ಧರೂಪದಿಂದ ಜ್ಞಾನಯೋಗವನ್ನೂ ವ್ಯಾಸಾದಿ ಋಷಿರೂಪದಿಂದ ಕರ್ಮಯೋಗ ವನ್ನೂ ದತ್ತಾತ್ರೇಯಾದಿ ಯೋಗಿರೂಪದಿಂದ ಯೋಗಶಾಸ್ತ್ರವನ್ನೂ ಉಪದೇಶಿಸುತ್ತಾನೆ, ದಕ್ಷ ಮುಂತಾದ ಪ್ರಜಾಪತಿಗಳಲ್ಲಿದ್ದು ಪ್ರಜೋತ್ಪತ್ತಿಯನ್ನು ಮಾಡುತ್ತಾನೆ. ಇಂದ್ರರಲ್ಲಿದ್ದು ಅಸುರರನ್ನು ಸಂಹರಿಸುತ್ತಾನೆ. ಕಾಲರೂಪದಿಂದ ದುಷ್ಟವಿನಾಶಕ್ಕಾಗಿ ತಮೋ ಗುಣವನ್ನು ಹೆಚ್ಚಿಸುತ್ತಾನೆ.

❖❖❖

ಅಧ್ಯಾಯ - ೧೪

ಅಧ್ಯಾಯ ಸಾರಾಂಶ

ಪರೀಕ್ಷಿದ್ರಾಜ ಕೇಳುತ್ತಾನೆ- 'ಸರ್ವೇಶ್ವರನಾದ ಶ್ರೀಹರಿ ದರಿದ್ರನಂತೆ ಬಲಿಯಲ್ಲಿ ಭೂಮಿಯನ್ನೇಕೆ ಬೇಡಿದ? ಬೇಡಿದ್ದನ್ನು ಪಡೆದ ಮೇಲೂ ಅವನನ್ನೇಕೆ ಬಂಧಿಸಿದ?

ಶುಕಮುನಿ ಹೇಳುತ್ತಾರೆ- ದೇವಾಸುರ ಸಂಗ್ರಾಮದಲ್ಲಿ ಬಲಿ ಇಂದ್ರನಿಗೆ ಸೋತು ತನ್ನೆಲ್ಲ ಸಂಪತ್ತನ್ನೂ ಪ್ರಾಣವನ್ನೂ ಕಳೆದು ಕೊಂಡ. ಗುರು ಶುಕ್ರಾಚಾರ್ಯರು ಅವನನ್ನು ಬದುಕಿಸಿದರು. ಅವನು ಅವರ ಶಿಷ್ಯನಾಗಿ ಭೃಗುವಂಶದವರೆಲ್ಲರನ್ನೂ ಎಲ್ಲ ಬಗೆಯಿಂದ ಸೇವಿಸಿದ. ಭೃಗುಕುಲದ ಮುನಿಗಳೆಲ್ಲರೂ ಸುಪ್ರೀತ ರಾಗಿ ಅವನಿಂದ ವಿಶ್ವಜಿದ್‌ಯಾಗ ಮಾಡಿಸಿದರು. ಅವರ ಅನುಗ್ರಹ ಬಲದಿಂದ ಆತ ಇಂದ್ರನ ಅಮರಾವತಿಗೆ ಮುತ್ತಿಗೆ ಹಾಕಿದ.

ದೇವಗುರು ಬೃಹಸ್ಪತ್ಯಾಚಾರ್ಯರು ಇಂದ್ರನಿಗೆ ತತ್ಕಾಲದಲ್ಲಿ ಸ್ವರ್ಗವನ್ನು ತೊರೆದು ಅದೃಶ್ಯರಾಗಲು ಸಲಹೆ ನೀಡಿದರು. ಬಲಿಗೆ ಶುಕ್ರಾಚಾರ್ಯರ ಅನುಗ್ರಹ ಬಲವಿದೆ. ಮುಂದೆ ಆತ ಅವರನ್ನೇ ಅವಮಾನಿಸಿ ಸರ್ವನಾಶ ತಂದು ಕೊಳ್ಳುತ್ತಾನೆ. ಕಾದಿರಿ ಎಂದರು. ಬಲಿ ಅಮರಾವತಿಯನ್ನು ವಶಪಡಿಸಿಕೊಂಡು ಮೂಲೋಕದ ದೊರೆಯಾದ. ತಮಗೆ ತುಂಬ ವಿಧೇಯನಾಗಿದ್ದ ಆತನಿಂದ ಗುರುಗಳು ನೂರು ಅಶ್ವಮೇಧ ಯಾಗಗಳನ್ನು ಮಾಡಿಸಲು ತೊಡಗಿದರು.

❖❖❖

ಅಧ್ಯಾಯ - ೧೫

ಅಧ್ಯಾಯ ಸಾರಾಂಶ

ಮಕ್ಕಳು ಸ್ವರ್ಗದಿಂದ ಕಣ್ಮರೆಯಾಗಿ ಹೋದಾಗ ತಾಯಿ ಅದಿತಿ ದುಃಖಿಸಿದಳು. ಕಶ್ಯಪರಲ್ಲಿ ತನ್ನ ದುಃಖವನ್ನು ಹೇಳಿಕೊಂಡಳು. ಅವರು ಆಕೆಗೆ ಪಯೋವ್ರತದಿಂದ ಶ್ರೀಹರಿಯನ್ನು ಆರಾಧಿಸಲು ಆಜ್ಞೆ ಮಾಡಿದರು.

ಅದರ ವಿಧಿ ವಿಧಾನಗಳು ಹೀಗಿವೆ. ಮಾಘಮಾಸದ ಚತುರ್ದಶೀಯುಕ್ತ ಅಮಾವಾಸ್ಯೆಯಂದು ವ್ರತಸ್ನಾನ ಮಾಡಿ ವಿಗ್ರಹದಲ್ಲಿ ಅಥವಾ ನೆಲ ಸೂರ್ಯ ಜಲ ಅಗ್ನಿ ಅಥವಾ ಗುರುವಿನಲ್ಲಿ ಶ್ರೀಹರಿಯನ್ನು ಆವಾಹಿಸಿ ಅರ್ಚಿಸಬೇಕು. ಎರಡು ತಲೆ ಮೂರುಕಾಲು ನಾಲ್ಕು ಕೊಂಬು ಏಳು ಕೈಉಳ್ಳವನು ಮೂರು ವಿದ್ಯೆಗಳಲ್ಲಿ ಪ್ರತಿಪಾದ್ಯ ಫಲದಾತ ಇಂಥ ಯಜ್ಞಮೂರ್ತಿ, ಬ್ರಹ್ಮಾಂತರ್ಯಾಮಿ ಮುಖ್ಯಪ್ರಾಣಾಂತರ್ಯಾಮಿ ಜಗತ್‌ಸ್ವಾಮಿ, ನೀಲಶರೀರಿ ಪೀತಾಂಬರಧಾರಿ ಲಕ್ಷ್ಮೀಧರ ಸರ್ವಾಭೀಷ್ಟ ದಾಯಕ ಎಂದು ಮುಂತಾಗಿ ಶ್ರೀಹರಿಯನ್ನು ಚಿಂತಿಸಿ ನಮಿಸಿ ಆವಾಹನ ಮಾಡಬೇಕು. ಪಾದ್ಯಾದಿ ಉಪಚಾರಗಳಿಂದ ಅರ್ಚಿಸಬೇಕು. ಪಾಯಸ ನೈವೇದ್ಯ ಅರ್ಪಿಸಬೇಕು. ಎಲ್ಲ ಉಪಚಾರಗಳನ್ನು ವಾಸುದೇವ ದ್ವಾದಶಾಕ್ಷರ ಮಂತ್ರದಿಂದ ಅರ್ಪಿಸಬೇಕು. ಅದೇ ಮಂತ್ರದಿಂದ ಪಾಯಸವನ್ನು ಹೋಮಿಸ ಬೇಕು. ಹೋಮಶೇಷವನ್ನು ವಿಷ್ಣುಭಕ್ತರಿಗೆ ಉಣಿಸಿ ತಾನೂ ಉಣಬೇಕು. ಆ ರಾತ್ರಿ ಬ್ರಹ್ಮಚರ್ಯ ಪಾಲನ ಮಾಡಿ ಮರುದಿನ ವ್ರತದ ಮೊದಲನೆ ದಿನ ಬೆಳಿಗ್ಗೆ ಹಿಂದೆ ಹೇಳಿದಂತೆ ಹರಿಯನ್ನು ಅರ್ಚಿಸಿ ಅಂದಿನಿಂದ ಹನ್ನೆರಡು ದಿನಗಳ ಕಾಲ ಕೇವಲ ಹಾಲನ್ನು ಸೇವಿಸುತ್ತ ವ್ರತವನ್ನು ಆಚರಿಸಬೇಕು. ತ್ರಯೋದಶಿ ದಿನ ವಿಶೇಷವಾಗಿ ಅರ್ಚನೆ ಹೋಮ ಬ್ರಾಹ್ಮಣಾರಾಧನೆಗಳನ್ನು ಮಾಡಬೇಕು. ದೀನರು ಅಂಧರು ಕೈಲಾಗದವರು ಮುಂತಾದವರಿಗೂ ಅನ್ನದಾನ ಮಾಡಬೇಕು. ಪ್ರತಿದಿನ ಸಂಗೀತ ನೃತ್ಯ ವಾದ್ಯ ಕಥಾಪ್ರವಚನಗಳಿಂದ ಹರಿಯನ್ನು ಆರಾಧಿಸಬೇಕು.

ಸರ್ವಯಜ್ಞ ಎಂದೂ ಈ ವ್ರತಕ್ಕೆ ಹೆಸರಿದೆ.

ಅಧ್ಯಾಯ - ೧೬

ಅಧ್ಯಾಯ ಸಾರಾಂಶ

ತನ್ನ ಪತಿಯಾದ ಕಶ್ಯಪಮುನಿಯ ಆದೇಶದಂತೆ ಅದಿತಿದೇವಿ ಪಯೋವ್ರತವನ್ನು ಶ್ರದ್ಧೆಯಿಂದ ಅನುಷ್ಠಾನ ಮಾಡಿದಳು. ಶ್ರೀಹರಿ ಒಲಿದು ಮೈದೋರಿದ. 'ದೇವಮಾತೆಯೆ, ಶತ್ರುಗಳು ನಿನ್ನ ಮಕ್ಕಳ ಸಂಪತ್ತನ್ನು ಅಪಹರಿಸಿದ್ದಾರೆ. ಅವರ ಮನೆಯಿಂದ ಅವರನ್ನು ಹೊರಕ್ಕೆ ಹಾಕಿದ್ದಾರೆ. ಯುದ್ಧದಲ್ಲಿ ಅವರು ಶತ್ರುಗಳನ್ನು ಗೆಲ್ಲಬೇಕು. ಆ ಮಕ್ಕಳೊಂದಿಗೆ ನನ್ನನ್ನು ನೀನು ಆರಾಧಿಸಬೇಕು ಎಂದು ನೀನು ಬಯಸುತ್ತಿರುವೆ ತಾನೆ? ಆದರೆ ದೇವಿ, ಈಗ ದಾನವರನ್ನು ಗೆಲ್ಲಲು ಸಾಧ್ಯವಾಗದೆಂದು ನನ್ನ ಅಭಿಪ್ರಾಯ ಅವರಿಗೆ ನನ್ನನ್ನು ಒಲಿಸಿಕೊಂಡಿರುವ ಬ್ರಾಹ್ಮಣರ ರಕ್ಷೆ ಇದೆ. ಆದರೂ ನಾನು ನಿನ್ನ ವ್ರತಾಚರಣೆಯಿಂದ ಸಂತುಷ್ಟನಾಗಿದ್ದೇನೆ. ನನ್ನ ಆರಾಧನೆ ಎಂದೂ ನಿಷ್ಫಲವಾಗದು. ಅದರಿಂದ ನಿನ್ನನ್ನು ಅನುಗ್ರಹಿಸಲು ಉಪಾಯವನ್ನು ನಾನು ಆಲೋಚಿಸಲೇಬೇಕು. ಅದಕ್ಕೆ ನಾನು ನಿನ್ನ ಮಗನಾಗಿ ಅವತರಿಸಿ ನಿನ್ನ ಮಕ್ಕಳನ್ನು ಕಾಪಾಡುತ್ತೇನೆ ಎಂದು ವರವಿತ್ತ ಶ್ರೀಹರಿ.

ಅದಿತಿಯ ಗರ್ಭದಲ್ಲಿ ವಾಮನನಿರುವುದನ್ನು ತಿಳಿದು ಬ್ರಹ್ಮದೇವರು ಬಂದು ತ್ರಿವಿಕ್ರಮನಾಗಿ ದೊಡ್ಡ ಹೆಜ್ಜೆ ಇಡುವವನು ಬ್ರಾಹ್ಮಣಪ್ರಿಯನು ನೀನು ಇಂದ್ರನ ಶತ್ರುವನ್ನು ಪರಾಜಯ ಗೊಳಿಸು, ಅದಿತಿ ಹಿಂದಿನ ಜನ್ಮದಲ್ಲಿ ಪೃಶ್ನಿಯಾಗಿದ್ದಾಗಲೂ ನೀನು ಪೃಶ್ನಿಗರ್ಭನೆನಿಸಿ ಅವತರಿಸಿದವನು. ಆಳವಾದ ನೀರಿನ ಪ್ರವಾಹದಲ್ಲಿ ಬಿದ್ದ ಹುಲ್ಲುಕಡ್ಡಿಯನ್ನು ಅದು ಹೇಗೆ ವೇಗವಾಗಿ ಸೆಳೆದೊಯ್ಯುವುದೋ ಹಾಗೇ ಕಾಲನಿಯಾಮಕನಾಗಿ ನೀನು ವಿಶ್ವವನ್ನೇ ನಿನ್ನ ಗರ್ಭದಲ್ಲಿ ಸೆಳೆದೊಯ್ಯುತ್ತಿ. ತಮ್ಮ ಲೋಕದಿಂದ ಚ್ಯುತರಾದ ದೇವತೆಗಳಿಗೆ ನೀರಲ್ಲಿ ಮುಳುಗುತ್ತಿರುವವನಿಗೆ ದೋಣಿಯಂತೆ ನೀನೇ ಆಶ್ರಯ ನೀಡಬೇಕು' ಎಂದು ಬೇಡಿದರು.

❖ ❖ ❖

ಅಧ್ಯಾಯ - ೧೭

ಅಧ್ಯಾಯ ಸಾರಾಂಶ

ಅದಿತಿಯ ಗರ್ಭದಲ್ಲಿ ವಾಮನ ಅವತರಿಸಿದ. ಚತುರ್ಭುಜ ಚಕ್ರಶಂಖಗದಾಪದ್ಮಧಾರಿ ಪೀತಾಂಬರ ಉಟ್ಟಿದ್ದಾನೆ. ಕಮಲ ದಂಥ ಕಣ್ಣಿನವನು. ನಿರ್ಮಲ ಶ್ಯಾಮವರ್ಣದವನು ಎದೆಯಲ್ಲಿ ಶ್ರೀವತ್ಸ ಕಡಗ ತೋಳ್ಬಂದಿ ಕಿರೀಟಗಳಿಂದ ಶೋಭಿಸುತ್ತಿದ್ದಾನೆ. ಸುಂದರ ವನಮಾಲೆ ಕೌಸ್ತುಭರತ್ನಗಳನ್ನು ಧರಿಸಿದ್ದಾನೆ. ಅಂದು ಭಾದ್ರಪದ ಮಾಸ ಶ್ರವಣನಕ್ಷತ್ರಯುಕ್ತವಾದ ದ್ವಾದಶಿ. ವಿಜಯದ್ವಾದಶಿ, ಅಭಿಜಿನ್ಮುಹೂರ್ತದಲ್ಲಿ ಶಂಖದುಂದುಭಿ ಮೊದಲಾದ ವಾದ್ಯ ಘೋಷಗಳೊಂದಿಗೆ ಗಂಧರ್ವ ಅಪ್ಸರೆಯರ ಗಾನನೃತ್ಯ ಗಳೊಂದಿಗೆ ದೇವರ್ಷಿ ಪಿತೃ ಅಗ್ನಿಗಳು ಸ್ತುತಿಸುತ್ತಿದ್ದಂತೆ ಹೂಮಳೆಯಾಗುತ್ತಿದ್ದಂತೆ ಹರಿಯ ಅವತಾರವಾಯಿತು.

ತಾಯಿ ಅದಿತಿ ಕಂಡು ಆನಂದ ಆಶ್ಚರ್ಯ ಪರವಶಳಾದಳು. ತಂದೆ ಕಶ್ಯಪರು ಜಯಕಾರ ಮಾಡಿದರು. ಒಡನೆ ಅವರು ನೋಡುತ್ತಿದ್ದಂತೆಯೇ ಸ್ವಾಮಿ ವಾಮನಾಕಾರದ ವಟುವಾಗಿ ನಿಂತ.

ವಟುವಿಗೆ ಕಶ್ಯಪರು ಜಾತಕರ್ಮಾದಿಗಳನ್ನು ನಡೆಸಿದರು. ಉಪನಯನದಲ್ಲಿ ಸೂರ್ಯನೇ ಗಾಯತ್ರಿಮಂತ್ರ ಉಪದೇಶಿಸಿದ. ಬೃಹಸ್ಪತಿ ಯಜ್ಞೋಪವೀತವನ್ನಿತ್ತ. ಮೌಂಜಿಯನ್ನು ತಂದೆ ಕಶ್ಯಪ, ಕೌಪೀನವನ್ನು ತಾಯಿ ಅದಿತಿ, ಛತ್ರವನ್ನು ದ್ಯುಲೋಕಾಭಿಮಾನಿ, ಕಮಂಡಲುವನ್ನು ಬ್ರಹ್ಮದೇವರು, ದರ್ಭೆಯನ್ನು ಸಪ್ತರ್ಷಿಗಳು, ಅಕ್ಷಮಾಲೆಯನ್ನು ಸರಸ್ವತಿ, ಭಿಕ್ಷಾಪಾತ್ರೆಯನ್ನು ಕುಬೇರ, ಭಿಕ್ಷೆಯನ್ನು ಪಾರ್ವತಿ ಹೀಗೆ ನೀಡಿದರು.

ಉಪನಯನದಿಂದ ದ್ವಿಜನೆನಿಸಿದ ವಾಮನ ಅಗ್ನಿಯಲ್ಲಿ ಸಮಿಧೆಗಳನ್ನು ಹೋಮಿಸಿ ಬಲಿಯ ಅಶ್ವಮೇಧಯಾಗ ಶಾಲೆಯನ್ನು ಪ್ರವೇಶಿಸಿದ. ಭೃಗುವಂಶದ ಬ್ರಾಹ್ಮಣ ಋತ್ವಿಜರೂ ಯಜಮಾನನಾದ ಬಲಿಯೂ ಆಹವನೀಯಾದಿ ಯಾಗಾಗ್ನಿಗಳೂ ವಟುವನ್ನು ಸ್ವಾಗತಿಸಿದರು. ಬಲಿ ಅವನಿಗೆ ಆಸನವಿತ್ತು ಪಾದ

ಗಳನ್ನು ತೊಳೆದು ಅತ್ಯಂತ ಪಾವನ ಮಂಗಳಕರವಾದ ಆ ಪಾದೋದಕವನ್ನು ಶಿರದಲ್ಲಿ ಧರಿಸಿದ. ವಟುವೆ, ನೀನು ಯಾಚಕನಾಗಿ ಬಂದಿರುವಿ ಎಂದು ತಿಳಿಯುತ್ತೇನೆ ಏನು ಬಯಸು ವೆಯೋ ಅದೆಲ್ಲವನ್ನೂ ನೀನು ನನ್ನಿಂದ ಪಡೆಯಬಹುದು' ಎಂದ.

❖ ❖ ❖

ಅಧ್ಯಾಯ - ೧೮

ಅಧ್ಯಾಯ ಸಾರಾಂಶ

ಶ್ರೀವಾಮನ ನುಡಿದ- 'ರಾಜನೆ, ನಿನ್ನ ಈ ಮಾತು ನಿನ್ನ ಕುಲಕ್ಕೆ ತಕ್ಕುದಾಗಿದೆ. ಕೀರ್ತಿ ತರುವಂಥ ಮಾತಾಗಿದೆ. ಇದಕ್ಕೆ ಕಾರಣ ಭೃಗುಕುಲದ ಬ್ರಾಹ್ಮಣರು ನಿನಗೆ ಗುರುಗಳು. ಪ್ರಶಾಂತನಾದ ಪ್ರಹ್ಲಾದ ನಿನ್ನ ಕುಲದ ಹಿರಿಯನು. ನಿಮ್ಮ ಕುಲದಲ್ಲಿ ಎಲ್ಲರೂ ವೀರರು ದಾನಶೂರರು. ವೀರರು ಬಯಸಿದರೆ ಯುದ್ಧವನ್ನು ನೀವು ಇಲ್ಲವೆಂದವರಲ್ಲ. ಯಾಚಕರು ಬೇಡಿದರೆ ದಾನವನ್ನು ಇಲ್ಲವೆಂದವರೂ ನಿಮ್ಮಲ್ಲಿ ಯಾರೂ ಇಲ್ಲ. ಶ್ರೀಹರಿ ಹಿರಣ್ಯಾಕ್ಷನನ್ನು ಯುದ್ಧದಲ್ಲಿ ಕಷ್ಟದಿಂದ ಗೆದ್ದ. ಆದರೆ ಅವನ ಪರಾಕ್ರಮವನ್ನೇ ಹೆಚ್ಚೆಂದು ನೆನೆದು ತಾನು ನಿಜವಾಗಿ ಅವನನ್ನು ಗೆಲ್ಲಲೇ ಇಲ್ಲ ಎಂದುಕೊಂಡ.

ತಮ್ಮನನ್ನು ಕೊಂದ ಆ ಹರಿಯನ್ನು ಕೊಲ್ಲಲು ಹಿರಣ್ಯಕಶಿಪು ಬೆನ್ನಟ್ಟಿಹೋದ. ವೈಕುಂಠದಲ್ಲಿಯೂ ಶೋಧಿಸಿದ. ಆದರೆ ಹರಿ ಅವನಿಗೆ ಸಿಗಲೇ ಇಲ್ಲ. ಏಕೆಂದರೆ ಹರಿ ಭೀತನಾಗಿ ಅವನ ಉಸಿರಿನಲ್ಲೇ ಯಾರಿಗೂ ಕಾಣದಂತೆ ಅವಿತುಕೊಂಡು, ಅವನ ಶರೀರದೊಳಗೇ ಹೋಗಿ ಸೇರಿಕೊಂಡಿದ್ದ. ಆದರಿಂದ ಅವನು ಎಲ್ಲಿಯೂ ಹರಿ ಸಿಗಲಿಲ್ಲ ಎಂದು ಕೋಪದಿಂದ ಗರ್ಜನೆ ಮಾಡಿದ. 'ನಾನು ಇಡಿ ಪ್ರಪಂಚವನ್ನು ಶೋಧಿಸಿ ನೋಡಿದ್ದೇನೆ. ಹರಿ ಎಲ್ಲಿಯೂ ಇಲ್ಲ. ನಿಶ್ಚಯವಾಗಿ ಮರಳಿಬಾರದಂಥ ಲೋಕಕ್ಕೇ ಹೋಗಿದ್ದಾನೆ' ಎಂದು.

ವಿರೋಚನನೂ ಮಹಾದಾನಶೂರ. ಬ್ರಾಹ್ಮಣವೇಷ ದಿಂದ ಯಾಚಿಸಲು ಬಂದವರು ದೇವತೆಗಳೆಂದು ತಿಳಿದೂ ಅವರಿಗೆ ತನ್ನ ಆಯುಷ್ಯವನ್ನು ದಾನಮಾಡಿದ. ನೀನೂ ನಿನ್ನ ಪೂರ್ವಿಕರಂತೇ ವೀರ! ದಾನಶೂರ! ಅದರಿಂದ ನಾನು ನನ್ನ ಪಾದದ ಅಳತೆಯಲ್ಲಿ ಮೂರಡಿ ಭೂಮಿಯನ್ನು ನಿನ್ನಲ್ಲಿ ಬೇಡುತ್ತಿದ್ದೇನೆ, ಕೊಟ್ಟುಬಿಡು.'

ಬಲಿಗೆ ಸಿಟ್ಟು ಬಂದಿತು. 'ನೀನಿನ್ನೂ ಬಾಲಕ. ಏನೂ ಬುದ್ಧಿ ಇಲ್ಲದವನು. ನಾನು ಮೂಲೋಕಕ್ಕೆ ಏಕಮಾತ್ರ ಪ್ರಭು. ಕೇಳಿದರೆ

ದ್ವೀಪಗಳನ್ನೇ ಕೊಡಬಲ್ಲೆ. ಹೀಗಿದ್ದೂ ನನ್ನನ್ನು ಚೆನ್ನಾಗಿ ಹೊಗಳಿಯೂ ಕೇವಲ ಮೂರಡಿ ನೆಲವನ್ನು ಬೇಡುವೆ. ಇದು ನನ್ನ ಘನತೆಗೆ ಕುಂದು ತರುವಂಥಾದ್ದು' ಎಂದ.

ಶ್ರೀವಾಮನನೆಂದ 'ಮೂರಡಿ ನೆಲದಿಂದ ತೃಪ್ತಿ ಕಾಣದವನು ದ್ವೀಪದಿಂದಲೂ ತೃಪ್ತನಾಗಲಾರ. ಆತ ಇಡಿ ಭೂಮಂಡಲವನ್ನೇ ಬಯಸುತ್ತಾನೆ. ಅಖಂಡ ಭೂಮಂಡಲವನ್ನಾಳಿದ ರಾಜ ಮಹಾರಾಜರೂ ತಮ್ಮಾಸೆಗೆ ಕೊನೆ ಕಾಣಲಿಲ್ಲ. ಹರೀಚ್ಛೆಯಿಂದ ಸಿಕ್ಕಿದ್ದರಲ್ಲಿ ತೃಪ್ತಿಪಡುವ ಬ್ರಾಹ್ಮಣನ ಬ್ರಹ್ಮ ವರ್ಚಸ್ಸು ವರ್ಧಿಸುತ್ತದೆ. ಅತೃಪ್ತನಾದರೆ ಅದು ನೀರೆರೆದರೆ ಬೆಂಕಿಯಾರುವಂತೆ ಆರಿ ಹೋಗುತ್ತದೆ.' ಬಲಿ ನಕ್ಕು ನುಡಿದ, 'ಸರಿ, ನಿನಗಿಷ್ಟ ಬಂದಷ್ಟೇ ತೆಗೆದುಕೊ' ದಾನನೀಡಲು ಜಲಪಾತ್ರೆಯನ್ನೆತ್ತಿಕೊಂಡ.

ಶುಕ್ರಾಚಾರ್ಯರು ತಡೆದರು. 'ಬಲಿರಾಜ, ಈತ ಸಾಕ್ಷಾತ್ ವಿಷ್ಣು, ಕಶ್ಯಪನಿಂದ ಅದಿತಿಯಲ್ಲಿ ಅವತರಿಸಿದ್ದಾನೆ. ದೇವತೆಗಳ ಕಾರ್ಯ ಸಾಧನೆಗಾಗಿ ಬಂದಿದ್ದಾನೆ. ಮುಂದೆ ಏನು ಅನರ್ಥವಾದೀತೆಂದು ಆಲೋಚಿಸದೆ ನೀನು ಈತನಿಗೆ ಭೂಮಿ ವಾಗ್ದಾನ ಮಾಡಿದ್ದು ಸರಿಯಲ್ಲ. ಅವನು ನಿನ್ನನ್ನು ವಂಚಿಸುತ್ತಾನೆ. ಅದಕ್ಕೇ ವಟುರೂಪ ತಳೆದಿದ್ದಾನೆ. ಅವನೀಗ ಬ್ರಹ್ಮಾಂಡ ವ್ಯಾಪಿ ಶರೀರನಾಗಿ ಬೆಳೆದು ಮೂಲೋಕವನ್ನು ಎರಡು ಹೆಜ್ಜೆಯಿಂದ ಅಳೆದು ವಶಪಡಿಸಿ ಕೊಳ್ಳುತ್ತಾನೆ. ಆಗ ಮೂರನೆ ಹೆಜ್ಜೆಗೆ ಸ್ಥಳವನ್ನು ಎಲ್ಲಿ ತೋರಿಸುವೆ? ಸರ್ವಸ್ವವನ್ನೂ ಕಳೆದುಕೊಂಡು ಹೇಗೆ ಬದುಕುವೆ?

ಬೇಡಿದವನಿಗೆ, ನನ್ನಲ್ಲಿದೆ ಕೊಡುವೆನೆನ್ನುವುದು ಸತ್ಯ. ಇಲ್ಲ, ಕೊಡಲಾರೆ ಎನ್ನುವುದು ಸುಳ್ಳು. ಸತ್ಯಕ್ಕಿಂತ ಸುಳ್ಳೇ ಮೇಲೆಂದು ವೇದ ಹೇಳುತ್ತದೆ. ಏಕೆಂದರೆ, ಸತ್ಯವನ್ನೇ ಹೇಳುತ್ತ ಬಂದರೆ ಎಲ್ಲವನ್ನೂ ಕಳೆದುಕೊಂಡು ಬದುಕಿರಲಾರದ ಸ್ಥಿತಿಗೆ ಹೋಗುತ್ತಾನೆ. ಸುಳ್ಳನ್ನೇ ಹೇಳಿದರೆ ಅಪಕೀರ್ತಿ. ಅದರಿಂದ ಕೀರ್ತಿಗಾಗಿ ಸ್ವಲ್ಪ ಸತ್ಯಬೇಕು. ಬದುಕಿಗಾಗಿ ಸ್ವಲ್ಪ ಸುಳ್ಳು ಬೇಕು. ನೀನೀಗ ಸುಳ್ಳು ಹೇಳದಿದ್ದರೆ ನಿನಗೆ ಮುಂದೆ ಬದುಕೇ ಇಲ್ಲವಾಗುತ್ತದೆ.

❖ ❖ ❖

ಅಧ್ಯಾಯ - ೧೯

ಅಧ್ಯಾಯ ಸಾರಾಂಶ

ಬಲಿರಾಜ ಶುಕ್ರಾಚಾರ್ಯರ ಮಾತನ್ನು ಒಪ್ಪಲಿಲ್ಲ. ಪ್ರಹ್ಲಾದನ ಕುಲದಲ್ಲಿ ಬಂದವನು ನಾನು ಜೀವನೋಪಾಯಕ್ಕಾಗಿ, ವಾಗ್ದಾನ ಮಾಡಿದ್ದನ್ನು ಇಲ್ಲವೆಂದು ಹೇಗೆ ಸುಳ್ಳು ಹೇಳಲಿ. ಸುಳ್ಳಿಗಿಂತ ಹೆಚ್ಚಿನ ಪಾಪ ಇನ್ನೊಂದಿಲ್ಲ. ನಾನು ಸುಳ್ಳಿಗೆ ಭಯಪಡುವಷ್ಟು ನರಕಕ್ಕೂ ಭಯಪಡುವುದಿಲ್ಲ. ದಧೀಚ ಶಿಬಿ ಮುಂತಾದವರು ಬೇಡಿದವರಿಗೆ ಪ್ರಾಣವನ್ನೂ ಕೊಟ್ಟಿದ್ದುಂಟು. ದಾನಶೂರನಿಗೆ ದುರ್ಗತಿ ಬಂದರೆ ಅದು ಭೂಷಣವೆ. ಅದರಲ್ಲಿಯೂ ನಿಮ್ಮಂಥ ಬ್ರಾಹ್ಮಣರಿಗೆ ದಾನ ಮಾಡಿದ್ದರಿಂದ ದುರ್ಗತಿ ಬಂದರೆ ಬೇರೇನು ಹೇಳಬೇಕು? ಈತ ವಿಷ್ಣುವೆ ಇರಲಿ ಬೇರೆ ಯಾರೇ ಇರಲಿ ಅವನು ಬೇಡಿದ್ದನ್ನು ಕೊಟ್ಟುಬಿಡುತ್ತೇನೆ.

ನಿರಪರಾಧಿಯಾದ ನನ್ನನ್ನು ಈತ ಮೋಸದಿಂದ ಬಂಧಿಸಬಹುದು. ಆದರೂ ನನಗೆ ಹೆದರಿ ಬ್ರಾಹ್ಮಣರೂಪದಿಂದ ಬಂದ ಶತ್ರುವಿನ ಮೇಲೆ ನಾನು ಕೈಮಾಡಲಾರೆ. ಒಂದು ವೇಳೆ ಈತ ತನ್ನ ಉತ್ತಮವಾದ ಕೀರ್ತಿಯನ್ನು ಉಳಿಸಿಕೊಳ್ಳಲು ಮೋಸ ಮಾಡುವುದಿಲ್ಲವಾದರೆ ಯುದ್ಧ ಮಾಡಲಿ, ಯುದ್ಧದಲ್ಲಿ ನನ್ನನ್ನು ಕೊಂದು ಭೂಮಿಯನ್ನು ಪಡೆಯಲಿ ಇಲ್ಲವೆ ನನ್ನಿಂದ ಹತನಾಗಿ ತಾನೆ ಬೀಳಲಿ.'

ಶುಕ್ರಾಚಾರ್ಯರು ಕುಪಿತರಾದರು. ಶಿಷ್ಯನಾಗಿ ನನ್ನನ್ನು ಸೇವಿಸಿ ನನ್ನ ತಪಃಶಕ್ತಿಯಿಂದಲೇ ಮೂಲೋಕದ ಒಡೆತನವನ್ನು ಪಡೆದು ಇದೀಗ ನನ್ನಲ್ಲಿಯೇ ಶ್ರದ್ಧೆ ಇಲ್ಲದೆ ನನ್ನಾದೇಶವನ್ನು ತಿರಸ್ಕರಿಸುತ್ತಿದ್ದಾನೆ. ತಾನೇ ಬಲ್ಲವನೆಂದು ಬೀಗಿದ್ದಾನೆ ಎಂದು ಹರಿಪ್ರೇರಣೆಯಿಂದ 'ನೀನು ಬೇಗನೆ ಐಶ್ವರ್ಯ ಭ್ರಷ್ಟನಾಗುವೆ' ಎಂದು ಶಪಿಸಿದರು.

ಆದರೂ ಬಲಿ ಸತ್ಯವನ್ನು ಬಿಡದೆ ಜಲಪೂರ್ವಕವಾಗಿ ಭೂದಾನ ಮಾಡಿದ. ಶ್ರೀವಾಮನನ ಪಾದಗಳನ್ನು ತೊಳೆದು

ವಿಶ್ವಪಾವನವಾದ ಆ ಜಲವನ್ನು ತಲೆಯಲ್ಲಿ ಧರಿಸಿದ. ಬೇಡಲು ಬಂದವನು ಶತ್ರುವೆಂದು ತಿಳಿದೂ ದಾನ ಮಾಡಿದನೆಂದು ದೇವತೆಗಳು ಗಂಧರ್ವರು ಮುಂತಾದವರು ಹೊಗಳಿ ಹೂಮಳೆಗರೆದರು. ವಾಮನರೂಪ ಅದ್ಭುತವಾದ ತ್ರಿವಿಕ್ರಮ ರೂಪವಾಗಿ ಬೆಳೆಯಿತು. ಭೂಮಿ ಅಂತರಿಕ್ಷ ಸ್ವರ್ಗ ಪಾತಾಳ ಎಲ್ಲವನ್ನೂ ಆ ರೂಪ ವ್ಯಾಪಿಸಿತು.

ಅಂಗಾಲುಗಳಲ್ಲಿ ಪಾತಾಳಗಳು, ಪಾದದಲ್ಲಿ ಪೃಥಿವಿ, ಜಂಘೆಯಲ್ಲಿ ಪರ್ವತಗಳು, ಮಂಡಿಗಳಲ್ಲಿ ಪಕ್ಷಿಗಳು, ತೊಡೆಗಳಲ್ಲಿ ಮರುತ್ತುಗಳು, ಪೀತಾಂಬರದಲ್ಲಿ ಸಂಧ್ಯೆ, ಗುಹ್ಯದಲ್ಲಿ ಪ್ರಜಾಪತಿ ಗಳು ಮತ್ತು ಸೊಂಟದಲ್ಲಿ ತನ್ನವರೊಂದಿಗೆ ತಾನಿರುವುದನ್ನೂ ಬಲಿ ಚಕ್ರವರ್ತಿ ಕಂಡ. ನಾಭಿಯಲ್ಲಿ ಅಂತರಿಕ್ಷ, ಉದರದಲ್ಲಿ ಸಾಗರಗಳು, ಎದೆಯಲ್ಲಿ ನಕ್ಷತ್ರಮಾಲೆ, ಎದೆಯಲ್ಲಿ ಧರ್ಮ, ಸ್ತನಗಳಲ್ಲಿ ಋತಸತ್ಯಗಳು, ಮನಸಿನಲ್ಲಿ ಚಂದ್ರ, ಎದೆಯಲ್ಲಿ ಕಮಲಹಸ್ತೆ ಶ್ರೀದೇವಿ. ಕಂಠದಲ್ಲಿ ವೇದಾಭಿಮಾನಿಗಳು. ಬಾಹುಗಳಲ್ಲಿ ಇಂದ್ರಾದಿ ದೇವತೆಗಳು ಕಿವಿಯಲ್ಲಿ ದಿಗಭಿಮಾನಿ ಗಳು ಶಿರದಲ್ಲಿ ದ್ಯುಲೋಕಾಭಿಮಾನಿ ಕೇಶಗಳಲ್ಲಿ ಮೇಘಗಳು ನಾಸಿಕೆಯಲ್ಲಿ ವಾಯು ಕಣ್ಣುಗಳಲ್ಲಿ ಸೂರ್ಯ ಬಾಯಲ್ಲಿ ಅಗ್ನಿ. ರಸನೆಯಲ್ಲಿ ವರುಣ ಹುಬ್ಬುಗಳಲ್ಲಿ ವಿಧಿನಿಷೇಧಗಳು ಕಣ್ಣಿನ ರೆಪ್ಪೆಗಳಲ್ಲಿ ಹಗಲುರಾತ್ರಿಗಳು ಹೆಚ್ಚೇಕೆ ಇಡೀ ಪ್ರಪಂಚ ತ್ರಿವಿಕ್ರಮನ ಶರೀರದಲ್ಲಿ ಆಶ್ರಯಿಸಿರುವುದನ್ನು ಬಲಿರಾಜ ಕಂಡ.

ತ್ರಿವಿಕ್ರಮ ಒಂದು ಪಾದದಿಂದ ಭೂಮಿ ಪಾತಾಳಗಳನ್ನು ಅಳೆದ. ಎರಡನೆ ಪಾದ ಬೆಳೆದು ಮೇಲೆ ಮೇಲೆ ಹೋಗಿ ಮಹರ್ಲೋಕ ಜನಲೋಕಗಳಿಗಿಂತಲೂ ಮೇಲೆ ತಪೋಲೋಕ ಕ್ಕಿಂತಲೂ ಆಚೆ ಸತ್ಯಲೋಕಕ್ಕೇ ಹೊರಟು ಹೋಯಿತು.

❖❖❖

ವಾಮನದೇವರು ಬಲಿಯಲ್ಲಿ ಮೂರಡಿ ಭೂಮಿ ದಾನ ಬೇಡಿದಾಗ ಆಗಲಿ ಎಂದು ವಾಗ್ದಾನ ಮಾಡಿಬಿಟ್ಟ ಬಲಿ. ಶುಕ್ರಾಚಾರ್ಯರು ತಡೆದರು. ಈತ ಶ್ರೀಹರಿ ನಿನ್ನನ್ನು ನಿಗ್ರಹಿಸಲೆಂದೇ ಬಂದಿದ್ದಾನೆ ಎಂದರು. ಆಗ ಬಲಿ ಕೊಡುವ ಉತ್ತರ-

ಯದ್ಯಪ್ಯಸಾವಧರ್ಮೇಣ ಮಾಂ ಬಧ್ನೀಯಾದನಾಗಸಮ್ ।
ತಥಾಪ್ಯೇನಂ ನ ಹಿಂಸಿಷ್ಯೇ ಭೀತಂ ಬ್ರಹ್ಮತನುಂ ರಿಪುಮ್ ॥ ೧೨ ॥

ಏಷ ವಾ ಉತ್ತಮಶ್ಲೋಕೋ ನ ಜಿಹಾಸತಿ ಯದ್ಯಶಃ ।
ಹತ್ವಾಮೈನಾಂ ಹರೇದ್ಯುದ್ಧೇ ಶಯೀತ ನಿಹತೋ ಮಯಾ ॥ ೧೩ ॥

ನಿರಪರಾಧಿಯಾದ ನನ್ನನ್ನು ಈತ ಮೋಸದಿಂದ ಬಂಧಿಸಬಹುದು. ಆದರೂ ನನಗೆ ಹೆದರಿ ಬ್ರಾಹ್ಮಣರೂಪದಿಂದ ಬಂದಿರುವ ಶತ್ರುವನ್ನು ನಾನು ಹಿಂಸಿಸಲಾರೆ.

ಒಂದುವೇಳೆ ಉತ್ತಮಕೀರ್ತಿವಂತನಾದ ಈತ ತನ್ನ ಕೀರ್ತಿಗೆ ಕಳಂಕ ಉಂಟಾಗುವಂತೆ, ಮೋಸ ಮಾಡುವುದಿಲ್ಲವಾದರೆ ಯುದ್ಧದಲ್ಲಿ ನನ್ನನ್ನು ಕೊಂದೇ ಭೂಮಿಯನ್ನು ಅಪಹರಿಸಲಿ. ಅಥವಾ ನನ್ನಿಂದ ಹತನಾಗಿ ತಾನೇ ಬೀಳಲಿ.

ಇಲ್ಲಿ ಪ್ರಶ್ನೆ ಬರುತ್ತದೆ. ಪ್ರಹ್ಲಾದನಂತೆ ಬಲಿಯೂ ಒಬ್ಬ ಕರ್ಮಜ ದೇವತೆ. ಪ್ರಹ್ಲಾದನೆಂದೂ ಭಗವಂತನನ್ನು ಆಕ್ಷೇಪಿಸುವುದಿಲ್ಲ. ಬಲಿ ವಾಮನನನ್ನು ಒಂದೇ ಸಮನೆ ಆಕ್ಷೇಪಿಸುತ್ತಲೆ ಇದ್ದಾನೆ. ಏನು ಕಾರಣ? ಈ ಪ್ರಶ್ನೆಗೆ ಸಮಾಧಾನವನ್ನು ಬ್ರಹ್ಮಾಂಡ ಪುರಾಣ ಹೀಗೆ ಹೇಳುತ್ತದೆ- 'ಬಲಿಯಲ್ಲಿ ಬಲಿಯೆಂಬ ಒಬ್ಬ ಅಸುರನ ಆವೇಶ ಬರುತ್ತದೆ. ಆ ಆವೇಶದ ಭರದಲ್ಲಿ ಬಲಿ ಭಗವಂತನನ್ನು ಆಕ್ಷೇಪಿಸುತ್ತಾನೆ ಹೊರತು ಸ್ವಭಾವತಃ ಆತನೂ ಭಕ್ತನೆ. ಪ್ರಹ್ಲಾದನಲ್ಲಿ ಅಸುರಾವೇಶವಿಲ್ಲ. 'ರಹಿತಾಸುರೋಽಸುರಃ' ಎಂದು ಭಾಗವತವೇ ಹೇಳುತ್ತದೆ. ಅದರಿಂದ ಆತ ಭಗವಂತನನ್ನು ಎಂದೂ ಆಕ್ಷೇಪಿಸುವುದಿಲ್ಲ' ಎಂದು. ಬಲಿ ಮೂಲೋಕವನ್ನು ದಾನವಾಗಿ ಕೊಟ್ಟರೂ ಅಸುರಾವೇಶಪೂರ್ವಕವಾಗಿ ಕೊಟ್ಟ ದಾನವಾದ್ದರಿಂದ ವಾಮನ ಅದಕ್ಕೆ ಮೋಕ್ಷಫಲ ನೀಡದೆ ತನಗೆ ವಾಗ್ದಾನ ಮಾಡಿದಂತೆ ಮೂರು ಹೆಜ್ಜೆ ಭೂಮಿದಾನ ಮಾಡುವಲ್ಲಿ ವಿಫಲನಾದ್ದರಿಂದ ವರುಣಪಾಶದಿಂದ ಬಂಧನ ಮಾಡಿ ಪರ್ವತ ಗುಹೆಯೊಳಗೆ ಕೆಲಕಾಲ ಸೆರೆಯಾಳಾಗಿ ಇರಿಸಿದ. ಕೊನೆಗೆ ಅವನ ಅಪರಾಧವನ್ನು ಅಸುರಾವೇಶ ಪ್ರಯುಕ್ತವಾದುದೆಂದು ಕ್ಷಮಿಸಿ ಮುಂದೆ ಇಂಥ ಅಸುರಾವೇಶ ಬಾರದಂತೆ ಸುತಲಲೋಕದಲ್ಲಿ ಸುರಕ್ಷಿತವಾಗಿ ಇರಿಸಿ ಅವನ ಮನೆ ಬಾಗಿಲಲ್ಲಿ ನಿಂತು ಕಾಯುತ್ತಾನೆ ವಾಮನ. ಮುಂದಿನ ಮನ್ವಂತರದಲ್ಲಿ ಇಂದ್ರಪದವಿಯನ್ನು ಕೊಡುತ್ತೇನೆ ಎಂದು ಅನುಗ್ರಹವನ್ನೂ ಮಾಡುತ್ತಾನೆ.

ಬಲಿ ಸ್ವರ್ಗವನ್ನು ಆಕ್ರಮಿಸಿದ್ದೂ ಅಸುರಾವೇಶದಿಂದ. ಅನ್ಯಾಯಾರ್ಜಿತ

ವಾದ ಸೊತ್ತನ್ನು ದಾನಮಾಡುವುದೂ ತಾಮಸವಾದ್ದರಿಂದ ಅದೂ ಅಸುರಾವೇಶ ದಿಂದ. ಶುಕ್ರಾಚಾರ್ಯರು ದಾನವನ್ನು ತಡೆಯಲು ಯತ್ನಿಸಿದ್ದು ಇದೇ ಅಭಿಪ್ರಾಯದಿಂದ.

ಬೇರೆ ವ್ಯಾಖ್ಯಾನಕಾರರಿಗೆ ಈ ಜೀವದ್ವಯಾವೇಶ ಪ್ರಕ್ರಿಯೆಯೇ ಗೊತ್ತಿಲ್ಲದ್ದರಿಂದ ಅವರು ಬಲಿಯ ಎಲ್ಲ ಮಾತು ಕೃತಿಗಳಿಂದಲೂ ಬಲಾತ್ಕಾರವಾಗಿ ಬೇರೇ ಅಭಿಪ್ರಾಯಗಳನ್ನು ಹೊರಡಿಸಲು ಯತ್ನಿಸುತ್ತಾರೆ. ಈ ವಾಮನ ಸಾಕ್ಷಾತ್ ಹರಿ ಎಂದು ಶುಕ್ರಾಚಾರ್ಯರು ಹೇಳಿದರೂ ಬಲಿ ಪ್ರಹ್ಲಾದನಂತೆ ಸಂಭ್ರಮದಿಂದ ನಮಿಸುವುದು ಸ್ತುತಿಸುವುದು ಮುಂತಾದುವನ್ನು ಮಾಡದಿರುವುದು ಶುಕ್ರಾಚಾರ್ಯರಿಗೂ ಅಸುರರಿಗೂ ಮನಸ್ಸಿಗೆ ನೋವಾಗದಿರಲಿ ಎಂದು. ಏಕೆಂದರೆ ಶುಕ್ರಾಚಾರ್ಯರಿಗೆ ಹರಿಯಲ್ಲಿ ಭಕ್ತಿ ಇಲ್ಲ! ಹರಿಗೆ ದಾನ ನೀಡಬೇಡ ಎನ್ನುತ್ತಾರೆ! ಅದರಿಂದ ಅವರೆದುರಿನಲ್ಲಿ ಬಲಿ ತನ್ನ ಹರಿಭಕ್ತಿಯನ್ನು ಹೊರಗೆ ತೋರುವುದಿಲ್ಲ. 'ಶಯೀತ ನಿಹತೋ ಮಯಾ' ಎಂದರೆ 'ನನ್ನಿಂದ ಹತನಾಗಿ ರಣರಂಗದಲ್ಲಿ ಬೀಳುತ್ತಾನೆ ಹರಿ' ಎಂದು ಅರ್ಥವಲ್ಲ. 'ಹತನಾಗಿ ಬೀಳುತ್ತಾನೆ ಏನು?' 'ಸರ್ವಥಾ ಇಲ್ಲ' ಎಂದು ಕಾಕು. 'ವಿಶ ತ್ವಂ ನಿರಯಂ' ನೀನು ನರಕದಲ್ಲಿ ಬೀಳು ಎಂದು ವಾಮನ ಹೇಳಿದ ಮಾತಿಗೆ 'ನಿರಯ' ಎಂದರೆ ನಿಲಯ 'ವೈಕುಂಠನಿಲಯವನ್ನು ಪ್ರವೇಶಿಸು' ಎಂದರ್ಥ! ಬಲಿಯನ್ನು ವಾಮನ ಬಂಧಿಸಿದ್ದು ಅವನ ದಾನಶೂರತೆ ಸತ್ಯ ಧೈರ್ಯಗಳನ್ನು ಲೋಕಕ್ಕೆ ತೋರಿಸುವುದಕ್ಕಾಗಿ! ಅವನ ಸರ್ವಸ್ವವನ್ನೂ ಅಪಹರಿಸಿ ಋಣಿಯಾಗಿ ತಾನೆ ಅವನ ಮನೆ ಬಾಗಿಲು ಕಾಯುತ್ತಾನೆ ವಾಮನ ಇತ್ಯಾದಿ.

ವಸ್ತುತಃ ಜೀವದ್ವಯಾವೇಶ ಪಕ್ಷದಲ್ಲಿಯೂ ಹೀಗೇ ಬೇರೆ ಅಭಿಪ್ರಾಯವನ್ನು ಹೊರಡಿಸುವುದು ಸಜ್ಜೀವನ ವಿವಕ್ಷೆಯಲ್ಲಿ ಉಚಿತವೆ. ಆದರೆ ಅಸುರಾವೇಶವನ್ನು ಒಪ್ಪದಿದ್ದರೆ ಈ ರೀತಿ ಬಲಾತ್ಕಾರದಿಂದ ಬೇರೇ ಅರ್ಥ ಹೊರಡಿಸುವುದು ಮೂಲಕ್ಕೆ ಅಪಚಾರವೇ ಸರಿ. ಬಲಿಗೆ ಮಾತ್ರ ಹರಿಯಲ್ಲಿ ಭಕ್ತಿ ಇದೆ. ಶುಕ್ರಾಚಾರ್ಯರಿಗಿಲ್ಲ ಎನ್ನುವುದಂತೂ ಮಹಾ ಅಪಚಾರವಾಗುವುದು. ಅಸುರಾವೇಶಕ್ಕೊಳಗಾಗಿದ್ದ ಬಲಿ ದಾನದ ನೆಪದಿಂದ ಹರಿಯಲ್ಲಿ ಅಪಚಾರ ಮಾಡದಿರಲಿ ಎಂದು ಪ್ರಯತ್ನಿಸಿದವರು ಶುಕ್ರಾಚಾರ್ಯರು, ಮಹಾಭಗವದ್ಭಕ್ತರು.

ಬಲಿರಪ್ಯಸುರಾವೇಶಾತ್ ಸ್ತುವನ್ನಪಿ ಜನಾರ್ದನಂ।
ಆಕ್ಷಿಪತ್ಯಂತರಾ ಕ್ವಾಪಿ ಪ್ರಹ್ಲಾದೋ ನಿತ್ಯಭಕ್ತಿಮಾನ್।
ಇತಿ ಬ್ರಹ್ಮಾಂಡೇ॥

ಬಲಿ ಸ್ವಭಾವತಃ ಜನಾರ್ದನನನ್ನು ಸ್ತೋತ್ರ ಮಾಡುವವನೆ. ಆದರೂ ಕೆಲವೊಮ್ಮೆ ಭೂಮಿದಾನದಂಥ ಸಂದರ್ಭಗಳಲ್ಲಿ ಹರಿಯನ್ನು ಅಸುರಾವೇಶದಿಂದ ಆಕ್ಷೇಪಿಸುತ್ತಾನೆ. ಪ್ರಹ್ಲಾದನು ಮಾತ್ರ ಸದಾ ಭಕ್ತಿ ಉಳ್ಳವನೆ ಎಂದು ಬ್ರಹ್ಮಾಂಡಪುರಾಣದಲ್ಲಿ ಹೇಳಿದೆ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ಅಷ್ಟಮಸ್ಕಂಧೇ
ಏಕೋನವಿಂಶೋಽಧ್ಯಾಯಃ

❖ ❖ ❖

ಅಧ್ಯಾಯ -೨೦

ಅಧ್ಯಾಯ ಸಾರಾಂಶ

ತ್ರಿವಿಕ್ರಮನ ಪಾದ ಬೆಳೆದು ಸತ್ಯಲೋಕವನ್ನು ತಲುಪಿದಾಗ ಅದನ್ನು ಸಂಭ್ರಮದಿಂದ ಆರಾಧಿಸಲು ಬ್ರಹ್ಮದೇವನೂ ಮರೀಚಿ ಮುಂತಾದ ಮುನಿಗಳೂ ಸನಂದನಾದಿ ಯೋಗಿಗಳೂ ವೇದ ಇತಿಹಾಸ ಬ್ರಹ್ಮತರ್ಕ ಷಡಂಗ ಅಷ್ಟಾದಶಪುರಾಣಗಳ ಅಭಿಮಾನಿ ದೇವತೆಗಳೂ ಎಲ್ಲ ಸತ್ಯಲೋಕ ನಿವಾಸಿಗಳೂ ಧಾವಿಸಿ ಬಂದರು. ಮೇಲ್ಮುಖವಾಗಿ ಉದಿಸಿ ಬಂದ ಆ ವಿಷ್ಣುಪಾದ ಬ್ರಹ್ಮಾಂಡ ಕಟಾಹವನ್ನು ಒಡೆದು ಗಂಗೆಗೆ ಜನ್ಮವಿತ್ತಾಗ ಬ್ರಹ್ಮದೇವ ಆ ಬಾಹ್ಯಜಲಧಾರೆಯನ್ನು ಕಮಂಡಲುವಿನಲ್ಲಿ ಸಂಗ್ರಹಿಸಿ ತಂದು ಹರಿಪಾದವನ್ನು ತೊಳೆದು ಪೂಜಿಸಿದ, ಸ್ತುತಿಸಿದ. ಲೋಕಪಾಲಕ ರೆಲ್ಲರೂ ಸಪರಿವಾರರಾಗಿ ಬಂದು ಜಲ ಪುಷ್ಪ ಫಲ ಗಂಧ ಧೂಪ ದೀಪಗಳಿಂದ ಆರ್ಚಿಸಿ ಸ್ತೋತ್ರಗೈದರು. ನೃತ್ಯವಾದ್ಯ ಗೀತ ಗಳಿಂದ ಉಪಚರಿಸಿದರು. ತ್ರಿವಿಕ್ರಮನ ವಿಜಯವನ್ನು ಭೇರೀನಾದ ದೊಂದಿಗೆ ಸಾರುತ್ತ ಜಾಂಬವಂತ ಎಲ್ಲ ದಿಕ್ಕುಗಳಲ್ಲಿ ಸಂಚರಿಸಿದ.

ಹೀಗೆ ಬಲಿಯ ಸರ್ವಸ್ವವನ್ನು ವಾಮನ ಅಪಹರಿಸಿದಾಗ ಕುಪಿತರಾದ ಅಸುರರು ಆಯುಧಗಳನ್ನು ಹಿಡಿದು ಮುನ್ನುಗ್ಗಿದರು. ಅವರನ್ನು ನಂದ ಸುನಂದ ಜಯ ವಿಜಯ ವಿಷ್ವಕ್ಸೇನ ಗರುಡ ಮುಂತಾದ ವಿಷ್ಣುಪಾರ್ಷದರು ತಡೆದರು. ಅಸುರಸೇನೆ ಅವರಿಂದ ಹತವಾಗುತ್ತಿದುದನ್ನು ಕಂಡು ಬಲಿಯೇ ವಿಪ್ರಚಿತ್ತಿ ಮುಂತಾದ ಅಸುರರನ್ನೆಲ್ಲ ಬೇಗನೆ ರಸಾತಳಕ್ಕೆ ಕಳಿಸಿದ. ಗರುಡ ಹರಿಯ ಆದೇಶದಂತೆ ಬಲಿಯನ್ನು ವರುಣಪಾಶದಿಂದ ಬಂಧಿಸಿದ. ಕೊಟ್ಟ ಮಾತಿನಂತೆ ಮೂರಡಿ ಭೂಮಿದಾನ ಮಾಡಲು ಅಶಕ್ತನಾದ ಬಲಿ ಕೆಲವು ವರ್ಷಗಳ ಕಾಲ ನರಕವಾಸ ಮಾಡಬೇಕಾಗುತ್ತದೆ ಎಂದು ವಾಮನ ಆಕ್ಷೇಪಿಸಿದ,

❖❖❖

ಅಧ್ಯಾಯ - ೨೧

ಅಧ್ಯಾಯ ಸಾರಾಂಶ

ನಾನು ಮೂರಡಿ ಭೂಮಿಯನ್ನು ವಾಗ್ದಾನ ಮಾಡಿದ್ದು ಸುಳ್ಳಾಯಿತೆನ್ನುವಿಯಾದರೆ ನಿನ್ನ ಮೂರನೆ ಹೆಜ್ಜೆಯನ್ನು ನನ್ನ ತಲೆಯ ಮೇಲೆ ಇಡು ಎಂದು ಬಲಿ ಹೇಳುತ್ತಾನೆ. ಐಶ್ವರ್ಯಮದದಿಂದ ನಾನು ನಿನಗೆ ದಾನ ಮಾಡಬಲ್ಲೆ ಎಂದುಕೊಂಡಿದ್ದೆ. ಈಗ ನೀನು ನನ್ನ ಕಣ್ಣು ತೆರೆಸಿರುವೆ ಎನ್ನುತ್ತಾನೆ. ಪ್ರಹ್ಲಾದನೂ 'ಬಲಿಯ ಸಂಪತ್ತನ್ನು ಕಿತ್ತುಕೊಂಡು ನೀನು ಅವನನ್ನು ಅನುಗ್ರಹಿಸಿರುವೆ' ಎಂದ. ಬಲಿಯ ರಾಣಿ ವಿಂಧ್ಯಾವಳಿಯೂ ಹಾಗೇ ಹೇಳುತ್ತಾಳೆ. ಬ್ರಹ್ಮದೇವ 'ಈತನ ಅಸುರಾವೇಶಕ್ಕೆ ತಕ್ಕ ಶಿಕ್ಷೆ ಮಾಡಿದ್ದಾಯಿತು. ಅವನ ಬುದ್ಧಿ ಸ್ವಾಭಾವಿಕವಾಗಿ ನಿರ್ಮಲವಾಗಿಯೇ ಇದೆ. ಅಂಥ ಬುದ್ಧಿಯಿಂದ ನಿನ್ನ ಪಾದಗಳನ್ನು ತೊಳೆದು ಪೂಜಿಸಿದ್ದಾನೆ, ಅನುಗ್ರಹಿಸು' ಎಂದ. ವಾಮನನೆಂದ. 'ನಾನು ಯಾರನ್ನು ಅಸುರಾವೇಶದಿಂದ ಮುಕ್ತನನ್ನಾಗಿಸಿ ಅನುಗ್ರಹಿಸಲು ಬಯಸುವೆನೋ ಅವನ ಸಂಪತ್ತನ್ನು ಮೊದಲಿಗೆ ಕಸಿದುಕೊಳ್ಳುತ್ತೇನೆ. ಆದರಿಂದ ಈತ ಎಲ್ಲ ಸಂಪತ್ತನ್ನು ಕಳೆದುಕೊಂಡ ಬಳಿಕ ಈಗ ನನ್ನನ್ನು ನಿರ್ಮಲಭಕ್ತಿಯಿಂದ ಶರಣು ಹೊಂದಿದ್ದಾನೆ. ನಾನು ಈತನಿಗೆ ಮುಂದಿನ ಮನ್ವಂತರದಲ್ಲಿ ಇಂದ್ರಪದವಿಯನ್ನು ನೀಡುತ್ತೇನೆ. ಅಂದಿನವರೆಗೆ ಸುತಲಲೋಕದಲ್ಲಿ ಅವನನ್ನು ಸುಖವಾಗಿ ಇರಿಸಿ ಅಸುರಾವೇಶ ಬಾರದಂತೆ ಅವನ ಬಳಿಯಲ್ಲಿಯೇ ಪ್ರತ್ಯಕ್ಷವಾಗಿ ನಿಂತಿದ್ದು ನೋಡಿಕೊಳ್ಳುತ್ತೇನೆ.'

❖❖❖

ಅಧ್ಯಾಯ - ೨೨

ಅಧ್ಯಾಯ ಸಾರಾಂಶ

'ಶ್ರೀಹರಿ, ಅಸುರಜಾತಿಯಲ್ಲಿ ಹುಟ್ಟಿ, ಹೊರಗೆ ನಾವು ನಿನ್ನನ್ನು ದ್ವೇಷಿಸಿದರೂ, ನಮ್ಮ ಅಂತರಂಗದಲ್ಲಿರುವ ಸ್ವಾಭಾವಿಕ ಭಕ್ತಿಗೆ ಒಲಿಯುವ ನಿನ್ನ ಕರುಣೆ ಅಸದೃಶವಾದುದೆ'ಂದು ಬಲಿ ಪ್ರಹ್ಲಾದರು ಹೊಗಳುತ್ತಾರೆ. ಅವರು ಸುತಲಲೋಕಕ್ಕೆ ಹೋದ ಬಳಿಕ, ಯಜ್ಞದ ಯಜಮಾನನಾದ ಬಲಿಯ ಅನುಪಸ್ಥಿತಿಯಲ್ಲಿ ಯಜ್ಞವನ್ನು ಮುಂದುವರಿಸಲು ಮೊದಲಿಗೆ ತಕ್ಕ ಪ್ರಾಯಶ್ಚಿತ್ತ ಮಾಡೆಂದು ಶುಕ್ರಾಚಾರ್ಯರಿಗೆ ವಾಮನ ಆದೇಶ ನೀಡುತ್ತಾನೆ. ದೇವೇಂದ್ರನಿಗೆ ಸ್ವರ್ಗದ ಆಧಿಪತ್ಯ ನೀಡುತ್ತಾನೆ.

ಬ್ರಹ್ಮ ಎಲ್ಲ ಲೋಕಗಳಿಗೂ ವಾಮನನನ್ನು ಅಧಿಪತಿಯನ್ನಾಗಿ ಮಾಡಿ ಕಶ್ಯಪ ಅದಿತಿ ದಂಪತಿಗಳಿಗೆ ಸಂತೋಷ ನೀಡುತ್ತಾನೆ. 'ವಿಷ್ಣೋರ್ನು ಕಂ ವೀರ್ಯಾಣಿ ಪ್ರವೋಚಂ' 'ಪರೋ ಮಾತ್ರಯಾ' ಎಂಬ ಋಗ್ವೇದ ಮಂತ್ರಗಳು ವಾಮನನ ಈ ಅದ್ಭುತ ಲೀಲೆಯನ್ನು ಹೊಗಳುತ್ತವೆ.

❖ ❖ ❖

ಅಧ್ಯಾಯ -೨೩

ಅಧ್ಯಾಯ ಸಾರಾಂಶ

ಬ್ರಹ್ಮನ ಕಳೆದ ದಿನಕಲ್ಪದ ಕೊನೆಯಲ್ಲಿ ಅವನ ನಿದ್ರಾಕಾಲ ಬರುತ್ತಿದ್ದಂತೆ ಅವನ ಮುಖದಿಂದ ಹೊರಹೊಮ್ಮುತ್ತಿದ್ದ ವೇದಮಂತ್ರಗಳ ಅಭಿಮಾನಿ ದೇವತೆಗಳನ್ನು ಹಯಗ್ರೀವನೆಂಬ ಅಸುರ ಅಪಹರಿಸಿದ. ಅದು ದಿನಪ್ರಳಯಕಾಲ. ಭೂಮಿ ಅಂತರಿಕ್ಷ ಸ್ವರ್ಗ ಎಂಬ ಮೂರೂ ಲೋಕಗಳೂ ಸುಟ್ಟು ಪ್ರಳಯ ಸಮುದ್ರದಿಂದ ಆವೃತವಾಗಿತ್ತು. ಆಗ ಹರಿ ಮತ್ಸ್ಯಾವತಾರ ತಾಳಿ ಸಮುದ್ರದಲ್ಲಿ ಹಯಗ್ರೀವಾಸುರನನ್ನು ಸಂಹರಿಸಿ ವೇದಗಳನ್ನು ಉದ್ಧಾರ ಮಾಡಿ ಬ್ರಹ್ಮನಿಗೆ ತಂದಿತ್ತ.

ಬಳಿಕ ಚಾಕ್ಷುಷ ಮನ್ವಂತರದ ಕೊನೆಯಲ್ಲಿ ಮೂರು ಲೋಕಗಳು ಪ್ರಳಯಸಮುದ್ರದಲ್ಲಿ ಮುಳುಗುವುದಕ್ಕೆ ಮುನ್ನ ಪ್ರಳಯಕ್ಕೆ ಏಳುದಿನ ಮುಂಚಿತವಾಗಿ ಹರಿ ಇನ್ನೊಮ್ಮೆ ಮತ್ಸ್ಯಾವತಾರ ತಾಳಿದ. ಏಕೆಂದರೆ ಸತ್ಯವ್ರತನೆಂಬ ಮಹಾ ರಾಜರ್ಷಿ ಮತ್ಸ್ಯಮೂರ್ತಿಯನ್ನು ಧ್ಯಾನಿಸುತ್ತ ಕೇವಲ ಜಲಪಾನ ಮಾಡಿ ತಪಸ್ಸು ಮಾಡುತ್ತಿದ್ದ. ಕೃತಮಾಲಾ ನದಿಯಲ್ಲಿ ಜಲತರ್ಪಣಕ್ಕೆ ಬೊಗಸೆಯಿಂದ ಆತ ನೀರನ್ನೆತ್ತಿಕೊಂಡಾಗ ಆ ನೀರಿನಲ್ಲಿ ಚಿನ್ಮಯ ಮತ್ಸ್ಯರೂಪದಿಂದ ಹರಿ ಪ್ರಕಟನಾದ. ರಾಜ ಆ ಪುಟ್ಟ ಮೀನನ್ನು ಬೊಗಸೆಯ ನೀರಿನೊಂದಿಗೆ ಕೆಳಗೆ ನದಿಗೆ ಬಿಟ್ಟ. ಮೀನು ಹೇಳಿತು. 'ರಾಜನೆ ಸಣ್ಣ ಮೀನುಗಳನ್ನು ದೊಡ್ಡ ಮೀನುಗಳು ನುಂಗುತ್ತವೆ. ನಾನು ಭಯಪಡುತ್ತೇನೆ, ನನ್ನನ್ನು ಕಾಪಾಡು'

ರಾಜ ಕರುಣೆಯಿಂದ ಆ ಮೀನನ್ನು ಕಲಶದಲ್ಲಿರಿಸಿಕೊಂಡು ಆಶ್ರಮಕ್ಕೆ ಒಯ್ದ. ಒಂದೇ ರಾತ್ರಿಯಲ್ಲಿ ಆ ಮೀನು ಬೆಳೆದು ದೊಡ್ಡದಾಯಿತು. ಕಲಶ ಸಾಲದಾಯಿತು. ರಾಜ ಅದನ್ನು ದೊಡ್ಡ ಕಡಾಯಿಯಲ್ಲಿ ಹಾಕಿದ. ಒಂದು ಮುಹೂರ್ತದಲ್ಲಿ ಅದು ಬೆಳೆಯಿತು. ಕಡಾಯಿಯೂ ಸಾಲದಾಯಿತು. ರಾಜ ಅದನ್ನು ಒಂದು ಕೆರೆಯಲ್ಲಿ ಬಿಟ್ಟ. ಒಡನೆ ಮೀನು ಇನ್ನೂ ಬೆಳೆದು

ಕೆರೆಯೂ ಸಾಲದೆಂದಿತು. ರಾಜ ಮಡುಗಳಲ್ಲಿ ದೊಡ್ಡ ದೊಡ್ಡ ಜಲಾಶಯಗಳಲ್ಲಿ ಅದನ್ನು ಬಿಟ್ಟರೂ ಅವೂ ಸಾಲದಾದುವು. ಕೊನೆಗೆ ಸಮುದ್ರದಲ್ಲಿಯೇ ಬಿಟ್ಟ.

ಆಗ ಮೀನು ಹೇಳಿತು, 'ರಾಜನೆ ಇಲ್ಲಿ ನನ್ನನ್ನು ದೊಡ್ಡ ದೊಡ್ಡ ಮೊಸಳೆ ತಿಮಿಂಗಿಲಗಳು ನುಂಗಬಹುದು. ನನ್ನನ್ನು ಕಾಪಾಡು'. ರಾಜ ಕೇಳಿದ, 'ಯಾರು ನೀನು? ನನ್ನನ್ನು ಮೀನಿನ ರೂಪದಿಂದ ಮರುಳುಗೊಳಿಸುವ ನೀನಾರು? ನೀನು ಸಾಕ್ಷಾತ್ ಶ್ರೀಹರಿಯೆ. ಏಕೆ ಈ ರೂಪ ಧರಿಸಿರುವೆ?' ಮತ್ಸ್ಯಮೂರ್ತಿ ನುಡಿದ, 'ಇಂದಿನಿಂದ ಏಳನೆ ದಿನದಂದು ಮೂಲೋಕಗಳು ಪ್ರಳಯಜಲಾವೃತವಾಗುವಾಗ ಒಂದು ದೊಡ್ಡ ನೌಕೆ ನಿನ್ನ ಬಳಿಗೆ ಬರುತ್ತದೆ. ಅದರಲ್ಲಿ ಮುಂದಿನ ಮನ್ವಂತರದ ಸೃಷ್ಟಿಗೆ ಬೇಕಾಗುವ ಎಲ್ಲ ಸಸ್ಯ ಬೀಜಗಳು ಪ್ರಾಣಿಗಳು ಸಪ್ತರ್ಷಿಗಳೊಂದಿಗೆ ನೀನು ಕುಳಿತುಕೊ. ಒಂದು ದೊಡ್ಡ ಸರ್ಪದಿಂದ ನೌಕೆಯನ್ನು ನನ್ನ ಕೊಂಬಿಗೆ ಕಟ್ಟು. ಪ್ರಳಯ ಮುಗಿವವರೆಗೂ ನಿನ್ನ ನೌಕೆಯನ್ನು ನಾನು ಕಾಪಾಡುತ್ತೇನೆ' ಎಂದು.

ಬಳಿಕ ಪ್ರಳಯ ಪ್ರಾರಂಭವಾಯಿತು. ಆ ಜಲದಲ್ಲಿ ಲಕ್ಷಗಾವುದ ಗಾತ್ರದ ಒಂದು ಕೊಂಬಿನ ಬಂಗಾರದ ಮೀನಾಗಿ ಮತ್ಸ್ಯಮೂರ್ತಿ ಬಂದ. ರಾಜ ತನ್ನ ನೌಕೆಯನ್ನು ಅವನ ಕೊಂಬಿಗೆ ಕಟ್ಟಿ ಸ್ತೋತ್ರಗೈದ. ಅವನಿಂದ ಮತ್ಸ್ಯಪುರಾಣವನ್ನು ಉಪದೇಶ ಪಡೆದ. ಪ್ರಲಯ ಕಳೆದ ಬಳಿಕ ಆತ ಈಗ ಈ ವೈವಸ್ವತ ಮನ್ವಂತರದಲ್ಲಿ ವೈವಸ್ವತಮನುವಾಗಿ ಹುಟ್ಟಿ ಮನ್ವಂತರವನ್ನು ಆಳುತ್ತಿದ್ದಾನೆ.

❖❖❖

ಸತ್ಯವ್ರತರಾಜ ಮತ್ಸ್ಯಮೂರ್ತಿಯ ಅನುಗ್ರಹದಿಂದ ವೈವಸ್ವತ ಮನುವಾಗಿ ಜನಿಸಿದ. ಅವನು ಹಿಂದೆ ರಾಜನಾಗಿದ್ದಾಗ ಕೃತಮಾಲಾನದಿಯಲ್ಲಿ ಆಹ್ನಿಕ ಮಾಡುತ್ತ ಜಲತರ್ಪಣಕ್ಕೆಂದು ಬೊಗಸೆಯಿಂದ ನೀರೆತ್ತಿಕೊಂಡಾಗ ನೀರಿನೊಂದಿಗೆ ಪುಟ್ಟ ಮೀನಿನ ಮರಿಯಂತೆ ಮತ್ಸ್ಯಮೂರ್ತಿ ಬೊಗಸೆಯಲ್ಲಿ ವ್ಯಕ್ತನಾದ. ರಾಜ ಆ ಮರಿಯೊಂದಿಗೆ ನೀರನ್ನು ನದಿಯಲ್ಲಿ ಬಿಡುವಾಗ ಅದು ಹೇಳಿತು.

ತಮಾಹ ಸಾऽತಿಕರುಣಂ ಮಹಾಕಾರುಣಿಕಂ ನೃಪಮ್ ।
ಯಾದೋಭ್ಯೋ ಜ್ಞಾತಿಘಾತಿಭ್ಯೋ ದೀನಾಂ ಮಾಂ ದೀನವತ್ಸಲ ॥
ಕಥಂ ವಿಸೃಜಸೇ ರಾಜನ್ ಭೀತಾಮಸ್ಮಿನ್ ಸರಿಜ್ಜಲೇ ॥ ೧೪ ॥

ಶ್ರೀಶುಕ ಉವಾಚ

ಸ ಆತ್ಮನೋऽನುಗ್ರಹಾರ್ಥಂ ಪ್ರೀತ್ಯಾ ಮತ್ಸ್ಯವಪುರ್ಧರಮ್ ।
ಅಜಾನನ್ ರಕ್ಷಣಾರ್ಥಾಯ ಶಫರ್ಯಾಃ ಸ ಮನೋ ದಧೇ ॥ ೧೫ ॥

ತಸ್ಯಾ ದೀನತರಂ ವಾಕ್ಯಮಾಶ್ರುತ್ಯ ಸ ಮಹೀಪತಿಃ ।
ಕಲಶಾಪ್ಸು ನಿಧಾಯೈನಾಂ ದಯಾಲುರ್ನಿನ್ಯ ಆಶ್ರಮಮ್ ॥ ೧೬ ॥

ಸಾ ತು ತತ್ರೈಕರಾತ್ರೇಣ ವರ್ಧಮಾನಾ ಕಮಂಡಲೌ ।
ಅಲಬ್ಧ್ವಾತ್ಮಾವಕಾಶಂ ವಾ ಇದಮಾಹ ಮಹೀಪತಿಮ್ ॥ ೧೭ ॥

ನಾಹಂ ಕಮಂಡಲಾವಸ್ಮಿನ್ ಕೃಚ್ಛ್ರಂ ವಸ್ತುಮಿಹೋತ್ಸಹೇ ।
ಕಲ್ಪಯೌಕಃ ಸುವಿಪುಲಂ ಯತ್ರಾಹಂ ನಿವಸೇ ಸುಖಮ್ ॥ ೧೮ ॥

ಸ ಏನಾಂ ತತ ಆದಾಯ ನ್ಯಧಾದೌದಂಚನೋದಕೇ ।
ತತ್ರ ಕ್ಷಿಪ್ತಾ ಮುಹೂರ್ತೇನ ಹಸ್ತತ್ರಯಮವರ್ಧತ ॥ ೧೯ ॥

ಮೀನ ಉವಾಚ

ನ ಮ ಏತದಲಂ ರಾಜನ್ ಸುಖಂ ವಸ್ತುಮುದಂಚನಮ್ ।
ಪೃಥು ದೇಹಿ ಪದಂ ಮಹ್ಯಂ ಯತ್ತ್ವಾऽಹಂ ಶರಣಂ ಗತಾ ॥ ೨೦ ॥

ಶ್ರೀಶುಕ ಉವಾಚ

ತತ ಆದಾಯ ಸಾ ರಾಜ್ಞಾ ಕ್ಷಿಪ್ತಾ ರಾಜನ್ ಸರೋವರೇ ।
ತದಾವೃತ್ಯಾತ್ಮನಾ ಸರ್ವಂ ಮಹಾಮೀನೋऽಭ್ಯವರ್ಧತ ॥ ೨೧ ॥

ಮೀನ ಉವಾಚ

ನೈತನ್ಮೇ ಸ್ವಸ್ತಯೇ ರಾಜನ್ನುದಕಂ ಸಲಿಲೌಕಸಃ ।
ನಿಧೇಹಿ ರಾಜನ್ಯೋಗೇನ ಹ್ರದೇ ಮಾಮವಿದಾಸಿನಿ ॥ ೨೨ ॥

ಶ್ರೀಶುಕ ಉವಾಚ

ಇತ್ಯುಕ್ತಃ ಸೋಽನಯನ್ಮತ್ಸ್ಯಂ ತತ್ರ ತತ್ರಾವಿದಾಸಿನಿ ।
ಜಲಾಶಯೇಽಸಮ್ಮಿತಂ ತಂ ಸಮುದ್ರೇ ಪ್ರಾಕ್ಷಿಪಜ್ಝಷಮ್ ॥ ೨೩ ॥

ಕ್ಷಿಪ್ಯಮಾಣಸ್ತಮಾಹೇದಮಿಹ ಮಾಂ ಮಕರಾದಯಃ ।
ಅದಂತ್ಯತಿಬಲಾ ವೀರ ಮಾಂ ನೇಹೋತ್ಸ್ರಷ್ಟುಮರ್ಹಸಿ ॥ ೨೪ ॥

ಮಹಾದಯಾಳುವಾದ ರಾಜನಿಗೆ ಆ ಮೀನು ಅತಿ ದೈನ್ಯದಿಂದ ನುಡಿಯಿತು, ದೀನವತ್ಸಲನಾದ ರಾಜನೆ, ದೊಡ್ಡ ಮೀನು ಸಣ್ಣ ಮೀನನ್ನು ನುಂಗುತ್ತದೆ. ಆದರಿಂದ ನನಗೆ ಭಯವಾಗುತ್ತಿದೆ. ದೀನನಾದ ನನ್ನನ್ನು ಈ ನದೀನೀರಿನಲ್ಲಿಯೇ ಹೇಗೆ ಬಿಟ್ಟುಬಿಡುವೆ?

ಮೀನು ಹೀಗೆ ಹೇಳಿದಾಗ ರಾಜ ಕರುಣೆಯಿಂದ ಅದನ್ನು ಕಮಂಡಲುವಿನಲ್ಲಿರಿಸಿ ತನ್ನ ಅರಮನೆಗೆ ಒಯ್ದ. ಆದರೆ ಒಂದು ರಾತ್ರಿಯಲ್ಲಿ ಅದು ಬೆಳೆದು ದೊಡ್ಡದಾಯಿತು. ಕಮಂಡಲು ಸಾಲದಾಯಿತು. ರಾಜ ಅದನ್ನು ಒಂದು ಕೊಳಗದ ನೀರಲ್ಲಿ ಇರಿಸಿದ. ಬಳಿಕ ಕೊಳಗವೂ ಸಾಲದಾಯಿತು. ನೂರು ಯೋಜನ ವಿಶಾಲವಾದ ದೊಡ್ಡ ಸರೋವರದಲ್ಲಿ ಬಿಟ್ಟ, ಅಲ್ಲಿಯೂ ಒಂದೇ ದಿನದಲ್ಲಿ ಬೆಳೆದು ಈ ಸರೋವರ ನನಗೆ ಸಾಲದು ಎಂದಿತು. ನದೀನೀರಲ್ಲಿ ಬಿಟ್ಟ, ಅದೂ ಸಾಲದಾಯಿತು. ಸಮುದ್ರಕ್ಕೆ ಬಿಟ್ಟ, ರಾಜನೆ, ನನ್ನನ್ನು ಇಲ್ಲಿ ತಿಮಿಂಗಿಲಗಳು ಮೊಸಳೆಗಳು ನುಂಗಬಹುದು, ನನಗೆ ಭಯವಾಗುತ್ತದೆ ಎಂದಿತು!

ರಾಜನಿಗೆ ಜ್ಞಾನೋದಯವಾಯಿತು. ಈ ಮೀನು ಸಾಧಾರಣ ಮೀನಲ್ಲ, ಸಾಕ್ಷಾತ್ ನಾರಾಯಣನ ಮತ್ಸ್ಯಮೂರ್ತಿ ಎಂದು.

ಇಲ್ಲಿ ಒಂದು ದಿನದಲ್ಲಿ ನೂರಾರು ಯೋಜನಗಾತ್ರಕ್ಕೆ ಬೆಳೆಯಬಲ್ಲ ಮಹಾಶಕ್ತಿ ಉಳ್ಳಮೀನಿಗೆ ಬೇರೆ ಮೀನುಗಳ ಭಯ ಉಂಟೆ? ನಿರ್ಭಯವಾಗಿ ನದಿಯಲ್ಲಿಯೇ ಕ್ಷಣದಲ್ಲಿ ಬೆಳೆದು ಸಮುದ್ರವನ್ನು ಸೇರಬಹುದಿತ್ತು. ಎಂಬ ಪ್ರಶ್ನೆ ಬರುತ್ತದೆ. ಇದಕ್ಕೆ ಸಮಾಧಾನ ಅನಂತಶಕ್ತಿಉಳ್ಳ ಪರಮಾತ್ಮ ಕೇವಲ ಕ್ರೀಡೆಗಾಗಿ ಮೀನಾಗಿ ಬಂದು ರಾಜನಲ್ಲಿ ಆಶ್ರಯವನ್ನು ಬೇಡಿದ್ದಾನೆ ಎಂದು ಮತ್ಸ್ಯಪುರಾಣದಲ್ಲಿಯೇ ಉಕ್ತವಾಗಿದೆ.

ಅನಂತಶಕ್ತಿರ್ಭಗವಾನ್ ಮತ್ಸ್ಯರೂಪೀ ಜನಾರ್ದನಃ ।
ಕ್ರೀಡಾರ್ಥಂ ಯಾಚಯಾಮಾಸ ಸ್ವಯಂ ಸತ್ಯವ್ರತಂ ನೃಪಂ ॥
ಇತಿ ಮಾತ್ಸ್ಯೇ ॥

ಅಪರಿಮಿತ ಶಕ್ತಿಶಾಲಿಯಾದ ಭಗವಾನ್ ಮತ್ಸ್ಯರೂಪಿ ಜನಾರ್ದನ ಕ್ರೀಡೆಗಾಗಿ ತಾನೇ ಸತ್ಯವ್ರತರಾಜನಲ್ಲಿ ಆಶ್ರಯವನ್ನು ಬೇಡಿದನೆಂದು ಮತ್ಸ್ಯ ಪುರಾಣ ಹೇಳಿದೆ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ಅಷ್ಟಮಸ್ಕಂಧೇ
ತ್ರಯೋವಿಂಶೋಽಧ್ಯಾಯಃ

॥ ಅಷ್ಟಮಃ ಸ್ಕಂಧಃ ಸಮಾಪ್ತಃ ॥

॥ ಶ್ರೀಗುರುಭ್ಯೋ ನಮಃ ಹರಿಃ ಓಂ ॥

ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತಃ

ಶ್ರೀಮದ್ ಭಾಗವತತಾತ್ಪರ್ಯನಿರ್ಣಯಃ

ನವಮ ಸ್ಕಂಧಃ

ಅಧ್ಯಾಯ - ೧

ಅಧ್ಯಾಯ ಸಾರಾಂಶ

॥ ಓಂ ನಮೋ ಭಗವತೇ ವಾಸುದೇವಾಯ ಓಂ ॥

ಸೂರ್ಯವಂಶ- ಶ್ರೀಮನ್ನಾರಾಯಣನ ನಾಭಿಕಮಲದಲ್ಲಿ ಜನಿಸಿದ ಬ್ರಹ್ಮನ ಮಾನಸಪುತ್ರ ಮರೀಚಿಮುನಿ. ಅವನ ಪುತ್ರ ಕಶ್ಯಪಮುನಿ. ಇವನಿಂದ ದಕ್ಷ ಕುಮಾರಿ ಅದಿತಿದೇವಿಯಲ್ಲಿ ವಿವಸ್ವಾನ್ ಎಂಬ ಸೂರ್ಯ ಜನಿಸಿದ. ಅವನಿಂದ ಸಂಜ್ಞಾದೇವಿಯಲ್ಲಿ ಹಿಂದಿನ ಮನ್ವಂತರದ ರಾಜಾಸತ್ಯವ್ರತ ವೈವಸ್ವತಮನುವಾಗಿ ಜನಿಸಿದ. ಈತನಿಗೆ ಶ್ರದ್ಧಾದೇವಿಯಲ್ಲಿ ಇಕ್ಷ್ವಾಕು ನೃಗ ಶರ್ಯಾತಿ ದಿಷ್ಟ ಧೃಷ್ಟ ಕರೂಶ ನರಿಷ್ಯಂತ ವೃಷಧ್ರ ನಾಭಾಗ ಮತ್ತು ನಭ ಎಂಬ ಹತ್ತು ಮಂದಿ ಪುತ್ರರು ಜನಿಸಿದರು. ಇವರು ಹುಟ್ಟುವುದಕ್ಕೆ ಮೊದಲು ಮನು ಪುತ್ರಕಾಮನೆಯಿಂದ ಮೈತ್ರಾವರುಣೇಷ್ಟಿಯನ್ನು ಕೈಗೊಂಡ. ಆ ಯಾಗದಲ್ಲಿ ರಾಣಿಯ

ಅಪೇಕ್ಷೆಯಂತೆ ಹೋತೃ ಹೆಣ್ಣುಮಗು ಹುಟ್ಟಲಿ ಎಂದು ಧ್ಯಾನಿಸಿದ್ದರಿಂದ ಇಳೆ ಹುಟ್ಟಿದಳು. ರಾಜನ ಅಪೇಕ್ಷೆ ಗಂಡು ಮಗು ಬೇಕೆಂದಿತ್ತು. ಅದಕ್ಕೆ ವಸಿಷ್ಠರು ಶ್ರೀಹರಿಯನ್ನು ಬೇಡಿ ಇಳೆಯನ್ನು ಸುದ್ಯುಮ್ನ ರಾಜನನ್ನಾಗಿ ಪರಿವರ್ತಿಸಿದರು. ಆದರೆ ಸುದ್ಯುಮ್ನ ಒಮ್ಮೆ ಬೇಟೆಯಾಡುತ್ತ ಮೇರುಪರ್ವತದ ಸುಕುಮಾರವನವನ್ನು ಪ್ರವೇಶಿಸಿ ತಿರುಗಿ ಹೆಣ್ಣಾದ. ಏಕೆಂದರೆ ಆ ವನ ಶಿವಪಾರ್ವತಿಯರ ವಿಹಾರ ಸ್ಥಳವಾಗಿತ್ತು. ಅಲ್ಲಿಗೆ ಬಂದ ಎಲ್ಲ ಗಂಡಸರೂ ಹೆಣ್ಣಾಗುತ್ತಿದ್ದರು.

❖❖❖

ಅಧ್ಯಾಯ - ೨

ಅಧ್ಯಾಯ ಸಾರಾಂಶ

ಒಮ್ಮೆ ಸುಕುಮಾರವನದಲ್ಲಿ ಶಿವನನ್ನು ಕಾಣಲು ಮುನಿಗಳು ಬಂದಾಗ ಶಿವ ದೇವಿಯೊಡನೆ ಏಕಾಂತದಲ್ಲಿ ವಿಹರಿಸುತ್ತಿದ್ದ. ದೇವಿ ನಾಚಿದಳು. ಏಕಾಂತಕ್ಕೆ ಭಂಗ ತಂದೆವೆಂದು ಕೊಂಡು ಆ ಪಾಪದ ಪರಿಹಾರಕ್ಕಾಗಿ ಮುನಿಗಳು ಬದರಿಯ ನರನಾರಾಯಣಾಶ್ರಮಕ್ಕೆ ನಡೆದರು. ಇತ್ತ ದೇವಿಯ ಸಮಾಧಾನಕ್ಕಾಗಿ ಶಿವ 'ಈ ವನದೊಳಗೆ ಬರುವವರೆಲ್ಲ ಹೆಣ್ಣುಗಳಾಗಲಿ' ಎಂದು ಶಾಪವಿತ್ತ. ಹೀಗೆ ಸುದ್ಯುಮ್ನ ಬಂದು ಹೆಣ್ಣಾದ.

ಈ ಹೆಣ್ಣನ್ನು ಬುಧ ಮದುವೆಯಾಗಿ ಅವಳಲ್ಲಿ ಪುರೂರವನೆಂಬ ಮಗನನ್ನು ಪಡೆದ. ರಾಜಾ ಸುದ್ಯುಮ್ನನ ಈ ಪರಿಸ್ಥಿತಿಯನ್ನು ಕಂಡು ವಸಿಷ್ಠರು ಶಿವನನ್ನು ಬೇಡಿಕೊಂಡರು. ಶಿವ ತನ್ನ ಶಾಪವೂ ನಿಜವಾಗಬೇಕು, ಮುನಿಯ ಬೇಡಿಕೆಯೂ ಈಡೇರಬೇಕೆಂದು, ಸುದ್ಯುಮ್ನ ಒಂದು ತಿಂಗಳು ಗಂಡಾಗಿರಲಿ ಇನ್ನೊಂದು ತಿಂಗಳು ಹೆಣ್ಣಾಗಿರಲಿ ಎಂದ. ಅದರಂತೆ ಪುರುಷತ್ವವನ್ನು ಹೊಂದಿ ಸುದ್ಯುಮ್ನ ರಾಜ್ಯವಾಳಿದ. ಉತ್ಕಲ ಗಯ ವಿಮಲ ಎಂಬ ಮೂವರು ಪುತ್ರರನ್ನು ಪಡೆದ. ಇವರು ದಕ್ಷಿಣಾಪಥಕ್ಕೆ ಅರಸರಾದರು. ಸುದ್ಯುಮ್ನ ಪ್ರತಿಷ್ಠಾನ ನಗರಿಯಲ್ಲಿ ರಾಜ್ಯವಾಳಿದ.

ತಿಂಗಳು ಬಿಟ್ಟು ತಿಂಗಳಲ್ಲಿ ಆತ ಹೆಣ್ಣಾಗುತ್ತಿದ್ದುದರಿಂದ ಪ್ರಜೆಗಳಿಗೆ ಸದಾ ರಾಜದರ್ಶನವಿಲ್ಲವಾಯಿತು. ಹೀಗಾಗಿ ಅವರಿಗೆ ಪೂರ್ತಿ ತೃಪ್ತಿಯೆನಿಸಲಿಲ್ಲ. ಮುಂದೆ ವೃದ್ಧಾಪ್ಯದಲ್ಲಿ ರಾಜ ಪುರೂರವನಿಗೆ ರಾಜ್ಯಸಿಂಹಾಸನವನ್ನಿತ್ತು ಕಾಡಿಗೆ ನಡೆದ.

❖❖❖

ಅಧ್ಯಾಯ - ೩

ಅಧ್ಯಾಯ ಸಾರಾಂಶ

ಸುದ್ಯುಮ್ನ ಹೊರಟುಹೋದ ಮೇಲೆ ವೈವಸ್ವತಮನು ಇಕ್ಷ್ವಾಕು ಮುಂತಾದ ಹತ್ತುಮಂದಿ ಪುತ್ರರನ್ನು ಪಡೆದ. ಅವರಲ್ಲಿ ಎಂಟನೆಯವನು ವೃಷಧ್ರ ವಸಿಷ್ಠರ ಹಸುಗಳನ್ನು ನೋಡಿ ಕೊಳ್ಳುತ್ತಿದ್ದ. ಒಮ್ಮೆ ರಾತ್ರಿ ಮಳೆ ಸುರಿಯುತ್ತಿದ್ದಾಗ ಒಂದು ಹಸುವನ್ನು ಹುಲಿ ಹಿಡಿಯಿತು. ಆಗ ವೃಷಧ್ರ ಹುಲಿಯೆಂದು ತಿಳಿದು ಹಸುವನ್ನೇ ಕೊಂದುಬಿಟ್ಟ. ಹುಲಿ ಭಯದಿಂದ ಓಡಿಹೋಯಿತು. ವಸಿಷ್ಠರು ಶಾಪವಿತ್ತರು. 'ಗೋವಧೆ ಮಾಡಿದ್ದರಿಂದ ನೀನು ಶೂದ್ರನಾಗು' ಎಂದು. ಗುರುಶಾಪವನ್ನು ಸ್ವೀಕರಿಸಿ ಆತ ಸರ್ವಸಂಗ ಪರಿತ್ಯಾಗ ಮಾಡಿ ಅವಧೂತನಾಗಿ ಸಂಚರಿಸುತ್ತ ಕಾಳ್ಗಿಚ್ಚನ್ನು ಪ್ರವೇಶಿಸಿ ಪರಮಾತ್ಮನನ್ನು ಹೋಗಿ ಸೇರಿದ.

ಮನುವಿನ ಆರನೇ ಪುತ್ರನಾದ ಕರೂಶನಿಂದ ಕಾರೂಶರೆಂಬ ರಾಜರು ಹುಟ್ಟಿ ಉತ್ತರಾಪಥವನ್ನು ಆಳಿದರು. ಐದನೇ ಪುತ್ರನಾದ ಧೃಷ್ಟನ ಪುತ್ರರು ಬ್ರಾಹ್ಮಣರಾದರು. ಕೊನೆಯ ಪುತ್ರನಾದ ನಭನ ಪುತ್ರ ಸ್ವಾತಿಮೂಲ. ಅವನಿಂದ ವಸು, ವಸುವಿನಿಂದ ಓಘವಾನ್ ಜನಿಸಿದರು. ಏಳನೆ ಮಗನಾದ ನರಿಷ್ಯಂತನ ವಂಶ ಚಿತ್ರಸೇನ ದಕ್ಷ ಮೀಢ್ವ ಕೂರ್ಚ ಇಂದ್ರಸೇನ ವೀತಿಹೋತ್ರ ಸತ್ಯಶ್ರವ ಉರುಶ್ರವ ದೇವದತ್ತ ಜಾತೂಕರ್ಣ್ಯ ರಿಂದ ಕ್ರಮವಾಗಿ ಬೆಳೆಯಿತು. ಜಾತೂಕರ್ಣ್ಯ ಅಗ್ನಿಯ ಅವತಾರ. ಅವನಿಂದ ಆಗ್ನಿವೇಶ್ಯಾಯನರೆಂಬ ಬ್ರಾಹ್ಮಣರ ವಂಶ ಉದಿಸಿತು.

ಮನುವಿನ ನಾಲ್ಕನೆ ಪುತ್ರನಾದ ದಿಷ್ಟನ ವಂಶ ನಾಭಾಗ ಹಲಂಧನ, ವತ್ಸಪ್ರೀತಿ ಪ್ರಾಂಶು ಪ್ರಮತಿ ಖನಿತ್ರ ಚಾಕ್ಷುಷ ವಿವಿಂಶತಿ ರಂಹ ಖನಮಿತ್ರ ಕರಂಧಮ ಅವೀಕ್ಷಿತ ಮರುತ್ತ ಹೀಗೆ ಕ್ರಮವಾಗಿ ಬೆಳೆಯಿತು. ಮರುತ್ತನಿಂದ ಅಂಗೀರಸನ ಪುತ್ರ ಮಹಾಯೋಗಿ ಸಂವರ್ತ ಮಾಡಿಸಿದ ಯಜ್ಞ ಅನುಪಮವಾಗಿತ್ತು. ಇಂದ್ರಾದಿ ಸಮಸ್ತ ದೇವತೆಗಳು ಪ್ರತ್ಯಕ್ಷವಾಗಿ ಅದರಲ್ಲಿ ಭಾಗವಹಿಸಿದ್ದರು. ಅವನಿಂದ

ಮುಂದೆ ದಮ ರಾಜ್ಯವರ್ಧನ, ಸುಧೃತಿ ನರ ಕೇವಲ ಬಂಧುಮಾನ್ ವೇಗವಾನ್ ಬುಧ ತೃಣಬಿಂದು ಹೀಗೆ ಕ್ರಮವಾಗಿ ವಂಶ ಬೆಳೆಯಿತು. ತೃಣಬಿಂದುರಾಜನಿಗೆ ಅಲಂಬುಸಾ ಎಂಬ ಅಪ್ಸರೆ ರಾಣಿಯಾದಳು. ಮೂರು ಮಂದಿ ಪುತ್ರರೂ ಐಳಿವಿಳಾ ಎಂಬ ಕನ್ಯೆಯೂ ಜನಿಸಿದರು. ಈ ಕನ್ಯೆ ವಿಶ್ರವಸ್ ಮುನಿಯಿಂದ ಕುಬೇರನಿಗೆ ಜನ್ಮವಿತ್ತಳು. ವಿಶಾಲ ಶೂನ್ಯಬಂಧು ಧೂಮ್ರಕೇತು ಎಂದು ಮೂವರು ಪುತ್ರರು. ವಿಶಾಲನಿಂದ ಹೇಮಚಂದ್ರ ಧೂಮ್ರಾಕ್ಷ ಸಹದೇವ ಕೃಶಾಶ್ವ ಸೋಮದತ್ತ ಸುಮತಿ ಜನಮೇಜಯ ಎಂದು ಕ್ರಮವಾಗಿ ವಂಶ ಬೆಳೆಯಿತು.

❖❖❖

ಅಧ್ಯಾಯ - ೪

ಅಧ್ಯಾಯ ಸಾರಾಂಶ

ವೈವಸ್ವತಮನುವಿನ ಮೂರನೆ ಪುತ್ರ ಶರ್ಯಾತಿ. ಈತ ವೇದದಲ್ಲಿ ಮಹಾಪ್ರವೀಣ. ಅಂಗಿರಸರ ಸತ್ರದಲ್ಲಿ ಸೋಮರಸವನ್ನು ಹೋಮಿಸುವ ಎರಡನೆ ದಿನ ಹೇಳಬೇಕಾದ ಮಂತ್ರ ಯಾವುದೆಂಬುದರ ಬಗ್ಗೆ ಮುನಿಗಳಿಗೆ ಗೊಂದಲ ಉಂಟಾದಾಗ ಈತ ಅದನ್ನು ಹೇಳಿದ.

ಇವನ ಕನ್ಯೆ ಸುಕನ್ಯೆ ಒಮ್ಮೆ ಚ್ಯವನ ಮುನಿಯ ಆಶ್ರಮಪ್ರದೇಶದಲ್ಲಿ ಹುತ್ತದೊಳಗೆ ಹೊಳೆಯುತ್ತಿದ್ದ ಎರಡು ಜ್ಯೋತಿಗಳನ್ನು ಕಂಡು ಕುತೂಹಲದಿಂದ ಮುಳ್ಳಿನಿಂದ ಚುಚ್ಚಿದಳು. ಒಡನೆ ರಕ್ತಸ್ರಾವವಾಯಿತು. ರಾಜನ ಸೈನಿಕರಿಗೆಲ್ಲರಿಗೂ ಮಲಮೂತ್ರಗಳು ಬಂದಾದುವು. ಆಶ್ರಮದಲ್ಲಿ ಯಾರಿಂದಲೋ ಅಪಚಾರವಾಗಿರಬೇಕೆಂದು ರಾಜ ವಿಚಾರಣೆಗೆ ತೊಡಗಿದಾಗ ಸುಕನ್ಯೆ ತಾನು ಮಾಡಿದ ಕೃತ್ಯವನ್ನು ಹೇಳಿಕೊಂಡಳು. ಹುತ್ತದೊಳಗೆ ಕುಳಿತಿದ್ದ ಮುನಿಯ ಕಣ್ಣುಗಳನ್ನು ಮಗಳು ಚುಚ್ಚಿದ್ದಳೆಂದು ತಿಳಿದು ರಾಜ ಭಯದಿಂದ ಮಗಳನ್ನೆ ಮುನಿಗೆ ಮದುವೆ ಮಾಡಿಕೊಟ್ಟ.

ಸುಕನ್ಯೆ ಪತಿಸೇವೆ ಮಾಡಿ ಅವನ ಮನಸ್ಸನ್ನು ಗೆದ್ದಳು. ಅವಳ ಸಂತೋಷಕ್ಕಾಗಿ ಮುನಿ ಅಶ್ವಿನೀದೇವತೆಗಳಲ್ಲಿ ತನಗೆ ತಾರುಣ್ಯವನ್ನು ಕೇಳಿಕೊಂಡ. ಅದಕ್ಕೆ ಪ್ರತಿಯಾಗಿ ಅವರಿಗೆ ಯಜ್ಞದಲ್ಲಿ ಸೋಮಾಹುತಿ ಕೊಡಿಸುವೆನೆಂದ. ಅವರು ವೈದ್ಯರಾಗಿದ್ದರಿಂದ ಸೋಮಾಹುತಿ ಇರಲಿಲ್ಲ. ಅದರಿಂದ ಅವರು ಒಪ್ಪಿ ಸಿದ್ಧರಿಂದ ನಿರ್ಮಿತವಾದ ಒಂದು ಕೊಳದಲ್ಲಿ ಮುನಿಯ ಕೈಹಿಡಿದು ಜೊತೆಗೆ ಮುಳುಗಿ ಎದ್ದರು. ಎದ್ದಾಗ ಸ್ಫುರದ್ರೂಪಿಗಳಾದ ಮೂವರು ತರುಣರು ಒಂದೇ ರೀತಿ ಕಂಡುಬಂದರು. ಸುಕನ್ಯೆ ಅವರಲ್ಲಿ ತನ್ನ ಪತಿ ಯಾರೆಂದು ತಿಳಿಯದೆ ಅಶ್ವಿನೀದೇವತೆಗಳನ್ನೇ ಮೊರೆಹೋದಳು. ಅವಳ ಪಾತಿವ್ರತ್ಯಕ್ಕೆ ಮೆಚ್ಚಿ ಅವರು ಅವಳಿಗೆ ಪತಿಯನ್ನು ತೋರಿಸಿ ಸ್ವರ್ಗಕ್ಕೆ ತೆರಳಿದರು.

ಒಮ್ಮೆ ಶರ್ಯಾತಿ ಮುನಿಯ ಆಶ್ರಮಕ್ಕೆ ಬಂದು ನೋಡಿದಾಗ ಮಗಳು ಯಾರೋ ಒಬ್ಬ ತರುಣನ ಜೊತೆಗಿದ್ದುದನ್ನು ಕಂಡು ತುಂಬ ಅಸಮಾಧಾನದಿಂದ ಆಕ್ಷೇಪಿಸಿದ. ಮಗಳು ನಿಜಸಂಗತಿ ಹೇಳಿದಾಗ ಬಹಳ ಸಂತೋಷಪಟ್ಟ. ಚ್ಯವನಮುನಿ ಅಶ್ವಿನೀದೇವತೆಗಳಿಗೆ ತನ್ನ ತಪಃಪ್ರಭಾವದಿಂದ ಶರ್ಯಾತಿಯ ಯಜ್ಞದಲ್ಲಿ ಸೋಮಾಹುತಿ ನೀಡಿದ್ದನ್ನು ದೇವೇಂದ್ರ ನೋಡಿ ಸಹಿಸದೆ ವಜ್ರಾಯುಧವನ್ನೆತ್ತಿದ. ಮುನಿ ವಜ್ರಾಯುಧ ಹಿಡಿದ ಇಂದ್ರನ ಬಾಹುವನ್ನು ಸ್ತಂಭನ ಮಾಡಿದ. ಆಗ ಎಲ್ಲ ದೇವತೆಗಳೂ ಅಶ್ವಿನೀ ದೇವತೆಗಳಿಗೆ ಸೋಮಾಹುತಿ ನೀಡುವುದನ್ನು ಸಮ್ಮತಿಸಿದರು.

ಉತ್ತಾನಬರ್ಹಿ ಆನರ್ತ ಭೂರಿಷೇಣ ಎಂದು ಶರ್ಯಾತಿಗೆ ಮೂವರು ಪುತ್ರರು. ಆನರ್ತನ ಪುತ್ರ ರೇವತ. ರೇವತನೆ ಸಮುದ್ರಮಧ್ಯದಲ್ಲಿ ಕುಶಸ್ಥಲೀ ನಗರ ನಿರ್ಮಾಣ ಮಾಡಿ ಆನರ್ತ ಮುಂತಾದ ದೇಶಗಳನ್ನು ಆಳಿದವ. ರೇವತನ ಪುತ್ರ ಕುಕುದ್ಮಿ. ಈತ ತನ್ನ ಮಗಳಾದ ರೇವತಿಗೆ ತಕ್ಕ ವರನಾರೆಂದು ಬ್ರಹ್ಮನನ್ನು ಕೇಳಿ ತಿಳಿಯಲು ಸತ್ಯಲೋಕಕ್ಕೆ ಹೋದಾಗ ಅಲ್ಲಿ ಗಂಧರ್ವಗಾನ ನಡೆಯುತ್ತಿತ್ತು. ಒಂದು ಕ್ಷಣ ನಿಂತು ಗಾನ ಮುಗಿದ ಬಳಿಕ ಬ್ರಹ್ಮನನ್ನು ಕೇಳಿದಾಗ ಬ್ರಹ್ಮ ನಕ್ಕು ನುಡಿದ. 'ನೀನಿಲ್ಲಿಗೆ ಬಂದಂದಿನಿಂದ ಇಪ್ಪತ್ತೇಳು ಚತುರ್ಯುಗಗಳೇ ಕ್ಷಣದಂತೆ ಕಳೆದು ಹೋಗಿವೆ. ನಿನ್ನ ಕಾಲದ ರಾಜಕುಮಾರರು ಈಗ ಭೂಲೋಕದಲ್ಲಿ ಯಾರೂ ಇಲ್ಲ. ಆದರೂ ಹರಿಯ ಶುಕ್ಲಕೇಶಾವೇಶದಿಂದ ಬಲಿಷ್ಠನಾದ ಬಲರಾಮನಿದ್ದಾನೆ. ಅವನಿಗೆ ನಿನ್ನ ಮಗಳನ್ನು ಮದುವೆ ಮಾಡಿಕೊಡು' ಕಕುದ್ಮಿ ಮಗಳನ್ನು ಬಲರಾಮನಿಗಿತ್ತು ತಪಸ್ಸಿಗಾಗಿ ಬದರಿಯ ನರನಾರಾಯಣಾಶ್ರಮಕ್ಕೆ ನಡೆದ.

❖❖❖

ಅಧ್ಯಾಯ - ೫

ಅಧ್ಯಾಯ ಸಾರಾಂಶ

ವೈವಸ್ವತಮನುವಿನ ಒಂಬತ್ತನೆ ಪುತ್ರ ನಾಭಾಗ. ಗುರುಕುಲದಲ್ಲಿದ್ದಾಗ ಆತ ಜ್ಞಾನಿಯಾಗಿ ನೈಷ್ಠಿಕ ಬ್ರಹ್ಮಚರ್ಯ ದಲ್ಲಿರುವವನೆಂದು ಬಗೆದು ತಂದೆಯ ಆಸ್ತಿಯನ್ನೆಲ್ಲ ಸೋದರರು ತಾವೇ ಹಂಚಿಕೊಂಡರು. ನಾಭಾಗ ಬಂದು ಕೇಳಿದಾಗ ತಂದೆ 'ಮಗು, ಅಂಗಿರಸರ ಸತ್ರಯಾಗದಲ್ಲಿ ಆರನೆ ಸೋಮಾಹುತಿ ದಿನ ಹೇಳಬೇಕಾದ ಮಂತ್ರವನ್ನು ಅವರು ಮರೆಯುತ್ತಾರೆ, ನೀನು ಅದನ್ನು ಶಂಸನ ಮಾಡು. ಅವರು ನಿನಗೆ ಯಜ್ಞಶೇಷವಾದ ಸಂಪತ್ತನ್ನು ನಿನಗೆ ನೀಡುವರು' ಎಂದ. ನಾಭಾಗ ಹಾಗೇ ಮಾಡಿದ. ಅವರು ಯಜ್ಞದಲ್ಲಿ ವಿನಿಯೋಗಿಸಿ ಉಳಿದ ಸಂಪತ್ತನ್ನೆಲ್ಲ ಆತನಿಗೆ ನೀಡಿ ಸ್ವರ್ಗಕ್ಕೆ ಹೊರಟುಹೋದರು.

ಆತ ಆ ಸಂಪತ್ತನ್ನು ಸ್ವೀಕರಿಸಲು ಹೊರಟಾಗ ಕಪ್ಪುಮೈಯ ಓರ್ವವ್ಯಕ್ತಿ ಬಂದು 'ಈ ಸಂಪತ್ತು ನನಗೇ ಸೇರಿದುದು. ಇದರ ಬಗ್ಗೆ ನಿರ್ಣಯಕ್ಕೆ ನಿನ್ನ ತಂದೆಯನ್ನೇ ಕೇಳು' ಎಂದ. ನಾಭಾಗ ತಂದೆಯ ಬಳಿಗೆ ಬಂದು ನಡೆದ ಸಂಗತಿಯನ್ನು ಹೇಳಿದಾಗ ತಂದೆ ನುಡಿದ, 'ಮಗು, ಆತ ಹೇಳಿದ್ದು ನಿಜ. ಅವನು ಸಾಕ್ಷಾದ್ ರುದ್ರದೇವ. ಯಜ್ಞಶಾಲೆಯಲ್ಲಿ ಉಳಿದ ಸಂಪತ್ತೆಲ್ಲ ರುದ್ರನಿಗೇ ಸೇರಬೇಕೆಂದು ದಕ್ಷಯಜ್ಞ ಪ್ರಸಂಗದಲ್ಲಿ ನಿರ್ಣಯವಾಗಿದೆ. ಆದರೆ ಅವನು ಅದನ್ನು ನಿನಗೇ ನೀಡುತ್ತಾನೆ ಹೋಗು.' ನಾಭಾಗ ಹಿಂತಿರುಗಿ ಬಂದು ಯಜ್ಞಶಾಲೆಯಲ್ಲಿ ರುದ್ರನನ್ನು ಕಂಡು 'ಈ ಸಂಪತ್ತು ನೀನು ಹೇಳಿದಂತೆ ನಿನಗೇ ಸೇರಿದ್ದು, ನನ್ನನ್ನು ಕ್ಷಮಿಸಿ ಅನುಗ್ರಹ ಮಾಡು' ಎಂದು ಬೇಡಿದ. ರುದ್ರ ಸಂತುಷ್ಟನಾಗಿ ಆತನಿಗೆ ವೇದಮಂತ್ರಗಳೂ ಅವುಗಳ ಅರ್ಥಗಳೂ ಅಧ್ಯಯನವಿಲ್ಲದೆಯೇ ಮನಸ್ಸಿಗೆ ಹೊಳೆಯುವಂತೆ ಅನುಗ್ರಹಿಸಿದ. ಮತ್ತು ಆ ಸಂಪತ್ತನ್ನೂ ಅವನಿಗೇ ನೀಡಿದ.

❖❖❖

ಅಧ್ಯಾಯ - ೬

ಅಧ್ಯಾಯ ಸಾರಾಂಶ

ನಾಭಾಗನಿಂದ ಅಂಬರೀಷ ಜನಿಸಿದ. ಅವನು ಮಹಾ ಭಗವದ್ಭಕ್ತ. ಅವನ ಭಕ್ತಿಗೆ ಒಲಿದ ಶ್ರೀಹರಿ ಅವನ ರಕ್ಷಣೆಗೆ ಸುದರ್ಶನ ಚಕ್ರವನ್ನು ನೀಡಿದ್ದ. ಅವನು ಒಮ್ಮೆ ಏಕಾದಶೀ ಉಪವಾಸ ಮಾಡಿ ದ್ವಾದಶಿಯಂದು ಹರಿಪೂಜೆ ಮಾಡಿ ಬ್ರಾಹ್ಮಣರಿಗೆ ಅರವತ್ತು ಕೋಟಿ ಗೋದಾನ ಮಾಡಿ ಅನ್ನದಾನವನ್ನೂ ಮಾಡಿ ಪಾರಣಕ್ಕೆ ಹೊರಟಾಗ ದುರ್ವಾಸರು ಬಂದರು. ರಾಜ ಆದರದಿಂದ ಸ್ವಾಗತಿಸಿ ಭೋಜನ ಮಾಡಲು ಪ್ರಾರ್ಥಿಸಿದ. ಆದರೆ ಅವರು ಸ್ನಾನ ಮಾಡಲು ಯಮುನಾನದಿಗೆ ಹೋದರು.

ಇತ್ತ ಪಾರಣಕ್ಕೆ ದ್ವಾದಶಿ ಅರ್ಧ ಮೂಹೂರ್ತಮಾತ್ರ ಉಳಿದಿತ್ತು. ಅವರಿಗಿಂತ ಮೊದಲು ತಾನು ಉಂಡರೆ ಬ್ರಾಹ್ಮಣಾತಿಕ್ರಮದೋಷ. ಅವರಿಗಾಗಿ ಕಾದು ಕುಳಿತರೆ, ಸಕಾಲದಲ್ಲಿ ಪಾರಣ ಮಾಡದಿದ್ದರೆ ವ್ರತಲೋಪ ದೋಷ. ಅದಕ್ಕೆ ಬ್ರಾಹ್ಮಣರ ಅನುಮತಿ ಪಡೆದು ರಾಜ ಜಲಪಾರಣ ಮಾಡಿದ. ಆದರಿಂದ ವ್ರತಲೋಪವೂ ಇಲ್ಲ, ಬ್ರಾಹ್ಮಣಾತಿಕ್ರಮಣ ದೋಷವೂ ಇಲ್ಲ, ಎಂದು.

ಆದರೆ ದುರ್ವಾಸರು ಇದಕ್ಕೆ ತುಂಬ ಕೋಪಗೊಂಡು ಜಟೆಯನ್ನು ಕಿತ್ತು ಅದರಿಂದ ಒಂದು ಕೃತ್ರಿಮದೇವತೆಯನ್ನು ಅಂಬರೀಷನ ವಧೆಗಾಗಿ ನಿರ್ಮಿಸಿದರು. ಆಗ ವಿಷ್ಣುಚಕ್ರ ಬಂದು ಆ ಕೃತ್ರಿಮದೇವತೆಯನ್ನು ಸುಟ್ಟು ದುರ್ವಾಸರನ್ನು ಅಟ್ಟಿಸಿಕೊಂಡು ಬಂದಿತು. ದುರ್ವಾಸರು ಪ್ರಾಣಭಯದಿಂದ ಬ್ರಹ್ಮರುದ್ರರನ್ನು ಮೊರೆಹೊಕ್ಕರೂ ಪ್ರಯೋಜನವಾಗಲಿಲ್ಲ. ವಿಷ್ಣುವಿನ ಬಳಿಗೆ ಹೋದರೆ ಅವನೂ 'ನಾನು ಭಕ್ತಪರಾಧೀನ. ಅದರಿಂದ ನೀನು ಭಕ್ತ ಅಂಬರೀಷನನ್ನೇ ಮೊರೆ ಹೋಗಬೇಕು' ಎಂದುಬಿಟ್ಟ.

ಮುನಿ ತಿರುಗಿ ಅಂಬರೀಷನ ಬಳಿಗೇ ಬಂದು ಕಾಲು ಹಿಡಿದು 'ರಕ್ಷಿಸು' ಎಂದರು. ರಾಜ ಚಕ್ರವನ್ನು ಪ್ರಾರ್ಥಿಸಿದಾಗ ಅದು ಶಾಂತವಾಯಿತು. ಒಂದು ವರ್ಷಕಾಲವನ್ನು ಮುನಿ ಪ್ರಪಂಚದ

ಮೂಲೆಮೂಲೆಗಳಲ್ಲಿ ತಿರುಗುತ್ತ ಕಳೆದಿದ್ದರು. ಇತ್ತ ರಾಜ ಆ ಕಾಲದಲ್ಲಿ ಕೇವಲ ನೀರು ಕುಡಿಯುತ್ತಿದ್ದ. ಈಗ ಮುನಿಗೆ ಭೋಜನ ನೀಡಿ ತಾನೂ ಉಂಡ. ಮುನಿ ಪ್ರೀತಿಯಿಂದ ಆತನನ್ನು ಹರಸಿ ಬ್ರಹ್ಮಲೋಕಕ್ಕೆ ತೆರಳಿದರು. ರಾಜ ಅಶ್ವಮೇಧಾದಿ ಯಾಗಗಳಿಂದ ಹರಿಯನ್ನು ಆರಾಧಿಸುತ್ತ ವೃದ್ಧಾಪ್ಯದಲ್ಲಿ ಮಕ್ಕಳಿಗೆ ರಾಜ್ಯವನ್ನು ಒಪ್ಪಿಸಿ ಕಾಡಿಗೆ ಹೊರಟುಹೋದ.

❖ ❖ ❖

ಅಂಬರೀಷ ರಾಜ ದುರ್ವಾಸರನ್ನೂ ಮಣಿಸಿ ಭಕ್ತಿಯಲ್ಲಿ ಬ್ರಹ್ಮಾದಿಗಳನ್ನೂ ಮೀರಿಸಿದನೆಂದು ಶುಕಮನಿ ಪರೀಕ್ಷಿತನಿಗೆ ಹೇಳುತ್ತಾರೆ.

ಏವಂವಿಧಾನೇಕಗುಣಃ ಸ ರಾಜಾ
ಪರಾತ್ಮನಿ ಬ್ರಹ್ಮಣಿ ವಾಸುದೇವೇ ।
ಕ್ರಿಯಾಕಲಾಪೈಃ ಸಮುವಾಹ ಭಕ್ತಿಂ

ಯಯಾ ವಿರಿಂಚಾದಿಮಧಶ್ಚಕಾರ ॥ ೮೫ ॥

ಇಂಥ ಅನೇಕ ಗುಣಶಾಲಿಯಾದ ಅಂಬರೀಷ ರಾಜ ಅಶ್ವಮೇಧ ಮುಂತಾದ ಸತ್ಕಾರ್ಯಕಲಾಪಗಳನ್ನು ಪರಮಾತ್ಮ ಪರಬ್ರಹ್ಮ ವಾಸುದೇವನಲ್ಲಿ ಅರ್ಪಿಸುತ್ತ ಚೆನ್ನಾಗಿ ಭಕ್ತಿಯನ್ನು ಸಂಪಾದಿಸಿದ. ಭಕ್ತಿಯಲ್ಲಿ ಬ್ರಹ್ಮಾದಿ ದೇವತೆಗಳನ್ನೂ ಮೀರಿಸಿದ.

ಇಲ್ಲಿ ಬ್ರಹ್ಮಾದಿ ದೇವತೆಗಳನ್ನೂ ಅಂಬರೀಷ ರಾಜ ಭಕ್ತಿಯಲ್ಲಿ ಮೀರಿಸಿದನೆಂಬುದು ಕೇವಲ ಪ್ರಶಂಸೆ. ಏಕೆಂದರೆ ಅಂಬರೀಷ ಒಬ್ಬ ಮನುಷ್ಯ. ಮನುಷ್ಯನೆಂದೂ ದೇವತೆಗಳನ್ನು ಭಕ್ತಿಯಲ್ಲಿ ಮೀರಿಸಲಾರ. ಮನುಷ್ಯರಲ್ಲಿ ತತ್ತ್ವಾಭಿಮಾನಿಗಳಾಗಿದ್ದು ಧರ್ಮಮಾರ್ಗದಲ್ಲಿ ಪ್ರೇರಿಸುವವರು ದೇವತೆಗಳು. ಅವರ ಪ್ರೇರಣೆಯಿಂದಲೇ ಮನುಷ್ಯರು ಭಕ್ತಿಸಾಧನೆ ಮಾಡಿಕೊಳ್ಳಬೇಕು. ಕಥೆಯಲ್ಲಿ ಮೇಲುನೋಟಕ್ಕೆ ಅಂಬರೀಷ ಬ್ರಹ್ಮಾದಿಗಳನ್ನೂ ಭಕ್ತಿಯಲ್ಲಿ ಮೀರಿಸಿದಂತೆ ಕಾಣುತ್ತದೆ. ಆ ಅಭಿಪ್ರಾಯದಿಂದ ಬ್ರಹ್ಮಾದಿಗಳನ್ನು ಮೀರಿಸಿದನೆಂದಿದೆ. ವಸ್ತುತಃ 'ವಿರಿಂಚಾದಿ' ಎಂಬ ಭಾಗವತದಲ್ಲಿರುವ ಶಬ್ದಕ್ಕೆ ವಿರಿಂಚನೇ ಆದಿಕಾರಣವಾಗಿ ಉಳ್ಳ ಮಾನವಲೋಕ ಎಂದರ್ಥ. ಉಳಿದ ಎಲ್ಲ ಮಾನವರನ್ನು ಅಂಬರೀಷ ಮೀರಿಸಿದ್ದ. ಗರುಡಪುರಾಣ ಅಂಬರೀಷ ವೃತ್ತಾಂತದ ಆಂತರ್ಯವನ್ನು ಹೀಗೆ ತೆರೆದು ತೋರಿಸಿದೆ-

ಬ್ರಹ್ಮಾದಿಭಕ್ತಿಕೋಟ್ಯಂಶಾದಂಶೋ ನೈವಾಂಬರೀಷಕೇ ।
ನೈವಾನ್ಯಸ್ಯ ಚ ಕಸ್ಯಾಪಿ ।

'ಬ್ರಹ್ಮಾದಿ ದೇವತೆಗಳಲ್ಲಿರುವ ವಿಷ್ಣುಭಕ್ತಿಯ ಕೋಟ್ಯಂಶದ ಅಂಶವೂ ಕೂಡ ಅಲ್ಪಮಾನವನಾದ ಅಂಬರೀಷನಲ್ಲಿ ಸರ್ವಥಾ ಇರಲಿಲ್ಲ. ಬೇರೆ ಮಾನವರಿಗೂ ಯಾರಿಗೂ ಇದೇರೀತಿ ಬ್ರಹ್ಮಾದಿಗಳ ಭಕ್ತಿಯ ಲೇಶವೂ ಸರ್ವಥಾ ಇಲ್ಲ.'

'ಅಂಬರೀಷಕೇ' ಎಂದು ಕಪ್ರತ್ಯಯ ಅಲ್ಪಾರ್ಥದಲ್ಲಿದೆ. ಅಂಬರೀಷ ಮಹಾಭಗವದ್ಭಕ್ತನಾಗಿರಬಹುದು. ಭಗವಂತನ ಸುದರ್ಶನ ಚಕ್ರ ಅವನ ರಕ್ಷಣೆಗೆ ಸದಾ ಸಿದ್ಧವೂ ಇರಬಹುದು. ಆದರೆ ಬ್ರಹ್ಮಾದಿ ದೇವತೆಗಳಿಗೆ ಹೋಲಿಸಿದರೆ ಆತ ಅಲ್ಪ ಅತ್ಯಲ್ಪಭಕ್ತ.

...ತಥಾಪಿ ಹರಿರೀಶ್ವರಃ ।
ತಾತ್ಕಾಲಿಕೋಪಚೇಯತ್ವಾತ್ ತೇಷಾಂ ಯಶಸ ಆದಿರಾಟ್ ।
ಬ್ರಹ್ಮಾದಯಶ್ಚ ತತ್ಕೀರ್ತಿಂ ವ್ಯಂಜಯಾಮಾಸುರುತ್ತಮಾಂ ।

'ಹಾಗಿದ್ದರೂ ಅಂಬರೀಷ ಮುಂತಾದ ರಾಜರ ಕೀರ್ತಿಯನ್ನು ತತ್ಕಾಲದಲ್ಲಿ ವಿಶೇಷವಾಗಿ ಪ್ರಸಿದ್ಧಿಪಡಿಸಲು ಕೃಪೆಯಿಂದ ಆದಿರಾಜನಾದ ಸರ್ವೇಶ್ವರ ಹರಿಯೂ ಬ್ರಹ್ಮಾದಿ ದೇವತೆಗಳೂ ಸಂಕಲ್ಪಿಸಿದ್ದಾರೆ. ಅದರಿಂದ ಅಂಬರೀಷನ ಉತ್ತಮವಾದ ಕೀರ್ತಿಯನ್ನು ಪ್ರಸಿದ್ಧಿಪಡಿಸಿದ್ದಾರೆ.'

ಉಗ್ರನರಸಿಂಹನ ಕೋಪವನ್ನು ಶಿಶು ಪ್ರಹ್ಲಾದನೊಬ್ಬನೇ ಶಾಂತಗೊಳಿಸಿದ, ಬ್ರಹ್ಮಾದಿಗಳೆಲ್ಲರೂ ಸಮೀಪಕ್ಕೆ ಬರಲು ಅಂಜಿದರು ಎಂದು ಪ್ರಹ್ಲಾದನ ಕೀರ್ತಿಯನ್ನು ಹರಿ ವಿಶೇಷವಾಗಿ ಪ್ರಸಿದ್ಧಿಪಡಿಸಿದಂತೆ ದುರ್ವಾಸರನ್ನು ಸುಡುತ್ತಿದ್ದ ವಿಷ್ಣುಚಕ್ರವನ್ನು ಅಂಬರೀಷನೆ ಶಾಂತಗೊಳಿಸಬೇಕಾಯಿತೆಂದು ತತ್ಕಾಲದಲ್ಲಿ ಅವನ ಕೀರ್ತಿಯನ್ನು ಹರಿ ಹೆಚ್ಚಿಸಿದ. ಅದಕ್ಕೇ 'ನಾನು ಭಕ್ತಪರಾಧೀನ, ಅದರಿಂದ ಭಕ್ತಅಂಬರೀಷನೇ ನಿನ್ನನ್ನು ಕಾಪಾಡಬೇಕು' ಎಂದುಬಿಟ್ಟ. ಹಾಗೇ ಬ್ರಹ್ಮರುದ್ರರೂ 'ನಿನ್ನನ್ನು ನಾವು ಕಾಪಾಡಲು ಶಕ್ತರಲ್ಲ' ಎಂದುಬಿಟ್ಟರು. ಇಲ್ಲದಿದ್ದರೆ ಅಂಬರೀಷನ ಪ್ರಾರ್ಥನೆಗೆ ಶಾಂತವಾಗುವ ವಿಷ್ಣುಚಕ್ರ ಬ್ರಹ್ಮರುದ್ರರ ಪ್ರಾರ್ಥನೆಗೆ ಶಾಂತವಾಗಲಾರದೆ?

ಮೋಹನಾಯ ಚ ದೈತ್ಯಾನಾಂ ಬ್ರಹ್ಮಾದೇರ್ನಿಂದನಾಯ ಚ ।

'ದೈತ್ಯರಿಗೆ ಅನ್ಯಥಾಜ್ಞಾನ ಉಂಟಾಗಬೇಕು, ಅವರು ಬ್ರಹ್ಮಾದಿಗಳನ್ನು ನಿಂದಿಸಬೇಕು ಎನ್ನುವುದೂ ಕೂಡ ಶ್ರೀಹರಿಯ ಮತ್ತು ಬ್ರಹ್ಮಾದಿಗಳ ಸಂಕಲ್ಪವಾಗಿತ್ತು'

ಭಕ್ತನೆಂದರೆ ಅಂಬರೀಷನೇ ಸರಿ. ಅವನ ಮುಂದೆ ಬ್ರಹ್ಮಾದಿ ದೇವತೆಗಳೂ ಅಲ್ಲ' ಎಂದು ದೈತ್ಯರಿಗೆ ಅನ್ಯಥಾಜ್ಞಾನ ಬರಬೇಕು, ಅವರು ಬ್ರಹ್ಮಾದಿಗಳನ್ನು ನಿಂದಿಸಿ ಪಾಪವೃದ್ಧಿ ಮಾಡಿಕೊಳ್ಳಬೇಕು ಎನ್ನುವುದೂ ಉದ್ದೇಶವಾಗಿತ್ತು. 'ವಿರಿಂಚಾದಿ ಮಧಶ್ಚಕಾರ' ಎಂದು ಶುಕಮುನಿಯೂ ಅದನ್ನೇ ಹೇಳಿ ಮೋಹಗೊಳಿಸುತ್ತಾರೆ. ಆದರೆ ಸಜ್ಜನರು ಇದರಿಂದ ಮೋಹಗೊಳ್ಳುವುದಿಲ್ಲ, ಗರುಡ ಪುರಾಣವಚನದಿಂದ ಎಚ್ಚರಗೊಳ್ಳುತ್ತಾರೆ.

ಅನ್ಯಾರ್ಥಂ ಚ ಸ್ವಯಂ ವಿಷ್ಣುರ್ಬ್ರಹ್ಮಾದ್ಯಾಶ್ಚ ನಿರಾಶಿಷಃ ।

'ಸ್ವಯಂ ವಿಷ್ಣುವೂ ಬ್ರಹ್ಮಾದಿಗಳೂ ಅಂಬರೀಷನಂಥ ಭಕ್ತರ ಕೀರ್ತಿಸಂಪತ್ತು ಮುಂತಾದ ಪ್ರಯೋಜನಕ್ಕಾಗಿ ಹೀಗೆ ಮಾಡುತ್ತಾರೆ. ಅವರಿಗೆ ತಮ್ಮ ಸ್ವಾರ್ಥವನ್ನು ಗಳಿಸುವ ಅಭಿಲಾಷೆಯೇ ಇರುವುದಿಲ್ಲ.'

ವಿಷ್ಣು ಆಪ್ತಕಾಮನಾದ್ದರಿಂದ ತನ್ನ ಪ್ರಯೋಜನಕ್ಕಾಗಿ ಏನೂ ಮಾಡುವುದಿಲ್ಲ. ಬ್ರಹ್ಮಾದಿಗಳು ಹರಿಯ ಅನುಗ್ರಹವನ್ನು ಹೊರತು ಬೇರೇನೂ ಒಲ್ಲದ ವಿರಕ್ತರಾದ್ದರಿಂದ ತಮ್ಮ ಕೀರ್ತಿಪ್ರತಿಷ್ಠೆಗಾಗಿ ಏನೂ ಮಾಡುವುದಿಲ್ಲ. ಆದರಿಂದ ಅವರು ವಿಷ್ಣುಚಕ್ರವನ್ನು ಪ್ರಾರ್ಥಿಸಿ ಶಾಂತಗೊಳಿಸಲು ಯತ್ನಿಸಲಿಲ್ಲ.

ಮಾನುಷೇಷೂತ್ತಮತ್ವಾಚ್ಚ ತೇಷಾಂ ಭಕ್ತ್ಯಾದಿಭಿರ್ಗುಣೈಃ ।

'ಆ ಅಂಬರೀಷ ಮುಂತಾದ ರಾಜರು ಭಕ್ತ್ಯಾದಿಗುಣಗಳಿಂದ ಮನುಷ್ಯರೊಳಗೆ ಉತ್ತಮರಾಗಿರುವುದರಿಂದ ಅದನ್ನು ಲೋಕಕ್ಕೆ ತಿಳಿಸುವುದು ತಮ್ಮ ಕರ್ತವ್ಯವೆಂದೇ ಬ್ರಹ್ಮಾದಿಗಳು ತಿಳಿದರು.'

ವಿಷ್ಣುಭಕ್ತರಿಗೆ ಕೀರ್ತಿ ಪುರಸ್ಕಾರಗಳನ್ನು ಬ್ರಹ್ಮಾದಿಗಳು ಕೊಡಿಸಿ ಇದೇರೀತಿ ಸಜ್ಜನರೆಲ್ಲರೂ ಭಕ್ತ್ಯಾದಿಗುಣಗಳನ್ನು ಸಂಪಾದಿಸಿ ಮೆರೆಯಲಿ ಎಂಬ ಅಭಿಪ್ರಾಯದಿಂದ ಅಂಬರೀಷನನ್ನು ಬ್ರಹ್ಮಾದಿಗಳು ಮೆರೆಸಿದರು ಹೊರತು ಅಂಬರೀಷನೇ ಬ್ರಹ್ಮಾದಿಗಳಿಗಿಂತ ಶ್ರೇಷ್ಠಭಕ್ತನೆಂಬ ಅಭಿಪ್ರಾಯದಿಂದಲ್ಲ.

ಬ್ರಹ್ಮಾದೇರ್ವಿಷ್ಣ್ವಧೀನತ್ವಜ್ಞಾಪನಾಯ ಚ ಕೇವಲಂ ॥

'ಬ್ರಹ್ಮಾದಿಗಳು ತಾವು ವಿಷ್ಣುವಿಗೆ ಅಧೀನರೆಂಬುದನ್ನು ಲೋಕಕ್ಕೆ ತಿಳಿಸುವ ಉದ್ದೇಶದಿಂದಲೇ ಹೀಗೆ ಮಾಡಿದರು.'

ದುರ್ವಾಸರು ಓಡಿಬಂದು ಕಾಪಾಡಿರಿ ಎಂದಾಗ ಬ್ರಹ್ಮರುದ್ರರಿಬ್ಬರೂ 'ನಾವು ವಿಷ್ಣುವಿಗೆ ಅಧೀನರು. ಅವನು ನಿನ್ನನ್ನು ಶಿಕ್ಷಿಸುವಾಗ ನಾವೂ ಏನೂ ಮಾಡಲಾರೆವು' ಎಂದರು. ಹೀಗೆ ತಾವು ವಿಷ್ಣುವಿಗೆ ಅಧೀನರೆಂಬುದನ್ನು ಲೋಕ್ಕೆ ತಿಳಿಸಿದರು.

ದುರ್ವಾಸಾಶ್ಚ ಸ್ವಯಂ ರುದ್ರಸ್ತಥಾಪ್ಯನ್ಯಾಯ್ಯಮುಕ್ತವಾನ್ ।
ತಸ್ಯಾಪ್ಯನುಗ್ರಹಾರ್ಥಾಯ ದರ್ಪನಾಶಾರ್ಥಮೇವ ಚ ॥
ಇತಿ ಗಾರುಡೇ ॥

'ದುರ್ವಾಸರು ಯದ್ಯಪಿ ಸ್ವಯಂ ರುದ್ರಾವತಾರರು. ಆದರೂ ಅಂಬರೀಷನ ಬಗ್ಗೆ ಕೆಟ್ಟ ಮಾತುಗಳನ್ನಾಡಿದರು. ಅವರಿಗೂ ಅಹಂಕಾರ ಅಳಿಯಬೇಕು, ಅವರ ಮೇಲೆ ಅನುಗ್ರಹ ಮಾಡಬೇಕು ಎಂಬುದೂ ಶ್ರೀಹರಿಯ ಮತ್ತು ಬ್ರಹ್ಮಾದಿಗಳ ಉದ್ದೇಶವಾಗಿತ್ತು' ಎಂದು ಗರುಡಪುರಾಣದಲ್ಲಿ ಹೇಳಿದೆ.

ದುರ್ವಾಸರು ವಿಷ್ಣುಭಕ್ತಾಗ್ರೇಸರಾದ ಮಹಾರುದ್ರ ದೇವರ ಅವತಾರ. ಮಹಾವಿಷ್ಣುಭಕ್ತರು. ವಿಷ್ಣುಭಕ್ತನಾದ ಅಂಬರೀಷನ ಮುಂದೆ 'ನೀನು ಭಕ್ತನಲ್ಲ, ದುರಹಂಕಾರಿ' ಎಂದರು. ನವವಿಧವಾದ ವಿಷ್ಣುದ್ವೇಷಗಳಲ್ಲಿ ಇದೂ ಒಂದು. ಹೀಗೆ ಭಕ್ತಾಗ್ರೇಸರರಾದ ದುರ್ವಾಸರು ಭಕ್ತದ್ವೇಷ ಮಾಡಿದ್ದು ತತ್ಕಾಲದಲ್ಲಿ ಅಸುರಾವೇಶದಿಂದ ಉಂಟಾಗಿದ್ದ ದುರಹಂಕಾರದಿಂದ. ತಾನೊಬ್ಬನೇ ವಿಷ್ಣುಭಕ್ತನೆಂಬ ಅಹಂಕಾರ ಆಗ ಅವರಲ್ಲಿತ್ತು. ಎಷ್ಟೇ ದೊಡ್ಡ ಭಕ್ತನಾದರೂ ಆತ ವೈಷ್ಣವದ್ರೋಹ ಮಾಡಬಾರದು, ಎನ್ನುವ ಪ್ರಜ್ಞೆ ಆಗ ಅವರಿಗಿರಲಿಲ್ಲ. ಅಂಬರೀಷನನ್ನು ಕ್ಷಣಮಾತ್ರದಲ್ಲಿ ಕೊಲ್ಲಬಲ್ಲೆನೆಂದುಕೊಂಡು ಕೃತ್ರಿಮದೇವತೆಯನ್ನು ಸೃಜಿಸಿದರು. ಒಡನೆ ವಿಷ್ಣುಚಕ್ರದಿಂದ ಅದು ಸುಟ್ಟು ಬೂದಿಯಾಯಿತು. ಮಾತ್ರವಲ್ಲ ಚಕ್ರ ತನ್ನನ್ನೂ ಸುಡಲು ಬಂದಿತು. ಆಗಲೇ ಅವರ ಅಸುರಾವೇಶ ಇಳಿದುಹೋಯಿತು. ವಿಷ್ಣುಚಕ್ರದ ಮುಂದೆ ಯಾವ ದುಷ್ಟಶಕ್ತಿಯೂ ನಿಲ್ಲಲಾರದು.

ದುರ್ವಾಸರು ಆಗ ಪಶ್ಚಾತ್ತಾಪದಿಂದ ಚಕ್ರಕ್ಕೆ ನಮಸ್ಕಾರ ಮಾಡಿದ್ದರೆ ಒಡನೆ ಅದು ಶಾಂತವಾಗುತ್ತಿತ್ತು. ಆದರೂ 'ಅನ್ಯಾರ್ಥಂ' ಎಂದು ಹೇಳಿದಂತೆ,

'ನಿರಾಶಿಷಃ' ಎಂದು ಹೇಳಿದಂತೆ ದುರ್ವಾಸರೂ ಅಂಬರೀಷನ ಕೀರ್ತಿ ಹೆಚ್ಚಲೆಂದು, ಅವನೇ ಪ್ರಾರ್ಥನೆ ಮಾಡಿ ಚಕ್ರವನ್ನು ಶಾಂತಗೊಳಿಸಲೆಂದು, ಬ್ರಹ್ಮ ರುದ್ರರ ಬಳಿಗೇ ಓಡಿದರು. ತಮ್ಮ ರಕ್ಷಣೆಗಾಗಿ ಬ್ರಹ್ಮರುದ್ರರು ಚಕ್ರವನ್ನು ಸರ್ವಥಾ ಪ್ರಾರ್ಥಿಸುವುದಿಲ್ಲ ಎಂಬುದು ಅವರಿಗೆ ಗೊತ್ತಿಲ್ಲದಿಲ್ಲ. ಭಗವಂತ ಭಕ್ತ ಪರಾಧೀನ, ಭಕ್ತರಲ್ಲಿ ಮಾಡಿದ ಅಪಚಾರಕ್ಕೆ ಭಕ್ತರನ್ನೇ ಮೊರೆಹೋಗಬೇಕೆಂಬುದೂ ಅವರಿಗೆ ತಿಳಿಯದುದೇನಲ್ಲ. ಲೋಕಕ್ಕೆ ಇದು ತಿಳಿಯಬೇಕೆಂದೇ ದುರ್ವಾಸರು ಪ್ರಾಣರಕ್ಷಣೆಗಾಗಿ ಪಲಾಯನ ಮಾಡಿದಂತೆ ತೋರಿಕೊಂಡರು. ಒಂದುಕ್ಷಣ ಅಸುರಾವೇಶದಿಂದ ತಾನು ಗೈದ ಅಪರಾಧಕ್ಕೆ ಒಂದು ವರ್ಷ ಕಾಲ ತಾವೇ ಪ್ರಾಯಶ್ಚಿತ್ತಮಾಡಿಕೊಂಡು ತನಗೆ ಮುಂದೆ ಇಂಥ ಅಹಂಕಾರ ಬರಕೂಡದೆಂದೂ ಬಯಸಿದರು. ಹರಿಯ ಅನುಗ್ರಹವಾಗಬೇಕೆಂದೂ ಬಯಸಿದರು. ಅವರು ಅಂಬರೀಷನನ್ನು 'ನೀನು ನನಗೆ ಅನುಗ್ರಹಿಸಿರುವೆ' ಎಂದುದು ಅಂಬರೀಷನೊಳಗಿರುವ ಹರಿ ಅನುಗ್ರಹಿಸಿದ್ದಾನೆ ಎಂಬ ಅಭಿಪ್ರಾಯದಿಂದ. ಇದು ಅಂಬರೀಷನಿಗೂ ಗೊತ್ತು. ಅವನು ಹಾಗೇ ತನಗೆ ತಾನೇ ಹೇಳಿಕೊಳ್ಳುತ್ತಾನೆ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ನವಮಸ್ಕಂಧೇ
ಷಷ್ಠೋಽಧ್ಯಾಯಃ

❖ ❖ ❖

ಅಧ್ಯಾಯ - ೭

ಅಧ್ಯಾಯ ಸಾರಾಂಶ

ವಿರೂಪ, ಕೇತುಮಾನ್, ಶಂಭು ಎಂದು ಮೂವರು ಅಂಬರೀಷನ ಪುತ್ರರು. ವಿರೂಪನಿಂದ ಪೃಷದಶ್ವ, ಅವನಿಂದ ರಥೀತರ ಜನಿಸಿದರು. ರಥೀತರನಿಗೆ ಮಕ್ಕಳಾಗಲಿಲ್ಲ. ಅದಕ್ಕೆ ಅಂಗಿರಸ ಮುನಿಯಲ್ಲಿ ಬೇಡಿಕೊಂಡಾಗ ಅವರು ಅವನ ಪತ್ನಿಯಲ್ಲಿ ಬ್ರಹ್ಮವರ್ಚಸ್ವಿಗಳಾದ ಪುತ್ರರನ್ನು ಉತ್ಪಾದಿಸಿದರು. ಈ ಪುತ್ರರೆಲ್ಲರೂ ರಾಣಿಯಲ್ಲಿ ಜನಿಸಿದ್ದರಿಂದ ಕ್ಷತ್ರಿಯರಾಗಿದ್ದು ಜೊತೆಗೆ ಮುನಿಯಿಂದ ಹುಟ್ಟಿದ್ದರಿಂದ ಬ್ರಾಹ್ಮಣರೂ ಆಗಿದ್ದರು.

ವೈವಸ್ವತಮನು ಸೀನಿದಾಗ ಮೂಗಿನಿಂದ ಇಕ್ಷ್ವಾಕು ಜನಿಸಿದ. ಅವನಿಗೆ ನೂರು ಮಂದಿ ಮಕ್ಕಳು. ಅವರಲ್ಲಿ ವಿಕುಕ್ಷಿ ನಿಮಿ ದಂಡಕ ಈ ಮೂವರು ಮುಖ್ಯರು. ವಿಕುಕ್ಷಿ ಒಮ್ಮೆ ತಂದೆಯ ಆದೇಶದಂತೆ ಅಷ್ಟಕಾಶ್ರಾದ್ಧಕ್ಕೆ ಶುದ್ಧವಾದ ಮಾಂಸ ತರಲು ಕಾಡಿಗೆ ಹೋಗಿ ಬೇಟೆಯಾಡಿದ. ಆಯಾಸಗೊಂಡು ಹಸಿದು ಮೊಲದ ಮಾಂಸ ತಿಂದುಬಿಟ್ಟ. ಉಳಿದ ಮಾಂಸವನ್ನು ಶ್ರಾದ್ಧಕ್ಕೆ ತಂದುಕೊಟ್ಟ. ವಸಿಷ್ಠರು ನೋಡಿ ಈ ಮಾಂಸ ಅಶುದ್ಧವಾಗಿದೆ ಉಚ್ಛಿಷ್ಟವಾಗಿದೆ, ಎಂದರು. ಮಗನ ಕೃತ್ಯದಿಂದ ಸಿಟ್ಟಾದ ಇಕ್ಷ್ವಾಕು ಆತನನ್ನು ದೇಶದಿಂದ ಹೊರಗೆ ಅಟ್ಟಿದ. ತಾನು ಜಾಪಕ ಎಂಬ ಮುನಿಯಿಂದ ತತ್ವಜ್ಞಾನವನ್ನು ಪಡೆದು ಯೋಗಾಭ್ಯಾಸ ದಿಂದ ಶರೀರತ್ಯಾಗ ಮಾಡಿದ.

ಮೊಲದ ಮಾಂಸವನ್ನು ತಿಂದಿದ್ದರಿಂದ ಶಶಾದ ಎಂದೇ ಪ್ರಸಿದ್ಧನಾದ ವಿಕುಕ್ಷಿ ತಂದೆಯ ಮರಣಾನಂತರ ಹಿಂತಿರುಗಿ ಬಂದು ರಾಜ್ಯವಾಳಿದ. ಯಜ್ಞಗಳಿಂದ ಹರಿಯನ್ನು ಆರಾಧಿಸಿದ. ಅವನ ಪುತ್ರನಿಗೆ ಪುರಂಜಯ. ಇಂದ್ರವಾಹ ಕಕುತ್ಸ್ಥ ಎಂದು ಮೂರು ಹೆಸರುಗಳು. ದೇವಾಸುರ ಸಂಗ್ರಾಮದಲ್ಲಿ ದೇವತೆಗಳ ಪಕ್ಷದಲ್ಲಿ ಹೋರಾಡಬೇಕೆಂದರೆ ದೇವೇಂದ್ರ ತನಗೆ ವೃಷಭರೂಪದಿಂದ ವಾಹನವಾಗಬೇಕೆಂದು ಈತ ಕೇಳಿಕೊಂಡ. ಅದರಂತೆ ಇಂದ್ರ ವಾಹನನಾದ್ದರಿಂದ ಈತ ಇಂದ್ರವಾಹನೆನಿಸಿದ. ವೃಷಭದ ಹೆಗಲಿನ

ಮೇಲೆ ಕುಳಿತಿದ್ದರಿಂದ ಕಕುತ್‌ಸ್ಥನೆಂದೂ ಕರೆಸಿಕೊಂಡ. ಅಸುರರ ಪುರಗಳನ್ನು ಗೆದ್ದು ಇಂದ್ರನಿಗೆ ನೀಡಿದ್ದರಿಂದ ಪುರಂಜಯನೆಂದೂ ಕರೆಸಿಕೊಂಡ.

ಪುರಂಜಯನ ವಂಶದಲ್ಲಿ ಬಂದ ಕುವಲಯಾಶ್ವ ಉದಂಕಮುನಿಯ ಸಂತೋಷಕ್ಕಾಗಿ ತನ್ನ ಇಪ್ಪತ್ತೊಂದು ಸಾವಿರ ಮಂದಿ ಮಕ್ಕಳೊಂದಿಗೆ ಧುಂಧು ಎಂಬ ಅಸುರನೊಂದಿಗೆ ಹೋರಾಡಿದ. ಅವನನ್ನು ವಧಿಸಿ ಧುಂಧುಮಾರನೆನಿಸಿದ. ಆದರೆ ಧುಂಧುವಿನ ಬಾಯಿಂದ ಹೊರಟ ಬೆಂಕಿಯಲ್ಲಿ ಅವನ ಎಲ್ಲ ಮಕ್ಕಳೂ ಉರಿದು ಬೂದಿಯಾದರು. ಕೇವಲ ಮೂರುಮಂದಿ ಮಾತ್ರ ಉಳಿದರು. ಆ ಮೂರು ಮಕ್ಕಳಲ್ಲಿ ಒಬ್ಬನಾದ ದೃಢಾಶ್ವನ ವಂಶದಲ್ಲಿ ಯುವನಾಶ್ವ ಜನಿಸಿದ. ಇವನಿಗೆ ನೂರುಮಂದಿ ಹೆಂಡಂದಿರಿದ್ದರೂ ಮಕ್ಕಳಾಗಲಿಲ್ಲವೆಂದು ವೈರಾಗ್ಯ ಬಂದಿತು. ಕಾಡಿಗೆ ನಡೆದ. ಆದರೆ ಋಷಿಗಳು ಅವನಿಂದ ಇಂದ್ರಯಾಗ ಮಾಡಿಸಿದರು. ಆಗ ಒಂದು ರಾತ್ರಿ ರಾಜ ಬಾಯಾರಿ ಯಜ್ಞಶಾಲೆಯಲ್ಲಿ ಇರಿಸಿದ್ದ ಮಂತ್ರಪೂತವಾದ ಜಲವನ್ನು ಕುಡಿದುಬಿಟ್ಟ. ಮಲಗಿ ನಿದ್ದೆಹೋಗಿದ್ದ ಮುನಿಗಳು ಎಚ್ಚೆತ್ತಾಗ ನೋಡಿದರು. ಕಲಶ ಬರಿದಾಗಿತ್ತು. ಯುವನಾಶ್ವ ಗರ್ಭ ಧರಿಸಿದ್ದ. ನವಮಾಸ ಕಳೆದಾಗ ಅವನ ಬಲ ಹೊಟ್ಟೆಯನ್ನು ಭೇದಿಸಿ ಕುಮಾರನೊಬ್ಬ ಜನಿಸಿದ. ಈತನಿಗೆ ಇಂದ್ರನೇ ತನ್ನ ತೋರುಬೆರಳನ್ನು ಬಾಯಿಗಿಟ್ಟು ಹಾಲೂಡಿಸಿದ. ಅದರಿಂದ ಈ ಕುಮಾರ ಮಾಂಧಾತನೆನಿಸಿದ. ತಂದೆ ಯುವನಾಶ್ವ ಋಷಿಗಳ ಅನುಗ್ರಹದಿಂದ ಸಾಯದೆ ಉಳಿದ. ತಪಸ್ಸು ಮಾಡಿ ಸಿದ್ಧಿ ಪಡೆದ.

ಮಾಂಧಾತರಾಜನಿಗೆ ತ್ರಸದ್ದಸ್ಯು ಎಂದು ಇಂದ್ರ ನಾಮಕರಣ ಮಾಡಿದ. ಈತನಿಗೆ ದಸ್ಯುಗಳಾದ ರಾವಣಾದಿ ರಾಕ್ಷಸರೂ ಭಯಪಡುತ್ತಿದ್ದರು. ಇವನ ಮಕ್ಕಳು ಪುರುಕುತ್ಸ ಅಂಬರೀಷ ಮುಚುಕುಂದ ಮತ್ತು ಐವತ್ತು ಮಂದಿ ಕನ್ಯೆಯರು. ಈ ಕನ್ಯೆಯರು ಎಲ್ಲರೂ ಸೌಭರಿಮುನಿಯನ್ನು ವರಿಸಿದರು. ಏಕೆಂದರೆ ಸೌಭರಿ ಮುನಿ ಯಮುನೆಯ ಆಳವಾದ ನೀರೊಳಗೆ ಮುಳುಗಿ ತಪಸ್ಸು ಮಾಡುತ್ತಿದ್ದಾಗ ಮೀನುಗಳ ಪ್ರಣಯಕೇಲಿಯನ್ನು ಕಂಡು

ತಾನೂ ಸಂಸಾರಸುಖ ಅನುಭವಿಸಲೆಂದು ಮಾಂಧಾತರಾಜನಲ್ಲಿ ಒಬ್ಬಳು ಕನ್ಯೆಯನ್ನು ಬೇಡಿದ. ರಾಜ ನೇರವಾಗಿ ಅವನ ಬೇಡಿಕೆಯನ್ನು ನಿರಾಕರಿಸಲಾಗದೆ ಹೇಳಿದ. 'ಐವತ್ತು ಮಂದಿಯಲ್ಲಿ ಯಾರಾದರೊಬ್ಬಳು ನಿನ್ನನ್ನು ವರಿಸಿದರೆ ನೀನು ಮದುವೆಯಾಗಬಹುದು' ಮುನಿ ತಪೋಬಲದಿಂದ ಸುಂದರ ತರುಣರೂಪ ತಾಳಿ ಎಲ್ಲ ಐವತ್ತು ಮಂದಿ ಕನ್ಯೆಯರೂ ತನ್ನನ್ನು ವರಿಸುವಂತೆ ಮಾಡಿಕೊಂಡ. ಐವತ್ತು ಶರೀರಗಳನ್ನು ತಾಳಿ ಐವತ್ತು ಮಂದಿ ಪತ್ನಿಯರಲ್ಲಿ ಐದು ಸಾವಿರ ಮಂದಿ ಮಕ್ಕಳನ್ನು ಪಡೆದು ವಿರಕ್ತನಾಗಿ ತಪಸ್ಸಿನಿಂದ ಪರಮಾತ್ಮನನ್ನು ಪಡೆದ.

ಪುರುಕುತ್ಸ ನರ್ಮದೆ ಎಂಬ ನಾಗಕನ್ಯೆಯನ್ನು ಮದುವೆಯಾಗಿ ನಾಗರಿಗೆ ಶತ್ರುಗಳಾಗಿದ್ದ ವಧ್ರ್ಯಶ್ವರೆಂಬ ದುಷ್ಟಗಂಧರ್ವರನ್ನು ಸಂಹರಿಸಿದ. 'ಪುರುಕುತ್ಸನನ್ನು ಸ್ಮರಿಸುವವರಿಗೆ ಸರ್ಪಭಯವಿಲ್ಲವಾಗಲಿ' ಎಂದು ನಾಗರು ವರವಿತ್ತರು.

ಪುರುಕುತ್ಸನ ವಂಶದಲ್ಲಿ ಬಂದವನು ಸತ್ಯವ್ರತ. ತ್ರಿಶಂಕು ಎಂದು ಈತನಿಗೆ ಇನ್ನೊಂದು ಹೆಸರು. ಮದುವೆಯಾಗುತ್ತಿದ್ದ ಓರ್ವ ಬ್ರಾಹ್ಮಣಕನ್ಯೆಯನ್ನು ಈತ ಅಪಹರಿಸಿದ್ದರಿಂದ ವಸಿಷ್ಠರ ಮತ್ತು ಅವರ ಪುತ್ರರ ಶಾಪದಿಂದ ಚಂಡಾಲನಾದ. ಆದರೆ ವಿಶ್ವಾಮಿತ್ರರ ತಪಃಪ್ರಭಾವದಿಂದ ಸಶರೀರನಾಗಿ ಸ್ವರ್ಗವನ್ನೇರಿದ. ದೇವತೆಗಳು ತಡೆದರು. ತಲೆ ಕೆಳಗಾಗಿ ಕೆಳಕ್ಕೆ ತಳ್ಳಿದರು. ವಿಶ್ವಾಮಿತ್ರರು ಅಂತರಿಕ್ಷದಲ್ಲಿಯೇ ತ್ರಿಶಂಕುವಿಗಾಗಿ ಒಂದು ಸ್ವರ್ಗವನ್ನು ನಿರ್ಮಿಸಿಕೊಟ್ಟರು. ಅದರಿಂದ ಇಂದಿಗೂ ಆತ ಆಕಾಶದಲ್ಲಿ ಕಾಣಲು ಸಿಗುತ್ತಾನೆ.

ತ್ರಿಶಂಕುವಿನ ಮಗ ಹರಿಶ್ಚಂದ್ರ. ಈತನಿಗೆ ಮಕ್ಕಳಿಲ್ಲದ್ದರಿಂದ ನಾರದರ ಉಪದೇಶದಂತೆ ವರುಣನಲ್ಲಿ ಹರಕೆ ಹೇಳಿಕೊಂಡ, 'ದೇವ, ನನಗೆ ಮಗುವಾದರೆ ಅವನನ್ನು ನಿನಗೆ ಬಲಿಕೊಟ್ಟು ರಾಜಸೂಯಯಾಗ ಮಾಡುವೆನು' ಎಂದು. ಆಗ ಹುಟ್ಟಿದವನೇ ರೋಹಿತ. ಆತ ಬೆಳೆದು ದೊಡ್ಡವನಾಗಿ ಕ್ಷತ್ರಿಯ ಸಂಸ್ಕಾರ ಹೊಂದಿದರೆ ಉತ್ತಮವಾದ ಬಲಿಪಶುವೆನಿಸುತ್ತಾನೆ, ಅಂದಿನವರೆಗಾದರೂ ತನಗೆ ಆತನ ಒಡನಾಟಸುಖ ಲಭ್ಯವಾಗುವುದೆಂದು

ಹರಿಶ್ಚಂದ್ರ ಯಾಗವನ್ನು ಮುಂದೂಡುತ್ತ ಬಂದ. ರೋಹಿತನಿಗೆ ಇದು ತಿಳಿದಾಗ ಆತ ಭಯದಿಂದ ಕಾಡಿಗೆ ಓಡಿಹೋದ. ವರುಣ ಕುಪಿತನಾಗಿ ರಾಜನಿಗೆ ಜಲೋದರ ರೋಗ ಉಂಟುಮಾಡಿದ. ಆಗ ರೋಹಿತ ಶುನಃಶೇಪನೆಂಬ ಮುನಿಕುಮಾರನನ್ನು ಅವನ ತಂದೆಯಾದ ಅಜೀಗರ್ತಮುನಿಗೆ ನೂರು ಹಸುಗಳನ್ನು ಕೊಟ್ಟು ಕೊಂಡು ತಂದ. ಹರಿಶ್ಚಂದ್ರ ಈ ಮುನಿಕುಮಾರನನ್ನು ಬಲಿ ಕೊಡುವೆನೆಂದಾಗ ವರುಣನಿಗೆ ಸಂತೋಷವಾಯಿತು. ಕ್ಷತ್ರಿಯ ಜಾತಿಯ ಪಶುವಿಗಿಂತ ಬ್ರಾಹ್ಮಣ ಜಾತಿಯ ಪಶು ಶ್ರೇಷ್ಠ ಎಂದು.

ಮುಂದೆ ಯಾಗದಲ್ಲಿ ಶುನಃಶೇಪ ವರುಣನನ್ನು ವೇದ ಮಂತ್ರಗಳಿಂದ ಸ್ತುತಿಸಿದಾಗ ಅವನು ಅದಕ್ಕೆ ಮೆಚ್ಚಿ ಅವನನ್ನು ಯೂಪ ಬಂಧನದಿಂದ ವಿಮುಕ್ತಗೊಳಿಸಿದ. ರಾಜನ ಜಲೋದರ ರೋಗವನ್ನು ಶಮನಗೊಳಿಸಿದ.

ರಾಜನ ಈ ರಾಜಸೂಯಯಾಗದಲ್ಲಿ ಹೋತೃವಾಗಿದ್ದ ವಿಶ್ವಾಮಿತ್ರ ದಕ್ಷಿಣೆಯ ನೆಪದಿಂದ ಅವನ ಸರ್ವಸ್ವವನ್ನು ಅಪಹರಿಸಿ ಅವನು ತನ್ನನ್ನೂ ತನ್ನ ಹೆಂಡತಿ ಮಕ್ಕಳನ್ನೂ ಮಾರುವಂತೆ ಮಾಡಿ ಸತ್ಯನಿಷ್ಠೆಯನ್ನು ಪರೀಕ್ಷಿಸಿದರು. ವಸಿಷ್ಠರು ಇದಕ್ಕೆ ಕುಪಿತರಾಗಿ ವಿಶ್ವಾಮಿತ್ರರನ್ನು ಬಕಪಕ್ಷಿಯಾಗೆಂದು ಶಪಿಸಿದರು. ವಿಶ್ವಾಮಿತ್ರರು ವಸಿಷ್ಠರನ್ನು ನೀರುಕೋಳಿಯಾಗೆಂದು ಶಪಿಸಿದರು. ಇಬ್ಬರೂ ಪಕ್ಷಿಗಳಾಗಿ ಬಹುವರ್ಷಕಾಲ ಹೋರಾಡಿದರು. ಬ್ರಹ್ಮದೇವರ ಆಜ್ಞೆಯಂತೆ ಸುಮ್ಮನಾದರು. ಹರಿಶ್ಚಂದ್ರನ ಸತ್ಯನಿಷ್ಠೆಗೆ ಮೆಚ್ಚಿದ ವಿಶ್ವಾಮಿತ್ರರು ಅವನಿಗೆ ಮುಕ್ತಿಮಾರ್ಗವನ್ನು ಉಪದೇಶಿಸಿ ಮುಕ್ತನನ್ನಾಗಿ ಮಾಡಿದರು.

❖❖❖

ಅಧ್ಯಾಯ - ೮

ಅಧ್ಯಾಯ ಸಾರಾಂಶ

ರೋಹಿತನ ವಂಶದಲ್ಲಿ ಬಂದ ಬಾಹುಕ ಶತ್ರುಗಳಿಗೆ ಸೋತು ಪತ್ನಿಯರೊಂದಿಗೆ ಕಾಡಿಗೆ ಹೋಗಿ ಅಲ್ಲಿ ಮುದಿ ವಯಸ್ಸಿನಲ್ಲಿ ಮರಣ ಹೊಂದಿದ. ರಾಣಿ ಸಹಗಮನಕ್ಕೆ ಉದ್ಯುಕ್ತಳಾದಳು. ಆಗ ಆಕೆ ಗರ್ಭವತಿ ಎಂದು ತಿಳಿದು ಔರ್ವಮುನಿ ತಡೆದರು. ಆದರೆ ಸವತಿಯರು ಮತ್ಸರದಿಂದ ಗರ್ಭನಾಶಕ್ಕಾಗಿ ಅವಳಿಗೆ ವಿಷ ಉಣಿಸಿದರು. ಆದರೂ ಗರ್ಭ ನಾಶವಾಗಲಿಲ್ಲ. ವಿಷದೊಂದಿಗೇ ಸ-ಗರ, ಸಗರಚಕ್ರವರ್ತಿ ಜನಿಸಿದ. ಈತ ಯವನ ಬರ್ಬರ ಮುಂತಾದ ಅನಾಗರಿಕರಾದ ಶತ್ರುಗಳನ್ನು ಗೆದ್ದು ರಾಜ್ಯವನ್ನು ಹಿಂತಿರುಗಿ ಪಡೆದ. ಔರ್ವಮುನಿಯ ಆದೇಶದಂತೆ ಅವರನ್ನು ಕೊಲ್ಲದೆ, ತಲೆಬೋಳಿಸಿ ಗಡ್ಡ ಬಿಡುವುದು ಉದ್ದನೆ ಕೂದಲನ್ನು ಬಿಡುವುದು ಮುಂತಾಗಿ ವಿಕೃತ ವೇಷ ತೊಡಿಸಿ ಬಿಟ್ಟುಬಿಟ್ಟ.

ಅವನು ಅಶ್ವಮೇಧಯಾಗ ಮಾಡಿದಾಗ ಯಜ್ಞಾಶ್ವವನ್ನು ಇಂದ್ರ ಅಪಹರಿಸಿ ಪಾತಾಳದಲ್ಲಿ ಕಪಿಲಮುನಿಯ ಬಳಿ ಇರಿಸಿದ. ಸಗರನಿಗೆ ಸುಮತಿ ಮತ್ತು ಕೇಶಿನಿ ಎಂದು ಇಬ್ಬರು ರಾಣಿಯರು. ಸುಮತಿಗೆ ಅರವತ್ತುಸಾವಿರ ಮಂದಿ ಮಕ್ಕಳು. ಕೇಶಿನಿಗೆ ಅಸಮಂಜಸನೊಬ್ಬನೆ ಮಗ. ಯಜ್ಞಾಶ್ವದ ಶೋಧಕ್ಕೆ ಅರವತ್ತು ಸಾವಿರ ಮಂದಿ ಮಕ್ಕಳು ಹೊರಟರು. ನೆಲ ಅಗೆದು ಪಾತಾಳಕ್ಕೆ ಇಳಿದರು. ಆಗ ನೆಲವನ್ನು ಅಗೆದುದರಿಂದ ಸಮುದ್ರ ವಿಶಾಲವಾಯಿತು. ಸಗರಪುತ್ರರಿಂದ ಸಮುದ್ರ ಸಾಗರವೆನಿಸಿತು. ಪಾತಾಳದಲ್ಲಿ ಕಪಿಲ ಮುನಿಯ ಬಳಿ ಯಜ್ಞಾಶ್ವವನ್ನು ಕಂಡು ಮುನಿಯೇ ಕದ್ದವನೆಂದು ಬಗೆದು ಕ್ರುದ್ಧರಾಗಿ ಕೊಲ್ಲಲು ಆಕ್ರಮಣಗೈದರು. ಒಡನೆ ಆ ಅಪರಾಧದಿಂದಾಗಿ ಅವರೆಲ್ಲರೂ ಸತ್ತರು. ತಮ್ಮ ಶರೀರದೊಳಗಿನ ಅಗ್ನಿಯಿಂದ ತಾವೇ ಸುಟ್ಟು ಬೂದಿಯಾದರು.

ಅಸಮಂಜಸ ನಿಜವಾಗಿ ಅ-ಸಮಂಜಸನಲ್ಲ, ಮಹಾಯೋಗಿ.

ಪೂರ್ವಜನ್ಮದ ಸ್ಮರಣೆ ಇದ್ದುದರಿಂದ ತಾನು ಜನಸಂಪರ್ಕದಿಂದ ದೂರವಿದ್ದು ವಿರಕ್ತನಾಗಿ ಯೋಗಾಭ್ಯಾಸ ಮಾಡಬೇಕೆಂದುಕೊಂಡ. ಅದಕ್ಕೆ ಬಾಲ್ಯದಲ್ಲಿಯೇ ತನ್ನ ಜೊತೆಗೆ ಆಟವಾಡಲು ಬಂದ ಮಕ್ಕಳನ್ನು ಎತ್ತಿ ಸರಯೂನದಿಯಲ್ಲಿ ಎಸೆಯುವುದು ಮುಂತಾದ ಭಯಂಕರ ಕೃತ್ಯಗಳನ್ನು ಮಾಡಿದ. ತಂದೆ ಸಗರಚಕ್ರವರ್ತಿ ದುಃಖದಿಂದ ಮಗನನ್ನು ಪರಿತ್ಯಾಗ ಮಾಡಿದ. ಮಗನಿಗೆ ಅದೇ ಬೇಕಾಗಿತ್ತು. ತಾನು ಅಂದಿನವರೆಗೆ ಕೊಂದಿದ್ದ ಎಲ್ಲ ಮಕ್ಕಳನ್ನೂ ಪುನಃ ಬದುಕಿಸಿಕೊಟ್ಟು ಹೊರಟುಹೋದ.

ಈತನ ಮಗ ಅಂಶುಮಂತ ಯಜ್ಞಾಶ್ವದ ಶೋಧಕ್ಕೆಂದು ಪಾತಾಳಕ್ಕೆ ಹೋಗಿ ಅದು ಕಪಿಲಮುನಿಯ ಬಳಿ ಇರುವುದನ್ನು ಕಂಡ. ಮುನಿಯನ್ನು ಭಕ್ತಿಯಿಂದ ನಮಿಸಿ ಸ್ತುತಿಸಿದ. 'ಬ್ರಹ್ಮದೇವರೂ ಕೂಡ ನಿನ್ನನ್ನು ಪೂರ್ತಿ ತಿಳಿಯಲಾರರು. ನಮ್ಮಂಥವರ ಪಾಡೇನು? ನಿನ್ನಿಚ್ಛೆಯಂತೆ ನಾವು ಕಾಮಾದಿಗಳಿಗೆ ವಶರಾಗಿ ಲೌಕಿಕ ಪದಾರ್ಥಗಳನ್ನೆ ಶಾಶ್ವತವೆಂದು ಭ್ರಮಿಸುತ್ತೇವೆ' ಎಂದು ಸ್ತುತಿಸಿದಾಗ ಕಪಿಲಮುನಿ ಮೆಚ್ಚಿ ಯಜ್ಞಾಶ್ವವನ್ನು ನೀಡಿ ಗಂಗಾಜಲಸ್ಪರ್ಶದಿಂದ ಮಾತ್ರವೆ ಸಗರಪುತ್ರರ ಉದ್ಧಾರವೆಂದು ತಿಳಿಸಿದ. ಸಗರ ಯಜ್ಞವನ್ನು ಪೂರ್ತಿಗೊಳಿಸಿದ. ರಾಜ್ಯಭಾರವನ್ನು ಅಂಶುಮಂತನಿಗೆ ಒಪ್ಪಿಸಿ ವಿರಕ್ತನಾಗಿ ಔರ್ವಮುನಿಯ ಉಪದೇಶದಿಂದ ಉತ್ತಮಗತಿಯನ್ನು ಸಂಪಾದಿಸಿದ.

ಅಂಶುಮಂತ ದೇವಗಂಗೆಯನ್ನು ಭೂಮಿಗೆ ತರಲು ಬಹುಕಾಲ ತಪಸ್ಸು ಮಾಡಿದ. ಅವನ ಮಗ ದಿಲೀಪನೂ ತಪಸ್ಸು ಮಾಡಿದ. ಆದರೆ ದಿಲೀಪನ ಪುತ್ರ ಭಗೀರಥ ತಪಸ್ಸಿನಿಂದ ಗಂಗೆಯನ್ನು ಒಲಿಸಿಕೊಂಡ. ದೇವಿ ಹೇಳಿದಳು, 'ನಾನು ಭೂಮಿಗೆ ಇಳಿಯುವಾಗಿನ ರಭಸವನ್ನು ತಡೆಯುವವರಾರು? ಇಲ್ಲದಿದ್ದರೆ ನಾನು ಭೂಮಿಯನ್ನೂ ಭೇದಿಸಿ ರಸಾತಳಕ್ಕೇ ಹೋಗಿಬಿಡುತ್ತೇನೆ.' ಭಗೀರಥನೆಂದ, 'ನಿನ್ನ ವೇಗವನ್ನು ಶಿವ ತಡೆಯುತ್ತಾನೆ' ಹೀಗೆ ಹೇಳಿ ಶಿವನನ್ನು ತಪಸ್ಸಿನಿಂದ ಒಲಿಸಿಕೊಂಡ. ಶಿವ ಭಕ್ತಿಯಿಂದ ಹರಿಪಾದೋದ್ಭವೆಯಾದ ಗಂಗೆಯನ್ನು ಶಿರದಲ್ಲಿ ಧರಿಸಿದ. ಬಳಿಕ ವಾಯುವೇಗದ ರಥದಿಂದ ಭಗೀರಥ ಮುಂದೆ

ಮುಂದೆ ಹೋಗುತ್ತಿದ್ದಂತೆ ಗಂಗೆ ಅವನನ್ನು ಹಿಂಬಾಲಿಸಿದಳು. ಪಾತಾಳಕ್ಕೆ ಇಳಿದು ಸಗರಪುತ್ರರ ಭಸ್ಮವನ್ನು ತೋಯಿಸಿ ಅವರಿಗೆ ಸದ್ಗತಿ ನೀಡಿದಳು.

ಭಗೀರಥನ ವಂಶದಲ್ಲಿ ಮುಂದೆ ಋತುಪರ್ಣರಾಜ ಬಂದ. ಅವನು ನಳಮಹಾರಾಜನ ಮಿತ್ರ. ಅವನಿಗೆ ದ್ಯೂತವಿದ್ಯೆಯನ್ನು ಹೇಳಿಕೊಟ್ಟು ಅವನಿಂದ ತಾನು ಅಶ್ವವಿದ್ಯೆಯನ್ನು ಕಲಿತ.

ಋತುಪರ್ಣನ ಪುತ್ರ ಸರ್ವಕಾಮ. ಅವನ ಪುತ್ರ ಸುದಾಸ. ಸುದಾಸಪುತ್ರ ಸೌದಾಸ ಮದಯಂತೀಪತಿ ಎಂದು ಪ್ರಸಿದ್ಧ. ಮಿತ್ರಸಹ, ಕಲ್ಮಾಷಪಾದ ಎಂದೂ ಈತನಿಗೇ ಹೆಸರುಗಳು. ಈತನೊಮ್ಮೆ ಬೇಟೆಯಾಡುತ್ತ ಒಬ್ಬ ರಾಕ್ಷಸನನ್ನು ಕೊಂದು ಅವನ ತಮ್ಮನನ್ನು ಬಿಟ್ಟ. ಆತ ಸೇಡು ತೀರಿಸಿಕೊಳ್ಳುವುದಕ್ಕಾಗಿ ರಾಜನ ಅರಮನೆಯಲ್ಲಿ ಅಡಿಗೆಯವನ ವೇಷದಲ್ಲಿ ಸೇರಿಕೊಂಡು ನರಮಾಂಸದ ಅಡಿಗೆ ಮಾಡಿ ವಸಿಷ್ಠರಿಗೆ ಉಣಬಡಿಸಿದ. ವಸಿಷ್ಠರು ಸಿಟ್ಟಾಗಿ ರಾಜನನ್ನು ನೀನು ನರಭಕ್ಷಕ ರಾಕ್ಷಸನಾಗೆಂದು ಶಪಿಸಿದರು. ಬಳಿಕ ಕರುಣೆಯಿಂದ ಹನ್ನೆರಡು ವರ್ಷಕಾಲ ಮಾತ್ರ ರಾಕ್ಷಸನಾಗಿರು ಎಂದರು. ರಾಜ ಕೋಪದಿಂದ ವಸಿಷ್ಠರನ್ನು ಶಪಿಸಲು ಬೊಗಸೆಯಿಂದ ನೀರನ್ನೆತ್ತಿಕೊಂಡ. ರಾಣಿ ಮದಯಂತಿ ತಡೆದುದರಿಂದ ಆ ಜಲವನ್ನು ತನ್ನ ಕಾಲುಗಳ ಮೇಲೇ ಸುರಿದುಕೊಂಡ. ಕಾಲುಗಳು ಕಪ್ಪಾದುವು. ಕಲ್ಮಾಷಪಾದ ಎಂದು ಅವನಿಗೆ ಹೆಸರಾಯಿತು.

ಒಂದುದಿನ ಕಾಡಿನಲ್ಲಿ ಮುನಿ ದಂಪತಿಗಳು ಏಕಾಂತದಲ್ಲಿ ವಿಹರಿಸುತ್ತಿದ್ದುದನ್ನು ಕಂಡು ಹಸಿದಿದ್ದ ರಾಜ ರಾಕ್ಷಸ ಸ್ವಭಾವದಿಂದ ಬ್ರಾಹ್ಮಣನನ್ನು ತಿಂದುಬಿಟ್ಟ. ಬ್ರಾಹ್ಮಣನ ಪತ್ನಿ ಶಪಿಸಿದಳು ನೀನೂ ನಿನ್ನ ಪತ್ನಿಯೊಂದಿಗೆ ಕೂಡುವಾಗ ಮರಣಹೊಂದುವಿ ಎಂದು. ಈ ಶಾಪ ವೃತ್ತಾಂತವನ್ನು ಅರಿತ ರಾಣಿ ರಾಜನ ಅನುಮತಿ ಪಡೆದು ವಸಿಷ್ಠರಿಂದ ಗರ್ಭ ಧರಿಸಿದಳು. ಏಳು ವರ್ಷಗಳು ಕಳೆದರೂ ಹೆರಿಗೆಯಾಗಲಿಲ್ಲ. ಅದಕ್ಕೆ ಕಲ್ಲಿನಿಂದ ಹೊಟ್ಟೆಯನ್ನು ಜಜ್ಜಿಕೊಂಡಳು. ಆಗ ಹುಟ್ಟಿದ ಮಗುವಿಗೆ ಅಶ್ಮಕ ಎಂದೇ ನಾಮಕರಣವಾಯಿತು.

ಅಶ್ಮಕನ ಮಗ ಮೂಲಕ. ಈತನಿಗೆ ನಾರೀಕವಚ ಎಂದು ಇನ್ನೊಂದು ಹೆಸರು. ಏಕೆಂದರೆ ಪರಶುರಾಮ ಬಂದಾಗಲೆಲ್ಲ ರಾಣಿಯರೆಲ್ಲರೂ ಕವಚದಂತೆ ರಾಜನ ಸುತ್ತಲೂ ನಿಂತು 'ಇಲ್ಲಿ ಯಾರೂ ಗಂಡಸರಿಲ್ಲ' ಎಂದರು. ಪರಶುರಾಮ ನಕ್ಕು ಆತನನ್ನು ಕೊಲ್ಲದೆ ಬಿಟ್ಟ. ಬಳಿಕ ಆತನಿಂದ ಕ್ಷತ್ರಿಯವಂಶ ಬೆಳೆಯಿತು. ಅವನ ಮಗನ ಮೊಮ್ಮಗ ಖಟ್ವಾಂಗ. ಈತ ತನ್ನ ಆಯುಷ್ಯ ಮುಹೂರ್ತ ಮಾತ್ರವಿದ್ದಾಗ ದೇವತೆಗಳಿಂದ ಅದನ್ನು ತಿಳಿದು ಮುಹೂರ್ತಕಾಲದ ಧ್ಯಾನದಿಂದಲೆ ಮೋಕ್ಷವನ್ನು ಸಂಪಾದಿಸಿದ.

ಖಟ್ವಾಂಗನ ಅನಂತರ ದೀರ್ಘಬಾಹು ರಘು ಅಜ ದಶರಥರು ಕ್ರಮವಾಗಿ ಒಬ್ಬರಿಂದೊಬ್ಬರು ಜನಿಸಿದರು. ರಾಮ ಲಕ್ಷ್ಮಣ ಭರತ ಶತ್ರುಘ್ನರು ದಶರಥನ ಪುತ್ರರು. ಶ್ರೀರಾಮ ವಿಶ್ವಾಮಿತ್ರರ ಯಜ್ಞ ರಕ್ಷಣೆ ಮಾಡಿ ಸ್ವಯಂವರದಲ್ಲಿ ಶಿವಧನುಸ್ಸನ್ನು ಮುರಿದು ಸೀತೆಯನ್ನು ಗೆದ್ದು ಪರಶುರಾಮನ ದರ್ಪವನ್ನು ಮುರಿದಂತೆ ತೋರಿಕೊಂಡ. ಪಿತೃವಾಕ್ಯಪರಿಪಾಲನೆಗಾಗಿ ವನವಾಸವನ್ನು ಕೈಗೊಂಡು ಸೀತಾಪಹರಣ ನಿಮಿತ್ತದಿಂದ ರಾವಣಾದಿ ರಾಕ್ಷಸರನ್ನು ಕೊಂದ. ವಿಭೀಷಣನಿಗೆ ಲಂಕಾ ಸಾಮ್ರಾಜ್ಯವನ್ನಿತ್ತ. ಅಯೋಧ್ಯಾ ಸಿಂಹಾಸನವನ್ನೇರಿ ರಾಮ ರಾಜ್ಯವನ್ನು ಸ್ಥಾಪಿಸಿದ. ಆಗ ನಡೆಯುತ್ತಿದ್ದ ತ್ರೇತಾಯುಗವನ್ನು ಕೃತಯುಗಕ್ಕೆ ಸಮಾನವನ್ನಾಗಿ ಮಾಡಿದ. ಏಕಪತ್ನೀ ವ್ರತನಿಷ್ಠನಾಗಿ ಗೃಹಸ್ಥ ಧರ್ಮವನ್ನು ಚೆನ್ನಾಗಿ ಆಚರಿಸಿದ. ಸೀತೆಯೂ ಪತ್ನಿಯ ಶುಶ್ರೂಷೆಯಿಂದ ಅವನ ಮನಸ್ಸನ್ನು ಗೆದ್ದಳು.

❖ ❖ ❖

ಶ್ರೀರಾಮ ರಾಕ್ಷಸರನ್ನು ಸಂಹರಿಸುತ್ತ ಕಷ್ಟದಿಂದ ಕಾಡಿನಲ್ಲಿ ಸಂಚರಿಸುತ್ತ ವನವಾಸ ಮಾಡಿದನೆಂದು ಶುಕಮುನಿಗಳು ಹೇಳುತ್ತಾರೆ.

ರಕ್ಷಃಸ್ವಸುರ್ವ್ಯಕೃತ ರೂಪಮಶುದ್ಧಬುದ್ಧೇ-
ಸ್ತಸ್ಯಾಃ ಖರತ್ರಿಶಿರದೂಷಣಮುಖ್ಯಬಂಧೂನ್ ।
ಜಘ್ನೇ ಚತುರ್ದಶಸಹಸ್ರಮವಾರಣೀಯ
ಕೋದಂಡಪಾಣಿರಟಮಾನ ಉವಾಸ ಕೃಚ್ಛ್ರಮ್ ॥ ೯೧ ॥

ಶ್ರೀರಾಮ ರಾವಣನ ತಂಗಿಯಾದ ಶೂರ್ಪಣಖೆಯ ರೂಪವನ್ನು ವಿಕಾರಗೊಳಿಸಿದ. ಏಕೆಂದರೆ ಅವಳ ಬುದ್ಧಿ ಶುದ್ಧವಾಗಿರಲಿಲ್ಲ. ಬಳಿಕ ಅವಳ ಬಂಧುಗಳಾದ ಖರ ತ್ರಿಶಿರ ದೂಷಣ ಮುಂತಾದವರನ್ನು ವಧಿಸಿದ. ಅವರು ಹದಿನಾಲ್ಕು ಸಾವಿರ ಸಂಖ್ಯೆಯಲ್ಲಿದ್ದರೂ ಯಾರಿಗೂ ಇದಿರಿಸಲಾಗದಂಥ ಧನುಸ್ಸನ್ನು ಹಿಡಿದಿದ್ದ ಶ್ರೀರಾಮ. ಕಾಡಿನಲ್ಲಿ ಅಲೆಯುತ್ತ ಕಷ್ಟದಿಂದ ವನವಾಸ ಮಾಡಿದ.

ಇಲ್ಲಿ ಭಗವಾನ್ ಶ್ರೀರಾಮನಿಗೆ ವನವಾಸದ ಕ್ಲೇಶಾನುಭವ ಉಂಟೆ? ಎಂಬ ಪ್ರಶ್ನೆ ಬರುವುದು ಸಹಜ. ಇದಕ್ಕೆ ಸಮಾಧಾನ ಮುಂದಿನ ಅಧ್ಯಾಯದ ತಾತ್ಪರ್ಯವಚನದಲ್ಲಿ ಸಿಗುತ್ತದೆ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ನವಮಸ್ಕಂಧೇ
ಅಷ್ಟಮೋಽಧ್ಯಾಯಃ

❖ ❖ ❖

ಅಧ್ಯಾಯ - ೯

ಅಧ್ಯಾಯ ಸಾರಾಂಶ

ಶ್ರೀರಾಮ ಅನೇಕ ಯಜ್ಞಗಳನ್ನು ಮಾಡಿ ಹೋತೃ ಬ್ರಹ್ಮ ಅಧ್ವರ್ಯ ಉದ್ಗಾತೃಗಳೆಂಬ ನಾಲ್ಕು ಜನ ಋತ್ವಿಜರಿಗೆ ನಾಲ್ಕು ದಿಕ್ಕುಗಳ ಭೂಮಿಗಳನ್ನೂ ಆಚಾರ್ಯನಿಗೆ ಮಧ್ಯದ ಭೂಮಿಯನ್ನೂ ದಾನಮಾಡಿ ಸರ್ವಸ್ವದಕ್ಷಿಣೆ ನೀಡಿದ. ಸೀತೆಯೂ ಮಾಂಗಲ್ಯ ಒಂದನ್ನುಳಿದು ಬೇರೆ ಎಲ್ಲ ಆಭರಣಗಳನ್ನೂ ಸ್ತ್ರೀಯರಿಗೆ ಇತ್ತಳು. ಋತ್ವಿಜರೂ ಆಚಾರ್ಯನೂ ಆ ಭೂಮಿಯನ್ನೆಲ್ಲ ತಿರುಗಿ ಶ್ರೀರಾಮನಿಗೇ ಅರ್ಪಿಸಿದರು.

ಬಳಿಕ ಲೋಕಾಪವಾದಭಯದಿಂದ ಶ್ರೀರಾಮ ಸೀತೆಯನ್ನು ಪರಿತ್ಯಜಿಸಿದ. ಗರ್ಭವತಿಯಾಗಿದ್ದ ಅವಳು ವಾಲ್ಮೀಕಿಯ ಆಶ್ರಮದಲ್ಲಿ ಲವಕುಶರಿಗೆ ಜನ್ಮವಿತ್ತಳು. ಲಕ್ಷ್ಮಣನಿಂದ ಅಂಗದ ಚಿತ್ರಕೇತುಗಳು, ಭರತನಿಂದ ತಕ್ಷ ಪುಷ್ಕಲರು, ಶತ್ರುಘ್ನನಿಂದ ಸುಬಾಹು ಶ್ರುತಸೇನರು ಜನಿಸಿದರು. ಭರತ ದಿಗ್ವಿಜಯಮಾಡಿ ಕೋಟಿಗಟ್ಟಲೆ ಗಂಧರ್ವರನ್ನು ವಧಿಸಿ ಅವರ ಸಂಪತ್ತನ್ನು ಶ್ರೀರಾಮನಿಗೆ ಅರ್ಪಿಸಿದ. ಶತ್ರುಘ್ನ ಮಧುದಾನವನ ಮಗನಾದ ಲವಣಾಸುರನನ್ನು ಕೊಂದು ಮಧುವನವನ್ನೂ ಅದರಲ್ಲಿ ಮಧುರಾಪುರಿಯನ್ನೂ ನಿರ್ಮಿಸಿದ. ಸೀತೆ ಲೋಕದೃಷ್ಟಿಯಿಂದ ಭೂಗರ್ಭವನ್ನು ಪ್ರವೇಶಿಸಿದಳು. ಶ್ರೀರಾಮ ವಿರಹವೇದನೆಯನ್ನು ತಡೆದುಕೊಳ್ಳುವುದರಲ್ಲಿ ವಿಫಲನಾದಂತೆ ತೋರಿಕೊಂಡ. ಶ್ರೀರಾಮನ ರಾಜ್ಯಭಾರಕಾಲ ನಕ್ಷತ್ರ ಮಾನದ ಹದಿಮೂರು ಸಾವಿರ ವರ್ಷಗಳು.

❖❖❖

ಸೀತೆ ಭೂಮಿ ಪ್ರವೇಶ ಮಾಡಿದ್ದನ್ನು ಕೇಳಿ ಶ್ರೀರಾಮ ದುಃಖವನ್ನು ತಡೆದುಕೊಳ್ಳಲಾರದೆ ಹೋದನೆಂದು ಶುಕಮುನಿ ಹೇಳುತ್ತಾರೆ.

ತಚ್ಛ್ರುತ್ವಾ ಭಗವಾನ್ ರಾಮೋ ರುಂಧನ್ನಪಿ ಧಿಯಾ ಶುಚಃ ।
ಸ್ಮರಂಸ್ತಸ್ಯಾ ಗುಣಾಂಸ್ತಾಂಸ್ತಾನ್ ನಾಶಕ್ನೋದ್ ರೋದ್ಧುಮೀಶ್ವರಃ ॥ ೧೬ ॥

ಸೀತೆ ಭೂಮಿ ಪ್ರವೇಶ ಮಾಡಿದ್ದನ್ನು ಕೇಳಿ ಸರ್ವೇಶ್ವರನಾದ ಶ್ರೀರಾಮ ದುಃಖವನ್ನು ಗಟ್ಟಿ ಮನಸ್ಸಿನಿಂದ ತಡೆದುಕೊಳ್ಳಲು ಯತ್ನಿಸಿದ. ಆದರೂ ಸೀತೆಯ ಆಯಾ ಸದ್ಗುಣಗಳನ್ನು ಒಂದೊಂದಾಗಿ ನೆನೆದು ತನ್ನ ಆ ಯತ್ನದಲ್ಲಿ ವಿಫಲನೇ ಆದ.

ಇಲ್ಲಿ ಹಿಂದಿನ ಅಧ್ಯಾಯದಲ್ಲಿ ಭಗವಾನ್ ಶ್ರೀರಾಮ ವನವಾಸದಲ್ಲಿ ಕ್ಲೇಶಗಳನ್ನು ಅನುಭವಿಸಿದ ಎಂದಿದ್ದಾರೆ. ಈ ಅಧ್ಯಾಯದಲ್ಲಿ ಸೀತಾವಿಯೋಗದಿಂದ ಕೊರಗಿದ ಎಂದು ಹೇಳುತ್ತಿದ್ದಾರೆ. ಆದರೆ ಇದು ಶ್ರೀರಾಮನ 'ರಾಮ' ಎಂಬ ಹೆಸರಿಗೇ ವಿಪರೀತವಾಗಿದೆ. ರಾಮ ಎಂದರೆ ರಮಣ ಮಾಡುವವನು. ಸ್ವರಮಣನಾಗಿದ್ದು ಸ್ವರೂಪಭೂತವಾದ ಆನಂದಸಾಗರದಲ್ಲಿಯೇ ಸದಾ ಮಗ್ನನಾಗಿರುವವನು. ಅವನಿಗೂ ಕಷ್ಟಗಳು ವಿಯೋಗ ದುಃಖಗಳು ಉಂಟೆ? ಅದರಿಂದ ಭಾಗವತದ ಅಭಿಪ್ರಾಯವನ್ನು ಹೀಗೆ ಹೇಳಬೇಕು ಎಂದು ಸ್ಕಂದ ಪುರಾಣ ಹೇಳುತ್ತದೆ-

ನಿತ್ಯಪೂರ್ಣ ಸುಖಜ್ಞಪ್ತಿಸ್ವರೂಪೋऽಸೌ ಯತೋ ವಿಭುಃ ।
ಅತೋऽಸ್ಯ ರಾಮ ಇತ್ಯಾಖ್ಯಾ ತಸ್ಯ ದುಃಖಂ ಕುತೋऽಣ್ವಪಿ ।
ತಥಾಪಿ ಲೋಕಶಿಕ್ಷಾರ್ಥಂ ಅದುಃಖೋ ದುಃಖವರ್ತಿವತ್ ॥

ನಿತ್ಯವಾದ ಪೂರ್ಣವಾದ ಆನಂದಜ್ಞಾನ ಸ್ವರೂಪನು ಭಗವಾನ್ ಶ್ರೀರಾಮ. ಅದರಿಂದಲೇ ಅವನಿಗೆ ರಾಮ ಎಂದು ಹೆಸರು. ಅಂಥವನಿಗೆ ಸ್ವಲ್ಪವಾದರೂ ದುಃಖ ಉಂಟಾಗುವುದು ಹೇಗೆ? ಆದರೂ ಲೋಕಕ್ಕೆ ಹೆಂಡಿರು ಮಕ್ಕಳು ಮುಂತಾದ ಸಂಸಾರದಲ್ಲಿ ಅತಿಯಾಗಿ ಆಸಕ್ತಿ ಬೆಳೆಸಿಕೊಂಡರೆ ಇಂಥ ದುಃಖ ತಪ್ಪಿದ್ದಲ್ಲ ಎಂದು ತಿಳಿಸುವುದಕ್ಕಾಗಿ ದುಃಖರಹಿತನಾದರೂ ತಾನು ಸೀತಾವಿಯೋಗದಿಂದ ದುಃಖಿತನಾದಂತೆ ತೋರಿಕೊಂಡ.

'ರಾಮ' ಎಂಬ ಹೆಸರಿನಲ್ಲಿಯೇ ರಾಮ ನಿತ್ಯಪೂರ್ಣ ಸುಖಜ್ಞಾನ ಸ್ವರೂಪನೆಂಬುದು ಗರ್ಭಿತವಾಗಿದೆ. 'ರ ಆ ಮ' ಎಂದು ಮೂರು ಅಕ್ಷರಗಳು ಇದರಲ್ಲಿ ಇವೆ. ರ ಎಂದರೆ ಸುಖ, ಮ ಎಂದರೆ ಜ್ಞಾನ. ಇವೆರಡೂ ಆ ಎಂದರೆ ನಿತ್ಯವಾಗಿವೆ, ಪೂರ್ಣವಾಗಿವೆ ಎಂದರ್ಥ. ಎರಡಕ್ಕೂ ಅನ್ವಯವಾಗುವಂತೆ ಎರಡರ ಮಧ್ಯದಲ್ಲಿ ಈ ಅಕ್ಷರವಿದೆ.

❖❖❖

ಸೀತೆ ಭೂಮಿಪ್ರವೇಶ ಮಾಡಿದ ವೃತ್ತಾಂತವನ್ನು ಶುಕಮುನಿ ಪರೀಕ್ಷಿತನಿಗೆ ಹೇಳುತ್ತಾರೆ.

ಮುನೌ ನಿಕ್ಷಿಪ್ಯ ತನಯೌ ಸೀತಾ ಭರ್ತ್ರಾ ವಿವಾಸಿತಾ ।
ಧ್ಯಾಯಂತೀ ರಾಮಚರಣೌ ವಿವರಂ ಪ್ರವಿವೇಶ ಹ ॥ ೧೫ ॥

ಪತಿಯಿಂದ ಪರಿತ್ಯಕ್ತಳಾದ ಸೀತಾದೇವಿ ಇಬ್ಬರು ಪುತ್ರರನ್ನು ವಾಲ್ಮೀಕಿ ಮುನಿಯ ರಕ್ಷಣೆಯಲ್ಲಿರಿಸಿ ಶ್ರೀರಾಮನ ಚರಣಗಳನ್ನು ಧ್ಯಾನಿಸುತ್ತ ಲೋಕದೃಷ್ಟಿಯಿಂದ ಭೂಗರ್ಭವನ್ನು ಪ್ರವೇಶಿಸಿದಳು.

ಸೀತಾರಾಮರು ಲಕ್ಷ್ಮೀನಾರಾಯಣರು, ನಿತ್ಯಾವಿಯೋಗಿ ದಂಪತಿಗಳು, ಎಲ್ಲ ದೇಶಕಾಲಗಳಲ್ಲಿ ಸಮವ್ಯಾಪ್ತರು. ಆದರಿಂದ ಸೀತೆ ಪರಿತ್ಯಕ್ತಳಾದಳೆನ್ನುವುದು ಹೇಗೆ ಎಂಬ ಪ್ರಶ್ನೆಗೆ 'ಲೋಕದೃಷ್ಟಿಯಿಂದ ಪರಿತ್ಯಕ್ತಳಂತೆ ಕಂಡುಬಂದಳು ಹೊರತು ವಾಸ್ತವದಲ್ಲಿ ಅವಳು ಯಾರಿಗೂ ಕಾಣದಂತೆ ಶ್ರೀರಾಮನಿಗೆ ಕಾಣುವಂತೆ ಶ್ರೀರಾಮನ ಜೊತೆಗೇ ಇದ್ದಳು. ಲೋಕದೃಷ್ಟಿಯಿಂದಲೇ ರಾಮ ಸೀತಾವಿರಹತಪ್ತನಾದಂತೆ ತೋರಿಕೊಂಡಿದ್ದ' ಎಂದು ಸಮಾಧಾನ ಹೇಳಬೇಕು. ಇದು ರಾಮಾಯಣಕ್ಕೂ ಸಮ್ಮತ. ಅಲ್ಲಿ ಹೇಳಿದಂತೆ ಶ್ರೀರಾಮ ಪರಂಧಾಮಕ್ಕೆ ಹೋಗುವಾಗ ಜೊತೆಗೆ ಸೀತೆಯೂ ಎಲ್ಲರೂ ನೋಡುತ್ತಿದ್ದಂತೆ ರಾಮನ ಜೊತಗೇ ಹೋದಳು.

ಅಂತರ್ಹಿತಾಂ ಲೋಕದೃಷ್ಟ್ಯಾ ಸೀತಾಮಾಸೀತ್ ಸ್ಮರನ್ನಿವ ।
ಜ್ಞಾಪನಾರ್ಥಂ ಪುನರ್ನಿತ್ಯಸಂಬಂಧಂ ಸ್ವಾತ್ಮನಃ ಶ್ರಿಯಾ।
ಅಯೋಧ್ಯಾಯಾ ವಿನಿರ್ಗಚ್ಛನ್ ಸರ್ವಲೋಕಸ್ಯ ಚೇಶ್ವರಃ ।
ಪ್ರತ್ಯಕ್ಷಂ ತು ಶ್ರಿಯಾ ಸಾರ್ಧಂ ಜಗಾಮಾನಾದಿರವ್ಯಯಃ ॥

ಲೋಕದೃಷ್ಟಿಯಿಂದ ಸೀತಾದೇವಿ ಭೂಗರ್ಭವನ್ನು ಪ್ರವೇಶಿಸಿ ಮರೆಯಾದಳು, ಶ್ರೀರಾಮನೂ ಮರೆಯಾದ ದೇವಿಯನ್ನು ಸದಾ ನೆನೆಯುತ್ತಿರುವಂತೆ ತೋರಿಕೊಂಡ. ವಾಸ್ತವದಲ್ಲಿ ಅವಳು ಶ್ರೀರಾಮನ ಜೊತೆಗೇ ಇದ್ದಳು. ತನಗೆ ಶ್ರೀದೇವಿಯೊಡನೆ ನಿತ್ಯಸಂಬಂಧವೆಂದು ತಿಳಿಸುವುದಕ್ಕಾಗಿ ಜನನಮರಣ ರಹಿತನಾದ ಶ್ರೀರಾಮ ಅಯೋಧ್ಯೆಯಿಂದ ಹೊರಟುಹೋಗುವಾಗ ಎಲ್ಲರೂ ನೋಡುತ್ತಿದ್ದಂತೆ ಶ್ರೀದೇವಿಯೊಂದಿಗೇ ಹೊರಟುಹೋದ.

ವಾಲ್ಮೀಕಿರಾಮಾಯಣ (ಉತ್ತರಕಾಂಡ ೧೦೯.೬)ದಲ್ಲಿ ಸೀತೆ ಶ್ರೀ ಭೂ

ಎಂಬ ಎರಡು ರೂಪಗಳಿಂದ ಎಲ್ಲರ ಕಣ್ಣುಗಳಿಗೆ ಗೋಚರಳಾಗಿ ಶ್ರೀರಾಮನಿಗೆ ಇಕ್ಕೆಲಗಳಲ್ಲಿ ಚಾಮರ ಬೀಸುತ್ತ ಜೊತೆಗೇ ಪರಂಧಾಮಕ್ಕೆ ನಡೆದಳು ಎಂದಿದೆ. ಅದರಿಂದ ಭೂಮಿಪ್ರವೇಶ ವಾಸ್ತವವಲ್ಲ. ಶ್ರೀರಾಮ ವಿಯೋಗದುಃಖದಿಂದ ಅತ್ತಿದ್ದೂ ವಾಸ್ತವವಲ್ಲ. ಅಸುರರ ಮೋಹನಕ್ಕಾಗಿ ನಡೆಸಿದ ನಾಟಕ.

❖❖❖

ಶ್ರೀರಾಮನ ರಾಜ್ಯಭಾರ ಒಟ್ಟು ಹದಿಮೂರು ಸಾವಿರ ವರ್ಷಗಳೆಂದು ಶುಕಮುನಿಗಳು ಪರೀಕ್ಷಿತನಿಗೆ ಹೇಳುತ್ತಾರೆ.

ತತ ಊರ್ಧ್ವಂ ಬ್ರಹ್ಮಚರ್ಯಂ ಧಾರಯನ್ನಜುಹೋತ್ಪ್ರಭುಃ ।
ತ್ರಯೋದಶಾಬ್ದಸಾಹಸ್ರಮಗ್ನಿಹೋತ್ರಮಖಂಡಿತಮ್ ॥ ೧೮ ॥

ಸೀತೆ ಭೂಮಿ ಪ್ರವೇಶ ಮಾಡಿದಮೇಲೆ ಶ್ರೀರಾಮ ಬೇರೆ ವಿವಾಹ ವಾಗದೆ ಅಖಂಡ ಬ್ರಹ್ಮಚರ್ಯವನ್ನು ಪಾಲಿಸಿದ. ಒಟ್ಟು ಹದಿಮೂರು ಸಾವಿರ ವರ್ಷಕಾಲ ಅವ್ಯಾಹತವಾಗಿ ರಾಜ್ಯಭಾರ ಮಾಡುತ್ತ ಅಗ್ನಿಹೋತ್ರ ಹೋಮವನ್ನು ನಿತ್ಯ ನಡೆಸಿದ.

ಇಲ್ಲಿ ಭಾಗವತ ಶ್ರೀರಾಮನ ರಾಜ್ಯಭಾರಕಾಲ ಒಟ್ಟು ಹದಿಮೂರು ಸಾವಿರ ವರ್ಷಗಳೆಂದು ಹೇಳುತ್ತಿದೆ. ಆದರೆ ರಾಮಾಯಣ ಹನ್ನೊಂದು ಸಾವಿರ ವರ್ಷಗಳೆಂದು ಹೇಳುತ್ತಿದೆ-

ದಶ ವರ್ಷಸಹಸ್ರಾಣಿ ದಶ ವರ್ಷಶತಾನಿ ಚ ।
ಭ್ರಾತೃಭಿಃ ಸಹಿತಃ ಶ್ರೀಮಾನ್ ರಾಮೋ ರಾಜ್ಯಮಕಾರಯತ್ ॥

ವಿಷ್ಣು ಪುರಾಣ ಹನ್ನೆರಡು ಸಾವಿರ ವರ್ಷಗಳೆಂದು ಹೇಳುತ್ತಿದೆ-

ದ್ವಾದಶಾಬ್ದಸಹಸ್ರಂ ತು ರಾಮೋ ರಾಜ್ಯಂ ಚಕಾರ ಹ ॥

ಇವುಗಳಲ್ಲಿ ಪರಸ್ಪರ ವಿರೋಧ ಕಾಣುತ್ತದೆ ಇದಕ್ಕೆ ಹೇಗೆ ಪರಿಹಾರ ಎಂಬ ಪ್ರಶ್ನೆಗೆ ರಾಮಾಯಣ ಭಾಗವತಗಳು ಹೇಳುವುದು ಬೇರೆಬೇರೆ ಕಲ್ಪಗಳಿಗೆ ಸಂಬಂಧಿಸಿದವುಗಳೆಂದು ಗಿರಿಧರ ವ್ಯಾಖ್ಯಾನ ಹೇಳುತ್ತದೆ. ಆದರೆ ರಾಮಕಥೆ ಯಾವ ಕಲ್ಪದಲ್ಲಿಯೂ ವ್ಯತ್ಯಾಸ ಹೊಂದುವುದಿಲ್ಲ ಎಂದು ಹಿಂದೆ ನಿರ್ಣಯದಲ್ಲಿ (೪.೧.೩೩) ಹೇಳಿದ್ದಾರೆ. ಭಾಗವತ ಹೇಳುವ ಕಾಲಮಾನವೇ ಸರಿಯಾದುದು ರಾಮಾಯಣ ವಿಷ್ಣುಪುರಾಣ ವಚನಗಳನ್ನು ಅದಕ್ಕೆ ಹೊಂದಿಸಿಕೊಳ್ಳಬೇಕು ಎಂದು

ಸ್ಕಂದಪುರಾಣ ಪರಿಹಾರ ನೀಡುತ್ತದೆ. ಅದರ ಪ್ರಕಾರ ಭಾಗವತ ಹೇಳಿದ್ದು ನಾಕ್ಷತ್ರಮಾನದ ವರ್ಷಗಳನ್ನು. ಇಪ್ಪತ್ತೇಳು ನಕ್ಷತ್ರಗಳಿಂದ ಇಪ್ಪತ್ತೇಳು ದಿನಗಳ ಒಂದು ತಿಂಗಳಾಗುತ್ತದೆ. ಈ ನಕ್ಷತ್ರಮಾಸ ಪ್ರಕಾರ ಹದಿಮೂರು ಸಾವಿರ ವರ್ಷಗಳೆಂದರೆ ಮುನ್ನೂರ ಅರವತ್ತು ದಿನಗಳ ವರ್ಷಗಳು ಹನ್ನೊಂದು ಸಾವಿರದ ಏಳು ನೂರು ಆಗುತ್ತವೆ. ಇದರಲ್ಲಿ ಏಳುನೂರು ವರ್ಷಗಳು ಸೀತೆ ಭೂಮಿಪ್ರವೇಶ ಮಾಡಿದ ಮೇಲೆ ರಾಮ ರಾಜ್ಯಭಾರ ಮಾಡಿದ ಕಾಲ. ಇದು ಮಹಾಭಾರತ ತಾತ್ಪರ್ಯನಿರ್ಣಯದಲ್ಲಿದೆ.

ಭೂಮಿಪ್ರವೇಶಾದೂರ್ಧ್ವಂ ಸಾ ರೇಮೇ ಸಪ್ತಶತಂ ಸಮಾಃ ।
ರಾಮಸ್ಯ ದೃಶ್ಯಾ ತ್ವನ್ಯೇಷಾಮದೃಶ್ಯಾ ಜನಕಾತ್ಮಜಾ ।

ಈ ಏಳುನೂರು ವರ್ಷಗಳನ್ನು ಬಿಟ್ಟರೆ ಸೀತೆಯೊಂದಿಗೆ ರಾಜ್ಯಭಾರ ಮಾಡಿದ ಕಾಲ ಹನ್ನೊಂದು ಸಾವಿರ ವರ್ಷಗಳೆಂದು ರಾಮಾಯಣವನ್ನು ಕೂಡಿಸಬೇಕು. ಹನ್ನೊಂದು ಸಾವಿರದ ಏಳುನೂರು ವರ್ಷಗಳೇ ಒಟ್ಟು ರಾಜ್ಯಭಾರ ಕಾಲ, ಅದು ಹನ್ನೆರಡು ಸಾವಿರಕ್ಕೆ ಸಮೀಪದ ಸಂಖ್ಯೆ ಎಂಬ ಅಭಿಪ್ರಾಯದಿಂದ ವಿಷ್ಣುಪುರಾಣ ಹನ್ನೆರಡು ಸಾವಿರ ವರ್ಷಗಳೆಂದಿದೆ.

ವೀರರಾಘವ ಭಗವತ್ಪ್ರಸಾದ ವ್ಯಾಖ್ಯಾನಗಳ ಪ್ರಕಾರ ಶ್ರೀರಾಮ ಸೀತೆಯನ್ನು ಬಿಟ್ಟು ಒಂದು ಸಾವಿರ ವರ್ಷಕಾಲ ರಾಜ್ಯವಾಳಿದ. ಅದು ಅವನಿಗೆ ಮೂರು ಸಾವಿರದಂತೆ ಎನಿಸಿತು. ಸೀತೆಯ ಜೊತೆಗೆ ಆಳಿದ ಕಾಲ ಹತ್ತು ಸಾವಿರ ವರ್ಷ. ಒಟ್ಟು ಹದಿಮೂರು ಸಾವಿರ ವರ್ಷಗಳು. ಆದರೆ ಇದನ್ನು ಮಹಾಭಾರತ ತಾತ್ಪರ್ಯ ನಿರ್ಣಯ ಒಪ್ಪುವುದಿಲ್ಲ.

ನಾಕ್ಷತ್ರಮಾಸಗಣಿತಂ ತ್ರಯೋದಶ ಸಹಸ್ರಕಂ ।
ಬ್ರಹ್ಮಲೋಕಸಮಂ ಚಕ್ರೇ ಸಮಸ್ತಂ ಕ್ಷಿತಿಮಂಡಲಂ ।

ನಕ್ಷತ್ರಮಾಸದಿಂದ ಗಣನೆ ಮಾಡಿದಾಗ ಲಭಿಸುವ ಹದಿಮೂರು ಸಾವಿರ ವರ್ಷಗಳ ಕಾಲ ಇಡೀ ಭೂಮಂಡಲವನ್ನು ಬ್ರಹ್ಮಲೋಕಕ್ಕೆ ಸಮಾನ ವನ್ನಾಗಿ ಮಾಡಿದ, ಶ್ರೀರಾಮ. ಎಂದು ಸ್ಕಂದಪುರಾಣದಲ್ಲಿ ಹೇಳಿದೆ.

❖❖❖

ಸ್ಮರಿಸುವವರ ಹೃದಯದಲ್ಲಿ ಶ್ರೀರಾಮ ತನ್ನ ಪಾದಕಮಲ ಧ್ಯಾನವನ್ನು ಅನುಗ್ರಹಿಸುತ್ತಿದ್ದನೆಂದು ಶುಕಮುನಿ ಪರೀಕ್ಷಿತನಿಗೆ ಹೇಳುತ್ತಾರೆ-

ಸ್ಮರತಾಂ ಹೃದಿ ವಿನ್ಯಸ್ಯ ಬುದ್ಧಂ ಪದ್ಮಮಿವಾಂಶುಕೈಃ ।
ಸ್ವಪಾದಕಮಲಂ ರಾಮ ಆತ್ಮಜ್ಯೋತಿರಗಾತ್ ತತಃ ॥ ೯.೯.೧೯ ॥

ಸ್ಮರಿಸುವವರ ಹೃದಯದಲ್ಲಿ ಸೂರ್ಯಕಿರಣಗಳಿಂದ ಅರಳಿದ ತಳಿರಿನಂಥ ತನ್ನ ಕೋಮಲಪಾದವನ್ನು ನಿಲ್ಲಿಸಿ ಸ್ವಯಂಜ್ಯೋತಿ ಶ್ರೀರಾಮ ಪರಂಧಾಮಕ್ಕೆ ತೆರಳಿದ.

ರಾಜ್ಯವಾಳುವ ಕಾಲದಲ್ಲಿ ಶ್ರೀರಾಮ ಪ್ರಜೆಗಳ ಅನುರಾಗ ಪಾತ್ರನಾಗಿದ್ದು ಸದಾ ಅವರ ಮನದೊಳಗೇ ಇರುತ್ತಿದ್ದ. ಹೃದಯದಲ್ಲಿ ತನ್ನ ಪಾದಕಮಲ ಧ್ಯಾನವನ್ನು ನಿರಂತರ ನೀಡುತ್ತಿದ್ದ. ಪರಂಧಾಮಕ್ಕೆ ತೆರಳುವಾಗ ಇನ್ನೂ ವಿಶೇಷವಾಗಿ ಆ ಅನುಗ್ರಹ ಮಾಡಿ ಹೋದನೆಂದು ಇಲ್ಲಿ ಭಾಗವತ ಹೇಳುತ್ತಿದೆ.

ರಾಮರಾಜ್ಯದಲ್ಲಿ ಪ್ರಮಾದದಿಂದ ಹಿಂಸಾಪರರಾದ ಜನರೂ ಕೂಡ ಶ್ರೀರಾಮನಾಮವನ್ನು ಕೇಳಿ ಜಪಿಸಿ ಸಂಸಾರಬಂಧನದಿಂದ ಮುಕ್ತರಾಗುತ್ತಿದ್ದರು ಎಂದು ಶುಕಮುನಿ ಪರೀಕ್ಷಿತನಿಗೆ ಹೇಳುತ್ತಾರೆ-

ಪುರುಷೋ ರಾಮಚರಿತಂ ಶ್ರವಣೈರುಪಧಾರಯನ್ ।
ಆನೃಶಂಸ್ಯಪರೋ ರಾಜನ್ ಕರ್ಮಬಂಧೈರ್ವಿಮುಚ್ಯತೇ ॥ ೯.೯.೨೩ ॥

ರಾಜನೆ, ಶ್ರೀರಾಮನ ಚರಿತ್ರೆಯನ್ನು ಹೇಳಿ ಕೇಳುವ ನೆನೆಯುವ ಜನರು ಪ್ರಮಾದದಿಂದ ಹಿಂಸಾಪರರಾಗಿದ್ದವರೂ ಕೂಡ ಕರ್ಮಬಂಧಗಳಿಂದ ಮುಕ್ತರಾಗುತ್ತಿದ್ದರು.

ರಾಮರಾಜ್ಯದಲ್ಲಿ ಎಲ್ಲ ಪ್ರಜೆಗಳೂ 'ಅ-ನೃಶಂಸ'ರು ಅ-ಹಿಂಸಾಪರರು 'ಆ-ನೃಶಂಸ್ಯಪರ'ರು. ಕೆಲವರು ಪ್ರಮಾದದಿಂದ 'ಆ-ನೃಶಂಸರು' ಬಹಳ ಹಿಂಸಾಪರರೂ ಆಗುತ್ತಿದ್ದರು. 'ಆನೃಶಂಸ್ಯಪರ'ರೆನಿಸುತ್ತಿದ್ದರು. ಆದರೆ ಅವರೂ ರಾಮನಾಮ ಜಪಿಸಿ ಮುಕ್ತರಾಗುತ್ತಿದ್ದರು. ('ಶ್ರವಣೈಃ' ಎಂದು ಬಹುವಚನದಿಂದ ಶ್ರವಣ, ಕೀರ್ತ, ಮನನ, ಧ್ಯಾನ ಜಪಗಳೆಲ್ಲವೂ ಉಕ್ತವಾಗಿವೆ.) ಏಕೆಂದರೆ ಲೋಕವೇ ರಾಮಮಯವಾದಾಗ ಕೆಲವೇ ಮಂದಿ ಹಿಂಸಾಪರರಾದ ಜನರೂ ವಾತಾವರಣ ಪ್ರಭಾವದಿಂದ ರಾಮನಾಮ ಜಪಿಸುತ್ತಿದ್ದರು. ಅಹಿಂಸಾಪರರಾಗಿ ಮೋಕ್ಷ ಪಡೆಯುತ್ತಿದ್ದರು ಎಂದು ಭಾಗವತ ಹೇಳುತ್ತಿದೆ.

ಈ ಭಾಗವತ ವಚನಗಳಿಗೆ ಸ್ಕಾಂದಪುರಾಣದ ಈ ವಚನ ಸಂವಾದಿಯಾಗದೆ

ರಾಮೋರಾಮೋರಾಮ ಇತಿ ಸರ್ವೇಷಾಮಭವತ್ತದಾ ।
ಸರ್ವೋ ರಾಮಮಯೋ ಲೋಕೋ ಯದಾ ರಾಮಸ್ತ್ವಪಾಲಯತ್॥
ಇತಿ ಸ್ಕಾಂದೇ ॥

ಅಹಿಂಸಾಪರರು ಎಂದೂ, ಪ್ರಮಾದದಿಂದ ಹಿಂಸಾಪರರಾಗಿದ್ದವರು ಎಂದೂ ಎರಡೂ ಬಗೆಯ ಎಲ್ಲ ಪ್ರಜೆಗಳ ಬಾಯಿಯಲ್ಲಿ ಕಿವಿಗಳಲ್ಲಿ ಮನದಲ್ಲಿ ರಾಮ ರಾಮ ರಾಮ ಎಂದು ಎರಡಕ್ಷರಗಳೇ ತುಂಬಿರುತ್ತಿದ್ದುವು. ರಾಮ ರಾಜ್ಯವಾಳುತ್ತಿದ್ದಾಗ ಲೋಕವೇ ರಾಮಮಯವಾಗಿತ್ತು. ಎಲ್ಲೆಡೆ ಜನರು ಶ್ರೀರಾಮನನ್ನೇ ಆರಾಧಿಸುತ್ತಿದ್ದರು ಎಂದು ಸ್ಕಂದಪುರಾಣದಲ್ಲಿ ಉಕ್ತವಾಗಿದೆ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ನವಮಸ್ಕಂಧೇ
ನವಮೋಽಧ್ಯಾಯಃ

❖ ❖ ❖

ಅಧ್ಯಾಯ - ೧೦

ಅಧ್ಯಾಯ ಸಾರಾಂಶ

ಕುಶನ ವಂಶದಲ್ಲಿ ಬಂದ ಹಿರಣ್ಯನಾಭ ಜೈಮಿನಿಯ ಶಿಷ್ಯ. ಯೋಗಶಾಸ್ತ್ರೋಪದೇಶಕ. ಅವನಿಂದ ಯಾಜ್ಞವಲ್ಕ್ಯಮುನಿ ಪರಮಾತ್ಮತತ್ವಜ್ಞಾನವೆಂಬ ಯೋಗವನ್ನು ಕಲಿತುಕೊಂಡ. ಮುಂದೆ ಈ ವಂಶದಲ್ಲಿ ಬಂದವನು ಮರುತ. ಈತನೂ ಯೋಗಸಿದ್ಧನಾಗಿದ್ದು ಇಂದಿಗೂ ಕಲಾಪಗ್ರಾಮದಲ್ಲಿದ್ದಾನೆ. ಕಲಿಯುಗದ ಕೊನೆಯಲ್ಲಿ ಸೂರ್ಯವಂಶ ನಿಂತು ಹೋಗುವಾಗ ಅದನ್ನು ತಿರುಗಿ ಮುಂದುವರಿಯುವಂತೆ ಮಾಡುತ್ತಾನೆ. ಇವನ ವಂಶದಲ್ಲಿ ಮುಂದೆ ಬಂದ ಬೃಹದ್ಬಲ ಅಭಿಮನ್ಯುವಿನಿಂದ ಕುರುಕ್ಷೇತ್ರಯುದ್ಧದಲ್ಲಿ ಹತನಾದ. ಅವನ ವಂಶದಲ್ಲಿ ಕೊನೆಯ ರಾಜ ಸುಮಿತ್ರ. ಅವನಿಗೆ ಮಕ್ಕಳಿಲ್ಲ. ಕಲಿಯುಗದಲ್ಲಿ ಈ ವಂಶ ಇಲ್ಲಿಯೇ ಕೊನೆಗೊಳ್ಳುತ್ತದೆ.

❖❖❖

ಅಧ್ಯಾಯ - ೧೧

ಅಧ್ಯಾಯ ಸಾರಾಂಶ

ಇಕ್ಷ್ವಾಕುಪುತ್ರನಾದ ನಿಮಿರಾಜ ಒಂದು ಸತ್ರವನ್ನು ಆರಂಭಿಸುವ ಮುನ್ನ ಅದರಲ್ಲಿ ಋತ್ವಿಜನಾಗಲು ವಸಿಷ್ಠರನ್ನು ಕೇಳಿಕೊಂಡಾಗ ಅವರು ಹೇಳಿದರು. 'ನಿನಗಿಂತ ಮೊದಲು ದೇವೇಂದ್ರ ತನ್ನ ಯಾಗದಲ್ಲಿ ಋತ್ವಿಜನಾಗಲು ನನ್ನನ್ನು ಕೇಳಿಕೊಂಡಿದ್ದಾನೆ. ಆ ಯಾಗವನ್ನು ಮುಗಿಸಿ ಬರುತ್ತೇನೆ, ಕಾದಿರು' ಎಂದು. ನಿಮಿ ಕಾಯಲಿಲ್ಲ. ಬೇರೆ ಋತ್ವಿಜರಿಂದ ಯಜ್ಞ ಪ್ರಾರಂಭಿಸಿದ. ವಸಿಷ್ಠರು ಬಂದು ಸಿಟ್ಟಾಗಿ 'ನಿನ್ನ ಶರೀರ ಬಿದ್ದುಹೋಗಲಿ' ಎಂದರು. 'ನಿರಪರಾಧಿಗೆ ಶಾಪ ನೀಡಿದ ನಿಮ್ಮ ಶರೀರವೂ ಬಿದ್ದುಹೋಗಲಿ' ಎಂದು ನಿಮಿಯೂ ಶಾಪವಿತ್ತ.

ವಸಿಷ್ಠರು ಮಿತ್ರಾವರುಣರ ವೀರ್ಯದಿಂದ ಜನಿಸಿದರು.

ನಿಮಿಯ ಶರೀರವನ್ನು ತಿರುಗಿ ಜೀವಂತವಾಗಿಸಲು ಮುನಿಗಳು ದೇವತೆಗಳನ್ನು ಕೇಳಿಕೊಂಡರು. ದೇವತೆಗಳು ತಥಾಸ್ತು ಎಂದರು. ಆದರೂ ತಿರುಗಿ ಮರಣವನ್ನೇ ಹೊಂದುವ ಸ್ಥೂಲಶರೀರವನ್ನು ಪ್ರವೇಶಿಸಲು ನಿಮಿರಾಜ ಒಪ್ಪಲಿಲ್ಲ. ಅದಕ್ಕೆ ದೇವತೆಗಳು ಅವನಿಗೆ ಸೂಕ್ಷ್ಮಶರೀರವಿತ್ತರು.

'ಎಲ್ಲರ ಸ್ಥೂಲಶರೀರಗಳಲ್ಲಿ ಅವರ ಕಣ್ಣಿನ ರೆಪ್ಪೆಯಲ್ಲಿದ್ದು ಕಣ್ಣನ್ನು ಕಾಪಾಡುವ ಕಾರ್ಯಮಾಡು' ಎಂದು ವರವಿತ್ತರು. ನಿಮಿಗೆ ಮಕ್ಕಳಿರಲಿಲ್ಲ. ಮುನಿಗಳು ಅವನ ಶರೀರವನ್ನು ಮಥಿಸಿದರು. ಆಗ ಹುಟ್ಟಿದವನು, ವಿಲಕ್ಷಣ ರೀತಿಯಿಂದ ಜನಿಸಿದ್ದರಿಂದ 'ಜನಕ'ನೆಂದೂ, 'ವಿದೇಹ'ನಾದ ಅಂದರೆ ಸ್ಥೂಲಶರೀರರಹಿತನಾದ ನಿಮಿಯ ಪುತ್ರನಾದ್ದರಿಂದ 'ವೈದೇಹ'ನೆಂದೂ, ಶರೀರದ ಮಥನದಿಂದ ಹುಟ್ಟಿದ್ದರಿಂದ 'ಮೈಥಿಲ'ನೆಂದೂ ಕರೆಸಿಕೊಂಡ. ಅವನ ನಗರವೂ, ಅದರೊಳಗೆ ಬಂದರೆ ಶತ್ರುಗಳ ಮಥನವಾಗುವುದರಿಂದ, ಮಿಥಿಲೆ ಎನಿಸಿತು.

ಜನಕನ ವಂಶದಲ್ಲಿ ಮುಂದೆ ಸೀರಧ್ವಜ ಬಂದ. ಈತನಿಗೆ ಜನಕ ಮೈಥಿಲ ವೈದೇಹ ಎಂಬುವು ಕುಲನಾಮಗಳು. ಈತ ಯಜ್ಞಕ್ಕಾಗಿ ಭೂಶೋಧ ಮಾಡುತ್ತ ಬಂಗಾರದ ನೇಗಿಲಿನಿಂದ ಉಳುತ್ತಿದ್ದಾಗ ನೇಗಿಲಿನ ಗುಳ(ಸೀರ)ದಿಂದ ಸೀತಾದೇವಿ ಪ್ರಾದುರ್ಭವಿಸಿದಳು. ಆದರಿಂದ ಅವನ 'ಸೀರಧ್ವಜ'ನಾಮ ಸಾರ್ಥಕವಾಯಿತು.

ಇವನ ವಂಶದಲ್ಲಿ ಕೇಶಿಧ್ವಜ ಖಾಂಡಿಕ್ಯರು ಜನಿಸಿದರು. ಕೇಶಿಧ್ವಜ ಬ್ರಹ್ಮಜ್ಞಾನಿಯೂ ಖಾಂಡಿಕ್ಯ ಕರ್ಮಜ್ಞಾನಿಯೂ ಆಗಿದ್ದ.

ಜನಕನ ವಂಶದವರೆಲ್ಲರೂ ಯೋಗೇಶ್ವರ ಯಾಜ್ಞವಲ್ಕ್ಯರ ಅನುಗ್ರಹದಿಂದ ಗೃಹಸ್ಥಾಶ್ರಮದಲ್ಲಿದ್ದೂ ಬ್ರಹ್ಮಜ್ಞಾನಿಗಳೆನಿಸಿದರು.

❖❖❖

ಅಧ್ಯಾಯ - ೧೨

ಅಧ್ಯಾಯ ಸಾರಾಂಶ

ಮುಂದೆ ಚಂದ್ರವಂಶ ವರ್ಣನೆ. ಶ್ರೀಮನ್ನಾರಾಯಣನ ನಾಭಿಕಮಲದಲ್ಲಿ ಜನಿಸಿದ ಬ್ರಹ್ಮನ ಮಾನಸಪುತ್ರ ಅತ್ರಿಮುನಿ. ಅತ್ರಿಯ ಆನಂದಬಾಷ್ಪಗಳಿಂದ ಚಂದ್ರ ಉದಿಸಿದ. ಚಂದ್ರ ಮೂಲೋಕವನ್ನು ಗೆದ್ದು ರಾಜಸೂಯಯಾಗ ಮಾಡಿದ್ದರಿಂದ ಅಹಂಕಾರವಶನಾಗಿ ಗುರುಪತ್ನಿಯಾದ ತಾರೆಯನ್ನು ಅಪಹರಿಸಿದ. ಅವಳಲ್ಲಿ ಬುಧನೆಂಬ ಮಗನನ್ನು ಪಡೆದ. ಗುರುಬೃಹಸ್ಪತ್ಯಾಚಾರ್ಯರು ಎಷ್ಟು ಕೇಳಿದರೂ ಆತ ತಾರೆಯನ್ನು ಕೊಡದಿದ್ದಾಗ ಅವಳ ಸಲುವಾಗಿ ದೇವಾಸುರ ಸಂಗ್ರಾಮ ನಡೆಯಿತು. ಚಂದ್ರನ ಕಡೆ ಶುಕ್ರಾಚಾರ್ಯರು ಅಸುರ ಸೈನ್ಯದೊಂದಿಗೆ ನಿಂತರು. ಬೃಹಸ್ಪತಿಯ ಕಡೆ ದೇವಸೈನ್ಯದೊಂದಿಗೆ ಭೂತಗಣಪರಿವಾರ ಯುಕ್ತನಾಗಿ ಶಿವ ನಿಂತ. ಬೃಹಸ್ಪತಿಯ ತಂದೆ ಅಂಗಿರಸರು ಬ್ರಹ್ಮನಲ್ಲಿ ಕೇಳಿಕೊಂಡಿದ್ದರಿಂದ ಅವರು ಬಂದು ಯುದ್ಧವನ್ನು ತಡೆದು ನಿಲ್ಲಿಸಿದರು. ತಾರೆಯನ್ನು ಬೃಹಸ್ಪತಿಗೆ ಕೊಡಿಸಿದರು. ಆಗ ಇನ್ನೂ ಆಕೆ ಗರ್ಭದಲ್ಲಿ ಬುಧನನ್ನು ಹೊತ್ತಿದ್ದಳು. ಪ್ರಸವವಾದಾಗ ಬುಧ ಯಾರ ವೀರ್ಯದಿಂದ ಜನಿಸಿದವನೆಂಬ ಬಗ್ಗೆ ವಿವಾದ ಉಂಟಾಯಿತು. ತಾರೆಯನ್ನು ಬ್ರಹ್ಮದೇವರು ಏಕಾಂತದಲ್ಲಿ ಕೇಳಿದಾಗ ಅವಳು ಆತ ಚಂದ್ರನ ಪುತ್ರನೆಂದು ನಿಜವನ್ನು ನುಡಿದಳು.

ಬುಧನಿಂದ ಇಳೆಯಲ್ಲಿ ಪುರೂರವ ಜನಿಸಿದ. ನಾರದರು ಇಂದ್ರಭವನದಲ್ಲಿ ಪುರೂರವನ ಗುಣಗಾನ ಮಾಡಿದ್ದನ್ನು ಊರ್ವಶಿ ಕೇಳಿ ಅವನಲ್ಲಿ ಅನುರಕ್ತಳಾದಳು. ಏಕೆಂದರೆ ಮಿತ್ರ ಮತ್ತು ವರುಣರ ಶಾಪದಿಂದ ಅವಳು ಕೆಲಕಾಲ ಭೂಮಿಯಲ್ಲಿ ವಾಸ ಮಾಡಬೇಕಾಗಿತ್ತು. ಆದರಿಂದ ಅವಳು ಪುರೂರವನ ಬಳಿಗೆ ಬಂದು ಅವನಲ್ಲಿ ತನ್ನ ಎರಡು ಕುರಿಗಳನ್ನು ನ್ಯಾಸವಾಗಿರಿಸಿ, ಅವನ್ನು ಆತ ರಕ್ಷಿಸದೆ ಹೋದರೆ, ಅಥವಾ ಏಕಾಂತಪ್ರಣಯದ ಕಾಲದಲ್ಲಿ ಹೊರತು ಬೇರೆ ಸಮಯದಲ್ಲಿ ವಿವಸ್ತ್ರನಾಗಿ ಆತ ತನಗೆ

ಕಂಡುಬಂದರೆ, ತಾನು ಸ್ವರ್ಗಕ್ಕೆ ಹಿಂತಿರುಗುವುದಾಗಿ, ತನಗೆ ಸದಾ ತುಪ್ಪವನ್ನು ಉಣಲು ನೀಡಬೇಕೆಂದೂ ನಿಬಂಧನೆಗಳನ್ನು ಹಾಕಿ ಅವನಿಗೆ ರಾಣಿಯಾದಳು. ಅವನಿಗೆ ಸ್ವರ್ಗಸುಖ ನೀಡಿದಳು.

ಇತ್ತ ಸ್ವರ್ಗದಲ್ಲಿ ಊರ್ವಶಿಯನ್ನು ಕಾಣದೆ ದೇವೇಂದ್ರ ಗಂಧರ್ವರಿಗೆ ಹೇಳಿದ 'ಊರ್ವಶಿ ಇಲ್ಲದೆ ನನ್ನ ಆಸ್ಥಾನಕ್ಕೆ ಶೋಭೆ ಇಲ್ಲ.' ಗಂಧರ್ವರು ನಡುರಾತ್ರಿ ಕತ್ತಲಲ್ಲಿ ಊರ್ವಶಿಯ ಕುರಿಗಳನ್ನು ಸೆಳೆದೊಯ್ದರು. ಅವುಗಳ ಧ್ವನಿ ಕೇಳಿ ಊರ್ವಶಿ ಪುರೂರವನನ್ನು ನೀನೆಂಥ ಗಂಡಸೆಂದು ಹೀನಾಯವಾಗಿ ನಿಂದಿಸಿದಳು. ಒಡನೆ ಪುರೂರವ ಕತ್ತಿ ಹಿರಿದು ವಿವಸ್ತ್ರನಾಗಿಯೆ ಹೊರಗೆ ಧಾವಿಸಿದ. ಗಂಧರ್ವರು ಕುರಿಗಳನ್ನು ಬಿಟ್ಟುಬಿಟ್ಟರು. ಆದರೆ ತಮ್ಮ ಮೈಕಾಂತಿಯಿಂದ ಆ ಪ್ರದೇಶವನ್ನು ಬೆಳಗಿದರು. ಆ ಬೆಳಕಿನಲ್ಲಿ ವಿವಸ್ತ್ರನಾಗಿದ್ದ ಪುರೂರವನನ್ನು ಕಂಡ ಊರ್ವಶಿ ಹೊರಟುಹೋದಳು.

ಪುರೂರವ ಅವಳ ವಿರಹದಿಂದ ಹುಚ್ಚನಂತಾಗಿ ಅಲೆದ. ಕುರುಕ್ಷೇತ್ರದಲ್ಲಿ ಸರಸ್ವತೀ ನದೀತೀರದಲ್ಲಿ ಅವಳನ್ನು ಕಂಡು 'ಬಿಟ್ಟುಹೋಗಬೇಡ'ವೆಂದು ಪರಿಪರಿಯಾಗಿ ವೇದಮಂತ್ರ ಗಳಿಂದ ಕೇಳಿಕೊಂಡ. ಅವಳು 'ಒಂದು ವರ್ಷ ಕಳೆದ ಬಳಿಕ ಒಂದು ರಾತ್ರಿ ನಿನ್ನೊಡನೆ ಇರುತ್ತೇನೆ' ಎನ್ನುತ್ತ ಸೂಚ್ಯವಾಗಿ ತಾನು ಗರ್ಭಿಣಿ ಎಂಬುದನ್ನು ತಿಳಿಸಿದಳು. ಬಳಿಕ ಪುರೂರವ ಒಂದು ವರ್ಷಕಳೆದ ಮೇಲೆ ಅವಳೊಂದಿಗೆ ಒಂದು ರಾತ್ರಿ ಇದ್ದು ಸುಖಿಸಿದ. ಆಯು ಶ್ರುತಾಯು ಮುಂತಾದ ಆರು ಮಂದಿ ಪುತ್ರರನ್ನೂ ಪಡೆದ. ಅವಳು ಮರುದಿನ ವಿರಹಕಾತರನಾದ ರಾಜನಿಗೆ ಗಂಧರ್ವರನ್ನು ಸ್ತುತಿಸಿ ತನ್ನ ಸಾಲೋಕ್ಯವನ್ನು ಹೊಂದುವಂತೆ ಸಲಹೆ ಇತ್ತಳು. ಅವನ ಸ್ತುತಿಗೆ ಮೆಚ್ಚಿ ಗಂಧರ್ವರು ಅಗ್ನಿಯ ಪಾತ್ರೆಯೊಂದನ್ನು ನೀಡಿದರು. ಆ ಮೂಲಕ ಅಗ್ನ್ಯಾಧಾನಪೂರ್ವಕವಾಗಿ ಯಾಗ ಮಾಡಲು ಆದೇಶಿಸಿದರು. ಅದನ್ನು ರಾಜ ಅರಿತುಕೊಂಡು ಅಗ್ನಿಪಾತ್ರೆಯನ್ನು ಕಾಡಿನಲ್ಲಿ ಒಂದು ಕಡೆ ಇರಿಸಿ, ಮಕ್ಕಳೊಂದಿಗೆ ಅರಮನೆಗೆ ಬಂದು ರಾತ್ರಿ ಇಡೀ ಊರ್ವಶೀಲೋಕಪ್ರಾಪ್ತಿ ಸಾಧನೆಯನ್ನೇ ಧ್ಯಾನಿಸಿದ. ಮರುದಿನ

ಬೆಳಗಾದಾಗ ಕೃತಯುಗ ಕಳೆದು ತ್ರೇತಾಯುಗ ಪ್ರಾರಂಭವಾಯಿತು. ಆಗ ಧ್ಯಾನದಲ್ಲಿ ರಾಜನಿಗೆ ಮೂರು ವೇದಗಳೂ ಹೊಳೆದುವು. ಒಡನೆ ಕಾಡಿನಲ್ಲಿ ಅಗ್ನಿಪಾತ್ರೆ ಇಟ್ಟಿದ್ದ ಸ್ಥಳದಲ್ಲಿ ಆಗಲೆ ಬೆಳೆದು ನಿಂತಿದ್ದ ಶಮೀಗರ್ಭ ಅಶ್ವತ್ಥವೃಕ್ಷವನ್ನು ಕಂಡ. ಅದರಿಂದ ಎರಡು ಅರಣಿ ಕಾಷ್ಠಗಳನ್ನು ತಯಾರಿಸಿ ಮಥನಮಾಡಿ ಆ ಅಗ್ನಿಯಲ್ಲಿ ಯಾಗದಿಂದ ಶ್ರೀಹರಿಯನ್ನು ಆರಾಧಿಸಿ ಊರ್ವಶೀಲೋಕವನ್ನು ಪಡೆದ. ಕೃತಯುಗದಲ್ಲಿ ಒಂದೇ ಆಗಿದ್ದ ವೇದ ತ್ರೇತಾಯುಗದಲ್ಲಿ ಪುರೂರವನಿಂದ ಮೂರಾಯಿತು.

❖ ❖ ❖

ಅಧ್ಯಾಯ - ೧೩

ಅಧ್ಯಾಯ ಸಾರಾಂಶ

ಪುರೂರವನ ಪುತ್ರನಾದ ಶ್ರುತಾಯುವಿನ ವಂಶದಲ್ಲಿ ಬಂದ ಜಹ್ನು ಗಂಗಾಜಲವನ್ನು ಒಂದು ಗುಟುಕನ್ನಾಗಿ ಮಾಡಿ ಕುಡಿದವನು. ಅವನ ವಂಶದಲ್ಲಿ ಮುಂದೆ ಇಂದ್ರಾವತಾರಿಯಾದ ಗಾಧಿ ಜನಿಸುತ್ತಾನೆ. ಅವನ ಮಗಳಾದ ಸತ್ಯವತಿಯನ್ನು ಋಚೀಕಮುನಿ ಯಾಚಿಸಿದಾಗ ಗಾಧಿರಾಜ ಒಂದು ಪಾರ್ಶ್ವ ಕಪ್ಪಾಗಿರುವ ಒಂದು ಸಾವಿರ ಬಿಳಿಕುದುರೆಗಳನ್ನು ಕನ್ಯಾಶುಲ್ಕವಾಗಿ ಕೊಡಬೇಕೆಂದು ನಿಬಂಧನೆ ಮಾಡಿದ. ಮುನಿ ವರುಣನಿಂದ ಅಂಥ ಕುದುರೆಗಳನ್ನು ಪಡೆದು ರಾಜನಿಗೆ ಇತ್ತು ಕನ್ಯೆಯನ್ನು ಮದುವೆಯಾದ. ಒಮ್ಮೆ ಅವಳಿಗೂ ಅವಳ ತಾಯಿಗೂ ಬೇರೆಬೇರೆಯಾಗಿ ಎರಡು ಚರುಗಳನ್ನು ಅಭಿಮಂತ್ರಿಸಿ ಪುತ್ರಸಂತತಿಗಾಗಿ ನೀಡಿದ. ಮುನಿ ಸ್ನಾನಕ್ಕೆ ಹೋಗಿದ್ದಾಗ ತಾಯಿ ಮಕ್ಕಳು ಆ ಚರುಗಳನ್ನು ಬದಲಾಯಿಸಿಕೊಂಡರು. ಏಕೆಂದರೆ ಅಳಿಯ ಮಗಳಿಗಾಗಿ ಅಭಿಮಂತ್ರಿಸಿಕೊಟ್ಟ ಚರು ಶ್ರೇಷ್ಠವಾಗಿರುತ್ತದೆ ಎಂದು ತಾಯಿಯ ಭಾವನೆಯಾಗಿತ್ತು. ಆದರೆ ಅದು ತಪ್ಪಾಗಿತ್ತು. ಮುನಿ ಪತ್ನಿಗೆ ಹೇಳಿದ 'ನಿನ್ನ ಮಗ ಕ್ಷಾತ್ರತೇಜಸ್ಸಿನವನಾಗುತ್ತಾನೆ, ನಿನ್ನ ಸೋದರ ಬ್ರಹ್ಮತೇಜಸ್ಸಿನವ ನಾಗುತ್ತಾನೆ' ಹಾಗಾಗಬಾರದೆಂದು ಅವಳು ಬೇಡಿಕೊಂಡಾಗ ಪುನಃ ಹೇಳಿದ. 'ನಿನ್ನ ಮಗ ಹಾಗಾಗದಿದ್ದರೂ ಮೊಮ್ಮಗ ಹಾಗೇ ಆಗುತ್ತಾನೆ' ಅದರಂತೆ ಸತ್ಯವತಿಯಲ್ಲಿ ಬ್ರಹ್ಮತೇಜಸ್ಸಿನ ಜಮದಗ್ನಿ ಜನಿಸಿದ. ಜಮದಗ್ನಿಯ ಮಗನಾಗಿ ಕ್ಷಾತ್ರತೇಜಸ್ಸನ್ನು ಮರೆಯುತ್ತ ಪರಶುರಾಮ ಅವತರಿಸಿದ.

ಹೈಹಯಾಧಿಪತಿಯಾದ ಕಾರ್ತವೀರ್ಯಾರ್ಜುನ ನಾರಾಯಣಾವತಾರಿಯಾದ ದತ್ತಾತ್ರೇಯನ ಉಪಾಸನೆಯಿಂದ ಯೋಗಶಕ್ತಿಯನ್ನು ಪಡೆದ. ಒಂದು ಸಾವಿರ ಬಾಹುಗಳನ್ನೂ ಶತ್ರುಗಳ ನಡುವೆ ಅಜೇಯತ್ವವನ್ನೂ ಪಡೆದ. ಆದರೆ ಕ್ಷತ್ರಿಯರ ರಕ್ಷಣೆಯಲ್ಲಿಯೇ ಬ್ರಾಹ್ಮಣರಿರುವುದರಿಂದ ಕ್ಷತ್ರಿಯರೇ

ಶ್ರೇಷ್ಠರೆಂಬ ಭಾವನೆ ಅವನಿಗೆ ಇತ್ತು. ಬ್ರಾಹ್ಮಣವಿರೋಧಿ ಕ್ಷತ್ರಿಯರಿಗೆ ಆತನಿಂದ ಬಲ ಹೆಚ್ಚಿತು.

ಆತನೊಮ್ಮೆ ನರ್ಮದಾನದಿಯಲ್ಲಿ ಸ್ತ್ರೀಯರೊಂದಿಗೆ ಜಲಕ್ರೀಡೆಯಾಡುತ್ತಿದ್ದಾಗ ತನ್ನ ಬಾಹುಗಳಿಂದ ನೀರಿನ ಪ್ರವಾಹ ವನ್ನು ತಡೆದು ನಿಲ್ಲಿಸಿದ. ಆಗ ಅದು ಹಿಮ್ಮೆಟ್ಟಿ ವಿರುದ್ಧ ದಿಕ್ಕಿಗೆ ಹರಿದು ರಾವಣನ ಶಿಬಿರವನ್ನು ಮುಳುಗಿಸಿತು. ಅಹಂಕಾರಿಯಾದ ರಾವಣ ಕಾರ್ತವೀರ್ಯನನ್ನು ಕೆರಳಿಸಿ ಅವನ ಸ್ತ್ರೀಯರ ಮುಂದೆಯೇ ಹೀನಾಯವಾಗಿ ಸೋಲನ್ನು ಅನುಭವಿಸಿದ. ಬಂದಿಯಾದ. ಬಳಿಕ ಪುಲಸ್ತ್ಯಮುನಿ ಬಂದು ಅವನನ್ನು ಬಂಧನದಿಂದ ಬಿಡಿಸಿಕೊಂಡರು.

ಇಂಥ ಕಾರ್ತವೀರ್ಯನೊಮ್ಮೆ ಅರಣ್ಯದಲ್ಲಿ ಬೇಟೆಯಾಡುತ್ತ ಜಮದಗ್ನಿಯ ಆಶ್ರಮವನ್ನು ಪ್ರವೇಶಿಸಿದ. ಮುನಿಯ ಕಾಮಧೇನು ಹಸು ರಾಜಪರಿವಾರವೆಲ್ಲಕ್ಕೂ ಸಂಭ್ರಮದ ಸತ್ಕಾರ ಮಾಡಿಸಿದ್ದನ್ನು ಕಂಡು ಆ ಹಸುವನ್ನು ಬಯಸಿದ. ದರ್ಪದಿಂದ ಬಲಾತ್ಕಾರವಾಗಿ ಅಪಹರಿಸಿದ. ಇದನ್ನು ತಿಳಿದು ಕೋಪದಿಂದ ಕೆರಳಿದ ಪರಶುರಾಮ. ಕಾರ್ತವೀರ್ಯನ ಮಾಹಿಷ್ಮತೀ ನಗರಕ್ಕೆ ನುಗ್ಗಿ ರಾಜನ ಹದಿನೇಳು ಅಕ್ಷೌಹಿಣಿ ಸೈನ್ಯವನ್ನು ಪರಶುಧನುರ್ಬಾಣ ಗಳಿಂದ ನಾಶಪಡಿಸಿದ. ಕಾರ್ತವೀರ್ಯನ ಸಾವಿರ ತೋಳು ಗಳನ್ನೂ ತಲೆಯನ್ನೂ ಲೀಲಾಜಾಲವಾಗಿ ಕತ್ತರಿಸಿದ. ಇದನ್ನು ಕಂಡು ರಾಜನ ಹತ್ತುಸಾವಿರ ಮಂದಿ ಮಕ್ಕಳು ಭಯದಿಂದ ಪಲಾಯನಗೈದರು. ಕಾಮಧೇನುವನ್ನು ತಿರುಗಿ ಆಶ್ರಮಕ್ಕೆ ತಂದು ತಂದೆಗೆ ಒಪ್ಪಿಸಿದ ಪರಶುರಾಮ. ಆದರೆ 'ಪಟ್ಟಾಭಿಷಿಕ್ತನಾದ ರಾಜನ ಹತ್ಯೆ ಬ್ರಹ್ಮಹತ್ಯೆಗಿಂತಲೂ ಹೆಚ್ಚು ಪಾಪಕರ, ಅದರಿಂದ ನೀನು ತೀರ್ಥಯಾತ್ರೆ ಮಾಡಿ ಪಾಪವನ್ನು ಪರಿಹರಿಸಿಕೊಳ್ಳು' ಎಂದು ತಂದೆ ಮಗನಿಗೆ ಆದೇಶ ನೀಡಿದರು.

❖ ❖ ❖

ಅಧ್ಯಾಯ - ೧೪

ಅಧ್ಯಾಯ ಸಾರಾಂಶ

ಪರಶುರಾಮ ತಂದೆಯ ಆದೇಶದಂತೆ ಒಂದುವರ್ಷ ಕಾಲ ತೀರ್ಥಯಾತ್ರೆ ಮಾಡಿ ಮರಳಿಬಂದ. ಒಮ್ಮೆ ತಾಯಿ ರೇಣುಕೆ ನೀರು ತರಲು ಗಂಗಾನದಿಗೆ ಹೋಗಿ ಅಲ್ಲಿ ಚಿತ್ರರಥನೆಂಬ ಗಂಧರ್ವ ಅಪ್ಸರೆಯರೊಡನೆ ಜಲಕ್ರೀಡೆಯಾಡುತ್ತಿದ್ದುದನ್ನು ಕಂಡಾಗ ಕ್ಷಣಕಾಲ ಮೈಮರೆತಳು. ಈ ಮಾನಸಿಕ ವ್ಯಭಿಚಾರವನ್ನು ತಿಳಿದು ಜಮದಗ್ನಿ ಅವಳನ್ನು ಕೊಲ್ಲುವಂತೆ ಮಕ್ಕಳಿಗೆ ಆಜ್ಞೆ ಮಾಡಿದರು. ಮಕ್ಕಳು ಇದಕ್ಕೆ ಒಪ್ಪಲಿಲ್ಲ. ಪರಶುರಾಮ ಮಾತ್ರ ಮುನಿಯ ತಪಃಶಕ್ತಿಯನ್ನು ಅರಿತವನಾದ್ದರಿಂದ ಒಪ್ಪಿದ. ತಂದೆಯ ಆಜ್ಞೆಯಂತೆ ತಾಯಿಯ ತಲೆಕಡಿದ. ತಂದೆಯ ಆಜ್ಞೆಯನ್ನು ಧಿಕ್ಕರಿಸಿದ ಸೋದರರ ಶಿರಗಳನ್ನೂ ತಂದೆಯ ಆಜ್ಞೆಯಂತೆ ಕಡಿದುಹಾಕಿದ. ಜಮದಗ್ನಿ ಸಂತುಷ್ಟನಾಗಿ 'ಬೇಕಾದ ವರವನ್ನು ಕೇಳು' ಎಂದ. ಪರಶುರಾಮ, 'ತನ್ನಿಂದ ಹತರಾದವರೆಲ್ಲ ತಿರುಗಿ ಬದುಕಲಿ. ತಾನು ಅವರನ್ನು ಕೊಂದಿದ್ದು ಅವರಿಗೆ ನೆನಪಿಗೆ ಬಾರದಿರಲಿ' ಎಂದು ವರ ಕೇಳಿದ. ಒಡನೆ ಎಲ್ಲರೂ ಸುಖನಿದ್ರೆಯಿಂದ ಎಚ್ಚೆತ್ತವರಂತೆ ಎದ್ದರು.

ಕಾರ್ತವೀರ್ಯಾರ್ಜುನನ ಮಕ್ಕಳು ಒಮ್ಮೆ ಪರಶುರಾಮ ಆಶ್ರಮದಲ್ಲಿಲ್ಲದಿದ್ದಾಗ ಜಮದಗ್ನಿಯ ತಲೆಯನ್ನು ಕತ್ತರಿಸಿ ಒಯ್ದರು. ರೇಣುಕೆ 'ರಾಮಾ' ಎಂದು ಕೂಗಿಕೊಂಡುದನ್ನು ಕೇಳಿ ಪರಶುರಾಮ ಆಶ್ರಮಕ್ಕೆ ಧಾವಿಸಿ ಬಂದ. ಸೋದರರೊಂದಿಗೆ ತಾನೂ ತಂದೆಯ ಮರಣಕ್ಕೆ ಹಲುಬಿದಂತೆ ತೋರಿಕೊಂಡ. ಕೊಡಲಿಯನ್ನೆತ್ತಿ ದುಷ್ಟಕ್ಷತ್ರಿಯರ ಕುಲವನ್ನೇ ನಾಶ ಮಾಡುವ ಪಣತೊಟ್ಟ.

ಬ್ರಹ್ಮಹತ್ಯಾಪಾತಕದಿಂದ ಆಗಲೆ ಕಳೆಗುಂದಿದ್ದ ಮಾಹಿಷ್ಮತೀ ನಗರದಲ್ಲಿ ಕ್ಷತ್ರಿಯರ ತಲೆಗಳ ದೊಡ್ಡ ಬೆಟ್ಟವನ್ನೇ ನಿರ್ಮಿಸಿದ. ರಕ್ತದ ಹೊಳೆ ಹರಿಸಿದ. ಇಪ್ಪತ್ತೊಂದು ಬಾರಿ ಭೂಪ್ರದಕ್ಷಿಣಮಾಡಿ ದುಷ್ಟಕ್ಷತ್ರಿಯರ ರಕ್ತದಿಂದ ಸಮಂತ ಪಂಚಕದಲ್ಲಿ ಒಂಬತ್ತು ಮಡುಗಳನ್ನು ನಿರ್ಮಿಸಿದ.

ತಂದೆಯ ಶಿರಸ್ಸನ್ನು ಶರೀರಕ್ಕೆ ಸೇರಿಸಿ ದರ್ಭೆಯ ಮೇಲಿಟ್ಟು ಅಂತ್ಯೇಷ್ಟಿಯನ್ನು ನಡೆಸಿದ. ಆ ಯಾಗದಲ್ಲಿ ಹೋತೃ ಬ್ರಹ್ಮ ಅಧ್ವರ್ಯ ಉದ್ಗಾತೃಗಳಿಗೆ ಪೂರ್ವಾದಿ ದಿಕ್ಕುಗಳನ್ನೂ ಉಳಿದ ಋತ್ವಿಜರಿಗೆ ಈಶಾನ್ಯ ಮುಂತಾದ ದಿಕ್ಕುಗಳನ್ನೂ ಮಧ್ಯ ಭೂಭಾಗವನ್ನು ಕಶ್ಯಪರಿಗೂ ಕರ್ಮಸಾಕ್ಷಿಗೆ ಆರ್ಯಾವರ್ತವನ್ನೂ ನೀಡಿದ. ಉಳಿದ ಸಂಪತ್ತೆಲ್ಲವನ್ನೂ ಸದಸ್ಯರಿಗಿತ್ತ. ಅವಭೃಥಸ್ನಾನ ಮಾಡಿ ಜೊತೆಗೆ ಸ್ನಾನ ಮಾಡಿದವರ ಪಾಪಗಳನ್ನು ಪರಿಹರಿಸಿದ.

ಜಮದಗ್ನಿ ತೇಜೋಮಯ ಶರೀರದಿಂದ ಆಕಾಶದಲ್ಲಿ ಸಪ್ತರ್ಷಿಗಳ ನಡುವೆ ಏಳನೆಯವನಾಗಿ ಬೆಳಗಿದ. ಪರಶು ರಾಮನೂ ಕೂಡ ಮುಂದೆ ಬರುವ ಸಾವರ್ಣಿ ಮನ್ವಂತರದಲ್ಲಿ ಸಪ್ತರ್ಷಿಗಳಲ್ಲಿ ಒಬ್ಬನಾಗುವನು. ಇಂದಿಗೂ ಮಹೇಂದ್ರಪರ್ವತ ದಲ್ಲಿ ಕೋಪವನ್ನು ಬಿಟ್ಟು ಶಾಂತಮೂರ್ತಿಯಾಗಿ ಇದ್ದಾನೆ.

ಅತ್ತ ಗಾಧಿಮಹಾರಾಜನ ಮಗನಾಗಿ ವಿಶ್ವಾಮಿತ್ರ ಜನಿಸಿದ. ತಪೋಬಲದಿಂದ ಕ್ಷಾತ್ರತೇಜಸ್ಸನ್ನು ತ್ಯಜಿಸಿ ಬ್ರಹ್ಮವರ್ಚಸ್ಸನ್ನು ಸಂಪಾದಿಸಿದ. ಅವನಿಗೆ ನೂರೊಂದು ಮಂದಿ ಪುತ್ರರಿದ್ದರು. ಅವರಲ್ಲಿ ನಡುವಿನವನು ಮಧುಚ್ಛಂದ. ಐವತ್ತು ಮಂದಿ ತಮ್ಮಂದಿರು ಮಾಧುಚ್ಛಂದಸರೆನಿಸಿದರು. ಭೃಗುವಂಶದ ಅಜೀಗರ್ತ ಮುನಿಯ ಪುತ್ರನಾದ ಶುನಃಶೇಪನನ್ನು ವಿಶ್ವಾಮಿತ್ರನಿಗೆ ದೇವತೆಗಳು ಕೊಟ್ಟರು. ಅದರಿಂದ ಶುನಃಶೇಪ ದೇವರಾತನೆನಿಸಿದ.

ಶುನಃಶೇಪನನ್ನು ನಿಮ್ಮೆಲ್ಲರಿಗೆ ಹಿರಿಯಣ್ಣನೆಂದು ಎಲ್ಲರೂ ಒಪ್ಪಿಕೊಳ್ಳಿರೆಂದು ವಿಶ್ವಾಮಿತ್ರ ನೂರೊಂದು ಮಂದಿ ಪುತ್ರರಿಗೆ ಆಜ್ಞಾಪಿಸಿದಾಗ ಮಧುಚ್ಛಂದ ಮತ್ತು ಅವನ ತಮ್ಮಂದಿರು ಹೊರತು ಉಳಿದವರಾರೂ ಒಪ್ಪಲಿಲ್ಲ. ಅವರನ್ನು ಚಂಡಾಲರಾಗಿ ರೆಂದು ಶಪಿಸಿದ. ಮಧುಚ್ಛಂದ ಮುಂತಾದವರಿಗೆ ಸತ್ಪುತ್ರ ಸಂತಾನದ ವರ ನೀಡಿದ. ಅಷ್ಟಕ ಹಾರೀತ ಜಯ ಕ್ರತು ಮುಂತಾದ ಬೇರೆ ಪುತ್ರರೂ ವಿಶ್ವಾಮಿತ್ರರಿಗಿದ್ದರು. ಇವರಿಂದಾದ ಕೌಶಿಕಗೋತ್ರದವರು ದೇವರಾತ ಪ್ರವರರೆನಿಸಿದರು.

ಪುರೂರವನ ಪುತ್ರನಾದ ಆಯುವಿಗೆ ನಹುಷ ಕ್ಷತ್ರವೃದ್ಧ ರಜಿ

ರಂಭ ಅನೇನಸರೆಂದು ಐದು ಮಂದಿ ಮಕ್ಕಳು ಅವರಲ್ಲಿ ಕ್ಷತ್ರವೃದ್ಧನ ವಂಶದಲ್ಲಿ ದೀರ್ಘತಮನಿಂದ ಜನಿಸಿದ ಧ್ವನಂತರಿ ಶ್ರೀಹರಿಯ ಅವತಾರ. ಆಯುರ್ವೇದ ಪ್ರವರ್ತಕ. ಸ್ಮರಣ ಮಾತ್ರದಿಂದ ಎಲ್ಲ ದುಃಖಗಳನ್ನು ಪರಿಹರಿಸುತ್ತಾನೆ. ರಜಿ ದೇವತೆಗಳ ಅಪೇಕ್ಷೆಯಂತೆ ದೈತ್ಯರನ್ನು ವಧಿಸಿ ಸ್ವರ್ಗದ ಆಧಿಪತ್ಯವನ್ನು ಇಂದ್ರನಿಗೆ ನೀಡಿದ. ಆದರೆ ಇಂದ್ರ ಅದನ್ನು ಪುನಃ ರಜಿಗೇ ಕೊಟ್ಟುಬಿಟ್ಟ. ಏಕೆಂದರೆ ಅವನಿಗೆ ಪ್ರಹ್ಲಾದನ ಭಯ. ಹೀಗಾಗಿ ರಜಿಯ ಮರಣಾನಂತರ ಅವನ ಮಕ್ಕಳು ಐನೂರು ಮಂದಿ ತಂದೆಯ ಅಧೀನವಿದ್ದ ಸ್ವರ್ಗಸಿಂಹಾಸನವನ್ನು ಇಂದ್ರನಿಗೆ ಕೊಡಲು ನಿರಾಕರಿಸಿದರು. ಯಜ್ಞಗಳಲ್ಲಿ ಇಂದ್ರನಿಗೆ ಎಂದು ನೀಡುವ ಆಹುತಿಗಳನ್ನೂ ಇವರೇ ಸ್ವೀಕರಿಸಿದರು. ಅದಕ್ಕೆ ಬೃಹಸ್ಪತಿ ಅವರಿಗೆ ಬುದ್ಧಿ ಹಾಳಾಗುವಂತೆ ಆಭಿಚಾರಿಕ ಹೋಮ ಮಾಡಿದರು. ಅದರ ಫಲವಾಗಿ ಅವರು ಧರ್ಮಮಾರ್ಗ ತಪ್ಪಿ ನಡೆದಾಗ ಇಂದ್ರ ಅವರನ್ನು ಸಂಹರಿಸಿದ.

❖❖❖

ತಂದೆಯ ಆಜ್ಞೆಯಂತೆ ಪರಶುರಾಮ ತಾಯಿಯನ್ನೂ ಅಣ್ಣಂದಿರನ್ನೂ ಕೊಂದುಬಿಟ್ಟ. ಆಗ ಪ್ರಸನ್ನನಾದ ತಂದೆ 'ಬೇಕಾದ ವರವನ್ನು ಕೇಳು' ಎಂದಾಗ ಸತ್ತವರೆಲ್ಲ ತಿರುಗಿ ಬರಲೆಂದೂ ತಾನು ಅವರನ್ನು ಕೊಂದಿದ್ದು ಅವರಿಗೆ ಎಂದೂ ನೆನಪಿಗೆ ಬಾರದಿರಲಿ ಎಂದೂ ವರವನ್ನು ಕೇಳಿ ಪಡೆದನೆಂದು ಶುಕಮುನಿ ಹೇಳುತ್ತಾರೆ.

ವರೇಣ ಛಂದಯಾಮಾಸ ಪ್ರೀತಃ ಸತ್ಯವತೀಸುತಃ ।
ವವ್ರೇ ಹತಾನಾಂ ರಾಮೋಽಪಿ ಜೀವಿತಂ ಚಾಸ್ಮೃತಿಂ ವಧೇ ॥ ೭ ॥

ಸತ್ಯವತೀಸುತನಾದ ಜಮದಗ್ನಿಮುನಿ ಸಂತುಷ್ಟನಾಗಿ ಬೇಕಾದ ವರವನ್ನು ಕೇಳೆಂದಾಗ ಪರಶುರಾಮ ಕೇಳಿದ, 'ಹತರಾದವರೆಲ್ಲ ತಿರುಗಿ ಬದುಕಿಬರಲಿ, ನಾನು ಅವರನ್ನು ಕೊಂದಿದ್ದು ಅವರಿಗೆ ಎಂದೂ ನೆನಪಿಗೆ ಬಾರದಿರಲಿ' ಎಂದು.

ಪರಶುರಾಮ ನಾರಾಯಣನ ಸಾಕ್ಷಾದವತಾರ ಹೊರತು ವೀರರಾಘವೀಯ ಮುಂತಾದ ಬೇರೆ ವ್ಯಾಖ್ಯಾನಕಾರರು ಹೇಳುವಂತೆ ಆವೇಶಾವತಾರವಲ್ಲ. ಆದರೂ

ತಂದೆ ಜಮದಗ್ನಿಯ ಆದೇಶದಂತೆ ತಾಯಿಯನ್ನೂ ಅಣ್ಣಂದಿರನ್ನೂ ಕೊಂದು ಅವರನ್ನು ಬದುಕಿಸಲು ತಂದೆಯಿಂದಲೇ ವರಪಡೆದುದು ಕೂಡುವುದಿಲ್ಲ. 'ವರದೇಶ ವರಪ್ರದ'ನಾದ ಭಗವಂತನಿಗೆ ಯಾರೂ ವರ ಕೊಡಲಾರರು, ಕೊಟ್ಟರೆ ಆತ ಸ್ವೀಕರಿಸಲಾರ. ಇಲ್ಲಿ ಎರಡೂ ನಡೆದಿದೆ. ತಂದೆ ಅಜ್ಞಾನದಿಂದ ವರ ನೀಡಬಹುದು, ಪರಶುರಾಮ ಹೇಗೆ ವರ ಕೇಳಿದನೆಂಬ ಪ್ರಶ್ನೆಗೆ ಸಮಾಧಾನ ಬೇಕು. ಸ್ಕಂದ ಪುರಾಣವೇ ಸಮಾಧಾನವನ್ನು ಹೇಳುತ್ತದೆ.

ಜಾಮದಗ್ನ್ಯೋ ವರಂ ವವ್ರೇಽನಂತಶಕ್ತಿರಪಿ ಸ್ವಯಂ ।
ಪಿತುರ್ಮಾನ್ಯತ್ವಸಿದ್ಧ್ಯರ್ಥಂ ಲೋಕೇ ಲೋಕೇಶ್ವರಃ ಪ್ರಭುಃ ॥

ಅನಂತಶಕ್ತಿಯುಳ್ಳ ಸಾಕ್ಷಾನ್ನಾರಾಯಣಾವತಾರವೇ ತಾನಾಗಿದ್ದರೂ ಪರಶುರಾಮ ತಂದೆಯಿಂದ ವರವನ್ನು ಕೇಳಿ ಪಡೆದ. ಇದು ಲೋಕದಲ್ಲಿ ತಂದೆ ಜಮದಗ್ನಿ ಮಹಾತಪೋಬಲ ಉಳ್ಳವನೆಂದು ಪ್ರಸಿದ್ಧನಾಗಲಿ ಎಂಬ ಅಭಿಪ್ರಾಯದಿಂದ ಮತ್ತು ಮಕ್ಕಳು ತಂದೆಯ ಮಾತನ್ನು ಮಾನ್ಯಮಾಡಬೇಕೆಂದು ತಿಳಿಸುವ ಅಭಿಪ್ರಾಯದಿಂದ.

ಅಪಾಪಮಪಿ ದೇವೇಶಂ ಪಿತರಃ ಸನ್ನ್ಯವರ್ತಯನ್ ।
ಅಜಾನಂತೋಽಸ್ಯ ಮಾಹಾತ್ಮ್ಯಂ ಮೋಹಿತಾಸ್ತಸ್ಯ ಮಾಯಯಾ ।
ಮೋಹಯನ್ಮಾಯಯಾ ಲೋಕಂ ಚಕ್ರೇ ಚಾಪಚಿತಿಂ ವಧೇ ।
ಪುಣ್ಯಪಾಪಾದಿನಿರ್ಮಾತುಃ ಕುತಃ ಪಾಪಾದಿಸಂಗತಿಃ ॥ ಇತಿ ಚ ॥

'ದೇವೇಶನಾದ ಪರಶುರಾಮ ಪಾಪಲೇಪವಿಲ್ಲದವನಾದರೂ ಅವನ ಇಚ್ಛೆಯಂತೆ ಅಜ್ಞಾನಮೋಹಿತರಾದ ಅವನ ತಂದೆ ಜಮದಗ್ನಿಯೂ ಸೋದರರೂ ಅವನ ಮಾಹಾತ್ಮ್ಯವನ್ನರಿಯದೆ 'ರಾಮ ರಾಮ ಮಹಾಬಾಹೋ ಭವಾನ್ ಪಾಪಮಕಾರಷೀತ್' 'ಕಾರ್ತವೀರ್ಯನನ್ನು ಕೊಂದು ನೀನು ಪಾಪಭಾಗಿಯಾಗಿರುವೆ' ಎಂದರು. ಪರಶುರಾಮ ಸ್ವೇಚ್ಛೆಯಿಂದಲೇ ಅಯೋಗ್ಯಜನರನ್ನು ಮೋಹಗೊಳಿಸುತ್ತ ಕಾರ್ತವೀರ್ಯನ ವಧೆಗೆ ಪ್ರಾಯಶ್ಚಿತ್ತವಾಗಿ ಒಂದು ವರ್ಷಕಾಲ ತೀರ್ಥಯಾತ್ರೆ ಮಾಡಿ ಬಂದ. ಪುಣ್ಯ ಪಾಪಾದಿಗಳನ್ನು ನಿರ್ಮಿಸುವ ಭಗವಂತನಿಗೆ ಪಾಪಾದಿಗಳ ಲೇಪ ಹೇಗೆ ಸಾಧ್ಯ?' ಎಂದೂ ಸ್ಕಂದಪುರಾಣದಲ್ಲಿ ಹೇಳಿದೆ.

ಜಮದಗ್ನಿಯ ಆಶ್ರಮದಿಂದ ಬಲಾತ್ಕಾರವಾಗಿ ಕಾಮಧೇನುವನ್ನು ಒಯ್ದ

ಕಾರ್ತವೀರ್ಯಾರ್ಜುನನನ್ನು ಪರಶುರಾಮ ವಧಿಸಿದಾಗ 'ರಾಮ, ರಾಮ! ನೀನು ಪಾಪ ಮಾಡಿಬಿಟ್ಟೆ. ಕಾರ್ತವೀರ್ಯ ತಪ್ಪು ಮಾಡಿದ್ದರೂ ಕ್ಷಮಿಸಬೇಕಾಗಿತ್ತು. ಏಕೆಂದರೆ ಆತ ಪಟ್ಟಾಭಿಷಿಕ್ತನಾದ ಒಬ್ಬ ರಾಜ, ಅಂಥ ಒಬ್ಬ ರಾಜನನ್ನು ಕೊಂದರೆ ಹತ್ತು ಬ್ರಹ್ಮಹತ್ಯಾಪಾಪಗಳು ಬರುತ್ತವೆ. ಆದರಿಂದ ನೀನು ಈಗ ಪ್ರಾಯಶ್ಚಿತ್ತವಾಗಿ ತೀರ್ಥಯಾತ್ರೆ ಮಾಡಬೇಕು' ಎಂದು ತಂದೆ ಜಮದಗ್ನಿ ಆದೇಶ ನೀಡುತ್ತಾನೆ. ಅದರಂತೆ ಪರಶುರಾಮ ಒಂದು ವರ್ಷಕಾಲ ತೀರ್ಥಯಾತ್ರೆ ಮಾಡಿ ಬರುತ್ತಾನೆ. (ಭಾಗ ೯.೧೩.೩೮ ರಿಂದ ೯.೧೪.೧)

ಇದೆಲ್ಲವೂ ಅಯೋಗ್ಯ ಜನರಿಗೆ ಪರಶುರಾಮನೊಬ್ಬ ಭಗವದಾವೇಶಉಳ್ಳ ಜೀವ, ಅವನಿಗೂ ಪುಣ್ಯಪಾಪ ಲೇಪಗಳಿವೆ ಎಂದು ಭ್ರಮೆ ಉಂಟಾಗುವುದಕ್ಕೋಸ್ಕರ ಭಗವಂತ ಮಾಡಿದ ನಾಟಕ. ಅದರಂತೆ ರಾಮಾನುಜೀಯರು ಪರಶುರಾಮನನ್ನು ಆವೇಶಾವತಾರವೆನ್ನುತ್ತಾರೆ. ವಸ್ತುತಃ ಪರಶುರಾಮ ಭಗವಂತನ ಸ್ವರೂಪಾವತಾರ. ಭಗವಂತನಿಗೂ ಅವನ ಸ್ವರೂಪಾವತಾರಗಳಿಗೂ ಯಾವುದೇ ವ್ಯತ್ಯಾಸವಿಲ್ಲ. ಎಲ್ಲ ಸ್ವರೂಪಾವತಾರಗಳೂ ಭಗವಂತನಂತೆಯೇ ಪೂರ್ಣ, ಸರ್ವದೋಷರಹಿತ, ಪಾಪರಹಿತ.

ಪುಣ್ಯಪಾಪಗಳನ್ನು ಸರ್ವಕರ್ತನಾದ ಭಗವಂತನೇ ಸೃಷ್ಟಿಮಾಡುತ್ತಾನೆ. 'ಶ್ರುತಿಸ್ಮೃತೀ ಹರೇರಾಜ್ಞೇ' ಎನ್ನುವಂತೆ ಎಲ್ಲ ಶಾಸ್ತ್ರವಿಧಿನಿಷೇಧಗಳೂ ಅವನ ಆಜ್ಞೆಗಳು. ಅವನೇ ವಿಧಿಸುವವನು, ಅವನೇ ನಿಷೇಧಿಸುವವನು. ಅವನು ಮಾಡುವ ವಿಧಿನಿಷೇಧಗಳನ್ನು ಶಾಸ್ತ್ರ ತಿಳಿಸುತ್ತದಷ್ಟೆ. ಅವನು ಹೇಳಿದಂತೆ ಕರ್ಮ ಮಾಡಿದರೆ ಅವನು ಪ್ರೀತನಾಗಿ ನಮಗೆ ಪುಣ್ಯವನ್ನು ಸೃಜಿಸಿ ನೀಡುತ್ತಾನೆ. ಅವನು ಹೇಳಿದಂತೆ ಮಾಡದಿದ್ದರೆ ಅಥವಾ ವಿರುದ್ಧವಾಗಿ ವರ್ತಿಸಿದರೆ ಕುಪಿತನಾಗಿ ಪಾಪವನ್ನು ನಿರ್ಮಿಸುತ್ತಾನೆ.

ರಾಮಾನುಜ ಪಂಥದಲ್ಲಿ ಭಗವಂತನ ಪ್ರೀತಿಯೇ ಪುಣ್ಯ, ಕೋಪವೇ ಪಾಪ. ಬೇರೆ ಪುಣ್ಯಪಾಪಗಳೆಂಬುದಿಲ್ಲ ಎನ್ನುತ್ತಾರೆ. ಆದರೆ 'ಬ್ರಹಹತ್ಯಾಶಿರಸ್ಕಂ ಚ' ಎಂದು ಮುಂತಾಗಿ ಪಾಪಗಳಿಗೂ, 'ಅಶ್ವಮೇಧ ಶಿರಸ್ಕಂ ಚ' ಎಂದು ಮುಂತಾಗಿ ಪುಣ್ಯಗಳಿಗೂ ಶರೀರ ಅವಯವಗಳಿವೆ. ಪಾಪಪುರುಷನ ಶೋಷಣಮಾಡಿ ದಹನ ಮಾಡಿದರೆ ಭಸ್ಮ ಉಂಟಾಗುತ್ತದೆ, ಅದನ್ನು ರೇಚನ ಮಾಡಬೇಕು. ಅದರಿಂದ ಪುಣ್ಯಪಾಪಗಳು ಬೇರೇ ಇವೆ. ಅವೂ ನಮ್ಮಂತೇ ಜೀವಿಗಳು. ಅವುಗಳಿಗೂ ಪುನಃ ಬೇರೆ ಪುಣ್ಯಪಾಪಗಳಿವೆ, ಆ ಪುಣ್ಯಪಾಪಗಳಿಗೂ ಬೇರೆ ಪುಣ್ಯಪಾಪಗಳು ಹೀಗೆ ಅನಂತ ಪುಣ್ಯಪಾಪಗಳನ್ನು ಭಗವಂತ ಸೃಜಿಸಿ ನಮಗೂ ನಮ್ಮ ಪುಣ್ಯಪಾಪಗಳಿಗೂ ಪುಣ್ಯಪಾಪಾನುಸಾರ ಫಲ ನೀಡುತ್ತಾನೆ. ಇಂಥವನಿಗೆ ಪಾಪಲೇಪ ಉಂಟೆ?

ಲೇಪವೆಂದರೆ ಫಲಾನುಭವ. ಫಲ ನೀಡುವವನೆ ಭಗವಂತ. ಅವನಿಗೆ ಫಲ ನೀಡುವವನು ಯಾರಿದ್ದಾನೆ? ಅದರಿಂದ ಸ್ಕಂದಪುರಾಣ ಹೇಳುತ್ತದೆ ಪುಣ್ಯ, ಪಾಪ, ಅವುಗಳ ಫಲ, ಅವುಗಳಿಗೆ ಪ್ರಾಯಶ್ಚಿತ್ತಾದಿಗಳೆಲ್ಲವನ್ನೂ ನಿರ್ಮಿಸುವ ಭಗವಾನ್ ಪರಶುರಾಮನಿಗೂ ಪಾಪಾದಿಲೇಪ ತಾನಾಗಿ ಉಂಟಾಗುವುದು ಹೇಗೆ ಸಾಧ್ಯ? ಎಂದು.

ತಂದೆ ಜಮದಗ್ನಿ ಪರಶುರಾಮನ ಅತ್ಯಂತ ಪ್ರೀತಿಪಾತ್ರನಾದ ಮಹಾಜ್ಞಾನಿ. ಮುಂದಿನ ಮನ್ವಂತರದಲ್ಲಿ ಸಪ್ತರ್ಷಿಗಳಲ್ಲಿ ಅವನೂ ಒಬ್ಬ. ಅವನಿಗೆ ಪರಶುರಾಮ ಭಗವಂತನೆಂದು ಗೊತ್ತಿಲ್ಲವೆನ್ನಬಹುದೆ? ಎಂದರೆ, ಅವನಿಗೆ ಗೊತ್ತಿದೆ. ಆದರೂ ಕೆಲವು ಸಂದರ್ಭಗಳಲ್ಲಿ ಪರಶುರಾಮನ ಇಚ್ಛೆಯಿಂದ ಅವನ ಬುದ್ಧಿಗೆ ಮೋಹ ಕವಿಯುತ್ತದೆ. ಶ್ರೀಕೃಷ್ಣನ ವಿಶ್ವರೂಪ ಕಂಡು ಅವನನ್ನು ಭಗವಂತನೆಂದು ತಿಳಿದ ಯಶೋದೆಯೂ ಮೋಹದಿಂದ ಮತ್ತೆ ಮಗನೆಂದು ತಿಳಿಯುತ್ತಾಳೆ. ಹಾಗೇ ಇದು. ತತ್ಕಾಲದಲ್ಲಿ ಮೋಹದಿಂದ ಜಮದಗ್ನಿ ಮಗನಿಗೆ ತೀರ್ಥಯಾತ್ರೆ ಮಾಡೆಂದು ಆಜ್ಞೆ ಮಾಡುತ್ತಾನೆ. ಇದು ಅಯೋಗ್ಯರಿಗೆ ಮೋಹ ಉಂಟುಮಾಡುವ ಉದ್ದೇಶದಿಂದ ಭಗವಂತನೇ ಮಾಡಿದ ಲೀಲೆ.

ಶ್ರೀಮದಾಚಾರ್ಯರು ಸ್ಕಾಂದಪುರಾಣದ ಈ ವಚನವನ್ನು ಭಾಗವತದಲ್ಲಿ ಹಿಂದಿನ ಅಧ್ಯಾಯದ ೩೮ನೇ ಶ್ಲೋಕದಲ್ಲಿಯೇ ಉದಾಹರಿಸಬೇಕಾಗಿತ್ತು. ಆದರೆ ಸ್ಕಂದಪುರಾಣದಲ್ಲಿ ಭಾಗವತದ ಈ ಅಧ್ಯಾಯದ ಅಭಿಪ್ರಾಯವನ್ನೇ ಮೊದಲಿಗೆ ಹೇಳಿದೆ. ಅದರಿಂದ ಅದರ ಜೊತೆಗೇ ಬಂದಿರುವ ಈ ವಚನವನ್ನು ಇಲ್ಲಿ ಜೊತೆಗೇ ಹೇಳಿದ್ದಾರೆ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ನವಮಸ್ಕಂಧೇ
ಚತುರ್ದಶೋಽಧ್ಯಾಯಃ

❖ ❖ ❖

ಅಧ್ಯಾಯ - ೧೫

ಅಧ್ಯಾಯ ಸಾರಾಂಶ

ನಹುಷನಿಗೆ ಯತಿ ಯಯಾತಿ ಸಂಯಾತಿ ಆಯಾತಿ ವಿಯತಿ ಕೃತಿ ಎಂದು ಆರು ಮಂದಿ ಪುತ್ರರು. ಯತಿ ವೈರಾಗ್ಯದಿಂದ ರಾಜ್ಯ ವನ್ನು ಬೇಡವೆಂದ. ನಹುಷ ಶಚೀದೇವಿಯನ್ನು ಬಲಾತ್ಕರಿಸಲು ಹೋಗಿ ಮುನಿಶಾಪದಿಂದ ಸ್ವರ್ಗಸಿಂಹಾಸನದಿಂದ ಚ್ಯುತನಾಗಿ ಹೆಬ್ಬಾವಿನ ಜನ್ಮ ಹೊಂದಿದಾಗ ಯಯಾತಿ ಸಿಂಹಾಸನ ವನ್ನೇರಿದ. ನಾಲ್ಕು ದಿಕ್ಕುಗಳಲ್ಲಿ ಆಳಲು ನಾಲ್ಕು ಮಂದಿ ತಮ್ಮಂದಿರನ್ನು ನೇಮಿಸಿದ. ಶುಕ್ರಾಚಾರ್ಯರ ಮಗಳಾದ ದೇವಯಾನಿಯನ್ನೂ ವೃಷಪರ್ವರಾಜನ ಮಗಳಾದ ಶರ್ಮಿಷ್ಠೆ ಯನ್ನೂ ಮದುವೆ ಯಾದ. ಅದು ಹೀಗೆ.

ಒಮ್ಮೆ ಶರ್ಮಿಷ್ಠೆ ಗುರು ಶುಕ್ರಾಚಾರ್ಯರ ಪುತ್ರಿಯಾದ ದೇವಯಾನಿಯೊಂದಿಗೆ ಮತ್ತು ಸಖಿಯರೊಂದಿಗೆ ಉದ್ಯಾನದಲ್ಲಿ ವಿಹಾರ ಮಾಡುತ್ತ ಒಂದು ಸರೋವರದ ದಡದಲ್ಲಿ ಸೀರೆಗಳನ್ನು ಬಿಚ್ಚಿಟ್ಟು ನೀರಾಟವಾಡಲು ತೊಡಗಿದರು. ಆಗ ಆ ಮಾರ್ಗವಾಗಿ ಶಿವ ಪಾರ್ವತಿಯೊಂದಿಗೆ ನಂದಿವಾಹನನಾಗಿ ಸಾಗಿ ಹೋಗುವುದನ್ನು ಕಂಡು ನಾಚಿ ಒಡನೆ ಮೇಲೆ ಬಂದು ಸೀರೆ ಉಟ್ಟುಕೊಂಡರು. ಆಗ ಅವಸರದಲ್ಲಿ ಶರ್ಮಿಷ್ಠೆ ತಿಳಿಯದೆ ದೇವಯಾನಿಯ ಸೀರೆ ಉಟ್ಟುಕೊಂಡಳು. ಅದು ತನ್ನ ಸೀರೆ ಎಂದು ತಿಳಿದಾಗ ದೇವಯಾನಿ ಕುಪಿತಳಾಗಿ 'ಯಜ್ಞದ ಹವಿಸ್ಸನ್ನು ನಾಯಿ ತಿನ್ನುವಂತೆ ನನ್ನ ಸೀರೆಯನ್ನು ಈಕೆ ಉಟ್ಟಿದ್ದಾಳೆ' ಎಂದು ಮುಂತಾಗಿ ಕಟುವಾಗಿ ನುಡಿದಳು. ಅದಕ್ಕೆ ಶರ್ಮಿಷ್ಠೆಯೂ 'ನಾವು ಹಾಕುವ ಅನ್ನಕ್ಕಾಗಿ ಕಾಗೆಗಳಂತೆ ನಮ್ಮ ಮನೆ ಕಾಯುತ್ತಿರುವವರು ನೀವು' ಎಂದು ಜರಿದು ಸೀರೆಯನ್ನೂ ಕಸಿದುಕೊಂಡು ಅವಳನ್ನು ಬಾವಿಗೆ ತಳ್ಳಿದಳು.

ಅವಳು ಅರಮನೆಗೆ ಹೋದಬಳಿಕ ಇತ್ತ ಬೇಟೆಯಾಡುತ್ತ ಬಾಯಾರಿ ನೀರಿಗಾಗಿ ಬಂದ ಯಯಾತಿ ಬಾವಿಯಲ್ಲಿ ದೇವಯಾನಿಯನ್ನು ಕಂಡು ತನ್ನ ಉತ್ತರೀಯವನ್ನಿತ್ತು ಬಾವಿಯಿಂದ

ಮೇಲೆತ್ತಿದ. ಆಗಲಿ ಅವಳು ರಾಜನಲ್ಲಿ ಅನುರಕ್ತಳಾದಳು. ಆದರಿಂದ ಹೇಳಿದಳು 'ನಾವು ಪರಸ್ಪರ ಹೀಗೆ ಸಂಧಿಸಿದುದು ಕೇವಲ ದೈವಪ್ರೇರಣೆಯಿಂದ. ಅದರಿಂದ ನೀನೆ ನನಗೆ ಪತಿಯಾಗಬೇಕು. ಬ್ರಾಹ್ಮಣ ನನಗೆ ಪತಿಯಾಗುವುದು ಶಕ್ಯವಿಲ್ಲ. ಬೃಹಸ್ಪತಿಯ ಪುತ್ರ ಕಚ ನನಗೆ ಹಾಗೆ ಶಾಪವಿತ್ತಿದ್ದಾನೆ.'

ಯಯಾತಿಗೂ ಅವಳಲ್ಲಿ ಅನುರಾಗ ಮೂಡಿತ್ತು. ಅದರಿಂದ ಅವಳು ಬ್ರಾಹ್ಮಣಕನ್ಯೆಯಾದರೂ ಇದು ದೈವಸಂಕಲ್ಪವೆಂದುಕೊಂಡು ಅಂಗೀಕರಿಸಿದ. ಎಂದೂ ಅಧರ್ಮದಲ್ಲಿ ಪ್ರವೃತ್ತಿ ಮಾಡದ ತನ್ನ ಮನಸ್ಸು ಅವಳಲ್ಲಿ ಆಸಕ್ತವಾಗಿದೆ ಎಂದರೆ ಇದು ತನಗೆ ಅಧರ್ಮವಾಗಲಾರದೆನ್ನುವ ವಿಶ್ವಾಸವೂ ಅವನಿಗೆ ಇದ್ದಿತು.

ದೇವಯಾನಿ ತಂದೆಯ ಅನುಮತಿ ಪಡೆಯುವುದಕ್ಕಾಗಿ ಅಳುತ್ತ ಶರ್ಮಿಷ್ಠೆ ತನ್ನಲ್ಲಿ ತೋರಿದ ವರ್ತನೆಯನ್ನು ಅವನ ಮುಂದೆ ಹೇಳಿಕೊಂಡಳು. ತಂದೆ ಶುಕ್ರಾಚಾರ್ಯರು ಶರ್ಮಿಷ್ಠೆ ಯಾಡಿದ ಮಾತುಗಳನ್ನು ಕೇಳಿ ತಿಳಿದು ನೊಂದು ಊರುಬಿಟ್ಟು ಹೊರಟರು. ಅವರು ದೇವತೆಗಳ ಪಕ್ಷಕ್ಕೆ ಸೇರಬಹುದೆಂಬ ಭೀತಿಯಿಂದ ವೃಷಪರ್ವರಾಜ ಬೇಗನೆ ಅವರ ಮನಒಲಿಸಲು ದೇವಯಾನಿಯ ಇಚ್ಛೆಯಂತೆ ಶರ್ಮಿಷ್ಠೆಯನ್ನು ಅವಳ ಎರಡು ಸಾವಿರ ಸಖಿಯರೊಂದಿಗೆ ದಾಸಿಯಾಗಿ ಕಳಿಸಿದ. ಇದರ ಪರಿಣಾಮವಾಗಿ ದೇವಯಾನಿ ರಾಣಿಯಾಗಿ ರಾಜನೊಂದಿಗೆ ವಿಹರಿಸಿದರೂ ಶರ್ಮಿಷ್ಠೆ ರಾಜನ ಗುಪ್ತ ಪ್ರಣಯಿನಿಯಾಗಿದ್ದು ಮಕ್ಕಳನ್ನು ಹೆತ್ತಳು. ರಾಜ ಅವಳನ್ನು ಗಾಂಧರ್ವವಿಧಿಯಿಂದ ವಿವಾಹವಾದ.

ಇದನ್ನು ತಿಳಿದು ದೇವಯಾನಿ ಕೋಪದಿಂದ ತಂದೆಯ ಮನೆಗೆ ಹೊರಟುಹೋದಳು. ತಂದೆ ಶುಕ್ರಾಚಾರ್ಯರಿಗೆ ಬಹಳ ಕೋಪ ಬಂದಿತು. 'ನಿನಗೆ ಮುಪ್ಪು ಬರಲಿ' ಎಂದು ರಾಜನನ್ನು ಶಪಿಸಿದರು. ರಾಜನೆಂದ 'ನಿಮ್ಮ ಮಗಳಲ್ಲಿಯೆ ನನಗಿನ್ನೂ ಸುಖದಾಸೆ ತೀರಿಲ್ಲ. ಅದರಿಂದ ನನ್ನ ಮಕ್ಕಳಿಂದ ಯೌವನವನ್ನು ನಾನು ಪಡೆಯುವಂತೆ ಅನುಗ್ರಹಿಸಿರಿ' ಶುಕ್ರಾಚಾರ್ಯರಿಗೆ ಇದು ಸರಿ ಎನಿಸಿತು. ಆಗಲಿ ಎಂದರು.

ರಾಜನಿಗೆ ದೇವಯಾನಿಯಲ್ಲಿ ಯದು ಮತ್ತು ತುರ್ವಸು ಜನಿಸಿದ್ದರು. ಶರ್ಮಿಷ್ಠೆಯಲ್ಲಿ ದ್ರುಹ್ಯು ಅನು ಪೂರು ಎಂದು ಮಕ್ಕಳು ಜನಿಸಿದ್ದರು. ಇವರಲ್ಲಿ ಪೂರು ಒಬ್ಬನೆ ತನ್ನ ಯೌವನವನ್ನು ತಂದೆಗೆ ನೀಡಿ ಅವನ ವೃದ್ಧಾಪ್ಯವನ್ನು ತಾನು ಸ್ವೀಕರಿಸಿದ. ತಂದೆ ಯಯಾತಿ ದೇವಯಾನಿಯೊಂದಿಗೆ ಒಂದು ಸಾವಿರ ವರ್ಷಕಾಲ ಸುಖ ಅನುಭವಿಸಿದ. ಆದರೂ ಅದು ಸಾಕೆನಿಸಲಿಲ್ಲ.

❖❖❖

ಅಧ್ಯಾಯ - ೧೬

ಅಧ್ಯಾಯ ಸಾರಾಂಶ

ಅನಿತ್ಯವಾದ ವಿಷಯಸುಖ ಉಣ್ಣುತ್ತ ತಾನು ನಿತ್ಯಸುಖದಿಂದ ವಂಚಿತನಾಗುತ್ತಿದ್ದೇನೆ ಎಂಬ ಪ್ರಜ್ಞೆ ಯಯಾತಿಯನ್ನು ಕಾಡುತ್ತಿತ್ತು. ಒಮ್ಮೆ ದೇವಯಾನಿಗೆ ಒಂದು ಕಥೆ ಹೇಳಿದ. 'ಬಾವಿಯಲ್ಲಿ ಒಂದು ಮೇಕೆ ಬಿದ್ದಿತ್ತು. ಒಂದು ಹೋತ ಅದನ್ನು ನೋಡಿ ಕೋಡಿನ ತುದಿಯಿಂದ ದಂಡೆಯ ಮಣ್ಣನ್ನು ಅಗೆದು ಮೇಕೆಗೆ ಮೇಲೆ ಬರಲು ದಾರಿಯನ್ನು ನಿರ್ಮಿಸಿತು. ಬಳಿಕ ಅವೆರಡೂ ಜೊತೆ ಸೇರಿದುವು. ಆದರೆ ಬೇರೆ ಮೇಕೆಗಳೂ ಹೋತನ ಬಳಿಗೆ ಬಂದಾಗ ಹೋತ ಅವುಗಳೊಂದಿಗೆ ವಿಹಾರ ಮಾಡಿದ್ದನ್ನು ಈ ಮೇಕೆ ಸಹಿಸಲಿಲ್ಲ. ಅದು ತನ್ನ ಯಜಮಾನನ ಬಳಿಗೇ ಹೋಯಿತು. ಆತ ಕೋಪದಿಂದ ಹೋತನ ತರುಡನ್ನು ಕತ್ತರಿಸಿದ. ಬಳಿಕ ತನ್ನ ಮೇಕೆಗೇ ಇದರಿಂದ ನಷ್ಟವಾಗುವುದೆಂದು ಆಲೋಚಿಸಿ ತಿರುಗಿ ಅದನ್ನು ಯೋಗಶಕ್ತಿಯಿಂದ ಜೋಡಿಸಿದ. ಈಗ ಮೇಕೆಯೊಂದಿಗೆ ಹೋತ ಚೆನ್ನಾಗಿ ವಿಹರಿಸಿತು. ಅದಕ್ಕೆ ಇನ್ನೂ ವಿಹಾರ ಸಾಕೆನಿಸುತ್ತಿಲ್ಲ!'

ಯಯಾತಿ ತನ್ನ ಆತ್ಮಕಥೆಯನ್ನೇ ಪರ್ಯಾಯವಾಗಿ ಹೀಗೆ ಹೇಳಿದನೆಂಬುದು ದೇವಯಾನಿಗೆ ತಿಳಿಯಿತು. ಯಯಾತಿ ಪೂರುವಿಗೆ ಅವನ ಯೌವನವನ್ನು ಅವನಿಗೆ ಹಿಂತಿರುಗಿಸಿ ಅವನಿಂದ ತನ್ನ ಮುಪ್ಪನ್ನು ಪಡೆದು ವಿರಕ್ತಿ ಹೊಂದಿದ. ಆಗ್ನೇಯದಲ್ಲಿ ದ್ರುಹ್ಯುವನ್ನೂ ದಕ್ಷಿಣದಲ್ಲಿ ಯದುವನ್ನೂ ಪಶ್ಚಿಮದಲ್ಲಿ ತುರ್ವಸುವನ್ನೂ ಉತ್ತರದಲ್ಲಿ ಅನುವನ್ನೂ ರಾಜನನ್ನಾಗಿ ಮಾಡಿ ಸಮಸ್ತ ಭೂಮಂಡಲದ ಆಧಿಪತ್ಯವನ್ನು ಪೂರುವಿಗೆ ಕೊಟ್ಟ. ಅಣ್ಣಂದಿರೆಲ್ಲರನ್ನೂ ಅವನ ಅಧೀನದಲ್ಲಿರಿಸಿ ಕಾಡಿಗೆ ತೆರಳಿದ. ಪರಬ್ರಹ್ಮಧ್ಯಾನದಲ್ಲಿ ಜೀವನ್ಮುಕ್ತ್ಯವಸ್ಥೆ ಪಡೆದ. ದೇವಯಾನಿಯೂ ಹಾಗೇ ವಿರಕ್ತಿಹೊಂದಿ ಜೀವನ್ಮುಕ್ತಳಾದಳು.

❖ ❖ ❖

ಅಧ್ಯಾಯ - ೧೭

ಅಧ್ಯಾಯ ಸಾರಾಂಶ

ಮುಂದೆ ಪರೀಕ್ಷಿದ್ರಾಜನಿಗೆ ಜನ್ಮ ನೀಡಿರುವ ಪೂರುವಂಶ. ಈ ವಂಶದಲ್ಲಿ ಕೆಲವರು ರಾಜರ್ಷಿಗಳಾದರು. ಕೆಲವರು ಬ್ರಹ್ಮರ್ಷಿಗಳಾದರು. ಈ ವಂಶದಲ್ಲಿ ಬಂದ ರಂತಿನಾರನಿಗೆ ಸುಮತಿ ಧ್ರುವ ಅಪ್ರತಿರಥ ಎಂದು ಮೂವರು ಮಕ್ಕಳು. ಅಪ್ರತಿರಥನ ಪುತ್ರನಾದ ಕಣ್ವನಿಂದ ಮೇಧಾತಿಥಿ ಜನಿಸಿದ. ಅವನಿಂದ ಪ್ರಸ್ಕಣ್ವ ಮುಂತಾದ ಬ್ರಾಹ್ಮಣರು ಜನಿಸಿದರು. ಸುಮತಿಯ ಪುತ್ರನಾದ ರೈಭ್ಯನಿಂದ ದುಷ್ಯಂತ ಜನಿಸಿದ.

ದುಷ್ಯಂತ ಬೇಟೆಯಾಡುತ್ತ ಆಯಾಸಗೊಂಡು ಕಣ್ವಾಶ್ರಮವನ್ನು ಪ್ರವೇಶಿಸಿದಾಗ ಅಲ್ಲಿ ಶಕುಂತಲೆ ಕಂಡುಬಂದಳು. ಅವಳಲ್ಲಿ ರಾಜನಿಗೆ ಅನುರಾಗ ಮೂಡಿತು. ಪೂರುವಂಶದ ರಾಜರ ಮನಸ್ಸೆಂದೂ ಅಧರ್ಮದ ಕಡೆಗೆ ಹೋಗುವುದಿಲ್ಲವೆಂದ ಮೇಲೆ ಅವನ ಮನಸ್ಸನ್ನು ಅಪಹರಿಸಿದ ಶಕುಂತಲೆ ನಿಶ್ಚಯವಾಗಿ ಕ್ಷತ್ರಿಯ ಕನ್ಯೆಯೇ ಇರಬೇಕೆಂದು ರಾಜ ಅಂದುಕೊಂಡ. ಕೇಳಿದ, ನೀನಾರೆಂದು. ಅವಳು ತಾನು ವಿಶ್ವಾಮಿತ್ರರಿಂದ ಮೇನಕೆಯಲ್ಲಿ ಜನಿಸಿದವಳು. ಈ ಜನ್ಮ ವೃತ್ತಾಂತ ಕಣ್ವರಿಗೆ ಗೊತ್ತು ಎಂದಳು. ನಿನಗೆ ಇಷ್ಟವಾದರೆ ನೀನಿಲ್ಲಿ ಉಣಬಹುದು ಇಲ್ಲೇ ಉಳಿದುಕೊಳ್ಳಬಹುದೆಂದಳು. ಹೀಗೆ ಸೂಚ್ಯವಾಗಿ ತಾನು ರಾಜನಲ್ಲಿ ಅನುರಕ್ತಳಾಗಿರುವೆನೆಂದು ತಿಳಿಸಿದಳು. ಅದರಿಂದ ಇಬ್ಬರೂ ಗಾಂಧರ್ವವಿಧಿಯಿಂದ ವಿವಾಹವಾದರು. ರಾಜ ಒಂದು ರಾತ್ರಿ ಅವಳೊಡನಿದ್ದು ಮರುದಿನ ರಾಜಧಾನಿಗೆ ಹಿಂತಿರುಗಿದ.

ಕಾಲ ಕಳೆದಂತೆ ಶಕುಂತಲೆ ಕಣ್ವಾಶ್ರಮದಲ್ಲಿಯೆ ಭರತನಿಗೆ ಜನ್ಮವಿತ್ತಳು. ಭರತ ಶ್ರೀಹರಿಯ ಆವೇಶಯುಕ್ತನಾಗಿದ್ದು ಮಹಾಪರಾಕ್ರಮಿಯಾಗಿ ಬೆಳೆದ. ಬಾಲ್ಯದಲ್ಲಿ ಸಿಂಹಗಳನ್ನು ಹಿಡಿದು ಅವುಗಳೊಂದಿಗೆ ಆಟವಾಡುತ್ತಿದ್ದ. ಅವನನ್ನು ಕರೆದುಕೊಂಡು ಶಕುಂತಲೆ ದುಷ್ಯಂತನ ಬಳಿಗೆ ಬಂದಾಗ ಆತ ಜನಾಪವಾದ ಭಯದಿಂದ ಸ್ವೀಕರಿಸಲು ನಿರಾಕರಿಸಿದ. ಆಗ

ಅಶರೀರವಾಣಿ ಕೇಳಿಸಿತು. 'ಭರತ ನಿನ್ನ ಪುತ್ರ. ಶಕುಂತಲೆ ಸತ್ಯವನ್ನೇ ನುಡಿಯುತ್ತಿದ್ದಾಳೆ.' ಎಂದು. ಆಗ ರಾಜ ಆ ತಾಯಿ ಮಕ್ಕಳನ್ನು ಸ್ವೀಕರಿಸಿದ.

ಅವನ ಅನಂತರ ಭರತ ಚಕ್ರವರ್ತಿಯಾದ. ಅವನ ಬಲಗೈಯಲ್ಲಿ ಚಕ್ರಚಿಹ್ನೆ, ಪಾದಗಳಲ್ಲಿ ಪದ್ಮರೇಖೆಗಳಿದ್ದುವು. ಮಹಾಭಿಷೇಕದಿಂದ ಅಭಿಷಿಕ್ತನಾಗಿ ರಾಜಾಧಿರಾಜರಿಗೂ ಪ್ರಭುವೆನಿಸಿದ.

'ತದಪ್ಯೇತೇ ಶ್ಲೋಕಾ ಅಭಿಗೀತಾಃ' ಎಂದು ಮುಂತಾಗಿ ಐದು ವೇದ ಮಂತ್ರಗಳು ಅವನ ಗುಣಗಾನ ಮಾಡುತ್ತವೆ. ಅವನು ದೀರ್ಘತಮನ ಪೌರೋಹಿತ್ಯದಲ್ಲಿ ಗಂಗಾತೀರದಲ್ಲಿ ಐವತ್ತೈದು, ಯಮುನಾತೀರದಲ್ಲಿ ಎಪ್ಪತ್ತೆಂಟು ಅಶ್ವಮೇಧಯಾಗಗಳನ್ನು ಮಾಡಿದ. ಒಂದು ಸಾವಿರ ವದ್ವ ಸಂಖ್ಯೆಯಲ್ಲಿ ಬ್ರಾಹ್ಮಣರಿಗೆ ಗೋದಾನ ಮಾಡಿದ. ಒಂದು ವದ್ವ ಎಂದರೆ ಹದಿಮೂರು ಸಾವಿರದ ಎಂಬತ್ತನಾಲ್ಕು. ಹದಿನಾಲ್ಕು ಲಕ್ಷ ಗಜದಾನ ಮಾಡಿದ. ಅವನ ಸಹಾಯದಿಂದ ದೇವತೆಗಳು ಅಸುರರನ್ನು ಗೆದ್ದು ತಮ್ಮ ಸ್ಥಾನಗಳನ್ನೂ ಆ ಅಸುರರು ರಸಾತಳಕ್ಕೆ ಒಯ್ದಿದ್ದ ತಮ್ಮ ಸ್ತ್ರೀಯರನ್ನೂ ತಿರುಗಿ ಪಡೆದುಕೊಂಡರು. ಇಪ್ಪತ್ತೇಳು ಸಾವಿರ ವರ್ಷಕಾಲ ಎಲ್ಲ ದಿಕ್ಕುಗಳಲ್ಲಿ ತನ್ನ ಆಡಳಿತ ನಡೆಸಿದ ಭರತ.

ಭರತನಿಗೆ ವಿದರ್ಭ ರಾಜಕುಮಾರಿಯರಾದ ಮೂವರು ರಾಣಿಯರಿದ್ದರು. ಅವರಲ್ಲಿ ಮಕ್ಕಳೂ ಹುಟ್ಟಿದ್ದರು. ಆದರೂ ಇವರು ಯಾರೂ ತಂದೆಯನ್ನು ಹೋಲುವುದಿಲ್ಲವೆಂದು ರಾಜ ನುಡಿದಾಗ ರಾಣಿಯರು ತಾವು ವ್ಯಭಿಚಾರ ಮಾಡಿದೆವೆಂಬ ಅಪವಾದ ಉಂಟಾದೀತೆಂದು ಭಯದಿಂದ ತಮ್ಮ ಮಕ್ಕಳನ್ನು ತಾವೇ ಕೊಂದುಬಿಟ್ಟರು. ಹೀಗೆ ವಂಶ ನಿಂತುಹೋಗುವ ಸ್ಥಿತಿ ಬಂದಾಗ ರಾಜ ಮರುತ್‌ಸ್ತೋಮ ಎಂಬ ಯಾಗ ಮಾಡಿದ. ಮರುತ್ತುಗಳು ಭರದ್ವಾಜನನ್ನು ಮಗನೆಂದು ರಾಜನಿಗೆ ನೀಡಿದರು.

ಉಚಥ್ಯಮುನಿಯ ಪತ್ನಿ ಮಮತಾದೇವಿ ಗರ್ಭಿಣಿ. ಗರ್ಭದಲ್ಲಿ ದೀರ್ಘತಮನನ್ನು ಹೊತ್ತಿದ್ದಳು. ಆಗ ಉಚಥ್ಯನ ತಮ್ಮ

ಬೃಹಸ್ಪತಿ ಅವಳಲ್ಲಿ ಭರದ್ವಾಜನನ್ನು ಹುಟ್ಟಿಸಿದ. ಪತಿ ತನ್ನನ್ನು ಪರಿತ್ಯಜಿಸಬಹುದೆಂಬ ಭೀತಿಯಿಂದ ತಾಯಿ ಮಗುವನ್ನು ಪರಿತ್ಯಜಿಸಿದಳು. ಮರುತ್ತುಗಳು ಶಿಶುಭರದ್ವಾಜನನ್ನು ಸಾಕಿದರು. ಭರತನ ವಂಶ ಸಂತತಿ ಇಲ್ಲದೆ ವಿತಥವೆನಿಸುವ ಸಂದರ್ಭ ಬಂದಾಗ ಭರದ್ವಾಜ ಸಿಕ್ಕಿದ್ದರಿಂದ ಅವನಿಗೆ ವಿತಥ ಎಂದೇ ಹೆಸರಾಯಿತು.

❖ ❖ ❖

ಬೃಹಸ್ಪತಿ ತನ್ನ ಅಣ್ಣನಾದ ಉಚಥ್ಯನ ಹೆಂಡತಿ ಮಮತೆಯಲ್ಲಿ ಭರದ್ವಾಜನನ್ನು ಹುಟ್ಟಿಸಿದಾಗ ಆಕೆ ಪತಿ ತನ್ನನ್ನು ತ್ಯಜಿಸಬಹುದೆಂಬ ಭಯದಿಂದ ಭರದ್ವಾಜನನ್ನು ಮಗನೆಂದು ತನ್ನ ಬಳಿಯಲ್ಲಿಟ್ಟುಕೊಂಡು ಸಾಕಲು ನಿರಾಕರಿಸಿದಳು. ಆಗ ಮರುತ್‌ದೇವತೆಗಳು ಅವಳಿಗೆ ಬೋಧಿಸುತ್ತಾರೆ ಎಂದು ಶುಕಮುನಿ ಪರೀಕ್ಷಿತನಿಗೆ ಹೇಳುತ್ತಾರೆ.

ಮೂಢೇ ಭರ ದ್ವಾಜಮಿಮಂ ಭರದ್‌ವಾಜಂ ಬೃಹಸ್ಪತೇಃ।
ತ್ರಾತಾ ತು ದುಃಖಾತ್ಪಿತರೌ ಭರದ್ವಾಜಸ್ತತಸ್ತ್ವಯಮ್ ॥ ೩೮ ॥

'ಮೂಢಳೆ, ಈ ಮಗು ಉಚಥ್ಯ ಬೃಹಸ್ಪತಿ ಇಬ್ಬರಿಗೂ ಮಗನಾಗಿದ್ದಾನೆ. ಬೃಹಸ್ಪತಿಯ ವಂಶಾಭಿವೃದ್ಧಿಯನ್ನೂ ಮಾಡುತ್ತಾನೆ. ಇಬ್ಬರನ್ನೂ ಪುತ್ ಎಂಬ ನರಕದಿಂದ 'ತ್ರ' ಪಾರುಮಾಡುತ್ತಾನೆ. ಅದರಿಂದ ಭರದ್ವಾಜ ನೆನಿಸುತ್ತಾನೆ ಅವನನ್ನು ಮಗನೆಂದು ಸಾಕು.'

ಈ ಶ್ಲೋಕದಲ್ಲಿ ಎರಡು ಬಾರಿ 'ಭರದ್ವಾಜಂ' ಎಂಬ ಶಬ್ದ ಬರುತ್ತದೆ. 'ಬೃಹಸ್ಪತೇಃ' ಎನ್ನುವುದಕ್ಕೆ ಅನ್ವಯವೂ ತಿಳಿಯುವುದಿಲ್ಲ.

ಬೇರೆ ವ್ಯಾಖ್ಯಾನಕಾರರು ಬೇರೆಯೇ ಪಾಠವಿಟ್ಟುಕೊಂಡಿದ್ದಾರೆ-

ಮೂಢೇ ಭರ ದ್ವಾಜಮಿಮಂ ಭರ ದ್ವಾಜಂ ಬೃಹಸ್ಪತೇ।
ಯಾತೌ ಯದುಕ್ತ್ವಾ ಪಿತರೌ ಭರದ್ವಾಜಸ್ತತಸ್ತ್ವಯಂ ॥

ಉತ್ತರಾರ್ಧದಲ್ಲಿ ಅವರೇ ಇನ್ನೊಂದು ಪಾಠವನ್ನು ಮಾನ್ಯ ಮಾಡಿದ್ದಾರೆ-

'ಯಾತೌ ಯದ್ದುಖಾತ್ ಪಿತರೌ' ಎಂದು.

ಈ ಶ್ಲೋಕ ಬೃಹಸ್ಪತಿ ಮತ್ತು ಮಮತೆಯರ ವಿವಾದವನ್ನು ಹೇಳಿ ಮಗುವಿನ ನಾಮನಿರ್ವಚನವನ್ನೂ ಮಾಡುತ್ತದೆ ಎಂದಿದ್ದಾರೆ.

[೧]ಬೃಹಸ್ಪತಿ ಹೇಳುತ್ತಾನೆ, 'ಮೂಢೆ, ನಿನ್ನ ಪತಿಗೂ ನನಗೂ ಮಗನಾಗಿ ಜನಿಸಿರುವ ಈ 'ದ್ವಾಜ'(ಇಬ್ಬರು ತಂದೆಗಳಿಗೆ ಹುಟ್ಟಿದವನು, ಒಬ್ಬನಿಗೆ ಕ್ಷೇತ್ರಜ, ಇನ್ನೊಬ್ಬನಿಗೆ ಔರಸ)ನನ್ನು ನೀನೇ ಸಾಕು.

ಮಮತೆ ಹೇಳುತ್ತಾಳೆ, 'ಬೃಹಸ್ಪತಿಯೆ, ನಿಮ್ಮಿಬ್ಬರಿಗೆ ಮಗನಾಗಿರುವ ಈತನನ್ನು ನೀನೇ ಸಾಕು'.

ಈ ರೀತಿ ವಿವಾದ ಮಾಡಿ ಇಬ್ಬರೂ ಮಗುವನ್ನು ಬಿಟ್ಟು ಹೋದರು. ಹೀಗಾಗಿ ಮಗುವಿಗೆ ಭರದ್ವಾಜನೆಂದು ಹೆಸರಾಯಿತು.

ಇಲ್ಲಿ 'ಯಾತೌ ಯದುಕ್ತ್ವಾ ಪಿತರೌ' ತಂದೆ ತಾಯಿಗಳು 'ಭರ ದ್ವಾಜಂ, ಭರ ದ್ವಾಜಂ' ಎಂದು ವಿವಾದ ಮಾಡಿ ಮಗುವನ್ನು ಬಿಟ್ಟುಹೋದ್ದರಿಂದ ಮಗುವಿಗೆ ಭರದ್ವಾಜ ಎಂದು ಹೆಸರಾಯಿತು. ಈ ನಾಮನಿರ್ವಚನವನ್ನು ದೇವತೆಗಳು ತಿಳಿಸಿದ್ದು ಮಮತೆಯನ್ನು ಪತಿ ಬಿಟ್ಟು ಹೋಗಲಾರನೆಂದು ಅವಳಿಗೆ ತಿಳಿಸುವುದಕ್ಕಾಗಿ! ಇದು ಶಕ್ಯವೆ?

'ತಂದೆ ತಾಯಿಗಳು ನೀವು ಹೀಗೆ ವಿವಾದ ಮಾಡಿ ಮಗುವನ್ನು ಬಿಟ್ಟುಹೋಗುತ್ತಿರುವುದರಿದ ಮಗುವಿಗೆ ಭರದ್ವಾಜ ಎಂದು ಹೆಸರಾಯಿತು. ಈ ಕಾರಣದಿಂದ ನಿನ್ನನ್ನು ಪತಿ ತ್ಯಾಗಮಾಡುವ ಭಯವಿರುವುದಿಲ್ಲ ಎನ್ನುತ್ತಾರೆ ದೇವತೆಗಳು' ಎಂದು ಬೇರೆ ವ್ಯಾಖ್ಯಾನಕಾರರು ಹೇಳುವುದು ಬಹಳ ಅಸ್ಪಷ್ಟವಾಗಿದೆ. ಪತ್ನಿಯ ವ್ಯಭಿಚಾರದಿಂದ ಜನಿಸಿದ ಮಗುವಿಗೆ, ಅದಕ್ಕೆ ಅನುರೂಪವಾಗಿ ನಾಮಕರಣ ಮಾಡಿದ ಮಾತ್ರಕ್ಕೆ, ಪತ್ನಿ ದೋಷಮುಕ್ತಳಾಗಿ ಪತಿಗೆ ಹತ್ತಿರವಾಗುವಳೆ? ಇನ್ನಷ್ಟು ದೂರವಾಗುತ್ತಾಳೆ ತಾನೆ?

೧. ತಂ ಚ ಪರವೀರ್ಯಜಂ ಭರ್ತುಸ್ತ್ಯಾಗಾದ್ವಿಶಂಕಿತಾಂ ಸತೀಂ ತ್ಯುಕ್ತುಕಾಮಾಂ ಮಮತಾಂ ಪ್ರತಿ ಸುರಾ ಏನಂ ಬೃಹಸ್ಪತೇರ್ಮಮತಾಯಾಶ್ಚ ವಿವಾದರೂಪಂ ಶ್ಲೋಕಂ ಜಗುಃ । ಕಿಮರ್ಥಂ ಜಗುರತ ಆಹ ತಸ್ಯ ನಾಮ ನಿರುಚ್ಯತೇ ಯೇನ ತತ್ । ತನ್ನಾಮನಿರ್ವಚನೇನೈವ ಭರ್ತುಸ್ತ್ಯಾಗಶಂಕಾಮಪಾಕರ್ತುಮಿತ್ಯರ್ಥಃ ॥

ತತ್ರ ಪುತ್ರಂ ತ್ಯಕ್ತ್ವಾ ಯಾಂತೀಂ ಮಮತಾಂ ಬೃಹಸ್ಪತಿರಾಹ ಮೂಢೇ ಇಮಂ ಪುತ್ರಂ ಭರ ಪುಷಾಣ ಭರ್ತುರ್ಬಿಭೇಮೀತಿ ಚೇತ್ ತತ್ರಾಹ ದ್ವಾಜಂ, ಏಕಸ್ಯ ಕ್ಷೇತ್ರೇಽನ್ಯಸ್ಯ ಬೀಜಾದಿತ್ಯೇವಂ ದ್ವಾಭ್ಯಾಂ ಜಾತಂ। ಅತಸ್ತಸ್ಯಾಪ್ಯಯಂ ಪುತ್ರ ಇತಿ ನ ತಸ್ಮಾತ್ ಭಯಶಂಕೇತ್ಯರ್ಥಃ । ಏವಮುಕ್ತಾ ಸತೀ ತಂ ಪ್ರತ್ಯಾಹ ಹೇ ಬೃಹಸ್ಪತೇ ತ್ವಮಿಮಂ ಭರ ಯತೋ ದ್ವಾಭ್ಯಾಮಾವಾಭ್ಯಾಮನ್ಯಾಯತೋ ಜಾತಂ। ಅತೋ ನಾಹಮೇಕಾಕಿನೀ ಭರಾಮೀತ್ಯರ್ಥಃ। ಯದ್ ಯಸ್ಮಾದ್ ಏವಮುಕ್ತ್ವಾ ಪಿತರೌ ಮಮತಾಬೃಹಸ್ಪತೀ ವಿವದಮಾನೌ ಪುತ್ರಂ ಪರಿತ್ಯಜ್ಯ ಯಾತೌ ತತೋ ಹೇತೋರಯಂ ಭರದ್ವಾಜ ಇತಿ। ಪಾಠಾಂತರೇ ಯಸ್ಯ ತ್ಯಾಗ ದುಃಖಾತ್ ಪಿತರೌ ಯಾತಾವಿತ್ಯರ್ಥಃ । -ಶ್ರೀಧರಃ

ನಮ್ಮ ಪಾಠದಲ್ಲಿ ಶ್ಲೋಕಕ್ಕೆ ಹೀಗೆ ವ್ಯಾಖ್ಯಾನ-

ದ್ವಾಜಮಿಮಂ ಭರ। ಉಚಥ್ಯಸ್ಯ ಕ್ಷೇತ್ರಜೋ ಬೃಹಸ್ಪತೇರ್ಜಾತಃ ಇತಿ ದ್ವಯೋರ್ಜಾತತ್ವಾದ್ ದ್ವಾಜಃ। ಬೃಹಸ್ಪತೇರ್ವಾಜಃ ಪ್ರಜಾಸಂತತಿ-ರ್ಯೇನ ಭೃತಾ ಬೃಹಸ್ಪತೇ ರ್ಭರದ್ವಾಜಃ ॥

ಭರದ್ವಾಜೋ ಮರುದ್ಭಿಶ್ಚ ಭೃತೋ ಜಾತೋ ದ್ವಯೋರ್ಯತಃ।

ಇತಿ ಪಾದ್ಮೇ ॥

ಇಬ್ಬರ ಪುತ್ರನಾದ ಈತನನ್ನು ಸಾಕು. ಉಚಥ್ಯನ ಕ್ಷೇತ್ರಜಪುತ್ರ, ಬೃಹಸ್ಪತಿಯ ಔರಸಪುತ್ರ ಎಂದು ಇಬ್ಬರಿಂದ ಜನಿಸಿದವನಾದ್ದರಿಂದ ದ್ವಾಜನೆನಿಸುತ್ತಾನೆ. ಬೃಹಸ್ಪತಿಯ ವಾಜ ಅಂದರೆ ಸಂತತಿಯು ಈತನಿಂದ ಬೆಳೆಸಲ್ಪಟ್ಟಿತು. ಅದರಿಂದ 'ಬೃಹಸ್ಪತೇರ್ಭರನ್ ವಾಜಂ' ಎಂಬ ನಿರ್ವಚನದಂತೆಯೂ ಭರದ್ವಾಜನಾಮ ಸಾರ್ಥಕ. ಪದ್ಮಪುರಾಣ ದಲ್ಲಿಯೂ ಹೀಗೆ ಹೇಳಿದೆ- ಭರದ್ವಾಜನೆಂಬ ಹೆಸರು ಸಾರ್ಥಕ ಏಕೆಂದರೆ ಮರುತ್ತುಗಳಿಂದ ಭೃತ ಸಾಕಲ್ಪಟ್ಟಿದ್ದಾನೆ. ದ್ವಾಜ ಉಚಥ್ಯಬೃಹಸ್ಪತಿಗಳೆಂದು ಇಬ್ಬರಿಂದ ಜನಿಸಿದ್ದಾನೆ' ಎಂದು.

ಮರುತ್ತುಗಳು ಮಮತೆಗೆ ಹೇಳುತ್ತಾರೆ, ಹೇಳುತ್ತಲೇ ಮಗುವಿಗೆ ನಾಮಕರಣವನ್ನೂ ಮಾಡುತ್ತಾರೆ-

'ಮೂಢೇ, ಭರ ದ್ವಾಜಂ, ಇಬ್ಬರಿಗೆ ಜನಿಸಿದವನಾದ ಈ ಮಗನನ್ನು ನೀನು ಸಾಕು (ಎಂದು ನಾವು ಹೇಳುತ್ತಿದ್ದೇವೆ. ಹಾಗೆ ನಾವೇ ಹೇಳುತ್ತಿರುವುದರಿಂದ ಪತಿ ನಿನ್ನನ್ನು ತ್ಯಜಿಸುವುದಿಲ್ಲ.) ಅದರಿಂದ ಅಂದರೆ 'ಭರ ದ್ವಾಜಂ' ಎಂದು ನಾವು ನಿನಗೆ ಹೇಳುತ್ತಿರುವುದರಿಂದ ಈತ ಭರದ್ವಾಜ. ಬೃಹಸ್ಪತಿಯ 'ವಾಜಂ' ಸಂತತಿಯನ್ನು ಈತ 'ಭರತ್' ಮುಂದುವರಿಸಿ ಕಾಪಾಡುತ್ತಾನೆ- 'ಭರದ್ ವಾಜಂ' ಅದರಿಂದಲೂ ಈತ ಭರದ್ವಾಜ. ಮತ್ತು ನೀನು ಬಿಟ್ಟುಹೋದರೆ ನಾವೇ ಸಾಕುತ್ತೇವೆ. 'ಭೃತಃ' ನಿಶ್ಚಯವಾಗಿ ಸಾಕುತ್ತೇವೆ. ಅದರಿಂದ, 'ಭರದ್‌ದ್ವಾಜಂ' ಇಬ್ಬರಿಗೆ ಹುಟ್ಟಿದ ಈತನನ್ನು ನಾವು ಪೋಷಿಸುತ್ತೇವೆ. ಈ ಕಾರಣದಿಂದಲೂ ಈತ ಭರದ್ವಾಜ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ ನವಮಸ್ಕಂಧೇ
ಸಪ್ತದಶೋಽಧ್ಯಾಯಃ

❖ ❖ ❖

ಅಧ್ಯಾಯ - ೧೮

ಅಧ್ಯಾಯ ಸಾರಾಂಶ

ವಿತಥನೆನಿಸಿದ ಭರದ್ವಾಜನಿಗೆ ಪುತ್ರ ಮನ್ಯು. ಅವನಿಗೆ ಬೃಹತ್‌ಕ್ಷೇತ್ರ ಜಯ ಮಹಾವೀರ್ಯ ನರ ಗರ್ಗ ಎಂದು ಐದು ಮಂದಿ ಮಕ್ಕಳು. ನರನ ಪುತ್ರ ಸಂಕೃತಿಗೆ ಗುರು ಮತ್ತು ರಂತಿದೇವ ಎಂದು ಇಬ್ಬರು ಮಕ್ಕಳು. ರಂತಿದೇವ ತನ್ನೆಲ್ಲ ಸಂಪತ್ತನ್ನೂ ಹಸಿದವರಿಗೆ ನೀಡಿ ದರಿದ್ರನಾಗಿ ತಾನು ಹಸಿದು ಸೊರಗಿಹೋದ.

ಒಮ್ಮೆ ನೀರನ್ನೂ ಕುಡಿಯದೆ ನಲವತ್ತೆಂಟು ದಿನಗಳು ಕಳೆದುಹೋದುವು. ಆಗ ತುಪ್ಪ ಪಾಯಸ ಗೋಧಿ ಅನ್ನ ನೀರು ಇವಿಷ್ಟನ್ನು ಯಾರೋ ತಂದುಕೊಟ್ಟರು. ಹಸಿದಿದ್ದ ಇಡೀ ಕುಟುಂಬ ಅದನ್ನು ಉಣಲು ಕಾತರವಾಗಿತ್ತು. ತನಗೂ ಹಸಿವು ಬಾಯಾರಿಕೆಗಳಿಂದ ಮೈಯಲ್ಲಿ ನಡುಕ ಉಂಟಾಗಿತ್ತು.

ಆದರೆ ಒಬ್ಬ ಬ್ರಾಹ್ಮಣ ಅತಿಥಿಯಾಗಿ ಬಂದ. ಅತಿಥಿಗಳಲ್ಲಿ ಶ್ರೀಹರಿಯನ್ನು ಕಾಣುವ ರಂತಿದೇವ ಆ ಪಾಯಸವನ್ನು ಆತನಿಗೆ ಉಣಬಡಿಸಿದ. ಅದರ ಶೇಷವನ್ನು ತಾನು ಉಣಬೇಕೆನ್ನುವಷ್ಟರಲ್ಲಿ ಒಬ್ಬ ಶೂದ್ರ ಅತಿಥಿ ಬಂದ. ರಾಜ ಅವನಿಗೂ ಬಡಿಸಿದ. ಅವನು ಹೋದೊಡನೆ ಇನ್ನೊಬ್ಬ ಶೂದ್ರ ನಾಯಿಗಳ ಪರಿವಾರದೊಂದಿಗೆ ಬಂದ. ತುಂಬ ಹಸಿದಿದ್ದೇವೆ ಎಂದ. ರಾಜ ಉಳಿದಿದ್ದ ಪಾಯಸವನ್ನೆಲ್ಲ ಅವನಿಗೆ ಬಡಿಸಿದ. ನಾಯಿಗಳಿಗೂ ಉಣಿಸಿದ. ಕೊನೆಗೆ ಒಂದಿಷ್ಟು ನೀರು ಮಾತ್ರ ಉಳಿದಿತ್ತು. ಅದೂ ಒಬ್ಬನಿಗೆ ಮಾತ್ರ ಸಾಲುವಷ್ಟಿತ್ತು. ಅದಕ್ಕೂ ಅತಿಥಿಯಾಗಿ ಅಂತ್ಯಜನೊಬ್ಬ ಬಂದು ನಾನು ಬಾಯಾರಿದ್ದೇನೆ ಎಂದು ಬೇಡಿದ. ಆಗ ರಾಜ 'ನನಗೆ ಯಾವ ಪುಣ್ಯಲೋಕವೂ ಬೇಡ. ಎಲ್ಲ ಜೀವಿಗಳ ಸಂಕಟ ನನಗೇ ಬರಲಿ, ಎಲ್ಲರೂ ಸುಖಿಗಳಾಗಿರಲಿ' ಎನ್ನುತ್ತ ಆ ನೀರನ್ನೂ ಅವನಿಗೆ ಕುಡಿಸಿದ. ದೇವತೆಗಳು ಹೀಗೆ ರಾಜನ ದಾನಶೂರತೆಯನ್ನು ಪರೀಕ್ಷಿಸಿದ್ದರು. ಅವರು ಒಲಿದು ಮೈದೋರಿದರು. ರಾಜ ಅವರಲ್ಲಿ ಕೇವಲ ಹರಿಭಕ್ತಿಯೊಂದನ್ನೇ ಬೇಡಿದ. ಅವನ ಸಹವಾಸದಲ್ಲಿದ್ದವರೆಲ್ಲರೂ ಯೋಗಿಗಳಾದರು ಹರಿಭಕ್ತರಾದರು.

ಗರ್ಗನ ಪುತ್ರನಾದ ಶಿನಿಯಿಂದ ಬ್ರಾಹ್ಮಣಕುಲ ಉತ್ಪನ್ನವಾಯಿತು. ಮಹಾವೀರ್ಯನ ಪುತ್ರನಾಗಿ ದುರಿತಕ್ಷಯನ ಮೂರು ಮಂದಿ ಮಕ್ಕಳೂ ಬ್ರಾಹ್ಮಣರಾದರು. ಮನ್ಯುವಿನ ಪುತ್ರ ಬೃಹತ್‌ಕ್ಷೇತ್ರ, ಅವನ ಪುತ್ರ ಹೋತ್ರ, ಅವನ ಪುತ್ರ ಹಸ್ತಿ. ಈತನೇ ಹಸ್ತಿನಾಪುರವನ್ನು ನಿರ್ಮಿಸಿದವನು. ಇವನ ಪುತ್ರರು ಅಜಮೀಢ ದ್ವಿಮೀಡ ಮತ್ತು ಪುರುಮೀಢ. ಅಜಮೀಢನ ವಂಶದಲ್ಲಿ ಬಂದ ನೀಪರಾಜನಿಗೆ ನೂರುಮಂದಿ ಮಕ್ಕಳು. ಅವಳಲ್ಲಿ ಹಿರಿಯನಾದ ಅಣುಹ ಶುಕಮುನಿಯ ಕನ್ಯೆಯಾದ ಕೃತ್ವೀದೇವಿಯಲ್ಲಿ ಬ್ರಹ್ಮದತ್ತನೆಂಬ ಮಗನನ್ನು ಪಡೆದ. ಬ್ರಹ್ಮದತ್ತ ಯೋಗೇಶ್ವರ. ರುದ್ರಾವತಾರನಾದ ಜೈಗೀಷವ್ಯ ಮುನಿಯಿಂದ ಉಪದೇಶಪಡೆದು ಯೋಗಶಾಸ್ತ್ರವನ್ನು ರಚಿಸಿದ. ದ್ವಿಮೀಢನ ವಂಶದಲ್ಲಿ ಬಂದ ಕೃತಿ ಹಿರಣ್ಯನಾಭನಿಂದ ಯೋಗಶಾಸ್ತ್ರವನ್ನು ಕಲಿತು ಪ್ರಾಚ್ಯಸಾಮಗಳ ಹನ್ನೆರಡೂ ಸಂಹಿತೆಗಳನ್ನು ಶಿಷ್ಯರಿಗೆ ಉಪದೇಶಿಸಿದ.

ಅಜಮೀಢನ ಇನ್ನೊಂದು ವಂಶ ನೀಲನಿಂದ ಬೆಳೆಯಿತು. ಈ ವಂಶದಲ್ಲಿ ಬಂದ ಹರ್ಮ್ಯಾಶ್ವನಿಗೆ ಮುದ್ಗಲ ಯವೀನರ ಬೃಹದಿಷು ಕಾಂಪಿಲ್ಯ ಸಂಜಯ ಎಂದು ಐದು ಮಂದಿ ಮಕ್ಕಳು. 'ನನ್ನ ಐದು ದೇಶಗಳ ರಕ್ಷಣೆಗೆ ನನ್ನ ಈ ಐದು ಮಂದಿ ಮಕ್ಕಳು ಸಮರ್ಥರು' ಪಂಚ ಅಲಂ' ಎನ್ನುತ್ತ ಹರ್ಮ್ಯಾಶ್ವ ಅವರಿಗೆ ಪಂಚಾಲ ಎಂದು ನಾಮಕರಣ ಮಾಡಿದ.

ಮುದ್ಗಲನಿಂದ ಬ್ರಾಹ್ಮಣ ಜಾತಿಯೊಂದು ಜನಿಸಿತು. ಮೌದ್ಗಲ ಎಂಬ ಗೋತ್ರವೂ ಉಂಟಾಯಿತು. ಅವನ ಅವಳಿ ಮಕ್ಕಳಲ್ಲಿ ಗಂಡುಮಗು ದಿವೋದಾಸ, ಹೆಣ್ಣು ಮಗು ಅಹಲ್ಯೆ ಅವಳಲ್ಲಿ ಗೌತಮಮುನಿಯಿಂದ ಶತಾನಂದ ಜನಿಸಿದ. ಅವನ ಮಗ ಶತಧೃತಿ. ಅವನ ಪುತ್ರ ಶರದ್ವಾನ್. ಈತನಿಗೆ ಊರ್ವಶಿಯ ದರ್ಶನದಿಂದ ಜೊಂಡುಹುಲ್ಲಿನ ಮೇಲೆ ವೀರ್ಯಸ್ಖಲನವಾಯಿತು. ಅದರಿಂದ ಕೃಪ ಮತ್ತು ಕೃಪಿ ಎಂಬ ಸುಂದರವಾದ ಅವಳಿ ಮಕ್ಕಳು ಜನಿಸಿದರು. ಅವರನ್ನು ಅಲ್ಲಿಗೆ ಬೇಟೆಯಾಡುತ್ತ ಬಂದಿದ್ದ ಶಂತನು ಮಹಾರಾಜ ಎತ್ತಿಕೊಂಡ. ಕೃಪಿ ದ್ರೋಣಾಚಾರ್ಯರ ಪತ್ನಿಯಾದಳು.

❖❖❖

ಅಧ್ಯಾಯ - ೧೯

ಅಧ್ಯಾಯ ಸಾರಾಂಶ

ದಿವೋದಾಸನ ಕುಲದಲ್ಲಿ ಸೋಮಕ ಜನಿಸಿದ. ಅವನಿಗೆ ಜಂತು ಮೊದಲಾದ ನೂರುಮಂದಿ ಮಕ್ಕಳು. ಅವರಲ್ಲಿ ಕೊನೆಯವನು ಪೃಷತ. ಅವನ ಪುತ್ರ ದ್ರುಪದ. ಅವನಿಗೆ ದ್ರೌಪದಿಯೂ ದೃಷ್ಟದ್ಯುಮ್ನ ಮುಂತಾದವರೂ ಮಕ್ಕಳು. ಹರ್ಮ್ಯಾಶ್ವನ ವಂಶದವರು ಇವರೆಲ್ಲರೂ ಪಾಂಚಾಲರೆಂದು ಪ್ರಸಿದ್ಧರಾದರು.

ಅಜಮೀಢನ ಇನ್ನೊಬ್ಬ ಪುತ್ರನಾದ ಋಕ್ಷನ ವಂಶದಲ್ಲಿ ಉಪರಿಚರ ವಸು ಜನಿಸಿದ. ಅವನಿಂದ ಬೃಹದ್ರಥ ಕುಶಾಂಬು ಮತ್ಸ್ಯ ಮುಂತಾದವರು ಜನಿಸಿದರು. ಬೃಹದ್ರಥನ ರಾಣಿ ಎರಡು ಸೀಳಾಗಿದ್ದ ಒಂದು ಶಿಶುಶರೀರವನ್ನು ಹೆತ್ತಳು. ಆ ಎರಡೂ ಸೀಳುಗಳನ್ನೂ ಹೊರಗೆ ಎಸೆದಳು. ಜರೆ ಎಂಬ ರಾಕ್ಷಸಿ ಅವುಗಳನ್ನು ಜೊತೆ ಸೇರಿಸಿ ಆಟವಾಡುತ್ತ 'ಬದುಕಿ ಬಾ' ಎಂದಳು. ಮಗು ಬದುಕಿತು. ಅವನೇ ಜರಾಸಂಧ.

ಬೃಹದ್ರಥನ ಇನ್ನೊಬ್ಬ ಪುತ್ರ ಕುಶಾಗ್ರ. ಅವನ ವಂಶದಲ್ಲಿ ಬಂದ ಪ್ರತೀಪನಿಗೆ ದೇವಾಪಿ ಬಾಹ್ಲೀಕ ಶಂತನು ಎಂದು ಮೂರು ಮಂದಿ ಮಕ್ಕಳು. ತಂದೆಯ ರಾಜ್ಯವನ್ನು ಸ್ವೀಕರಿಸದೆ ದೇವಾಪಿ ಕಾಡಿಗೆ ನಡೆದ. ಶಂತನು ರಾಜನಾದ. ಈತ ಹಿಂದಿನ ಜನ್ಮದಲ್ಲಿ ಬ್ರಹ್ಮಶಾಪದಿಂದ ಮಹಾಭಿಷಕ್ ಎಂಬ ಅವತಾರ ಮಾಡಿದ್ದ ವರುಣ. ಈ ಜನ್ಮದಲ್ಲಿ ಅವನು ತನ್ನ ಕೈಗಳಿಂದ ಸ್ಪರ್ಶಿಸಿದವರೆಲ್ಲರೂ ಮುದುಕರಾಗಿದ್ದರೂ ಯೌವನವನ್ನು ಪಡೆದು ಶಾಂತಿ ನೆಮ್ಮದಿಗಳನ್ನು ಹೊಂದುತ್ತಿದ್ದುದರಿಂದ 'ಶಂ ತನೋತಿ' ಅಥವಾ 'ಶಾಂತಂ ನಯತಿ' ಎಂಬ ಅರ್ಥದಲ್ಲಿ ಶಂತನು ಎನಿಸಿದ.

ಅವನ ರಾಜ್ಯದಲ್ಲಿ ಒಮ್ಮೆ ಹನ್ನೆರಡು ವರ್ಷಕಾಲ ಮಳೆಯಾಗದಿದ್ದಾಗ ಮುನಿಗಳು 'ಹಿರಿಯಣ್ಣ ದೇವಾಪಿ ಇರುವಾಗ ಮೊದಲು ಶಂತನು ರಾಜ್ಯಸುಖ ಅನುಭವಿಸಿದ್ದೇ ಇದಕ್ಕೆ ಕಾರಣ' ಎಂದರು. ಶಂತನು ದೇವಾಪಿಯನ್ನು ರಾಜ್ಯವನ್ನು ಸ್ವೀಕರಿಸಲು

ಕೇಳಿಕೊಂಡ. ಆದರೆ ದೇವಾಪಿ ನಿರಾಕರಿಸಿದ. ಏಕೆಂದರೆ ಈ ನಡುವೆ ಶಂತನುವಿನ ಒಬ್ಬ ಮಂತ್ರಿ ಕೇಲವು ಬ್ರಾಹ್ಮಣರ ಮೂಲಕ ದೇವಾಪಿಗೆ ಅಧರ್ಮದ ಉಪದೇಶ ಕೊಡಿಸಿದ್ದ. ಹೀಗಾಗಿ ಶಂತನು 'ಪ್ರಜಾಪಾಲನ ಮಾಡುವುದು ನಿನಗೆ ಧರ್ಮ' ಎಂದಾಗ 'ಪ್ರಜಾಪೀಡೆಯೆ ಧರ್ಮ' ಎಂದು ಆತ ನುಡಿದ, ರಾಜ್ಯವಾಳಲು ಅನರ್ಹನೆನಿಸಿದ. ಶಂತನು ಅರ್ಹನೆನಿಸಿದ. ಇಂದ್ರ ಮಳೆ ಸುರಿಸಿದ. ಮುಂದೆ ದೇವಾಪಿ ಹರಿಧ್ಯಾನ ಮಾಡುತ್ತ ಕಲಾಪಗ್ರಾಮದಲ್ಲಿ ವಾಸ ಮಾಡಿದ. ಕಲಿಯುಗದಲ್ಲಿ ಚಂದ್ರವಂಶ ಅಳಿದು ಹೋದ ಬಳಿಕ ಕೃತಯುಗದ ಆದಿಯಲ್ಲಿ ಈತ ರಾಜನಾಗಿ ತಿರುಗಿ ಚಂದ್ರವಂಶವನ್ನು ಮುಂದುವರಿಸುತ್ತಾನೆ.

ಬಾಹ್ಲೀಕನಿಂದ ಸೋಮದತ್ತ, ಅವನಿಂದ ಭೂರಿ ಭೂರಿಶ್ರವ ಮತ್ತು ಶಲ. ಶಂತನುವಿನಿಂದ ಗಂಗಾದೇವಿಯಲ್ಲಿ ಭೀಷ್ಮ ಜನಿಸಿದ. ಭೀಷ್ಮ ಮನೋನಿಗ್ರಹ ಉಳ್ಳವನು ವೀರಾಗ್ರೇಸರ. ಅಂಬೆಯನ್ನು ಮದುವೆಯಾಗಲು ನಿರಾಕರಿಸಿ ಪರಶುರಾಮನನ್ನು ಯುದ್ಧದಲ್ಲಿ ಸಂತೋಷಗೊಳಿಸಿದವನು. ಶಂತನುವಿನಿಂದ ಬೆಸ್ತರ ಮಗಳಾದ ಸತ್ಯವತಿಯಲ್ಲಿ ಚಿತ್ರಾಂಗದ ವಿಚಿತ್ರವೀರ್ಯರು ಜನಿಸಿದರು. ಚಿತ್ರಾಂಗದ ಚಿತ್ರಾಂಗದನೆಂಬ ಹೆಸರಿನ ಗಂಧರ್ವನಿಂದ ಯುದ್ಧದಲ್ಲಿ ಹತನಾದ. ಆ ಸತ್ಯವತಿಯಲ್ಲಿಯೇ ಮೊದಲಿಗೆ ಸಾಕ್ಷಾತ್ ಹರಿಯ ಅವತಾರರಾದ ಕೃಷ್ಣದ್ವೈಪಾಯನರು ಪರಾಶರರಿಂದ ಜನಿಸಿದ್ದರು. ಅವರಿಂದ ಹುಟ್ಟಿದವರು ಶುಕಮುನಿ ಅವರಿಂದಲೇ ಈ ಭಾಗವತವನ್ನು ಮೊದಲಿಗೆ ಶ್ರವಣ ಮಾಡಿದರು.

ಭೀಷ್ಮ ಸ್ವಯಂವರಮಂಟಪದಿಂದ ಕಾಶಿರಾಜನ ಪುತ್ರಿಯರಾದ ಅಂಬಾ ಅಂಬಾಲಿಕಾ ಅಂಬಿಕಾ ಎಂಬ ಮೂವರು ಕನ್ಯೆಯರನ್ನು ಬಲಾತ್ಕಾರವಾಗಿ ತಂದುಕೊಟ್ಟಾಗ ಅಂಬಾಲಿಕಾ ಅಂಬಿಕೆಯರನ್ನು ವಿಚಿತ್ರವೀರ್ಯ ವಿವಾಹವಾದ. ಆತ ಮಕ್ಕಳಿಲ್ಲದೆಯೇ ಕ್ಷಯರೋಗಕ್ಕೆ ತುತ್ತಾದ. ತಾಯಿ ಸತ್ಯವತಿಯ ಅಪೇಕ್ಷೆಯಂತೆ ವ್ಯಾಸರೇ ವಿಚಿತ್ರವೀರ್ಯನ ಪತ್ನಿಯರಲ್ಲಿ ಧೃತರಾಷ್ಟ್ರ, ಪಾಂಡು ವಿದುರರನ್ನು ಹುಟ್ಟಿಸಿದರು.

ಧೃತರಾಷ್ಟ್ರನಿಗೆ ಗಾಂಧಾರಿಯಲ್ಲಿ ದುರ್ಯೋಧನ ಮುಂತಾದ ನೂರುಮಂದಿ ಗಂಡುಮಕ್ಕಳೂ ದುಃಶಲೆ ಎಂಬ ಕನ್ಯೆಯೂ ಜನಿಸಿದಳು. ಕಿಂದಮ ಮುನಿಯ ಶಾಪದಿಂದ ಪಾಂಡು ಸ್ತ್ರೀಸಂಗವನ್ನು ಮಾಡುವಂತಿರಲಿಲ್ಲ. ಆದರಿಂದ ಅವನ ಪತ್ನಿಯರಾದ ಕುಂತಿ ಮಾದ್ರಿಯರಲ್ಲಿ ಯಮ ವಾಯು ಇಂದ್ರ ಅಶ್ವಿ ದೇವತೆಗಳಿಂದ ಪಂಚಪಾಂಡವರು ಜನಿಸಿದರು. ಅವರಿಂದ ದ್ರೌಪದಿಯಲ್ಲಿ ಐದುಮಂದಿ ಮಕ್ಕಳು ಪ್ರತಿವಿಂಧ್ಯ ಶ್ರುತಸೇನ ಶತಕೀರ್ತಿ ಶತಾನೀಕ ಮತ್ತು ಶ್ರುತಕೀರ್ತಿ ಜನಿಸಿದರು. ಯುಧಿಷ್ಠಿರನಿಂದ ಪೌರವಿಯಲ್ಲಿ ದೇವಕ, ಭೀಮನಿಂದ ಹಿಡಿಂಬೆಯಲ್ಲಿ ಘಟೋತ್ಕಚ, ಕಾಳಿಯಲ್ಲಿ ಶರ್ವಗತ, ಸಹದೇವನಿಂದ ಪಾರ್ವತಿಯಲ್ಲಿ ಸುಹೋತ್ರ, ನಕುಲನಿಂದ ಕರೇಣುಮತಿಯಲ್ಲಿ ನಿರಮಿತ್ರ. ಅರ್ಜುನನಿಂದ ಉಲೂಪಿಯಲ್ಲಿ ಇರಾವಂತ, ಚಿತ್ರಾಂಗದೆಯಲ್ಲಿ ಬಭ್ರುವಾಹನ, ಸುಭದ್ರೆಯಲ್ಲಿ ಅಭಿಮನ್ಯು ಹೀಗೆ ಬೇರೆ ಮಕ್ಕಳೂ ಜನಿಸಿದರು.

ಮಣಲೂರರಾಜ ಮಗಳ ಮಗನಾದ ಬಭ್ರುವಾಹನ ನನ್ನು ತನ್ನ ಮಗನನ್ನಾಗಿ ಮಾಡಿಕೊಂಡ. ಅಭಿಮನ್ಯುವಿನಿಂದ ಉತ್ತರೆಯಲ್ಲಿ ಪರೀಕ್ಷಿತ ಜನಿಸಿದ. ಅಶ್ವತ್ಥಾಮನ ಬ್ರಹ್ಮಾಸ್ತ್ರದಿಂದ ಕುರುವಂಶ ಅಳಿದುಹೋಗುವ ಪ್ರಸಂಗದಲ್ಲಿ ಪರೀಕ್ಷಿತನೊಬ್ಬ ಶ್ರೀಕೃಷ್ಣನ ಸಂಕಲ್ಪದಿಂದ ಬದುಕಿ ಉಳಿದ.

ಪರೀಕ್ಷಿತನ ಮಕ್ಕಳು ಜನಮೇಜಯ ಶ್ರುತಸೇನ ಭೀಮಸೇನ ಉಗ್ರಸೇನ ವೀರ್ಯವಾನ್ ಎಂದು ಐದು ಮಂದಿ. ಪರೀಕ್ಷಿತ ತಕ್ಷಕನ ಕಡಿತದಿಂದ ಮರಣಹೊಂದಿದ್ದನ್ನು ತಿಳಿದು ಜನಮೇಜಯ ಸರ್ಪಕುಲವನ್ನೇ ನಾಶಮಾಡಲು ಸರ್ಪಯಾಗ ಮಾಡಿದ. ಕವಷಾಪುತ್ರನಾದ ತುರನೆಂಬ ಮುನಿಯ ಪೌರೋಹಿತ್ಯದಲ್ಲಿ ಅಶ್ವಮೇಧಯಾಗ ಮಾಡಿದ. ಅವನ ಪುತ್ರ ಶತಾನೀಕ ಯಾಜ್ಞವಲ್ಕ್ಯರಿಂದ ವೇದಗಳನ್ನು ಅಧ್ಯಯನ ಮಾಡಿ ಕೃಪಾಚಾರ್ಯರಿಂದ ಅಸ್ತ್ರಜ್ಞಾನವನ್ನೂ ಶೌನಕರಿಂದ ಬ್ರಹ್ಮಜ್ಞಾನವನ್ನು ಸಂಪಾದಿಸಿದ. ಇವನ ವಂಶದಲ್ಲಿ ಬಂದ ನೇಮಿಚಕ್ರ ಹಸ್ತಿನಾವತಿ ಯಮುನೆಯಲ್ಲಿ ಮುಳುಗಿಹೋದಾಗ ಕೌಶಾಂಬಿಯಲ್ಲಿ

ವಾಸಮಾಡಿದ. ಈ ಚಂದ್ರವಂಶ ಮುಂದೆ ಕಲಿಯುಗದಲ್ಲಿ ಕ್ಷೇಮಕರಾಜನಲ್ಲಿ ಕೊನೆಗೊಳ್ಳುತ್ತದೆ.

❖❖❖

ಅಧ್ಯಾಯ - ೨೦

ಅಧ್ಯಾಯ ಸಾರಾಂಶ

ಯಯಾತಿಪುತ್ರನಾದ ಅನುವಿನ ವಂಶದಲ್ಲಿ ಬಂದ ಬಲಿರಾಜನಿಗೆ ಅವನ ಪತ್ನಿಯಲ್ಲಿ ದೀರ್ಘತಮಮುನಿಯಿಂದ ಅಂಗ ವಂಗ ಕಲಿಂಗ ಸುಹ್ಮ ಪುಂಡ್ರ ಆಂಧ್ರ ಎಂಬ ಆರು ಮಂದಿ ಮಕ್ಕಳು ಜನಿಸಿ ಪೂರ್ವದಿಕ್ಕಿನಲ್ಲಿ ತಮ್ಮ ಹೆಸರುಗಳಿಂದ ಕರೆಸಿಕೊಳ್ಳುವ ಆರು ರಾಜ್ಯಗಳನ್ನು ಕಟ್ಟಿಕೊಂಡರು. ಅಂಗನ ಕುಲದಲ್ಲಿ ಬಂದ ಮಿತ್ರರಥ ದಶರಥನ ಮಿತ್ರ. ಅವನಿಗೆ ರೋಮಪಾದ ಎಂದು ಇನ್ನೊಂದು ಹೆಸರು. ಅವನಿಗೆ ಮಕ್ಕಳಿರಲಿಲ್ಲ. ದಶರಥನ ಮಗಳಾದ ಶಾಂತಾಳನ್ನು ದತ್ತು ತೆಗೆದುಕೊಂಡು ಋಷ್ಯಶೃಂಗಮುನಿಗೆ ಮದುವೆ ಮಾಡಿಕೊಟ್ಟ. ಏಕೆಂದರೆ ಅವನ ರಾಜ್ಯದಲ್ಲಿ ಮಳೆಯಾಗದಿದ್ದಾಗ ವೇಶ್ಯಾಸ್ತ್ರೀಯರ ಮೂಲಕ ಋಷ್ಯಶೃಂಗನನ್ನು ರಾಜ್ಯಕ್ಕೆ ಕರೆಸಿಕೊಂಡೊಡನೆ ಮಳೆಯಾಯಿತು. ಮುಂದೆ ಋಷ್ಯಶೃಂಗನ ಪೌರೋಹಿತ್ಯದಲ್ಲಿ ಇಂದ್ರೇಷ್ಟಿಮಾಡಿ ಚತುರಂಗನೆಂಬ ಮಗನನ್ನು ಪಡೆದ. ದಶರಥನೂ ಸಂತತಿ ಇಲ್ಲದಿದ್ದಾಗ ಈ ಇಷ್ಟಿಯಿಂದಲೆ ಮಕ್ಕಳನ್ನು ಪಡೆದ.

ಚತುರಂಗನ ವಂಶದಲ್ಲಿ ಮುಂದೆ ಅಧಿರಥ ಬಂದ. ಕುಂತಿ ಕನ್ಯಾವಸ್ಥೆಯಲ್ಲಿ ಪ್ರಸವಿಸಿ ತ್ಯಾಗ ಮಾಡಿದ್ದ ಕರ್ಣನನ್ನು ಅಧಿರಥ ಮಗನೆಂದು ಸ್ವೀಕರಿಸಿದ. ಕರ್ಣನ ಪುತ್ರ ವೃಷಸೇನ.

ತುರ್ವಸು ಎಂಬ ಯಯಾತಿಪುತ್ರನ ವಂಶದಲ್ಲಿ ಬಂದ ಮರುತ್ತನಿಗೆ ಮಕ್ಕಳಿಲ್ಲದ್ದರಿಂದ ಪುರುವಂಶದ ದುಷ್ಯಂತನನ್ನು ದತ್ತು ತೆಗೆದುಕೊಂಡ. ಆದರೆ ಆತ ಸಾಮ್ರಾಜ್ಯದ ಅಪೇಕ್ಷೆಯಿಂದ ತಿರುಗಿ ಜನ್ಮಕೊಟ್ಟ ತಂದೆಯ ಬಳಿಗೇ ಬಂದ. ಈ ದುಷ್ಯಂತ ಬೇರೆ, ಭರತ ಚಕ್ರವರ್ತಿಯ ತಂದೆ ದುಷ್ಯಂತ ಬೇರೆ.

ಯಯಾತಿಯ ಜ್ಯೇಷ್ಠ ಪುತ್ರನಾದ ಯದುವಿನ ವಂಶ ಭಗವಾನ್ ಶ್ರೀಕೃಷ್ಣ ಅವತರಿಸಿದ ವಂಶ. ಯದುಪುತ್ರನಾದ ಸಹಸ್ರಜಿತನ ವಂಶದಲ್ಲಿ ಬಂದ ಕಾರ್ತವೀರ್ಯಾರ್ಜುನ ಸಪ್ತದ್ವೀಪಾಧಿಪತಿ. ದತ್ತಾತ್ರೇಯನಿಂದ ಅಣಿಮಾದಿ ಯೋಗಸಿದ್ಧಿ ಪಡೆದವನು. ಎಂಬತ್ತೈದು ಸಾವಿರ ವರ್ಷಕಾಲ ರಾಜ್ಯಭಾರ ಮಾಡಿದವನು. ಇವನ ಹತ್ತುಸಾವಿರ ಮಕ್ಕಳಲ್ಲಿ ಐದು ಮಂದಿ ಮಾತ್ರ ಉಳಿದರು. ಜಯಧ್ವಜ ಶೂರಸೇನ ಋಷಭ ಮಧು ಮತ್ತು ಊರ್ಜಿತ ಇವರೇ ಆ ಐದು ಮಂದಿ ಮಕ್ಕಳು.

ಜಯಧ್ವಜನ ಪುತ್ರ ತಾಲಜಂಘ. ಇವನ ನೂರು ಮಂದಿ ಮಕ್ಕಳನ್ನೂ ಸಗರ ಚಕ್ರವರ್ತಿ ಸಂಹರಿಸಿದ. ಮಧುವಿಗೂ ನೂರು ಮಂದಿ ಮಕ್ಕಳು. ಅವರಲ್ಲಿ ಜ್ಯೇಷ್ಠ ವೃಷ್ಣಿ ಮಧುವಿನಿಂದಲೂ ವೃಷ್ಣಿಯಿಂದಲೂ ಯದುವಂಶ ಬೆಳೆದುದರಿಂದ ಆ ವಂಶದ ರಾಜರನ್ನು ಯಾದವರೆಂದೂ ಮಾಧವರೆಂದೂ ವೃಷ್ಣಿಗಳೆಂದೂ ಕರೆದರು.

ಯದುಪುತ್ರನಾದ ಕ್ರೋಷ್ಟುವಿನ ವಂಶದಲ್ಲಿ ಚಿತ್ರರಥನಿಂದ ಶಶಬಿಂದು ಜನಿಸಿದ. ಮಹಾಭೋಜ ಎಂದು ಈತನಿಗೆ ಇನ್ನೊಂದು ಹೆಸರು. ಈತ ಮಹಾಯೋಗಿ. ಹದಿನಾಲ್ಕು ಮಹಾರತ್ನಗಳನ್ನು ಹೊಂದಿದ ಚಕ್ರವರ್ತಿ. ಇವನಿಗೆ ಹತ್ತುಸಾವಿರ ಮಂದಿ ಪತ್ನಿಯರು. ಅವರಲ್ಲಿ ಪ್ರತಿಯೊಬ್ಬರಲ್ಲಿ ಲಕ್ಷಮಂದಿಯಂತೆ ಒಟ್ಟು ನೂರುಕೋಟಿ ಪುತ್ರರನ್ನು ಪಡೆದ. ಅವರಲ್ಲಿ ಆರುಮಂದಿ ಪ್ರಧಾನರು.

ಅವರೊಳಗೆ ಪೃಥುಶ್ರವನ ವಂಶದಲ್ಲಿ ಬಂದ ಜ್ಯಾಮಘನಿಗೆ ಏಕಮಾತ್ರ ಪತ್ನಿ ಶೈಬ್ಯೆ ಬಂಜೆಯಾಗಿದ್ದಳು. ಆದರೂ ಅವಳ ಭಯದಿಂದ ಆತ ಬೇರೆ ಮದುವೆ ಮಾಡಿಕೊಳ್ಳಲಿಲ್ಲ. ಒಮ್ಮೆ ಶತ್ರುಗೃಹದಿಂದ ಒಬ್ಬಳು ಸುಂದರ ಕನ್ಯೆಯನ್ನು ಬಲಾತ್ಕಾರದಿಂದ ತಂದು ತನ್ನ ರಥವನ್ನೇರಿಸಿಕೊಂಡ. ಶೈಬ್ಯೆ 'ಯಾರೀಕೆ?' ಎಂದು ಗದರಿದಳು. ರಾಜ ತಬ್ಬಿಬ್ಬಾಗಿ 'ನಿನಗೆ ಸೊಸೆಯಾಗುವವಳು' ಎಂದು ಹೇಳಿಬಿಟ್ಟ. ಶೈಬ್ಯೆ ನಗುತ್ತ 'ನಾನು ಬಂಜೆ, ನನಗೆ ಬೇರೆ ಸವತಿಯರೂ ಇಲ್ಲ. ಈಕೆ ಹೇಗೆ ಸೊಸೆಯಾಗುವಳು?' ಎಂದಳು.

ಅದಕ್ಕೆ ರಾಜ 'ನಿನಗೆ ಮಗ ಹುಟ್ಟುತ್ತಾನೆ' ಎಂದ. ರಾಜನ ಅಸಹಾಯಕತೆಗೆ ಮರುಗಿ ವಿಶ್ವೇದೇವತೆಗಳೂ ಪಿತೃಗಳೂ ಪ್ರೀತಿಯಿಂದ 'ತಥಾಸ್ತು' ಎಂದರು. ಅದರಿಂದ ವಿದರ್ಭ ಜನಿಸಿದ. ಆ ಕನ್ಯೆಯನ್ನೇ ಮದುವೆಯಾದ.

❖❖❖

ಅಧ್ಯಾಯ - ೨೧

ಅಧ್ಯಾಯ ಸಾರಾಂಶ

ವಿದರ್ಭನಿಗೆ ಕುಶ ಕ್ರಥ ಮತ್ತು ರೋಮಪಾದ ಎಂದು ಮೂವರು ಮಕ್ಕಳು. ರೋಮಪಾದನಿಂದ ಬಭ್ರು, ಬಭ್ರುವಿನಿಂದ ಕೃತಿ, ಕೃತಿಯಿಂದ ಉಶಿಕ, ಉಶಿಕನಿಂದ ಚೇದಿ, ಚೇದಿಯಿಂದ ಶಿಶುಪಾಲ ಮುಂತಾದವರು ಜನಿಸಿದರು. ಕ್ರಥನ ವಂಶದಲ್ಲಿ ಆಯುವಿನಿಂದ ಸಾತ್ವತ ಜನಿಸಿದ. ಸಾತ್ವತನಿಗೆ ಭಜಮಾನ ಭಜಿ ದಿವ್ಯ ವೃಷ್ಣಿ ದೇವಾವೃಧ ಅಂಧಕ ಮಹಾಭೋಜ ಎಂದು ಏಳುಮಂದಿ ಪುತ್ರರು. ದೇವಾವೃಧನೂ ಅವನ ಪುತ್ರ ಬಭ್ರುವೂ ಮಹಾಜ್ಞಾನಿಗಳು. ಅವರ ಉಪದೇಶದಿಂದ ಆರುಸಾವಿರದ ಎಪ್ಪತ್ತಮೂರು ಜನರು ಮೋಕ್ಷ ಪಡೆದರು. ಮಹಾಭೋಜನ ವಂಶದಲ್ಲಿ ಭೋಜರು ಬಂದರು. ವೃಷ್ಣಿಯ ವಂಶದಲ್ಲಿ ಬಂದ ಅನಮಿತ್ರನಿಗೆ ನಿಮ್ನ ಶಿನಿ ಪೃಶ್ನಿ ಎಂದು ಮೂರು ಮಕ್ಕಳು. ನಿಮ್ನನ ಪುತ್ರರು ಸತ್ರಾಜಿತ ಮತ್ತು ಪ್ರಸೇನ. ಶಿನಿಪುತ್ರನಾದ ಸತ್ಯಕನ ಪುತ್ರ ಸಾತ್ಯಕಿ. ಅವನ ಹೆಸರು ಯುಯುಧಾನ. ಪೃಶ್ನಿಯ ಮಕ್ಕಳು ಶ್ವಫಲ್ಕ ಮತ್ತು ಚಿತ್ರರಥ. ಶ್ವಫಲ್ಕನಿಂದ ಗಾಂದಿನಿಯಲ್ಲಿ ಅಕ್ರೂರ ಮುಂತಾದ ಹದಿಮೂರು ಪುತ್ರರೂ ಸುಚಾರಾ ಎಂಬ ಕನ್ಯೆಯೂ ಜನಿಸಿದರು.

ಸಾತ್ವತಪುತ್ರ ಅಂಧಕನ ಪುತ್ರನಾದ ಕುಕುರನ ವಂಶದಲ್ಲಿ ಆಹುಕನ ಪುತ್ರರು ದೇವಕ ಮತ್ತು ಉಗ್ರಸೇನ. ದೇವಕನಿಗೆ ದೇವವಾನ್ ಉಪದೇವ ಸುದೇವ ದೇವವರ್ಧನ ಎಂದು ನಾಲ್ವರು ಪುತ್ರರು ಮತ್ತು ಧೃತದೇವಾ, ಶಾಂತಿದೇವಾ,

ಉಪದೇವಾ ಶ್ರೀದೇವಾ ದೇವರಕ್ಷಿತಾ ಸಹದೇವಾ ದೇವಕೀ ಎಂದು ಏಳುಮಂದಿ ಕನ್ಯೆಯರು. ಈ ಏಳುಮಂದಿಯನ್ನೂ ವಸುದೇವ ವಿವಾಹವಾದ. ಉಗ್ರಸೇನನಿಗೆ ಕಂಸ ಸುನಾಮ ನ್ಯಗ್ರೋಧ ಕಂಕ ಶಂಕು ಸುಭೂ ರಾಷ್ಟ್ರಪಾಲ ಅಬ್ದಸೃಷ್ಟಿ ತುಷ್ಟಿಮಾನ್ ಎಂದು ಒಂಬತ್ತು ಮಂದಿ ಗಂಡುಮಕ್ಕಳು. ಕಂಸಾ ಕಂಸವತೀ ಕಂಕಾ ಸುರಭೂ ರಾಷ್ಟ್ರಪಾಲಿಕಾ ಎಂದು ಐದು ಹೆಣ್ಣುಮಕ್ಕಳು. ಇವರು ವಸುದೇವನ ತಮ್ಮಂದಿರನ್ನು ಮದುವೆಯಾದರು.

ಸಾತ್ವತಪುತ್ರ ಅಂಧಕನ ಪುತ್ರನಾದ ಭಜಮಾನನ ವಂಶದಲ್ಲಿ ಹೃದಿಕನಿಂದ ದೇವಬಾಹು ಶತಧನು ಕೃತವರ್ಮ ಮತ್ತು ದೇವಮೀಢ ಎಂದು ನಾಲ್ವರು ಪುತ್ರರು ಜನಿಸಿದರು. ದೇವಮೀಢನ ಪುತ್ರ ಶೂರ. ಈತನಿಗೆ ಮಾರಿಷಾ ಎಂಬ ಪತ್ನಿಯಲ್ಲಿ ವಸುದೇವ ದೇವಭಾಗ ದೇವಶ್ರವಸ ಆನಕಸೃಂಜಯ ಶ್ಯಾಮಕ ಕಂಕ ಅನೀಕ ವತ್ಸಕ ವೃಕ ಎಂದು ಹತ್ತುಮಂದಿ ಪುತ್ರರು ಜನಿಸಿದರು. ವಸುದೇವನ ಜನ್ಮಕಾಲದಲ್ಲಿ ದೇವದುಂದುಭಿ ಆನಕಗಳು ಮೊಳಗಿದ್ದರಿಂದ ಅವನಿಗೆ ಆನಕದುಂದುಭಿ ಎಂದು ಹೆಸರಾಯಿತು. ಈ ಹತ್ತು ಮಂದಿ ಪುತ್ರರೊಂದಿಗೆ ಪೃಥಾ ಶ್ರುತದೇವಾ ಶ್ರುತಕೀರ್ತಿ ಶ್ರುತಶ್ರವಾ ರಾಜಾಧಿದೇವೀ ಎಂದು ಐದುಮಂದಿ ಕನ್ಯೆಯರೂ ಜನಿಸಿದರು. ಶೂರ ತನ್ನ ಮಿತ್ರನಾದ ಕುಂತಿಭೋಜನಿಗೆ ಮಕ್ಕಳಿಲ್ಲದ್ದರಿಂದ ಅವನಿಗೆ ತನ್ನ ಮಗಳಾದ ಪೃಥೆಯನ್ನು ನೀಡಿದ. ಪೃಥೆ ದುರ್ವಾಸರಿಂದ ಮಂತ್ರೋಪದೇಶ ಪಡೆದು ತಾನಿನ್ನೂ ಮದುವೆಯಾಗದ ಕನ್ಯೆಯಾಗಿದ್ದಾಗಲೇ ಆ ಮಂತ್ರವನ್ನು ಪರೀಕ್ಷಿಸುವುದಕ್ಕಾಗಿ ಮಂತ್ರದಿಂದ ಸೂರ್ಯನನ್ನು ಆಹ್ವಾನಿ ಸಿದಳು. ಸೂರ್ಯ ಪ್ರತ್ಯಕ್ಷನಾದ. 'ಕ್ಷಮಿಸು, ಕೇವಲ ಮಂತ್ರಶಕ್ತಿ ಪರೀಕ್ಷೆಗಾಗಿ ನಿನ್ನನ್ನು ಆಹ್ವಾನಿಸಿದೆನು' ಎಂದು ಆಕೆ ಕೇಳಿಕೊಂಡರೂ ದೇವದರ್ಶನ ಎಂದೂ ವ್ಯರ್ಥವಾಗದೆನ್ನುತ್ತ ಒಬ್ಬ ಮಗನನ್ನು ಹುಟ್ಟಿಸಿದ. ಕನ್ಯಾತ್ವ ಕೆಡದಂತೆಯೂ ಅನುಗ್ರಹಿಸಿದ. ಕುಂತಿ ಕರ್ಣನನ್ನು ಹೆತ್ತಳು. ಲೋಕಾಪವಾದ ಭಯದಿಂದ ಒಂದು ಪೆಟ್ಟಿಗೆಯಲ್ಲಿಟ್ಟು ನದೀನೀರಿನಲ್ಲಿ ತೇಲಿಬಿಟ್ಟಳು. ಬಳಿಕ ಪೃಥೆಯನ್ನು ಪಾಂಡು ವಿವಾಹವಾದ.

ಶ್ರುತದೇವೆಯನ್ನು ಕರೂಶಾಧಿಪತಿ ವೃದ್ಧಶರ್ಮ ವಿವಾಹವಾದ. ಅವಳಲ್ಲಿ ದಂತವಕ್ರ ಜನಿಸಿದ. ಶ್ರುತಕೀರ್ತಿಯನ್ನು ಕೇಕಯಾಧಿಪತಿ ಧೃಷ್ಟಕೇತು ವಿವಾಹವಾಗಿ ಸಂತರ್ದನ ಮುಂತಾದ ಐವರು ಮಕ್ಕಳನ್ನು ಪಡೆದ. ರಾಜಾಧಿದೇವಿಯಲ್ಲಿ ಜಯತ್ಸೇನ ಅವಂತಿದೇಶಾಧಿಪರಾದ ವಿಂದ ಅನುವಿಂದರನ್ನು ಹುಟ್ಟಿಸಿದ. ಶ್ರುತಶ್ರವೆಯಲ್ಲಿ ಚೇದಿದೇಶಾಧಿಪತಿ ದಮಘೋಷನಿಗೆ ಶಿಶುಪಾಲ ಜನಿಸಿದ. ಕಂಸವತಿಯಲ್ಲಿ ವಸುದೇವಸೋದರನಾದ ದೇವಶ್ರವಸನಿಗೆ ಸುವೀರ ಇಷುಮಾನ್ ಎಂಬ ಪುತ್ರರು ಜನಿಸಿದರು. ಕಂಕೆಯಲ್ಲಿ ಆನಕನಿಂದ ಸತ್ಯಜಿತ್ ಪುರುಜಿತರು ಜನಿಸಿದರು. ಸುರಭೂಮಿಯಲ್ಲಿ ಶ್ಯಾಮಕನಿಗೆ ಹರಿಕೇಶ ಹಿರಣ್ಯಾಕ್ಷರು ಜನಿಸಿದರು. ರಾಷ್ಟ್ರಪಾಲಿಯಲ್ಲಿ ಸೃಂಜಯನಿಂದ ವೃಷ ದುರ್ಮರ್ಷಣ ಮುಂತಾದವರು ಜನಿಸಿದರು. ಮಿತ್ರಕೇಶಿ ಎಂಬ ಅಪ್ಸರೆಯಲ್ಲಿ ವತ್ಸಕನಿಂದ ವೃಕ ಮುಂತಾದವರು, ಊರ್ವಶಿಯಲ್ಲಿ ವೃಕನಿಂದ ತಕ್ಷ ಪುಷ್ಕರ ಸಾಲ ಮುಂತಾದವರು, ಸುದಾಮನಿಯಲ್ಲಿ ಅನೀಕನಿಂದ ಸುಮಿತ್ರ ಅರ್ಜುನ ಬಾಣ ಮುಂತಾದವರು ಕರ್ಣಿಕೆಯಲ್ಲಿ ಕಂಕನಿಂದ ಋತಧಾಮ ಮತ್ತು ಜಯ ಜನಿಸಿದರು.

ವಸುದೇವನಿಂದ ರೋಹಿಣಿಯಲ್ಲಿ ಬಲರಾಮ ಗದ ಸಾರಣ ದುರ್ಮದ ವಿಪುಲ ಮತ್ತು ಧ್ರುವ. ಪೌರವಿಯಲ್ಲಿ ಸುಭದ್ರ ಭದ್ರಬಾಹು ದುರ್ಮದ ಭದ್ರ ಭೂತ ಮುಂತಾದ ಹನ್ನೆರಡು ಪುತ್ರರು. ಮದಿರೆಯಲ್ಲಿ ನಂದ ಉಪನಂದ ಕೃತಕ ಶೂರ ಮುಂತಾದವರು. ಭದ್ರೆಯಲ್ಲಿ ಕೇಶಿ, ರೋಚನೆಯಲ್ಲಿ ಹಸ್ತ ಹೇಮಾಂಗದ ಮುಂತಾದವರು. ಇಲೆಯಲ್ಲಿ ಪುರುವಲ್ಕ ಮುಂತಾದವರು. ಧೃತದೇವೆಯಲ್ಲಿ ತ್ರಿಪೃಷ್ಠ. ಶಾಂತಿದೇವಿಯಲ್ಲಿ ಪ್ರಶ್ರಮ ಪ್ರಶ್ರಿತ ಮುಂತಾದವರು. ಉಪದೇವಿಯಲ್ಲಿ ಕಲ್ಪ ವರ್ಷ ಮುಂತಾದ ಹತ್ತುಮಂದಿ ಪುತ್ರರು. ಶ್ರೀದೇವೆಯಲ್ಲಿ ವಸು ಹಂಸ ಸುಧನ್ವ ಮುಂತಾದ ಆರುಮಂದಿ ಪುತ್ರರು. ದೇವರಕ್ಷಿತೆಯಲ್ಲಿ ಗದ ಮುಂತಾದ ಒಂಬತ್ತು ಮಂದಿ, ಸಹದೇವೆಯಲ್ಲಿ ಪುರು ವಿಶ್ರುತ ಮುಂತಾದ ಎಂಟುಮಂದಿ ಜನಿಸಿದರು. ದೇವಕಿಯಲ್ಲಿಯೂ

ಎಂಟುಮಂದಿ ಜನಿಸಿದರು. ಎಂಟನೆಯವನಾಗಿ ದೇವಕಿಯಲ್ಲಿ ಶ್ರೀಕೃಷ್ಣ ಅವತರಿಸಿದ. ಅವನ ತಂಗಿಯಾಗಿ ಸುಭದ್ರೆ ಜನಿಸಿದಳು.

ಶ್ರೀಕೃಷ್ಣ ಮಧುರೆಯಲ್ಲಿ ಜನಿಸಿ ಗೋಕುಲದಲ್ಲಿ ಬೆಳೆದ. ಬಹುಮಂದಿ ಪತ್ನಿಯರಲ್ಲಿ ಸಾವಿರಾರು ಮಕ್ಕಳನ್ನು ಪಡೆದ. ಯಜ್ಞಗಳಿಂದ ತನ್ನನ್ನೆ ತಾನು ಆರಾಧಿಸಿಕೊಂಡ. ಭೂಭಾರ ಹರಣಕ್ಕಾಗಿ ಕುರುಕ್ಷೇತ್ರದಲ್ಲಿ ದುಷ್ಟರಾಜರ ಸಮೂಹವನ್ನು ದೃಷ್ಟಿ ಮಾತ್ರದಿಂದ ನಾಶಪಡಿಸಿ ಅರ್ಜುನನಿಗೆ ಜಯವನ್ನು ಘೋಷಿಸಿ ಉದ್ಧವನಿಗೆ ತತ್ವವನ್ನು ಉಪದೇಶಿಸಿ ಪರಂಧಾಮಕ್ಕೆ ತೆರಳಿದ.

❖ ❖ ❖

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದ್ಭಾಗವತತಾತ್ಪರ್ಯನಿರ್ಣಯೇ
ನವಮಸ್ಕಂಧಃ ಸಮಾಪ್ತಃ

❖ ❖ ❖